ಕರ್ನಾಟಕದ ಡೊಂಬರು

ಒಂದು ಅಲೆಮಾರಿ ಸಮುದಾಯದ ಅಧ್ಯಯನ

ಪಿಎಚ್, ಡಿ ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ

ಸಂಶೋಧನಾ ವಿದ್ಯಾರ್ಥಿ


ಎ. ಎಸ್. ಪ್ರಭಾಕರ

ಮಾರ್ಗದರ್ಶಕರು

ಡಾ. ಹಿ. ಚಿ. ಬೋರಲಿಂಗಯ್ಯ

ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ



ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

೨೦೦೬

ಕರ್ನಾಟಕದ ಡೊಂಬರು

ಒಂದು ಅಲೆಮಾರಿ ಸಮುದಾಯದ ಅಧ್ಯಯನ

ಪಿಎಚ್. ಡಿ ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ

ಸಂಶೋಧನಾ ವಿದ್ಯಾರ್ಥಿ

ಎ ಎಸ್ ಪ್ರಭಾಕರ

ಮಾರ್ಗದರ್ಶಕರು

ಡಾ. ಹಿ ಚಿ ಬೋರಲಿಂಗಯ್ಯ

ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೬

ಕರ್ನಾಟಕದ ಡೊಂಬರು

ಒಂದು ಅಲೆಮಾರಿ ಸಮುದಾಯದ ಅಧ್ಯಯನ



ಪ್ರಮಾಣ ಪತ್ರ

ಕರ್ನಾಟಕದ ಡೊಂಬರು, ಒಂದು ಅಲೆಮಾರಿ ಸಮುದಾಯದ ಅಧ್ಯಯನ ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್, ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಈ ಮಹಾಪ್ರಬಂಧವನ್ನು ಡಾ. ಹಿ ಚಿ ಬೋರಲಿಂಗಯ್ಯನವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಸದರಿ ಪ್ರಬಂಧವು ಈ ಮೊದಲು ಯಾವ ಪದವಿಗೂ ಸಲ್ಲಿಸಲ್ಪಟ್ಟಿಲ್ಲವೆಂದು ದೃಢೀಕರಿಸುತ್ತೇನೆ.

೦೩.೧೨.೨೦೦೬
ವಿದ್ಯಾರಣ್ಯ

(ಎ ಎಸ್ ಪ್ರಭಾಕರ)
ಅಧ್ಯಾಪಕ
ಬುಡಕಟ್ಟು ಅಧ್ಯಯನ ವಿಭಾಗ

ಮಾರ್ಗದರ್ಶಕರ ದೃಢೀಕರಣ

ಶ್ರೀ ಎ ಎಸ್ ಪ್ರಭಾಕರ ಅವರು ಕರ್ನಾಟಕದ ಡೊಂಬರು, ಒಂದು ಅಲೆಮಾರಿ ಸಮುದಾಯದ ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

೦೩.೧೨.೨೦೦೬
ವಿದ್ಯಾರಣ್ಯ

(ಡಾ. ಹಿ ಚಿ ಬೋರಲಿಂಗಯ್ಯ)
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ

ಪರಿವಿಡಿ

The materialist understanding of history 'a synonym for social science'

-V. I. Lenin

ಅಧ್ಯಾಯ ೧

ಪ್ರಸ್ತುತ ಅಧ್ಯಯನದ ತಾತ್ವಿಕತೆ

ಪ್ರಸ್ತುತ ಅಧ್ಯಯನದ ಹಂಬಲಗಳು

ಅಧ್ಯಯನದ ವೈಧಾನಿಕತೆ

ಪ್ರಬಂಧದ ಅಧ್ಯಾಯಗಳು

ಪ್ರಸ್ತುತ ಅಧ್ಯಯನದ ತಾತ್ವಿಕತೆ

ಪೀಠಿಕೆ

ಇದು ಅಲೆಮಾರಿ ಸಮುದಾಯವೊಂದರ ಅಧ್ಯಯನ. ಕರ್ನಾಟಕದಲ್ಲಿ ವಿರಳವಾಗಿ ವಾಸಿಸುತ್ತಿರುವ ನೆಲೆ ನಿಂತ ಮತ್ತು ಅಲೆಮಾರಿ ಡೊಂಬರ ಸಮುದಾಯವನ್ನು ಇಲ್ಲಿ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ. ಈವತ್ತು ಡೊಂಬರು ಶುದ್ಧಾಂಗವಾಗಿ ಅಲೆಮಾರಿಗಳಾಗಿ ಉಳಿದಿಲ್ಲ. ಬಹುತೇಕ ಅಲೆಮಾರಿ ಗುಂಪುಗಳು ನೆಲೆ ನಿಂತಿವೆ. ಕೆಲವು ಗುಂಪುಗಳು ಅಲ್ಲಲ್ಲಿ ತಮ್ಮ ಬೀದಿ ಪ್ರದರ್ಶನಗಳನ್ನು ಉಳಿಸಿಕೊಂಡು ಅರೆಅಲೆಮಾರಿಗಳಾಗಿ ಬದುಕುತ್ತಿವೆ. ಆದರೆ ಈ ಸಮುದಾಯದ ಅಂತಸ್ಥ ಜಗತ್ತಿನಲ್ಲಿ ಅಲೆಮಾರಿತ್ವದ ಚಹರೆಗಳು ಇನ್ನೂ ಉಳಿದುಕೊಂಡಿವೆ. ಕರ್ನಾಟಕದಲ್ಲಿ ವಿರಳವಾಗಿ ವಾಸಿಸುತ್ತಿರುವ ಅಲ್ಪಸಂಖ್ಯಾತ ಡೊಂಬರು ತಮ್ಮ ಚಮತ್ಕಾರಿಕ ಜೀವನ ವಿಧಾನದಲ್ಲಿ ಜಗದ್ಭಾರತದ ವಿಶಿಷ್ಟತೆಯನ್ನು ಹುದುಗಿಸಿಕೊಂಡಿದ್ದಾರೆ. ಈ ಕಾರಣಕ್ಕಾಗಿ ಭಾರತದ ಸಾಂಸ್ಕೃತಿಕ ಅನನ್ಯತೆಯನ್ನು ಮತ್ತು ಶ್ರೇಣೀಕೃತ ವ್ಯವಸ್ಥೆಯ ಕ್ರೌರ್ಯವನ್ನು ಜ್ವಲಂತವಾಗಿ ಸಾರಿ ಹೇಳುವ ಜೀವಂತ ಪೊಳಯುಳಿಕೆಗಳಾಗಿ ಇಂತಹ ಅಲೆಮಾರಿ ಸಮುದಾಯಗಳು ಕಂಡು ಬರುತ್ತವೆ. ಅಲೆಮಾರಿಗಳ ಅಧ್ಯಯನವೆಂದರೆ ಒಂದು ಅರ್ಥದಲ್ಲಿ ಭಾರತದ ಜಾತಿ ಪದ್ಧತಿಯ ರಾಜಕೀಯಾರ್ಥಿಕ ವಿಕಟ ನಾಟಕದ ಅಧ್ಯಯನವೆಂದೇ ಭಾಸವಾಗುತ್ತದೆ. ಅಲೆಮಾರಿ ಸಮುದಾಯವೊಂದು ಈವತ್ತಿಗೂ ಇಂಡಿಯಾದ ಜಾತಿ ವ್ಯವಸ್ಥೆ ಘೋಷಿಸಿಕೊಂಡು ಬಂದ 'ನಿತ್ಯನಾರಕಿಗಳ' ತಳಮಳಗಳ ಜಗತ್ತನ್ನು ತನ್ನಲ್ಲಿ ಜೀವಂತವಾಗಿರಿಸಿ ಕೊಂಡಿರುವುದನ್ನು ಕಾಣಬಹುದಾಗಿದೆ. ಪರಂಪರೆಯ ಕಾರಣಕ್ಕೆ ಈವತ್ತಿಗೂ ತಮ್ಮ ಸಾಂಪ್ರದಾಯಿಕ ಕುಲಕಸಬುಗಳನ್ನು ಅನಿವಾರ್ಯವಾಗಿ ಅವಲಂಬಿಸಿಕೊಂಡು ಬದುಕುವ ಸಮುದಾಯಗಳೆಲ್ಲ ಬಹುತೇಕ ಅಲೆಮಾರಿಗಳೇ ಆಗಿದ್ದಾರೆ. ಈ ಸಮುದಾಯಗಳನ್ನು ಭಾರತದ ರಾಜಶಾಹಿ ವ್ಯವಸ್ಥೆಯು ಅನೇಕ ಕಾರಣಗಳಿಗಾಗಿ ಪೋಷಿಸಿಕೊಂಡು ಬಂದಿದೆ. ಈ ದೇಶದ ಚರಿತ್ರೆಯಲ್ಲಿ ಅಲೆಮಾರಿಗಳು ಅನೇಕ ಭಿನ್ನ ವೇಷಗಳಲ್ಲಿ ಕಾಣಿಸಿಕೊಂಡಿದ್ದಾರೆ. ಆದರೆ ಯಾವತ್ತೂ ನಿಶ್ಚಿತ ಆರ್ಥಿಕ ಮೂಲಗಳನ್ನು ಹೊಂದದ ಈ ಸಮುದಾಯಗಳು ಆಧುನಿಕಪೂರ್ವ ಭಾರತದ ರಾಜಕೀಯ ಸ್ಥಿತ್ಯಂತರದ ಕಾಲದಲ್ಲಿ ಅನಿವಾರ್ಯವಾಗಿ ಅಲೆಮಾರಿ ಬದುಕನ್ನು ರೂಢಿಸಿಕೊಳ್ಳಬೇಕಾಯಿತು. ಅಲ್ಲದೆ ಕಂಪನಿ ಆಡಳಿತದ ಅಧಿಕಾರಿಗಳಿಗೆ ಈ ಸಮುದಾಯಗಳು ವಿಕ್ಷಿಪ್ತವಾಗಿ ಕಂಡವು. ದಂಗೆಕೋರ ಗುಂಪುಗಳಂತೆ ಕಂಡವು. ಅಸಹಾಯಕ ಸಮುದಾಯಗಳ ತಲ್ಲಣಗಳನ್ನು ಅರ್ಥಮಾಡಿಕೊಳ್ಳದ ಯುರೋಪಿನ ಜನ ಈ ಸಮುದಾಯಗಳನ್ನು

'ಅನಾಗರಿಕ' 'ಕಳ್ಳ' 'ಅಪರಾಧಿ' ಸಮುದಾಯಗಳೆಂದು ಕರೆದರು. ಸಾಲದ್ದಕ್ಕೆ ೧೮೭೧ ರಲ್ಲಿ Criminal Tribes Act ಎಂಬ ಶೀರ್ಷಿಕೆಯಡಿ ಭಾರತದ ಬಹುತೇಕ ಎಲ್ಲ ಅಲೆಮಾರಿ ಸಮುದಾಯಗಳನ್ನು ಪಟ್ಟಿಮಾಡಿ ಕಾನೂನಿನ ನಿರ್ಬಂಧಗಳನ್ನು ಕಂಪನಿ ಆಡಳಿತ ಹೇರಿತು. ಭಾರತದ ಚರಿತ್ರೆಯುದ್ದಕ್ಕೂ ಈ ಕಾರಣಕ್ಕಾಗಿಯೇ ಅಲೆಮಾರಿಗಳದು ಶಾಪಗ್ರಸ್ತ ಪಯಣ.

ಭಾರತದಲ್ಲಿ ಸಮುದಾಯ ಅಧ್ಯಯನಗಳು ಮಾನವಶಾಸ್ತ್ರದ ಶೈಕ್ಷಣಿಕ ಚಟುವಟಿಕೆಗಳ ಭಾಗವಾಗಿ ರೂಪುಗೊಂಡಿವೆ. ಭಾರತದಲ್ಲಿ ನಡೆದ ಸಮುದಾಯ ಅಧ್ಯಯನಗಳಿಗೆ ಸರಿಸುಮಾರು ನೂರೈವತ್ತು ವರ್ಷಗಳ ಇತಿಹಾಸವಿದೆ. ಭಾರತಕ್ಕೆ ಸಂಬಂಧಪಟ್ಟ ಅಧ್ಯಯನಗಳು ೧೭೭೪ರಲ್ಲಿ ಕಲ್ಕತ್ತಾದಲ್ಲಿ ಪ್ರಾರಂಭವಾದ 'ಏಶಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್' ಸಂಸ್ಥೆಯ ಮೂಲಕ ಪ್ರಾರಂಭವಾದವು. ಭಾರತವನ್ನು ಕುರಿತ ಅಧ್ಯಯನಗಳನ್ನು ಮೊದಲಿಗೆ ಕೈಗೊಂಡವರು ಓರಿಯಂಟಲಿಸ್ಟರು. ಈ ಓರಿಯಂಟಲಿಸ್ಟರು ಮುಂದೆ ಭಾರತದಲ್ಲಿ ನಡೆದ ಸಮಾಜಶಾಸ್ತ್ರೀಯ ಮತ್ತು ಮಾನವಶಾಸ್ತ್ರೀಯ ಅಧ್ಯಯನಗಳ ಮೇಲೆ ನಿರ್ಣಾಯಕವಾಗಿ ಪ್ರಭಾವ ಬೀರಿದರು. ಜೊತೆಗೆ ಯುರೋಪಲ್ಲಿ ಸಾಕಷ್ಟು ಜನಪ್ರಿಯಗೊಂಡಿದ್ದ ವಿಜ್ಞಾನದ ಶೈಕ್ಷಣಿಕ ವಿಧಾನ ಮತ್ತು ಓರಿಯಂಟಲಿಸ್ಟರ ವೈಧಾನಿಕತೆಗಳೆರಡೂ ಭಾರತದಲ್ಲಿ ನಡೆದ ಸಮಾಜ ವಿಜ್ಞಾನಗಳ ಸಂಶೋಧನೆಗಳ ಮೇಲೆ ಪ್ರಭಾವ ಬೀರಿದ್ದವು.

ಭಾರತದಲ್ಲಿ ಸಮಾಜ ವಿಜ್ಞಾನಗಳ ಅನೇಕ ಜ್ಞಾನಶಿಸ್ತುಗಳು ಸಂಚಯಗೊಂಡದ್ದು ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ಮಾನ್ಯತೆ ಪಡೆದದ್ದು ವಸಾಹತುಶಾಹಿ ಕಾಲಘಟ್ಟದಲ್ಲಿ. ಈವತ್ತಿನ ರಾಜಕೀಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರಗಳಂತಹ ಶೈಕ್ಷಣಿಕ ಶಿಸ್ತುಗಳು ವಸಾಹತುಶಾಹಿ ಕಾಲಘಟ್ಟದಲ್ಲಿಯೇ ತಮ್ಮ ಅಸ್ತಿತ್ವವನ್ನು ಕಂಡುಕೊಂಡವು. ಹಾಗೆ ನೋಡಿದರೆ ವಸಾಹತುಗಾರರ ಆಳ್ವಿಕೆಗೂ ಮತ್ತು ಸಮಾಜ ವಿಜ್ಞಾನಗಳ ಅನೇಕ ಜ್ಞಾನಶಿಸ್ತುಗಳು ಭಾರತದಲ್ಲಿ ಪ್ರಚಲಿತಗೊಂಡ ಪ್ರಕ್ರಿಯೆಗೂ ಒಂದು ಅರ್ಥದಲ್ಲಿ ನೇರ ಸಂಬಂಧಗಳಿವೆ. ಈ ಪ್ರಕ್ರಿಯೆಯನ್ನು ಜ್ಞಾನ ಮತ್ತು ಅಧಿಕಾರಗಳ ವಿರಾಟ್ ಸಂಬಂಧದ ಭಾಗವಾಗಿ ಅರ್ಥ ಮಾಡಿಕೊಳ್ಳುವ ಜರೂರತ್ತಿದೆ. ಹೀಗಾಗಿ ಭಾರತದಲ್ಲಿನ ಸಾಮಾಜಿಕ ಅಧ್ಯಯನಗಳ ಚರಿತ್ರೆಯೆಂದರೆ ಅದು ವಸಾಹತುಶಾಹಿ ಆಡಳಿತದ ಏಳು ಬೀಳುಗಳ ಚಾರಿತ್ರಿಕ ನಡೆಗಳ ಅಧ್ಯಯನವಾಗಿಯೇ ನಮ್ಮೆದುರು ಪ್ರತ್ಯಕ್ಷವಾಗುತ್ತದೆ. ಏಕೆಂದರೆ ಭಾರತದಲ್ಲಿ ಸಾಮಾಜಿಕ ಅಧ್ಯಯನಗಳಿಗೆ ಶಾಸ್ತ್ರರೂಪ ಪ್ರಾಪ್ತವಾಗಿದ್ದೇ ಯುರೋಪು ಈ ದೇಶವನ್ನು ಆಳಲಾರಂಭಿಸಿದ ಮೇಲೆ. ಜೊತೆಗೆ ಸಾಮಾಜಿಕ ಅಧ್ಯಯನಗಳ ಶಾಸ್ತ್ರಶಿಸ್ತುಗಳ ಉಗಮವೂ ಯುರೋಪಿನಲ್ಲಿಯೇ ಸಂಭವಿಸಿತು. ಈ ಶೈಕ್ಷಣಿಕ ಶಿಸ್ತುಗಳ ಅಧ್ಯಯನ ವಿಧಾನಗಳೂ ಸಹ ರೂಪುಗೊಂಡದ್ದು ಯುರೋಪ್ ಎಂಬ ಆಕ್ರಮಣಕಾರರ ಕುಲುಮೆಗಳಲ್ಲಿ. ಈ ಕಾರಣದಿಂದ ಸಮಾಜ ವಿಜ್ಞಾನಗಳ ಹುಟ್ಟು ಮತ್ತು ಶೈಕ್ಷಣಿಕ ವಿಧಾನಗಳನ್ನು ಅಧ್ಯಯಿನಿಸುವದೆಂದರೆ ಪರೋಕ್ಷವಾಗಿ ಆಧುನಿಕ ಯುರೋಪಿನ ರಾಜಕಾರಣವನ್ನು ಅಧ್ಯಯನ ಮಾಡಿದಂತೆ. ಸಮುದಾಯ ಅಧ್ಯಯನಗಳಿಗಾಗಿ ಹುಟ್ಟಿದ ಮಾನವಶಾಸ್ತ್ರವು ಎಂದು ಹುಟ್ಟಿತು ಎಂದು ಹೇಳಲು ಸಾಧ್ಯವಿಲ್ಲ. ಪ್ರಾಯಶಃ ಈವತ್ತು ನಾವು ನೋಡುವ ಸಮಾಜ ವಿಜ್ಞಾನಗಳ ಜ್ಞಾನಶಿಸ್ತುಗಳು ಬಹುತೇಕ ಎಲ್ಲವೂ

ಮನುಷ್ಯ ಸಮಾಜವನ್ನೇ ವಿವರಿಸಿಕೊಳ್ಳಲು ತೊಡಗುತ್ತವೆ. ಆದರೆ ಅಧ್ಯಯನ ಶಿಸ್ತೊಂದು ಇಂದೇ ಹುಟ್ಟಿತು ಎಂದು ಇಸ್ವಿಯ ಸಮೇತ ಹೇಳುವುದು ಕಷ್ಟ. ಮನುಷ್ಯ ತನ್ನ ಸುತ್ತಲ ಸಮಾಜ ಮತ್ತು ನಿಸರ್ಗದ ಜೊತೆ ಬದುಕುತ್ತಾ ಅನೇಕ ತಿಳುವಳಿಕೆಯ ಜಗತ್ತುಗಳನ್ನು ನಿರ್ಮಿಸುತ್ತಾ ಹೋದ. ನಿಸರ್ಗ ಮತ್ತು ಸಮಾಜದ ಜೊತೆಗಿನ ಮನುಷ್ಯನ ಅನುಸಂಧಾನದ ಫಲವಾಗಿಯೇ ಅನೇಕ ಜ್ಞಾನಶಿಸ್ತುಗಳು ರೂಪಗೊಂಡಿವೆ. ಆದರೆ ಪುನರುಜ್ಜೀವನ ಕಾಲಘಟ್ಟದ ನಂತರ ಯುರೋಪಿನಲ್ಲಿ ಹುಟ್ಟಿದ ಅನೇಕ ಜ್ಞಾನಶಿಸ್ತುಗಳು ಮನುಷ್ಯನ ಲೌಕಿಕದ ಬದುಕಿನ ಮುಖಾಮುಖಿಯಲ್ಲಿ ರೂಪಗೊಂಡವು. ಸಮಾಜದ ಸಂರಚನೆ ಮತ್ತು ನಿಯಮಗಳನ್ನು ವಿವರಿಸುವ ಸಮಾಜಶಾಸ್ತ್ರ, ರಾಜಕೀಯ ಚಲನೆಗಳನ್ನು ಕಟ್ಟಿಕೊಡುವ ರಾಜಕೀಯಶಾಸ್ತ್ರ, ಉತ್ಪಾದನಾ ವ್ಯವಸ್ಥೆಯನ್ನು ವಿವರಿಸುವ ಅರ್ಥಶಾಸ್ತ್ರ ಮತ್ತು ಮಾನವ ಸ್ವಭಾವಗಳನ್ನು ಅರ್ಥೈಸುವ ಮಾನವಶಾಸ್ತ್ರಗಳಂತಹ ಶೈಕ್ಷಣಿಕ ಶಿಸ್ತುಗಳು ಮನುಷ್ಯನ ಐಹಿಕ ಬದುಕಿನ ವ್ಯವಹಾರಗಳ ನಿಕಟ ಸಂಬಂಧದ ಕಾರಣಕ್ಕಾಗಿ ರೂಪಗೊಂಡವು.

ಯುರೋಪಿನ ಪುನರುಜ್ಜೀವನ ಕಾಲಘಟ್ಟದ ನಂತರ ಬೌದ್ಧಿಕ ಜಗತ್ತಿನಲ್ಲಿ ನಡೆದ ಆವಿಷ್ಕಾರಗಳು ಯುರೋಪಿನ ದೇಶಗಳನ್ನು ಆರ್ಥಿಕವಾಗಿ ಮಾತ್ರ ಸಬಲಗೊಳಿಸಲಿಲ್ಲ. ಬದಲಾಗಿ ಅತ್ಯಂತ ತೀವ್ರವಾದ ರಾಜಕೀಯ ಮಹತ್ವಾಕಾಂಕ್ಷೆಗಳನ್ನು ಹುಟ್ಟು ಹಾಕಿದವು. ಅಂತಹ ತೀವ್ರ ರಾಜಕೀಯ ಮಹತ್ವಾಕಾಂಕ್ಷೆಯಲ್ಲಿ ಯುರೋಪಲ್ಲಿ ಮೊದಲು ಸ್ಫೋಟಗೊಂಡದ್ದು ರಾಷ್ಟ್ರೀಯತೆ. ಕೈಗಾರಿಕೀರಣದ ಕಾರಣಕ್ಕಾಗಿ ಉಲ್ಬಣಗೊಂಡ ಅಲ್ಲಿನ ದೇಶಗಳ ತೀವ್ರ ಆರ್ಥಿಕ ಪೈಪೋಟಿಯ ಕಾರಣಕ್ಕಾಗಿ ರಾಷ್ಟ್ರೀಯತೆಯ ಭಾವನೆ ರೂಪುಗೊಂಡಿತು. ಹಾಗೆ ನೋಡಿದರೆ ಯುರೋಪಿನ ರಾಷ್ಟ್ರೀಯತೆಯು ಅಲ್ಲಿ ಬೆಳೆಯುತ್ತಿದ್ದ ಬಂಡವಾಳಶಾಹಿಗಳ ಸೃಷ್ಟಿಯೇ ಆಗಿತ್ತು. ಈ ಕಾರಣದಿಂದ ಹಲವು ವರ್ಷಗಳ ಕಾಲ ಕಿತ್ತಾಡುತ್ತಲೇ ಈ ದೇಶಗಳು ತಮ್ಮ ತಮ್ಮ ಭಾಷೆಗಳಿಗೆ ಅನುಗುಣವಾಗಿ ರಾಷ್ಟ್ರಗಳಾಗಿ ರೂಪುಗೊಂಡವು. ಹೀಗೆ ರೂಪುಗೊಂಡ ದೇಶಗಳು ವಿಜ್ಞಾನ ಮತ್ತು ತಂತ್ರಜ್ಞಾನಗಳ ಕ್ಷೇತ್ರದಲ್ಲಿ ತೀವ್ರ ಬೆಳವಣಿಗೆಯನ್ನು ಸಾಧಿಸಿದವು. ಅಷ್ಟರಲ್ಲಾಗಲೆ ಈ ದೇಶಗಳ ರಾಜಕೀಯ ಮಹತ್ವಾಕಾಂಕ್ಷೆಯು ಬೇರೆ ದೇಶಗಳನ್ನು ಆಕ್ರಮಿಸಿಕೊಳ್ಳುವ ಹಂತಕ್ಕೆ ಬೆಳೆದು ನಿಂತಿತು. ಈ ಹಂತದಿಂದ ಜಗತ್ತು ಅದರಲ್ಲೂ ಪೂರ್ವದ ಜಗತ್ತು ಒಂದು ಮನ್ವಂತರಕ್ಕೆ ಅನಿವಾರ್ಯವಾಗಿ ತನ್ನನ್ನು ಒಪ್ಪಿಸಿಕೊಂಡಿತು. ಯುರೋಪಿನ ದೇಶಗಳ ಆಕ್ರಮಣಗಳು ಮತ್ತು ದಿಗ್ವಿಜಯಗಳು ಮಧ್ಯಪ್ರಾಚ್ಯ, ಆಫ್ರಿಕಾ ಮತ್ತು ದಕ್ಷಿಣ ಏಷ್ಯಾಗಳಲ್ಲಿ ವಸಾಹತುಗಳನ್ನು ಸೃಷ್ಟಿಸಿದವು. ಈ ದಿಗ್ವಿಜಯಗಳಿಗೆ ಕಾರಣವಾದದ್ದು ಯುರೋಪಲ್ಲಿ ಸ್ಫೋಟಗೊಂಡ ಜ್ಞಾನಕ್ರಾಂತಿ. ಈ ಕಾರಣದಿಂದಾಗಿ ಯುರೋಪಿನ ವಸಾಹತುಶಾಹಿ ಮನೋಭಾವವು ಕೇವಲ ಆಕ್ರಮಣಕಾರೀ ದಮನದ ಪ್ರವೃತ್ತಿಗಳಿಂದ ಮಾತ್ರ ಸೃಷ್ಟಿಯಾದದ್ದಲ್ಲ. ಅದು ಯುರೋಪಿನ ಬೌದ್ಧಿಕ ಕ್ಷೇತ್ರದ ವಿಸ್ತರಣೆಯ ಮಹತ್ವಾಕಾಂಕ್ಷೆಯಿಂದ ರೂಪಗೊಂಡದ್ದು. ಆದ್ದರಿಂದ ವಸಾಹತುಶಾಹಿ ಆಕ್ರಮಣವೆಂದರೆ ಕೇವಲ ವ್ಯಾಪಾರದ ಕಾರಣದಿಂದ, ಧರ್ಮ ಪ್ರಚಾರದ ಗೀಳಿನಿಂದ ಪ್ರಚೋದಿತವಾದ ದಂಗೆಯ ಸ್ವರೂಪದ ಪ್ರಕ್ರಿಯೆಯಲ್ಲ. ದಂಗೆಗಳು ನಿರ್ದಿಷ್ಟ ಪ್ರದೇಶದಲ್ಲಿ ಮಾತ್ರ ಜರುಗಿ ತಾತ್ಕಾಲಿಕ ಪರಿಣಾಮ ಬೀರಿ ನಂದಿಹೋಗುತ್ತವೆ. ಆದರೆ ವಸಾಹತುಶಾಹಿ ಆಕ್ರಮಣವು ದಂಗೆಗಿಂತ

ಹೆಚ್ಚು ದೀರ್ಘವಾದದ್ದು. ಈ ಆಕ್ರಮಣ ಮತ್ತು ದಿಗ್ವಿಜಯಗಳು ಕೇವಲ ಶಸ್ತ್ರಗಳಿಂದ ಮತ್ತು ತೋಳ್ಬಲಗಳಿಂದ ಸಂಭವಿಸಲಿಲ್ಲ. ಬದಲಿಗೆ ವಸಾಹತಶಾಹಿಯು ನಿರ್ದಿಷ್ಟ ಬೌದ್ಧಿಕ ಕಾರ್ಯಕ್ರಮಗಳ ಅನುಷ್ಠಾನದಿಂದ ವಸಾಹತುಗಳಲ್ಲಿ ತನ್ನ ಬೇರು ಬಿಟ್ಟುಕೊಂಡಿತು. ವಸಾಹತುಗಳ ಬಡತನ ಮತ್ತು ಅಸಹಾಯಕತೆಗಳನ್ನು ಅವು ಅಧೀನಗೊಳ್ಳುವ ಹಂತದಲ್ಲಿ ಪ್ರಧಾನವಾಗಿ ಯುರೋಪು ಬಿಂಬಿಸಿತು. ಒಂದು ನಿರ್ದಿಷ್ಟ ಪ್ರದೇಶದ ಜನತೆಯ ಅಧೀನತೆಯು ಶಾಶ್ವತವಾಗುವಂತೆ ಮಾಡುವ ಸಂಕಥನಗಳನ್ನು ಯುರೋಪಿನ ದೇಶಗಳು ರೂಪಿಸಿದವು. ಧಾರ್ಮಿಕ ಕ್ಷೇತ್ರ, ಶಿಕ್ಷಣ ಕ್ಷೇತ್ರ ಮತ್ತು ಬೌದ್ಧಿಕ ರಂಗಗಳಲ್ಲಿ ಈ ಸಂಕಥನಗಳು ಹೆಚ್ಚು ಹೆಚ್ಚು ಪ್ರಖರಗೊಂಡವು. ಈ ಕಾರಣದಿಂದ ಸಮಾಜ ವಿಜ್ಞಾನಗಳ ಕುರಿತ ಅಧ್ಯಯನವೆಂದರೆ ಅದು ಹೆಚ್ಚು ಕಡಿಮೆ ಪುನರುಜ್ಜೀವನ ಕಾಲಘಟ್ಟದ ನಂತರದ ಯುರೋಪಿನ ಜನರ ಅಧ್ಯಯನವೆಂದೇ ಭಾಸವಾಗುತ್ತದೆ. ಸಮಾಜ ವಿಜ್ಞಾನಗಳ ಶೈಕ್ಷಣಿಕ ವಿಧಾನಗಳ ಅಧ್ಯಯನವೆಂದರೆ, ಯುರೋಪಿನ ಜನ ಜಗತ್ತನ್ನು ನೋಡುವ ದೃಷ್ಟಿಕೋನದ ಅಧ್ಯಯನವೇ ಆಗಿಬಿಡುತ್ತದೆ. ಈ ಕಾರಣದಿಂದ ಯುರೋಪಲ್ಲಿ ಜನಿಸಿದ ಮೇಲಿನ ಅಧ್ಯಯನ ಶಿಸ್ತುಗಳು ಮನುಷ್ಯನ ನಿತ್ಯದ ಬದುಕಿನ ಸಂಘರ್ಷಗಳ ಫಲಗಳು. ಅಥವಾ ಯುರೋಪಿನ ಮಹತ್ವಾಕಾಂಕ್ಷೆಯ ರಾಜಕೀಯಾರ್ಥಿಕ ಚಲನೆಗಳ ಫಲಿತಗಳೆಂದೇ ಭಾವಿಸಬೇಕಾಗುತ್ತದೆ.

ಇಂದಿಗೂ ಸಮುದಾಯಗಳ ಅಧ್ಯಯನಗಳಿಗೆ ಮೂಲವಾಗಿರುವ ಮಾನವಶಾಸ್ತ್ರವು ಯುರೋಪಿನ ಯಾವ ಚಾರಿತ್ರಿಕ ಘಟ್ಟದಲ್ಲಿ ಹುಟ್ಟಿತು ಎಂದು ನಿಖರವಾಗಿ ಹೇಳಲಾಗುವುದಿಲ್ಲ. ಇವಾನ್ಸ್ ಪ್ರಿಚಾರ್ಡ್ ಪ್ರಕಾರ 'ಮಾನವಶಾಸ್ತ್ರವು ಹದಿನೆಂಟನೇ ಶತಮಾನದಲ್ಲಿ ಜನ್ಮತಾಳಿತು. ಇದು ಯುರೋಪಿನ ಎನ್‌ಲೈಟ್‌ಮೆಂಟ್ ಯುಗದ ಕೂಸು' (ಇವಾನ್ಸ್ ಪ್ರಿಚಾರ್ಡ್-೨೧-೨೦೦೦) ಕೈಗಾರಿಕಾ ಕ್ರಾಂತಿಯ ನಂತರ ಗಗನದೆತ್ತರಕ್ಕೆ ಬೆಳೆದು ನಿಂತ ತಮ್ಮ ಸಾಮಾಜಿಕ ಮತ್ತು ರಾಜಕೀಯಾರ್ಥಿಕ ಗಣ್ಯತೆಯನ್ನು ವಿಸ್ತರಿಸುವ ಹಂತದಲ್ಲಿ ಯುರೋಪಿನ ಜನ ತಮ್ಮ ಆತ್ಮಪ್ರತ್ಯಯದ ಕಾರಣಕ್ಕಾಗಿ ಜಗತ್ತಿನ ಬೇರೆ ದೇಶಗಳ ಜನರಿಂದ ತಮ್ಮನ್ನು ಭಿನ್ನರೆಂದು ಗುರುತಿಸಿಕೊಳ್ಳಲಾರಂಭಿಸಿದರು. ಯುರೋಪ್ ಮತ್ತು ಯುರೋಪೇತರ ಸಮಾಜಗಳು. ಅಥವಾ ಯುರೋಪಿನವರಾದ 'ನಾವು' ಮತ್ತು ಯುರೋಪಿನವರಲ್ಲದ 'ಅವರು' ಎಂಬ ಮಾನವ ಪ್ರಭೇದಗಳನ್ನು ಯುರೋಪಿನ ಜನ ಹುಟ್ಟು ಹಾಕಿದರು. 'ನಾವು' ಈಗಾಗಲೇ ನಮ್ಮ ಜ್ಞಾನದ ಕಾರಣಕ್ಕಾಗಿ 'ಅವರಿಗಿಂತ' ಮುಂದುವರೆದಿದ್ದೇವೆ. ಮುಂದುವರೆಯದ 'ಅವರನ್ನು' 'ನಾವು' ನಮ್ಮ ಅಂಕೆಯಲ್ಲಿಟ್ಟುಕೊಂಡು 'ಅಭಿವೃದ್ಧಿ ಪಡಿಸಬೇಕಿದೆ' ಎಂಬ ಸ್ವಯಂ ಕಲ್ಪಿತ ಗಣ್ಯತೆ ಯುರೋಪಿನ ಜನರಲ್ಲಿ ವ್ಯಕ್ತವಾಗತೊಡಗಿತು. ತಮ್ಮ ತಮ್ಮ 'ಗಣ್ಯತೆ'ಗಳನ್ನು ಎತ್ತಿ ನಿಲ್ಲಿಸಲು ಯುರೋಪಿನ ದೇಶಗಳ ನಡುವೆ ಅಸಂಖ್ಯಾತ ಕದನಗಳೂ ಏರ್ಪಟ್ಟವು.

ಆದರೆ ಯುರೋಪಿನ ದೇಶಗಳು ಅಷ್ಟು ಹೊತ್ತಿಗೆ ಮಧ್ಯಪ್ರಾಚ್ಯ ಮತ್ತು ಪೂರ್ವದ ದೇಶಗಳನ್ನು ತಮ್ಮ ರಾಜಕೀಯ ಹಿಡಿತದಲ್ಲಿಟ್ಟುಕೊಳ್ಳಲು ಸಫಲವಾಗಿದ್ದವು. ಇಂತಹ ದೇಶಗಳು ತಮ್ಮ ಅಧೀನ ರಾಷ್ಟ್ರಗಳನ್ನು ಅಧ್ಯಯನ ಮಾಡಲು ಮಾನವಶಾಸ್ತ್ರವೆಂಬ ಶೈಕ್ಷಣಿಕ ಶಿಸ್ತನ್ನು ರೂಪಿಸಿದವು. ಕ್ಲಿಫಾರ್ಡ್ ಹೇಳುವಂತೆ, 'ಮಾನವಶಾಸ್ತ್ರವು ತಾನು ಹುಟ್ಟಿದ ಕಾಲ, ಸಂದರ್ಭ ಮತ್ತು ಪ್ರದೇಶದ ಗಣ್ಯತೆಗೆ ಅನುಗುಣವಾಗಿಯೇ

ಯುರೋಪ್ ಕೇಂದ್ರಿತ ಜ್ಞಾನಶಿಸ್ತಾಗಿ ಉಳಿದು ಬಂದಿದೆ. ಅದು ತನ್ನ ಅಧ್ಯಯನದ ವಿಧಾನದ ಒಳಗೇ 'ತನ್ನದಲ್ಲದ' 'ಬೇರೆ'ಯದೇ ಆದ ಸಮಾಜವನ್ನು ಅಧ್ಯಯನ ಮಾಡುವ ದೃಷ್ಟಿಕೊನವನ್ನು ಜೀವಂತವಾಗಿಟ್ಟುಕೊಂಡಿದೆ. ಯುರೋಪ್‌ನ ವಸಾಹತುಗಳಲ್ಲಿ ಸಾಧಿಸಿದ ಶೈಕ್ಷಣಿಕ ಗೆಲುವುಗಳಿಂದ ಯಾವತ್ತೂ ಅದು ತನ್ನನ್ನು ಬದಲಿಸಿಕೊಳ್ಳದ ಹಂತವನ್ನೂ ತಲುಪಿದ್ದಲ್ಲದೆ, 'ಯಾರು ತಮ್ಮ ಬಗ್ಗೆ ತಮಗೆ ಮಾತಾಡಲು ಸಮರ್ಥರಿರುವುದಿಲ್ಲವೋ (ಆದಿವಾಸಿಗಳು, ಅನಕ್ಷರಸ್ಥರು, ಇತಿಹಾಸವಿಲ್ಲದವರು) ಅವರ ಕುರಿತು ಮಾತಾಡುವ ಹಕ್ಕನ್ನು ಮಾನವಶಾಸ್ತ್ರವು ತನ್ನಷ್ಟಕ್ಕೆ ತಾನೆ ಪಡೆದುಕೊಂಡಿತು' (ಕ್ಲಿಫಾರ್ಡ್ ೯.೧೦.೧೯೯೦) ಈ ಕಾರಣದಿಂದಾಗಿ ಅಭಿಜಾತ ಮಾನವಶಾಸ್ತ್ರ ಭಾರತದಲ್ಲಿ ಪ್ರಚಲಿತದಲ್ಲಿದ್ದ ಕಾಲಘಟ್ಟ ಯುರೋಪಿನ ದಿಗ್ವಿಜಯದ ಕಾಲಘಟ್ಟ. ಮತ್ತು 'ಭಾರತದ ಸಮಾಜವನ್ನು ಕುರಿತ ತಿಳುವಳಿಕೆಯ ಉತ್ಪಾದನೆಯು ಅಂದಿನ ಕಾಲಘಟ್ಟದ ಸಮಕಾಲೀನ ರಾಜಕೀಯ ಅಗತ್ಯಗಳಿಗಾಗಿ ರೂಪುಗೊಂಡದ್ದು' (ವೀಣಾದಾಸ್-೪೧-೧೯೯೫). ವೀಣಾದಾಸ್, ವಸಾಹತು ಕಾಲಘಟ್ಟದ ಸಮಾಜ ವಿಜ್ಞಾನದ ಕ್ಷೇತ್ರದಲ್ಲಿ ಉತ್ಪಾದಿಸಲ್ಪಟ್ಟ ವಾಂಙ್ಮಯವು ಕಂಪನಿ ಆಡಳಿತದ ರಾಜಕಾರಣದ ಭಾಗವಾಗಿ ಸೃಷ್ಟಿಯಾದದ್ದು ಎಂದು ವಿವರಿಸುತ್ತಾರೆ.

ಪ್ರಸ್ತುತ ಅಧ್ಯಯನವು, ಸಮುದಾಯವೊಂದರ ಅಧ್ಯಯನದ ಜೊತೆಗೆ, ಈ ಬಗೆಯ ಅಧ್ಯಯನಗಳನ್ನು ರೂಪಿಸಿದ ಆಯಾ ಚಾರಿತ್ರಿಕ ಕಾಲಘಟ್ಟದ ರಾಜಕೀಯಾರ್ಥಿಕ ಚಲನೆಗಳನ್ನೂ ಪರಿಶೀಲಿಸುವ ಉದ್ದೇಶವನ್ನು ಹೊಂದಿದೆ. ಸಮುದಾಯವೊಂದನ್ನು ಅಧ್ಯಯನ ಮಾಡುವುದು ಮತ್ತು ಇಂತಹ ಸಮುದಾಯಗಳನ್ನು ನೋಡುವ, ಅರ್ಥೈಸುವ ಶೈಕ್ಷಣಿಕ ವಿಧಾನಗಳ ಚಾರಿತ್ರಿಕ ರೂಪಾಂತರಗಳನ್ನು ವಿವರಿಸಿಕೊಳ್ಳುವುದು ಒಂದು ಅರ್ಥದಲ್ಲಿ ಪರ್ಯಾಯ ವಿಧಾನವನ್ನು ಹಂಬಲಿಸುವ ನಮ್ಮ ಪ್ರಯತ್ನವಷ್ಟೇ. ವೀಣಾದಾಸ್‌ರವರ ಮಾತುಗಳಲ್ಲಿ ಹೇಳುವುದಾದರೆ 'ಸಮಾಜ ವಿಜ್ಞಾನಗಳ ಬಹುಪಾಲು ಜ್ಞಾನಶಿಸ್ತುಗಳು ಯುರೋಪ್ ಕೇಂದ್ರಿತ. ಮಾನವಶಾಸ್ತ್ರಕ್ಕೆ ಸಂಬಂಧಿಸಿದಂತೆ ಈ ಗ್ರಹಿಕೆ ಇನ್ನೂ ಹೆಚ್ಚು ಸತ್ಯವಾದದ್ದು. ಮಾನವಶಾಸ್ತ್ರ ತನ್ನ ಹುಟ್ಟಿನ ಸ್ವಭಾವದಲ್ಲಿ ಅದು ಕೇವಲ 'ಬೇರೆ'ಯವರನ್ನು ಅಧ್ಯಯನ ಮಾಡವು ಜ್ಞಾನಶಿಸ್ತಾಗಿಯೇ ಗುರುತಿಸಲ್ಪಟ್ಟಿದೆ. ಕಾರಣ ಅದು ಹುಟ್ಟಿದ್ದು ಯುರೋಪಿನಲ್ಲಿ. ಅಭಿಜಾತ ಮಾನವಶಾಸ್ತ್ರದ ಶೈಕ್ಷಣಿಕ ವಿಧಾನದಲ್ಲಿಯೇ 'ಸಾಂಸ್ಕೃತಿಕ ವಿಮರ್ಶೆಯ' ಪ್ರವೃತ್ತಿ ಇದೆ ಎಂದು ಹೇಳಬಹುದು. ಈ ಬಗೆಯ ಪ್ರವೃತ್ತಿ ಮಾನವಶಾಸ್ತ್ರಕ್ಕೆ ಬಂದದ್ದು, ಅದು 'ಬೇರೆಯವರನ್ನು' ಅಧ್ಯಯನ ಮಾಡುವ ಸ್ವಭಾವದಿಂದ. ಅಧ್ಯಯನಕ್ಕೊಳಪಡುವ ಸಮುದಾಯ ಮಾತ್ರ ಮಾನವಶಾಸ್ತ್ರವೆಂಬ ಶೈಕ್ಷಣಿಕ ಶಿಸ್ತನ್ನು ಕಟ್ಟಲು ಕೇವಲ ಮೆಟ್ಟಿಲಂತೆ ಬಳಕೆಯಾಗುತ್ತಾ ಬಂದಿದೆ' (Ibid-26) ಪ್ರಸ್ತುತ ಅಧ್ಯಯನವು ಈ ಬಗೆಯ ಪರ್ಯಾಯ ದೃಷ್ಟಿಕೋನದ ಹುಡುಕಾಟದ ಪ್ರಯತ್ನವೆಂದೇ ನಾನು ಭಾವಿಸಿದ್ದೇನೆ.

ಅಭಿಜಾತ ಮಾನವಶಾಸ್ತ್ರದ ಶೈಕ್ಷಣಿಕ ವಿಧಾನಕ್ಕೆ ಪರ್ಯಾಯವಾಗಿ ಭಿನ್ನ ದೃಷ್ಟಿಕೋನವನ್ನು ಹೊಂದುವ ಪ್ರಯತ್ನವನ್ನು ಸ್ಥಳೀಯ ಮಾನವಶಾಸ್ತ್ರಜ್ಞರು ಆಗಾಗ ಮಾಡಿರುವುದುಂಟು. ಆದರೆ ವಸಾಹತು ಕಾಲಘಟ್ಟ ಮತ್ತು ಆ ನಂತರದ ದಶಕಗಳಲ್ಲಿ ಈ ಪರ್ಯಾಯದ ಪ್ರಯತ್ನಗಳು ಒಂದು ಭಿನ್ನ ಶೈಕ್ಷಣಿಕ ಧಾರೆಯೊಂದನ್ನು

ರೂಪಿಸುವಷ್ಟು ಶಕ್ತವಾಗಿರಲಿಲ್ಲ. ಸಬಾಲ್ಟರ್ನ್ ಅಧ್ಯಯನಗಳು ಪ್ರಾರಂಭವಾದ ಮೇಲೆಯೇ ಇಂಡಿಯಾದಲ್ಲಿ ಒಂದು ಅರ್ಥದಲ್ಲಿ 'ಅಲಕ್ಷಿತ' ವಿಷಯಗಳ ಕುರಿತ ಅಧ್ಯಯನಗಳು ಭಿನ್ನ ರಾಜಕೀಯ ಸಿದ್ಧಾಂತದ ಮೇಲೆ ರೂಪಿಸಲ್ಪಟ್ಟವು. ಆದರೂ ಕನ್ನಡದ ಸಂದರ್ಭದಲ್ಲಿ ಸಬಾಲ್ಟರ್ನ್ ಅಧ್ಯಯನಗಳು ಗಾಢ ಪ್ರಭಾವ ಬೀರಿಲ್ಲ. ಇನ್ನೂ ಸಾಂಪ್ರದಾಯಿಕ ಮಾನವಶಾಸ್ತ್ರೀಯ ಅಧ್ಯಯನಗಳು ಕನ್ನಡದಲ್ಲಿ ನಡೆಯುತ್ತಲೇ ಇವೆ. ವಸಾಹತುಶಾಹಿಯು ಭಾರತದಂತಹ ದೇಶಗಳಲ್ಲಿ ಭೌತಿಕವಾಗಿ ಸಬಲವಾಗುವುದರ ಜೊತೆಗೆ ಬೌದ್ಧಿಕವಾಗಿ ಹೆಚ್ಚು ಪ್ರಬಲವಾಗಿರುತ್ತದೆ. ಜೊತೆಗೆ ತಿಳುವಳಿಕೆಯ ಕ್ಷೇತ್ರದಲ್ಲಿ ಅದು ವಸಾಹತುವಿನ ಮೇಲೆ ಸಾಧಿಸುವ ಹಿಡಿತವು ಅತ್ಯಂತ ನಿರ್ಣಾಯಕವೂ ಆಗಿರುತ್ತದೆ. ವಸಾಹತು ಆಡಳಿತ ಭಾರತದ ಜ್ಞಾನ ಕ್ಷೇತ್ರದ ಮೇಲೆ ಇನ್ನಿಲ್ಲದ ಹಿಡಿತ ಸಾಧಿಸಿತು. ಭೌತಿಕವಾಗಿ ಮಾತ್ರವಲ್ಲ ಬೌದ್ಧಿಕವಾಗಿ ಹೆಚ್ಚು ಹೆಚ್ಚು ಪ್ರಬಲಗೊಂಡಿತು. ಮೊದಲೇ ಹೇಳಿದಂತೆ ಭೌತಿಕ ಅಧೀನತೆಯು ಹೆಚ್ಚು ಮೂರ್ತವಾದದ್ದು, ಮತ್ತು ಪ್ರತಿಭಟಿಸಿ ಇಲ್ಲವಾಗಿಸಿಕೊಳ್ಳುವಷ್ಟು ಕ್ಷಣಿಕವಾದದ್ದು. ಆದರೆ ಬೌದ್ಧಿಕ ಅಧೀನತೆಯು ಹೆಚ್ಚು ಹೆಚ್ಚು ಅಮೂರ್ತವೂ, ದೀರ್ಘಕಾಲಿಕವೂ ಮತ್ತು ಪ್ರತಿರೋಧಗಳಿಂದ ಸುಲಭವಾಗಿ ತೊಡೆದು ಹಾಕಲಾಗದ ಸ್ಥಿತಿ. ಅದಕ್ಕಾಗಿ ವಿಮೋಚನೆಗೊಂಡ ವಸಾಹತುಗಳು ತಮ್ಮ ಮಾಜೀ ಧಣಿಗಳ ಹ್ಯಾಂಗೋವರ್‌ನಲ್ಲಿ ಸದಾ ಚಡಪಡಿಸುತ್ತಿರುತ್ತವೆ. ದೇಶವೊಂದು ಆಕ್ರಮಣಕಾರರಿಂದ ದೈಹಿಕವಾಗಿ ಕೂಡಲೇ ವಿಮೋಚನೆ ಪಡೆಯಬಹುದು. ಆದರೆ ಅದರ ಅಂತಸ್ಥ ಜಗತ್ತುಗಳನ್ನು ಆಳುವ ಆಕ್ರಮಣಕಾರರ ಸಂಕಥನಗಳಿಂದ ದಿಢೀರ್ ವಿಮೋಚನೆ ಅಸಾಧ್ಯ. ಈ ಕಾರಣದಿಂದಲೇ ಒಂದು ಕಾಲದಲ್ಲಿ ಯುರೋಪಿನ ವಸಾಹತುವಾಗಿದ್ದು, ನಂತರ ರಾಜಕೀಯವಾಗಿ ಸ್ವತಂತ್ರಗೊಂಡ ದೇಶವೊಂದು ಬೌದ್ಧಿಕವಾಗಿ ಮತ್ತೆ ಮತ್ತೆ ಯುರೋಪನ್ನು ಅನುಕರಿಸುವುದನ್ನು ನಾವು ನೋಡುತ್ತೇವೆ.

ಯುರೋಪಿನ ಸಂಕಥನಗಳಿಂದ ಬಿಡಿಸಿಕೊಳ್ಳುವ ಪ್ರಯತ್ನ ಕಳೆದ ಶತಮಾನದ ಅಂತ್ಯದ ವೇಳೆಗೆ ಪ್ರಾರಂಭವಾಯಿತು. ಅದು ಬೌದ್ಧಿಕ ಜಗತ್ತಿನ ನಿರ್ವಸಾಹತೀಕರಣ. ಈ ಬಗೆಯ ನಿರ್ವಸಾಹಿತೀಕರಣ ವಾದಗಳು ಹುಟ್ಟಿದ್ದೂ ಸಹ ಯುರೋಪಿನಲ್ಲಿಯೇ. ಯುರೋಪಿನ ಮಾರ್ಕ್ಸ್‌ವಾದಿಗಳು ಈ ಬಗೆಯ ಪ್ರಯತ್ನಗಳಿಗೆ ಮುಂದಾದರು. ಅದರಲ್ಲಿ ಅಂತೋನಿ ಗ್ರಾಂಸಿ ಮುಖ್ಯನಾದವನು. ಮೊದಲ ಬಾರಿಗೆ ವಸಾಹತಕಾರರ ಬೌದ್ಧಿಕ ಚಲನೆಗಳನ್ನು ಗ್ರಾಂಸಿ ಬಯಲು ಮಾಡಿದನು. ಯುರೋಪ್ ತನ್ನ ವಸಾಹತುಗಳಲ್ಲಿ ಸಂಚಯಿಸುವ ತಿಳುವಳಿಕೆಯ ಕ್ರಮಗಳ ಹುನ್ನಾರುಗಳನ್ನು ಗ್ರಾಂಸಿ ರಾಜಕೀಯವಾಗಿ ವಿವರಿಸಿದನು. ಈತನದೇ ಜಾಡಿನಲ್ಲಿ ನಡೆದು ಬಂದವನು ಫುಕೋ. ಈತ ಜ್ಞಾನ ಮತ್ತು ಅಧಿಕಾರಗಳು ಒಂದೇ ದೇಹದ ಆತ್ಮಗಳೆಂದು ಪ್ರತಿಪಾದಿಸಿದ. ಆನಂತರ ಅಲ್ಬರ್ಟ್ ಮೆಮ್ಮಿ, ಫ್ರಾಂಜ್ ಫ್ಯಾನನ್, ಕ್ಲಿಫಾರ್ಡ್, ರೇಮಂಡ್ ವಿಲಿಯಮ್ಸ್ ಮುಂತಾದ ಚಿಂತಕರು ನಿರ್ವಸಾಹತೀಕರಣದ ಚರ್ಚೆಯನ್ನು ಹೆಚ್ಚು ತೀವ್ರಗೊಳಿಸಿದರು. ಇವರು ಮಾಜಿ ವಸಾಹತುಗಳಲ್ಲಿ ಯುರೋಪ್ ನಿರ್ಮಿತ ಸಂಕಥನಗಳನ್ನು ವಿಮರ್ಶಿಸಿದರು. ಮನಃಶಾಸ್ತ್ರ, ಸಮಾಜಶಾಸ್ತ್ರ, ಮಾನವಶಾಸ್ತ್ರ ಮತ್ತು ಅರ್ಥಶಾಸ್ತ್ರಗಳ ಕ್ಷೇತ್ರದಲ್ಲಿ ಈ ನಿರ್ವಸಾಹತೀಕರಣ ಪ್ರಕ್ರಿಯೆಗೆ ಮೇಲಿನ ಚಿಂತಕರು ಚಾಲನೆ ನೀಡಿದರು. ಈ ನಿರ್ವಸಹಾತೀಕರಣ ಚಿಂತನೆಗಳಿಗೆ ಸೂತ್ರದ ರೂಪ ಸಿಕ್ಕಿದ್ದು

ಎಡ್ವರ್ಡ್ ಸೈದ್‌ನ 'ಒರಿಯಂಟಲಿಸಂ' ಕೃತಿಯಿಂದ. ಈ ಕೃತಿಯು ಯುರೋಪೇತರ ಸಮಾಜಗಳನ್ನು, ಯುರೋಪ್ ಗ್ರಹಿಸಿದ ಸ್ವರೂಪವನ್ನು ಮತ್ತು ವಸಾಹತುವಾದದ ರಾಜಕೀಯ ಸೈದ್ಧಾಂತಿಕತೆಯನ್ನು ವಿವರಿಸುತ್ತದೆ. ಭಾರತದ ಸಂದರ್ಭದಲ್ಲಿ ರಂಜಿತ್‌ಗುಹಾ, ಸುಮಿತ್ ಸರ್ಕಾರ್, ಡೇವಿಡ್ ಹಾರ್ಡಿಮನ್, ಗಾಯತ್ರಿ ಸ್ಪಿವಾಕ್, ಜಿ ಎನ್ ದೇವಿ, ವೀಣಾದಾಸ್, ಅಶೀಶ್ ನಂದಿ ಮತ್ತು ಡಿ ಆರ್ ನಾಗರಾಜ್ ಈ ಬಗೆಯ ನಿರ್ವಸಹತೀಕರಣ ಚಿಂತನೆಗಳನ್ನು ಪ್ರಧಾನವಾಗಿ ಮಂಡಿಸಿದವರು. ಈ ಅಧ್ಯಯನದ ಮೇಲೆ ಈ ಎಲ್ಲ ಚಿಂತಕರ ಪ್ರಭಾವಗಳಿವೆ.

ಪ್ರಸ್ತುತ ಅಧ್ಯಯನದ ಹಂಬಲಗಳು

ಈ ಅಧ್ಯಯನವು ಮೂರು ಮುಖ್ಯವಾದ ಸಂಗತಿಗಳನ್ನು ವಿವರಿಸಿಕೊಳ್ಳಲು ಪ್ರಯತ್ನಿಸುತ್ತದೆ. ಮೊದಲನೆಯದು, ಸಮುದಾಯ ಅಧ್ಯಯನಗಳ ಶೈಕ್ಷಣಿಕ ವಿಧಾನದ ಪ್ರಶ್ನೆ. ಎರಡನೆಯದು, ಇಂಡಿಯಾದ ಸಾಮಾಜಿಕ ಚರಿತ್ರೆಯಲ್ಲಿ ಅಲೆಮಾರಿಗಳು ರೂಪುಗೊಂಡ ಬಗೆ. ಮೂರನೆಯದು, ವರ್ತಮಾನದಲ್ಲಿ ಅಲೆಮಾರಿಗಳ ಸಾಮಾಜಿಕಾರ್ಥಿಕ ಸ್ಥಿತಿಗತಿಗಳನ್ನು ವಿವರಿಸಿಕೊಳ್ಳುವುದು. ಪ್ರಸ್ತುತ ಅಧ್ಯಯನ ಮುಖಾಮುಖಿ ಮಾಡುವ ಸಂಗತಿಗಳನ್ನು ಈ ಕೆಳಗಿನಂತೆ ಸೂತ್ರೀಕರಿಸಬಹುದು.

೧. ಭಾರತದಲ್ಲಿ ಮಾನವಶಾಸ್ತ್ರವು ಯಾವ ಬಗೆಯ ಶೈಕ್ಷಣಿಕ ವಿಧಾನದ ಮೂಲಕ ಒಂದು ಅಧ್ಯಯನ ಶಿಸ್ತಾಗಿ ಬೆಳೆದು ಬಂದಿತು? ಈ ಮಾನವಶಾಸ್ತ್ರೀಯ ಅಧ್ಯಯನಗಳು ಯಾರನ್ನು ಕೇಂದ್ರವಾಗಿಟ್ಟು ರೂಪುಗೊಂಡವು ಮತ್ತು ಯಾರಿಗಾಗಿ ರೂಪುಗೊಂಡವು? ಸಾಮಾಜಿಕ ಅಧ್ಯಯನಗಳು ತಾವು ಅಧ್ಯಯನ ಮಾಡುವ ಸಮುದಾಯಗಳ ಅಂತಸ್ಥ ಜಗತ್ತುಗಳ್ನು ಹೇಗೆ ಪರಿಶೀಲಿಸಿವೆ? ಮಾನವಶಾಸ್ತ್ರ ಇಂಡಿಯಾದಲ್ಲಿ ತನ್ನ ಯುರೋಪಿನ ಸ್ವಭಾವಗಳನ್ನು ಕಳಚಿ ದೇಶಸ್ಥಗೊಂಡಿದಿಯೇ?

೨. ಅಲೆಮಾರಿಗಳು ಭಾರತದ ಶ್ರೇಣೀಕೃತ ವ್ಯವಸ್ಥೆಯಲ್ಲಿ ಯಾವ ಬಗೆಯಲ್ಲಿ ರೂಪುಗೊಂಡರು? ಅಲೆಮಾರಿಗಳೆಂದರೆ ಯಾರು? ಡೊಂಬರ ಸಮುದಾಯದ ಜೊತೆಗೆ ಅಲೆಮಾರಿ ಸಮುದಾಯಗಳ ಸಮಾಜದ ಚಾರಿತ್ರಿಕ ರೂಪಾಂತರಗಳನ್ನು ವಿವರಿಸಿಕೊಳ್ಳುವುದು

೩. ವರ್ತಮಾನದಲ್ಲಿ ಡೊಂಬರ ಸಮುದಾಯದ ಸ್ಥಿತಿಗತಿಗಳೇನು? ಜಾಗತೀಕರಣದ ಈ ಹೊತ್ತಿನಲ್ಲಿ ಡೊಂಬರ ಸಮುದಾಯದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಬದುಕು ಯಾವ ಯಾವ ಸವಾಲುಗಳಿಗೆ ಮುಖಾಮುಖಿ ಮಾಡುತ್ತಿದೆ? ಎಂಬ ಸಂಗತಿಗಳನ್ನು ಈ ಪ್ರಬಂಧದಲ್ಲಿ ಪ್ರಧಾನವಾಗಿ ಚರ್ಚಿಸಲು ಉದ್ದೇಶಿಸಲಾಗಿದೆ. ಈ ಮೇಲಿನ ಪ್ರಶ್ನೆಗಳಿಗೆ ತೀರಾ ಇತ್ತೀಚೆಗೆ ಬೇರೆ ಬೇರೆ ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಉತ್ತರಗಳನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. ಆದರೆ ಈ ಪ್ರಯತ್ನಗಳು ಬಹುತೇಕ ಅಭಿಜಾತ ಮಾನವಶಾಸ್ತ್ರದ ಶೈಕ್ಷಣಿಕ ವಿಧಾನವಾದ 'ಮಾಹಿತಿ' ಕಲೆಹಾಕುವ ಜನಪ್ರಿಯ ಪ್ರಯತ್ನದ ಚೌಕಟ್ಟಿನಲ್ಲಿಯೇ ಸೊರಗಿ ಹೋಗುತ್ತವೆ. ಈ ಸಾಂಪ್ರದಾಯಿಕ ಚೌಕಟ್ಟನ್ನು ಮಾರ್ಕ್ಸ್‌ವಾದವು ಅತ್ಯಂತ ಸಮರ್ಥವಾಗಿ ವಿಶ್ಲೇಷಿಸುತ್ತದೆ. ಈ ಕಾರಣದಿಂದ ಈ ಬರಹವು ಮಾರ್ಕ್ಸ್‌ವಾದಿ ಗ್ರಹಿಕೆಯ ಆಧಾರದ ಮೇಲೆ ರೂಪುಗೊಂಡಿದೆ.

ಅಧ್ಯಯನದ ವೈಧಾನಿಕತೆ

ಪ್ರಸ್ತುತ ಅಧ್ಯಯನವು ಡೊಂಬರ ಸಮುದಾಯವನ್ನು ಕೇಂದ್ರವಾಗಿಟ್ಟುಕೊಂಡರೂ ಕರ್ನಾಟಕದ ಇತರೆ ಅಲೆಮಾರಿ ಸಮುದಾಯಗಳನ್ನು ಸಾಂದರ್ಭಿಕವಾಗಿ ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ. ಏಕೆಂದರೆ ಅಲೆಮಾರಿಗಳು ತಮ್ಮ ಜೀವನ ವೈವಿಧ್ಯತೆಯ ಕಾರಣಕ್ಕಾಗಿ ಭಿನ್ನರಾಗಿದ್ದರೂ ಸಹ, ಅವರೆಲ್ಲ ಈ ದೇಶದ ಶ್ರೇಣೀಕೃತ ವ್ಯವಸ್ಥೆಯ ಕಾರಣಕ್ಕಾಗಿ ರೂಪುಗೊಂಡವರು. ಕಳೆದ ಎಂಟು ಹತ್ತು ವರ್ಷಗಳ ನನ್ನ ತಿರುಗಾಟದ ಅನುಭವ ಮತ್ತು ಡೊಂಬರ ಸಮುದಾಯದ ವ್ಯಕ್ತಿಗಳಿಂದ ಪಡೆದ ತಿಳುವಳಿಕೆಗೆ ಈ ಪ್ರಬಂಧದಲ್ಲಿ ಅಕ್ಷರ ರೂಪ ಕೊಡಲು ಯತ್ನಿಸಿದ್ದೇನೆ. ಕರ್ನಾಟಕದ ಉದ್ದಗಲಕ್ಕೂ ಬೇಕೆಂದಾಗೆಲ್ಲ ಸದರಿ ಸಮುದಾಯದ ವಾಸಸ್ಥಳಗಳಿಗೆ ಬೇಟಿ ನೀಡಲಾಗಿದೆ. ಪ್ರಸ್ತುತ ಸಮುದಾಯ ಕಟ್ಟಿಕೊಂಡು ಬಂದ ಅಪಾರ ತಿಳುವಳಿಕೆಯಲ್ಲಿ ನಾನು ಗ್ರಹಿಸಿದ್ದನ್ನು ಮಾತ್ರ ಇಲ್ಲಿ ಅಭಿವ್ಯಕ್ತಿಸಲು ಪ್ರಯತ್ನಿಸಿದ್ದೇನೆ. ಈ ದೇಶದ ಕೆಳಜಾತಿಗಳ ಸ್ಮೃತಿ ಪ್ರಪಂಚ ಅಗಾಧವಾದದ್ದು. ನನ್ನಂತಹ ಅಧ್ಯಯನಕಾರ ಹೆಚ್ಚೆಂದರೆ ಈ ಅನಂತ ಸಾಗರದ ಎದುರು ಭಿಕ್ಷಾ ಪಾತ್ರೆ ಹಿಡಿದ ಫಕ್ಕೀರ ಮಾತ್ರ. ಇಂತಹ ಸಮುದಾಯಗಳ ಸ್ಮೃತಿಕೋಶದಲ್ಲಿನ ತಿಳುವಳಿಕೆ ಮತ್ತು ತಲ್ಲಣಗಳನ್ನು ಅರ್ಥೈಸುವ ವಿಧಾನವನ್ನು ನಾವು ಇನ್ನೂ ಶೋಧಿಸಬೇಕಿದೆ.

ಪ್ರಸ್ತುತ ಅಧ್ಯಯನಕ್ಕಾಗಿ ಕರ್ನಾಟಕದ ಉದ್ದಗಲಕ್ಕೂ ತಿರುಗಾಡಲಾಗಿದೆ. ಆದರೆ ಡೊಂಬರ ಸಾಮಾಜಿಕಾರ್ಥಿಕ ಸ್ಥಿತಿಗತಿಗಳನ್ನು 'ನಿಖರವಾಗಿ' ಕಂಡುಕೊಳ್ಳುವ ಸಲುವಾಗಿ ಮೂರು ಜಿಲ್ಲೆಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಬಳ್ಳಾರಿ, ಕೊಪ್ಪಳ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಡೊಂಬರು ವಾಸಿಸುವ ಪ್ರತಿ ಗ್ರಾಮದ, ಪ್ರತಿ ಕುಂಟುಂಬದ ಅಂಕಿ ಅಂಶಗಳನ್ನು ಕಲೆ ಹಾಕಲಾಗಿದೆ. ಬಳ್ಳಾರಿ ಜಿಲ್ಲೆಯ ೧೧ ಗ್ರಾಮಗಳಲ್ಲಿ, ದಾವಣಗೆರೆ ಜಿಲ್ಲೆಯ ೪ ಗ್ರಾಮಗಳಲ್ಲಿ ಮತ್ತು ಶಿವಮೊಗ್ಗ ಜಿಲ್ಲೆಯ ೧೯ ಗ್ರಾಮಗಳಲ್ಲಿನ ಡೊಂಬರ ಕುಟುಂಬಗಳ ಸಮಗ್ರ ವಿವರಗಳನ್ನು (House hold survey) ಪಡೆದುಕೊಳ್ಳಲಾಗಿದೆ. ಕರ್ನಾಟಕದಲ್ಲಿ ಧಾರವಾಡ ಮತ್ತು ಬೆಳಗಾವಿ ಬಿಟ್ಟರೆ ಹೆಚ್ಚಾಗಿ ಡೊಂಬರು ವಾಸಿಸುವ ಜಿಲ್ಲೆಗಳೆಂದರೆ ಬಳ್ಳಾರಿ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳು. ಈ ಕಾರಣಕ್ಕಾಗಿ ಮೂರು ಜಿಲ್ಲೆಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಪ್ರಸ್ತುತ ಅಧ್ಯಯನದ ಮಿತಿಯನ್ನು ಈಗಲೇ ಹೇಳುವುದು ಒಳಿತು. ಇಲ್ಲಿ ಡೊಂಬರ ಸಮುದಾಯದ ಸಮಗ್ರ ವಿವರಗಳನ್ನು, 'ಮಾಹಿತಿ'ಗಳನ್ನು ಕಲೆಹಾಕುವ ಪ್ರಯತ್ನ ಮಾಡಿಲ್ಲ. ಈ ಪ್ರಬಂಧದ ಉದ್ದೇಶವೂ ಅದಲ್ಲ. ಡೊಂಬರ ಸಮುದಾಯವು ಈ ಅಧ್ಯಯನದ ಕೇಂದ್ರ. ಆದರೆ ಈ ಬಗೆಯ ಸಮುದಾಯಗಳನ್ನು ಅಧ್ಯಯನ ಮಾಡಿದ ಅಭಿಜಾತ ಶೈಕ್ಷಣಿಕ ವಿಧಾನವನ್ನು ಮತ್ತು ಅದರ ಸೈದ್ಧಾಂತಿಕತೆಯನ್ನು ಪರಿಶೀಲಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶಗಳಲ್ಲೊಂದು. ಜೊತೆಗೆ ಇಂಡಿಯಾದ ಸಾಮಾಜಿಕ ಚರಿತ್ರೆಯಲ್ಲಿ ಅಲೆಮಾರಿಗಳು ರೂಪುಗೊಂಡ ಬಗೆಯನ್ನು ಗತಿತಾರ್ಕಿಕ ವಿಧಾನದ ಮೂಲಕ ಕಂಡುಕೊಳ್ಳಲು ಯತ್ನಿಸಲಾಗಿದೆ. ಒಂದು ಅರ್ಥದಲ್ಲಿ ಯುರೋಪಿನ ಬೌದ್ಧಿಕ ಜಗತ್ತಿನ ರಾಜಕಾರಣ ಮತ್ತು ಇಂಡಿಯಾದ ಸಮಾಜವನ್ನು ರೂಪಿಸಿದ ಶ್ರೇಣೀಕರಣದ ರಾಜಕೀಯಾರ್ಥಿಕ ಚಲನೆಗಳನ್ನು ವಿವರಿಸಿಕೊಳ್ಳಲು ಈ ಪ್ರಬಂಧ ಪ್ರಯತ್ನಿಸುತ್ತದೆ.

ಪ್ರಬಂಧದ ಅಧ್ಯಾಯಗಳು

ಪ್ರಬಂಧವು ಮೂರು ಮುಖ್ಯ ಅಧ್ಯಾಯಗಳನ್ನು ಮತ್ತು ಸಮಾರೋಪವನ್ನು ಒಳಗೊಂಡಿರುತ್ತದೆ. ಈ ಅಧ್ಯಾಯಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಮೊದಲ ಅಧ್ಯಾಯವು ಮಾನವಶಾಸ್ತ್ರದ ಹುಟ್ಟು ಮತ್ತು ಬೆಳವಣಿಗೆಗಳನ್ನು ವಿವರಿಸಿಕೊಳ್ಳುತ್ತದೆ. ಪುನರುಜ್ಜೀವನ ಕಾಲಘಟ್ಟದ ನಂತರ ಯುರೋಪಿನಲ್ಲಿ ನಡೆದ ಜ್ಞಾನಕ್ರಾಂತಿಯ ಕಾರಣಕ್ಕಾಗಿ ನಡೆದ ಸಮಾಜ ವಿಜ್ಞಾನಗಳ ಹುಟ್ಟು ಮತ್ತು ಚಾರಿತ್ರಿಕ ಬೆಳವಣಿಗೆಗಳನ್ನು ಇಲ್ಲಿ ವಿವರಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಇದರ ಜೊತೆಗೆ ಮಾನವಶಾಸ್ತ್ರವು ಯುರೋಪಿನ ವಸಾಹತುಗಳಾಗಿದ್ದ ಈಜಿಪ್ಟ್, ಭಾರತ ಮುಂತಾದ ದೇಶಗಳಲ್ಲಿ ಯಾವ ಬಗೆಯ ತಾತ್ವಿಕ ಚೌಕಟ್ಟಿನಲ್ಲಿ ಒಂದು ಶೈಕ್ಷಣಿಕ ಶಿಸ್ತಾಗಿ ರೂಪುಗೊಂಡಿತು? ಈ ಶಾಸ್ತ್ರಶಿಸ್ತಿನ ಹಿಂದಿದ್ದ ರಾಜಕೀಯಾರ್ಥಿಕ ಉದ್ದೇಶಗಳಾವುವು? ಯಾಕಾಗಿ ಭಾರತದಂತಹ ದೇಶದ ಬುಡಕಟ್ಟು, ಜಾತಿ ಮತ್ತು ಅಲೆಮಾರಿಗಳನ್ನು ಅಧ್ಯಯನ ಮಾಡಲಾಯಿತು? ಎಂಬ ಪ್ರಶ್ನೆಗಳನ್ನು ಈ ಅಧ್ಯಾಯದಲ್ಲಿ ಕೇಳಿಕೊಳ್ಳಲಾಗಿದೆ. ಒಟ್ಟಾರೆಯಾಗಿ ಭಾರತ ಮತ್ತು ಕರ್ನಾಟಕದ ಸಂದರ್ಭದಲ್ಲಿ ವಸಾಹತುಶಾಹಿ ಕಾಲಘಟ್ಟ ಮತ್ತು ವಸಾಹತೋತ್ತರ ಕಾಲಘಟ್ಟದಲ್ಲಿ ನಡೆದ ಸಮುದಾಯ ಅಧ್ಯಯನಗಳ ವೈಧಾನಿಕತೆಯ ಸ್ವರೂಪವನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ. ಜೊತೆಗೆ ಪ್ರಧಾನವಾಗಿ ಅಲೆಮಾರಿಗಳನ್ನು ಅಧ್ಯಯನ ಮಾಡಲು ಮಾನವಶಾಸ್ತ್ರಜ್ಞರನ್ನು ಪ್ರೇರೇಪಿಸಿದ ವಸಾಹತು ಕಾಲಘಟ್ಟದ ರಾಜಕೀಯಾರ್ಥಿಕ ಅನಿವಾರ್ಯತೆಗಳನ್ನು ವಿಶ್ಲೇಷಿಸಲು ಈ ಅಧ್ಯಾಯದಲ್ಲಿ ಪ್ರಯತ್ನಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಡೊಂಬರನ್ನೂ ಸೇರಿದಂತೆ ಭಾರತದ ಸಾಮಾಜಿಕ ಚರಿತ್ರೆಯಲ್ಲಿ ಅಲೆಮಾರಿಗಳು ರೂಪುಗೊಂಡ ಬಗೆಯನ್ನು ವಿವರಿಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ. ಅಲೆಮಾರಿಗಳೆಂದರೆ ಯಾರು? ಅವರು ಭಾರತದ ಸಮಾಜದ ಚಾರಿತ್ರಿಕ ಬೆಳವಣಿಗೆಯಲ್ಲಿ ರೂಪುಗೊಳ್ಳಲು ಕಾರಣವಾದ ರಾಜಕೀಯಾರ್ಥಿಕ ಸಂಗತಿಗಳಾವವು? ಎಂಬ ಪ್ರಶ್ನೆಗಳನ್ನು ಈ ಅಧ್ಯಾಯದಲ್ಲಿ ಕೇಳಿಕೊಳ್ಳಲಾಗಿದೆ. ಅಲೆಮಾರಿ ಡೊಂಬರ ಸಾಮಾಜಿಕ ಚರಿತ್ರೆಯನ್ನು ಆ ಸಮುದಾಯದ ಸೃಷ್ಟಿ ಪುರಾಣಗಳ ಮೂಲಕ ರೂಪಿಸಲು ಪ್ರಯತ್ನಿಸಲಾಗಿದೆ. ಜೊತೆಗೆ ಭಾರತದ ಊಳಿಗಮಾನ್ಯಶಾಹಿ ವ್ಯವಸ್ಥೆಯ ಬದಲಾಗುವಿಕೆಯ ಜೊತೆಗೆ ರೂಪಾಂತರಗೊಂಡ ಡೊಂಬರ ಸಮುದಾಯದ ಚಾರಿತ್ರಿಕ ಸ್ಥಿತ್ಯಂತರಗಳನ್ನು ವಿವರಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಡಿ.ಡಿ.ಕೋಸಂಬಿ, ದೇವಿಪ್ರಸಾದ್ ಚಟ್ಟೋಪಾಧ್ಯಾಯ, ಎನ್.ಆರ್.ನಂದಿ ಮತ್ತು ಕರ್ನಾಟಕದ ಸಂದರ್ಭದಲ್ಲಿ ಸಾಕಿಯವರು ಅನ್ವಯ ಮಾಡಿಕೊಂಡ ಸಾಮಾಜಿಕ ಚರಿತ್ರೆಯನ್ನು ರೂಪಿಸುವ ಗತಿತಾರ್ಕಿಕ ವಿಧಾನವನ್ನು ಇಲ್ಲಿ ಅಳವಡಿಸಿಕೊಳ್ಳಲಾಗಿದೆ. ಡೊಂಬರಂತಹ ಅಲೆಮಾರಿ ಸಮುದಾಯಗಳ ಸಾಮಾಜಿಕಾರ್ಥಿಕ ಸ್ಥಿತಿಗಳಲ್ಲಿ ಆದ ಬದಲಾವಣೆಗಳನ್ನು, ಇಂಡಿಯಾದ ಸಮಾಜದ ಉತ್ಪಾದನಾ ವ್ಯವಸ್ಥೆಯಲ್ಲಾದ ರೂಪಾಂತರಗಳ ಜೊತೆಗೆ ಅಧ್ಯಯನ ಮಾಡಲಾಗಿದೆ. ಪ್ರಸ್ತುತ ಅಧ್ಯಾಯವು ಡೊಂಬರ ಸಮುದಾಯವನ್ನು ಮುಖ್ಯವಾಗಿಟ್ಟುಕೊಂಡು ಒಟ್ಟಾರೆಯಾಗಿ ಅಲೆಮಾರಿಗಳು ಭಾರತದ ಸಮಾಜದಲ್ಲಿ ರೂಪುಗೊಂಡ ಬಗೆಯನ್ನು ವಿವರಿಸಿಕೊಳ್ಳುತ್ತದೆ.

ಮೂರನೇ ಅಧ್ಯಾಯದಲ್ಲಿ, ಮೊದಲೆರಡು ಅಧ್ಯಾಯದಲ್ಲಿನ ಚರ್ಚೆಗಳನ್ನು ಪರಿಶೀಲಿಸುವ ಪ್ರಯತ್ನ ಮಾಡಲಾಗಿದೆ. ವರ್ತಮಾನದಲ್ಲಿ ಡೊಂಬರ ಸಮುದಾಯದ ಸಾಮಾಜಿಕ, ಆರ್ಥಿಕ, ಸಂಸ್ಕೃತಿ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ವಿವರಿಸಲಾಗಿದೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಮೂರು ಜಿಲ್ಲೆಗಳಿಂದ ಪಡೆದ ಅಂಕಿ ಅಂಶಗಳನ್ನು ಮುಖ್ಯವಾಗಿಟ್ಟುಕೊಂಡು ವರ್ತಮಾನದ ಡೊಂಬರ ಸ್ಥಿತಿಗತಿಗಳನ್ನು ವಿಶ್ಲೇಷಿಸಲಾಗಿದೆ. ಇಲ್ಲಿ ನೆಲೆನಿಂತ ಮತ್ತು ಅರೆಅಲೆಮಾರಿಗಳಾಗಿ ಬದುಕುತ್ತಿರುವ ಡೊಂಬರ ಸಮಾಜದ ನಡುವಿನ ಸಾಮ್ಯ ಮತ್ತು ವೈರುಧ್ಯಗಳನ್ನು ಪ್ರಧಾನವಾಗಿ ಚರ್ಚಿಸಲಾಗಿದೆ. ಜೊತೆಗೆ ಜಾಗತೀಕರಣದ ಈ ಹೊತ್ತಿನಲ್ಲಿ ಇಂತಹ ಸಮುದಾಯಗಳು ವರ್ತಮಾನದ ಜೊತೆ ನಡೆಸುವ ಸಂಘರ್ಷ ಮತ್ತು ಅನುಸಂಧಾನಗಳ ಸ್ವರೂಪಗಳನ್ನು ಚರ್ಚಿಸಲು ಪ್ರಯತ್ನಿಸಲಾಗಿದೆ. ಒಟ್ಟಿನಲ್ಲಿ ಈ ಪ್ರಬಂಧ ಸಾಮಾಜಿಕ ಅಧ್ಯಯನಗಳ, ಅದರಲ್ಲೂ ಮಾನವಶಾಸ್ತ್ರದ ಶೈಕ್ಷಣಿಕ ವಿಧಾನದ ಪ್ರಶ್ನೆಯ ಜೊತೆಗೆ ಅಲೆಮಾರಿಗಳ ಚಾರಿತ್ರಿಕ ಹುಟ್ಟು, ಬೆಳವಣಿಗೆ ಮತ್ತು ವರ್ತಮಾನದ ಸ್ಥಿತಿಗತಿಗಳನ್ನು, ಡೊಂಬರ ಸಮುದಾಯವನ್ನು ಪ್ರಧಾನವಾಗಿಟ್ಟುಕೊಂಡು ವಿವರಿಸಿಕೊಳ್ಳುತ್ತದೆ.

ಅಧ್ಯಾಯ ೨

ಯುರೋಪಿನಲ್ಲಿ ಪ್ರಾರಂಭವಾದ ಸಾಮಾಜಿಕ ಅಧ್ಯಯನಗಳ ಚಾರಿತ್ರಿಕ ಬೆಳವಣಿಗೆ

ಯುರೋಪಲ್ಲಿ ಎತ್ನೋಗ್ರಫಿ ಮತ್ತು ಮಾನವಶಾಸ್ತ್ರಗಳ ಹುಟ್ಟು

ಭಾರತದಲ್ಲಿ ನಡೆದ ಸಮುದಾಯ ಅಧ್ಯಯನಗಳು

ಬುಡಕಟ್ಟುಗಳ ಅಧ್ಯಯನ

ವಸಾಹತೋತ್ತರ ಕಾಲಘಟ್ಟದ ಅಧ್ಯಯನಗಳು

ಜಾತಿಗಳ ಅಧ್ಯಯನಗಳು

ಅಲೆಮಾರಿಗಳ ಅಧ್ಯಯನಗಳು

ಗ್ರಾಮ ಅಧ್ಯಯನಗಳು

ವಸಾಹತಶಾಹಿ ಸಂಕಥನವಾಗಿ ಮಾವನಶಾಸ್ತ್ರ

ಓರಿಯಂಟಲಿಸ್ಟರು: ಗ್ರಾಂಥಿಕ ಸತ್ಯಗಳ ಆರಾಧಕರು

ಮಿಶನರಿಗಳು: ಕಾಗೆ ಗೂಡೊಳಗಿನ ಪರಪುಟ್ಟಗಳು

ಕಂಪನಿ ಆಡಳಿತದ ಅಧಿಕಾರಿಗಳ ಅಧ್ಯಯನಗಳು

ಒಳಗಿನವರಾಗುವುದು: ಹಾಗೆಂದರೇನು?

ಜ್ಞಾನ ಮತ್ತು ಅಧಿಕಾರ: ನಿರ್ವಸಾಹತೀಕರಣ ಚಿಂತನೆ

ಪರ್ಯಾಯ ಶೈಕ್ಷಣಿಕ ವಿಧಾನದ ಹಂಬಲಗಳು

ಯುರೋಪಿನಲ್ಲಿ ಪ್ರಾರಂಭವಾದ ಸಾಮಾಜಿಕ ಅಧ್ಯಯನಗಳ ಚಾರಿತ್ರಿಕ ಬೆಳವಣಿಗೆ

ಪೀಠಿಕೆ

ಪ್ರಸ್ತುತ ಅಧ್ಯಾಯದಲ್ಲಿ ಯುರೋಪಿನಲ್ಲಿ ಪ್ರಾರಂಭವಾದ ಸಾಮಾಜಿಕ ಅಧ್ಯಯನಗಳ ಚಾರಿತ್ರಿಕ ಬೆಳವಣಿಗೆಯನ್ನು ಅಧ್ಯಯನ ಮಾಡಲು ಉದ್ದೇಶಿಸಲಾಗಿದೆ. ಸಮಾಜ ವಿಜ್ಞಾನಗಳ ವಿವಿಧ ಜ್ಞಾನಶಿಸ್ತುಗಳಾದ ಸಮಾಜಶಾಸ್ತ್ರ, ಮಾನವಶಾಸ್ತ್ರ, ರಾಜಕೀಯಶಾಸ್ತ್ರ ಮತ್ತು ಅರ್ಥಶಾಸ್ತ್ರದ ಕ್ಷೇತ್ರಗಳಲ್ಲಿ ನಡೆದ ಅಧ್ಯಯನಗಳನ್ನು ಇಲ್ಲಿ ಸಾಮಾಜಿಕ ಅಧ್ಯಯನಗಳು ಎಂದು ಪರಿಗಣಿಸಲಾಗಿದೆ. ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳ ಕ್ಷೇತ್ರದ ಅಧ್ಯಯನಗಳು ಹೇಗೆ, ಯಾವಾಗ ಮತ್ತು ಎಲ್ಲಿ ಪ್ರಾರಂಭವಾದವು ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಆದಿಮಾನವ ಬೆಂಕಿಯ ಉಪಯೋಗವನ್ನು ಅರಿತು ಅದನ್ನು ವಿವಿಧ ಉದ್ದೇಶಗಳಿಗೆ ಬಳಸಲು ಉದ್ದೇಶಿಸಿದಾಗಿನಿಂದ ವಿಜ್ಞಾನದ ತಿಳುವಳಿಕೆಯು ಸಂಚಯಗೊಳ್ಳಲಾರಂಭಿಸಿತು. ಇದೇ ಆದಿಮಾನವ ಸಮತಾವಾದಿ ಸಮಾಜದಲ್ಲಿ ಬದುಕುವ ಸಂದರ್ಭದಲ್ಲಿ ಅನಾಯಾಸವಾಗಿ ಸಾಮಾಜಿಕ ನಿಯಮಗಳನ್ನು ಪೋಷಿಸಿಕೊಂಡು ಬಂದಿದ್ದ. ಆ ನಂತರ ಉತ್ಪಾದನಾ ಕ್ಷೇತ್ರದಲ್ಲಿ ಆದ ಬದಲಾವಣೆಯ ಕಾರಣಕ್ಕೆ ಆದಿಮ ಸಮತಾವಾದಿ ಸಮಾಜ ಪಲ್ಲಟಗೊಂಡು ಖಾಸಗಿ ಆಸ್ತಿ ಮತ್ತು ಕುಟುಂಬಗಳ ಪರಿಕಲ್ಪನೆ ರೂಪಗೊಳ್ಳುವಾಗ ಮನುಷ್ಯ ತನ್ನ ಸುತ್ತ ಅನೂಹ್ಯವಾಗಿ ಆಕಾರ ಪಡೆಯಲಾರಂಭಿಸಿದ ಸಾಮಾಜಿಕ ಸಂಸ್ಥೆಗಳ ರೂಪ, ಲಕ್ಷಣ ಮತ್ತು ನಿಯಮಗಳನ್ನು ಕಲ್ಪಿಸಲು ಪ್ರಾರಂಭವಾದ ಸಂದರ್ಭದಲ್ಲಿಯೇ ಸಮಾಜದ ಕುರಿತ ಚಿಂತನೆಗಳು ಪ್ರಾರಂಭವಾದವು. ಆದರೆ ಆ ಬಗೆಯ ಚಿಂತನೆಗಳು ಘನೀಕರಣಗೊಂಡು ವೈಚಾರಿಕ ಧಾರೆಗಳಾಗಿ ರೂಪುಗೊಂಡದ್ದು ಮನುಷ್ಯನ ಲೌಕಿಕ ಬದುಕಿನ ಮಹತ್ವದ ಘಟ್ಟವೆಂದೇ ಭಾವಿಸಬೇಕಾಗುತ್ತದೆ. ಏಕೆಂದರೆ ಯಾವುದೇ ವಿಜ್ಞಾನ, ಕಲೆ ಮತ್ತು ಸಮಾಜವನ್ನು ಕುರಿತ ಚಿಂತನೆಗಳು ಮನುಷ್ಯನ ಲೌಕಿಕದ ಬದುಕಿನ ಸಾಧ್ಯತೆ ಮತ್ತು ಪರಿಣಾಮಗಳನ್ನು ಆಧರಿಸಿಯೇ ರೂಪುಗೊಂಡಿರುವುದು ಕಂಡು ಬರುತ್ತದೆ. ಹಾಗೆ ನೋಡಿದರೆ ಮನುಷ್ಯನ ಲೌಕಿಕದ ಬದುಕಿನ ತಳಮಳಗಳ ಮುಖಾಮುಖಿಯಲ್ಲಿಯೇ ಯಾವುದೇ ಚಿಂತನೆಗಳು ಆಕಾರಗೊಳ್ಳುತ್ತ ಬಂದಿವೆ. ಪ್ಲೇಟೋ, ಅರಿಸ್ಟಾಟಲ್, ಸಾಕ್ರಿಟೀಸ್, ವೇದ, ಉಪನಿಷತ್ತು, ಭರತ ಮುನಿಯ ಕಲೆಯ ಕುರಿತ ಚರ್ಚೆಗಳು, ಮನು ಬರೆದ ಸಾಮಾಜಿಕ ನಿಯಮಗಳು ಆಯಾ ಕಾಲಘಟ್ಟದ ಸಮಾಜದ ಲೌಕಿಕದ ಆಗುಹೋಗುಗಳ ಕಾರಣಗಳಾಗಿಯೇ ರೂಪುಗೊಂಡವು. ಮನುಷ್ಯನ ಲೌಕಿಕದ ಬದುಕಿನ ರೂಪಾಂತರಗಳಿಗೆ ಅನುಗುಣವಾಗಿಯೇ ಅವನ ಬೌದ್ಧಿಕ ಜಗತ್ತು

ರೂಪುಗೊಳ್ಳುತ್ತ ಬಂದಿತು.

ಇಲ್ಲಿ ಮುಖ್ಯವಾಗಿ ಪುನರುಜ್ಜೀವನ ಕಾಲಘಟ್ಟದ ನಂತರ ಯುರೋಪಿನಲ್ಲಿ ಪ್ರಾರಂಭವಾದ ಸಾಮಾಜಿಕ ಅಧ್ಯಯನಗಳ ಚಾರಿತ್ರಿಕ ಬೆಳವಣಿಗೆಯನ್ನು ವಿವರಿಸಲು ಯತ್ನಿಸಲಾಗಿದೆ. ಪುನರುಜ್ಜೀವನ ಕಾಲಘಟ್ಟದ ನಂತರ ಯುರೋಪಿನ ಒಂದು ವರ್ಗ ತಮ್ಮ ಬದುಕನ್ನು ಅಂದಗೊಳಿಸಿಕೊಳ್ಳುವ ಹಂತದಿಂದ ವಿಜ್ಞಾನ ಮತ್ತು ತಂತ್ರಜ್ಞಾನಗಳ ಕ್ಷೇತ್ರದಲ್ಲಿ ಅಗಾಧ ಸಾಧನೆಗಳನ್ನು ಮಾಡಿ ಭೂಗೋಳದ ಮೇಲೆ ತಪ್ತವಾಗಿ ಬದುಕುತ್ತಿದ್ದ ಬೇರೆ ಬೇರೆ ಖಂಡಗಳನ್ನು ವಶಪಡಿಸಿಕೊಂಡು ಆಳಲಾರಂಭಿಸಿದ ಹಂತದವರೆಗೆ ತಮ್ಮ ಸುತ್ತ ತಮಗೆ ಅನುಕೂಲವಾಗಬಲ್ಲ ಸಾಮಾಜಿಕ ಚಿಂತನೆಗಳನ್ನು ರೂಪಿಸಿಕೊಳ್ಳುತ್ತಲೇ ಬಂದರು. ಅದು ಅರಿಸ್ಟಾಟಲ್‌ನಿಂದ ಹಿಡಿದು ಮೆಕವಲ್ಲಿ, ವಿಲಿಯಂಜೋನ್ಸ್, ಮ್ಯಾಕ್ಸ್ ಮುಲ್ಲರ್, ರೆಡ್‌ಕ್ಲಿಫ್ ಬ್ರೌನ್ ವರೆಗೆ ವಿವಿಧ ಹಂತದಲ್ಲಿ ಪಶ್ಚಿಮದ ಸಮಾಜದ ಚಿಂತನೆಗಳು ಬೆಳೆದು ಬಂದಿವೆ. ಈ ಸಮಾಜದ ಚಿಂತನೆಗಳು ಅಥವಾ ಅಧ್ಯಯನಗಳ ಚಾರಿತ್ರಿಕ ಬೆಳವಣಿಗೆಯನ್ನು ಈ ಅಧ್ಯಾಯದಲ್ಲಿ ವಿವರಿಸಿಕೊಳ್ಳಲು ಪ್ರಯತ್ನಿಸಲಾಗಿದೆ

ಯುರೋಪಿನಲ್ಲಿ ಸಾಮಾಜಿಕ ಅಧ್ಯಯನಗಳು ಆಕಸ್ಮಿಕವಾಗಿ ಪ್ರಾರಂಭವಾಗಲಿಲ್ಲ. ಪಶ್ಚಿಮದ ಬೌದ್ಧಿಕ ಜಗತ್ತಿನ ತೆರೆಯ ಹಿಂದೆ ಪ್ಲೇಟೋ, ಅರಿಸ್ಟಾಟಲ್ ಮತ್ತು ಸಾಕ್ರೆಟೀಸ್‌ನಂತಹ ಜೀನಿಯಸ್‌ಗಳ ಪರಂಪರೆ ಇದ್ದರೂ, ಯುರೋಪ್ ತನ್ನನ್ನು ವೈಚಾರಿಕತೆಯ ಸ್ಫೋಟಕ್ಕೆ ಒಡ್ಡಿಕೊಂಡಿದ್ದು ಎನ್‌ಲೈಟ್‌ಮೆಟ್‌ನ ನಂತರ. ರೋಮ್ ಸಾಮ್ರಾಜ್ಯದ ವೈಭವ ಮುಗಿದು ಮಧ್ಯಪ್ರಾಚ್ಯವೂ ಸೇರಿದಂತೆ ಇಡೀ ಯುರೋಪನ್ನು ಕ್ಯಾಥೋಲಿಕ್ ಚರ್ಚ್ ಆಳಲಾರಂಭಿಸಿದ ಮೇಲೆ ಅಲ್ಲಿನ ವೈಚಾರಿಕ ಧಾರೆಗಳು ನೇಪಥ್ಯಕ್ಕೆ ಸರಿದವು. ರಾಜಶಾಹಿ ಆಡಳಿತವನ್ನು ಪಕ್ಕಕ್ಕೆ ಸರಿಸಿ ಚರ್ಚ್‌ಗಳು ಸಮಾಜವನ್ನು ನಿಯಂತ್ರಿಸಿದವು. ಪುನರುಜ್ಜೀವನಪೂರ್ವ ಕಾಲಘಟ್ಟದ ಯುರೋಪು ಚರ್ಚಿನ ಅಧೀನದಲ್ಲಿ ನಲುಗುವಂತಾಯ್ತು. ಧಾರ್ಮಿಕ ರಾಜಕಾರಣವು ಯುರೋಪಲ್ಲಿ ಹುಟ್ಟಿದ ವೈಚಾರಿಕತೆಯನ್ನು ಮತ್ತು ಬೌದ್ಧಿಕ ವಿಕಾಸವನ್ನು ಹಿಂಸಾತ್ಮಕವಾಗಿಯೂ ಹತ್ತಿಕ್ಕುತ್ತ ಬಂದಿತು. ಆದರೆ ಯಾವತ್ತು ಚರ್ಚಿನ ಅಧಿಕಾರಗಳಿಗೆ ಕೊನೆ ಹಾಡಿದ ಯುರೋಪಿನ ಜನ ಹೊಸ ಜಗತ್ತನ್ನು ರೂಪಿಸಲು ಯತ್ನಿಸಿದರೋ ಅಂದಿನಿಂದ ತೆರಮರೆಯಲ್ಲಿದ್ದ ವಿದ್ವಾಂಸರು ಬೆಳಕಿಗೆ ಬಂದರು. ಯುರೋಪಿನ ಜ್ಞಾನ ವ್ಯವಸ್ಥೆಯಲ್ಲಿ ಅನೇಕ ಆವಿಷ್ಕಾರಗಳು ಸಂಭವಿಸಿದವು. ಈ ಸಂದರ್ಭದಲ್ಲಿ ಸಮಾಜ ವಿಜ್ಞಾನಗಳಿಗೆ ಸಂಬಂಧಿಸಿದ ಅನೇಕ ಜ್ಞಾನಶಿಸ್ತುಗಳೂ ಸಹ ಶೋಧಿಸಲ್ಪಟ್ಟವು. ಅವುಗಳಲ್ಲಿ ರಾಜಕೀಯಶಾಸ್ತ್ರ, ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರಗಳು ಪ್ರಮುಖವಾದವು. ಯುರೋಪಿನ ಜನ ತಾವು ಗೆದ್ದ ದೇಶಗಳಲ್ಲಿ ಈ ಜ್ಞಾನಶಿಸ್ತುಗಳನ್ನು ಬೆಳೆಸಲು ಮುಂದಾದರು. ಒಂದು ಅರ್ಥದಲ್ಲಿ ಭಾರತದಂತಹ ವಸಾಹತುಗಳು ಯುರೋಪಿನ ಪ್ರಯೋಗಾಲಯಗಳಂತೆ ಬಳಕೆಯಾದವು.

ಭಾರತದಲ್ಲಿ ಸಾಮಾಜಿಕ ಅಧ್ಯಯನಗಳು ಪ್ರಾರಂಭಗೊಂಡ ಹಂತದಲ್ಲಿ ನಮ್ಮನ್ನು ಆಳುತ್ತಿದ್ದ ಯುರೋಪಿನ ದೇಶಗಳಲ್ಲಿ ಸಮಾಜ ವಿಜ್ಞಾನದ ಶೈಕ್ಷಣಿಕ ವಿಧಾನಗಳು ರೂಪುಗೊಂಡಿರಲಿಲ್ಲ. ಈವತ್ತು ಸಾಮಾಜಿಕ ಮತ್ತು ಸಮುದಾಯ ಅಧ್ಯಯನಗಳನ್ನು ಕೈಗೊಳ್ಳಲು ಆಶ್ರಯಿಸುವ ಸಮಾಜಶಾಸ್ತ್ರ ಮತ್ತು

ಮಾನವಶಾಸ್ತ್ರಗಳಿಗೆ ಯುರೋಪಿನಲ್ಲೇ ಒಂದು ಖಚಿತ ಶೈಕ್ಷಣಿಕ ರೂಪರೇಷೆಗಳು ಸಿದ್ಧವಾಗಿರಲಿಲ್ಲ. ಅಲ್ಲದೆ ಯುರೋಪಲ್ಲಿ ಸಮಾಜಶಾಸ್ತ್ರವಾಗಲಿ ಮತ್ತು ಮಾನವಶಾಸ್ತ್ರವಾಗಲಿ ಒಪ್ಪಿತ ಶೈಕ್ಷಣಿಕ ಶಿಸ್ತುಗಳಾಗಿ ರೂಪುಗೊಂಡಿರಲಿಲ್ಲ. 'ಯುರೋಪಿನಲ್ಲಿ ವಿದ್ವಾಂಸರೆನ್ನಿಸಿಕೊಂಡ ಹಲವು ಜನ ಅಲ್ಲಿನ ರಾಜಕೀಯ, ಆರ್ಥಿಕ ಮತ್ತು ವಿವಿಧ ವಿದ್ಯಮಾನಗಳಲ್ಲಿ ತೊಡಗಿಕೊಂಡಿದ್ದರು. ಯುರೋಪಿನ ಈ ರಾಜಕಾರಣದಲ್ಲಿ ತಲ್ಲೀನರಾಗಿದ್ದ ಈ ವಿದ್ವಾಂಸರು ಮುಂದೆ ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರಗಳು ಎರಡು ಶೈಕ್ಷಣಿಕ ಶಿಸ್ತುಗಳು ರೂಪುಗೊಳ್ಳಲು ಕಾರಣರಾದರು. ಈ ಎರಡೂ ಅಧ್ಯಯನ ಶಿಸ್ತುಗಳು ಯುರೋಪಿನ ಅಂದಿನ ದಿನಗಳ ಚಾರಿತ್ರಿಕ ಕಾರಣಗಳಾಗಿ ರೂಪುಗೊಂಡವು'[೯]. ಯುರೋಪಿನ ಪುನರುಜ್ಜೀವನ ಕಾಲಘಟ್ಟದ ನಂತರ ಅಲ್ಲಿನ ಜ್ಞಾನ ವ್ಯವಸ್ಥೆಯಲ್ಲಿ ಅಗಾಧ ಪರಿಣಾಮಗಳಾದವು. ವಿಜ್ಞಾನ ತಂತ್ರಜ್ಞಾನಕ್ಕೆ ಸಂಬಂಧಿಸಿದ ಅನೇಕ ಆವಿಷ್ಕಾರಗಳು ಯುರೋಪನ್ನು ಒಂದು ಜ್ಞಾನ ಪರ್ವದ ತವರನ್ನಾಗಿ ರೂಪಿಸಿದವು. ಅದೊಂದು ರೀತಿಯಲ್ಲಿ ಮಾನವನ ಜ್ಞಾನಕ್ಷೇತ್ರದಲ್ಲಿ ಆದ ವಿರಾಟ್ ವಿಸ್ಫೋಟವಾಗಿಯೇ ಚರಿತ್ರೆಯಲ್ಲಿ ದಾಖಲಾಗಿದೆ.

ಪುನರುಜ್ಜೀವನದ ಕಾಲಘಟ್ಟದ ನಂತರ ಯುರೋಪಿನ ಒಂದು ವರ್ಗದ ಜನ ಸಾಮಾಜಿಕ ಮತ್ತು ರಾಜಕೀಯಾರ್ಥಿಕ ಬಿಡುಗಡೆಯನ್ನು ಅನುಭವಿಸಿದರು. ಮುಖ್ಯವಾಗಿ ಧಾರ್ಮಿಕ ಕರ್ಮಠತೆಯನ್ನು ಸ್ಫೋಟಿಸಿ ಹೊಸ ಸಮಾಜದ ನಿರ್ಮಾಣಕ್ಕೆ ತೊಡಗಿದರು. ಪುನರುಜ್ಜೀವನ ಕಾಲಘಟ್ಟಕ್ಕೂ ಮುನ್ನ ಯುರೋಪಿನ ಬೇರೆ ಬೇರೆ ಪ್ರದೇಶಗಳಲ್ಲಿ ಹುದುಗಿಕೊಂಡಿದ್ದ ಜ್ಞಾನದ ತೊರೆಗಳು ಈಗ ಸ್ವಚ್ಛಂದದಿಂದ ಹರಿಯತೊಡಗಿದವು. ಈ ಜ್ಞಾನದ ತೇವ ಯುರೋಪಿನ ನೆಲವನ್ನೆಲ್ಲ ತೋಯಿಸಿದ್ದಲ್ಲದೆ ತವಕಿಸುತ್ತಿದ್ದ ಬೀಜಗಳನ್ನೂ ಮೊಳೆಯಿಸಿತು. ಯುರೋಪಲ್ಲಿ ಪುನರುಜ್ಜೀವನವು ಮನುಷ್ಯನ ಹೊಸ ಚಿಂತನೆಗೆ ದಾರಿ ಮಾಡಿಕೊಟ್ಟಿತು. ಪುನರುಜ್ಜೀವನ ಯುಗವು ಯುರೋಪಿನ ಮೂಲಕ ಜಗತ್ತಿಗೆ ನೀಡಿದ ಮಹತ್ವದ ಕೊಡುಗೆ ಎಂದರೆ ಅದು ಆಧುನಿಕ ವಿಜ್ಞಾನ. ಅದರಲ್ಲೂ ೧೭ ನೇ ಶತಮಾನದಲ್ಲಿ ಬದುಕಿದ್ದ ಗೆಲಿಲಿಯೋ ಮತ್ತು ನ್ಯೂಟನ್ನ್‌ರ ಶೋಧನೆಗಳು ಯುರೋಪಿನ ಜನರನ್ನು ಎಚ್ಚರಿಸಿದ್ದವು. ಕಾನ್‌ಸ್ಟಾಂಟ್‌ನೋಪಲ್ ನಗರದಿಂದ ಯುರೋಪಿನ ವಿವಿಧ ಪ್ರದೇಶಗಳಿಗೆ ವಲಸೆ ಹೋದ ಅನೇಕ ಜನ ವಿದ್ವಾಂಸರ ವಿವಿಧ ಬಗೆಯ ಜ್ಞಾನ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ೧೫ ನೇ ಶತಮಾನದಲ್ಲಿ ಗುಟನ್‌ಬರ್ಗ್ ಕಂಡುಹಿಡಿದ ಮುದ್ರಣ ಯಂತ್ರವು ಜಗತ್ತಿನ ಜ್ಞಾನಕ್ಷೇತ್ರದಲ್ಲಿ ಕ್ರಾಂತಿಯನ್ನೇ ಮಾಡಿತು. ಅಲ್ಲಿಯವರೆಗೂ ಕ್ಯಾಥೋಲಿಕ್ ಚರ್ಚ್‌ನ ಊಳಿಗಮಾನ್ಯ ವ್ಯವಸ್ಥೆಯಲ್ಲಿ ನಲುಗಿ ಹೋಗಿದ್ದ ಯುರೋಪಿನ ಜನ ತೆರೆದ ಕಿಟಕಿಗಳ ಮೂಲಕ ಉಸಿರಾಡತೊಡಗಿದರು. ಯುರೋಪಲ್ಲಿ ಹೊಸ ಹೊಸ ಶೋಧಗಳು ನಡೆಯುತ್ತಿದ್ದಂತೆ ಅಲ್ಲಿನ ಜನ ತಮ್ಮ ಸಂಕೋಲೆಗಳನ್ನು ಕಿತ್ತೆಸೆದರು. ಪುನರುಜ್ಜೀವನದ ಕಾಲಘಟ್ಟದ ನಂತರ ಕ್ಯಾಥೋಲಿಕ್ ಧರ್ಮವನ್ನು ಧಿಕ್ಕರಿಸಿ ಹುಟ್ಟಿದ ಪ್ರಾಟಸ್ಟಂಟ್ ಪಂಥವನ್ನು ಅನುಸರಿಸಿದ ದೇಶಗಳೆಲ್ಲ ನೋಡುನೋಡುತ್ತಲೇ ಅಚ್ಚರಿಗಳನ್ನು ಎತ್ತಿ ನಿಲ್ಲಿಸಿದವು. ಬ್ರಿಟನ್, ಫ್ರಾನ್ಸ್, ಪೋರ್ಚುಗಲ್, ಹಾಲೆಂಡ್, ಸ್ವೀಡನ್‌ನಂತಹ ದೇಶಗಳು ಹೊಸ ಶೋಧನೆಗಳಿಗೆ ತಮ್ಮನ್ನು ತಾವು ತೆರೆದುಕೊಂಡವು. ಕ್ಯಾಥೋಲಿಕ್ ಚರ್ಚ್‌ನ ಬಿಗಿ ಹಿಡಿತದಲ್ಲಿದ್ದ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಲ್ಲಿದ್ದ ಅನೇಕ ಶಾಸ್ತ್ರಗ್ರಂಥಗಳು ಯುರೋಪಿನ ಜನರಿಗೆ ತಲುಪಿದವು.

ಪ್ಲೆಟೋ, ಅರಿಸ್ಟಾಟಲ್, ಸಾಕ್ರೀಟೀಸ್ ಮುಂತಾದ ಚಿಂತಕರ ಕೃತಿಗಳನ್ನು ಜನ ಅಧ್ಯಯನ ಮಾಡತೊಡಗಿದರು. ಯುರೋಪಿನ ಸಮಾಜದಲ್ಲಿ ಹೊಸದೊಂದು ಜ್ಞಾನಪರ್ವವೇ ಅಂದಿನಿಂದ ಆರಂಭವಾಯಿತು. ಮಾವೋ ಪ್ರಕಾರ ಯಾವುದೇ ರಾಜಕೀಯ ಕ್ರಾಂತಿಯು ಮೊದಲು ಸಂಭವಿಸುವುದು ಜನರ ಮೆದುಳುಗಳಲ್ಲಿ. ಯುರೋಪ್ ಇದಕ್ಕೆ ಸಾಕ್ಷಿಯಾಯಿತು. ಚರ್ಚಿನ ರಾಜಕೀಯಾರ್ಥಿಕ ಹಿಡಿತ ಮತ್ತು ಧಾರ್ಮಿಕ ಕರ್ಮಠತೆಯಿಂದ ಮುಕ್ತಗೊಂಡ ಜನ ಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನಗಳ ಕ್ಷೇತ್ರದಲ್ಲಿ ನಿಬ್ಬೆರಗಿನ ಸಾಧನೆಗಳನ್ನು ಮಾಡಿದರು.

ಪ್ರಾಚೀನ ಸಾಹಿತ್ಯದ ಪ್ರಭಾವದಿಂದ ಮೆಕವಲ್ಲಿ 'ಪ್ರಿನ್ಸ್' ಎಂಬ ಗ್ರಂಥ ರಚಿಸಿದ. ಅದು ಆಧುನಿಕ ರಾಜಕೀಯಶಾಸ್ತ್ರಕ್ಕೆ ದಾರಿ ಮಾಡಿಕೊಟ್ಟಿತು. ಪುನರುಜ್ಜೀವನದ ಕಾಲ ಘಟ್ಟದ ನಂತರ ಯುರೋಪಿನ ಸ್ಥಳೀಯ ಭಾಷೆಗಳೂ ಸಹ ನಿರಾಳವಾಗಿ ಉಸಿರಾಡಿದವು. ಷೇಕ್ಸ್‌ಪಿಯರ್, ಛಾಸರ್, ಬೆನ್‌ಜಾನಸ್‌ನ್, ಥಾಮಸ್ ಮೂರ್ ಮತ್ತು ಮಿಲ್ಟನ್‌ರಂತಹ ಸಾಹಿತಿಗಳು ತಮ್ಮ ಸ್ಥಳೀಯ ಭಾಷೆಗಳಲ್ಲಿ ಕೃತಿ ರಚನೆ ಮಾಡತೊಡಗಿದರು. ಕಲೆ ಮತ್ತು ಸಾಹಿತ್ಯಗಳು ಯುರೋಪಲ್ಲಿ ಕೇವಲ ಅಲೌಕಿಕ ವಿಷಯಗಳ ಕುರಿತು ಮಾತ್ರ ತಮ್ಮನ್ನು ಸೀಮಿತಗೊಳಿಸಿಕೊಡಿದ್ದವು. ಕ್ಯಾಥೋಲಿಕ್ ಚರ್ಚ್‌ನ ಊಳಿಗಮಾನ್ಯತೆಯ ಕಾರಣಕ್ಕಾಗಿ ನಲುಗಿ ಹೋಗಿದ್ದ ಸ್ಥಳೀಯ ಭಾಷೆಗಳನ್ನಾಡುವ ಜನ ತಮ್ಮದೇ ಭಾಷೆಯಲ್ಲಿ ಕೃತಿ ರಚನೆ ಮಾಡತೊಡಗಿದರು. ಪ್ರಾಚೀನ ಗ್ರಂಥಗಳು ಅನುವಾದಿಸಲ್ಪಟ್ಟು ಅನೇಕ ಅಧ್ಯಯನ ಶಿಸ್ತುಗಳ ಹುಟ್ಟಿಗೆ ಕಾರಣವಾದವು. ಜೊತೆಗೆ ಮನುಷ್ಯನ ಲೌಕಿಕದ ವಸ್ತು ವಿಷಯಗಳ ಕುರಿತು ಸಾಹಿತ್ಯ ಮತ್ತು ಉಳಿದ ಜ್ಞಾನ ಶಿಸ್ತುಗಳು ಮಾತಾಡತೊಡಗಿದವು. ಫ್ರಾನ್ಸಿಸ್ ಬೇಕನ್, ಡೆಕಾರ್ಟೆಯಂತಹ ಅನುಭಾವಿಗಳು ಯುರೋಪಿನಲ್ಲಿ ಉದಾರವಾದಿ ಮಾನವತಾವಾದ ತಲೆ ಎತ್ತಲು ಕಾರಣರಾದರು. ಯುರೋಪಿನ ಜನ ಮುಕ್ತ ಸಮಾಜದಲ್ಲಿ, ಸ್ವತಂತ್ರ ಚಿಂತನೆಗಳಲ್ಲಿ ತೊಡಗಿಕೊಂಡರು. ಹಾಗೆ ನೋಡಿದರೆ ಪ್ರಪಂಚವನ್ನೇ ಒಂದು ನಿರ್ದಿಷ್ಟ ತಿರುವಿನ ಕಡೆಗೆ ಚಲಿಸುವಂತೆ ಮಾಡಿದ ಬೌದ್ಧಿಕ ಕ್ರಾಂತಿಯು ಯುರೋಪಿನಲ್ಲಿ ಜರುಗಿತು.

ಇನ್ನೂ ಮುಖ್ಯವಾದ ಸಂಗತಿಯೆಂದರೆ, ಯುರೋಪಲ್ಲಿ ನಡೆದ ಆಧುನಿಕ ವಿಜ್ಞಾನದ ಆವಿಷ್ಕಾರಗಳು. ಈ ಹೊಸ ಶೋಧಗಳು ಯುರೋಪಿನ ಸಾಂಪ್ರದಾಯಿಕ ಉತ್ಪಾದನಾ ಸಂಬಂಧಗಳನ್ನು ಇನ್ನಿಲ್ಲದಂತೆ ಬದಲಿಸಿದವು. ಹೊಸ ತಂತ್ರಜ್ಞಾನವು ಒಟ್ಟಾರೆಯಾಗಿ ಯುರೋಪಿನ ಉತ್ಪಾದನಾ ವಿಧಾನ ತೀವ್ರಗತಿಯಲ್ಲಿ ರೂಪಾಂತರಿಸಿತು. ಸಿಡಿಮದ್ದಿನ ಬಳಕೆ, ಗಣಿ ತಂತ್ರಜ್ಞಾನದಲ್ಲಿ ಆದ ಬದಲಾವಣೆಗಳು, ಆಧುನಿಕ ಕೃಷಿ ಉಪಕರಣಗಳ ಶೋಧಗಳು ಯುರೋಪಿನ ಸಾಂಪ್ರದಾಯಿಕ ಸಮಾಜದಲ್ಲಿ ಅಚ್ಚರಿಯ ಬದಲಾವಣೆಗಳನ್ನು ಮಾಡಿದವು. ಆ ನಂತರ ಯುರೋಪಿನ ಸರಿಸುಮಾರು ಎಲ್ಲ ಕ್ಷೇತ್ರಗಳಲ್ಲಿ ಉತ್ಪಾದನೆ ತೀವ್ರವಾಗತೊಡಗಿತು. ಇದಕ್ಕೆ ಕಾರಣ ಮೊದಲೇ ಹೇಳಿದಂತೆ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನಗಳು. ಇದರ ಜೊತೆ ಜೊತೆಗೆ ನಿರ್ದಿಷ್ಟ ಸ್ಥಳೀಯ ಭಾಷೆಗಳನ್ನಾಡುತ್ತಿದ್ದ ಜನರಲ್ಲಿ ರಾಷ್ಟ್ರೀಯತೆಯ ಪ್ರಜ್ಞೆಯೂ ಮೂಡತೊಡಗಿತು. ಊಳಿಗಮಾನ್ಯ ವ್ಯವಸ್ಥೆಯಲ್ಲಿ ಮೂಕರಂತೆ ಬದುಕುತ್ತಿದ್ದ ಜನರ ಭೌತಿಕ ಜೀವನ ಯಾವತ್ತು ಒಂದು ಗಟ್ಟಿಯಾದ ನಿರ್ದಿಷ್ಟ ತಳಹದಿಯನ್ನು ಹೊಂದತೊಡಗಿತೋ ಆಗ ಅವರ ಬದುಕಿನ ವಿವಿಧ ಆಯಾಮಗಳ

ಕುರಿತು ಎಚ್ಚರ ಮೂಡತೊಡಗಿತು. ಯುರೋಪಲ್ಲಿ ಬೇರೆ ಬೇರೆ ಭಾಷೆಗಳನ್ನಾಡುತ್ತಿದ್ದ ಜನ ತಮ್ಮ ಕಲೆ, ಸಾಹಿತ್ಯ, ಸಂಸ್ಕೃತಿ ಮತ್ತು ಜೀವನ ವಿಧಾನಗಳ ಚಹರೆಗಳನ್ನು ಹುಡುಕತೊಡಗಿದರು. ಯುರೋಪಿನ ಹಳೆಯ ಗಾಥಿಕ್ ಶೈಲಿಯನ್ನು ಬಿಟ್ಟುಕೊಟ್ಟ ಮೈಕೆಲೇಂಜಲೋ ಕಲೆಯ ಕ್ಷೇತ್ರದಲ್ಲಿ ಹೊಸ ಪರಂಪರೆಯನ್ನೇ ಹುಟ್ಟು ಹಾಕಿದ. ಹೀಗೆ ತಮ್ಮ ತಮ್ಮ ಪಾರಂಪರಿಕ ಚಹರೆಗಳ ಕುರಿತ ಅರಿವನ್ನು ಮೂಡಿಸಿದ್ದು ಯುರೋಪಿನ ಹೊಸ ಉತ್ಪಾದನಾ ವಿಧಾನ. ಯಾವ ಜನಸಮುದಾಯವೇ ಆಗಲಿ ಅದರ ಬೆಳವಣಿಗೆಯ ಚಾರಿತ್ರಿಕ ಹಂತಗಳಲ್ಲಿ ರೂಪುಗೊಳ್ಳುವ ವೈವಿಧ್ಯಮಯ ಆಯಾಮಗಳ ಹಿಂದೆ ಆ ಜನ ಸಮುದಾಯದ ಆರ್ಥಿಕತೆಯು ನಿಶ್ಚಿತವಾಗಿ ಪ್ರಭಾವ ಬೀರುತ್ತದೆ. ಹೀಗಾಗಿ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ಒಂದು ಸಾಮುದಾಯಿಕ ಚಹರೆ ರೂಪುಗೊಳ್ಳುವುದು ಆಯಾ ಭಾಷೆಯನ್ನಾಡುವ ಜನ ಯಾವ ಬಗೆಯ ಉತ್ಪಾದನೆಯಲ್ಲಿ ತೊಡಗಿದ್ದಾರೆ ಎಂಬುದನ್ನು ಅವಲಂಬಿಸಿದೆ. ಒಂದು ನಿಶ್ಚಿತ ಜನಸಮುದಾಯದ ಲೌಕಿಕದ ಬದುಕನ್ನು ಆಧರಿಸಿಯೇ ಆ ಸಮುದಾಯದ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳು ಸಂಚಯಗೊಳ್ಳುತ್ತವೆ. ಪುನರುಜ್ಜೀವನದ ಕಾಲಘಟ್ಟದ ವರೆಗೆ ಇಂಗ್ಲೀಷ್ ಮತ್ತು ಯುರೋಪಿನ ಸ್ಥಳೀಯ ಭಾಷೆಗಳು ಕೇವಲ ಜನ ಭಾಷೆಗಳಾಗಿ 'ಅತ್ಯುತ್ತಮ'ವಾದದ್ದನ್ನು ಸೃಷ್ಟಿಸಲಾರದ ಭಾಷೆಗಳಾಗಿದ್ದವು. ಪೆಟ್ರಾರ್ಕ್‌ನಂತಹ ಕವಿ, ಷೇಕ್ಸ್‌ಪಿಯರ್‌ನಂತಹ ನಾಟಕಕಾರ ಇಂಗ್ಲೀಷಿನಲ್ಲಿ ಬರೆದು, ಬರೆದದ್ದನ್ನು ಪ್ರಕಟಿಸಲು ಹಿಂಜರಿಯುವ ಸನ್ನಿವೇಶ ಯುರೋಪಿನಲ್ಲಿತ್ತು. ಕಾರಣ ಆ ಭಾಷೆಯನ್ನಾಡುತ್ತಿದ್ದ ಜನ ಚಾರಿತ್ರಿಕವಾಗಿ ತಮ್ಮ ಉತ್ಪಾದನಾ ಸಂಬಂಧಗಳನ್ನು ಕ್ಯಾಥೋಲಿಕ್ ಚರ್ಚ್‌ನ ಊಳಿಗಮಾನ್ಯತೆಯ ಸಿಕ್ಕುಗಳಲ್ಲಿ ಬಂಧಿಸಿಕೊಂಡಿದ್ದರು.

ಯಾವತ್ತು ಪುನರುಜ್ಜೀವನ ಚಳುವಳಿಯು ಯುರೋಪಿನ ಜನತೆಯನ್ನು ಈ ಊಳಿಗಮಾನ್ಯತೆಯಿಂದ ಮುಕ್ತಗೊಳಿಸಿತೋ ಅಂದಿನಿಂದ ಆ ಜನತೆಯು ಸ್ವತಂತ್ರ ಆರ್ಥಿಕ ಚಟುವಟಿಕೆಗಳನ್ನು ರೂಪಿಸಿಕೊಂಡರು. ಪ್ರಾಟೆಸ್ಟೆಂಟ್ ಧರ್ಮವನ್ನು ಅನುಸರಿಸಿದ ಬ್ರಿಟನ್ ವಿಜ್ಞಾನ ಮತ್ತು ತಂತ್ರಜ್ಞಾನಗಳ ಕ್ಷೇತ್ರದಲ್ಲಿ ಅದ್ಭುತಗಳನ್ನೇ ಸೃಷ್ಟಿಸಿತು. ಬ್ರಿಟನ್ನಿನ ಜನ ಉತ್ಪಾದಿಸಿದ ಸರಕುಗಳನ್ನು ಜನ ಬಳಸತೊಡಗಿದರು. ಬ್ರಿಟನ್ನಿನ ಇಂಗ್ಲೀಷ್ ರೀತಿ ರಿವಾಜುಗಳು ಅನುಸರಿಸಲ್ಪಟ್ಟವು. ಷೇಕ್ಸ್‌ಪಿಯರ್‌ನ ನಾಟಕಗಳು ಮುದ್ರಣಗೊಂಡವು. ಅಲ್ಲಿನ ಜನ ಇಂಗ್ಲೀಷಿನಲ್ಲಿ ಸಾನೆಟ್ಟುಗಳನ್ನು ಬರೆಯತೊಡಗಿದರು. ಎಲ್ಲಕ್ಕಿಂತ ಹೆಚ್ಚಾಗಿ ಬ್ರಿಟನ್ ಇಡೀ ಯುರೋಪ್‌ನ ಉತ್ಪಾದನಾ ವ್ಯವಸ್ಥೆಯನ್ನು ನಿರ್ದೇಶಿಸತೊಡಗಿತು. ಜೊತೆಗೆ ಬ್ರಿಟನ್ ಇತರರು ಅನುಕರಿಸಬಹುದಾದ ಒಂದು ಮಾದರಿ ಭಾಷಿಕ ಪ್ರದೇಶವಾಗಿ ಬೆಳೆದು ನಿಂತಿತು. ಇದರಿಂದ ಯಾವುದೋ ಸಮಾಜದ ಭಾಷಿಕ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಹರೆಗಳು ಅದರ ಉತ್ಪಾದನಾ ವ್ಯವಸ್ಥೆಯಿಂದ ವಿನ್ಯಾಸಗೊಳ್ಳುತ್ತವೆ ಎಂಬ ಸಂಗತಿ ಸ್ಪಷ್ಟವಾಗುತ್ತದೆ. ಇದಕ್ಕೆ ಇನ್ನೂ ಅನೇಕ ಉದಾಹರಣೆಗಳನ್ನು ಕೊಡಬಹುದು. ಸ್ವಾತಂತ್ರ್ಯಾನಂತರ ಭಾರತದ ಅಗ್ರಗಣ್ಯ ನಾಯಕ ನೆಹರು ಸೈದ್ಧಾಂತಿಕವಾಗಿ ರಷ್ಯಾದಿಂದ ಪ್ರಭಾವಿತರಾಗಿದ್ದರೂ ಅವರು ಅನುಸರಿಸಿದ್ದು ಬಂಡವಾಳಶಾಹಿ ಮಾದರಿಯ ಅಭಿವೃದ್ಧಿಯನ್ನು. ನೆಹರುರವರಿಗೆ ಒಂದು ಸಿದ್ಧಾಂತವಾಗಿ ಸಮಾಜವಾದ ಬೇಕು. ಆದರೆ ಜಗತ್ತಿನ ಅನೇಕ ರಾಜಕೀಯಾರ್ಥಿಕ ಸಂಗತಿಗಳನ್ನು ನಿಯಂತ್ರಿಸುತ್ತಿದ್ದ ಯುರೋಪ್ ಅವರಿಗೆ ಉತ್ತಮ ಮಾದರಿಯಾಗಿದ್ದು ಅದು ಉತ್ಪಾದನಾ ಕ್ಷೇತ್ರದಲ್ಲಿ ಅದ್ಭುತಗಳನ್ನು

ಸಾಧಿಸಿದ್ದರಿಂದಾಗಿ. ಈವತ್ತಿಗೂ ನಮಗೆ ಇಂಗ್ಲೀಷ್ ಒಂದು ಮೋಹವಾಗಿ, ಅನಿವಾರ್ಯತೆಯಾಗಿ ಕಾಡುತ್ತಿರುವುದು, ನಾವೆಲ್ಲ ಇಂಗ್ಲೀಷ್ ಭಾಷೆ ಮಾತಾಡುವ ಜನ ಉತ್ಪಾದಿಸುವ ತಿಳುವಳಿಕೆಯನ್ನು ಸರಕುಗಳನ್ನು ಅವಲಂಬಿಸುವ ಕಾರಣಕ್ಕಾಗಿ. ಅದಕ್ಕೆ ೧೫ ನೇ ಶತಮಾನದಲ್ಲಿ ಕಾಡು ಭಾಷೆಯಾಗಿದ್ದ, ಸ್ಥಳೀಯ ಭಾಷೆಯಾಗಿದ್ದ ಇಂಗ್ಲೀಷ್ ಈವತ್ತು ಜಗತ್ತಿನ ಭಾಷೆಯಾಗಿದೆ. ಕಾರಣ ಇಂಗ್ಲೀಷ್ ಭಾಷೆಯನ್ನಾಡುವ ಜನ ಉತ್ಪಾದನಾ ಕ್ಷೇತ್ರದಲ್ಲಿ ಮಾಡಿದ ಸಾಧನೆಗಳು.

ಈ ಕಾರಣದಿಂದ ಯುರೋಪಿನಲ್ಲಿ ಬೇರೆ ಬೇರೆ ಭಾಷೆಗಳನ್ನಾಡುವ ಜನರು ತಮ್ಮ ಆರ್ಥಿಕ ಚಟುವಟಿಕೆಗಳನ್ನು ಅಭಿವೃದ್ಧಿ ಪಡಿಸಿಕೊಂಡ ನಂತರ ತಮ್ಮ ಚಹರೆಗಳ ಕುರಿತು ಎಚ್ಚರಗೊಂಡರು. ಚಹರೆಗಳ ಕುರಿತ ಈ ಬಗೆಯ ಎಚ್ಚರವು ಯುರೋಪಿನ ಅಂದಿನ ಸಾಮಾಜಿಕಾರ್ಥಿಕ ಚಲನೆಗಳ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿತ್ತು. ನಿರ್ದಿಷ್ಟ ಭಾಷೆ ಮತ್ತು ಪ್ರದೇಶಗಳಲ್ಲಿನ ಜನರ ಆರ್ಥಿಕ ಪೈಪೋಟಿಯೂ ಇದಕ್ಕೆ ಕುಮ್ಮಕ್ಕು ಕೊಟ್ಟಿತು. ಒಟ್ಟಿನಲ್ಲಿ ಯುರೋಪಿನ ಭಾಷಿಕ ಸಮುದಾಯಗಳಲ್ಲಿ ರಾಷ್ಟ್ರೀಯತೆಯ ಭಾವನೆಗಳು ರೂಪುಗೊಳ್ಳತೊಡಗಿದವು.

ಜೊತೆಗೆ ಯುರೋಪಿನ ಸಮಾಜವು ಚರ್ಚಿನ ಊಳಿಗಮಾನ್ಯ ವ್ಯವಸ್ಥೆಯಿಂದ ಕೈಗಾರಿಕೀಕರಣದ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯ ಕಡೆಗೆ ನಡೆದು ಹೋಯಿತು. ಇದೇ ಸಂದರ್ಭದಲ್ಲಿ ಯುರೋಪಿನ ವಿವಿಧ ಭಾಷಿಕ ಸಮುದಾಯಗಳು ತಮ್ಮ ರಾಷ್ಟ್ರೀಯತೆಯ ಒಲವುಗಳನ್ನು ಬಲಪಡಿಸಿಕೊಳ್ಳತೊಡಗಿದವು. ಆರ್ಥಿಕ ವಲಯದ ಬಿಕ್ಕಟ್ಟುಗಳ ಜೊತೆಗೆ ರಾಷ್ಟ್ರೀಯತೆಯ ರಾಜಕೀಯ ಚಟುವಟಿಕೆಗಳೂ ಯುರೋಪಿನಲ್ಲಿ ಬಲಗೊಂಡವು. 'ಹೀಗೆ ತಾವೊಂದು ನಿರ್ದಿಷ್ಟ ರಾಷ್ಟ್ರೀಯತ್ವಕ್ಕೆ ಸೇರಿದವರು ಎಂಬ ಭಾವನೆಯಿರುವ ಜನರು ತಮ್ಮ ಹೆಮ್ಮೆಯನ್ನು ತಾವೆಲ್ಲ ಚೆನ್ನಾಗಿರಬೇಕು ಎಂಬಲ್ಲಿಗೆ ಮಾತ್ರ ಸೀಮಿತಗೊಳಿಸಿಕೊಳ್ಳುವುದಿಲ್ಲ. ವಾಸ್ತವವಾಗಿ ಪ್ರಬಲ ರಾಷ್ಟ್ರೀಯತ್ವದ ಕಲ್ಪನೆಗೆ ಬಿದ್ದ ಪ್ರತಿ ಸಮುದಾಯವೂ ತನ್ನನ್ನು ಇತರೆಲ್ಲರಿಗಿಂತ ಮುಂದಿರಿಸಿಕೊಳ್ಳಲು ಆಕಾಂಕ್ಷಿಸುತ್ತದೆ. ಹಾಗಾಗಿ ತನ್ನ ರಾಷ್ಟ್ರತ್ವದ ಸದಸ್ಯರೆಲ್ಲರ ಬದುಕನ್ನು ಮತ್ತಷ್ಟು ಸುಸಂಘಟಿತಗೊಳಿಸಲು ಸುಧಾರಿಸಲು ಪ್ರಯತ್ನಿಸುತ್ತದೆ. ಅಥವಾ ಹಾಗೆ ಆ ರಾಷ್ಟ್ರತ್ವವೆಂಬುದು ಪ್ರಯತ್ನಿಸುತ್ತದೆ ಎಂಬ ನಿರೀಕ್ಷೆ ಅಥವಾ ನಂಬುಗೆ ಅದರ ಎಲ್ಲ ಸದಸ್ಯರ ನಡುವೆ ಹರಡಿರುತ್ತವೆ. ಇದರೊಂದಿಗೆ ತನ್ನ ನೆರೆಯ ಅಥವಾ ಎಷ್ಟೇ ದೂರದ್ದಾಗಿರಲಿ ತನ್ನ ಪ್ರತಿಸ್ಪರ್ಧಿ ಎಂದು ಭಾವಿಸಲಾಗುವ ಮತ್ತೊಂದು ರಾಷ್ಟ್ರತ್ವದ ಆಕ್ರಮಣದ ವಿರುದ್ಧ ಇದು ಜಾಗ್ರತವಾಗಿರುತ್ತದೆ. ಈ ಆಕ್ರಮಣ ಭೌತಿಕ ಸ್ವರೂಪದ್ದೇ ಆಗಿರಬೇಕೆಂದಿಲ್ಲ. ಅದು ಒಂದು ರಾಷ್ಟ್ರೀಯತೆಯ ಸಾಂಸ್ಕೃತಿಕ ಲಾಂಛನಗಳಾದ ಅದರ ಹೆಮ್ಮೆಯ ಪ್ರತೀಕಗಳಾದ ಯಾವುದೋ ವಿಷಯವನ್ನು ದ್ವಿತೀಯಗೊಳಿಸುವ ಅಥವಾ ಆಧಿಪತ್ಯಕ್ಕೊಳಪಡಿಸುವ ಭಯವೂ ಆಗಿರಬಹುದು. ಈ ಬಗೆಯ ಭಯ ಹಲವಾರು ವಾಸ್ತವಾಂಶಗಳಿಂದ ಪ್ರೇರೇಪಿತವಾಗಿರುತ್ತಾದ್ದರಿಂದ ಅಂತಹ ಸಮಯಗಳಲ್ಲಿ ರಾಷ್ಟ್ರತ್ವದ ಬಾಂಧವ್ಯ ಮತ್ತಷ್ಟು ಪ್ರಖರಗೊಳ್ಳುತ್ತದೆ.'[೨]. ಯುರೋಪಲ್ಲಿ ೧೮ನೇ ಶತಮಾನದಲ್ಲಿ ವಿವಿಧ ಭಾಷಿಕ ಪ್ರದೇಶಗಳ ಜನರ ಭಾವನೆಗಳಲ್ಲಿಯೇ ರೂಪುಗೊಂಡ ರಾಷ್ಟ್ರೀಯತೆಯು ಮುಖ್ಯವಾಗಿ ಲೌಕಿಕ ಬದುಕಿನ ಅನೇಕ ಸಂಗತಿಗಳಿಂದ

ಪ್ರೇರೇಪಿತವಾಗಿತ್ತು.

ರಾಷ್ಟ್ರೀಯತೆಯನ್ನು ಪ್ರಚೋದಿಸಿದ, ಹಾಗೆ ಕಲ್ಪಿಸಿಕೊಂಡ ಆ ಬಲಶಾಲಿ ನಂಬಿಕೆಗೆ ಯುರೋಪಿನ ಉತ್ಪಾದನಾ ಸಂಬಂಧಗಳು ನೇರ ಕಾರಣವಾಗಿದ್ದವು. ಯುರೋಪಿನ ವಿವಿಧ ಭಾಷಿಕ ಪ್ರದೇಶಗಳಲ್ಲಿ ನಡೆದ ಮಿತಿಮೀರಿದ ಉತ್ಪಾದನೆ ಮತ್ತು ಉತ್ಪಾದಿತ ಸರಕನ್ನು ವಿಲೇವಾರಿ ಮಾಡುವ ಮಾರುಕಟ್ಟೆಯ ಕುರಿತ ಆರ್ಥಿಕ ಬಿಕ್ಕಟ್ಟುಗಳು ಈ ಭಾಷಿಕ ಪ್ರದೇಶಗಳಲ್ಲಿ ಅನೂಹ್ಯ ರೀತಿಯಲ್ಲಿ ಒಗ್ಗಟ್ಟನ್ನು ಸೃಷ್ಟಿಸಿದ್ದವು. ಈ ಒಗ್ಗಟ್ಟು ಅತ್ಯಂತಿಕವಾಗಿ ಒಂದು ಭಾಷಿಕ ಪ್ರವೇಶದ ರಾಷ್ಟ್ರತ್ವದ ಕಲ್ಪನೆಯನ್ನು ಉದ್ದೀಪಿಸಿತ್ತು. 'ರಾಷ್ಟ್ರತ್ವವೆಂಬ ಕಲ್ಪಿತ ಸಮುದಾಯವು ಬಹಳ ಮುಖ್ಯವಾಗಿ ತನ್ನ ಚಾರಿತ್ರಿಕ ಗತಿಯಲ್ಲಿ ಹೊಸದಾಗಿ ರೂಪುಗೊಂಡ ಬಂಡವಾಳದ ವರ್ಗಕ್ಕೆ ತನ್ನ ಮಾರುಕಟ್ಟೆಯ ವಿಸ್ತರಣೆಗೆ ಬಳಕೆಯಾಗುವ ಆಯುಧವಾಯಿತು. ತನ್ನನ್ನು ಬಲಪಡಿಸಿಕೊಳ್ಳಲು, ತನ್ನ ಸ್ವಾರ್ಥವನ್ನು ಬಹಳ ಚೆನ್ನಾಗಿ ಈಡೇರಿಸಿಕೊಳ್ಳಲು ಅದು ರಾಷ್ಟ್ರತ್ವವನ್ನು ಸಂಶೋಧಿಸಿತು. ಆಧರಿಸಿತು''[೮]. ಒಂದು ಹಂತದಲ್ಲಿ ಯುರೋಪಿನ ಭಾಷಿಕ ಪ್ರದೇಶಗಳು ಅನೇಕ ಸಂಘರ್ಷಗಳಿಂದಾಗಿ ರಾಷ್ಟ್ರಗಳೂ ಆದವು. ಆದರೆ 'ರಾಷ್ಟ್ರ' ವಾಗುವ ಪ್ರದೇಶವೊಂದಕ್ಕೆ ಇರಬೇಕಾದ ಸಾಮಾಜಿಕ ಮತ್ತು ರಾಜಕೀಯಾರ್ಥಿಕ ಚಟುವಟಿಕೆಗಳನ್ನು ನಿರ್ದಿಷ್ಟಗೊಳಿಸಿಕೊಳ್ಳುವ ಮತ್ತು ನಿಯಂತ್ರಿಸುವ ಪರಮಾಧಿಕಾರ ಮತ್ತು ಅದರ ಸ್ವರೂಪಗಳ ಕುರಿತ ಅಜ್ಞಾನವು ಯುರೋಪಲ್ಲಿ ಸ್ವತಂತ್ರಗೊಂಡ ಎಲ್ಲ ರಾಷ್ಟ್ರಗಳನ್ನೂ ಕಾಡಿತು. ಏಕೆಂದರೆ ಪ್ರಾಯಶಃ ಅಲ್ಲಿಯವರೆಗೂ ಜಗತ್ತಿನ ಯಾವ ಮೂಲೆಯಲ್ಲಿಯೂ ರಾಷ್ಟ್ರೀಯತೆಯ ಕುರಿತ ಸ್ಪಷ್ಟ ಕಲ್ಪನೆಗಳಿರಲಿಲ್ಲ. ಜೊತೆಗೆ ರಾಷ್ಟ್ರೀಯತೆಯು ಅದರ ಆಧುನಿಕ ಅರ್ಥದಲ್ಲಿ ಅಂದು ಜಗತ್ತಿನ ಯಾವ ಭಾಗದಲ್ಲೂ ಜಾರಿಯಲ್ಲಿರಲಿಲ್ಲ. ಸಾಲದ್ದಕ್ಕೆ ಯಾವ ಆದಿಮ ಸಮಾಜಗಳ ಸ್ಮೃತಿಕೋಶದಲ್ಲೂ ಇದಕ್ಕೆ ಪುರಾವೆಗಳಿರಲಿಲ್ಲ. ಆಗ ಯುರೋಪಿನ ಜ್ಞಾನಕ್ಷೇತ್ರದಲ್ಲಿನ ಜನ ರಾಷ್ಟ್ರೀಯ ಗಡಿಯೊಳಗಿರುವ ತಮ್ಮನ್ನು ತಾವು ಅಧ್ಯಯನಕ್ಕೊಳಪಡಿಸಿಕೊಂಡರು.

ಯೂರೋಪಿನಲ್ಲಿದ್ದ ಸಮುದಾಯಗಳು ತಮ್ಮ ಪಾರಂಪರಿಕ ನಿಯಮಗಳಿಗೆ ಅನುಗುಣವಾಗಿ ಸೀಮಿತ ಪ್ರದೇಶದ ಒಳಗೆ ತಮ್ಮನ್ನು ತಾವು ಆಳಿಕೊಳ್ಳುತ್ತಿದ್ದವು ಅಥವಾ ನಿಯಮಗಳಿಗೆ ಅನುಗುಣವಾಗಿ ಬಂದು ಬುಡಕಟ್ಟಿನ ಬಂಧದಲ್ಲಿ ಹೊಂದಿಸಿಕೊಂಡಿದ್ದವು. ಆ ಪಾರಂಪರಿಕ ನಿಯಮಗಳೂ ಸಹ ಸೀಮಿತ ಗುಂಪಿನ ಸಾಮಾಜಿಕ ಮತ್ತು ರಾಜಕೀಯಾರ್ಥಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವಲ್ಲಿ ಸಹಾಯ ಮಾಡುತ್ತಿದ್ದವು. 'ಆದರೆ ಈ ಬಗೆಯ ಅಲಿಖಿತ, ಭಾವನಾತ್ಮಕವಾಗಿ ರೂಪುಗೊಂಡ ಜಗತ್ತು ಒಂದು ಅರ್ಥದಲ್ಲಿ ನಿಜವಾದ ನಾಗರಿಕ ಸಮಾಜವಾಗಿದ್ದರೂ ಸಹ ಅದು ವಿಶಾಲ ಅರ್ಥದಲ್ಲಿ ಒಂದು ದೊಡ್ಡ ರಾಜಕೀಯ ಸಮುದಾಯವನ್ನು ಕಾನೂನುಬದ್ಧವಾಗಿ ಪ್ರತಿನಿಧಿಸುವುದಕ್ಕೆ ವ್ಯತಿರಿಕ್ತವಾಗಿರುತ್ತದೆ''[೯]. ಯುರೋಪು ೧೭ ಮತ್ತು ೧೮ ನೇ ಶತಮಾನದಲ್ಲಿ ಈ ಬಗೆಯ ರಾಜಕೀಯ ತತ್ವಶಾಸ್ತ್ರವನ್ನು ಪ್ರತಿನಿಧಿಸುತ್ತಿದ್ದ ಬಹುತೇಕ ವಿದ್ವಾಂಸರು ಎಡ್ಮಂಡ್ ಬರ್ಗ್, ಲೂಯಿಸ್ ಡಿ. ಜೋನಲ್ಡ್ ಮುಂತಾದವರು ಎನ್‌ಲೈಟ್‌ಮೆಂಟ್ ಯುಗದ ಅಚ್ಚರಿಗಳಲ್ಲಿಯೇ ಮುಳುಗಿದ್ದರು. ಜೊತೆಗೆ ವಿಜ್ಞಾನದ ಶೋಧಗಳ ಮುಂದೆ ಸಾಮಾಜಿಕ ತತ್ವಜ್ಞಾನವು ಕೀಳರಿಮೆಯನ್ನೂ ಅನುಭವಿಸಿತು. ವಿಜ್ಞಾನ ನಿರ್ಮಿಸಿದ ಶೋಧಗಳು ಮತ್ತು ಆ

ಶೋಧಗಳನ್ನು ಕಂಡುಕೊಳ್ಳುವ ದಾರಿಯಲ್ಲಿ ವಿಜ್ಞಾನಿಯೊಬ್ಬ ಅನುಸರಿಸುವ ಶೈಕ್ಷಣಿಕ ವಿಧಾನಗಳೆಲ್ಲ ಈ ತತ್ವಜ್ಞಾನಿಗಳನ್ನು ನಿರ್ಣಾಯಕವಾಗಿ ಪ್ರಭಾವಿಸಿದ್ದವು.

ಈ ಕಾರಣದಿಂದಾಗಿಯೇ ಯುರೋಪಲ್ಲಿ ಹುಟ್ಟಿ ಮೂರನೇ ಜಗತ್ತಿನ ರಾಷ್ಟ್ರಗಳಲ್ಲಿ ಬೆಳೆದು ನಿಂತ ಸಮಾಜ ವಿಜ್ಞಾನಗಳ ಅನೇಕ ಶಾಸ್ತ್ರಶಿಸ್ತುಗಳ ಶೈಕ್ಷಣಿಕ ವಿಧಾನಗಳು ವಿಜ್ಞಾನದಿಂದ ಎರವಲು ಬಂದಂತವು. ಡಾರ್ವಿನ್ನನ ವಿಕಾಸವಾದವಂತೂ ಸಮಾಜ ವಿಜ್ಞಾನದ ಅಧ್ಯಯನ ವಿಧಾನವನ್ನು ಪ್ರಧಾನವಾಗಿ ಪೋಷಿಸಿತು. ಈ ಮೊದಲೇ ಹೇಳಿದಂತೆ ಯುರೋಪಿನ ಭಾಷಿಕ ಸಮುದಾಯಗಳು ನೇಷನ್ ಸ್ಟೇಟ್‌ಗಳಾಗುವ ಹಂತದಲ್ಲಿ ಅಥವಾ ಒಂದು ವಿರಾಟ ರಾಜಕೀಯ ಸಮುದಾಯವಾಗಿ ರೂಪುಗೊಳ್ಳುವ ಸಂದರ್ಭದಲ್ಲಿ ಅನಿವಾರ್ಯವಾಗಿ ಬಂದು ನಾಗರೀಕ ನೀತಿ ಸಂಹಿತೆಯನ್ನು ಹೊಂದುವ ಅಗತ್ಯ ಇದ್ದೇ ಇತ್ತು. ಆಗ ಯುರೋಪಿನ ತತ್ವಜ್ಞಾನಿಗಳು ತಮ್ಮ ತಮ್ಮ ಸಮಾಜಗಳ ಪಾರಂಪರಿಕ ನಿಯಮಗಳು ಮತ್ತು ಆಯಾ ಸಮಾಜದ ರಾಜಕೀಯಾರ್ಥಿಕ ಮತ್ತು ಸಾಂಪ್ರದಾಯಿಕ ಸಂಸ್ಥೆಗಳನ್ನೇ ಅಧ್ಯಯನ ಮಾಡತೊಡಗಿದರು. '೧೭ ಮತ್ತು ೧೮ ನೇ ಶತಮಾನದಲ್ಲಿ ಈ ಅನುಭವಾತ್ಮಕ ಸಾಮಾಜಿಕ ಅಧ್ಯಯನಗಳು ಸಮಾಜವನ್ನು ವಿವರಿಸಿಕೊಳ್ಳುವ ತುರ್ತುಗಳಿಂದಲೇ ನಡೆದವು. ಈ ಶೋಧಗಳು ನಡೆದದ್ದು ಸರಕಾರಗಳ ಲೌಕಿಕದ ಉದ್ದೇಶಗಳಿಗೆ. ಈ ಅಧ್ಯಯನಗಳಿಗೆ ಅವುಗಳದೇ ಆದ ಶೈಕ್ಷಣಿಕ ವಿಧಾನಗಳೇನಿರಲಿಲ್ಲ. ಜೊತೆಗೆ ಪ್ರದೇಶದಿಂದ ಪ್ರದೇಶಕ್ಕೆ ಇವು ಭಿನ್ನವಾಗಿ ನಡೆದು ಬಂದವು. ಆದರೆ ಹಂತ ಹಂತವಾಗಿ ಈ ಅಧ್ಯಯನಗಳು ಜೊತೆಗೂಡಿದವು. ಅಲ್ಲದೆ ಒಂದು ಶೈಕ್ಷಣಿಕ ಶಿಸ್ತನ್ನು ರೂಪಿಸುವ ಗುಟ್ಟುಗಳನ್ನು ಈ ಅಧ್ಯಯನಗಳು ಒಳಗೊಂಡಿದ್ದವು. ಫ್ರಾನ್ಸ್‌ನಲ್ಲಿ ಜನಸಮೂಹಗಳನ್ನು ಸರ್ವೆ ಮಾಡುವ ವಿಧಾನಗಳು ಮತ್ತು ಆರ್ಥಿಕ ಸರ್ವೇಕ್ಷಣೆ ಮಾಡುವ ವಿಧಾನಗಳು ರೂಪುಗೊಂಡವು. ೧೭ ನೇ ಶತಮಾನದ ಇಂಗ್ಲೀಷ್ ರಾಜಕೀಯ ಗಣಿತಶಾಸ್ತ್ರಜ್ಞರಾದ ವಿಲಿಯಂ ಪೆಟ್ಟಿ, ಜಾನ್ ಗ್ರಾಂಟ್, ಜಾರ್ಜ್‌ಕಿಂಗ್ ಮತ್ತು ಎಡ್ಮಂಡ್ ಹಾಲೆ ಆಧುನಿಕ ಡೆಮಾಗ್ರಫಿಗೆ ಅಡಿಪಾಯ ಹಾಕಿದರು. ಜೊತೆಗೆ ಸಮಾಜದ ವಿವಿಧ ಸಂಸ್ಥೆಗಳನ್ನು ಅಧ್ಯಯನ ಮಾಡುವ ವಿಧಾನಗಳನ್ನು ರೂಪಿಸಲು ಯತ್ನಿಸಿದರು'[°]. ಯುರೋಪದಲ್ಲಿ ಈ ಬಗೆಯ ರಾಜಕೀಯ ಅಗತ್ಯಗಳು ವಿವಿಧ ಕ್ಷೇತ್ರಗಳಲ್ಲಿ ನಿರತರಾಗಿದ್ದ ಜನರನ್ನು ಕಾರ್ಯೋನ್ಮುಖಗೊಳಿಸಿದವು. ಈ ವಿವಿಧ ಕ್ಷೇತ್ರಗಳಲ್ಲಿದ್ದ ವಿದ್ವಾಂಸರು ಬೇರೆ ಬೇರೆ ಜ್ಞಾನಶಿಸ್ತುಗಳಿಂದ ಬಂದವರಾಗಿದ್ದರು ಮತ್ತು ರಾಜಕೀಯ ಅಗತ್ಯಗಳಿಗೆ ಸಮಾಜವನ್ನು ಅಧ್ಯಯನ ಮಾಡುವ ಜರೂರು ಇವರ ಸದ್ಯದ ತುರ್ತಾಗಿತ್ತು. ಈ ಕಾರಣದಿಂದ '೧೭ ಮತ್ತು ೧೮ ನೇ ಶತಮಾನದ ಸಾಮಾಜಿಕ ಅಧ್ಯಯನಗಳು ಕೇವಲ ವಿವರಣಾತ್ಮಕವಾಗಿದ್ದವು. ಅವುಗಳಿಗೆ ಒಂದು ಶೈಕ್ಷಣಿಕ ಸೈದ್ಧಾಂತಿಕ ನೆಲೆಗಟ್ಟಿರಲಿಲ್ಲ. ಆದರೆ ಈ ಅಧ್ಯಯನಗಳು ನೈಸರ್ಗಿಕ ವಿಜ್ಞಾನ ಮತ್ತು ಸಾಮಾನ್ಯ ತತ್ವಶಾಸ್ತ್ರದ ಹಿನ್ನೆಲೆಯಲ್ಲಿ ಕೆಲವು ಪರಿಕಲ್ಪನೆಗಳನ್ನು ಕಟ್ಟಿಕೊಂಡಿದ್ದವು.'[೬].

ಅಂದು ಯುರೋಪಿನ ಶೈಕ್ಷಣಿಕ ವಲಯಗಳನ್ನು ಪ್ರಭಾವಿಸಿದ್ದ ಎರಡು ಮುಖ್ಯ ಕ್ಷೇತ್ರಗಳೆಂದರೆ ಸಾಮಾಜಿಕ ತತ್ವಶಾಸ್ತ್ರ ಮತ್ತು ವಿಜ್ಞಾನಗಳು. ಈ ಎರಡು ಶಾಸ್ತ್ರಶಿಸ್ತುಗಳು ಸಾಮಾಜಿಕ ಅಧ್ಯಯನಗಳನ್ನು ನಿರ್ಣಾಯಕವಾಗಿಯೇ ಪ್ರಭಾವಿಸಿದ್ದವು. 'ಸಮಾಜ ವಿಜ್ಞಾನಕ್ಕೆ ಅದರದ್ದೇ ಆದ ಅಧ್ಯಯನ ವಿಧಾನವಿರಲಿಲ್ಲ.

ವಿಜ್ಞಾನದ ವಿಧಾನವನ್ನು ಬಳಸಿಕೊಂಡು ಸಮಾಜ ವಿಜ್ಞಾನ ಒಂದು ಶಿಸ್ತು ಬದ್ಧ ಶಾಸ್ತ್ರವಾಗಿ ರೂಪುಗೊಂಡಿದೆ. ಸಮಾಜ ವಿಜ್ಞಾನದ ಈ ಬಗೆಯ ಬೆಳವಣಿಗೆಯಿಂದಾಗಿ ವಿಜ್ಞಾನ ವಿಧಾನದ ಹಲವಾರು ಗುಣಗಳು ಸಮಾಜ ಥಿಯರಿಗಳಲ್ಲಿ ಅಂತರ್ಗತವಾಗಿವೆ'[೬]. ತತ್ವಜ್ಞಾನಿಗಳು ಮತ್ತು ವಿಜ್ಞಾನಿಗಳು ಎನ್‌ಲೈಟ್‌ಮೆಂಟ್ ಯುಗದ ನಂತರ ಯುರೋಪಿನ ತಿಳುವಳಿಕೆಯ ಜಗತ್ತನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದರು. ಅವರೂ ಸಹ ಅಂದು ಯುರೋಪಲ್ಲಿ ರೂಪುಗೊಳ್ಳುತ್ತಿದ್ದ ಬಂಡವಾಳಶಾಹಿ ಮೌಲ್ಯಗಳಿಗೆ ವ್ಯತಿರಿಕ್ತವಾಗಿರಲಿಲ್ಲ. ಯುರೋಪಿನ ಮಧ್ಯಕಾಲೀನ ತತ್ವಶಾಸ್ತ್ರ ಮತ್ತು ಇದನ್ನು ಆರಾಧಿಸುತ್ತಿದ್ದ ರಮ್ಯ ಸಂಪ್ರದಾಯವಾದಿಗಳು ಸಮಾಜವು ಸಾವಯುವ ಸಂಬಂಧಗಳಿಂದ ರೂಪುಗೊಂಡದ್ದು, ಹಲವು ಸಮುದಾಯಗಳು ರೂಪುಗೊಂಡು ನಿರ್ಮಾಣವಾದ ಈ ಸಮಾಜದಲ್ಲಿ ಸಾಮಾಜಿಕಾರ್ಥಿಕ ಸಂಬಂಧಗಳು ಯಾವಾಗಲೂ ಸಂಪ್ರದಾಯ, ನೈತಿಕ ಮತ್ತು ಧಾರ್ಮಿಕ ಸಂಗತಿಗಳಿಂದ ನಿರ್ಣಯಿಸಲ್ಪಟ್ಟಿವೆ'[೭]. ಇದರಿಂದ ಇವತ್ತು ನಾವು ನೋಡುವ ಲೌಕಿಕದ ಎಲ್ಲ ಸಂಬಂಧಗಳು ನಿಸರ್ಗದ ನಿಯಮದ ಪ್ರಕಾರ ರೂಪಗೊಂಡಂತವುಗಳು. ಇಲ್ಲಿನ ವರ್ಗಾಧಾರಿತ ಸಮಾಜ ಮತ್ತು ಶ್ರಮ ವಿಭಜನೆಗಳೂ ಸಹ ಯಾವುದೋ ದೈವ ನಿಯಾಮಕ ಶಕ್ತಿಯಿಂದ ಬೆಳೆದು ಬಂದಿವೆ. ಆ ಕಾರಣಕ್ಕಾಗಿ ಸಾಮಾಜಿಕ ಸಂಬಂಧಗಳಿಗೂ ಒಂದು ಸಾವಯವತೆ ಪ್ರಾಪ್ತವಾಗಿದೆ ಎಂದು ಅಂದಿನ ತತ್ವಜ್ಞಾನಿಗಳು ಸಮಾಜ ವಿಜ್ಞಾನದ ಚಿಂತನೆಯ ಮೇಲೆ ತಮ್ಮದೇ ಆದ ಪ್ರಭಾವ ಬೀರಿದರು. ಈ ಬಗೆಯ ಚಿಂತನೆಯು ಒಂದು ರೀತಿಯಲ್ಲಿ ಸಮಾಜ ವಿಜ್ಞಾನಗಳು ರೂಪುಗೊಳ್ಳುವ ಪ್ರಕ್ರಿಯೆಯ ಮೇಲೆ ಗಾಢ ಪ್ರಭಾವವನ್ನೇ ಬೀರಿತು. ತಮ್ಮನ್ನು ತಾವು ಅರ್ಥ ಮಾಡಿಕೊಳ್ಳುವ ಮತ್ತು ಒಂದು ರಾಜಕೀಯ ಸಮುದಾಯವಾಗಿ ಹೊರ ಹೊಮ್ಮುವ ಕಾಲಘಟ್ಟದಲ್ಲಿ ಯುರೋಪಿನ ಜನರು 'ಪ್ರಭುತ್ವ ಮತ್ತು ಸಮಾಜಗಳ ನಡುವಿನ ಭಿನ್ನತೆ ಮತ್ತು ಸಂಬಂಧಗಳ ಕುರಿತ ವ್ಯತ್ಯಾಸಗಳನ್ನು ಗುರುತಿಸುವುದು ಮಹತ್ವದ ಸಂಗತಿಯಾಗಿತ್ತು. ಆರಂಭದಲ್ಲಿಯೇ ಯುರೋಪಿನ ಚಿಂತಕರು ಈ ವ್ಯತ್ಯಾಸಗಳನ್ನು ಗುರುತಿಸಿದ್ದರು. ಅದು 'ನಿಸರ್ಗದತ್ತ ನಿಯಮ'ಗಳ ಪ್ರಕಾರ ಪ್ರಭುತ್ವವು ಅಸ್ತಿತ್ವಕ್ಕೆ ಬರುತ್ತದೆ. ಮತ್ತು ಅದು ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ಸಂಬಂಧಗಳನ್ನು ನಿಯಂತ್ರಿಸುತ್ತದೆ.'[೮] ಎಂಬ ತೀರ್ಮಾನಕ್ಕೆ ಬರುವಂತೆ ಮಾಡಲಾಯಿತು. 'ಈ ಬಗೆಯ ಸಾಮಾಜಿಕ ಅಗತ್ಯವಾಗಿ ಸಾಮಾಜಶಾಸ್ತ್ರವು ಶೋಧಿಸಲ್ಪಟ್ಟಿತು. ಎನ್‌ಲೈಟ್‌ಮೆಂಟ್ ಯುಗದ ಸಾಮಾಜಿಕ ತತ್ವಜ್ಞಾನವು, ಯುರೋಪಿನ ಸಮಾಜವು ಊಳಿಗಮಾನ್ಯತೆಯಿಂದ ಬಂಡವಾಳಶಾಹಿ ವ್ಯವಸ್ಥೆಯ ಕಡೆಗೆ ನಡೆದು ಹೋದದ್ದನ್ನು ಸಮಾಜಶಾಸ್ತ್ರದ ಮೂಲಕ ವಿವರಿಸಿತು. ಸಮಾಜಶಾಸ್ತ್ರವು ಬಂಡವಾಳಶಾಹಿ ಸಮಾಜದ ವೈರುಧ್ಯಗಳ ಪ್ರತಿಬಿಂಬದಂತೆ ರೂಪುಗೊಂಡಿತು'[೧೦] ಆಗಸ್ಟ್‌ಕಾಮ್ಟೆ ಫ್ರಾನ್ಸಿನ ಒಬ್ಬ ಪಾಸಿಟಿವಿಸ್ಟ್ ತತ್ವಜ್ಞಾನಿಯು ಸಮಾಜಶಾಸ್ತ್ರದ ಹುಟ್ಟಿನ ಆರಂಭದಲ್ಲಿ ಹಲವು ಲಕ್ಷಣಗಳನ್ನು ಕಲ್ಪಿಸುತ್ತಾನೆ. 'ಈತನ ಪ್ರಕಾರ ಸಮಾಜಶಾಸ್ತ್ರವೆಂದರೆ, ಮನುಷ್ಯನ ಮನಸ್ಸಿನ ವಿಕಾಸ ಮತ್ತು ಅವನು ತನ್ನ ಒಟ್ಟಾರೆಯ ಸಾಮಾಜಿಕ ಬದುಕಿನ ಸ್ಪೂರ್ತಿಯಿಂದ ಸಂಭವಿಸಿದ ಕಾರ್ಯಕಾರಣ ಸಂಬಂಧಗಳನ್ನು ಅಧ್ಯಯನಕ್ಕೊಳಪಡಿಸುವ ಅಧ್ಯಯನ ಶಿಸ್ತು.'[೧೧] ಎನ್ನುತ್ತಾನೆ.

ಊಳಿಗಮಾನ್ಯತೆಯಿಂದ ಬಂಡವಾಳಶಾಹಿ ಸಮಾಜವಾಗಿ ರೂಪುಗೊಳ್ಳುವ ಹಂತದಲ್ಲಿ ಯುರೋಪಿನ

ಜನರಲ್ಲಿ ಮೂಡಿದ ರಾಷ್ಟ್ರೀಯ ಪ್ರಜ್ಞೆಯ ಕಾರಣಕ್ಕಾಗಿ ಮತ್ತು ಅಂದಿನ ರಾಜಕೀಯ ಅಗತ್ಯಕ್ಕಾಗಿ ಸಮಾಜಶಾಸ್ತ್ರವು ಅಸ್ತಿತ್ವಕ್ಕೆ ಬಂದಿತು. ತಮ್ಮನ್ನು ತಾವು ಅಧ್ಯಯನಕ್ಕೊಳಪಡಿಸಿಕೊಳ್ಳುವ ಮತ್ತು ಒಂದು ನಾಗರಿಕ ರಾಜಕೀಯ ಸಮುದಾಯವಾಗಿ ಹೊರ ಹೊಮ್ಮುವ ಸಲುವಾಗಿ ಸಮಾಜಶಾಸ್ತ್ರವು ಯುರೋಪಿನ ನಾಗರೀಕತೆಯನ್ನು ಯುರೋಪಿನ ಜನರಿಗೆ ವಿವರಿಸಿತು. ಇದರ ಜೊತೆ ಜೊತೆಗೆ ಯುರೋಪಲ್ಲಿ ಭಾಷೆಯ ಆಧಾರದಲ್ಲಿ ರಾಷ್ಟ್ರಗಳು ರೂಪುಗೊಂಡವು. ಮತ್ತು 'ತಮ್ಮನ್ನು ರಾಷ್ಟ್ರಗಳಾಗಿ ಪುನರೂಪಿಸಿಕೊಂಡ ಐರೋಪ್ಯ ಸಮುದಾಯಗಳೆಲ್ಲ ತಮ್ಮ ಹಿಂದಿನ ಚಕ್ರಾಧಿಪತ್ಯಗಳ ಅನುಭವಗಳನ್ನು, ಮಾದರಿಗಳನ್ನು ಕೈಬಿಡಲು ಸಿದ್ಧವಾಗಿರಲಿಲ್ಲ. ಅಂತರಾಷ್ಟ್ರೀಯ ವಲಯದಲ್ಲಿ ತಮ್ಮನ್ನು ಹೆಚ್ಚೆಚ್ಚು ದಿಗ್ವಿಜಯಿಗಳನ್ನಾಗಿ ತೋರಿಸಿಕೊಳ್ಳಲು ಅವು ಪ್ರಯತ್ನಿಸಿದವು. ಅದಕ್ಕೆ ರಾಷ್ಟ್ರೀಯ ದಿರಿಸಿನ ಅಲಂಕಾರ ಮಾತ್ರವಿತ್ತು'[೨] ೧೫ನೇ ಶತಮಾನದ ಕೊನೆಯ ಹೊತ್ತಿಗೆ ಪ್ರಾರಂಭವಾದ ಹೊಸ ಭೂಪ್ರದೇಶಗಳ ಅನ್ವೇಷಣೆಯು ಯುರೋಪಿಗೆ ತನ್ನ ಮಾರುಕಟ್ಟೆಯನ್ನು ವಿಸ್ತರಿಸಲು ಸಹಾಯ ಮಾಡಿತು. ಮೊದಲು ಯುರೋಪಿನ ಆಕ್ರಮಣಕ್ಕೆ ಈಡಾದದ್ದು ಆಫ್ರಿಕಾ ಖಂಡ, ನಂತರ ಅಷ್ಟೇ ಸಮೃದ್ಧವಾಗಿದ್ದ ಭಾರತ ಉಪಖಂಡವೂ ಯುರೋಪಿನ ವಿವಿಧ ದೇಶಗಳ ವಸಾಹತುವಾಗಿ ರೂಪಾಂತರಗೊಂಡಿತು. ಊಳಿಗಮಾನ್ಯ ವ್ಯವಸ್ಥೆಯಿಂದ ಬಂಡವಾಳಶಾಹಿ ಸಮಾಜವಾಗಿ ಬದಲಾದ ಮಹತ್ವಾಕಾಂಕ್ಷೆಯ ಯುರೋಪಿನ ದೇಶಗಳಿಗೆ, ಇನ್ನೂ ಊಳಿಗಮಾನ್ಯ ಸಮಾಜವಾಗಿಯೇ ನಲುಗುತ್ತಿದ್ದ ಭಾರತವನ್ನು ಮಣಿಸಲು ಕಷ್ಟವಾಗಲಿಲ್ಲ. ಹಂತ ಹಂತವಾಗಿ ಭಾರತದ ಅರಾಜಕ ಸಮಾಜವನ್ನು ಡಚ್ಚರು, ಪೋರ್ಚಗೀಸರು, ಫ್ರೆಂಚರು ಆನಂತರ ಬ್ರಿಟೀಷರು ಇಡಿಯಾಗಿ ಆಕ್ರಮಿಸಿಕೊಂಡರು. ಬ್ರಿಟೀಷರು ೧೮ ನೇ ಶತಮಾನದ ಉತ್ತರಾರ್ಧದಲ್ಲಿ ಫ್ರೆಂಚರನ್ನು ಮತ್ತು ಭಾರತದ ರಾಜಶಾಹಿಯನ್ನು ಸೋಲಿಸುವುದರ ಮೂಲಕ ಭಾರತದ ಮೇಲೆ ಏಕಸ್ವಾಮ್ಯ ಸಾಧಿಸುವ ಕಡೆಗೆ ದೃಢವಾದ ಹೆಜ್ಜೆ ಇಟ್ಟರು. ರಾಬರ್ಟ್‌ಕ್ಲೈವ್ ಈ ನಿಟ್ಟಿನಲ್ಲಿ ಯಶಸ್ವಿಯೂ ಆದನು. ಭಾರತದಲ್ಲಿ ಕಂಪನಿ ಆಡಳಿತದ ಯುಗ ಪ್ರಾರಂಭವಾಗಿತ್ತು.

ಹಾಗೆ ನೋಡಿದರೆ ಹಡಗುಗಳನ್ನು ನಡೆಯಿಸಿಸೊಂಡು ಭಾರತಕ್ಕೆ ಬಂದಿದ್ದ ಸಾಹಸಿ ನಾವಿಕರಿಗೆ ಸೈನಿಕನ ಗುಣಗಳಿದ್ದವೇ ಹೊರತು ಆಡಳಿತದ ಕುಶಲತೆ ಇರಲಿಲ್ಲ. ಒಬ್ಬ ಗುಮಾಸ್ತನಾಗಿದ್ದುಕೊಂಡ ಕ್ಲೈವ್ ಎಂಬಾತ ಪ್ಲಾಸೀ ಕದನದಲ್ಲಿ ಸಿರಾಜುದ್ದೌಲನನ್ನು ಸೋಲಿಸಿಟ್ಟಿದ್ದ. ಕ್ಲೈವನ ಗೆಲುವು ಆಕಸ್ಮಿಕವೇ ಆಗಿದ್ದರೂ ಬಂಗಾಳವೆಂಬ ಸಂಪದ್ಭರಿತ ಭೂಪ್ರದೇಶವು ಕಂಪನಿ ಸೈನಿಕರ ವಶಕ್ಕೆ ಬಂದು ಬಿಟ್ಟಿತ್ತು. ಭಾರತದ ಜನರನ್ನು ಗೆಲ್ಲುವುದು ಮುಖ್ಯವಲ್ಲ, ಆಡಳಿತಾತ್ಮಕವಾಗಿ ಅವರನ್ನು ನಿಯಂತ್ರಿಸುವುದು ರೇಜಿಗೆಯ ಕೆಲಸವೆಂಬುದು ಕ್ಲೈವನ ಸುತ್ತಲ ಜನಕ್ಕೆ ತಕ್ಷಣದಲ್ಲಿಯೇ ಅರ್ಥವಾಗಿತ್ತು. ಅಗಾಧ ಭೂಪ್ರದೇಶ, ವೈವಿಧ್ಯಮಯ ಪರಿಸರ, ಇನ್ನೂ ಉಸಿರು ಹಿಡಿದುಕೊಂಡಿದ್ದ ಚಿಕ್ಕಪುಟ್ಟ ದೇಸೀ ಸಂಸ್ಥಾನಗಳು, ಹಲವು ಬಗೆಯ ಜನಸಮುದಾಯಗಳು, ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುವ ಭಾಷೆಗಳು, ಎಂದೂ ಕಂಡರಿಯದ ಸಾಂಸ್ಕೃತಿಕ ವಾತಾವರಣ, ಅರ್ಥ ಮಾಡಿಕೊಳ್ಳಲು ಸಾಧ್ಯವಾಗದ ಸಾಮಾಜಿಕ ಸಂದರ್ಭಗಳು ಮತ್ತು ಇದರ ಜೊತೆಗೆ ಭಾರತದಲ್ಲಿದ್ದ ವೈರುಧ್ಯಮಯ ಸಾಮಾಜಿಕಾರ್ಥಿಕ ಶ್ರೇಣಿಗಳು ಕ್ಲೈವ್ ಮತ್ತು ಅವನ ಸೈನಿಕರನ್ನು

ತಲ್ಲಣಗೊಳಿಸಿದ್ದವು. ಅವರಿಗೆ ಭಾರತ ತುರ್ತಾಗಿ ಅರ್ಥವಾಗಬೇಕಿತ್ತು. ತಾವು ಗೆದ್ದ ಪ್ರದೇಶದ ಜನ, ಭಾಷೆ, ರೀತಿ, ನೀತಿ, ನಿಯಮಗಳ ಪರಿಚಯ ಕ್ಲೈವ್ ಮತ್ತು ಸಂಗಡಿಗರಿಗೆ ಅವಶ್ಯಕವಾಗಿತ್ತು. ಆಗ ಅವರು ಭಾರತದ ಜನರನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದರು. ಇವರಿಗೆ ಮತ್ತೆ ತಮ್ಮ ತಾಯ್ನಾಡಿನ ವಿದ್ವಾಂಸರು ನೆರವು ಅಗತ್ಯವೆನ್ನಿಸಿತು.

ಯುರೋಪಲ್ಲಿ ಎತ್ನೋಗ್ರಫಿ ಮತ್ತು ಮಾನವಶಾಸ್ತ್ರಗಳ ಹುಟ್ಟು

ಯುರೋಪಿನ ಜನರಿಗೆ ತಾವೊಂದು ರಾಜಕೀಯ ಸಮುದಾಯವಾಗಿ ರೂಪುಗೊಳ್ಳುವ ಹಂತದಲ್ಲಿ ಸಹಾಯ ಮಾಡಿದ ಸಮಾಜಶಾಸ್ತ್ರವು ವಸಾಹತುಶಾಹಿ ಕಾಲಘಟ್ಟದಲ್ಲಿ ಮತ್ತೆ ಯುರೋಪಿನ ಜನರ ಸಹಾಯಕ್ಕೆ ಬಂದಿತು. ಒಂದು ನಾಗರಿಕ ಸಮಾಜವನ್ನು ನಿಯಮಗಳ ಮೂಲಕ ನಿಯಂತ್ರಿಸಬೇಕೆಂದರೆ ಮೊದಲು ಆ ಸಮಾಜದ ಜನರನ್ನು ಅರ್ಥಮಾಡಿಕೊಳ್ಳಬೇಕು. ಅವರ ಒಟ್ಟಾರೆಯ ದೈನಂದಿನ ಸಾಮಾಜಿಕ ಸಾಂಸ್ಕೃತಿಕ ಮತ್ತು ರಾಜಕೀಯಾರ್ಥಿಕ ಚಲನೆಗಳನ್ನು ಅಧ್ಯಯಿನಿಸಿಬೇಕೆಂದು ಸಮಾಜಶಾಸ್ತ್ರವು ಯುರೋಪಿನ ಜನರಿಗೆ ಕಲಿಸಿಕೊಟ್ಟಿತ್ತು. ಆದರೆ ತಾವು ಆಳುತ್ತಿರುವ ದೇಶಗಳು ಯುರೋಪಿನಂತೆ ಏಕರೂಪಿ ಸಮಾಜಗಳನ್ನು ಹೊಂದಿಲ್ಲ. ವೈವಿಧ್ಯಮಯ ಜನಾಂಗಗಳು, ಯುರೋಪಿನ ದೃಷ್ಟಿಯಲ್ಲಿ ಇನ್ನೂ 'ನಾಗರಿಕ'ವಲ್ಲದ ಸ್ಥಿತಿಯಲ್ಲಿರುವ ಜನರನ್ನು ಅವರು ಅರ್ಥ ಮಾಡಿಕೊಳ್ಳಬೇಕಿತ್ತು. ಆಗ ಯುರೋಪಿನಲ್ಲಿ ಹುಟ್ಟಿದ್ದು 'ಎತ್ನೋಗ್ರಫಿ' ಎಂಬ ಅಧ್ಯಯನ ಶಿಸ್ತು. ಇದಕ್ಕೂ ಮುನ್ನ ಮಾರ್ಗನ್ ಉತ್ತರ ಅಮೇರಿಕಾದ ಆದಿಮ ಸಮಾಜಗಳನ್ನು ಅಧ್ಯಯನ ಮಾಡಿದ ಮಾದರಿಯು ಯುರೋಪಿನ ಜನರ ಉಪಯೋಗಕ್ಕೆ ಬಂದಿತ್ತು. 'ಆದರೆ ಮಾರ್ಗನ್ ಮಾದರಿಯ ಎತ್ನಾಲಜಿಯನ್ನು ಶೈಕ್ಷಣಿಕವಾಗಿ ತಿರಸ್ಕರಿಸಲಾಯಿತು. ಮಾರ್ಗನ್ ಮಾದರಿಯು ಮೂಲತಃ ಸಾಮಾಜಿಕ ಸಂರಚನೆಯನ್ನು ಅಭಿವೃದ್ಧಿ ಪಡಿಸುವ ನಿಲುವುಗಳನ್ನು ಹೊಂದಿತ್ತು. ಇದರ ಬದಲಿಗೆ ಟೇಲರ್‌ನನ್ನು ಮತ್ತು ಎತ್ನೋಗ್ರಫಿಯ ಕುರಿತ ಆತನ ಪರಿಕಲ್ಪನೆಗಳನ್ನು ಒಪ್ಪಿಕೊಳ್ಳಲಾಯಿತು'[೧೩].

Ethnography ಮತ್ತು Ethnology ಎಂಬ ಹೆಸರಲ್ಲಿ ಹುಟ್ಟಿಕೊಂಡ ಅಧ್ಯಯನ ಶಿಸ್ತು ವಸಾಹತುಗಳಲ್ಲಿನ ಜನರನ್ನು ಅರ್ಥ ಮಾಡಿಕೊಳ್ಳಲು ಯುರೋಪಿನ ಆಡಳಿತಗಾರರಿಗೆ ಸಹಾಯ ಮಾಡಿತು. ನಂತರ 'ಅಮೇರಿಕಾ ಮತ್ತು ಬ್ರಿಟನ್ ವಿಶ್ವವಿದ್ಯಾಲಯಗಳಲ್ಲಿ ಶೈಕ್ಷಣಿಕವಾಗಿ ಉತ್ಸಾಹದ ಸನ್ನಿವೇಶಗಳು ಕಾಣಿಸಿಕೊಂಡವು. ಜೊತೆಗೆ ಈ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಕ್ಷೇತ್ರದಲ್ಲಿಯೂ ಅನೇಕ ಬದಲಾವಣೆಗಳು ಸಂಭವಿಸಿದವು. ಕಾರಣ ಆಫ್ರಿಕಾ ಮತ್ತು ಭಾರತದಂತಹ ದೇಶಗಳು ಅಧ್ಯಯನ ಕ್ಷೇತ್ರಗಳಾಗಿ ಈ ಕುತೂಹಲಿ ವಿದ್ವಾಂಸರಿಗೆ ಲಭ್ಯವಾಗಿದ್ದವು.'[೧೪]. ಕಾರಣ Ethnography ಯನ್ನು ಯುರೋಪಿನ ವಿದ್ವಾಂಸರು 'ನಾಗರಿಕವಲ್ಲದ' ಅಥವಾ ಮಾನವ ವಿಕಾಸದ ಯಾವುದೋ ಹಂತದಲ್ಲಿ ನಿಂತು ಬಿಟ್ಟಿರುವ, ಬೆಳವಣಿಗೆಯಾಗದ ಸಮಾಜಗಳನ್ನು ಅಧ್ಯಯನ ಮಾಡುವ ಜ್ಞಾನಶಿಸ್ತು ಎಂದು ಪರಿಗಣಿಸಿದ್ದರು. ಇವಾನ್ಸ್ ಪ್ರಿಚಾರ್ಡ್‌ನ ಪ್ರಕಾರ 'ಎತ್ನೋಗ್ರಫಿ ಅಥವಾ 'ಎತ್ನಾಲಜಿಯು ಸಮುದಾಯಗಳನ್ನು ಅವುಗಳ ಜನಾಂಗೀಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಆಧಾರದ ಮೇಲೆ ವಿಂಗಡಿಸುತ್ತದೆ. ಜೊತೆಗೆ ಈ ಸಮುದಾಯಗಳ

ವರ್ತಮಾನದ ಸ್ಥಿತಿಗತಿಗಳು ಮತ್ತು ಅವುಗಳ ಸಾಮಾಜಿಕ ಪ್ರಸರಣವನ್ನು ವಿವರಿಸುತ್ತವೆ'[೧೪]. ಎತ್ನಾಲಜಿಯು ಸ್ರೋತ ಸಮುದಾಯಗಳ ಕುರಿತ ವಿವರಗಳನ್ನು ಅದರಲ್ಲೂ ಅವುಗಳ ಸುತ್ತಲ ಜಗತ್ತಿನ ವಿವರಗಳನ್ನು ಒದಗಿಸಲೆಂದೇ ರೂಪುಗೊಂಡಿತು. ಆದರೆ ಅದು ಯುರೋಪಿನಲ್ಲಿದ್ದ ಉಳಿದ ಸಮಾಜವಿಜ್ಞಾನಗಳ ಜ್ಞಾನಶಿಸ್ತುಗಳಷ್ಟು ಜನಪ್ರಿಯವಾಗಲಿಲ್ಲ. ಅದಕ್ಕೆ ಇವಾನ್ಸ್ ಪ್ರಿಚಾರ್ಡ್ 'ಎತ್ನೋಲಜಿಯು ನಾವು ಗ್ರಹಿಸುವ ಅರ್ಥದಲ್ಲಿ ಅದು ಇತಿಹಾಸವನ್ನು ಹೇಳುವುದಿಲ್ಲ. ಇತಿಹಾಸವು, ಇಂತಿಂತಹ ಘಟನೆಗಳು ನಡೆದಿರಬಹುದು ಎಂದು ಹೇಳುವುದಿಲ್ಲ. ಬದಲಿಗೆ ಘಟನೆಗಳು ಹೀಗೇಯೇ ನಡೆದಿವೆ ಎಂದು ಖಚಿತವಾಗಿ ಹೇಳುತ್ತದೆ. ಜೊತೆಗೆ ಘಟನೆಗಳು ಇಂತಹ ಸ್ಥಳದಲ್ಲಿ ನಡೆದವು ಮತ್ತು ಅವು ಹೇಗೆ, ಏಕೆ ನಡೆದವು ಎಂದು ನಿರ್ದಿಷ್ಟವಾಗಿ ಹೇಳುತ್ತದೆ. ಆದರೆ ಎತ್ನೋಲಜಿಯು ಆದಿಮ ಸಮುದಾಯದ ಭೂತದ ಬಗ್ಗೆ ಊಹಾತ್ಮಕವಾಗಿ ಮಾತ್ರ ವಿವರಿಸುತ್ತದೆ ಎನ್ನುತ್ತಾನೆ '[೧೫]. ಆದರೆ ಯುರೋಪಿನ ವಿದ್ವಾಂಸರಿಗೆ ಎತ್ನಾಲಜಿಯ ಶೈಕ್ಷಣಿಕ ಅಗತ್ಯ ಮತ್ತು ಮಿತಿಗಳೆರಡೂ ಗೊತ್ತಿದ್ದ ಕಾರಣಕ್ಕೆ, ಈ ಅಧ್ಯಯನ ಶಿಸ್ತನ್ನು ಕೇವಲ ಆದಿಮ ಸಮುದಾಯಗಳನ್ನು ಅದರಲ್ಲೂ ಯುರೋಪೇತರ ವಸಾಹತುಗಳಲ್ಲಿನ ಜನರನ್ನು ಅಧ್ಯಯನ ಮಾಡುವುದಕ್ಕೆ ಮಾತ್ರ ಸೀಮಿತಗೊಳಿಸಿದರು. 'ಆದಿಮ ಸಮಾಜಗಳೆಂದರೆ ಯಾವವು? ಮತ್ತು ನಾವು ಯಾಕಾಗಿ ಅವುಗಳನ್ನು ಅಧ್ಯಯನ ಮಾಡಬೇಕು? ಆದಿಮ ಸಮಾಜವೆಂದರೆ ಯಾವುದು? ಎಂಬ ಸಂಗತಿಗಳು ಮಾನವಶಾಸ್ತ್ರದ ವಾಙ್ಮಯದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲ್ಪಟ್ಟಿವೆ. ಆದಿಮ ಸಮಾಜಗಳೆಂದರೆ, ಒಟ್ಟಾರೆಯಾಗಿ ಅವು ನಾಗರೀಕತೆಯ ಬೆಳವಣಿಗೆಯ ಪ್ರಾಥಮಿಕ ಹಂತದಲ್ಲಿವೆ. ಉಳಿದ ಸಮಾಜಗಳಿಗಿಂತ ತೀರಾ ಹಿಂದಿವೆ'[೧೬]. ಎಂಬುದು ಆ ವಿದ್ವಾಂಸರ ನಂಬಿಕೆಯಾಗಿತ್ತು. ಜೊತೆಗೆ ಎತ್ನೋಲಜಿಯು ಆ ಬಗೆಯ ಸಮಾಜಗಳ ಅಧ್ಯಯನಕ್ಕೆ ಮಾತ್ರ ಮೀಸಲು ಎಂದು ಗ್ರಹಿಸಲಾಗಿತ್ತು. ಈವತ್ತು ನಾವು ಯಾವುದನ್ನು ಮಾನವಶಾಸ್ತ್ರವೆಂದು ಕರೆಯುತ್ತೇವೋ ಆ 'ಮಾನವಶಾಸ್ತ್ರವು ತನ್ನ ವಿಕಾಸದ ಮೊದಲ ಘಟ್ಟದಲ್ಲಿ ಸಮಾಜಗಳನ್ನು ಅವುಗಳ ಚಾರಿತ್ರಿಕ ಬೆಳವಣಿಗೆಯ ಹಿನ್ನೆಲೆಯಲ್ಲಿ ಶ್ರೇಣೀಕೃತವಾಗಿ ವಿಂಗಡಿಸುವ ಕೆಲಸವನ್ನು ಮಾಡಿತು. ಜೊತೆಗೆ ಪಶ್ಚಿಮದ ನಾಗರೀಕತೆಗೆ ಹೊರತಾದ ಜನಸಮುದಾಯಗಳನ್ನು 'ಆದಿಮ ಸಮುದಾಯಗಳು' ಎಂಬ ಶೀರ್ಷಿಕೆಯಡಿ ಪರಿಗಣಿಸಿತು'[೧೭].

ಇಲ್ಲಿ ಮುಖ್ಯವಾದ ಸಂಗತಿಯೊಂದನ್ನು ನಾವು ಸ್ಪಷ್ಟಗೊಳಿಸಿಕೊಳ್ಳಬೇಕಿದೆ. ನಾವು ಈವತ್ತು ಯಾವುದನ್ನು ಮಾನವಶಾಸ್ತ್ರವೆಂದು ಕರೆಯುತ್ತೇವೋ ಅದರ ಮೂಲ ಸ್ವರೂಪಗಳು ಎತ್ನೋಗ್ರಾಫಿಯ ಅಧ್ಯಯನ ವಿಧಾನಗಳ ಮೂಲಕ ರೂಪಗೊಂಡಂತವುಗಳು. ಮಾನವಶಾಸ್ತ್ರವು ಹಲವು ಬಗೆಗಳಲ್ಲಿ ಎತ್ನೋಗ್ರಫಿಯ ಮುಂದುವರೆದ ಶೈಕ್ಷಣಿಕ ಶಿಸ್ತೇ ಆಗಿದೆ. ಏಕೆಂದರೆ 'ಮಾನವಶಾಸ್ತ್ರವು ೧೮ ನೇ ಶತಮಾನದ ಮಧ್ಯಭಾಗದವರೆಗೂ ಮಾನವಶರೀರ ಶಾಸ್ತ್ರದ ಪರಿಭಾಷೆಯಾಗಿ ಮಾತ್ರ ಬಳಕೆಯಲ್ಲಿತ್ತು. ಅಂದರೆ ಮಾನವನ ಶರೀರದ ಅಧ್ಯಯನಕ್ಕೆ ಮೀಸಲಾದ ಅಂಗರಚನಾಶಾಸ್ತ್ರವೆಂದು ಮಾತ್ರ ಪರಿಗಣಿಸಲ್ಪಟ್ಟಿತ್ತು'[೧೮]. ಮುಂದೆ ಅನೇಕ ಸಮಾಜಶಾಸ್ತ್ರಜ್ಞರು ಮಾನವಶಾಸ್ತ್ರವನ್ನು ಶುದ್ಧ ವಿಜ್ಞಾನದ ಪರಿಪ್ರೇಕ್ಷ್ಯದಿಂದ ಬಿಡಿಸಿ ಮಾನವ ಸಮಾಜಕ್ಕೆ ಸಂಬಂಧಿಸಿದ ಸಾಮಾನ್ಯ ಸಂಗತಿಗಳ ಅಧ್ಯಯನಕ್ಕೆ ಈ ಶೈಕ್ಷಣಿಕ ಶಿಸ್ತನ್ನು ಬಳಸತೊಡಗಿದರು. ಆದರೂ

ಮಾನವಶಾಸ್ತ್ರವು ತನ್ನ ವಿಜ್ಞಾನವೆಂಬ ಪೂರ್ವಾಶ್ರಮದ ಲಕ್ಷಣಗಳನ್ನು ಪೂರ್ಣವಾಗಿ ಕಳಚಿಕೊಳ್ಳಲಿಲ್ಲ. ಮಾನವಶಾಸ್ತ್ರದ ಅನೇಕ ಶಾಖೆಗಳಲ್ಲಿ ೨೦ ನೇ ಶತಮಾನದವರೆಗೂ ಶಾರೀರಿಕ ಮಾನವಶಾಸ್ತ್ರ (Physical Anthropology) ವು ಒಂದು ಪ್ರಮುಖ ಶಾಖೆಯಾಗಿಯೇ ಮುಂದುವರೆದುಕೊಂಡು ಬಂದಿತು. ಎಡ್ಗರ್ ಥರ್ಸಟನ್ ದಕ್ಷಿಣ ಭಾರತದ ಬುಡಕಟ್ಟುಗಳನ್ನು ಅಧ್ಯಯನ ಮಾಡುವಾಗ ಮೊದಲು ಅವರ ಶರೀರ ರಚನೆಯನ್ನೇ ಅಧ್ಯಯನ ಮಾಡಿದ್ದಾನೆ. ಆತ ತನ್ನ ಸಂಪುಟಗಳಿಗೆ ಬರೆದ ಸುದೀರ್ಘ ಪ್ರಸ್ತಾವನೆಯಲ್ಲಿ, ದ್ರಾವಿಡ ಬುಡಕಟ್ಟುಗಳ ಮುಖ ಚಹರೆ, ಮೂಗು, ಕಿವಿ, ತುಟಿ, ಹಣೆ, ಕೈ ಕಾಲುಗಳ ರಚನೆಯ ಕುರಿತು ಸುದೀರ್ಘವಾಗಿ ಪ್ರಸ್ತಾಪಿಸುತ್ತಾನೆ[೫]. ಯುರೋಪಿನ ಜೊತೆ ಜೊತೆಗೆ ಅಮೇರಿಕಾದಲ್ಲೂ '೧೯೦೦ ರಿಂದ ೧೯೧೫ ರ ವರೆಗಿನ ಕಾಲ ಅಮೇರಿಕಾದ ಎತ್ನೋಲಜಿಯ ರೂಪುಗೊಳ್ಳುವ ಹಂತ. ಈ ಹಂತದಲ್ಲಿ ಫ್ರಾನ್ಸ್ ಬೋಯಿಸ್ ಮತ್ತು ಆತನ ವಿದ್ಯಾರ್ಥಿಗಳು ಮೊದಲ ಹಂತದಲ್ಲಿ ತಮ್ಮದೇ ದೇಶದಲ್ಲಿ ನಶಿಸಿಹೋಗುತ್ತಿದ್ದ ರೆಡ್ ಇಂಡಿಯನ್ನರ ಸಂಸ್ಕೃತಿಯನ್ನು ಅಧ್ಯಯನ ಮಾಡಲು ಆರಂಭಿಸಿದರು'[೬]. ಅಮೇರಿಕಾದ ಮೂಲ ನಿವಾಸಿಗಳಾದ ರೆಡ್ ಇಂಡಿಯನ್ನರು ಅಮೇರಿಕಾದ ಮುಖ್ಯಪ್ರವಾಹದ ಜೊತೆ ಬೆರೆತು ಹೋಗುವ ಮುನ್ನ ಅಧ್ಯಯನಕ್ಕೊಳಪಡಿಸಬೇಕೆಂಬ ಕಾತುರ ಅಲ್ಲಿನ ಮಾನವಶಾಸ್ತ್ರಜ್ಞರನ್ನು ಕಾಡಿತು. ೧೯೧೫ ರಿಂದ ೧೯೩೦ ರ ವರೆಗಿನ ಅವಧಿಯು ಅಮೇರಿಕಾದಲ್ಲಿ ಎತ್ನೋಲಜಿಯ ಬೆಳವಣಿಗೆಯ ಮುಖ್ಯ ಕಾಲಘಟ್ಟ. ಇದರ ಜೊತೆಗೆ ತಮ್ಮ ಮೂಲ ಸಂಸ್ಕೃತಿಯನ್ನು 'ರಕ್ಷಿಸಿಕೊಳ್ಳಬೇಕೆಂಬ' ಹಪಾಹಪಿಯು ಯೂರೋಪ್ ಮತ್ತು ಅಮೇರಿಕಾದ ವಿದ್ವಾಂಸರನ್ನು ಕಾಡಿತು. ಆಗ ಮಾನವಶಾಸ್ತ್ರೀಯ ಮೂಸಿಯಂಗಳು (Anthropological Museum) ಎಲ್ಲಡೆ ತಲೆ ಎತ್ತಿದವು. ತಮ್ಮದೇ ಸಂಸ್ಕೃತಿ ಭಾಗವಾಗಿದ್ದ, ಒಂದು ಕಾಲದಲ್ಲಿ ಅವರ ಬದುಕಿನ ಜೊತೆಗೆ ಗಾಢವಾಗಿ ಬೆಸೆದುಕೊಂಡಿದ್ದ ಹಲವು ವಸ್ತು ಸಂಗತಿಗಳನ್ನು ಮ್ಯೂಸಿಯಂಗಳಲ್ಲಿ ರಕ್ಷಿಸಿಡುವ ಪ್ರವೃತ್ತಿ ಎಲ್ಲಡೆ ಕಾಣಿಸಿಕೊಂಡಿತು. ಜೊತೆಗೆ ಈ ಮ್ಯೂಸಿಯಂಗಳು ಎತ್ನೋಗ್ರಫಿಕ್ ಅಧ್ಯಯನಗಳ ಭಾಗವಾಗಿಯೇ ರೂಪುಗೊಂಡವು. ಈ ಕಾರಣಕ್ಕಾಗಿಯೇ ಸಂಸ್ಕೃತಿಯನ್ನು 'ರಕ್ಷಿಸಿಡುವ' 'ಉಳಿಸಬೇಕೆನ್ನುವ' ಮನೋಭಾವವು ಎತ್ನೋಲಜಿಯ ಅಧ್ಯಯನ ವಿಧಾನವನ್ನು ಪ್ರಭಾವಿಸಿತು.

ಆದರೆ '೧೯೩೦-೪೦ ರ ದಶಕದಲ್ಲಿ ತಾನು ವಿಸ್ತಾರಗೊಳ್ಳುವ ಕಾಲದಲ್ಲಿ ಅಮೇರಿಕಾದ ಎತ್ನಾಲಜಿಯು ಹಲವು ಸಮಸ್ಯೆಗಳನ್ನು ಮತ್ತು ರೂಪಾಂತರಗಳನ್ನು ಕಂಡಿತು. ತಮ್ಮದೇ ದೇಶದ ಆದಿಮ ಸಂಸ್ಕೃತಿಗಳನ್ನು ಅಧ್ಯಯನ ಮಾಡಿದ್ದು ಅಮೇರಿಕಾದ ವಿದ್ವಾಂಸರಿಗೆ ಸಾಕೆನ್ನಿಸಿತು. ಎತ್ನಾಲಜಿಯ ಕೇಂದ್ರಗಳಾಗಿದ್ದ ಮ್ಯೂಸಿಯಂಗಳು ಸುಸ್ತಾಗಿದ್ದವು. ಜೊತೆಗೆ ಮ್ಯೂಸಿಯಂಗಳು ತಮ್ಮ ಕೆಲಸಗಳನ್ನು ನಿಲ್ಲಿಸಿದ್ದವು. ಈ ಅಧ್ಯಯನಗಳು ಮ್ಯೂಸಿಯಂಗಳನ್ನು ತೊರೆದು ವಿಶ್ವವಿದ್ಯಾಲಯಗಳ ವಿಭಾಗಗಳ ಕಡೆ ನಡೆದು ಹೋದವು. ವಿಶ್ವವಿದ್ಯಾಲಯಗಳಲ್ಲಿದ್ದ ವಿದ್ವಾಂಸರಿಗೆ ಹೊರಗಿನ ಸಮಾಜಗಳನ್ನು ಅಧ್ಯಯನ ಮಾಡುವ ಮತ್ತು ಎತ್ನೋಗ್ರಫಿಯನ್ನು ವಿಸ್ತರಿಸುವ ಮಹತ್ವಾಕಾಂಕ್ಷೆಯೂ ಇತ್ತು. ಅಮೇರಿಕಾದ ಎತ್ನೋಗ್ರಫಿಗೆ ಇದು ತನ್ನನ್ನು ರೂಪಾಂತರಿಸಿಕೊಳ್ಳುವ ಕಾಲವಾಗಿ ೪೦ ರ ದಶಕ ಪರಿಣಮಿಸಿತು'[೭]. ಇದೇ ಸಂದರ್ಭದಲ್ಲಿ ಯುರೋಪು ಮತ್ತು ಅಮೇರಿಕಾದ ವಿಶ್ವವಿದ್ಯಾಲಯಗಳಲ್ಲಿ ಮಾನವಶಾಸ್ತ್ರವು ಶುದ್ಧ ವಿಜ್ಞಾನದ ತನ್ನ

ಪೂರ್ವಾಶ್ರಮದಿಂದ ಬಿಡುಗಡೆ ಪಡೆದು ಮನುಷ್ಯನ ಸಂಸ್ಕೃತಿಯನ್ನು ಅಧ್ಯಯನ ಮಾಡುವ 'ಸಾಂಸ್ಕೃತಿಕ ಮಾನವಶಾಸ್ತ್ರ'ವಾಗಿ ಇಂಗ್ಲೆಂಡಿನಲ್ಲಿ ರೂಪುಗೊಳ್ಳತೊಡಗಿತ್ತು. ಇದಕ್ಕೆ ಪರ್ಯಾಯವಾಗಿ ರೆಡ್‌ಕ್ಲಿಪ್‌ಬ್ರೌನ್ ನೇತೃತ್ವದಲ್ಲಿ 'ಸಾಮಾಜಿಕ ಮಾನವಶಾಸ್ತ್ರವು' ಅಮೇರಿಕಾದಲ್ಲಿ ಅಸ್ತಿತ್ವಕ್ಕೆ ಬಂದಿತು. ಆಗ ಎತ್ನೋಗ್ರಫಿಯು ಶೈಕ್ಷಣಿಕ ವಲಯದಿಂದ ಕಣ್ಮರೆಯಾಗುವ ಹಂತ ತಲುಪಿತು. 'ರೆಡ್ ಕ್ಲಿಪ್‌ಬ್ರೌನ್ ಎತ್ನಾಲಜಿಯ ಅವಸಾನವನ್ನು ಕುರಿತು ಈ ರೀತಿ ವಿವರಿಸುತ್ತಾನೆ. ಏಕೆ ಎತ್ನಾಲಜಿಯು ನಶಿಸಿ ಹೋಗುತ್ತಿದೆ ಎಂದರೆ, ಅದು ತನ್ನ ಅಧ್ಯಯನಕ್ಕೆ ಕೇಂದ್ರವಾಗಿಟ್ಟುಕೊಂಡಿದ್ದ ಆದಿಮ ಸಮಾಜಗಳು ಕಣ್ಮರೆಯಾಗುತ್ತಿರುವುದರಿಂದ. ಮತ್ತು ಎತ್ನಾಲಜಿಯು ಸಾಮಾಜಿಕ ಅಧ್ಯಯನಗಳಿಗೆ ಸಂಬಂಧಿಸಿದ ವಸ್ತು ವಿಷಯಗಳನ್ನು ವರ್ಗೀಕರಿಸುವಾಗ ಮತ್ತು ಅನುಸಂಧಾನ ಮಾಡುವಾಗ ಶೈಕ್ಷಣಿಕವಾಗಿ ವಿಫಲವಾಗುತ್ತಿದೆ. ಈ ಕಾರಣದಿಂದ ಎತ್ನಾಲಜಿಯನ್ನು ಸಾಂಸ್ಕೃತಿಕ ಚರಿತ್ರೆಯ ಅಧ್ಯಯನ ಶಿಸ್ತಿನ ಜೊತೆ ವಿಲೀನಗೊಳಿಸುವುದು ಒಳ್ಳೆಯದು'[೨೩]. ಎನ್ನುತ್ತಾನೆ.

೨೦ ನೇ ಶತಮಾನದ ಆರಂಭದ ಹೊತ್ತಿಗೆ ಒಂದು ಅರ್ಥದಲ್ಲಿ ಯುರೋಪ್ ಮತ್ತು ಇಂಗ್ಲೆಂಡುಗಳು ಒಂದು ಶೈಕ್ಷಣಿಕ ಸಮರವನ್ನೇ ನಡೆಸಿದವು. ಈ ಸಮರವು ಆಯಾ ಖಂಡಗಳ ಮಾರುಕಟ್ಟೆಯ ಪೈಪೋಟಿಯ ಭಾಗವಾಗಿಯೂ ಒಂದು ಬಿರುಸನ್ನು ಪಡೆದುಕೊಂಡಿತು. ಯುರೋಪಲ್ಲಿ ಇ.ಬಿ. ಟೇಲರ್ ಪಂಥೀಯರು 'ಸಾಂಸ್ಕೃತಿಕ ಮಾನವಶಾಸ್ತ್ರ'ವನ್ನು ಪ್ರತಿಪಾದಿಸಿದರೆ, ಅಮೇರಿಕಾದ ರೆಡ್‌ಕ್ಲಿಪ್ ಬ್ರೌನ್ ಮತ್ತು ಆತನ ಸಂಗಡಿಗರು 'ಸಾಮಾಜಿಕ ಮಾನವಶಾಸ್ತ್ರ'ವನ್ನು ಪ್ರಚಲಿತಗೊಳಿಸಿದರು. ಈ ಶೈಕ್ಷಣಿಕ ಬಿಕ್ಕಟ್ಟಿನಲ್ಲಿ ಕ್ಷೀಣವಾಗಿ ಉಸಿರಾಡುತ್ತಿದ್ದ ಎತ್ನೋಲಜಿಯು ಹೆಚ್ಚೂ ಕಡಿಮೆ ಅವಸಾನದ ಸ್ಥಿತಿಯನ್ನು ತಲುಪಿತು. ಅಮೇರಿಕಾದಲ್ಲಿ ಎತ್ನೋಲಜಿಯು ಮ್ಯೂಸಿಯಂಗಳಿಗೆ ಮಾತ್ರ ಸೀಮಿತಗೊಂಡು, ಅಲ್ಲಿ ಸಾಮಾಜಿಕ ಮಾನವಶಾಸ್ತ್ರವು ಮುಂಚೂಣಿಗೆ ಬಂತು. ಎತ್ನೋಲಜಿ ಮತ್ತು ಸಾಮಾಜಿಕ ಮಾನವಶಾಸ್ತ್ರಗಳ ನಡುವೆ ರೆಡ್‌ಕ್ಲಿಪ್ ಬ್ರೌನ್ ವ್ಯತ್ಯಾಸಗಳನ್ನು ಹೀಗೆ ಗುರುತಿಸುತ್ತಾನೆ. ಎತ್ನಾಲಜಿಯು ಅನಕ್ಷರಸ್ಥ ಅನಾಗರಿಕರನ್ನು ಅಧ್ಯಯನ ಮಾಡುವ ಜ್ಞಾನಶಿಸ್ತು ಈ ಅನಾಗರಿಕ ಸಮುದಾಯಗಳ ಚಾರಿತ್ರಿಕ ರಚನೆಗಳ ಕಡೆ ಎತ್ನಾಗ್ರಫಿ ಗಮನ ಕೊಡುತ್ತದೆ. ಆದರೆ ಸಾಮಾಜಿಕ ಮಾನವಶಾಸ್ತ್ರವು ಆದಿಮ ಸಮಾಜಗಳ ತುಲನಾತ್ಮಕ ಅಧ್ಯಯನಗಳನ್ನು ಕೈಗೊಳ್ಳುತ್ತದೆ'[೨೪]. ಆದರೂ ಸಾಮಾಜಿಕ ಮಾನವಶಾಸ್ತ್ರವಾಗಲಿ ಅಥವಾ ಮಾನವಶಾಸ್ತ್ರದ ಯಾವುದೇ ಶಾಖೆಯಾಗಲಿ ಶೈಕ್ಷಣಿಕವಾಗಿ ತನ್ನ ಮೂಲಸ್ವಭಾವಕ್ಕೆ ಅಂಟಿಕೊಂಡೇ ಇತ್ತು. ಮಾನವಶಾಸ್ತ್ರದ ಒಟ್ಟಾರೆಯ ಗಮನ ಯುರೋಪೇತರ ಅಥವಾ ಅಮೇರಿಕೇತರ ಜನಾಂಗಗಳ ಅಧ್ಯಯನಕ್ಕೆ ಮಾತ್ರ ಮಾನವಶಾಸ್ತ್ರ ಸೀಮತಗೊಳಿಸಿಕೊಂಡಿತು. ಎಂ.ಎನ್.ಶ್ರೀನಿವಾಸ್ ಈ ಕುರಿತು ಹೀಗೆ ಅಭಿಪ್ರಾಯಿಸುತ್ತಾರೆ. ಸಾಮಾಜಿಕ ಮಾನವಶಾಸ್ತ್ರಜ್ಞರು ಆದಿಮ ಸಮಾಜಗಳನ್ನು ಅಧ್ಯಯನ ಮಾಡಲು ಪ್ರಪ್ರಥಮ ಆದ್ಯತೆ ನೀಡಿದರು. ಇದಕ್ಕೆ ಅವರು ಕೊಡುವ ಕಾರಣಗಳಲ್ಲಿ ಮೊದಲನೆಯದು, ಆದಿಮ ಜನಾಂಗಗಳು ವೇಗವಾಗಿ ಬದಲಾಗುತ್ತಿವೆ. ಇನ್ನು ಕೆಲವು ವರ್ಷಗಳಲ್ಲಿ ಅಧ್ಯಯನ ಮಾಡಲೂ ಅವರು ಸಿಕ್ಕುವುದಿಲ್ಲ. ಆದ ಕಾರಣ ಈ ಕೂಡಲೇ ಅವರನ್ನು ಅಧ್ಯಯನಕ್ಕೆ ಒಳಪಡಿಸಬೇಕು'[೨೫]. ಇಂಗ್ಲೆಂಡಿನ ರಾಯಲ್ ಅಂಥ್ರೋಪಾಲಾಜಿಕಲ್ ಸಂಸ್ಥೆಯ ಮಾನವಶಾಸ್ತ್ರಜ್ಞಳಾದ ಬಿ.ಎಲ್.ಸಿಲಿಗ್ಮನ್‌ಳು Note and Queries on Anthropology

ಎಂಬ ನಿಯತಕಾಲಿಕೆಯಲ್ಲಿ 'ಸಾಮಾಜಿಕ ಮಾನವಶಾಸ್ತ್ರವೆಂದರೆ, ಅನಕ್ಷರಸ್ಥ ಜನಗಳ ಸಾಮಾಜಿಕ ಸಂರಚನೆಯನ್ನು ಅಧ್ಯಯನ ಮಾಡುವ ಶೈಕ್ಷಣಿಕ ಶಿಸ್ತು'[೨೬]. ಎಂದು ಅಭಿಪ್ರಾಯಿಸಿರುವುದನ್ನು ಎಂ.ಎನ್.ಶ್ರೀನಿವಾಸ್ ಉಲ್ಲೇಖಿಸುತ್ತಾರೆ. ಹೆಚ್ಚು ಕಡಿಮೆ ಇವಾನ್ಸ್ ಪ್ರಿಚಾರ್ಡ್ ಇದೇ ಬಗೆಯ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. 'ಆದಿಮ ಸಮಾಜಗಳನ್ನು ನಾವು ಈಗ ಯಾಕಾಗಿ ಅಧ್ಯಯನ ಮಾಡಬೇಕೆಂದರೆ ಅವು ರೂಪಾಂತರಗೊಳ್ಳುತ್ತಿವೆ. ವೇಗವಾಗಿ ಬದಲಾಗುತ್ತಿವೆ. ಈಗ ಅಧ್ಯಯನ ಮಾಡದಿದ್ದರೆ ಮುಂದೊಂದು ದಿನ ಅವುಗಳ ಅಧ್ಯಯನ ಸಾಧ್ಯವಾಗಲಾರದು.[೨೭]

ಇದರಿಂದ ಕೆಲವು ವಿಷಯಗಳು ನಮಗೆ ಸ್ಪಷ್ಟವಾಗಿ ಅರ್ಥವಾಗುತ್ತವೆ. ಮಾನವಶಾಸ್ತ್ರದ ಯಾವುದೇ ಅಧ್ಯಯನ ಶಾಖೆ ಇರಲಿ. ಅದು ಆದಿಮ ಮತ್ತು ಯುರೋಪಿನ ದೃಷ್ಟಿಯಲ್ಲಿ 'ಅನಕ್ಷರಸ್ಥ, ಅನಾಗರಿಕ, ನಾಗರಿಕತೆಯ ಪ್ರಾಥಮಿಕ ಹಂತದಲ್ಲಿರುವ ಸಮುದಾಯಗಳನ್ನು ಅಧ್ಯಯನಕ್ಕೊಳಪಡಿಸುತ್ತದೆ. ಕಾರಣ ಈ ಆದಿಮ ಸಮಾಜಗಳು ಮುಖ್ಯ ಪ್ರವಾಹದ ಜನಾಂಗಗಳ ಜೊತೆ ಸಂಕರಗೊಂಡು ತಮ್ಮ ಶಾರೀರಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಹರೆಗಳನ್ನು ಕಳೆದುಕೊಳ್ಳುತ್ತಿವೆ. ಈ ಕಾರಣಕ್ಕಾಗಿ ಅವುಗಳನ್ನು ತುರ್ತಾಗಿ ಅಧ್ಯಯನ ಮಾಡಬೇಕು ಎಂಬುದು ಮಾನವಶಾಸ್ತ್ರದ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ ವಿದ್ವಾಂಸರ ಧಾವಂತವಾಗಿತ್ತು.

೧೮ ನೇ ಶತಮಾನದಿಂದ ೨೦ ನೇ ಶತಮಾನದ ಆರಂಭದವರೆಗೂ ಯುರೋಪು ಅದರಲ್ಲೂ ಇಂಗ್ಲೆಡ್ ಈ ಬಗೆಯ ಅಧ್ಯಯನಗಳ ನಾಯಕತ್ವ ವಹಿಸಿತ್ತು. ಮಲಿನೋವಸ್ಕಿಯು ಇಂಗ್ಲೆಂಡಿನಲ್ಲಿ ಸಾಮಾಜಿಕ ಮಾನವಶಾಸ್ತ್ರವನ್ನು ಬೆಳೆಸಿದ್ದಲ್ಲದೆ ತನ್ನ ಫಂಕ್ಷನಲ್ ವಿಧಾನದ ಮೂಲಕ ಕ್ಷೇತ್ರಕಾರ್ಯ ಮಾಡುವ ವಿಧಾನವನ್ನು ರೂಪಿಸಿದನು. ಈ ಹಂತದಲ್ಲಿ ಜೋಮ್ಸ್ ಹಂಟ್ '೧೮೬೩ ರಲ್ಲಿ Anthropological Society of London ಎಂಬ ಸಂಸ್ಥೆಯನ್ನು ಸ್ಥಾಪಿಸಿದನು'[೨೮]. ಅಲ್ಲಿಯವರೆಗೂ ಬ್ರಿಟನ್‌ನಲ್ಲಿ ಎತ್ನಾಲಜಿಯು ಪ್ರಾಕ್ತನಶಾಸ್ತ್ರ ಮತ್ತು ಅಂಗರಚನಾಶಾಸ್ತ್ರದ ಪ್ರಭಾವದಲ್ಲಿಯೇ ಉಳಿದಿತ್ತು. 'ಇಂಗ್ಲೆಂಡಿನಲ್ಲಿ ೧೮೭೧ ರಲ್ಲಿ ಎತ್ನೋಗ್ರಫಿ ಮತ್ತು ಮಾನವಶಾಸ್ತ್ರಗಳ ಸಂಸ್ಥೆಗಳು ಒಟ್ಟಿಗೆ ಸೇರಿ Royal Anthropological Institute of Great Britan and Ireland ಎಂಬ ಸಂಸ್ಥೆ ರೂಪುಗೊಂಡಿತು'[೨೯]. ಮುಂದೆ ಯುರೋಪಿನ ಮಾನವಶಾಸ್ತ್ರದ ಅಧ್ಯಯನ ವಿಧಾನವನ್ನು ಪ್ರಭಾವಿಸಿದ್ದು ಸ್ಟ್ರಕ್ಚರಲ್ ಫಂಕ್ಷನಲಿಸಂ. ಅಲ್ಲಿಯವರೆಗೂ ಸಮಾಜಗಳನ್ನು ತೌಲನಿಕವಾಗಿ ಅಧ್ಯಯನ ಮಾಡುತ್ತಿದ್ದ ಮಾನವಶಾಸ್ತ್ರಜ್ಞರು ಸ್ಟ್ರಕ್ಚರಲ್ ಫಂಕ್ಷನಲಿಸಂ ವಿಧಾನವನ್ನು ಅನುಸರಿಸತೊಡಗಿದರು. ಸಮಾಜವನ್ನು ಒಂದು ರಚನೆ ಎಂದು ಒಪ್ಪಿಕೊಂಡ ಮೇಲೆ ಆ ರಚನೆಗೆ ಒಂದು ಸಾವಯವತೆಯು ಪ್ರಾಪ್ತವಾಗಬೇಕಾದರೆ ರಚನೆಯೊಳಗಿನ ಜನ, ರಚನೆಯ ಸಾತತ್ಯದ ಕಾರಣಕ್ಕೆ ಕೆಲವು ಕಾರ್ಯಗಳನ್ನು ನಿರ್ವಹಿಸಬೇಕಾಗುತ್ತದೆ. ಆಗಲೇ ಒಂದು ಸಮಾಜವು ಜ್ವಲಂತವಾಗಬಲ್ಲದು ಎಂಬುದು ಸ್ಟಕ್ಚರಲ್ ಫಂಕ್ಷನಲಿಸಂನ ಸ್ಥೂಲ ವಿವರಣೆ. ಸಮಾಜವೊಂದರ ಮುಂದುವರಿಕೆಗೆ ಅಥವಾ ಅಭಿವೃದ್ಧಿಗೆ ಆ ಸಮಾಜದಲ್ಲಿ ಬದುಕುತ್ತಿರುವ ಜನರಿಗೆ ಸಮಾಜದೊಂದಿಗಿನ ತಮ್ಮ ಸಂಬಂಧಗಳ ಅರಿವು ಮೂಡಬೇಕು'[೩೦]. ಆದರೆ ರೆಡ್‌ಕ್ಲಿಫ್‌ಬ್ರೌನ್ ಕಾಲದ ಹೊತ್ತಿಗೆ ಸ್ಟಕ್ಚರಲ್

ಫಂಕ್ಷನಲಿಸಂನ ವ್ಯಾಖ್ಯೆ ಬದಲಾಗಿತ್ತು. ಈತ ಲೆವಿಸ್ಟ್ರಾಸ್‌ನ ರಾಚನಿಕ ಮಾನವಶಾಸ್ತ್ರವನ್ನು ಮತ್ತು ಡರ್ಖೀಮನ ಸ್ಟ್ರಕ್ಚರಲ್ ಫಂಕ್ಷನಲಿಸಂ ಎರಡನ್ನೂ ಒಪ್ಪದ ಬೇರೆಯದೇ ಆದ ವಾದವನ್ನು ಮಂಡಿಸುತ್ತಾನೆ. ಒಟ್ಟಾರೆ ಈ ವೈಚಾರಿಕ ಧಾರೆಗಳು ಸಮಾಜಗಳು, ಅವುಗಳ ರಚನೆ ಮತ್ತು ರಚನೆಗಳೊಳಗಿನ ಸಾಮಾಜಿಕ ಸಂಬಂಧಗಳ ಕುರಿತ ಹೆಚ್ಚು ಚರ್ಚೆ ಮಾಡಿದವು. ಲೆವಿಸ್ಟ್ರಾಸ್ ಹೆಚ್ಚಾಗಿ ಆದಿಮ ಸಮಾಜಗಳ ಪುರಾಣಗಳನ್ನು ಅಧ್ಯಯನಕ್ಕೊಳಪಡಿಸಿದನು. ಈತನ ಸ್ಟ್ರಕ್ಚರಲ್ ಆಂಥ್ರೋಪಾಲಜಿಗೆ ಮಾನವಶಾಸ್ತ್ರದ ಚರಿತ್ರೆಯಲ್ಲಿ ಮಹತ್ವದ ಸ್ಥಾನಮಾನವಿದೆ.

ಎರಡನೇ ಮಹಾಯುದ್ಧದ ನಂತರ ಜಾಗತಿಕ ರಾಜಕಾರಣದ ವಿದ್ಯಮಾನಗಳಲ್ಲಿ ಅನೇಕ ಬದಲಾವಣೆಗಳು ಉಂಟಾದವು. ಮುಖ್ಯವಾಗಿ ಅಮೇರಿಕಾವು ಒಂದು ಬಲಶಾಲಿ ರಾಷ್ಟ್ರವಾಗಿ ಹೊರಹೊಮ್ಮಿತು. ಜೊತೆಗೆ ಜಾಗತಿಕ ಮಟ್ಟದಲ್ಲಿ ಬಹುತೇಕ ಮೂರನೇ ಜಗತ್ತಿನ ದೇಶಗಳ ರಾಜಕೀಯಾರ್ಥಿಕ ಸಂಗತಿಗಳನ್ನು ನಿಯಂತ್ರಿಸುವ ಯಜಮಾನಿಕೆ ಅಮೇರಿಕಾಕ್ಕೆ ಪ್ರಾಪ್ತವಾಗಿತ್ತು. ಇದರ ಜೊತೆಗೆ ಶೈಕ್ಷಣಿಕ ಕ್ಷೇತ್ರದಲ್ಲೂ ಸಹ ಅಮೇರಿಕಾದ ವೈಚಾರಿಕ ಧಾರೆಗಳು ಅನುಕರಿಸಲ್ಪಟ್ಟವು. ಎರಡನೇ ಜಾಗತಿಕ ಯುದ್ಧದ ನಂತರ ಸಾಮಾಜಿಕ ಅಧ್ಯಯನಗಳ ಗುರುತ್ವ ಕೇಂದ್ರವು ಯುರೋಪಿನಿಂದ ಅಮೇರಿಕಾಕ್ಕೆ ತನ್ನ ಸ್ಥಾನ ಬದಲಾಯಿಸಿತು. ಅಲ್ಲಿ ಸಮಾಜಶಾಸ್ತ್ರ ಮತ್ತು ಸಾಮಾಜಿಕ ವಿಜ್ಞಾನಗಳ ಅಧ್ಯಯನಗಳು ಹೆಚ್ಚಾಗಿ ಅನ್ವಯಿಕ ನೆಲೆಯಲ್ಲಿ ರೂಪಿಸಲ್ಪಟ್ಟವು. ಜೊತೆಗೆ ಸಮಾಜ ವಿಜ್ಞಾನಗಳಲ್ಲಿನ ಅನೇಕ ಶೈಕ್ಷಣಿಕ ವಿಧಾನಗಳು ಮತ್ತು ವೈಚಾರಿಕ ಧಾರೆಗಳು ಅಮೇರಿಕಾದಲ್ಲಿ ಹುಟ್ಟಿಕೊಂಡವು. ಜೊತೆಗೆ ಯುರೋಪಿನ ಸಾಮಾಜಿಕ ಅಧ್ಯಯನಗಳ ಪರಂಪರೆಗೆ ಹೋಲಿಸಿದರೆ, ಅಮೇರಿಕಾದ ಸಾಮಾಜಿಕ ಅಧ್ಯಯನಗಳು ಹೆಚ್ಚಾಗಿ ಅನ್ವಯಿಕತೆಗೆ ಮತ್ತು ನೀತಿ ನಿರೂಪಣೆಯ ಕಡೆಗೆ ಹೆಚ್ಚು ಒಲವನ್ನು ಪ್ರಕಟಿಸಿದವು. ಇದರಿಂದಾಗಿ ಅಮೇರಿಕಾದ ಭಿನ್ನ ಶೈಕ್ಷಣಿಕ ದೃಷ್ಟಿಕೋನವು ಸಾಮಾಜಿಕ ಅಧ್ಯಯನಗಳ ವಿಭಿನ್ನ ರೀತಿಯ ಬೆಳವಣಿಗೆಗೆ ಪ್ರೋತ್ಸಾಹ ನೀಡಿತು. ಜೊತೆಗೆ ಅಮೇರಿಕಾವು ಸಮಾಜ ವಿಜ್ಞಾನಗಳ ಶೈಕ್ಷಣಿಕ ಅಧ್ಯಯನಗಳ ನಾಯಕತ್ವ ವಹಿಸಿಕೊಂಡಿತು[೧೨].

ಅಮೇರಿಕಾವು ಜಪಾನಿನ ಎರಡು ನಗರಗಳ ಮೇಲೆ ಬಾಂಬ್ ಸ್ಫೋಟಿಸಿ ಲಕ್ಷಾಂತರ ಜನರನ್ನು ಕೊಂದ ಮೇಲೆ, 'ಜಗತ್ತಿನ ಶಾಂತಿ ಮತ್ತು ಕಲ್ಯಾಣಗಳ' ಕುರಿತು ದಿಢೀರೆಂದು ಯೋಚಿಸತೊಡಗಿತು. ಪ್ರಪಂಚದ ಉದ್ಧಾರಕ್ಕೆಂದೇ ವಿಶ್ವಬ್ಯಾಂಕು ಎಂಬ ಜಗತ್ತಿನ ಬಡದೇಶಗಳಿಗೆ ಸಾಲಕೊಡುವ ನೆಪದಲ್ಲಿ ಭಾರೀ ಹಣಕಾಸು ಸಂಸ್ಥೆಯೊಂದನ್ನು ಸ್ಥಾಪಿಸಿತು. ಜೊತೆಗೆ ಐ.ಎಂ.ಎಫ್. ಎಂಬ ಹಣಕಾಸು ಸಂಸ್ಥೆಯೂ ಬಡದೇಶಗಳ ಉದ್ಧಾರಕ್ಕೆಂದು ಸ್ಥಾಪಿಸಲ್ಪಟ್ಟಿತು. ನೋಡು ನೋಡುತ್ತಲೇ ಅಮೇರಿಕಾವು ಜಗತ್ತಿನ ಹಿರಿಯಣ್ಣನಾಗಿ, ಶಾಂತಿದೂತನಾಗಿ, ಎಲ್ಲಾ ದೇಶಗಳ ಅಭಿವೃದ್ಧಿ ನೀತಿಗಳ ಮಾರ್ಗದರ್ಶಕನಾಗಿ ರೂಪಗೊಂಡಿತು. ಇದರ ಜೊತೆಗೆ ಆ ದೇಶದಲ್ಲಿದ್ದ ಮತ್ತು ಸಮಾಜ ವಿಜ್ಞಾನಗಳ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ ವಿದ್ವಾಂಸರು ಜಗತ್ತಿನ ಎಲ್ಲ ದೇಶಗಳ ಶೈಕ್ಷಣಿಕ ವಲಯಗಳನ್ನು ಪ್ರಭಾವಿಸುವ ಎತ್ತರಕ್ಕೆ ಬೆಳೆದು ನಿಂತರು. ಒಂದು ಅರ್ಥದಲ್ಲಿ ಅಮೇರಿಕಾದ ವಿಶ್ವವಿದ್ಯಾಲಯಗಳು ಮೂರನೇ ಜಗತ್ತಿನ ವಿದ್ವಾಂಸರನ್ನು ಅವರವರ ದೇಶಗಳಲ್ಲಿ ಅಧ್ಯಯನ ಕೈಗೊಳ್ಳಲು ಸೂಕ್ತ ತರಬೇತಿ ಕೊಡುವ ಕಾರ್ಖಾನೆಗಳಾದವು. ಇದರ ಜೊತೆಗೆ 'ಫುಲ್‌ಬ್ರೈಟ್

ವಿಶ್ವವಿದ್ಯಾಲಯ, ವೆನ್ನರ್‌ಗ್ರೆನ್ ಫೌಂಡೇಶನ್, ರಾಕ್‌ಫೆಲ್ಲರ್ ಫೌಂಡೇಶನ್ ಮತ್ತು ಫೋರ್ಡ್ ಫೌಂಡೇಶನ್ನಂತಹ ಅಮೇರಿಕಾದ ಸಂಸ್ಥೆಗಳು ಮೂರನೇ ಜಗತ್ತಿನ ದೇಶಗಳ ಅಧ್ಯಯನಗಳಿಗೆ ಹಣಕಾಸಿನ ನೆರವು ನೀಡಲಾರಂಬಿಸಿದವು'[೨೨]. ಇವಲ್ಲದೆ ಸರಿಸುಮಾರು ೧೯೫೦ ರ ಹೊತ್ತಿಗೆ ಅಮೇರಿಕಾದ ಅನೇಕ ಉದ್ಯಮಗಳಲ್ಲಿ ಟ್ರಸ್ಟಿಗಳಾಗಿದ್ದ ಕಾರ್ನೇಗಿ, ಫೋರ್ಡ್, ಲೀ, ರ್‍ಯಾಂಡ್, ರಾಕ್‌ಫೆಲ್ಲರ್ ಮತ್ತು ಸ್ಮಿತ್ಸೋ ಸೋನಿಯಸ್ ಫೌಂಡೇಶನ್‌ಗಳು, ಹರ್ಡ್ಸ್ ಸಂಸ್ಥೆ, International Development Research Centre (canada), popularion council (Newyork) ಸಂಸ್ಥೆಗಳು ಮತ್ತು ಮಿಚಿಗನ್ ಸ್ಟೇಟ್ ವಿಶ್ವವಿದ್ಯಾಲಯ, ಚಿಕಾಗೋ ಮತ್ತು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯಗಳಲ್ಲದೆ, ಅಮೇರಿಕಾ ಸರಕಾರದ National Science foundation, ವಿಶ್ವಬ್ಯಾಂಕ್, ಐ.ಎಂ.ಎಫ್ ಮತ್ತು ಇವುಗಳ ಜೊತೆಗೆ Advanced Research projects agency of the Department of Dedence, CIA ಮುಂತಾದ ಸಂಸ್ಥೆಗಳು ಮೂರನೇ ಜಗತ್ತಿನ ದೇಶಗಳಲ್ಲಿ ಸಂಶೋಧನೆಗಳಿಗೆ ಹಣ ನೀಡತೊಡಗಿದವು[೨೩].

ಭಾರತದಂತಹ ದೇಶಗಳ ವಿದ್ವಾಂಸರು ಅಮೇರಿಕಾದ ವಿಶ್ವವಿದ್ಯಾಲಯಗಳಲ್ಲಿ ತರಬೇತಿ ಪಡೆದು ಬಂದು ತಮ್ಮ ದೇಶಗಳಿಗೆ ಬಂದು ಅಧ್ಯಯನಗಳಲ್ಲಿ ನಿರತರಾದರು. ಒಂದು ಅರ್ಥದಲ್ಲಿ ಅಮೇರಿಕಾದ ನಿಯೋಗಿಗಳ ರೀತಿಯಲ್ಲಿ ತಮ್ಮ ದೇಶದಲ್ಲಿ ಇವರು ಕಾರ್ಯೋನ್ಮುಖರಾದರು. ೧೯೬೦ ರ ವರೆಗೂ ಅಮೇರಿಕಾವು ಜಗತ್ತಿನ ಎಲ್ಲ ದೇಶಗಳನ್ನು ಈ ಬಗೆಯಲ್ಲಿ ನಿರ್ಣಾಯಕವಾಗಿ ಪ್ರಭಾವಿಸಿತು. ಆದರೆ ಯಾವತ್ತು ಅದು ವಿಯಟ್ನಾಂ ಮೇಲೆ ದಾಳಿ ಮಾಡಿ ತನ್ನ ನಿಜರೂಪ ತೋರಿಸಿತೋ, ಅನಂತರ ಯುರೋಪಿನ ಬಡದೇಶಗಳು ಮತ್ತು ಮೂರನೇ ಜಗತ್ತಿನ ಕೆಲವು ಅಭಿವೃದ್ಧಿಶೀಲ ದೇಶಗಳು ಅಮೇರಿಕಾದ ಹುನ್ನಾರಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದವು. ಆ ನಂತರ ಈ ರಾಷ್ಟ್ರಗಳು ಅಮೇರಿಕಾವನ್ನು ರಾಜಕೀಯ ಕಾರಣಗಳಿಗಾಗಿ ಮಾತ್ರವಲ್ಲ ಶೈಕ್ಷಣಿಕವಾಗಿಯೂ ಅನುಮಾನಿಸಲು ಪ್ರಾರಂಭಿಸಿದವು. ಇದೇ ಹೊತ್ತಿಗೆ ಯುರೋಪಿನಲ್ಲಿ ಮಾರ್ಕ್ಸ್‌ವಾದಿಗಳು ಸಾಮಾಜಿಕ ಅಧ್ಯಯನಗಳ ಸಂದರ್ಭದಲ್ಲಿ ಮಾರ್ಕ್ಸ್‌ನ ಚಾರಿತ್ರಿಕ ಭೌತವಾದವನ್ನು ಬಳಸತೊಡಗಿದರು. ಅದರಲ್ಲೂ ಗ್ರಾಂಸ್ಕಿಯ 'ಸೆಲೆಕ್ಷನ್ ಫ್ರಮ್ ದಿ ಪ್ರಿಸನ್ ನೋಟ್‌ಬುಕ್' ಪುಸ್ತಕ ಹೊರಬಂದ ಮೇಲೆ ಯುರೋಪಿನ ಸಾಮಾಜಿಕ ಅಧ್ಯಯನಗಳಲ್ಲಿ ಹಲವು ಬದಲಾವಣೆಗಳು ಕಂಡು ಬಂದವು. ಮುಂದೆ ಸಬಾಲ್ಟರ್ನ್ ಅಧ್ಯಯನಗಳಲ್ಲಿ ಅಂತೋನಿ ಗ್ರಾಂಸ್ಕಿಯ ಅನೇಕ ಪರಿಭಾಷೆಗಳನ್ನು ಬಳಸಿಕೊಳ್ಳಲಾಯಿತು. ೧೯೫೭ ರಲ್ಲಿ ಪ್ರಕಟವಾದ ಗ್ರಾಂಸ್ಕಿಯ ಈ ಪುಸ್ತಕ ಪುನರುಜ್ಜೀವನ ಕಾಲಘಟ್ಟದ ನಂತರ ಯುರೋಪಿನ ಸಮಾಜದಲ್ಲಿ ಸಂಭವಿಸಿದ ಸಾಮಾಜಿಕಾರ್ಥಿಕ ಮತ್ತು ರಾಜಕೀಯ ಏಳುಬೀಳುಗಳನ್ನು ಮಾರ್ಕ್ಸ್‌ವಾದಿ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತದೆ. ಸದರಿ ಪುಸ್ತಕ ಪ್ರಾರಂಭವಾಗುವುದೇ ಬುದ್ಧಿಜೀವಿಗಳ ಕುರಿತ ವಿವರಣೆಯ ಮೂಲಕ. ಗ್ರಾಂಸ್ಕಿ ಬದುಕಿದ್ದ ೧೯೨೫ ಮತ್ತು ೩೦ ಕಾಲಘಟ್ಟದಲ್ಲಿ ಯುರೋಪಿನ ಬುದ್ಧಿಜೀವಿ ವಲಯವನ್ನು ಗ್ರಾಂಸ್ಕಿ ಕಟುವಾಗಿ ಟೀಕಿಸುತ್ತಾನೆ. ಬಂಡವಾಳಶಾಹಿಗಳಿಗೆ ದುಡಿವ ವರ್ಗಗಳನ್ನು ಶೋಷಿಸುವ ವಿವಿಧ ಆಯಾಮಗಳನ್ನು ಕಲ್ಪಿಸಿ ಕೊಡುವ ಕಾರ್ಪೋರೇಟ್ ಬುದ್ಧಿ ಜೀವಿಗಳನ್ನು ಗ್ರಾಂಸ್ಕಿಂ ಟೀಕಿಸುತ್ತಾನೆ. ಒಂದು ನಿರ್ದಿಷ್ಟ ವರ್ಗದ ಬುದ್ಧಿ

ಜೀವಿಗಳು ಪ್ರಭುತ್ವಕ್ಕೆ ನೇರವಾಗಿ ತಮ್ಮ ಸೇವೆಯನ್ನು ಮೀಸಲಾಗಿರಿಸುತ್ತಾರೆ. ಅದರಲ್ಲೂ ನಾಗರಿಕ ಮತ್ತು ಮಿಲಿಟರಿ ವ್ಯವಸ್ಥೆಗೆ ಇವರು ಅಪಾರವಾಗಿ ಶ್ರಮಿಸುತ್ತಾರೆ. ಜೊತೆಗೆ ಇವರು ಈವತ್ತಿಗೂ ಆಳುವ ವರ್ಗಗಳ ಜೊತೆ ನಿಕಟ ಸಂಬಂಧವನ್ನು ಹೊಂದಿದ್ದಾರೆ'[೪]. ಎಂದು ಗ್ರಾಂಸ್ಕಿ ಬುದ್ಧಿಜೀವಿಗಳನ್ನು ವಿವರಿಸುತ್ತಾನೆ.

ತನ್ನ ಬರವಣಿಗೆಯಲ್ಲಿ ಗ್ರಾಂಸ್ಕಿಯು ಯುರೋಪಿನ ಒಟ್ಟಾರೆಯ ಸಾಮಾಜಿಕ ಮತ್ತು ರಾಜಕೀಯಾರ್ಥಿಕ ಕ್ಷೇತ್ರದಲ್ಲಿ ಆದ ವಿಷಮ ಬೆಳವಣಿಗೆಗಳನ್ನು ವಿವರಿಸುತ್ತಾನೆ. ಊಳಿಗಮಾನ್ಯ ವ್ಯವಸ್ಥೆಯಿಂದ ಬಂಡವಾಳಶಾಹಿ ವ್ಯವಸ್ಥೆಯು ಕಡೆಗೆ ನಡೆದು ಹೋದ ಯುರೋಪಿನ ಸಮಾಜವು ಹೇಗೆ ಒಂದು ಕಾಲದ ಪಾರಂಪರಿಕ ಯಜಮಾನಿಕೆಯಿಂದ ಆಧುನಿಕ ಬಂಡವಾಳಶಾಹಿ ಯಜಮಾನಿಕೆಯ ಕಡೆಗೆ ನಡೆದು ಹೋಯಿತೆಂಬುದನ್ನು ವಿವರಿಸುತ್ತಾನೆ. ಜೊತೆಗೆ ಯುರೋಪಿನ ಪಾರಂಪರಿಕ ಉದಾರವಾದಿ ಸಾಮಾಜಿಕ ಚಿಂತನೆಗಳಿಗೆ ಕಾರಣರಾದ ಮೆಕವಲ್ಲಿ ತರಹದ ಚಿಂತಕರನ್ನು ಗ್ರಾಂಸ್ಕಿ ನಿಕಷಕ್ಕೆ ಒಡ್ಡುತ್ತಾನೆ. ಗ್ರಾಂಸ್ಕಿಯ ಈ ಪುಸ್ತಕ ೧೯೫೭ ರಲ್ಲಿ ಯುರೋಪಲ್ಲಿ ಪ್ರಕಟವಾದ ನಂತರ ಅಲ್ಲಿ ಶೈಕ್ಷಣಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿ ಹಲವು ಚಿಂತನೆಗಳು ಈ ಪುಸ್ತಕವನ್ನು ಕೇಂದ್ರವಾಗಿಟ್ಟು ಪ್ರಾರಂಭವಾದವು.

ಭಾರತದಲ್ಲಿ ೧೯೮೦ ರ ದಶಕದಲ್ಲಿ ಪ್ರಾರಂಭವಾದ ಸಬಾಲ್ಟರ್ನ್ ಅಧ್ಯಯನಗಳು ಗ್ರಾಂಸ್ಕಿಯ ಚಿಂತನೆಗಳಿಂದ ಪ್ರಭಾವಿತವಾಗಿದ್ದವು. ಗ್ರಾಂಸ್ಕಿಯು ಹೆಚ್ಚು ಕಡಿಮೆ ಭಾರತದ ವಸಾಹತೋತ್ತರ ಚಿಂತನೆಯನ್ನು ಬದಲಿಸಿದನು. ರಂಜಿತ್ ಗುಹಾ ನೇತೃತ್ವದಲ್ಲಿ ಪ್ರಕಟವಾದ ಸಬಾಲ್ಟರ್ನ್ ಅಧ್ಯಯನದ ಮೊದಲ ಸಂಪುಟವು ಭಾರತದಲ್ಲಿ ಮೊದಲ ಬಾರಿಗೆ ಮಾರ್ಕ್ಸ್‌ವಾದಿ ಮಾನವಶಾಸ್ತ್ರೀಯ ಅಧ್ಯಯನಗಳಿಗೆ ಅಡಿಪಾಯ ಹಾಕಿತು.

ಭಾರತದಲ್ಲಿ ನಡೆದ ಸಮುದಾಯ ಅಧ್ಯಯನಗಳು

ಭಾರತದಲ್ಲಿ ಕಂಪನಿ ಆಡಳಿತದ ಸಂದರ್ಭದಲ್ಲಿ ನಡೆದ ಅಧ್ಯಯನಗಳು ಶುದ್ಧಾಂಗವಾಗಿ ಸಮುದಾಯಗಳನ್ನು ಕೇಂದ್ರವಾಗಿಟ್ಟು ಕೊಂಡವುಗಳಾಗಿರಲಿಲ್ಲ. ಪ್ಲಾಸಿ ಕದನದ ನಂತರ ಭಾರತದ ಸಮೃದ್ಧ ಮತ್ತ ಬಹುಮುಖ್ಯ ಪ್ರದೇಶವಾಗಿದ್ದ ಬಂಗಾಳ ಪ್ರಾಂತ್ಯವು ಕಂಪನಿ ನೌಕರರ ವಶಕ್ಕೆ ಹೋದಾಗ, ಆ ನೌಕರರಿಗೆ ಅಷ್ಟು ದೊಡ್ಡ ಪ್ರದೇಶವನ್ನು ಆಡಳಿತಾತ್ಮಕವಾಗಿ ನಿಯಂತ್ರಿಸುವ ಯಾವ ಕೌಶಲವೂ ಇರಲಿಲ್ಲ. ಆದರೆ ತಮ್ಮ ಶಿಸ್ತು ಬದ್ಧ ಸೈನ್ಯ ಮತ್ತು ಕಟಿಬದ್ಧ ಅಧಿಕಾರಿಗಳಿಂದ ಬಂಗಾಳ ಪ್ರಾಂತ್ಯವನ್ನು ಸುಧಾರಿಸಲು ಕ್ಲೈವ್ ಮತ್ತು ಸಂಗಡಿಗರು ಪ್ರಯತ್ನಿಸಿದರು. ಆದರೆ ಮಹತ್ವಾಕಾಂಕ್ಷೆಯ ಕಂಪನಿ ನೌಕರರು ಸಾಮ್ರಾಜ್ಯಶಾಹಿ ದಾಹದಿಂದಲೇ ಭಾರತಕ್ಕೆ ಬಂದಿದ್ದರು. ಅವರು ನಿರಂತರವಾಗಿ ಭಾರತವನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳಬೇಕಿತ್ತು. ಒಂದು ಮಾರುಕಟ್ಟೆಯಾಗಿ ಭಾರತ ನಿರಂತರವಾಗಿ ಅವರ ಹಿಡಿತದಲ್ಲಿರಬೇಕಿತ್ತು. ಅದಕ್ಕಾಗಿ ವಿವಿಧ ಕ್ಷೇತ್ರಗಳಲ್ಲಿನ ಜನರ ನೆರವನ್ನು ಕಂಪನಿ ಆಡಳಿತ ಪಡೆದುಕೊಂಡಿತು. ಕಂಪನಿ ಆಡಳಿತಕ್ಕೆ ಮುಖ್ಯವಾಗಿ ಭಾರತದ ಜನರನ್ನು ಅರ್ಥ ಮಾಡಿಕೊಳ್ಳುವ ಮತ್ತು ತಮ್ಮ ಆಡಳಿತವನ್ನು ನಿರಂತರಗೊಳಿಸುವ ಮಹತ್ವಾಕಾಂಕ್ಷೆ ಇದ್ದ ಕಾರಣ ಅವರು ಭಾರತದ ಸಮಾಜವನ್ನು ಅಧ್ಯಯನ ಮಾಡಲು ವಿವಿಧ ಕ್ಷೇತ್ರಗಳ ಜನರನ್ನು ನೇಮಿಸಿದರು. ಅವರಲ್ಲಿ ಮುಖ್ಯವಾಗಿ

೧. ಓರಿಯಂಟಲಿಸ್ಟರು

೨. ಕಂಪನಿ ಅಧಿಕಾರಿಗಳು

೩. ಮಿಶನರಿಗಳು. ಭಾರತದಲ್ಲಿ ಸಾಮಾಜಿಕ ಅಧ್ಯಯನಗಳನ್ನು ಕೈಗೊಂಡರು.

ಕಂಪನಿ ಆಡಳಿತಕ್ಕೆ ಭಾರತದ ವಿವಿಧ ಭಾಷೆಗಳನ್ನು ತುರ್ತಾಗಿ ಅರ್ಥಮಾಡಿಕೊಳ್ಳುವ ಅಗತ್ಯ ತಲೆದೋರಿತು. ಭಾರತದ ಸಮಾಜದ ಸಂರಚನೆಯನ್ನು ಅರ್ಥ ಮಾಡಿಕೊಳ್ಳುವುದು ಬ್ರಿಟೀಷ್ ಆಡಳಿತಕ್ಕೆ ಅನಿವಾರ್ಯವಾಗಿತ್ತು. ಕಂಪನಿ ಆಡಳಿತದ ಅಧಿಕಾರಿಗಳು ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾದರು. ಅವರಿಗೆ ಆಡಳಿತವನ್ನು ವಿಸ್ತರಿಸುವ ಮತ್ತು ಮಿಶನರಿ ಚಟುವಟಿಕೆಗಳನ್ನು ತೀವ್ರಗೊಳಿಸುವ ಉದ್ದೇಶಗಳಿದ್ದವು. ಈ ಕಾರಣದಿಂದ ಇಂಡಿಯಾದ ಸಮಾಜವನ್ನು ಅಧ್ಯಯನ ಮಾಡುವ ಕೆಲಸ ೧೭೬೦ ರ ನಂತರ ಹೆಚ್ಚಾಗಿ ನಡೆಯತೊಡಗಿದವು. ೧೮ ನೇ ಶತಮಾನದ ಕೊನೆಯ ಹೊತ್ತಿಗೆ ಮೇಲೆ ಉಲ್ಲೇಖಿಸಲ್ಪಟ್ಟ ಮೂರು ಕ್ಷೇತ್ರದ ಅಧ್ಯಯನಕಾರರು ಭಾರತದ ಸಮಾಜವನ್ನು ಅಧ್ಯಯನ ಮಾಡಲು ತೊಡಗಿದರು. ೧.ಓರಿಯಂಟಲಿಸ್ಟರು ೨.ಅಧಿಕಾರಿಗಳು ೩.ಮಿಶನರಿಗಳು ಈ ಮೂರೂ ಗುಂಪಿನ ಜನರಿಗೆ ಅವರದೇ ಕ್ಷೇತ್ರದ ವಿಭಿನ್ನ ಬಗೆಯ ಒತ್ತಡಗಳಿಗೆ ಅನುಗುಣವಾಗಿ ಭಾರತದ ಸಮಾಜ ಅವರಿಗೆ ಕಾಣಿಸಿತು'[೩೯]. ಓರಿಯಂಟಲಿಸ್ಟರು ಭಾರತದ ಪ್ರಾಚೀನ ಪಠ್ಯಗಳನ್ನು ಅಧ್ಯಯನ ಮಾಡಲು ತೊಡಗಿದರೆ, ಕಂಪನಿ ಆಡಳಿತದ ಅಧಿಕಾರಿಗಳು ಭಾರತದ ಸ್ಥಳೀಯ ಕಾನೂನುಗಳಿಗೆ ಸಂಬಂಧಿಸಿದ ದೇಶೀ ಕೃತಿಗಳನ್ನು ಮತ್ತು ಹಳ್ಳಿಗಳ ಅಧ್ಯಯನಗಳನ್ನು ಮಾಡಲು ಪ್ರಾರಂಭಿಸಿದರು. ಮಿಶನರಿಗಳು ಮಾತ್ರ ಭಾರತದ ಸಮಾಜದ ಅಂಚುಗಳನ್ನು ತಲುಪಿದರು. ಈ ದೇಶದ ಕೆಳಜಾತಿ ಮತ್ತು ಆದಿವಾಸಿಗಳನ್ನು ಅಧ್ಯಯನ ಮಾಡಲು ತೊಡಗಿದರು. ೧೭೮೪ ರಲ್ಲಿ Asiatic society of Bengal ಪ್ರಾರಂಭವಾಗುವುದಕ್ಕೂ ಮುನ್ನ 'ಅಲೆಗ್ಸಾಂಡರ್ ಡೋವ್ ಎಂಬ ಕಂಪನಿ ಆಡಳಿತದ ಮಿಲಿಟರಿ ಅಧಿಕಾರಿಯು ಪರ್ಶಿಯಾ ಭಾಷೆಯಲ್ಲಿದ್ದ ತಾರಿಖ್-ಇ-ಪಿರಿಷ್ತಾ ಎಂಬ ಭಾರತದ ಚರಿತ್ರೆಯ ಪುಸ್ತಕವನ್ನು ೧೭೬೮ ರ ಹೊತ್ತಿಗೆ The history of Hindustan ಎಂಬ ಶೀರ್ಷಿಕೆ ಅಡಿಯಲ್ಲಿ ಪ್ರಕಟಿಸುತ್ತಾನೆ [೪೦]. ೧೭೬೨ ರಲ್ಲಿಯೇ ಭಾರತಕ್ಕೆ ಬಂದ ಫ್ರಾನ್ಸಿಸ್ ಬುಕಾನಿನ್ ಮೊದಲು ಬಂಗಾಳದ ಸಮಾಜವನ್ನು ಅಧ್ಯಯನ ಮಾಡಲು ತೊಡಗುತ್ತಾನೆ. ಇನ್ನು 'ಕೆಲವು ಬ್ರಿಟೀಷ್ ಅಧಿಕಾರಿಗಳು ಭಾರತದ ಸಮಾಜದ ಅಧ್ಯಯನಗಳ ಭಾಗವಾಗಿ ಗ್ರಾಮಗಳನ್ನು ಅಧ್ಯಯನ ಮಾಡಲು ಪ್ರಾರಂಭಿಸಿದರು. ಮಿಲಿಟರಿ ಅಧಿಕಾರಿಯಾಗಿದ್ದ ವಿಲಿಯಂ ಟೆನ್ನಾಂಟ್ ಎರಡು ಸಂಪುಟಗಳಲ್ಲಿ 'ಇಂಡಿಯನ್ ರಿಕ್ರಿಯೇಷನ್ಸ್ ಕನ್‌ಸಿಸ್ಟಿಂಗ್ ಚೀಫ್ಲಿ ಆಫ್ ಸ್ಟ್ರಕ್ಚರ್ ಆನ್ ದಿ ಡೊಮೆಸ್ಟಿಕ್ ಆಂಡ್ ರೂರಲ್ ಎಕಾನಮಿ ಆಫ್ ದಿ ಮಹಮಡನ್ಸ ಆಂಡ್ ಹಿಂದೂಸ್' ಎಂಬ ಪುಸ್ತಕವನ್ನು ೧೮೦೪ ರಲ್ಲಿ ಪ್ರಕಟಿಸಿದನು[೪೧].

ಈ ಹಂತದಲ್ಲಿ ಕಂಪನಿ ಆಡಳಿತವು ಬೃಹತ್ ಪ್ರಮಾಣದಲ್ಲಿ ಭೂಕಂದಾಯವನ್ನು ವಸೂಲಿ ಮಾಡಬೇಕಿತ್ತು. ೧೮ ನೇ ಶತಮಾನದಲ್ಲಿ ಕಂಪನಿ ಆಡಳಿತಕ್ಕೆ ಬಾರೀ ಮೊತ್ತವನ್ನು ತೆರುವ ತಾಕತ್ತು ಇದ್ದುದು ಭಾರತದ ಕೃಷಿ ವ್ಯವಸ್ಥೆಗೆ. ಕೃಷಿಯು ಹಳ್ಳಿಗಳಲ್ಲಿ ಜೀವಂತವಾಗಿತ್ತು. ಹಳ್ಳಿಗಳು ತಮ್ಮದೇ ಆದ ಸಾಮಾಜಿಕ ಮತ್ತು ಆರ್ಥಿಕ ಸಂಬಂಧಗಳನ್ನು ಜೀವಂತವಾಗಿರಿಸಿಕೊಂಡಿದ್ದವು. ಇಂತಹ ಸಂದರ್ಭದಲ್ಲಿ ಭಾರತದ ಹಳ್ಳಿಗಳ

ಅಧ್ಯಯನವೆಂದರೆ, ಕೃಷಿಯ ಕುರಿತ ಅಧ್ಯಯನ, ಭೂ ಹಂಚಿಕೆಯ ಕುರಿತ ಅಧ್ಯಯನ ಮತ್ತು ಹಳ್ಳಿಗಳ ಅಧ್ಯಯನವೆಂದರೆ ಹಳ್ಳಿಗಳ ಒಟ್ಟಾರೆ ಉತ್ಪಾದನಾ ಸಂಬಂಧಗಳ ಅಧ್ಯಯನ, ಜೊತೆಗೆ ಓರಿಯಂಟಲಿಸ್ಟರು ಪರಂಪರೆಯ ಭಾರತವನ್ನು ಅರ್ಥೈಸಲು ಹಳ್ಳಿಗಳ ಅಧ್ಯಯನ ಅವಶ್ಯ ಎಂದರು. ಅವರು ‘ಇಂಡಿಯಾ ಹಳ್ಳಿಗಳಲ್ಲಿ ಜೀವಂತವಾಗಿದೆ. ನಿಜವಾದ, ಪಾರಂಪರಿಕ ಇಂಡಿಯಾವು ಹಳ್ಳಿಗಳಲ್ಲಿ ಅಸ್ತಿತ್ವದಲ್ಲಿದೆ. ಹಳ್ಳಿಗಳಲ್ಲಿರುವ ಜಾತಿಯು ಭಾರತದ ಸಾಮಾಜಿಕ ಸಂರಚನೆಯ ಕೇಂದ್ರ ಬಿಂದು. ಜಾತಿಯು ಜನರ ನಡವಳಿಕೆ ಮತ್ತು ಜೀವನ ಮೌಲ್ಯಗಳನ್ನು ನಿಯಂತ್ರಿಸುತ್ತದೆ’[೩೮]. ಎಂಬುದು ಓರಿಯಂಟಲಿಸ್ಟರ ನಂಬಿಕೆಯಾಗಿತ್ತು. ಭಾರತದ ಜಾತಿಗಳ ಅಸ್ತಿತ್ವವು ಅವುಗಳ ಉತ್ಪಾದನಾ ಸಂಬಂಧಗಳಲ್ಲಿದೆ ಎಂಬುದನ್ನು ಅರಿತಿದ್ದ ಕಂಪನಿ ಆಡಳಿತವು ಭಾರತದ ಜಾತಿ ಸಮುದಾಯಗಳನ್ನೂ ಅಧ್ಯಯನಕ್ಕೊಳಪಡಿಸಿತು.

ಪ್ರಸ್ತುತ ಅಧ್ಯಾಯದಲ್ಲಿ ನಾನು ಕಂಪನಿ ಆಡಳಿತದ ಸಂದರ್ಭದಲ್ಲಿ ನಡೆದ ಪ್ರಮುಖ ಕ್ಷೇತ್ರದಲ್ಲಿನ ಅಧ್ಯಯನಗಳನ್ನು ವಿವರಿಸಲು ಯತ್ನಿಸಿದ್ದೇನೆ. ಕಂಪನಿ ಆಡಳಿತದ ಸಂದರ್ಭದಲ್ಲಿ ನಡೆದ ಎಲ್ಲ ಅಧ್ಯಯನಗಳನ್ನು ಪ್ರಸ್ತಾಪಿಸದೆ ಪ್ರಮುಖ ಅಧ್ಯಯನಗಳನ್ನು ಮಾತ್ರ ಈ ಅಧ್ಯಾಯದಲ್ಲಿ ಉಲ್ಲೇಖಿಸಿದ್ದೇನೆ. ಮುಖ್ಯವಾಗಿ ನನ್ನ ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗುವ ನಿಟ್ಟಿನಲ್ಲಿ ಕಂಪನಿ ಆಡಳಿತದ ಸಂದರ್ಭದಲ್ಲಿ ನಡೆದ ೧.ಬುಡಕಟ್ಟುಗಳ ಅಧ್ಯಯನ, ೨.ಜಾತಿ ಸಮುದಾಯಗಳ ಅಧ್ಯಯನ, ೩. ಅಲೆಮಾರಿಗಳ ಅಧ್ಯಯನ, ೪.ಗ್ರಾಮಗಳ ಮತ್ತು ಭೂ ಹಂಚಿಕೆಯ ಕುರಿತ ಅಧ್ಯಯನಗಳನ್ನು ವಿವರಿಸಲು ಈ ಅಧ್ಯಾಯದಲ್ಲಿ ಪ್ರಯತ್ನಿಸಿದ್ದೇನೆ. ಈ ನಾಲ್ಕು ಕ್ಷೇತ್ರದಲ್ಲಿನ ಅಧ್ಯಯನಗಳು ಭಾರತದ ಸಾಮಾಜಿಕ ಸಂರಚನೆಯನ್ನು ಕುರಿತು ನಡೆದ ಕಾರಣಕ್ಕಾಗಿ ಈ ಅಧ್ಯಯನಗಳನ್ನು ಸಾಮಾಜಿಕ ಅಧ್ಯಯನಗಳೆಂದು ಈ ಅಧ್ಯಾಯದಲ್ಲಿ ಸಂಬೋಧಿಸಲಾಗಿದೆ.

ಬುಡಕಟ್ಟುಗಳ ಅಧ್ಯಯನ

ಯುರೋಪಿನ ಮಾವನಶಾಸ್ತ್ರೀಯ ಅಧ್ಯಯನ ವಿಧಾನದ ಮೂಲಕ ಭಾರತದಲ್ಲಿ ಬುಡಕಟ್ಟುಗಳನ್ನು ಅಧ್ಯಯನ ಮಾಡಲಾಯಿತು. ಮಾನವಶಾಸ್ತ್ರವೆಂಬ ಶೈಕ್ಷಣಿಕ ಶಿಸ್ತು ಬಡುಕಟ್ಟುಗಳನ್ನು ಮತ್ತು ಆದಿಮ ಸಮಾಜಗಳನ್ನು ಅಧ್ಯಯನ ಮಾಡಲೆಂದೇ ಹುಟ್ಟಿದ ಶಾಸ್ತ್ರಶಿಸ್ತಾಗಿ ಇಂಡಿಯಾದಲ್ಲಿ ರೂಪಾಂತರಗೊಂಡಿತು. ಇದನ್ನು ಮೊದಲು Ethnology, Ethnography ಎಂಬ ಹೆಸರಿನಲ್ಲಿ ಅಧ್ಯಯನಕಾರರು ಬಳಸುತ್ತಿದ್ದರು. ಬ್ರಿಟೀಷರು ಬರುವ ಮೊದಲು ಈ Tribe ಅಥವಾ ಕನ್ನಡದಲ್ಲಿ ‘ಬುಡಕಟ್ಟು’ ಎಂಬ ಪದ ಬಳಕೆ ಇತ್ತು ಎಂದು ಕಂಡು ಬರುವುದಿಲ್ಲ. ಈ ಕಾರಣದಿಂದ Tribe ಎಂಬ ಪದವನ್ನು ಬ್ರಿಟೀಷರೇ ತಮ್ಮ ಅಧ್ಯಯನದ ಸಂದರ್ಭದಲ್ಲಿ ಬಳಸಿದರು. ಇದಕ್ಕೂ ಮುನ್ನ Ethnic ಎಂಬ ಪದವನ್ನು ಬ್ರಿಟೀಷ್ ಅಧ್ಯಯನಕಾರರು ತಮ್ಮ ಅಧ್ಯಯನದ ಸಂದರ್ಭದಲ್ಲಿ ಬಳಸುತ್ತಿದ್ದರು. ‘Ethnic’ ಎಂಬ ಪದವನ್ನು Race ಎಂಬ ಪದಕ್ಕೆ, ಇಲ್ಲವೆ Uncivilized ಎಂಬ ಪದಕ್ಕೆ ಪರ್ಯಾಯವಾಗಿ ಬಳಸಲಾಗುತ್ತಿತ್ತು. Ethnic ಅಂದರೆ ‘ಜನಾಂಗಿಕ’, ನಾಗರಿಕವಲ್ಲದ ಅಥವಾ ಮಾನವ ವಿಕಾಸದ ಚರಿತ್ರೆಯಲ್ಲಿ ಸ್ಥಗಿತಗೊಂಡ ಹಂತದ ಜನಸಮುದಾಯವನ್ನು ಸೂಚಿಸಲು ಈ ಪದವನ್ನು ಬಳಸಲಾಗುತ್ತಿತ್ತು. ಯುರೋಪಿನಿಂದ ಆಚೆಗಿರುವ ಮತ್ತು ವಸಾಹತು

ರಾಷ್ಟ್ರಗಳಲ್ಲಿನ ಜನರು ಇನ್ನೂ Ethnic ಅಥವಾ ಜನಾಂಗಿಕ ಹಂತದಲ್ಲಿದ್ದಾರೆಂದು ಭಾವಿಸಿದ ಯುರೋಪಿನ ವಿದ್ವಾಂಸರು ಈ ಜನರನ್ನು ಸಂಭೋಧಿಸುವಾಗ Ethnic ಎಂಬ ಪದವನ್ನು ಬಳಸಿದರು. ಹಾಗೆ ನೋಡಿದರೆ Ethnic ಎಂಬ ಪದವು ಯುರೋಪಿನ 'ನಾಗರಿಕ' ಗಣ್ಯತೆಯಿಂದ ಹುಟ್ಟಿದ ಪದವಾಗಿದೆ. ಅದಕ್ಕೇ ಇದನ್ನು ಮುಂದೆ Ethnography ಮತ್ತು Ethnology ಎಂಬ ಹೆಸರಿನ ಮೂಲಕ ಒಂದು ಜ್ಞಾನಶಿಸ್ತನ್ನಾಗಿ ರೂಪಿಸಲು ಯತ್ನಿಸಲಾಯಿತು. ಇದು ಮುಂದೆ Anthropology ಎಂಬ ಶೈಕ್ಷಣಿಕ ಶಿಸ್ತಿನಲ್ಲಿ ಹೆಚ್ಚೂ ಕಡಿಮೆ ಸೇರಿ ಹೋಯಿತು. ಆದರೂ ಇಂದಿಗೂ ಈ ಪದ ಬಳಕೆ ನಿಂತಿಲ್ಲ[೩೯].

ಮುಂದೆ 'Tribe' ಎಂಬ ಪದವು ಸ್ವತಂತ್ರ ಭಾರತದಲ್ಲಿ ರಾಜಕೀಯ ಮತ್ತು ಆಡಳಿತಾತ್ಮಕ ಪರಿಭಾಷೆಯಾಗಿ ರೂಪಾಂತರಗೊಂಡಿತು[೪೦]. ಆದರೆ ಅಲ್ಲಿಯವರೆಗೂ Ethnic ಮತ್ತು Tribe ಎಂಬ ಪದಗಳು ಯುರೋಪ್ ಮತ್ತು ಯುರೋಪೇತರ ಜನಗಳನ್ನು ವಿಂಗಡಿಸುವ ಪದಗಳಾಗಿಯೇ ಬಳಕೆಯಲ್ಲಿದ್ದವು. ಭಾರತದಲ್ಲಿ ೧೭೮೪ ರಲ್ಲಿ ವಿಲಿಯಂ ಜೋನ್ಸ್‌ರ ನಾಯಕತ್ವದಲ್ಲಿ ಪ್ರಾರಂಭವಾದ Asiatic Society of Bengal ಎಂಬ ಸಂಸ್ಥೆಯ ಜೊತೆ ಜೊತೆಯಲ್ಲಿ ಭಾರತದಲ್ಲಿ ಸಮುದಾಯ ಅಧ್ಯಯನಗಳು ಪ್ರಾರಂಭವಾದವು. ವಿಲಿಯಂ ಜೋನ್ಸ್‌ರ ಸದರಿ ಸಂಸ್ಥೆಯು ಇಂಡಾಲಜಿಯ ಅಧ್ಯಯನಗಳಲ್ಲಿ ತೊಡಗಿಕೊಂಡರೂ ಸಹ ಈ ಅಧ್ಯಯನಗಳ ಜೊತೆ ಜೊತೆಯಲ್ಲಿಯೇ ಸಮುದಾಯ ಅಧ್ಯಯನಗಳು ಪ್ರಾರಂಭವಾದವು. ಹಾಗೆ ನೋಡಿದರೆ ಭಾರತದಲ್ಲಿ ಕಂಪನಿ ಆಡಳಿತದ ಸಂದರ್ಭದಲ್ಲಿ ನಡೆದ ಸಾಮಾಜಿಕ ಅಧ್ಯಯನಗಳು ಹೆಚ್ಚಿನ ಪಾಲು ಬುಡಕಟ್ಟುಗಳ ಅಧ್ಯಯನಕ್ಕಾಗಿಯೇ ಮೀಸಲಾಗಿವೆ. ವಸಾಹತು ಆಡಳಿತದ ಸಂದರ್ಭದಲ್ಲಿ ನಡೆದ ಅಧ್ಯಯನಗಳು ಹಲವು ಸಂಪುಟಗಳಲ್ಲಿ ಪ್ರಕಟವಾಗಿರುವ ರೀತಿಯನ್ನು ಗಮನಿಸಿದರೆ ಸಾಕು ಅಂದಿನ ಅಧ್ಯಯನಗಳು ಬುಡಕಟ್ಟುಗಳನ್ನು ಯಾವ ಬಗೆಯ ತೀವ್ರತೆಯಲ್ಲಿ ಪರಿಗಣಿಸಿದ್ದವೆಂದು ಗೊತ್ತಾಗುತ್ತದೆ. ಈ ಅಧ್ಯಯನಗಳನ್ನು ವಿದ್ಯಾರ್ಥಿ ಮೂರು ಹಂತಗಳಲ್ಲಿ ಗುರುತಿಸುತ್ತಾರೆ.

೧. ರೂಪುಗೊಳ್ಳುವ ಆರಂಭದ ಕಾಲ ೧೭೮೪-೧೯೧೯

೨. ರಚನಾತ್ಮಕ ಹಂತ ೧೯೨೦-೧೯೪೯

೩. ವಿಶ್ಲೇಷಣೆಯ ಹಂತ ೧೯೫೦ ನಂತರದ ಕಾಲಘಟ್ಟ[೪೧].

ಈ ಹಂತಗಳನ್ನು ಮಜುಂದಾರ್ ಮುಂತಾದ ಮಾನವಶಾಸ್ತ್ರಜ್ಞರು ಬೇರೆ ಬೇರೆ ರೀತಿಯಲ್ಲಿ ವಿಂಗಡಿಸುತ್ತಾರೆ. ಆದರೆ ತಾತ್ವಿಕವಾಗಿ ಈ ಅಧ್ಯಯನಗಳ ಸ್ವರೂಪವು ಆಯಾ ಕಾಲಘಟ್ಟಗಳಲ್ಲಿ ಬದಲಾಗದೇ ಇದ್ದ ಕಾರಣ ಈ ಬಗೆಯ ವಿಂಗಡನೆಯೂ ಸಹ ಕೃತಕವಾಗಿ ಕಾಣುತ್ತದೆ. 'ಸರ್ ವಿಲಿಯಂ ಜೋನ್ ೧೭೮೪ ರಲ್ಲಿ ಸ್ಥಾಪಿಸಿದ ಏಶಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್ ಸಂಸ್ಥೆಯ ಜೊತೆಗೆ ಭಾರತದಲ್ಲಿ ಮಾನವಶಾಸ್ತ್ರೀಯ ಅಧ್ಯಯನಗಳು ಪ್ರಾರಂಭವಾದವು'[೪೨]. ಇಲ್ಲೂ ಸಹ ಬುಡಕಟ್ಟುಗಳನ್ನು ಅಧ್ಯಯನ ಮಾಡಿದ್ದು ಆರಂಭದ ಹಂತದಲ್ಲಿ ವಸಾಹತುಶಾಹಿ ಆಡಳಿತದ ವಿವಿಧ ಸ್ತರಗಳಲ್ಲಿ ಕಾರ್ಯನಿರತರಾಗಿದ್ದ ಆಡಳಿತಗಾರರು. ಜೊತೆಗೆ ಮಿಶನರಿಗಳು, ಪ್ರವಾಸಿಗರು ಮತ್ತು ಕೆಲವು ಮಾನವಶಾಸ್ತ್ರಜ್ಞರು ಬುಡಕಟ್ಟುಗಳ ಅಧ್ಯಯನವನ್ನು ಕೈಗೊಂಡರು.

ವಸಾಹತುಶಾಹಿ ಆಡಳಿತದ ಸಂದರ್ಭದಲ್ಲಿ ಭಾರತವನ್ನು ಕಂಪನಿ ಸರಕಾರವು ಪೂರ್ವ ಭಾರತ, ಮಧ್ಯ ಭಾರತ, ದಕ್ಷಿಣ ಭಾರತ ಮತ್ತು ಉತ್ತರ ಭಾರತಗಳೆಂದು ವಿಭಜಿಸಿ, ಈ ಪ್ರತಿ ಪ್ರಾಂತ್ಯಕ್ಕೂ ತಜ್ಞ ಆಡಳಿತಗಾರರನ್ನು ನೇಮಿಸಿತ್ತು. ಪೂರ್ವ ಭಾರತಕ್ಕೆ ಹರ್ಬಟ್ ರಿಸ್ಲೆ, ಡಾಲ್ಟನ್, ಓಮಲ್ಲೇ, ಮಧ್ಯಭಾರತಕ್ಕೆ ರಸೆಲ್, ದಕ್ಷಿಣ ಭಾರತಕ್ಕೆ ಥರ್ಸಟನ್, ಮತ್ತು ಉತ್ತರ ಭಾರತಕ್ಕೆ ಕ್ರೂಕ್‌ರವರನ್ನು ನೇಮಿಸಲಾಗಿತ್ತು. ಮುಂದೆ ಇವರ ಸಂಪಾದಕತ್ವದಲ್ಲಿ ಎನ್‌ಸೈಕ್ಲೋಪಿಡಿಯಾಕ್ ಮಾದರಿಯಲ್ಲಿ ಹಲವು ಸಂಪುಟಗಳಲ್ಲಿ ಭಾರತದ ಬುಡಕಟ್ಟು ಮತ್ತು ಜಾತಿ ಸಮುದಾಯಗಳ ಮಾಹಿತಿಗಳು ಪ್ರಕಟವಾದವು. ಆದರೆ ಇದಕ್ಕೂ ಮೊದಲು ವಸಾಹತು ಆಡಳಿತದ ಅಧಿಕಾರಗಳು ಮತ್ತು ಕೆಲವು ಮಿಶನರಿಗಳು ಭಾರತದಲ್ಲಿ ಆಗಲೇ ಬುಡಕಟ್ಟು ಮತ್ತು ಜಾತಿ ಸಮುದಾಯಗಳನ್ನು ಅಧ್ಯಯನ ಮಾಡಲು ಪ್ರಾರಂಭಿಸಿದ್ದರು. ಹಾಗೆ ನೋಡಿದರೆ ಮದ್ರಾಸ್‌ನಿಂದ ಮಲಬಾರ್‌ವರೆಗೆ ಪ್ರಯಾಣ ಮಾಡಿ ರಚಿಸಿದ A Journey from Madras through the countries of Mysore, canar and Malabar ಕೃತಿಯು ದಕ್ಷಿಣ ಭಾರತದಲ್ಲಿ ಸಾಮಾಜಿಕ ಮತ್ತು ಭೌಗೋಳಿಕ ವಿವರಗಳನ್ನು ನೀಡುತ್ತದೆ. ವಸಾಹತು ಆಡಳಿತ ಈ ಕೃತಿಯನ್ನು ೧೮೦೭ ರಲ್ಲಿ ಪ್ರಕಟಿಸಿತು ಸದರಿ ಕೃತಿಯು ಮೂರು ಸಂಪುಟಗಳಲ್ಲಿ ಪ್ರಕಟವಾಗಿದೆ. ಅಂದಿನ ಗವರ್ನರ್ ಜನರಲ್ ಲಾರ್ಡ್ ವೆಲ್ಲೆಸ್ಲಿಯ ಸೂಚನೆಯ ಮೇರೆಗೆ ಫ್ರಾನ್ಸಿಸ್ ಬುಕಾನಿನ್ ತನ್ನ ಅಧ್ಯಯನ ಪ್ರವಾಸ ಕೈಗೊಂಡಿದ್ದನು. ಹಾಗೆ ನೋಡಿದರೆ ಬ್ರಿಟೀಷ್ ಆಡಳಿತದ ಭಾರತದ ಸಾಮಾಜಿಕ ಅಧ್ಯಯನಗಳಲ್ಲಿ ಇದು ಪ್ರಥಮ ಶೈಕ್ಷಣಿಕ ಪ್ರಯತ್ನವೆಂದರೆ ತಪ್ಪಾಗಲಿಕ್ಕಿಲ್ಲ.

೧೭೯೨ ರಲ್ಲಿ ಭಾರತಕ್ಕೆ ಬಂದ ಫ್ರೆಂಚ್ ಪಾದ್ರಿ, ಅಬ್ಬೆದುಬಾಯಿಸ್ ಹಳೆ ಮೈಸೂರು ಭಾಗದ ಸಮುದಾಯಗಳನ್ನು ಅಧ್ಯಯನ ಮಾಡಿದನು. Hindu Manners, customs and caremonies ಎಂಬ ಈತನ ಗ್ರಂಥವನ್ನು ವಸಾಹತು ಆಡಳಿತವು ೧೮೧೬ ರಲ್ಲಿ ಪ್ರಕಟಿಸಿತು. ಅಬ್ಬೆದುಬಾಯಿಸ್ ಫ್ರೆಂಚ್ ಭಾಷೆಯಲ್ಲಿ ಬರೆದ ಈ ಗ್ರಂಥವನ್ನು ವಸಾಹತು ಆಡಳಿತವು ಇಂಗ್ಲೀಷ್‌ಗೆ ಭಾಷಾಂತರಿಸಿ ಪ್ರಕಟಿಸಿತು. ಮೇಲಿನ ಎರಡು ಕೃತಿಗಳು ಭಾರತದಲ್ಲಿ ಸಾಮಾಜಿಕ ಅಧ್ಯಯನಗಳಿಗೆ ನಾಂದಿ ಹಾಡಿದವು. ಮುಂದೆ ಹರ್ಬರ್ಟ್ ರಿಸ್ಲೆಯವರ ನಾಯಕತ್ವದಲ್ಲಿ ರೂಪುಗೊಂಡ Ethnographic Survay of India ಸಂಸ್ಥೆಯ ಮೂಲಕ ಅಧಿಕೃತವಾಗಿ ವಸಾಹತುಶಾಹಿ ಆಡಳಿತ ಇಂಡಿಯಾದ ಬುಡಕಟ್ಟು ಮತ್ತು ಜಾತಿ ಸಮುದಾಯಗಳ ಅಧ್ಯಯನಗಳನ್ನು ಕೈಗೊಂಡಿತು.

ಈ ಮಾಲಿಕೆಯಲ್ಲಿ ರೆವೆರೆಂಡ್ ಎಂ.ಯೆ.ಶೆರ್ರಿಂಗ್ ಅವರು ೧೮೭೨ ರಲ್ಲಿ ಮೂರು ಸಂಪುಟಗಳಲ್ಲಿ Hindu Tribes and castes ಎಂಬ ಕೃತಿಯನ್ನು ಪ್ರಕಟಿಸಿದರು. 'ಮೊದಲ ಸಂಪುಟದಲ್ಲಿ ಬನಾರಸ್‌ನ, ಎರಡನೇ ಮೂರನೇ ಸಂಪುಟದಲ್ಲಿ ಬಾಂಬೆ ಪ್ರೆಸಿಡೆನ್ಸಿಗೆ ಸೇರಿದ್ದ ವಾಯುವ್ಯ ಪ್ರದೇಶದ ಮತ್ತು ಪಂಜಾಬ್‌ನ ಜಾತಿ ಮತ್ತು ಬುಡಕಟ್ಟುಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ'[೪]. ಬಂಗಾಳದಲ್ಲಿ ವಸಾಹತು ಆಡಳಿತದಲ್ಲಿ ಪ್ರಮುಖ ಹುದ್ದೆಯಲ್ಲಿದ್ದ ಹರ್ಬರ್ಟ್ ರಿಸ್ಲೆಯು ೧೮೯೧ ರಲ್ಲಿ Tribes and caste of Bengal ಎಂಬ ಗ್ರಂಥವನ್ನು ಹೊರತಂದನು. ಆದರೆ ಭಾರತದಲ್ಲಿ ಮೊದಲ ಬಾರಿಗೆ ಬೃಹತ್ ಗಾತ್ರದಲ್ಲಿ

ತನ್ನ ಅಧ್ಯಯನ ಪ್ರಕಟಿಸಿದವನು ವಿಲಿಯಂ ಕ್ರೂಕ್. ಈತ ನಾಲ್ಕು ಬೃಹತ್ ಸಂಪುಟಗಳಲ್ಲಿ The Tribes and castes of North western provinces and Oudh ಎಂಬ ಕೃತಿಯನ್ನು ೧೮೯೬ ರಲ್ಲಿ ಪ್ರಕಟಿಸಿದನು. ಆರ್.ವಿ.ರಸೆಲ್ ಮತ್ತು ರಾಯ್ ಬಹದ್ದೂರ್ ಹೀರಾಲಾಲ್ ೧೮೬೬ ರಲ್ಲಿ ಮಧ್ಯಭಾರತದ ಬುಡಕಟ್ಟುಗಳ ಕುರಿತು ವಿವರಗಳಿರುವ ನಾಲ್ಕು ಸಂಪುಟಗಳನ್ನು Tribes and castes of central provinces of India ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಿದರು. ದಕ್ಷಿಣದ ಮದ್ರಾಸ್‌ನಲ್ಲಿ ಮ್ಯೂಸಿಯಂ ಇಲಾಖೆಯ ಮುಖ್ಯಸ್ಥನಾಗಿದ್ದ ಎಡ್ಗರ್ ಥರ್ಸಟನ್ ಏಳು ಸಂಪುಟಗಳಲ್ಲಿ Caste and Tribes of Southern India ಎಂಬ ಶೀರ್ಷಿಕೆಯಲ್ಲಿ ತನ್ನ ಅಧ್ಯಯನವನ್ನು ೧೯೦೯ರಲ್ಲಿ ಪ್ರಕಟಿಸಿದನು. ಇನ್ನು ಬಾಂಬೆ ಪ್ರೆಸಿಡೆನ್ಸಿಯ ಭಾಗದಲ್ಲಿ ಕಾರ್ಯ ನಿರತನಾಗಿದ್ದ ಆರ್.ಇ. ಎಂಥೋವನ್ Tribes and castes of Bombay ಎಂಬ ಶೀರ್ಷಿಕೆಯಲ್ಲಿ ೩ ಸಂಪುಟಗಳನ್ನು ೧೯೨೦ ರಲ್ಲಿ ಪ್ರಕಟಿಸಿದನು.

L.K. ಅನಂತ ಕೃಷ್ಣ ಅಯ್ಯರ್ The Travanvore Tribes and castes ಮತ್ತು Mysore tribes and castes ಎಂಬ ಶೀರ್ಷಿಕೆಯಲ್ಲಿ ನಾಲ್ಕು ಸಂಪುಟಗಳನ್ನು೧೯೨೨ರ ಹೊತ್ತಿಗೆ ಪ್ರಕಟಿಸಿದರು. ದಕ್ಷಿಣ ಭಾರತದ ಜಾತಿ ಮತ್ತು ಬುಡಕಟ್ಟು ಸಮುದಾಯಗಳ ಕುರಿತ ಅತ್ಯಂತ ಪ್ರಾಚೀನ ಮಾನವಶಾಸ್ತ್ರೀಯ ಮಾಹಿತಿಗಳು ಎಡ್ಗರ್ ಥರ್ಸಟನ್ ಮತ್ತು ಅನಂತಕೃಷ್ಣ ಅಯ್ಯರ್ ಪ್ರಕಟಿಸಿದ ಸಂಪುಟಗಳಲ್ಲಿ ದೊರೆಯುತ್ತವೆ. ಇಂದಿಗೂ ಈ ಇಬ್ಬರು ವಿದ್ವಾಂಸರ ಸಂಪುಟಗಳು ಆಸಕ್ತರಿಗೆ ಮತ್ತು ವಿದ್ವಾಂಸರಿಗೆ ಮಹತ್ವದ ಪ್ರಾಚೀನ ಆಕರಗಳಾಗಿ ಪರಿಗಣಿಸಲ್ಪಟ್ಟಿವೆ.

ಪೋಲೀಸ್ ಅಧಿಕಾರಿಯಾಗಿದ್ದ ಎಫ್. ಫಾಸೆಟ್ ಎಂಬಾತ ೧೯೦೧ ರಲ್ಲಿ Nayars of Malabar ಎಂಬ ಪುಸ್ತಕವನ್ನು ಪ್ರಕಟಿಸುತ್ತಾನೆ. ಸರ್ ವಿಲಿಯಂ ವಿಲ್ಸನ್ ಹಂಟರ್‌ನ A Brief history of the Indian peoples ಎಂಬ ಪುಸ್ತಕವು ೧೮೯೩ ರಲ್ಲಿ ಪ್ರಕಟವಾಯಿತು. ಈ ಪುಸ್ತಕವನ್ನು ಸತತ ಮೂವತ್ತು ವರ್ಷಗಳ ಅನುಭವದ ಮತ್ತು ಸಂಗ್ರಹಿಸಿದ ಮಾಹಿತಿಗಳಿಂದ ಬರೆಯಲಾಗಿದೆ ಎಂದು ಹಂಟರ್ ಹೇಳುತ್ತಾನೆ."". (ಹಂಟರ್ ಪು.೫-೧೮೯೩) ೧೯೦೫ ರಲ್ಲಿ ಹರ್ಬರ್ಟ್ ರಿಸ್ಲೆ People of India ಗ್ರಂಥವನ್ನು ಪ್ರಕಟಿಸುತ್ತಾನೆ.

ಭಾರತದ ಬುಡಕಟ್ಟುಗಳ ಅಧ್ಯಯನದ ಸಂದರ್ಭದಲ್ಲಿ ಇಬ್ಬರು ವಿದೇಶಿ ವ್ಯಕ್ತಿಗಳನ್ನು ಉಲ್ಲೇಖಿಸಲೇ ಬೇಕಾಗುತ್ತದೆ. ಒಬ್ಬರು ವೆರಿಯರ್ ಎಲ್ವಿನ್, ಇನ್ನೊಬ್ಬರು ಹೈಮನ್‌ಡಾರ್ಫ್. ಪಾದ್ರಿಯಾಗಿ ಭಾರತಕ್ಕೆ ಬಂದ ಮತ್ತು ವಿಕ್ಟೋರಿಯನ್ ಯುಗದ ಇಂಗ್ಲೀಷ್ ಸಾಹಿತ್ಯದ ವಿದ್ಯಾರ್ಥಿಯೂ ಆಗಿದ್ದ ವೆರಿಯರ್ ಎಲ್ವಿನ್ ಭಾರತದಲ್ಲಿ ಪಾದ್ರಿಯಾಗಿ ಕೆಲಸ ನಿರ್ವಹಿಸಿದ್ದಕ್ಕಿಂತ ಹೆಚ್ಚಾಗಿ ಒಬ್ಬ ಮಾನವಶಾಸ್ತ್ರಜ್ಞನಾಗಿ ಹೆಚ್ಚು ಖ್ಯಾತರಾಗಿದ್ದಾರೆ. ಗಾಂಧಿವಾದದ ಪ್ರಭಾವದಿಂದ ಅವರ ಆಶ್ರಮದಲ್ಲಿ ಕೆಲಕಾಲ ನೆಲೆನಿಂತ ಎಲ್ವಿನ್ ಆ ನಂತರ ಮಧ್ಯಭಾರತದ ಬುಡಕಟ್ಟುಗಳ ಅಭಿವೃದ್ಧಿಗೆ ಶ್ರಮಿಸಿದ್ದೇ ಹೆಚ್ಚು. ಸ್ವಾತಂತ್ರ್ಯಾ ನಂತರ ಪ್ರಧಾನಿ ನೆಹರುವಿಗೆ ಆದಿವಾಸಿಗಳ ಅಭಿವೃದ್ಧಿಯ ಕುರಿತು ಯೋಜನೆಗಳನ್ನು ರೂಪಿಸುವಾಗ ಎಲ್ವಿನ್ ಸಹಾಯ ಮಾಡಿದರು. ಒಂದು ಅರ್ಥದಲ್ಲಿ ಭಾರತದಲ್ಲಿ ಸ್ವಾತಂತ್ರ್ಯಾ ನಂತರ ರೂಪುಗೊಂಡ ಆದಿವಾಸಿಗಳ

ಅಭಿವೃದ್ಧಿ ಯೋಜನೆಗಳಲ್ಲಿ ಎಲ್ವಿನ್ ದೃಷ್ಟಿಕೋನ ಎದ್ದು ಕಾಣುತ್ತದೆ. ನೆಹರು ಎಲ್ವಿನ್‌ರನ್ನ 'ನಾನು ಆದಿವಾಸಿಗಳ ಕುರಿತು ಯೋಚಿಸುವಾಗೆಲ್ಲ ಅವರು ಒಬ್ಬ ದಾರ್ಶನಿಕನಂತೆ ನನ್ನ ದೃಷ್ಟಿಕೋನ ರೂಪುಗೊಳ್ಳಲು ಸಹಾಯ ಮಾಡಿದ್ದಾರೆ'[೫೫] ಎಂದು ಅಭಿಮಾನದಿಂದ ನೆನೆಯುತ್ತಾರೆ. ಅಷ್ಟರ ಮಟ್ಟಿಗೆ ಎಲ್ವಿನ್ ಸ್ವಾತಂತ್ರ್ಯಾ ನಂತರ ಆದಿವಾಸಿಗಳ ಕುರಿತು ಸರಕಾರ ರೂಪಿಸುವ ನೀತಿಗಳ ಮೇಲೆ ಪ್ರಭಾವ ಬೀರಿದ್ದಾರೆ. ಎಲ್ವಿನ್ ಅವರು ಮೊದಲು ಅಧ್ಯಯನ ಮಾಡಿದ್ದು ದಂಡಕಾರಣ್ಯದ ಬೈಗಾ ಜನರನ್ನು. The Baiga ಎಂಬ ಹೆಸರಲ್ಲಿ ಅದು ೧೯೩೯ ರಲ್ಲಿ ಪ್ರಕಟವಾಯಿತು. The Muria and their Ghutul ೧೯೪೭ ರಲ್ಲಿ, Religion of an Indian Tribe ೧೯೫೫ ರಲ್ಲಿ ಪ್ರಕಟವಾದವು. ಉದಾರವಾದಿ ಮಾನವತಾವಾದದ ನೆಲೆಯಲ್ಲಿ ಬುಡಕಟ್ಟುಗಳನ್ನು ಅಧ್ಯಯನ ಮಾಡಿದ ಎಲ್ವಿನ್ ತಮ್ಮ ಆತ್ಮಕಥೆಗೆ Tribal world of verrier Elwin ಎಂದೇ ಶೀರ್ಷಿಕೆ ನೀಡಿದರು.

ಇದೇ ರೀತಿ ಆಂದ್ರ ಪ್ರದೇಶದ ಉತ್ತರ ಭಾಗದಲ್ಲಿ ಆದಿವಾಸಿಗಳನ್ನು ಅಧ್ಯಯನ ಮಾಡಿದವರು ವಾನ್ ಫರರ್ ಹೈಮನ್ ಡಾರ್ಫ್. ಅಮೇರಿಕಾದ ರಾಕ್‌ಫೆಲರ್ ಫೆಲೋಷಿಪ್ ಪಡೆದು ಭಾರತಕ್ಕೆ ಬಂದ ಹೈಮನ್ ಡಾರ್ಫ ಮುಖ್ಯವಾಗಿ ಆಂದ್ರ ಪ್ರದೇಶ ಮತ್ತು ಈಶಾನ್ಯ ಭಾರತದ ಆದಿವಾಸಿಗಳನ್ನು ಅಧ್ಯಯನ ಮಾಡಿದರು. ಸ್ವಾತಂತ್ರ್ಯಪೂರ್ವ ನಿಜಾಮನ ಆಳ್ವಿಕೆಗೆ ಒಳಪಟ್ಟ ಪ್ರಾಂತ್ಯಗಳಲ್ಲಿನ ಆದಿವಾಸಿಗಳನ್ನು ಸಬಲೀಕರಿಸಲು ನಿಜಾಮನಿಗೆ ಸಲಹೆಗಾರರಾಗಿದ್ದವರು ಹೈಮನ್ ಡಾರ್ಫ್. ಇವರು The chenchus, Jungle Folk of the deccan ೧೯೪೨ ರಲ್ಲಿ, The Reddis of the Bison Hills: A study in Acculturation ಎಂಬ ಶೀರ್ಷಿಕೆಯಲ್ಲಿ ಎರಡು ಸಂಪುಟಗಳನ್ನು, ತಮ್ಮ ಪತ್ನಿ ಎಲಿಜಬೆತ್ ಜೊತೆಯಲ್ಲಿ ೧೯೪೫ ರಲ್ಲಿ, The Tribal papulation of Hyderbad ಪ್ರಕಟಿಸುತ್ತಾರೆ. ಇವರೂ ಸಹ ಎಲ್ವಿನ್‌ರಂತೆ ಆದಿವಾಸಿಗಳಿಗೆ ತಮ್ಮ ಬದುಕನ್ನು ಸಮರ್ಪಿಸಿಕೊಂಡವರು. ಅಲ್ಲದೆ ಎಲ್ವಿನ್ನರ ಸಮಕಾಲೀನರೂ ಹೌದು.

ಇದಲ್ಲದೆ ಸ್ವಾತಂತ್ರ್ಯಪೂರ್ವದಲ್ಲಿ ಬುಡಕಟ್ಟುಗಳ ಕುರಿತ ಮುಖ್ಯ ಅಧ್ಯಯನಗಳನ್ನು ಪಶ್ಚಿಮದ ಅಧ್ಯಯನಕಾರರೇ ಕೈಗೊಂಡಿದ್ದಾರೆ. ೧೯೦೬ ರಲ್ಲಿ ಡಬ್ಲ್ಯು.ಎಚ್.ಆರ್.ರಿವರ್ಸ್ The Todas ಎಂಬ ಶೀರ್ಷಿಕೆಯಲ್ಲಿ ಎರಡು ಸಂಪುಟಗಳನ್ನು ಪ್ರಕಟಿಸುತ್ತಾರೆ. ರೆಡ್‌ಕ್ಲಿಫ್ ಬ್ರೌನ್ ೧೯೨೨ ರಲ್ಲಿ The Andaman Islanders: A study in social Anthropology ಪುಸ್ತಕ ಪ್ರಕಟಿಸಿದನು. ಇದೇ ಸಂದರ್ಭದಲ್ಲಿ ಭಾರತದಲ್ಲಿ ಮಾನವಶಾಸ್ತ್ರವನ್ನು ಒಂದು ಗಂಭೀರ ಅಧ್ಯಯನ ಶಿಸ್ತನ್ನಾಗಿ ರೂಪಿಸಲು ಯತ್ನಿಸಿದ ಎಸ್.ಸಿ.ರಾಯ್ ಅವರ Mundas and their country ಪುಸ್ತಕ ೧೯೨೨ ರಲ್ಲಿ ಪ್ರಕಟವಾಗುತ್ತದೆ.

ಭಾರತದ ಖ್ಯಾತ ಸಮಾಜಶಾಸ್ತ್ರಜ್ಞರಾದ ಜಿ.ಎಸ್.ಘುರ್‍ರೆ ಅವರು ೧೯೩೨ ರಲ್ಲಿ Caste and Race in India ಎಂಬ ಗ್ರಂಥವನ್ನು ಪ್ರಕಟಿಸಿದನು. ಆಧುನಿಕ ಮಾನವಶಾಸ್ತ್ರೀಯ ಶಿಕ್ಷಣ ವಿಧಾನದ ಮೂಲಕ ಈ ಕೃತಿ ರಚಿಸಲಾಗಿದೆ ಎನ್ನುತ್ತಾರೆ ವಿದ್ಯಾರ್ಥಿ[೫೬]. ಈ ಮೇಲ್ಕಾಣಿಸಿದ ಕೃತಿಗಳು ವಸಾಹತು ಆಡಳಿತದ

ಸಂದರ್ಭದಲ್ಲಿ ಭಾರತದ ಜಾತಿ ಮತ್ತು ಬುಡಕಟ್ಟು ಸಮುದಾಯಗಳನ್ನು ಕುರಿತ ಅಧ್ಯಯನಗಳನ್ನು ಪ್ರತಿನಿಧಿಸುತ್ತವೆ. ಈ ಅವಧಿಯಲ್ಲಿ ಇನ್ನೂ ಅನೇಕ ಸಂಪುಟಗಳು ಪ್ರಕಟವಾಗಿದ್ದರೂ ಎಲ್ಲವುಗಳನ್ನು ಈ ಅಧ್ಯಾಯದಲ್ಲಿ ಉಲ್ಲೇಖಿಸಲಾಗಿಲ್ಲ.

ವಸಾಹತೋತ್ತರ ಕಾಲಘಟ್ಟದ ಅಧ್ಯಯನಗಳು

ವಸಾಹತೋತ್ತರ ಕಾಲಘಟ್ಟದ ಭಾರತದಲ್ಲಿ ಸಾಮಾಜಿಕ ಅಧ್ಯಯನಗಳ ಒಲವುಗಳು ಬದಲಾದವು. ಎರಡನೇ ಮಹಾಯುದ್ಧದ ನಂತರ ಅಮೇರಿಕಾ ಜಗತ್ತಿನ ಪ್ರಬಲ ಶಕ್ತಿಯಾಗಿ ಹೊರಹೊಮ್ಮಿತು. ಅಲ್ಲದೆ ಭಾರತದಲ್ಲಿ ಸಾಮಾಜಿಕ ಅಧ್ಯಯನಗಳನ್ನು ನಿಯಂತ್ರಿಸುತ್ತಿದ್ದ ಶಕ್ತಿ ಕೇಂದ್ರವು ಬ್ರಿಟನ್‌ನಿಂದ ಅಮೇರಿಕಾಕ್ಕೆ ಸ್ಥಳಾಂತರಗೊಂಡಿತು. ಆಸ್ಕರ್ ಲಿವೀಸ್‌ನಂತಹ ಆಡಳಿತಗಾರ ಮತ್ತು ಮಾನವಶಾಸ್ತ್ರಜ್ಞನು ಭಾರತಕ್ಕೆ ಬಂದು ಇಲ್ಲಿನ ಸರಕಾರದ ಯೋಜನಾ ಆಯೋಗದ ಸದಸ್ಯನೇ ಆಗುತ್ತಾನೆ. ಈ ಹೊತ್ತಿಗೆ ಜಾಗತಿಕ ಮಟ್ಟದಲ್ಲಿ ಮಾನವಶಾಸ್ತ್ರದ ಅಧ್ಯಯನ ವಿಧಾನದಲ್ಲೂ ಅನೇಕ ಬದಲಾವಣೆಗಳು ಸಂಭವಿಸಿದವು. ಸಾಂಸ್ಕೃತಿಕ ಮಾನವ ಶಾಸ್ತ್ರದ ಅಡಿಯಲ್ಲಿ ಮೂರನೇ ಜಗತ್ತಿನ ದೇಶಗಳ 'ಹಿಂದುಳಿದ' ಜನಾಂಗಗಳನ್ನು ಅಧ್ಯಯನ ಮಾಡುತ್ತಿದ್ದ ಇಂಗ್ಲೆಂಡ್ ತನ್ನ ಕೆಲವು ವಸಾಹತುಗಳನ್ನು ಅದರಲ್ಲೂ ಮುಖ್ಯವಾಗಿ ಭಾರತವನ್ನು ರಾಜಕೀಯವಾಗಿ 'ಸ್ವತಂತ್ರವಾಗಿಸುತ್ತದೆ'. ಅಲ್ಲದೆ ಎರಡನೇ ಮಹಾಯುದ್ಧವು ಅಮೇರಿಕಾವನ್ನು ಶಕ್ತಿಶಾಲಿ ರಾಷ್ಟ್ರವನ್ನಾಗಿ ರೂಪಿಸಿತು. ಅಮೇರಿಕಾದ ವಿಶ್ವವಿದ್ಯಾಲಯಗಳಲ್ಲಿ ಫ್ರಾಂಜ್ ಬೋಯಿಸ್‌ನ ನೇತೃತ್ವದಲ್ಲಿ ಸಾಮಾಜಿಕ ಮಾನವಶಾಸ್ತ್ರವು ಅಸ್ತಿತ್ವಕ್ಕೆ ಬಂದಿತು. ಆದರೆ ಸಾಮಾಜಿಕ ಮಾನವಶಾಸ್ತ್ರಕ್ಕೆ ಒಂದು ಅನ್ವಯಿಕ ನೆಲೆಯನ್ನು ಕಲ್ಪಿಸಿದವನು ರೆಡ್‌ಕ್ಲಿಪ್ ಬ್ರೌನ್. ಈತ ಸಾಮಾಜಿಕ ಮಾನವಶಾಸ್ತ್ರವನ್ನು ಅದರದ್ದೇ ಆದ ಅಧ್ಯಯನ ವಿಧಾನದ ಮೂಲಕ ಅಮೇರಿಕಾದ ವಿಶ್ವವಿದ್ಯಾಲಯಗಳಲ್ಲಿ ಬೋಧಿಸಲು ಅಣಿಗೊಳಿಸಿದನು. ಆ ನಂತರ ಮೂರನೇ ಜಗತ್ತಿನ ಇಂಗ್ಲೆಂಡಿನ ಮಾಜಿ ವಸಾಹತುಗಳಲ್ಲಿನ ಮಾನವಶಾಸ್ತ್ರೀಯ ಅಧ್ಯಯನಗಳನ್ನು ಅಮೇರಿಕಾವು ನಿಯಂತ್ರಿಸತೊಡಗುತ್ತದೆ. ಜೊತೆಗೆ ಸಾಮಾಜಿಕ ಮಾನವಶಾಸ್ತ್ರದ ಪಠ್ಯಕ್ರಮ, ಅಧ್ಯಯನ ವಿಧಾನ ಮತ್ತು ಅಧ್ಯಯನಕ್ಕೆ ಒಳಗಾಗುವ ವಸ್ತುವಿನ ಆಯ್ಕೆಯನ್ನೂ ಅಮೇರಿಕಾದ ವಿಶ್ವವಿದ್ಯಾಲಯಗಳು ನಿರ್ಧರಿಸಿದವು. ಅಲ್ಲದೆ ಮಾನವಶಾಸ್ತ್ರಜ್ಞರಿಗೆ ತರಬೇತಿ ಮತ್ತು ಧನ ಸಹಾಯಗಳನ್ನು ಅಮೇರಿಕಾದ ಅನೇಕ ವಿಶ್ವವಿದ್ಯಾಲಯಗಳು ಮತ್ತು ವಿವಿಧ ಅರೆ ಶೈಕ್ಷಣಿಕ ಸಂಸ್ಥೆಗಳು ಮಾಡಲಾರಂಭಿಸಿದವು.

ಇದರಿಂದಾಗಿ ಜಾಗತಿಕ ಮಟ್ಟದಲ್ಲಿ ಸಾಮಾಜಿಕ ಅಧ್ಯಯನಗಳು ಅಮೇರಿಕಾದ ಶೈಕ್ಷಣಿಕ ವಿಧಾನವನ್ನು ಅನುಸರಿಸಲಾರಂಭಿಸಿದವು. ಕಾರಣ ಅಮೇರಿಕಾವು ರಾಜಕೀಯಾರ್ಥಿಕ ಕ್ಷೇತ್ರದಲ್ಲೂ ಯುರೋಪಿನ ಏಕಸ್ವಾಮ್ಯತೆಯನ್ನು ಸ್ಫೋಟಿಸಿದ ಕಾರಣಕ್ಕಾಗಿ ಯುರೋಪನ್ನು ಮಾದರಿಯನ್ನಾಗಿ ಕಲ್ಪಿಸಿಕೊಳ್ಳುತ್ತಿದ್ದ ಮಾಜಿ ವಸಾದತುಗಳು ಆ ಚೌಕಟ್ಟಿನಿಂದ ಹೊರ ಬಂದು ಸಾಮಾಜಿಕ ಮಾನವಶಾಸ್ತ್ರದ ಅಧ್ಯಯನ ವಿಧಾನವನ್ನು ರೂಢಿಸಿಕೊಂಡವು. ಇದರ ಜೊತೆಗೆ ಅನ್ವಯಿಕ ಮಾನವಶಾಸ್ತ್ರವು ಭಾರತದಲ್ಲಿ ಚಾಲ್ತಿಗೆ ಬಂದಿತು. ಸರಕಾರದ ನೀತಿ ನಿರೂಪಣೆಯ ಹಂತದಲ್ಲಿ ಮತ್ತು ಯೋಜನೆಗಳನ್ನು ಜಾರಿ ಮಾಡುವ ಹಂತದಲ್ಲಿ ಅನ್ವಯಿಕ ಮಾನವಶಾಸ್ತ್ರವು ಪ್ರಯೋಜನಕಾರಿ ಎಂದು ನಂಬಲಾಯಿತು. ಇದೇ ಸಂದರ್ಭದಲ್ಲಿ

Anthropological Survay of India ಎಂಬ ಸಂಸ್ಥೆಯನ್ನು ರಲ್ಲಿ ಸ್ಥಾಪಿಸಲಾಯಿತು. ಇದರ ಮೊದಲ ನಿರ್ದೇಶಕರು ಬಿ.ಎಸ್. ಗುಹಾ ಅವರು.

ವಸಾಹತೋತ್ತರ ಕಾಲಘಟ್ಟದ ಭಾರತದಲ್ಲಿ ನಡೆದ ಕೆಲವು ಮುಖ್ಯ ಮಾನವಶಾಸ್ತ್ರೀಯ ಅಧ್ಯಯನಗಳನ್ನು ಈಗ ಗಮನಿಸಬಹುದಾಗಿದೆ. ವಸಾಹತೋತ್ತರ ಕಾಲಘಟ್ಟದ ನಂತರವೂ ವೆರಿಯರ್ ಎಲ್ವಿನ್ ತಮ್ಮ ಅಧ್ಯಯನಗಳನ್ನು ಮುಂದುವರೆಸಿದರು. ಎಲ್ವಿನ್ ೧೯೫೫ ರಲ್ಲಿ Religion of an Indian Tribe ಪುಸ್ತಕವನ್ನು ಹೊರತರುತ್ತಾರೆ. ಭಾರತದ ಹೆಸರಾಂತ ಮಾನವಶಾಸ್ತ್ರಜ್ಞ ಡಿ.ಎನ್.ಮುಜುಂದಾರ್ The Affairs of A Tribe: A Study in Tribal Dynamics ಎಂಬ ಪುಸ್ತಕವನ್ನು ಪ್ರಕಟಿಸಿದರು. ಬಾಂಬೆ ವಿಶ್ವವಿದ್ಯಾಲಯದ ಜಿ.ಎಸ್.ಘುರ್ಯೆ ಅವರು The scheduled Tribes ಎಂಬ ಪುಸ್ತಕವನ್ನು ೧೯೬೦ ರಲ್ಲಿ, ಪಿ.ಕೆ.ಬೋವ್‌ಮಿಕ್ The lodhas of west Bengal: A Socio-Economic Study ೧೯೬೩, ಎಫ್.ಜಿ.ಭೇಲಿ Tribe, caste and Nation ೧೯೬೦ರಲ್ಲಿ, ೧೯೫೮ರಲ್ಲಿ ವೆರಿಯರ್ ಎಲ್ವಿನ್‌ರ ಮಹತ್ವದ ಕೃತಿ A philosophy of NEFA ಮತ್ತು ದಕ್ಷಿಣದಲ್ಲಿ ಸೈಯದ್ ಸಿರಾಜ್ ಉಲ್ ಹಸನ್ ರವರ The castes and Tribes of HEH Nizam's Dominions ೧೯೨೦ರಲ್ಲಿ ಪ್ರಕಟವಾದವು.

ಭಾರತದ ಈಶಾನ್ಯ ಭಾಗದಲ್ಲೂ ಈ ಕಾಲಘಟ್ಟದಲ್ಲಿ ಅಧ್ಯಯನಗಳು ನಡೆದಿವೆ. ಹೈಮನ್‌ಡಾರ್ಫ್ ೧೯೬೪ ರಲ್ಲಿ The konoyak Nagas, ಸಚ್ಚಿದಾನಂದ, ೧೯೬೮ ರಲ್ಲಿ Culture change in Tribal Bihar, L.P. ವಿದ್ಯಾರ್ಥಿ ೧೯೭೬ ರಲ್ಲಿ Dynamics of Tribal Leader Ship in Bihar, ಪುಸ್ತಕಗಳು ಪ್ರಕಟವಾದವು. ಇದೇ ಸಂದರ್ಭದಲ್ಲಿ ಅಲೆಮಾರಿಗಳನ್ನು ಕುರಿತ ಅಧ್ಯಯನಗಳೂ ನಡೆದವು. ಭಾರತದಲ್ಲಿ ಮೊದಲ ಬಾರಿಗೆ ಅಲೆಮಾರಿಗಳನ್ನು ಮಾನವಶಾಸ್ತ್ರೀಯ ಅಧ್ಯಯನ ವಿಧಾನದ ಮೂಲಕ ಅಧ್ಯಯನಕ್ಕೊಳಪಡಿಸಿದವರು ಪಿ.ಕೆ. ಮಿಶ್ರಾ ಅವರು. ಅವರ Nomads in the Mysore city ಪುಸ್ತಕವನ್ನು Anthropological Survey of India ವು ೧೯೭೧ ರಲ್ಲಿ ಪ್ರಕಟಿಸಿತು. ಇದೇ ಸಂದರ್ಭದಲ್ಲಿ ಅಲೆಮಾರಿ ಮುಳ್ಳು ಕುರುಬರ ಮೇಲೆ ರಾಜಲಕ್ಷ್ಮೀ ಮಿಶ್ರಾರವರು Mullukurabas of Koppala ಕೃತಿಯನ್ನು ಅದೇ ಸಂಸ್ಥೆಯು ೧೯೭೧ ರಲ್ಲಿ ಪ್ರಕಟಿಸಿತು.

ಭಾರತದಲ್ಲಿ ನಡೆದ ಮಾನವಶಾಸ್ತ್ರೀಯ ಅಧ್ಯಯನಗಳ ಹಿಂದೆ ಅಮೇರಿಕ ವಿಶ್ವವಿದ್ಯಾಲಯಗಳ ಶೈಕ್ಷಣಿಕ ವಿಧಾನ ಪ್ರಧಾನ ಪಾತ್ರ ವಹಿಸಿತು. ಯುರೋಪಿನ ಶೈಕ್ಷಣಿಕ ಮಾದರಿಗಳು ಮರೆಯಾಗಿ ಅಮೇರಿಕಾದ ಅಧ್ಯಯನ ಮಾದರಿಗಳು ಮುಂಚೂಣಿಗೆ ಬಂದವು. ಜೊತೆ ಜೊತೆಗೆ ಅಮೇರಿಕಾವು ಜಾಗತಿಕ ಮಟ್ಟದಲ್ಲಿ ದೊಡ್ಡ ಸಾಮ್ರಾಜ್ಯಶಾಹಿ ಶಕ್ತಿಯಾಗಿ ರೂಪುಗೊಂಡಿತು. ಜೊತೆಗೆ ಜಾಗತಿಕ ಮಾರುಕಟ್ಟೆಯನ್ನು ತನ್ನ ಆರ್ಥಿಕ ಬಲದಿಂದ ನಿಯಂತ್ರಿಸಿದ್ದಲ್ಲದೆ, ನೋಡು ನೋಡುತ್ತಲೇ ಅಮೇರಿಕ ಯುರೋಪನ್ನು ಮೀರಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ಕ್ಷೇತ್ರದಲ್ಲಿ ಬೆಳೆದು ನಿಂತಿತು.

ಯಾವ ಮೂರನೇ ಜಗತ್ತಿನ ದೇಶಗಳು ಒಂದು ಕಾಲದಲ್ಲಿ ತಮ್ಮನ್ನು ಆಳಿದ್ದ ಯುರೋಪ್‌ನ

ಅಭಿವೃದ್ಧಿ ಮಾದರಿಯನ್ನು ಅನುಸರಿಸುತ್ತಿದ್ದವೋ, ಅದೇ ದೇಶಗಳು ಅಮೇರಿಕಾ ಮಾದರಿಯನ್ನು ಅನುಸರಿಸಲಾರಂಭಿಸಿದವು. ಈ ಮಾಜಿ ವಸಾಹತುಗಳನ್ನು ಅಮೇರಿಕಾವು ತಾನು ರೂಪಿಸಿದ ವಿಶ್ವಬ್ಯಾಂಕ್ ಮತ್ತು ಐ.ಎಂ.ಎಫ್. ಎಂಬ ಹಣಕಾಸು ಸಂಸ್ಥೆಗಳಿಂದ ನಿಯಂತ್ರಿಸಲಾರಂಭಿಸಿತು. ಇದೇ ರೀತಿ ಶೈಕ್ಷಣಿಕ ವಲಯದಲ್ಲೂ ಅಮೇರಿಕಾವು ತನ್ನ ಏಕಸ್ವಾಮ್ಯತೆಯನ್ನು ಸ್ಥಾಪಿಸಿತು. ಆನಂತರ ಭಾರತದಲ್ಲಿ ಅಮೇರಿಕಾ ಪ್ರಣೀತ ಶೈಕ್ಷಣಿಕ ವಿಧಾನವು ಚಾಲ್ತಿಗೆ ಬಂದಿತು. ಭಾರತದ ಆರಂಭದ ಸಮಾಜಶಾಸ್ತ್ರಜ್ಞರು ಮತ್ತು ಮಾನವಶಾಸ್ತ್ರಜ್ಞರು ಅಮೇರಿಕಾದ ವಿವಿಧ ವಿಶ್ವವಿದ್ಯಾಲಯಗಳಿಂದ ತರಬೇತಿ ಪಡೆದು ಬಂದವರೇ ಆಗಿದ್ದಾರೆ. ಜಿ.ಎಸ್.ಘುರ್ಯೆ, ಇರಾವತಿ ಕರ್ವೆ, ಬಿ.ಎಸ್.ಗುಹಾ, ಡಿ.ಎನ್.ಮಜುಂದಾರ್, ಎಸ್.ಸಿ.ರಾಯ್, ಎಸ್.ಸಿ.ದುಬೆ, ಎಂ.ಎನ್. ಶ್ರೀನಿವಾಸ್ ಮುಂತಾದ ಸಮಾಜ ವಿಜ್ಞಾನಿಗಳು ಅಮೇರಿಕಾದ ಶೈಕ್ಷಣಿಕ ಸಂದರ್ಭದ ನಿಯೋಗಿಗಳೇ ಆಗಿದ್ದಾರೆ.

ವಸಾಹತೋತ್ತರ ಕಾಲಘಟ್ಟದ ಮಾನವಶಾಸ್ತ್ರದ ಅಧ್ಯಯನಗಳು ಹೆಚ್ಚಾಗಿ ಬುಡಕಟ್ಟುಗಳನ್ನೂ ಒಳಗೊಂಡಂತೆ, ಗ್ರಾಮ, ಕುಟುಂಬ, ಜಾತಿ ಸಮುದಾಯಗಳ ಕುರಿತು ಹೆಚ್ಚಾಗಿ ನಡೆದವು. ಬುಡಕಟ್ಟುಗಳು ಆಗಲೇ ಮುಖ್ಯವಾಹಿನಿಗೆ ಬಂದಿರುವುದರಿಂದ ಅವು ಜಾತಿಗಳಾಗಿ ರೂಪಾಂತರಗೊಂಡಿವೆ ಎಂದು ಗ್ರಹಿಸಲಾಗಿ, ಗ್ರಾಮಗಳನ್ನು ಅಧ್ಯಯನ ಮಾಡಲು ಅಂದಿನ ಮಾನವಶಾಸ್ತ್ರಜ್ಞರು ತೊಡಗಿದರು. ಜೊತೆಗೆ ಯೋಜನೆಗಳನ್ನು ರೂಪಿಸಲು ಮತ್ತು ಯೋಜನೆಗಳು ಅನುಷ್ಠಾನಗೊಳ್ಳಲು ಮೊದಲು ಸಮಾಜವನ್ನು ಅಧ್ಯಯನ ಮಾಡಬೇಕೆಂಬ ಗ್ರಹೀತವು ಅಂದಿನ ಬಹುತೇಕ ಎಲ್ಲ ಅಧ್ಯಯನಗಳನ್ನು ನಿಯಂತ್ರಿಸಿತು. ಆದರೂ ಈ ಕಾಲಘಟ್ಟದಲ್ಲಿ ಬುಡಕಟ್ಟುಗಳ ಅಧ್ಯಯನಗಳು ಮುಂದುವರೆದವು.

ಈ ಕಾಲಘಟ್ಟದಲ್ಲಿ ಹೆಚ್ಚಾಗಿ ಅನ್ವಯಿಕ ಮಾನವಶಾಸ್ತ್ರದ ಅಧ್ಯಯನಗಳು ನಡೆದವು. ಕೇಂದ್ರ ಯೋಜನಾ ಆಯೋಗವು ಈ ಬಗೆಯ ಅಧ್ಯಯನಗಳಿಗೆ ಪ್ರೋತ್ಸಾಹ ನೀಡಿತು. ಅಲ್ಲದೆ ಈ ಅಧ್ಯಯನಗಳನ್ನು ನಿರ್ದೇಶಿಸಲು ಆಸ್ಕರ್ ಲಿವೀಸ್ ಎಂಬ ಅಮೇರಿಕಾದ ಮಾನವಶಾಸ್ತ್ರಜ್ಞನನ್ನು ಯೋಜನಾ ಆಯೋಗವು ತನ್ನ ಸದಸ್ಯನನ್ನಾಗಿ ನೇಮಸಿಕೊಂಡಿತು. ಇದರಿಂದಾಗಿ ಭಾರತದಲ್ಲಿ ಸ್ವಾತಂತ್ರ್ಯ ನಂತರದ ಮಾನವಶಾಸ್ತ್ರೀಯ ಅಧ್ಯಯನಗಳ ಜೊತೆಗೆ ಸಾಂಸ್ಕೃತಿಕ ಮಾನವಶಾಸ್ತ್ರದ ಭಾಗವಾಗಿ ಜಾನಪದ ಅಧ್ಯಯನಗಳೂ ನಡೆದವು. ಭಾರತದಾದ್ಯಂತ ಮಾನವಶಾಸ್ತ್ರೀಯ ಅಧ್ಯಯನಗಳ ಜೊತೆ ಜೊತೆಯಲ್ಲಿಯೇ ಭಾರತದ ಜನರ ಜಾನಪದಕ್ಕೆ ಸಂಬಂಧಿಸಿದ ವಿವರಗಳನ್ನು ಮಾನವಶಾಸ್ತ್ರಜ್ಞರು ಸಂಗ್ರಹಿಸಿದರೂ ಸಹ 'ಜಾನಪದ' ಎಂಬ ಪ್ರತ್ಯೇಕ ಅಧ್ಯಯನ ಶಿಸ್ತು ೨೦ ನೇ ಶತಮಾನದ ಆರಂಭದಲ್ಲಿ ರೂಪುಗೊಂಡಿತು. ಅದಕ್ಕೂ ಮೊದಲು ಭಾರತದಲ್ಲಿ ಈ ಕುರಿತು ಕೆಲವು ಅಧ್ಯಯನಗಳು ಜಾನಪದಕ್ಕೆ ಸಂಬಂಧಿಸಿದಂತೆ ನಡೆದಿದ್ದವು. ಇಲ್ಲಿ ನಾನು ಕೇವಲ ಕರ್ನಾಟಕಕ್ಕೆ ಸಂಬಂಧಿಸಿದಂತೆ ಮಾತ್ರ ಕೆಲವು ಮುಖ್ಯವಾದ ಅಧ್ಯಯನಗಳನ್ನು ಹೆಸರಿಸಲು ಬಯಸುತ್ತೇನೆ.

ಕರ್ನಾಟಕದಲ್ಲಿ ಜಾನಪದ ಅಧ್ಯಯನಗಳನ್ನು ಎ.ವಿ.ನಾವಡ ಅವರು ನಾಲ್ಕು ಹಂತಗಳಲ್ಲಿ ವಿಂಗಡಿಸುತ್ತಾರೆ.

೧. ಆರಂಭಿಕ ಕಾಲಾವಧಿ

೨. ಸಾಹಿತ್ಯಿಕ ಸ್ವರೂಪದ ಕಾಲಾವಧಿ

೩. ಸಾಂಸ್ಥಿಕ ಸ್ವರೂಪದ ಕಾಲಾವಧಿ

೪. ವೈಜ್ಞಾನಿಕ ಸ್ವರೂಪದ ಕಾಲಾವಧಿ[೪೬].

ಇಲ್ಲಿಯೂ ಜಾನಪದ ಅಧ್ಯಯನಗಳಿಗೆ ಮೊದಲಿಗರೆಂದರೆ ಯುರೋಪಿನ ವಿದ್ವಾಂಸರು. ಫಿನ್‌ಲ್ಯಾಂಡ್‌ಲ್ಲಿ ಲೋನ್‌ರಾಸ್ ಎಲಿಯಟ್ 'ಕಾಲೇವಾಲ' ಕಾವ್ಯವನ್ನು ಸಂಪಾದಿಸಿದ ನಂತರ ಜಗತ್ತಿನಾದ್ಯಂತ ಜನರಲ್ಲಿ ಸುಪ್ತವಾಗಿರುವ ಮೌಖಿಕ ಸಾಹಿತ್ಯವೂ ಲಿಖಿತ ಸಾಹಿತ್ಯದಷ್ಟೇ ಅಮೂಲ್ಯವಾದದ್ದೆಂಬ ಗ್ರಹಿಕೆ ಯುರೋಪಲ್ಲಿ ರೂಪುಗೊಂಡಿತು. ಜೊತೆಗೆ ಜಾನಪದ ಆಕರ ಸಾಮಾಗ್ರಿಯು ನಿರ್ದಿಷ್ಟ ಪ್ರದೇಶದ ಜನರ ಮನೋಭಾವವನ್ನು ಅರ್ಥಮಾಡಿಕೊಳ್ಳಲು ಮುಖ್ಯವಾದ ಆಕರ ಎಂಬ ಭಾವನೆ ಯುರೋಪಿನ ಜನಕ್ಕೆ ಅರ್ಥವಾಗಿತ್ತು. ಕರ್ನಾಟಕದಲ್ಲೂ ಸಹ ಜಾನಪದ ಅಧ್ಯಯನಗಳು ಪ್ರಾರಂಭವಾದದ್ದು ವಿದೇಶಿಯರಿಂದ. ಅಬ್ಬೆದುಬಾಯಿಸ್‌ರವರ Hindu manner, customs and cermonies ಗ್ರಂಥವು ಕರ್ನಾಟಕದ ಜನರ ವಿವಿಧ ಬಗೆಯ ಸಾಂಸ್ಕೃತಿಕ ಸಂಗತಿಗಳನ್ನು ವಿವರಿಸುವ ಗ್ರಂಥ. ಹಾಗೆ ನೋಡಿದರೆ ಕರ್ನಾಟಕದಲ್ಲಿ ಜಾನಪದದ ಮೊದಲ ಕೃತಿ ಇದೇ ಎಂದರೆ ತಪ್ಪಾಗಲಿಕ್ಕಿಲ್ಲ. ಇದಕ್ಕೂ ಮೊದಲು ಜಾನ್ ಲೇಡನ್ ಎಂಬಾತ 'ಟಿಪ್ಪುನಿನ ಪತನಾನಂತರ ಶ್ರೀರಂಗ ಪಟ್ಟಣದ ಕೇಡುಗಾಲವನ್ನು ಕುರಿತು ಲಾವಣಿಯೊಂದನ್ನು ಸಂಗ್ರಹಿಸಿ ಇಂಗ್ಲೀಷ್‌ಗೆ ಭಾಷಾಂತರಿಸಿ ೧೮೦೩ ರಲ್ಲಿ ಪ್ರಕಟಿಸಿದನು'[೪೮]. ಜೊತೆಗೆ ಕಂದಾಯ ಇಲಾಖೆಗೆ ಅಧಿಕಾರಿಯಾಗಿ ೧೮೬೨ ರಲ್ಲಿ ಭಾರತಕ್ಕೆ ಬಂದ ಫ್ಲೀಟ್ ರವರು ಕರ್ನಾಟಕದಲ್ಲಿ ಲಾವಣಿಗಳನ್ನು ಸಂಗ್ರಹಿಸಿದರು. ಕರ್ನಲ್ ಮೆಕೆಂಜಿ ೧೭೯೬ - ೧೮೧೬ ರವರೆಗೆ ಕರ್ನಾಟಕದಾದ್ಯಂತ ತಿರುಗಾಡಿ ಕರ್ನಾಟಕಕ್ಕೆ ಸಂಬಂಧಿಸಿದ ವಿಪುಲ ಮಾಹಿತಿಗಳಿರುವ ಕೈಫಿಯತ್ತುಗಳನ್ನು ಬರೆಸಿದ. ಅದೇ ಸಂದರ್ಭದಲ್ಲಿ ಜೈನಕವಿ ದೇವಚಂದ್ರನಿಂದ 'ರಾಜಾವಳಿ ಕಥಾಸಾರ' ವೆಂಬ ಕರ್ನಾಟಕದ ಜನತೆಯ ಕುರಿತ ಮಾಹಿತಿಗಳಿರುವ ಪುಸ್ತಕವನ್ನು ಬರೆಯಿಸಿದ. ನಂತರ ಡಾ. ಮೋಗ್ಲಿಂಗ್ ಕರ್ನಾಟಕದ ಗಾದೆಗಳನ್ನು ಸಂಗ್ರಹಿಸಿದರು. ೧೯ ನೇ ಶತಮಾನದ ಆರಂಭದಿಂದ ೨೦ ನೇ ಶತಮಾನದ ಅವಧಿಯ ನೂರು ವರ್ಷಗಳನ್ನು ಆರಂಭದ ಕಾಲಘಟ್ಟ ಎಂದು ನಾವಡರು ಪರಿಗಣಿಸುತ್ತಾರೆ. ೧೯೦೦ ರಿಂದ ೧೯೬೫ ವರೆಗಿನ ಕಾಲಾವಧಿ ಸಾಹಿತ್ಯಕ ಸ್ವರೂಪದ ಕಾಲಾವಧಿಯಾಗಿದೆ. ಕರ್ನಾಟಕದಲ್ಲಿ ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಜಾನಪದ ಸಾಹಿತ್ಯದ ಸಂಪಾದನೆಯು ತೀವ್ರವಾಗಿ ನಡೆಯುತ್ತದೆ. ಈ ಬಗೆಯ ಸಂಪಾದನೆಯ ಹಿಂದೆ ರಾಷ್ಟ್ರೀಯ ಚಳುವಳಿಯ ರಾಜಕೀಯ ನಿಲುವುಗಳೂ ಸಹ ಕೆಲಸ ಮಾಡಿವೆ. ಯಾವ ಕಾಲೇವಾಲ ಕಾವ್ಯ ಫಿನ್‌ಲ್ಯಾಂಡ್‌ಲ್ಲಿ ರಾಷ್ಟ್ರೀಯ ಸ್ವಾಭಿಮಾನಿ ಚಳುವಳಿಗೆ ಕಾರಣವಾಗಿತ್ತೋ ಅದೇ ರೀತಿಯಲ್ಲಿ ಭಾರತದ ಜನಪದರಲ್ಲಿಯೂ ಅಮೂಲ್ಯ ಸ್ಮೃತಿಗಳು ರಾಷ್ಟ್ರೀಯ ಚಳುವಳಿಗೆ ಪೂರಕವಾಗುವವು ಎಂದು ಅಂದಿನ ಜನಪದ ವಿದ್ವಾಂಸರು ನಂಬಿದ್ದರು. ಈ ಬಗೆಯ ನಂಬಿಕೆಯು ಯುರೋಪಿಗೆ ಸಂಬಂಧಿಸಿದಂತೆ ಸತ್ಯವೂ ಆಗಿತ್ತು. ಪುನರುಜ್ಜೀವನ ಕಾಲಘಟ್ಟದ ನಂತರ ಯುರೋಪಿನ ಹಲವು ದೇಶಗಳು 'ನೇಷನ್ ಸ್ಟೇಟ್' ಗಳಾಗುವ ಹಂತದಲ್ಲಿ ತಮ್ಮ ರಾಷ್ಟ್ರೀಯ ಅನನ್ಯತೆಯನ್ನು ಕಂಡುಕೊಳ್ಳಲು ತಮ್ಮ ಜನರ ಆದಿಮ ಸ್ಮೃತಿಗಳನ್ನೇ ಆಧಾರವಾಗಿಟ್ಟುಕೊಂಡಿದ್ದರು. ರಾಷ್ಟ್ರವೆಂಬುದು ಆಧುನಿಕ ಪರಿಕಲ್ಪನೆಯಾಗಿದ್ದರೂ ಸಹ, ಒಂದು ಜನಾಂಗದ ಸ್ಮೃತಿ ಜಗತ್ತಿನಲ್ಲಿ, ಅವರ ಭಾಷೆಯಲ್ಲಿ,

ಸಾಹಿತ್ಯಕ ರಚನೆಗಳಲ್ಲಿ ಆಚರಣೆಗಳ ಸಂಕೋಲೆಗಳಲ್ಲಿ ಒಂದು ಬಗೆಯ ಏಕರೂಪತೆ ಬರುವುದು ಸಹಜ. ಯುರೋಪಿನ ಜನ ಈ ಬಗೆಯ ಸ್ಮೃತಿ ಜಗತ್ತನ್ನು ಮತ್ತು ಭಾಷೆಯನ್ನು ಆಧರಿಸಿಯೇ ತಮ್ಮ ದೇಶಗಳ ಸ್ವತಂತ್ರ ರೂಪಗಳನ್ನು ಕಂಡುಕೊಂಡರು.

ಭಾರತದಲ್ಲೂ ಸಹ ರಾಷ್ಟ್ರೀಯತೆಯ ಕಾಲಘಟ್ಟದಲ್ಲಿ ಇದೇ ಬಗೆಯ ರಾಜಕೀಯ ಚಟುವಟಿಕೆಗಳು ಸಂಭವಿಸಿದವು. ಕನ್ನಡ ಸಾಹಿತ್ಯದ ನವೋದಯ ಕಾಲಘಟ್ಟದಲ್ಲಿ ಮಾಸ್ತಿಯವರು ೧೯೨೫ ರಲ್ಲಿ 'ಕನ್ನಡ ಲಾವಣಿ ಸಾಂಗತ್ಯ' ಎಂಬ ಲೇಖನವನ್ನು ಪ್ರಕಟಿಸಿದರು[೪೯]. ನಂತರ ಶ್ರೀಕಂಠೇಶಗೌಡರು ಜನಪದ ಕಥೆಗಳನ್ನು ಸಂಗ್ರಹಿಸಿದರು. ನಂತರ ಹಲಸಂಗಿ ಗೆಳೆಯರಿಂದ ಪ್ರಕಟವಾದ ಜಾನಪದ ಗೀತೆಗಳ ಸಂಗ್ರಹವು ಕರ್ನಾಟಕದ ಜಾನಪದ ಕ್ಷೇತ್ರದ ತೀವ್ರ ಬೆಳವಣಿಗೆಗೆ ಕಾರಣವಾಯಿತು. ಸಿಂಪಿ ಲಿಂಗಣ್ಣ, ಗದ್ಗಿಮಠ್, ಮಧುರಚೆನ್ನ, ಮತಿಘಟ್ಟ ಕೃಷ್ಣಮೂರ್ತಿ, ಕರೀಂಖಾನ್, ಕಾರಾಕೃ, ಎಚ್.ಎಲ್.ನಾಗೇಗೌಡ ಮತ್ತು ಜೀ.ಶಂ.ಪರಮಶಿವಯ್ಯ ಮುಂತಾದ ಹಿರಿಯರು ಈ ಕಾಲಘಟ್ಟದಲ್ಲಿ ಜನಪದ ಸಾಹಿತ್ಯದ ಸಂಗ್ರಹಣೆ ಮತ್ತು ವಿಶ್ಲೇಷಣೆಯ ಕೆಲಸವನ್ನು ಮಾಡಿದರು.

ಇದೇ ಹಂತದಲ್ಲಿ ವಸಾಹತೋತ್ತರ ಕಾಲಘಟ್ಟದ ಕರ್ನಾಟಕದಲ್ಲಿ ಸಮುದಾಯ ಅಧ್ಯಯನಗಳು ನಡೆದಿರುವುದು ಕಂಡುಬರುತ್ತದೆ. ಈ ಕಾಲಘಟ್ಟದಲ್ಲಿ ಬಂದ ಮುಖ್ಯವಾದ ಕೃತಿಯೆಂದರೆ ಎ.ಎ.ಡಿ.ಲೂಯಿಜ್‌ರವರ Tribes of Mysore. ೧೯೬೨ ರಲ್ಲಿ ಈ ಕೃತಿ ಪ್ರಕಟವಾಯಿತು. Central advisory Board for Tribal affair ನ ಸದಸ್ಯರು ಮತ್ತು All Inddia Nomadic Tribe Enquiry committe ಯ ಅಧ್ಯಕ್ಷರೂ ಆಗಿದ್ದ ಲೂಯಿಜ್ ಕರ್ನಾಟಕದಲ್ಲಿ ೨೭ ಬುಡಕಟ್ಟುಗಳನ್ನು ಹೆಸರಿಸಿದ್ದಾರೆ[೫೦]. 'ಈ ಸರ್ವೆಯನ್ನು ಅಂದಿನ ಮೈಸೂರು ರಾಜ್ಯದ ೧೯ ಜಿಲ್ಲೆಗಳಲ್ಲಿ ಕೈಗೊಳ್ಳಲಾಗುತ್ತದೆ. ಈ ಆದಿವಾಸಿಗಳ ಸಂಖ್ಯೆ ೪ ಲಕ್ಷಕ್ಕೂ ಹೆಚ್ಚಾಗಿರಬಹುದೆಂದು ಲೂಯಿಜ್ ಊಹಿಸುತ್ತಾರೆ'[೫೧]. ೧೯೭೨ ರಲ್ಲಿ ಎಸ್.ಜಿ.ಮೊರಬ್ ಅವರು Soliga Tribe of Biligiri ಪುಸ್ತಕವನ್ನು ಅಂಥ್ರೋಪಲಾಜಿಕಲ್ ಸರ್ವೆ ಆಫ್ ಇಂಡಿಯಾ ಪ್ರಕಟಿಸುದೆ. ೧೯೫೫ ರಲ್ಲಿ ವಿಕ್ಟರ್ ಎಸ್. ಡಿಸೋಜ ಅವರ The Navayats of kanara ಪುಸ್ತಕವನ್ನು ಧಾರವಾಡ ವಿಶ್ವವಿದ್ಯಾಲಯ ಪ್ರಕಟಿಸಿತು.

೧೯೭೫ ರಲ್ಲಿ ಪಿ.ಎಎಸ್. ರಾಮಾನುಜಂ ಅವರ 'ಕೊಡವರು' ಎಂಬ ಪುಸ್ತಕವನ್ನು ಮೈಸೂರು ವಿ.ವಿ. ಪ್ರಕಟಿಸುತ್ತದೆ. ೧೯೮೨ ರಲ್ಲಿ ತೀ.ನಂ.ಶಂಕರನಾರಾಯಣರ 'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು' ಎಂಬ ಪಿಎಚ್.ಡಿ. ನಿಬಂಧವನ್ನು ಮೈಸೂರು ವಿಶ್ವವಿದ್ಯಾಲಯವು ಪ್ರಕಟಿಸಿತು. ಇದೇ ಸಂದರ್ಭದಲ್ಲಿ ಐ.ಬಿ.ಎಚ್.ಪ್ರಕಾಶನವು ಕನ್ನಡ ನಾಡು ಮತ್ತು ಕನ್ನಡಿಗರ ಪರಂಪರೆ ಎಂಬ ಮಾಲಿಕೆಯಲ್ಲಿ ಕರ್ನಾಟಕದ ಹಲವು ಜನಸಮುದಾಯಗಳ ಕುರಿತು ಚಿಕ್ಕ ಚಿಕ್ಕ ಪುಸ್ತಿಕೆಗಳನ್ನು ೧೯೮೨ ರಲ್ಲಿ ಪ್ರಕಟಿಸಿತು. ಆ ನಂತರ ೧೯೯೧ ರಲ್ಲಿ ಹಿ.ಚಿ. ಬೋರಲಿಂಗಯ್ಯ ಗಿರಿಜನ ನಾಡಿಗೆ ಪಯಣ ಪುಸ್ತಕವನ್ನು ಪ್ರಕಟಿಸಿದರು. ೧೯೯೫ ರಲ್ಲಿ ಇವರದೇ ಕಾಡು, ಕಾಂಕ್ರೀಟ್ ಮತ್ತು ಜಾನಪದ ಪುಸ್ತಕವನ್ನು ಅಕ್ಷರ ಪ್ರಕಾಶನದವರು ಪ್ರಕಟಿಸುತ್ತಾರೆ. ೧೯೯೩ ರಲ್ಲಿ ಸಾಹಿತ್ಯ ಅಕಾಡೆಮಿಯು ಉಪಸಂಸ್ಕೃತಿ ಮಾಲೆಯಲ್ಲಿ ಸುಮಾರು ೪೨

ಕರ್ನಾಟಕದ ಜನ ಸಮುದಾಯಗಳ ಕುರಿತು ಪುಸ್ತಕಗಳನ್ನು ಪ್ರಕಟಿಸಿತು. ೧೯೯೮ ರಲ್ಲಿ ಜಾನಪದದ ಯಕ್ಷಗಾನ ಅಕಾಡೆಮಿಯು 'ಕರ್ನಾಟಕದ ಬುಡಕಟ್ಟುಗಳು' ಎಂಬ ಶೀರ್ಷಿಕೆಯಲ್ಲಿ ಎನ್‌ಸೈಕ್ಲೋಪಿಡಿಯಕ್ ಮಾದರಿಯಲ್ಲಿ ಎರಡು ಸಂಪುಟಗಳನ್ನು ಪ್ರಕಟಿಸಿತು. ಅಲ್ಲದೆ ಕನ್ನಡ ವಿಶ್ವವಿದ್ಯಾಲಯವು ೧೯೯೪ ರಲ್ಲಿ ಬುಡಕಟ್ಟು ಅಧ್ಯಯನ ವಿಭಾಗವನ್ನು ಸ್ಥಾಪಿಸಿತು. ಅಲ್ಲಿ ಬುಡಕಟ್ಟುಗಳಿಗೆ ಸಂಬಂಧಿಸಿದ ವಿವಿಧ ಯೋಜನೆಗಳು ಜಾರಿಯಲ್ಲಿವೆ.

ಇಷ್ಟೇ ಅಲ್ಲದೆ ಮೈಸೂರು, ಧಾರವಾಡ, ಮಂಗಳೂರು, ಕುವೆಂಪು ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರ ವಿಭಾಗಗಳು ಮತ್ತು ಬಹುತೇಕ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ಅಧ್ಯಯನ ವಿಭಾಗಗಳು ಸಹ ಸಮುದಾಯ ಅಧ್ಯಯನಗಳನ್ನು ಕೈಗೊಂಡಿವೆ ಮತ್ತು ಅನೇಕ ಜನ ವಿದ್ಯಾರ್ಥಿಗಳು ಸಮುದಾಯ ಅಧ್ಯಯನಗಳನ್ನು ಕೈಗೊಳ್ಳುತ್ತಿದ್ದಾರೆ.

ಜಾತಿಗಳ ಅಧ್ಯಯನಗಳು

ವಸಾಹತುಶಾಹಿ ಆಡಳಿತದ ಸಂದರ್ಭದಲ್ಲಿ ಭಾರತದಲ್ಲಿ ಜಾತಿ ಸಮುದಾಯಗಳ ಅಧ್ಯಯನಗಳೂ ಸಹ ಪ್ರಾರಂಭವಾದವು. ಒಂದು ಅರ್ಥದಲ್ಲಿ Caste ಮತ್ತು Tribe ಗಳ ಅಧ್ಯಯನಗಳು ಜೊತೆ ಜೊತೆಯಲ್ಲಿಯೇ ಪ್ರಾರಂಭವಾಗಿದ್ದರೂ ಸಹ ಆದಿವಾಸಿ ಮತ್ತು ಜಾತಿ ಸಮುದಾಯಗಳ ನಡುವೆ ವಸಾಹತು ಆಡಳಿತವು ನಂತರದ ಕಾಲಘಟ್ಟದಲ್ಲಿ ಸೂಕ್ಷ್ಮವಾಗಿ ವ್ಯತ್ಯಾಸಗಳನ್ನು ಗುರುತಿಸಲಾರಂಭಿಸಿತು. ಇಂಡಾಲಜಿಯ ಅಧ್ಯಯನಕಾರರು ವರ್ಣಗಳು ಜಾತಿಗಳಾಗಿ ರೂಪಾಂತರಗೊಂಡ ಪ್ರಕ್ರಿಯೆಯನ್ನು ಬಹು ಹಿಂದೆಯೇ ಅಧ್ಯಯನಕ್ಕೊಳಪಡಿಸಿದ್ದರು. ಆದರೆ ಈ ಅಧ್ಯಯನಗಳು ಇಂಡಿಯಾದ ಪ್ರಾಚೀನ ಗ್ರಂಥಗಳನ್ನು ಆಧರಿಸಿ ನಡೆಸಿದವುಗಳಾಗಿದ್ದವು. ಈ ಓರಿಯಂಟಲ್ ಅಧ್ಯಯನಗಳು ಮುಖ್ಯವಾಗಿ ಭಾರತದ ಜಾತಿ ವ್ಯವಸ್ಥೆಯನ್ನು ಈ ಸಮಾಜದ ಚಾರಿತ್ರಿಕ ಬೆಳವಣಿಗೆಯ ಸಹಜ ಸ್ಥಿತಿ ಎಂದೇ ಪರಿಭಾವಿಸಿದವು. ಓರಿಯಂಟಲಿಸ್ಟರು ಮುಂದೆ ಭಾರತದಲ್ಲಿ ನಡೆದ ಸಾಮಾಜಿಕ ಅಧ್ಯಯನಗಳನ್ನು ಹೆಚ್ಚಾಗಿಯೇ ಪ್ರಭಾವಿಸಿದರು. ಅದರಲ್ಲೂ ಮಾನವಶಾಸ್ತ್ರಜ್ಞರು ಮತ್ತು ಸಮಾಜಶಾಸ್ತ್ರಜ್ಞರು ಓರಿಯಂಟಲಿಸ್ಟರಿಂದ ಇನ್ನಿಲ್ಲದಂತೆ ಪ್ರಭಾವಿತರಾದರು. ಹಾಗೆ ನೋಡಿದರೆ ಯುರೋಪಲ್ಲಿ ಜನ್ಮತಾಳಿದ ಇಂಡಾಲಜಿಯ ಪ್ರಭಾವವು ಸಾಮಾಜಿಕ ಅಧ್ಯಯನಗಳಲ್ಲಿ ಇಂದಿಗೂ ಢಾಳಾಗಿಯೇ ಕಾಣಿಸಿಕೊಳ್ಳುತ್ತಿದೆ. ಈ ಕಾರಣದಿಂದ ಇಂಡಾಲಜಿಯು ಆಧುನಿಕಪೂರ್ವ ಭಾರತದಲ್ಲಿ ನಡೆದ ಸಾಮಾಜಿಕ ಅಧ್ಯಯನಗಳಿಗೆ ಒಂದು ರೀತಿಯಲ್ಲಿ ತಾಯಿಬೇರು. ಕಾರಣ ಇಂಡಾಲಜಿಯು ಭಾರತದ ಪ್ರಾಚೀನ ಶಾಸ್ತ್ರ ಗ್ರಂಥಗಳ ಸಂಪಾದನೆ, ವಿವರಣೆ ಮತ್ತು ವಿಶ್ಲೇಷಣೆಯನ್ನು ಅನೂಚಾನವಾಗಿ ಮಾಡುತ್ತಾ ಬಂದುದರಿಂದ 'ಇಂಡಿಯಾ ಎಂದರೆ ಏನು' ಎಂದು ವಿವರಿಸುವ ಅಧಿಕೃತ ವಕ್ತಾರನ ಸ್ಥಾನವನ್ನು ಅದು ಪಡೆದುಕೊಂಡಿತು. ಇದರಿಂದಾಗಿ ಇಂಡಾಲಜಿಯು ಜಾತಿ ಸಮುದಾಯಗಳ ಅಧ್ಯಯನದ ಸಂದರ್ಭದಲ್ಲಿ ಅಂದಿನ ಮಾನವಶಾಸ್ತ್ರಜ್ಞರನ್ನು ಸಹಜವಾಗಿಯೇ ಪ್ರಭಾವಿಸಿತ್ತು.

ಒಂದು ಅರ್ಥದಲ್ಲಿ 'ಜಾತಿ' ಎಂಬುದು ಯುರೋಪಿನ ಸಮಾಜ ವಿಜ್ಞಾನಿಗಳ ಪರಿಕಲ್ಪನೆ ಎನ್ನುವಷ್ಟರ ಮಟ್ಟಿಗೆ ಯುರೋಪಿನ ಮತ್ತು ಅಮೇರಿಕಾದ ಮತ್ತು ಭಾರತದ ಮಾವನಶಾಸ್ತ್ರಜ್ಞರು ಜಾತಿ ಸಮುದಾಯಗಳನ್ನು

ಅಧ್ಯಯನ ಮಾಡಿದ್ದಾರೆ. 'ಜರ್ಮನಿಯ ಭಾರತೀಯಶಾಸ್ತ್ರದ ಅದರಲ್ಲೂ ಮುಖ್ಯವಾಗಿ ಜರ್ಮನಿಯ ಕ್ರೈಸ್ತ ಮಿಷನರಿಗಳು ನಮ್ಮನ್ನು ನಮಗಿಂತ ಮೇಲೆ ನಿಂತು ನೋಡಿದ್ದರ ಫಲವಾಗಿ ನಮಗೆ ಸಿಕ್ಕಿದ್ದು 'ಜಾತಿಯ' ಪರಿಕಲ್ಪನೆ. ನಮ್ಮಲ್ಲಿ ಜಾತಿ ಮೊದಲಿನಿಂದಲೂ ಇತ್ತು. ಆದರೆ ನಮ್ಮೆಲ್ಲ ನಡವಳಿಕೆಯನ್ನು ಅದರ ಮೂಲಕವೇ ಅರ್ಥ ಮಾಡಿಕೊಳ್ಳಬಹುದು ಮತ್ತು ಅರ್ಥ ಮಾಡಿಕೊಳ್ಳಬೇಕು ಎಂದು ಹೇಳಿ ನಮ್ಮನ್ನು ನಿರ್ಬಂಧಿಸಿದವರು ಪಾಶ್ಚಾತ್ಯರೇ'[೫೨]. ಈ ವಾದ ಮುಂದೆ ಅತಿರೇಕಕ್ಕೆ ಹೋದದ್ದೂ ಇದೆ. ಜಾತಿ ಎಂಬುದು ಇಂಡಿಯಾದಲ್ಲಿ ಇರಲಿಲ್ಲ. ಅದು ಇಂಡಾಲಜಿಯ ಶೈಕ್ಷಣಿಕ ಕನವರಿಕೆಯ ಫಲವಾಗಿ ಭಾರತದ ಸಮಾಜವನ್ನು ಭೂತವಾಗಿ ಕಾಡುತ್ತಿದೆ ಎಂಬ ವಾದಗಳೂ ಹುಟ್ಟಿಕೊಂಡಿವೆ. ಇದನ್ನೇ ಸದಾನಂದ ಅವರು ಹೀಗೆ ವಿವರಿಸುತ್ತಾರೆ. 'ಲೂಯಿ ಡುಮೊನಂತಹ ಸಾಮಾಜಿಕ ಮಾನವಶಾಸ್ತ್ರಜ್ಞರು ಬಂದ ಮೇಲಂತೂ ಜಾತಿ ಎನ್ನುವುದು ಏನು ಎನ್ನುವುದರ ಬಗ್ಗೆ ನಮಗೆ ಸಂಶಯವೇ ಉಳಿಯಲಿಲ್ಲ. ಶುದ್ಧ, ಅಶುದ್ಧದ ಆಚಾರದ ಮೇಲೆ ಸಮಾಜ ಶ್ರೇಣೀಕೃತವಾಗಿ ವಿಭಜನೆಯಾಗಿರುವುದೇ ಭಾರತೀಯ ಸಮಾಜದ ಮುಖ್ಯ ಲಕ್ಷಣ ಎಂದು ಅವನು ಗುರುತಿಸಿ ನಂತರ ಅಲ್ಲಿಂದ ಕಲಿತು ಬಂದ ಭಾರತೀಯ ಸಮಾಜಸಾಸ್ತ್ರಜ್ಞರು ಪ್ರಶ್ನಾತೀತವಾಗಿ ಅವರನ್ನು ಒಪ್ಪಿಕೊಂಡರು. ಅಷ್ಟೇ ಅಲ್ಲ ಆ ನಿರ್ಧಾರಕ್ಕೆ ಪೂರಕವಾದ ಅಂಶಗಳನ್ನು ಹೆಕ್ಕಿ ತೆಗೆಯತೊಡಗಿದರು. ಭಾರತದ ಸಮಾಜಿಕಶಾಸ್ತ್ರಗಳ ಮುಖ್ಯ ತಿರುಳೇ ಅದಾಗಿತ್ತು'[೫೩]. ಇದರಿಂದಾಗಿ ಒಂದಲ್ಲಾ ಒಂದು ಕಾರಣಕ್ಕಾಗಿ ವಸಾಹತು ಕಾಲಘಟ್ಟದ ಸಾಮಾಜಿಕ ಅಧ್ಯಯನಗಳಲ್ಲಿ ಮುಖ್ಯವಾಗಿ ಕಂಡುಬರುತ್ತಿದ್ದ ಸಾಮಾಜಿಕ ಸಂಗತಿಯೆಂದರೆ ಜಾತಿ.

ಜಾತಿಯೆಂಬುದು, ಮೊದಲು ಭಾರತದ ಸಾಮಾಜಿಕ ಚರಿತ್ರೆಯಲ್ಲಿ ಇತ್ತೇ, ಇಲ್ಲವೇ? ಜಾತಿ ಕೇವಲ ಯುರೋಪಿನವರ ಸೃಷ್ಟಿಯೇ? ಎಂಬ ಪ್ರಶ್ನೆಗಳು ಸಹಜವಾಗಿಯೇ ಹುಟ್ಟುತ್ತವೆ. ಆದರೆ ಇಂಡಿಯಾದಲ್ಲಿ ಮೊದಲ ಬಾರಿಗೆ ಜಾತಿ ಸಮುದಾಯಗಳನ್ನು ಅಧ್ಯಯನ ಮಾಡಲು ಪ್ರಾರಂಭಿಸಿದವರು ಯುರೋಪಿನ ಓರಿಯಂಟಲಿಸ್ಟರು ಮತ್ತು ಆನಂತರ ಅಲ್ಲಿಂದಲೇ ಬಂದ ಸಾಮಾಜಿಕ ಮಾನವಶಾಸ್ತ್ರಜ್ಞರು. ಜಾತಿ ಸಮುದಾಯಗಳ ಚಾರಿತ್ರಿಕ ಹುಟ್ಟು ಮತ್ತು ಬೆಳವಣಿಗೆಗಳನ್ನು ಭಾರತದ ಪ್ರಾಚೀನ ಶಾಸ್ತ್ರಗ್ರಂಥಗಳನ್ನು ಅಧ್ಯಯನ ಮಾಡಿದ ಓರಿಯಂಟಲಿಸ್ಟರು ವಿವರಿಸಿದರು. ಆದರೆ ವರ್ತಮಾನದಲ್ಲಿ ಜಾತಿ ಸಮುದಾಯಗಳ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿದ್ದು ೧೮ ನೇ ಶತಮಾನದ ಯುರೋಪಿನ ಮಾನವಶಾಸ್ತ್ರಜ್ಞರು. ೧೭೬೯ ರಲ್ಲಿ ಬಂಗಾಳದ ಗೌರ್ನರ್ ಆಗಿದ್ದ ಹೆನ್ರಿ ವರೆಲ್ಸ್ಟ್ ಎಂಬಾತ ತನ್ನ ಪ್ರಾಂತ್ಯದಲ್ಲಿ ಕಂದಾಯ ವಸೂಲಿ ಮಾಡುತ್ತಿದ್ದ ಸ್ಥಳೀಯ ಕುಟುಂಬಗಳ ವಿವರಣೆಯನ್ನು ಕಲೆ ಹಾಕಲು ರೆವಿನ್ಯೂ ಸೂಪರ್‌ವೈಸರ್‌ಗಳಿಗೆ ಆದೇಶ ನೀಡಿದ್ದನು. ಆಗ ತಾನೇ ಬ್ರಿಟನ್‌ನಿಂದ ಬಂದಿದ್ದ, ವೃತ್ತಿಯಲ್ಲಿ ವೈದ್ಯನಾಗಿದ್ದ ಫ್ರಾನ್ಸಿಸ್ ಬುಕಾನಿನ್ ಎಂಬಾತ ಬಂಗಾಳದ ಪ್ರತಿಷ್ಠಿತ ಕುಟುಂಬಗಳ ವಿವರಗಳನ್ನು ಕಲೆಹಾಕಿದನು. ಈತ ೧೮೦೭ ರಲ್ಲಿ Ethnographic survay of Bengal ಎಂಬ ಯೋಜನೆಯಡಿ ಈ ಅಧ್ಯಯನವನ್ನು ಕೈಗೊಳ್ಳುತ್ತಾನೆ. ಆದರೆ ಭಾರತದಲ್ಲಿ ಜಾತಿ ಸಮುದಾಯಗಳ ಶಿಸ್ತುಬದ್ಧ ಅಧ್ಯಯನ ಕೈಗೊಂಡವನು ಅಬ್ಬೆದುಬಾಯಿಸ್ ಎಂಬ ಫ್ರೆಂಚ್ ಪಾದ್ರಿ. ಈತ ಕರ್ನಾಟಕದ ಮೈಸೂರು ಭಾಗದಲ್ಲಿ ಪಾದ್ರಿಯಾಗಿ ಕೆಲಸ ಮಾಡುತ್ತಿದ್ದ.

೧೮೧೬ ರಲ್ಲಿ ಈತನ ಕೃತಿ Hindu manners, customs and ceremonies ಪ್ರಕಟವಾಯಿತು. ಈವತ್ತಿಗೂ ಈ ಕೃತಿಯು ಒಂದು ಪ್ರಮಾಣಬದ್ಧ ಗ್ರಂಥವಾಗಿದೆ[೪]. ಮೈಸೂರು ಭಾಗದ ಜನರ ಮತ್ತು ವಿವಿಧ ಜಾತಿ ಸಮುದಾಯಗಳ ನಡುವಿನ ಅಂತಃಸಂಬಂಧಗಳನ್ನು ಈ ಕೃತಿ ವಿವರಿಸುತ್ತದೆ. ಜೊತೆಗೆ ವಿವಿಧ ಜಾತಿಗಳ ಅದರಲ್ಲೂ ಬ್ರಾಹ್ಮಣ ಸಮುದಾಯದ ಆಚರಣೆ, ವಿಧಿನಿಷೇಧಗಳ ಕುರಿತು ಈ ಪುಸ್ತಕ ಅಂದಿನ ಮಹತ್ವದ ವಿವರಗಳನ್ನು ಒದಗಿಸುತ್ತದೆ. ೧೮೨೦ ರಲ್ಲಿ ವಾಲ್ಟರ್ ಹ್ಯಾಮಿಲ್ಟನ್‌ನ 'A Geographical, Statistical and Historical Description of Hindostan and Adjacent countries' ಎಂಬ ಕೃತಿ ಪ್ರಕಟವಾಯಿತು. ಇದು ಭಾರತದ ವಿವಿಧ ಜನವರ್ಗಗಳ ಮತ್ತು ನಗರ ಪ್ರದೇಶಗಳಲ್ಲಿನ ಸಮುದಾಯಗಳ ಸ್ಥೂಲ ಚಿತ್ರಣವನ್ನು ನೀಡುತ್ತದೆ.

ಸರ್ ಹೆನ್ರಿ ಮೈನ್ ಎಂಬಾತ ೧೮೭೧ ರಲ್ಲಿ 'Village communities in the east and west' ಎಂಬ ಕೃತಿಯನ್ನು ಪ್ರಕಟಿಸಿದನು. ಈ ಗ್ರಂಥವು ಪ್ರಮುಖವಾಗಿ ಗ್ರಾಮಗಳಲ್ಲಿನ ಜಾತಿ ಸಮುದಾಯಗಳ ಅಧ್ಯಯನವೇ ಆಗಿದೆ. ಆದರೆ ಭಾರತದಲ್ಲಿ ಜಾತಿಗಳ ಕುರಿತ ವಿವರಗಳನ್ನು ಕಲೆ ಹಾಕಲು ಪ್ರಾರಂಭಿಸಿದ್ದು ೧೮೭೧ ರಲ್ಲಿ. ೧೮೭೧ ರಲ್ಲಿ ಬ್ರಿಟಿಷ್ ಅಧಿಕಾರಿಗಳು ಭಾರತದ ಜನಗಣತಿಯನ್ನು ಮಾಡಲು ಮುಂದಾದರು. ಇದರಿಂದಾಗಿ ಭಾರತದಲ್ಲಿ ಮೊದಲ ಬಾರಿಗೆ ಜನಗಣತಿ ಪ್ರಾರಂಭವಾಯಿತು. ೧೯೦೧ ರಲ್ಲಿ ಸರ್ ಹರ್ಬಟ್ ರಿಸ್ಲೆಯು Ethnographic Survey of India ಎಂಬ ಸಂಸ್ಥೆಯನ್ನು ಹುಟ್ಟುಹಾಕಿದ. ಅಲ್ಲದೆ ಹರ್ಬರ್ಟ್ ರಿಸ್ಲೆಯು ಭಾರತದಲ್ಲಿ ನಡೆದ ಜಾತಿ ಸಮುದಾಯಗಳ ಗಣತಿಯ ಸೂಪರಿಂಡಿಡೆಂಟ್ ಆಗಿಯು ನೇಮಕವಾದ. ಈ ಸರ್ವೆಯನ್ನು 'ಬ್ರಿಟೀಷ್ ಭಾರತದ' ವಿವಿಧ ಪ್ರಾಂತ್ಯಗಳಲ್ಲಿ ವಿಸ್ತರಿಸಲಾಯಿತು. ಎಡ್ಗರ್ ಥರ್ಸಟನ್, ಆರ್.ಇ.ಎಂಥೋವನ್, ಹರ್ಬರ್ಟ್ ರಿಸ್ಲೆ, ವಿಸ್ಸನ್, ಬ್ಲಂಟ್, ಹಟ್ಟನ್ ಮತ್ತು ಗುಹಾ ಒಂದೊಂದು ಪ್ರಾಂತ್ಯದ ಜನಗಣತಿಯ ಉಸ್ತುವಾರಿಯನ್ನು ವಹಿಸಿಕೊಂಡರು. ಈ ಜನಗಣತಿಯು ವಿಶಿಷ್ಟ ಸ್ವರೂಪದಾಗಿದ್ದು, ಒಂದೊಂದು ಜಾತಿ ಸಮುದಾಯದ ಕುರಿತು ಮೊದಲಿಗೆ ಚಿಕ್ಕ ಚಿಕ್ಕ ಪುಸ್ತಕಗಳನ್ನು (Monographs) ಪ್ರಕಟಿಸುವುದು, ಮತ್ತು ಸದರಿ ಪುಸ್ತಕಗಳಲ್ಲಿ ಒಂದು ಜಾತಿ ಸಮುದಾಯದ ಸಮಗ್ರ ವಿವರಗಳನ್ನು ಕಲೆ ಹಾಕಲು ಯೋಜಿಸಲಾಯ್ತು. ಭಾರತದ ಚರಿತ್ರೆಯಲ್ಲಿ ಪ್ರಾಯಶಃ ಇದೇ ಮೊದಲ ಬಾರಿಗೆ ಬಹುತೇಕ ಎಲ್ಲಾ ಜಾತಿ ಸಮುದಾಯಗಳ ಸಮಗ್ರ ವಿವರಗಳನ್ನು ಕಲೆ ಹಾಕಲಾಯಿತು. ಇದೊಂದು ರೀತಿಯ ಚಾರಿತ್ರಿಕ ದಾಖಲೆಯೇ ಆಗಿದೆ. ಅಲ್ಲದೆ ಭಾರತದಲ್ಲಿ ಮೊದಲ ಜಾತಿ ಆಧಾರಿತ ಜನಗಣತಿ ಇದೇ ಆಗಿದೆ. ಆನಂತರ ೧೯೩೧, ೧೯೪೧ ಮತ್ತು ೧೯೫೧ ರ ಜನಗಣತಿಯಲ್ಲಿ ಜಾತಿಯನ್ನು ಮುಖ್ಯವಾಗಿ, ಪರಿಗಣಿಸದೆ ಯೋಜನಾಧಾರಿತ ಜನಗಣತಿಯನ್ನು ಮಾಡಲಾಯಿತು[೫].

ಈ ಜನಗಣತಿಯನ್ನು ಹೊರತುಪಡಿಸಿ ಭಾರತದ ಜಾತಿ ಸಮುದಾಯಗಳ ಕುರಿತು ಸ್ವತಂತ್ರ ಪುಸ್ತಕಗಳೂ ಪ್ರಕಟವಾದವು. ಎಸ್.ಸಿ.ರಾಯ್. ೧೯೩೪ ರಲ್ಲಿ Caste, Race and Religion in India ಎಂಬ ಪುಸ್ತಕವನ್ನು ಪ್ರಕಟಿಸಿದರು. ಅಲ್ಲದೆ ೧೯೦೮-೦೯ ರ ಅವಧಿಯಲ್ಲಿ ಕಂಪನಿ ಆಡಳಿತವು Imperial Gazetter of India ದ ೨೬ ಸಂಪುಟಗಳನ್ನು ಪ್ರಕಟಿಸಿತು. ಈ ಸಂಪುಟಗಳು ಅಂದಿನ ಕಾಲಘಟ್ಟದ ಅಪರೂಪದ ವಿವರಗಳ್ನು ಹೊಂದಿವೆ. ಭಾರತದಲ್ಲಿ ಸಮಾಜಶಾಸ್ತ್ರಕ್ಕೆ ಭದ್ರಬುನಾದಿ ಹಾಕಿದ

ಜಿ.ಎಸ್.ಘುರ್ಯೆ ಅವರು ೧೯೩೨ ರಲ್ಲಿ Caste and Race in India ಎಂಬ ಪುಸ್ತಕವನ್ನು ಪ್ರಕಟಿಸಿದರು. ಘುರ್ಯೆಯವರ ವಿದ್ಯಾರ್ಥಿನಿಯಾಗಿದ್ದ ಖ್ಯಾತ ಸಮಾಜಶಾಸ್ತ್ರಜ್ಞೆ ಇರಾವತಿ ಕರ್ವೆ ೧೯೫೨ ರಲ್ಲಿ Kinship organisation in India ಪುಸ್ತಕವನ್ನು ಪ್ರಕಟಿಸಿದರು. ಅಲ್ಲದೆ ಖ್ಯಾತ ಗಾಂಧಿವಾದಿಯಾಗಿದ್ದ, ೧೯೫೯ ರಿಂದ ೧೯೬೪ ರ ಅವಧಿಗೆ ಆಂಥ್ರೋಪಲಾಜಿಕಲ್ ಸರ್ವೆ ಆಫ್ ಇಂಡಿಯಾದ ನಿರ್ದೇಶಕರಾಗಿದ್ದ ಮತ್ತು ೧೯೬೭ ಮತ್ತು ೭೦ ರ ಅವಧಿಗೆ ಭಾರತ ಸರ್ಕಾರದ Scheduled caste and scheduled tribe ಕಮಿಶನ್ನಿನ ಕಮಿಷನರಾಗಿದ್ದ ನಿರ್ಮಲ್ ಕುಮಾರ್ ಭೋಸ್‌ರವರು The structure of Hindu Society ಎಂಬ ಪುಸ್ತಕವನ್ನು ಪ್ರಕಟಿಸಿದರು.

ಆದರೆ ಸಾಮಾಜಿಕ ಮಾನವಶಾಸ್ತ್ರೀಯ ಹಿನ್ನೆಲೆಯಲ್ಲಿ ಭಾರತದ ಜಾತಿಗಳನ್ನು ಅಧ್ಯಯನ ಮಾಡಿದವರು ಲೂಯಿ ಡೂಮೊ, Homo Heirarchicus ಎಂಬ ಅವರ ಗ್ರಂಥ ೧೯೭೦ ರಲ್ಲಿ ಪ್ರಕಟವಾಯಿತು. ಒಂದು ಅರ್ಥದಲ್ಲಿ ಈ ಪುಸ್ತಕವು ಭಾರತದ ಜಾತಿ ವ್ಯವಸ್ಥೆಯ ಕುರಿತು ಇಡೀ ಯುರೋಪು ಚಿಂತಿಸುವ ಬಗೆಯನ್ನು ಪ್ರತಿನಿಧಿಸುವ ಪ್ರಮಾಣ ಗ್ರಂಥವಾಗಿದೆ. ಈವತ್ತಿಗೂ ಡೋಮೋರವರ ಪುಸ್ತಕವು ಹಲವು ಚರ್ಚೆಗಳನ್ನು ಚಾಲ್ತಿಯಲ್ಲಿಟ್ಟಿದೆ. ಇದರ ಜೊತೆಗೆ ಎಂ.ಎನ್.ಶ್ರೀನಿವಾಸ್ ೧೯೬೨ ರಲ್ಲಿ Caste in modern India ಎಂಬ ಪುಸ್ತಕವನ್ನು ಪ್ರಕಟಿಸಿದರು. ಇವರ ಜೊತೆ ರಾಧಾಕಮಲ್ ಮುಖರ್ಜಿ, ಬಿ.ಕೆ.ಸರ್ಕಾರ್, ಕೆ.ಪಿ.ಚಟ್ಟೋಪಾಧ್ಯಾಯ, ಬಿ.ಎಸ್.ಗುಹಾ, ಡಿ.ಪಿ. ಮುಖರ್ಜಿ, ಡಿ.ಎನ್.ಮುಜುಂದಾರ್, ಬ್ರಜೇಂದ್ರನಾಥ್ ಸೀಲ್, ಪ್ಯಾಟ್ರಿಕ್ ಗಡ್ಡೇಸ್, ಪಾರ್ವತಮ್ಮ, ಎಸ್.ಸಿದುಬೆ, ವಾಡಿಯಾ, ಕತ್ಲೀನ್ ಗಾಫ್, ಎಸ್.ಸಬರ್‌ವಾಲ್, ಆರ್.ಖಾರೆ, ವಿದ್ಯಾರ್ಥಿ, ವಿಲ್ಬನ್‌ಸಿಂಗರ್, ಮಾರಿಯಟ್ ಮತ್ತು ಬರ್ನಾರ್ಡ್ ಕೋನ್ ಮುಂತಾದ ಪ್ರಮುಖರು ಭಾರತದ ಜಾತಿ ಸಮುದಾಯಗಳ ಅಧ್ಯಯನಗಳನ್ನು ಕೈಗೊಂಡಿದ್ದಾರೆ. ಇವರ ಜೊತೆ ಭಾರತದ ಜಾತಿಗಳ ಚಾರಿತ್ರಿಕ ಅಧ್ಯಯನವನ್ನು ಕೈಗೊಂಡವರು ಡಾ. ಅಂಬೇಡಕರ್. ಅಂಬೇಡ್ಕರ್ ನಿಜವಾದ ಅರ್ಥದಲ್ಲಿ 'ಒಳಗಿನವರಾಗಿ' ಭಾರತದ ಜಾತಿವ್ಯವಸ್ಥೆಯನ್ನು ಅಧ್ಯಯನ ಮಾಡಿದರು. ಈ ಮೇಲಿನ ಅಧ್ಯಯನಕಾರರಲ್ಲಿ ಕಂಪನಿ ಆಡಳಿತದ ಅಧಿಕಾರಿಗಳು, ಸಮಾಜಶಾಸ್ತ್ರಜ್ಞರು, ಮಾನವಶಾಸ್ತ್ರಜ್ಞರು ಮತ್ತು ಮುಖ್ಯವಾಗಿ ಮಿಶನರಿಗಳು ಸೇರಿದ್ದಾರೆ.

ಇತ್ತೀಚೆಗೆ ಹಲವು ವಿಶ್ವವಿದ್ಯಾಲಯಗಳಲ್ಲಿ ಮತ್ತು ಸ್ವಯಂಸೇವಾ ಸಂಸ್ಥೆಗಳು ಮತ್ತು ಆಸಕ್ತ ವಿದ್ವಾಂಸರು ಜಾತಿ ಸಮುದಾಯಗಳ ಅಧ್ಯಯನಗಳನ್ನು ನಡೆಸುತ್ತಿದ್ದಾರೆ. ೧೯೯೩ ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಉಪಸಂಸ್ಕೃತಿ ಅಧ್ಯಯನ ಮಾಲೆಯ ಅಡಿಯಲ್ಲಿ ಸರಿಸುಮಾರು ೪೨ ಜಾತಿ ಮತ್ತು ಬುಡಕಟ್ಟುಗಳ ಅಧ್ಯಯನವನ್ನು ಆಗು ಮಾಡಿದೆ. ಒಂದು ಅರ್ಥದಲ್ಲಿ ಈ ೪೨ ಪುಸ್ತಕಗಳು ಮಾನವಶಾಸ್ತ್ರದ ವಿದ್ಯಾರ್ಥಿಗಳಿಗೆ ಮಹತ್ವದ ಆಕರಗಳಾಗಿವೆ. ಮುಂದೆ ೧೯೯೮ ರಲ್ಲಿ ಲಕ್ಕಪ್ಪಗೌಡರು ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಕರ್ನಾಟಕದ ಜಾತಿ ಮತ್ತು ಬುಡಕಟ್ಟುಗಳ ಕುರಿತ ಎನ್‌ಸೈಕ್ಲೋಪಿಡಿಯಕ್ ಮಾದರಿಯಲ್ಲಿ ಎರಡು ಸಂಪುಟಗಳನ್ನು ಹೊರ ತರಲಾಯಿತು. ಇದರ ಜೊತೆಗೆ ತೀ.ನಂ.ಶಂಕರನಾರಾಯಣ, ಕಾಳೇಗೌಡ ನಾಗವಾರ, ಹಿ.ಚಿ.ಬೋರಲಿಂಗಯ್ಯ, ಕೋಟಿಗಾನಹಳ್ಳಿ ರಾಮಯ್ಯ,

ಅಭಯ್ ಕುಮಾರ್, ಅಂಬಳಿಕೆ ಹಿರಿಯಣ್ಣ, ಚಿನ್ನಪ್ಪಗೌಡ, ರಂಗರಾಜ ವನದುರ್ಗ, ಮಂಜುನಾಥ ಬೇವಿನಕಟ್ಟೆ, ಪಿ.ಕೆ.ಖಂಡೋಬ, ಡಿ.ಬಿ.ನಾಯಕ್, ಡಾ.ಸಣ್ಣರಾಮ, ಮುಂತಾದ ವಿದ್ವಾಂಸರು ಜಾತಿ ಸಮುದಾಯಗಳ ಅಧ್ಯಯನಗಳನ್ನು ಕೈಗೊಂಡಿದ್ದಾರೆ. ಇತ್ತೀಚೆಗೆ ಹಲವು ಜಾತಿ ಸಂಘಟನೆಗಳೂ ಸಹ ತಮ್ಮ ಸಂಘಟನೆಯ ಮುಖವಾಣಿಯಾಗಿ ತಮ್ಮ ಜಾತಿಗಳ ಇತಿಹಾಸವಿರುವ ಸ್ಮರಣ ಸಂಚಿಕೆಗಳನ್ನು ಹೊರತರುತ್ತಿದ್ದಾರೆ. ಹಾಗೆ ನೋಡಿದರೆ ಇಂದು ಸಮುದಾಯ ಅಧ್ಯಯನಗಳು ಮೊದಲಿಗಿಂತ ಹೆಚ್ಚಾಗಿ ನಡೆಯುತ್ತಿವೆ.

ಅಲೆಮಾರಿಗಳ ಅಧ್ಯಯನಗಳು

ಭಾರತದಲ್ಲಿ ಕಂಪನಿ ಆಡಳಿತದ ಸಂದರ್ಭದಲ್ಲಿ ಜಾತಿ ಮತ್ತು ಬುಡಕಟ್ಟುಗಳ ಅಧ್ಯಯನದ ಸಂದರ್ಭದಲ್ಲಿಯೇ ಅಲೆಮಾರಿಗಳ ಅಧ್ಯಯನಗಳೂ ಪ್ರಾರಂಭವಾದವು. ಅಲೆಮಾರಿಗಳನ್ನು ಜಾತಿ ಮತ್ತು ಬುಡಕಟ್ಟುಗಳಿಂದ ಬೇರ್ಪಡಿಸದೆ ಒಟ್ಟಾಗಿಯೇ ಅಧ್ಯಯನ ಮಾಡಿದರೂ ಸಹ 'ಮುಖ್ಯವಾಹಿನಿಯಲ್ಲಿರುವ' ಜಾತಿಗಳಿಗಿಂತ ಹೆಚ್ಚಾಗಿ ಅಧ್ಯಯನ ನಡೆದದ್ದು ಕುಶಲಕರ್ಮಿ, ಆದಿವಾಸಿ ಮತ್ತು ಅಲೆಮಾರಿಗಳ ಮೇಲೆ. ಈವತ್ತು ನಾವು ಕಂಪನಿ ಆಡಳಿತದ ಸಂದರ್ಭದಲ್ಲಿ ನಡೆದ ಜಾತಿ ಮತ್ತು ಬುಡಕಟ್ಟುಗಳ (Caste and Tribes) ಅಧ್ಯಯನ ಸಂಪುಟಗಳನ್ನು ತೆರೆದು ನೋಡಿದರೆ ಅಲ್ಲಿನ ಪುಟಗಳು ಹೆಚ್ಚಾಗಿ ಮೀಸಲಾಗಿರುವುದು ಈ ಮೂರು ಗುಂಪಿನ ಸಮುದಾಯಗಳಿಗೆ. ಈ ಮೂರೂ ಗುಂಪಿನ ಸಮುದಾಯಗಳನ್ನು ಅಧ್ಯಯನ ಮಾಡಲು ಕಂಪನಿ ಆಡಳಿತಕ್ಕೆ ತನ್ನವೇ ಆದ ಅನೇಕ ರಾಜಕೀಯಾರ್ಥಿಕ ಕಾರಣಗಳೂ ಇದ್ದವು. ಕಂಪನಿ ಆಡಳಿತದ ಹೊಸ ಕೃಷಿ ನೀತಿ ಮತ್ತು ಭೂಕಂದಾಯ ಮತ್ತು ತೆರಿಗೆ ವ್ಯವಸ್ಥೆಗಳು ದೇಶೀಯ ವ್ಯವಸಾಯಿ ಸಂರಚನೆಯನ್ನು ಮತ್ತು ವಾಣಿಜ್ಯ ವ್ಯವಹಾರಗಳನ್ನು ನಿಯಂತ್ರಿಸತೊಡಗಿದವು. ದೇಶೀಯ ಊಳಿಗಮಾನ್ಯ ವ್ಯವಸ್ಥೆಯ ರೂಪುರೇಷೆಗಳು ಮತ್ತು ಅದರ ಪಾರಂಪರಿಕ ಆರ್ಥಿಕ ಚಟುವಟಿಕೆಗಳು ಕಂಪನಿ ಆಡಳಿತದ ಹೊಸ ಕಾಯ್ದೆಗಳಿಂದ ನಿಯಂತ್ರಣಕ್ಕೊಳಪಟ್ಟವು. ಆಗ ದೇಶೀಯ ಊಳಿಗಮಾನ್ಯ ವ್ಯವಸ್ಥೆಯ ಆರ್ಥಿಕತೆಯ ಜೊತೆಗೆ ಸಂಬಂಧವಿರಿಸಿಕೊಂಡಿದ್ದ ಕುಶಲಕರ್ಮಿ, ವ್ಯಾಪಾರಿ ಮತ್ತು ಸೇವಕ ವರ್ಗಗಳು ದಿಕ್ಕು ತಪ್ಪಿದವು. ಮುಖ್ಯವಾಗಿ ಈ ವರ್ಗಕ್ಕೆ ಸೇರಿದ ಸಮುದಾಯಗಳು ಆರ್ಥಿಕವಾಗಿ ನೆಲೆತಪ್ಪಿ ಹೋದವು. ದೇಶೀಯ ಹಾಗು ಸ್ಥಳೀಯ ಕೌಶಲಗಳನ್ನು ಮೈಗೂಡಿಸಿಕೊಂಡಿದ್ದ ಮತ್ತು ಇಲ್ಲಿನ ವ್ಯವಸಾಯಿ ಸಂಬಂಧಗಳನ್ನು ಪೋಷಿಸುತ್ತಿದ್ದ ಕುಶಲಕರ್ಮಿ ಸಮುದಾಯಗಳು ಆರ್ಥಿಕವಾಗಿ ಊಳಿಗಮಾನ್ಯ ವ್ಯವಸ್ಥೆಯನ್ನೇ ಅವಲಂಬಿಸಿದ್ದವು. ಇನ್ನು ಅಲೆಮಾರಿ ವ್ಯಾಪಾರಿಗಳು ಹಳ್ಳಿ ಮತ್ತು ನಗರಗಳ ನಡುವೆ ಸೇತುವೆಯಾಗಿದ್ದುಕೊಂಡು ಸ್ಥಳೀಯ ವ್ಯವಹಾರಗಳನ್ನು ಪೋಷಿಸುತ್ತಿದ್ದರು. ಸೇವಕ ವರ್ಗವಂತೂ ಇನ್ನಿಲ್ಲದಂತೆ ಊಳಿಗಮಾನ್ಯ ವ್ಯವಸ್ಥೆಯನ್ನು ಆರ್ಥಿಕವಾಗಿ ಅವಲಂಬಿಸಿತ್ತು. ಇಂತಹ ಸಂದರ್ಭದಲ್ಲಿ ಕೃಷಿ ಮತ್ತು ವ್ಯಾಪಾರಿಗಳ ಮೇಲೆ ಕಂಪನಿ ಆಡಳಿತ ತಂದ ಕಾಯ್ದೆಗಳು ಈ ಪಾರಂಪರಿಕ ಉತ್ಪಾದನಾ ಸಂಬಂಧಗಳನ್ನು ನಿರ್ಣಾಯಕವಾಗಿ ತಲೆ ಕೆಳಗು ಮಾಡಿದವು. ಅದರಲ್ಲೂ ಸೇವಕ ವರ್ಗಗಳಿಗೆ ಸೇರಿದ ಮನರಂಜಕರು, ಊಳಿಗದವರು, ಸಂಗೀತಗಾರರು ಮುಂತಾದ ಸಮುದಾಯಗಳು ಆರ್ಥಿಕವಾಗಿ ನಿರ್ಗತಿಕ

ಸ್ಥಿತಿಗೆ ತಲುಪಿದವು. ಆ ಸಂದರ್ಭದಲ್ಲಿ ಇವರು ಕಂಪನಿ ಆಡಳಿತದ ವಿರದ್ಧ ಬಂಡೇಳುವುದು ಅನಿವಾರ್ಯವೂ ಆಗಿತ್ತು. ಕಂಪನಿ ಆಡಳಿತದ ಈ ಅಮಾನವೀಯ ಚಲನೆಗಳನ್ನು ಅಲೆಮಾರಿಗಳು, ಆದಿವಾಸಿ ಸಮುದಾಯಗಳು ವಿರೋಧಿಸಿದವು. ಇದೇ ಕಾರಣಕ್ಕೆ, ಭಾರತದಲ್ಲಿ ಮೊದಲ ಬಾರಿಗೆ ಕಂಪನಿ ಆಡಳಿತದ ವಿರುದ್ಧ ಆದಿವಾಸಿಗಳು ಮತ್ತು ಅಲೆಮಾರಿಗಳು ವರ್ಗ ಹೋರಾಟಕ್ಕಿಳಿದರು. ಜೊತೆಗೆ ಕಂಪನಿ ಸೈನ್ಯಕ್ಕೆ ತಮ್ಮ ಕ್ಷಿಪ್ರ ಚಟುವಟಿಕೆಗಳಿಂದಾಗಿ ಈ ಸಮುದಾಯಗಳು ಒಗಟಾಗಿಯೇ ಪರಿಣಮಿಸಿದ್ದವು. ಅದರಲ್ಲೂ ಅಲೆಮಾರಿಗಳು ಗ್ರಾಮ ಮತ್ತು ನಗರಗಳ ಜೊತೆಗೆ ನಡೆವ ವ್ಯಾಪಾರೀ ಚಟುವಟಿಕೆಗಳ ವಾಹಕಗಳಾಗಿದ್ದ ಕಾರಣಕ್ಕಾಗಿ ಕಂಪನಿ ಆಡಳಿತವು ತೆರಿಗೆ ಮತ್ತು ಕಂದಾಯಗಳ ಕಾರಣಕ್ಕಾಗಿ ಅಲೆಮಾರಿಗಳನ್ನು ಮುಖಾಮುಖಿ ಮಾಡಬೇಕಾಯಿತು. ಇದರ ಜೊತೆಗೆ ೧೭೯೩ರಲ್ಲಿ ವಾರನ್ ಹೆಸ್ಟಿಂಗ್ಸ್ ತಂದ ಖಾಯಂ ಜಮೀನ್ದಾರಿ ಪದ್ಧತಿಯು ಸ್ಥಳೀಯ ಜಮೀನ್ದಾರರನ್ನು ಆರ್ಥಿಕವಾಗಿ ಹಲವು ಇಕ್ಕಟ್ಟುಗಳಿಗೆ ಸಿಲುಕಿಸಿತು. ಅಲ್ಲಿಯವರೆಗೂ ಒಂದು ಸ್ವಯಂಪೂರ್ಣ ಗ್ರಾಮ ವ್ಯವಸ್ಥೆಯಲ್ಲಿ ಸ್ಥಳೀಯ ಆರ್ಥಿಕತೆಯನ್ನು ಪೋಷಿಸಿಕೊಂಡು ಬರುತ್ತಿದ್ದ ಭೂಮಾಲಿಕರು ಕಂಪನಿ ಆಡಳಿತಕ್ಕೆ ಅನಿವಾರ್ಯವಾಗಿ ನಿಷ್ಠರಾಗಬೇಕಾಯಿತು ಮತ್ತು ನಿಶ್ಚಿತ ಭೂಕಂದಾಯವನ್ನು ಸಲ್ಲಿಸಬೇಕಾದ ಅನಿವಾರ್ಯತೆ ಅವರಿಗೆ ಎದುರಾಯಿತು. ಆಗ ಭೂಮಾಲಿಕರು ತಾವು ಪೋಷಿಸಿಕೊಂಡು ಬರುತ್ತಿದ್ದ ಸಮುದಾಯಗಳನ್ನು ಅನಿವಾರ್ಯವಾಗಿ ಬಿಟ್ಟುಕೊಡಬೇಕಾಯಿತು. ಯಾವ ಸಮುದಾಯಗಳು ಸ್ಥಳೀಯ ಊಳಿಗಮಾನ್ಯ ಆರ್ಥಿಕ ಚಟುವಟಿಕೆಗಳನ್ನು ಅವಲಂಬಿಸಿಕೊಂಡು ಬದುಕುತ್ತಿದ್ದವೋ ಅವು ಬೇರೆಡೆ ವಲಸೆ ಹೋಗುವುದು ಮತ್ತು ಜೀವನ ನಿರ್ವಹಣೆಗೆ ಪರ್ಯಾಯ ಆರ್ಥಿಕ ಮೂಲಗಳನ್ನು ಕಂಡುಕೊಳ್ಳಲೇಬೇಕಾದ ಅನಿವಾರ್ಯತೆಯನ್ನು ಎದುರಿಸಬೇಕಾಯಿತು. ವ್ಯಾಪಾರಿ ಅಲೆಮಾರಿ ಸಮುದಾಯಗಳು ಭಾರೀ ತೆರಿಗೆಗಳನ್ನು ಪಾವತಿ ಮಾಡದೆ ಕಂಪನಿ ಆಡಳಿತದ ಕೆಂಗಣ್ಣಿಗೆ ಗುರಿಯಾದರು. ಆದಿವಾಸಿಗಳ ಫಲವತ್ತು ಜಮೀನುಗಳನ್ನು, ಬ್ರಿಟೀಷರು ವಾಣಿಜ್ಯ ಬೆಳೆಗಳನ್ನು ಬೆಳೆಯಲು ಆಕ್ರಮಿಸಿಕೊಳ್ಳಲು ಬಂದಾಗಲೆಲ್ಲ ಆದಿವಾಸಿ ಮತ್ತು ಕಂಪನಿ ಸೈನ್ಯದ ನಡುವೆ ಘರ್ಷಣೆಗಳು ಸಂಭವಿಸಿದವು.

ಈ ಎಲ್ಲ ಕಾರಣಗಳಿಗಾಗಿ ಕುಶಲಕರ್ಮಿ, ಆದಿವಾಸಿ ಮತ್ತು ಅಲೆಮಾರಿ ಸಮುದಾಯಗಳು ಆರ್ಥಿಕವಾಗಿ ನೆಲೆ ತಪ್ಪಿ ಹೋದ ಸಂದರ್ಭದಲ್ಲಿ ಕಂಪನಿ ಆಡಳಿತವನ್ನು ಈ ಸಮುದಾಯಗಳು ಪ್ರತಿರೋಧಿಸತೊಡಗಿದವು. ಭೂಮಿ ಮತ್ತು ವ್ಯಾಪಾರಗಳಿಗೆ ಸಂಬಂಧಿಸಿದಂತೆ ಕಂಪನಿ ಆಡಳಿತದ ತೆರಿಗೆ ಮತ್ತು ಭೂಕಂದಾಯದ ನಿಯಮಗಳು ಬಿಗಿಯಾಗುತ್ತಿದ್ದಂತೆ ಈ ಮೂರು ಗುಂಪಿಗೆ ಸೇರಿದ ಸಮುದಾಯಗಳು ಆರ್ಥಿಕವಾಗಿ ದಿಕ್ಕೆಟ್ಟು ಹೋದವು. ಈ ಸಂದರ್ಭದಲ್ಲಿ ಕಂಪನಿ ಆಡಳಿತದ ಜೊತೆ ಸಂಘರ್ಷವೂ ಅನಿವಾರ್ಯವಾಗಿತ್ತು. ನಿತ್ಯದ ಬದುಕು ದಾರುಣಗೊಂಡಾಗ ಈ ಸಮುದಾಯಗಳು ಕಂಪನಿ ಆಡಳಿತವನ್ನು ಇಕ್ಕಟ್ಟಿಗೆ ಸಿಲುಕಿಸುವ ಹಲವು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಬೇಕಾಯಿತು. ಏಕೆಂದರೆ ಒಪ್ಪೊತ್ತಿನ ಊಟದ ಪ್ರಶ್ನೆಯೂ ಕಷ್ಟಕರವಾಗಿದ್ದ ಸಂದರ್ಭದಲ್ಲಿ ಸದರಿ ಸಮುದಾಯಗಳು ಹಲವು ಕಡೆ ಹಿಂಸಾತ್ಮಕವಾಗಿಯೂ ಕಂಪನಿ ಆಡಳಿತಕ್ಕೆ ತಿರುಗಿ ಬಿದ್ದವು.

ಹೀಗೆ ಕಂಪನಿ ಆಡಳಿತದ ವಿರುದ್ಧ ಬಂಡೆದ್ದವರು ಪ್ರಮುಖ ಅಲೆಮಾರಿ ಗುಂಪುಗಳೆಂದರೆ ೧.

ಅಲೆಮಾರಿ ಸಣ್ಣ ವರ್ತಕರು, ೨. ಪ್ರದರ್ಶಕ ಕಲೆಗಳನ್ನು ರೂಢಿಸಿಕೊಂಡಿದ್ದ ಅಲೆಮಾರಿ ಸಮುದಾಯಗಳು, ೩. ಅಲೆಮಾರಿ ವೈದ್ಯರು, ೪. ಅಲೆಮಾರಿ ಸಂಗೀತಗಾರರು, ೫. ಸೇವಕ ಸಮುದಾಯಗಳು. ೬. ಕೃಷಿ ಕೂಲಿಗಳು ಮತ್ತು ೭. ಊಳಿಗಕ್ಕಿದ್ದ ಕೆಳಜಾತಿ ಸಮುದಾಯಗಳು. ಈ ಗುಂಪಿಗೆ ಸೇರಿದ ಎಲ್ಲ ಸಮುದಾಯಗಳು ಭಾರತದ ಊಳಿಗಮಾನ್ಯ ವ್ಯವಸ್ಥೆಯನ್ನು ಅವಲಂಬಿಸಿದ್ದವು. ಯಾವಾಗ ಖಾಯಂ ಜಮೀನ್ದಾರಿ ಪದ್ಧತಿಯನ್ನು ಕಂಪನಿ ಆಡಳಿತ ಜಾರಿ ಮಾಡಿತೋ ಆಗ ಈ ಸಮುದಾಯಗಳ ಆರ್ಥಿಕ ಮೂಲಗಳೂ ಸಹ ಇನ್ನಿಲ್ಲವಾದರೆ ಕಂಪನಿ ಆಡಳಿತದ ವಿರುದ್ಧ ಈ ಸಮುದಾಯಗಳ ಸಂಘರ್ಷ ಅನಿವಾರ್ಯವೂ ಆಗಿತ್ತು. ಈ ಸಂದರ್ಭದಲ್ಲಿ ಮೇಲಿನ ಗುಂಪಿಗೆ ಸೇರಿದ ಅಲೆಮಾರಿಗಳನ್ನು ನಿಯಂತ್ರಿಸಲು ಕಂಪನಿ ಆಡಳಿತವು ಕಾನೂನು ಕ್ರಮ ಕೈಗೊಳ್ಳಬೇಕಿತ್ತು. ಈ ಕಾನೂನು ಸುವ್ಯವಸ್ಥೆಯ ನಿಯಮಗಳನ್ನು ರೂಪಿಸುವ ಪೂರ್ವದಲ್ಲಿ ಅಲೆಮಾರಿಗಳು ಯಾರು? ಎಂದು ಗುರುತಿಸಬೇಕಿತ್ತು. ಇದರ ಜೊತೆಗೆ ಆದಿವಾಸಿ ಮತ್ತು ಅಲೆಮಾರಿ ಸಮುದಾಯಗಳು 'ಮುಖ್ಯವಾಹಿನಿಯಿಂದ' ಪ್ರತ್ಯೇಕಗೊಂಡ ಭಿನ್ನ ಸಮಾಜಕ್ಕೆ ಸೇರಿದವರು. ಈ ಸಮುದಾಯಗಳು 'ಮುಖ್ಯವಾಹಿನಿಯ' ಸಮಾಜಗಳಿಗೆ ಭಿನ್ನವಾದ ಜೀವನ ಶೈಲಿಯನ್ನು ರೂಪಿಸಿಕೊಂಡಿರುವ ಕಾರಣಕ್ಕಾಗಿ ಸಾಮಾಜಿಕವಾಗಿ ಮತ್ತು ರಾಜಕೀಯಾರ್ಥಿಕ ಕಾರಣಗಳಿಗಾಗಿ ಇವರಿಗೆ 'ಪ್ರತ್ಯೇಕ' ಅಸ್ತಿತ್ವವಿದೆ ಎಂದು ಕಂಪನಿ ಆಡಳಿತ ನಿರ್ಣಯಿಸಿತು. ಈ ನಿರ್ಣಯದ ಹಿಂದೆ ಭಾರತದ ಒಟ್ಟಾರೆಯ ಸಾಮಾಜಿಕ ಸಂದರ್ಭದಿಂದ ಅಲೆಮಾರಿಗಳನ್ನು ಮತ್ತು ಆದಿವಾಸಿಗಳನ್ನು ಪ್ರತ್ಯೇಕಗೊಳಿಸಿ 'ಬೇರ್ಪಡಿಸಿ ಆಳುವ ನೀತಿ' ಪ್ರಧಾನವಾಗಿ ಕೆಲಸ ಮಾಡಿದೆ. 'ಮೊದಲು ಕಂಪನಿ ಆಡಳಿತದಲ್ಲಿದ್ದ ಬ್ರಿಟೀಷ್ ಅಧಿಕಾರಿಗಳು ಭಾರತದಲ್ಲಿ ಕಾನೂನು ಸುವ್ಯವಸ್ಥೆಯ ಕಾರಣಗಳನ್ನು ಮುಂದಿಟ್ಟುಕೊಂಡು ಅಲೆಮಾರಿಗಳನ್ನು ಅಧ್ಯಯನ ಮಾಡಿದರು. ಹೀಗೆ ಅಧ್ಯಯನ ಮಾಡಿದ ಅಧಿಕಾರಿಗಳ ಉಲ್ಲೇಖಗಳಲ್ಲಿ ಜಾತಿ ಮತ್ತು ಬುಡಕಟ್ಟುಗಳ ಜೊತೆಗೆ ಗ್ರಾಮಗಳಲ್ಲಿ ವಾಸಿಸುತ್ತಿದ್ದ ಅಲೆಮಾರಿಗಳು ವಿಶೇಷವಾಗಿ ನಮೂದಿಸಲ್ಪಟ್ಟರು. ಆದರೆ ಹೊರಗಿನಿಂದ ಬಂದಿದ್ದ ಈ ಕಂಪನಿ ಆಡಳಿತದ ಅಧಿಕಾರಿಗಳಿಗೆ ನೆಲೆ ಇಲ್ಲದ ಮತ್ತು ಸ್ಥಳೀಯ ಸಮಾಜದ ಅಲಕ್ಷ್ಯಕ್ಕೆ ಒಳಗಾಗಿದ್ದ ಅಲೆಮಾರಿಗಳು ಅರ್ಥವಾಗಲಿಲ್ಲ. ಈ ಕಾರಣದಿಂದ ಅಲೆಮಾರಿಗಳನ್ನು ಅಪರಾಧಿ ಸಮುದಾಯಗಳೆಂದು ಈ ಅಧಿಕಾರಿಗಳು ಪರಿಗಣಿಸಿ ಬಿಟ್ಟರು[೫]. ಹೀಗೆ ಪರಿಗಣಿಸುವುದು ಅವರಿಗೆ ರಾಜಕೀಯವಾಗಿ ಅನಿವಾರ್ಯದ ಕ್ರಮವೂ ಆಗಿತ್ತು. 'ಅಲೆಮಾರಿ ಸಂಗೀತಗಾರರು, ಬೀದಿ ಬದಿಯ ಪ್ರದರ್ಶನಕಾರರು, ಆದಿವಾಸಿಗಳು, ದೊಂಬರಾಟದವರು, ಜಿಪ್ಸಿಗಳು, ಹಾವಾಡಿಗರು ಮತ್ತು ಅಲೆಮಾರಿ ವೈದ್ಯ ಸಮುದಾಯಗಳು ಬ್ರಿಟೀಷ್ ಅಧಿಕಾರಿಗಳಿಗಳಿಗೆ ಅರ್ಥವಾಗಲಿಲ್ಲ. ಈವತ್ತಿಗೂ ಭಾರತದ ಸ್ಥಳೀಯರಿಗೂ ಈ ಸಮುದಾಯಗಳು ಅರ್ಥವಾಗಿಲ್ಲ. ಇನ್ನು ಬ್ರಿಟೀಷ್ ಅಧಿಕಾರಿಗಳಿಗೆ ಅರ್ಥವಾಗುವುದು ಸಾಧ್ಯವೂ ಇರಲಿಲ್ಲ. ಈ ಕಾರಣದಿಂದ ಬ್ರಿಟೀಷ್ ಅಧಿಕಾರಿಗಳು ಈ ಸಮುದಾಯಗಳ್ನು ಅನುಮಾನಿಸಲಾರಂಭಿಸಿದರು. ಏಕಂದರೆ ಅವಕಾಶ ಸಿಕ್ಕ ಕಡೆಗಳಲ್ಲೆಲ್ಲ ಈ ಸಮುದಾಯಗಳು ಕಂಪನಿ ಆಡಳಿತದ ವಿರುದ್ಧ ಹೋರಾಡಿದ್ದರು. ಈ ಸಮುದಾಯಗಳು ಹೈದರ್ ಆಲಿ ಮತ್ತು ಟಿಪ್ಪು ಸುಲ್ತಾನರ ಸೈನ್ಯದ ಪ್ರಮುಖ ತುಕಡಿಗಳಲ್ಲಿ ಕಾರ್ಯ ನಿರತವಾಗಿದ್ದವು. ಟಿಪ್ಪುವಿನ ಮರಣಾನಂತರ ಬ್ರಿಟೀಷರು ಆತನ ತುಕಡಿಗಳಲ್ಲಿದ್ದ ಈ ಸಮುದಾಯಗಳನ್ನು ಹಿಂಸಾತ್ಮಕವಾಗಿ

ಮತ್ತು ತೀವ್ರವಾದ ದ್ವೇಷದಿಂದ ಹತ್ತಿಕ್ಕಿದರು'[೫೭]. ಜೊತೆಗೆ ಇಂತಹ ಸಮುದಾಯಗಳನ್ನು ನಿಯಂತ್ರಿಸಲು '೧೭೯೩ ರಲ್ಲಿ ರೆಗ್ಯುಲೇಷನ್ ಆಕ್ಟ್‌ನ್ನು ಜಾರಿಗೆ ತರಲಾಯಿತು. ಇದೇ ಆಕ್ಟ್ ೧೮೩೬ ರಲ್ಲಿ ಪರಿಷ್ಕರಣಗೊಂಡಿತು. ೧೮೬೧ ರಲ್ಲಿ ಇದನ್ನೇ ಇಂಡಿಯನ್ ಪಿನಲ್ ಕೋಡ್ ಆಗಿ ಸಾಕಷ್ಟು ಬದಲಾವಣೆ ಮಾಡಿ ಜಾರಿಗೆ ತರಲಾಯಿತು. ನಂತರ ೧೮೭೧ ರಲ್ಲಿ ಪ್ರಖ್ಯಾತ ಕ್ರಿಮಿನಲ್ ಟ್ರೈಬ್ಸ್ ಆಕ್ಟ್ ರೂಪಿಸಲ್ಪಟ್ಟಿತು ಈ ಆಕ್ಟ್ ೧೯೧೦ ಮತ್ತು ೧೯೨೦ ರಲ್ಲಿ ಹೊಸ ಹೊಸ ತಿದ್ದುಪಡಿಗಳಿಗೂ ಒಳಗಾಯಿತು'[೫೮].

ಈ ಕಾಯ್ದೆಯ ಅಡಿಯಲ್ಲಿ ಯಾವ ಯಾವ ಸಮುದಾಯಗಳು ಬರಬೇಕು, ಯಾವ ಸಮುದಾಯಗಳನ್ನು ಈ ಕಾಯ್ದೆಯಡಿ ನಿರ್ಬಂಧಿಸಬೇಕೆಂಬುದನ್ನು ತೀರ್ಮಾನ ಮಾಡಲೆಂದೇ ಅಲೆಮಾರಿಗಳನ್ನು, ಕುಶಲಕರ್ಮಿ ಮತ್ತು ಆದಿವಾಸಿ ಸಮುದಾಯಗಳನ್ನು ಅಧ್ಯಯನ ಮಾಡಲು ಬ್ರಿಟೀಷ್ ಅಧಿಕಾರಿಗಳು ತೊಡಗಿದ್ದರು. ಅದರ ಫಲವಾಗಿಯೇ Ethnograpghic survey of India ಸಂಸ್ಥೆಯನ್ನು ಪ್ರಾರಂಭಿಸಲಾಯಿತು. ಈ ಸಂಸ್ಥೆಯಲ್ಲಿ ಸರ್ವೆ ಮಾಡಲು ತೊಡಗಿದ ಯಾವ ಅಧಿಕಾರಿಗಳಿಗೂ ಮಾನವಶಾಸ್ತ್ರೀಯ ನೈಪುಣ್ಯತೆಯಾಗಲಿ ಮತ್ತು ಸರ್ವೆ ಮಾಡುವ ಶೈಕ್ಷಣಿಕ ತಜ್ಞತೆಯಾಗಲಿ ಇರಲಿಲ್ಲ. ಅವರಿಗೆ ಸ್ಥಳೀಯ ಸಮುದಾಯಗಳ ವಿವರಗಳು ಮಾತ್ರ ಬೇಕಿದ್ದ ಕಾರಣಕ್ಕಾಗಿ ದೇಶೀಯ ಪಂಡಿತರ ಸಹಾಯವನ್ನು ಪಡೆದು ವರದಿಗಳನ್ನು ಸಿದ್ಧಪಡಿಸಿದರು. ಅದರಲ್ಲೂ ೧೮೭೧ ಕ್ರಿಮಿನಲ್ ಟ್ರೈಬ್ ಆಕ್ಟ್‌ನ ಕಾಲಂ ೨೧ 'ಪ್ರತಿ ಹಳ್ಳಿಯ ಯಜಮಾನ ಮತ್ತು ತಳವಾರ ತಮ್ಮ ಗ್ರಾಮ ವ್ಯಾಪ್ತಿಯಲ್ಲಿ ಜೀವಿಸುವ ಯಾವುದೇ ಆದಿವಾಸಿ ಗುಂಪು ಅಥವಾ ಅಲೆಮಾರಿ ಸಮುದಾಯಗಳ್ನು ಕ್ರಿಮಿನಲ್ ಎಂದು ಘೋಷಿಸುವ ಮತ್ತು ಆನಂತರ ಆ ಸಮುದಾಯಗಳ ಭೂಮಿಯನ್ನು ವಶಪಡಿಸಿಕೊಂಡು ತಮ್ಮ ಹತ್ತಿರದ ಪೋಲೀಸ್ ಠಾಣೆಗೆ ದೂರು ಕೊಡುವ ಅಧಿಕಾರವನ್ನು ನೀಡುತ್ತದೆ '[೫೯]. ಯಾವುದೇ ಗ್ರಾಮದ ಭೂಮಾಲಿಕ ಈ ಕಾಯ್ದೆಯ ಅಡಿ ಸ್ಥಳೀಯ ಸಮುದಾಯಗಳನ್ನು ಕ್ರಿಮಿನಲ್ ಎಂದು ಪರಿಗಣಿಸಿ ಠಾಣೆಗೆ ದೂರು ನೀಡುವ ಅಧಿಕಾರ ಪಡೆದಿದ್ದಲ್ಲದೆ, ಅಂತಹ ಸಮುದಾಯಗಳ ಕೃಷಿ ಭೂಮಿಯನ್ನೂ ವಶಪಡಿಸಿಕೊಳ್ಳುವ ನಿರಂಕುಶತೆಯನ್ನೂ ಹೊಂದುವಂತಾಯಿತು. ಈ ಬಗೆಯ ಕಂಪನಿ ಆಡಳಿತದ ಕ್ರಮವು ಖಾಯಂ ಜಮೀನ್ದಾರಿ ವ್ಯವಸ್ಥೆ ಮತ್ತು ಬ್ರಿಟೀಷರ ಭೂಕಂದಾಯ ನೀತಿಯನ್ನು ಬಲಪಡಿಸಲು ಸಹ ಸಹಕಾರಿಯಾಗಿತ್ತು. ಕ್ರಿಮಿನಲ್ ಟ್ರೈಬ್ ಆಕ್ಟ್ ಬಗ್ಗೆ ಮುಂದಿನ ಅಧ್ಯಾಯಗಳಲ್ಲಿ ವಿವರಿಸುವುದಿದೆಯಾದ್ದರಿಂದ, ಕಂಪನಿ ಆಡಳಿತದ ಸಂದರ್ಭದ ಅಲೆಮಾರಿಗಳ ಅಧ್ಯಯನಗಳ ಕುರಿತು ಇನ್ನೂ ಹೆಚ್ಚಿನ ವಿವರಣೆ ನೀಡುವುದು ಅಗತ್ಯವಿದೆ ಎನ್ನಿಸುತ್ತದೆ.

ಈ ಮೊದಲೇ ಹೇಳಿದಂತೆ ಭಾರತದಲ್ಲಿ ೧೯ ನೇ ಶತಮಾನದ ಕೊನೆಯ ಹೊತ್ತಿಗೆ ಪ್ರಾರಂಭವಾದ ಜಾತಿ ಮತ್ತು ಬುಡಕಟ್ಟುಗಳ ಅಧ್ಯಯನಗಳಲ್ಲಿ ಹೆಚ್ಚಾಗಿ ವಿವರಿಸಲ್ಪಟ್ಟ ಸಮುದಾಯಗಳೆಂದರೆ ಆದಿವಾಸಿಗಳು, ಕುಶಲಕರ್ಮಿಗಳು, ಅಲೆಮಾರಿ ಚಿಕ್ಕ ವ್ಯಾಪಾರಿಗಳು, ಕೃಷಿಕರು ಮತ್ತು ಅಲೆಮಾರಿ ಸಮುದಾಯಗಳು. ೧೮೮೩ ರಲ್ಲಿ ಮುಂಬೈ ಕರ್ನಾಟಕದ ಗೆಜಿಟಿಯರ್‌ನ್ನು ಸಂಪಾದಿಸಿದ ವೆಂಕಟರಂಗೋ ಕಟ್ಟಿಯವರು ಈ ಭಾಗದ ಸಮುದಾಯಗಳನ್ನು ಕೆಲವು ಶಿರ್ಷಿಕೆಗಳಲ್ಲಿ ಹೀಗೆ ಪಟ್ಟಿ ಮಾಡುತ್ತಾರೆ. 'ನಿವಾಸಿಗಳು ಬ್ರಾಹ್ಮಣರು, ಲೇಖಕರು, ಲಿಂಗವಂತರು, ಜೈನರು, ವರ್ತಕರು, ಯುದ್ಧೋಪಜೀವಿಗಳು, ಒಕ್ಕಲಿಗರು, ಶಿಲ್ಪಗರು,

ಕೈಗಾರಿಕೆಯವರು, ಪಶುಗಳನ್ನು ಸಾಕಿ ಜೀವಿಸುವವರು, ಸಿಂದೀ ತೆಗೆಯುವವರು, ಮೀನ ಬಲೆಗಾರರು, ಊಳಿಗದವರು, ನೃತ್ಯಗಾಯನಗಳಿಂದ ಜೀವಿಸುವವರು, ಕೂಲಿಗಾರರು, ಕಿರುಕಳ ಜಾತಿಯವರು, ತಿರುಕರು, ನೀಚ ಜಾತಿಯವರು, ಮುಸಲ್ಮಾನರು, ಖ್ರಿಸ್ತಿಯನ್ನರು'[೬೦]. ಈ ಗೆಜಿಟಿಯರ್‌ನಲ್ಲಿ ಮೊದಲಿಗೆ ಬ್ರಾಹ್ಮಣ ಮತ್ತು ಜೈನರನ್ನು ಕೇವಲ ಔಪಚಾರಿಕವಾಗಿ ಪರಿಚಯಿಸಲು ಕೆಲವು ಪುಟಗಳನ್ನು ಮೀಸಲಿಟ್ಟಿದ್ದನ್ನು ಬಿಟ್ಟರೆ ಸದರಿ ಗೆಜೆಟಿಯರ್‌ನಲ್ಲಿ ಸುಮಾರು ೧೫೦ ಕ್ಕೂ ಹೆಚ್ಚು ಪುಟಗಳಲ್ಲಿ ಕೃಷಿಕರು ವ್ಯಾಪಾರಿಗಳು, ಕುಶಲಕರ್ಮಿ, ಪ್ರದರ್ಶಕ ಕಲೆಗಳನ್ನು ನಂಬಿದ ಸಮುದಾಯಗಳು, ಕೆಳಜಾತಿ ಮತ್ತು ಊಳಿಗ ಸಮುದಾಯಗಳ ವಿವರಣೆಗಳೇ ತುಂಬಿವೆ. ಅಂದು ಕಂಪನಿ ಆಡಳಿತಕ್ಕೆ ಕಂಠಕಪ್ರಾಯವಾಗಿದ್ದ ಕೃಷಿಕರು, ಯುದ್ಧೋಪಜೀವಿಗಳು (Militant) ಬುಡಕಟ್ಟುಗಳು, ಕುಶಲಕರ್ಮಿ, ಅಲೆಮಾರಿ ಸಮುದಾಯಗಳನ್ನು ಈ ಗೆಜೆಟಿಯರ್‌ನಲ್ಲಿ ಹೆಚ್ಚಾಗಿ ವಿವರಿಸಲಾಗಿದೆ. ವೆಂಕಟರೊಂಗೋ ಕಟ್ಟಿಯವರು ಅಲೆಮಾರಿಗಳಿಗೆ 'ಗುಹ್ನೇಗಾರರು' ಎಂಬ ನಾಮಕರಣ ಮಾಡುತ್ತಾರೆ. ಗುಹ್ನೆಗಾರ ಜಾತಿಗಳು ಕರ್ನಾಟಕದಲ್ಲಿ ಯಾವವು ಎಂದು ಪಟ್ಟಿ ಮಾಡುತ್ತಾರೆ[೬೧]. ಜೊತೆಗೆ ಯಾವ ಯಾವ ಠಾಣೆ ಮತ್ತು ಕೋರ್ಟ್‌ಗಳಲ್ಲಿ ಈ ಜಾತಿಗಳ ಕುರಿತ ವ್ಯಾಜ್ಯಗಳಿವೆ ಎಂದು ಕಟ್ಟಿಯವರು ವಿವರಿಸುತ್ತಾರೆ.

ಇನ್ನು ಮದ್ರಾಸ್ ಪ್ರಾಂತ್ಯದ ಜಾತಿ ಮತ್ತು ಬುಡಕಟ್ಟುಗಳನ್ನು ಅಧ್ಯಯನ ಮಾಡಿದ ಮತ್ತು 'Castes and Tribes of Southern India' ದ ಏಳು ಸಂಪುಟಗಳಲ್ಲಿ ಎಡ್ಗರ್ ಥರ್ಸಟನ್ ಯಾವ ಯಾವ ಸಮುದಾಯಗಳನ್ನು ಹೆಚ್ಚಾಗಿ ವಿವರಿಸಲು ಗಮನ ಹರಿಸಿದ್ದಾನೆ ಎಂಬುದನ್ನು ನೋಡಬಹುದಾಗಿದೆ.

ಸಂಪುಟ - ೧, ಒಟ್ಟು ಪುಟಗಳು - ೩೯೦

ಸಮುದಾಯಗಳು	ಪುಟಮಿತಿ	ಸಮುದಾಯಗಳ ಸ್ವರೂಪ (ಥರ್ಸಟನ್ ಗ್ರಹಿಸಿದಂತೆ)
೧. ಅಗಮುಡಯಾನ್	೧೧ ಪುಟ	ಆದಿವಾಸಿ / ರೈತ
೨. ಅಂಬಟ್ಟನ್	೧೩ ಪುಟ	ಕ್ಷೌರಿಕ
೩. ಬಡಗ	೬೧ ಪುಟ	ಆದಿವಾಸಿ / ಕುಶಲಕರ್ಮಿ / ಕೃಷಿಕ
೪. ಬಲಿಜ	೧೪ ಪುಟ	ಅಲೆಮಾರಿ ವ್ಯಾಪಾರಿ
೫. ಬಂಟ	೩೦ ಪುಟ	ಕೃಷಿಕ / ಸೈನಿಕ ಸಮುದಾಯ (ಯುದ್ಧೋಪಜೀವಿ)
೬. ಬೇಡ	೩೦ ಪುಟ	ಆದಿವಾಸಿ / ಸೈನಿಕ ಸಮುದಾಯ (ಯುದ್ಧೋಪಜೀವಿ)
೭. ಬಿಲ್ಲವ	೧೨ ಪುಟ	ಆದಿವಾಸಿ / ರೈತ

ಒಟ್ಟು ಪುಟಗಳು - ೧೭೧

ಸಂಪುಟ - ೨, ಒಟ್ಟು ಪುಟಗಳು - ೫೦೧

೧. ಚಪ್ಪರ್ ಬಾಂದ್	೭ ಪುಟ	ಅಲೆಮಾರಿ
೨. ಚೆಂಚು	೧೯ ಪುಟ	ಆದಿವಾಸಿ /ಸೈನಿಕ ಸಮುದಾಯ (ಯುದ್ಧೋಪಜೀವಿ)
೩. ಚೆರುಮನ್	೪೬ ಪುಟ	ಕೃಷಿಕ ಕೆಳಜಾತಿ

೪. ಚೆಟ್ಟಿ	೭ ಪುಟ	ವ್ಯಾಪಾರಿ / ಅಲೆಮಾರಿ
೫. ದಾಸರಿ	೧೦ ಪುಟ	ಅಲೆಮಾರಿ
೬. ದೇವದಾಸಿ	೨೮ ಪುಟ	ದೇವಾಲಯದ ಊಳಿಗ ಸಮುದಾಯ
೭. ದೇವಾಂಗ	೧೨ ಪುಟ	ಕುಶಲಕರ್ಮಿ / ನೇಕಾರ
೮. ಡೊಂಬರು	೧೭ ಪುಟ	ಅಲೆಮಾರಿ
೯. ದೊದೆಕುಲ	೮ ಪುಟ	ಅಲೆಮಾರಿ / ವ್ಯಾಪಾರ
೧೦. ಗಡಬ	೧೦ ಪುಟ	ಆದಿವಾಸಿ / ಕೃಷಿಕ
೧೧. ಗಾಣಿಗ	೫ ಪುಟ	ಕುಶಲಕರ್ಮಿ
೧೨. ಗೊಲ್ಲ	೧೨ ಪು	ಪಶುಪಾಲಕ / ಆದಿವಾಸಿ
೧೩. ಹೊಲೆಯ	೨೨ ಪುಟ	ಊಳಿಗ / ಕೆಳಜಾತಿ
೧೪. ಈಡಿಯನ್	೧೪ ಪುಟ	ಪಶುಪಾಲಕ / ಆದಿವಾಸಿ
೧೫. ಇರುಳ	೧೯ ಪುಟ	ಆದಿವಾಸಿ
೧೬. ಇರ್ಝ್ವಾ	೨೬ ಪುಟ	ಆದಿವಾಸಿ / ಕೃಷಿಕ
೧೭. ಜೈನ	೧೯ ಪುಟ	ವ್ಯಾಪಾರಿ / ಅಲೆಮಾರಿ
೧೮. ಜೋಗಿ	೬ ಪುಟ	ಅಲೆಮಾರಿ

ಒಟ್ಟು ಪುಟಗಳು ೨೮೭

ಸಂಪುಟ - ೩, ಒಟ್ಟು ಪುಟಗಳು - ೫೦೪

೧. ಕಾಡರ್	೨೩ ಪುಟ	ಆದಿವಾಸಿ
೨. ಕೈಕೋಲನ್	೧೩ ಪುಟ	ಕುಶಲಕರ್ಮಿ
೩. ಕಲ್ಲನ್	೩೮ ಪುಟ	ಆದಿವಾಸಿ / ಸೈನಿಕ ಸಮುದಾಯ (ಯುದ್ಧೋಪಜೀವಿ)
೪. ಕಮ್ಮಾ	೧೨ ಪುಟ	ಸೈನಿಕ ಸಮುದಾಯ (ಯುದ್ಧೋಪಜೀವಿ)
೫. ಕಮ್ಮಲಾನ್	೩೪ ಪುಟ	ಕುಶಲಕರ್ಮಿ
೬. ಕಾನಿಕ್ಕಾರ್	೧೫ ಪುಟ	ಆದಿವಾಸಿ
೭. ಕಣಿಯನ್	೨೧ ಪುಟ	ಕುಶಲಕರ್ಮಿ/ಆದಿವಾಸಿ
೮. ಕನ್ನಡಿಯನ್	೧೪ ಪುಟ	ಸೈನಿಕ ಸಮುದಾಯ
೯. ಕಾಪು	೨೭ ಪುಟ	ಕೃಷಿಕ / ಕೃಷಿಕೂಲಿ
೧೦. ಕೆಲಸಿ	೧೦ ಪುಟ	ಕ್ಷೌರಿಕ
೧೧. ಕೋಮ್ಟಿ	೪೨ ಪುಟ	ವ್ಯಾಪಾರಿ/ ಅಲೆಮಾರಿ
೧೨. ಕೊಂಡ	೬೬ ಪುಟ	ಆದಿವಾಸಿ /ಸೈನಿಕ ಸಮುದಾಯ (ಯುದ್ಧೋಪಜೀವಿ)

೧೩. ಕೊರಗ ೧೪ ಪುಟ ಆದಿವಾಸಿ

೧೪. ಕೊರವ ೬೦ ಪುಟ ಅಲೆಮಾರಿ/ಸೈನಿಕ ಸಮುದಾಯ (ಯುದ್ಧೋಪಜೀವಿ)

ಒಟ್ಟು ಪುಟಗಳು ೩೯೫

ಸಂಪುಟ - ೪, ಒಟ್ಟು ಪುಟಗಳು - ೫೦೧

೧. ಕೋಟ ೨೮ ಪುಟ ಆದಿವಾಸಿ

೨. ಕೋಯಿ ೩೪ ಪುಟ ಆದಿವಾಸಿ

೩. ಕ್ಷತ್ರಿಯ ೧೨ ಪುಟ ಸೈನಿಕ ಸಮುದಾಯ (ಯುದ್ಧೋಪಜೀವಿ)

೪. ಕುಡುಬಿ ೧೦ ಪುಟ ಆದಿವಾಸಿ

೫. ಕುರುಬ ೨೨ ಪುಟ ಅಲೆಮಾರಿ

೬. ಕುರುಂಬ ೨೨ ಪುಟ ಆದಿವಾಸಿ

೭. ಲಂಬಾಣಿ ೨೬ ಪುಟ ಅಲೆಮಾರಿ

೮. ಲಿಂಗಾಯತ ೫೪ ಪುಟ ಕೃಷಿಕ

೯. ಮಾದಿಗ ೩೩ ಪುಟ ಕುಶಲಕರ್ಮಿ / ಕೆಳಜಾತಿ

೧೦. ಮಾಲ ೫೮ ಪುಟ ಕುಶಲಕರ್ಮಿ / ಕೆಳಜಾತಿ

೧೧. ಮಲ್ಸರ್ ೧೧ ಪುಟ ಆದಿವಾಸಿ

೧೨. ಮಲಯಾಳಿ ೩೦ ಪುಟ ಕೃಷಿ / ಕೃಷಿಕೂಲಿ

೧೩. ಮಾಪಿಳ್ಳೆ ೪೬ ಪುಟ ಕೃಷಿಕೂಲಿ / ಕೃಷಿಕ

ಒಟ್ಟು ಪುಟಗಳು ೩೮೬

ಸಂಪುಟ - ೫, ಒಟ್ಟು ಪುಟಗಳು ೪೮೭

೧. ಮರವಾನ್ ೨೬ ಪುಟ ಆದಿವಾಸಿ/ಸೈನಿಕ ಸಮುದಾಯ (ಯುದ್ಧೋಪಜೀವಿ)

೨. ಮೇದ ೭ ಪುಟ ಆದಿವಾಸಿ

೩. ಮುದುವಾರ್ ೧೭ ಪುಟ ಆದಿವಾಸಿ

೪. ನಲ್ಕೆ ೧೬ ಪುಟ ಆದಿವಾಸಿ

೫. ನಂಬೂದರಿ ಬ್ರಾಹ್ಮಣ ೭೮ ಪುಟ ಕೃಷಿಕ, ಜಮೀನ್ದಾರ

೬. ನಟ್ಟುಕೊಟ್ಟಾಯಿ ಚೆಟ್ಟಿ ೨೨ ಪುಟ ಚಿಕ್ಕ ವ್ಯಾಪಾರಿ

೭. ನಾಯರ್ ೧೩೦ ಪುಟ ಕುಶಲಕರ್ಮಿ, ಕೃಷಿಕ

೮. ವಡ್ಡ ೧೪ ಪುಟ ಕುಶಲಕರ್ಮಿ

೯. ಪಣಿಯನ್ ೧೧ ಪುಟ ಆದಿವಾಸಿ

೧೦. ಪಲ್ಲನ್ ೧೪ ಪುಟ ಆದಿವಾಸಿ

ಒಟ್ಟು ಪುಟಗಳು ೩೩೪

ಸಂಪುಟ - ೬, ಒಟ್ಟು ಪುಟಗಳು - ೪೫೮

೧. ಪಲ್ಲಿ ಅಥವಾ ವಣ್ಣಿಯನ್	೨೮ ಪುಟ	ಸೈನಿಕ ಸಮುದಾಯ (ಯುದ್ಧೋಪಜೀವಿ)	
೨. ಪಣಿಯನ್	೧೫ ಪುಟ	ಆದಿವಾಸಿ	
೩. ಪರಿಯಾನ್	೬೨ ಪುಟ	ಆದಿವಾಸಿ	
೪. ಪುಲುವಾನ್	೧೯ ಪುಟ	ಅಲೆಮಾರಿ	
೫. ಸಾಲೆ	೧೨ ಪುಟ	ಕುಶಲಕರ್ಮಿ	
೬. ಸವರ್	೪೩ ಪುಟ	ಆದಿವಾಸಿ	
೭. ಸೋಲಿಗ	೭ ಪುಟ	ಆದಿವಾಸಿ	
೮. ಸಿರಿಯನ್ ಕ್ರಿಶ್ಚಿಯನ್	೫೦ ಪುಟ	ಮಧ್ಯಯಕಾಲೀನ ಕ್ರಿಶ್ಚಿಯನ್	

ಒಟ್ಟು ಪುಟಗಳು ೨೩೬

ಸಂಪುಟ - ೭ - ಒಟ್ಟು ಪುಟಗಳು ೪೭೯

೧. ತಾಂಡಾ ಪುಲಯನ್	೧೦ ಪುಟ	ಆದಿವಾಸಿ
೨. ತೀಯಾ	೮೬ ಪುಟ	ರೈತಕೂಲಿಗಳು, ಆದಿವಾಸಿ
೩. ತೋಡ	೫೧ ಪುಟ	ಆದಿವಾಸಿ
೪. ಉಪ್ಪಾರ	೧೩ ಪುಟ	ಕುಶಲಕರ್ಮಿ
೫. ವಳ್ಳುವಾನ್	೯ ಪುಟ	ಆದಿವಾಸಿ
೬. ಮೇಲನ್	೧೬ ಪುಟ	ಕುಶಲಕರ್ಮಿ
೭. ವೆಲ್ಲಾಲ್	೨೭ ಪುಟ	ಆದಿವಾಸಿ, ರೈತ
೮. ಯಾನಾದಿ	೨೭ ಪುಟ	ಆದಿವಾಸಿ

ಒಟ್ಟು ಪುಟಗಳು ೨೩೯

ಏಳು ಸಂಪುಟಗಳ ಒಟ್ಟು ಪುಟಗಳು ೩.೨೮೦. ಆದಿವಾಸಿ, ಅಲೆಮಾರಿ ಮತ್ತು ಸೈನಿಕ ಸಮುದಾಯ (ಯುದ್ಧೋಪಜೀವಿ)ಗಳಿಗೆ ಮೀಸಲಾದ ಪುಟಗಳು ೨೦೪೮[೨].

ಏಳು ಸಂಪುಟಗಳಲ್ಲಿ ಥರ್ಸಟನ್ ದಕ್ಷಿಣ ಭಾರತದ ಜಾತಿ ಮತ್ತು ಬುಡಕಟ್ಟುಗಳ ವಿವರಗಳನ್ನು ನೀಡಿದ್ದಾರೆ. ಏಳು ಸಂಪುಟಗಳ ಒಟ್ಟು ಪುಟ ಸಂಖ್ಯೆ ೩.೨೮೦, ಅದರಲ್ಲಿ ಕುಶಲ ಕರ್ಮಿ, ಅಲೆಮಾರಿ, ಆದಿವಾಸಿ, ಕೃಷಿಕ ಮತ್ತು ಸೈನಿಕ (ಯುದ್ಧೋಪಜೀವಿ) ಸಮುದಾಯಗಳಿಗೆ ಥರ್ಸಟನ್ ೨೦೪೪ ಪುಟಗಳನ್ನು ಮೀಸಲಿಡುತ್ತಾರೆ. ಅಂದರೆ ೩.೨೮೦ ಪುಟಗಳಲ್ಲಿ ಶೇ ೬೭% ರಷ್ಟು ಪುಟಗಳ ವಿವರವಾದ ಮಾಹಿತಿಯನ್ನು ಥರ್ಸಟನ್ ಕಲೆಹಾಕುತ್ತಾರೆ. ಸಮಾಜದ ಆರ್ಥಿಕತೆಯನ್ನು ಸಮತೋಲನಗೊಳಿಸುವ ಕೃಷಿಕ, ಕಾಡೊಳಗಿದ್ದು

ದೇಶೀ ಸಂಸ್ಥಾನಗಳ ಗಡಿಗಳನ್ನು ರಕ್ಷಿಸುತ್ತಿದ್ದ ಮತ್ತು ತಮ್ಮ ಪಾಡಿಗೆ ತಾವು ಕೃಷಿಯಲ್ಲಿ ತೊಡಗಿದ್ದ ಆದಿವಾಸಿ ಸಮುದಾಯಗಳ, ಸ್ಥಳೀಯ ಊಳಿಗಮಾನ್ಯ ಆರ್ಥಿಕ ವ್ಯವಸ್ಥೆಯನ್ನು ನಂಬಿ ಬದುಕುತ್ತಿದ್ದ ಮನರಂಜಕ ಮತ್ತು ಸೇವಕ ಸಮುದಾಯಗಳ (ಈವತ್ತಿನ ಅರ್ಥದಲ್ಲಿ ಅಲೆಮಾರಿಗಳು) ಮತ್ತು ಸೈನಿಕ ಸಮುದಾಯಗಳ ವಿವರಗಳೇ ಥರ್ಸಟನ್ ಸಂಪುಟಗಳಲ್ಲಿ ತುಂಬಿಹೋಗಿವೆ.

ಕಂಪನಿ ಆಡಳಿತವು ೧೯೦೩ ರಲ್ಲಿಯೇ ಮೈಸೂರು ಭಾಗದ ಜನಾಂಗಳ ಸಮೀಕ್ಷೆ ನಡೆಸಲು ಎಚ್. ವಿ. ನಂಜುಂಡಯ್ಯನವರನ್ನು ನೇಮಿಸುಸಿತು. ಆದರೆ ನಂಜುಂಡಯ್ಯನವರ ಅಕಾಲದ ಸಾವಿನಿಂದ ಸ್ಥಗಿತಗೊಳ್ಳುವ ಈ ಯೋಜನೆಯನ್ನು ಮುಂದೆ ಮಹಾರಾಜ ಕೃಷ್ಣರಾಜ ಒಡೆಯರ್ ೧೯೨೪ ರಲ್ಲಿ ಅನಂತಕೃಷ್ಣ ಅಯ್ಯರ್ ಅವರಿಗೆ ವಹಿಸಿದರು. ನಂಜುಂಡಯ್ಯನವರ ಸರ್ವೇ ಕೆಲಸವನ್ನೇ ವಿಸ್ತರಿಸುವ ಅನಂತಕೃಷ್ಣ ಅಯ್ಯರ್ 'The mysore Tribes and Castes' ಶೀರ್ಷಿಕೆಯಲ್ಲಿ ೪ ಸಂಪುಟಗಳನ್ನು ೧೯೩೧ರ ಹೊತ್ತಿಗೆ ಪ್ರಕಟಿಸಿದರು. ಈ ಯೋಜನೆ ಆರಂಭವಾಗುವ ಮೊದಲೇ ಎಚ್.ವಿ.ನಂಜುಡಯ್ಯನವರಿಗೆ ಮೈಸೂರು ಸಂಸ್ಥಾನದ ಸಮುದಾಯಗಳಲ್ಲಿ ಯಾವ ಯಾವ ಸಮುದಾಯಗಳನ್ನು ಅಧ್ಯಯನದ ಸುಲವಾಗಿ ಮೊದಲ ಆದ್ಯತೆಯಾಗಿ ಪರಿಗಣಿಸಬೇಕು ಎಂದು ಮಾನವಕುಲಶಾಸ್ತ್ರದ ಸರ್ವೇಕ್ಷಣಕಾರರು ಪಟ್ಟಿ ಮಾಡಿಕೊಟ್ಟಿದ್ದರು. ಹೀಗೆ ಪಟ್ಟಿ ಮಾಡಿಕೊಟ್ಟ ಬಹುತೇಕ ಎಲ್ಲ ಸಮುದಾಯಗಳ ಕಂಪನಿ ಆಡಳಿತ ೧೮೭೧ ರಲ್ಲಿ ಘೋಷಿಸಿದ 'ಕ್ರಿಮಿನಲ್ ಸಮುದಾಯಗಳೇ' ಆಗಿದ್ದವು. ಕೆಲವಂತೂ ಈ ಕ್ರಿಮಿನಲ್ ಕಾಯ್ದೆಯ ಕಿರುಕುಳದಿಂದ ಉತ್ತರ ಭಾರತದ ಹಲವು ರಾಜ್ಯಗಳಿಂದ ದಕ್ಷಿಣದ ರಾಜ್ಯಗಳಿಗೆ ವಲಸೆ ಬಂದ ಸಮುದಾಯಗಳೇ ಆಗಿವೆ. Ethnographic Survey of India ದ ಅಧಿಕಾರಿಗಳು ನಂಜುಂಡಯ್ಯನವರಿಗೆ ಕೊಟ್ಟ ಸಮುದಾಯಗಳ ಪಟ್ಟಿ ಈ ಕೆಳಗಿನಂತಿದೆ.

೦೧. ಅಗಸ	೦೨. ಗಾಣಿಗ	೦೩. ಕೊರಚ	೦೪ ಸನ್ಯಾಸಿ
೦೫. ಬಣಜಿಗ	೦೬. ಗೊಲ್ಲ	೦೭. ಕುಂಚಟಿಗ	೦೮. ತಿಗಳ
೦೯. ಬಂಜಾರ	೧೦. ಕಾಡುಗೊಲ್ಲ	೧೧. ಕುರುಬ	೧೨. ಉಪ್ಪಾರ
೧೩. ಬೇಡ	೧೪. ಹಂಡಿಜೋಗಿ	೧೫. ಮಾದಿಗ	೧೬. ವಡ್ಡ
೧೭. ಬೆಸ್ತ	೧೮. ಹೆಳವ	೧೯. ಮೇದರ	೨೦. ಬಿಲಿಮಗ್ಗ
೨೧. ಹೊಲೆಯ	೨೨. ಮೊಂಡರು	೨೩. ದೇವಾಂಗ	೨೪. ಈಡಿಗ
೨೫. ಮೊರಸು ಒಕ್ಕಲು	೨೬. ಡೊಂಬರ	೨೭. ಕಿಳ್ಳೇಕ್ಯಾತ	೨೮. ನಗರ್ತ
೨೯. ಗಂಗಡಿಕಾರ	೩೦. ಕೊಮಟಿ	೩೧. ನಾಯಿಂದ	೩೨. ಸಾದ
೩೩. ಸಾಲೆ [೬].			

ಎಚ್.ವಿ. ನಂಜುಡಯ್ಯನವರು ೧೯೦೩ ರಿಂದಲೇ ಇಲ್ಲಿ ಪಟ್ಟಿ ಮಾಡಲಾದ ೩೩ ಸಮುದಾಯಗಳ ಕಿರುಪುಸ್ತಕಗಳನ್ನು (Manographs) ಮೊದಲ ಹಂತದಲ್ಲಿ ಪ್ರಕಟಿಸಿದ್ದರು. ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಅನಂತಕೃಷ್ಣ ಅಯ್ಯರ್ ಅವೇ ವಿವರಗಳನ್ನು ತಮ್ಮ The mysore Tribes

and Caste ಸಂಪುಟಗಳಲ್ಲಿ ಪುನರ್‌ಮುದ್ರಿಸಿದರು. ಮೈಸೂರು ಪ್ರಾಂತ್ಯದ ಸಮುದಾಯಗಳನ್ನು ಅಧ್ಯಯನ ಮಾಡುವಾಗ ಕಂಪನಿ ಆಡಳಿತವು ಈ ಭಾಗದ ಅಲೆಮಾರಿ, ಆದಿವಾಸಿ ಮತ್ತು ಕುಶಲಕರ್ಮಿ ಸಮುದಾಯಗಳನ್ನು ಮೊದಲ ಕಂತಿನಲ್ಲಿ ಅಧ್ಯಯನ ಮಾಡಲು ನಂಜುಡಯ್ಯನವರಿಗೆ ಸೂಚಿಸಿತ್ತು. ನಂಜುಡಯ್ಯನವರ ನಂತರ ಅನಂತಕೃಷ್ಣ ಅಯ್ಯರ್ ಅಂದಿನ ಮೈಸೂರು ಸಂಸ್ಥಾನದ ಸಮಗ್ರ ಸಮುದಾಯಗಳ ಮಾಹಿತಿಗಳನ್ನು ಕಲೆಹಾಕಿ ನಾಲ್ಕು ಸಂಪುಟಗಳನ್ನು ಪ್ರಕಟಿಸಿದರು.

ಅಲೆಮಾರಿಗಳ ಅಧ್ಯಯನಗಳು ಉತ್ತರ ಭಾರತ ಮತ್ತು ದಕ್ಷಿಣ ಭಾರತಗಳಲ್ಲಿ ವಿವಿಧ ಕಡೆ ಕಂಪನಿ ಆಡಳಿತದ ಸಂದರ್ಭದಲ್ಲಿ ಒಂದು ಕೈ ಹೆಚ್ಚಾಗಿಯೇ ನಡೆದವು. ಅದರಲ್ಲೂ ಸ್ಥಳೀಯ ಕೆಲವು ವಿದ್ವಾಂಸರು ಅಂದಿನ ರಾಷ್ಟ್ರೀಯ ಚಳುವಳಿಯ ಪ್ರಭಾವದಿಂದ ಭಾರತದ ಅಲೆಮಾರಿಗಳ ಸ್ಥಳೀಯತೆ ಮತ್ತು ವಿಶ್ವವ್ಯಾಪಕತೆಯನ್ನು ಗುರುತಿಸುವ ಕೆಲಸವನ್ನು ಮಾಡಿದರು. ದಿವಾನ್ ಚಮನ್‌ಲಾಲ್ ಮತ್ತು ಶೂರ್‌ಸಿಂಗ್ ಶೇರ್‌ರಂತಹ ವಿದ್ವಾಂಸರು ಜಗತ್ತಿನ ಎಲ್ಲೆಡೆ ಹರಡಿರುವ ಜಿಪ್ಸಿಗಳ ಮೂಲ ಭಾರತವೇ ಎಂಬ ವಾದವನ್ನು ಮಂಡಿಸಿದರು. ೧೯೬೨ ರಲ್ಲಿ ಚಮನ್‌ಲಾಲ್ ಅವರು Gipsies: Forgotten children of India ಎಂಬ ಶಿರ್ಷಿಕೆಯಲ್ಲಿ ಅಲೆಮಾರಿಗಳ ಕುರಿತ ತಮ್ಮ ಅಧ್ಯಯನವನ್ನು ಪ್ರಕಟಿಸಿದ್ದಾರೆ. ಆನಂತರ ೧೯೬೨ ರಲ್ಲಿ ಎ.ಎ.ಡಿ. ಲೂಯಿಜ್ ಅವರ ಅಧ್ಯಕ್ಷತೆಯಲ್ಲಿ ಕೇಂದ್ರದ ಗೃಹ ಸಚಿವಾಲಯವು ಸಮಿತಿಯೊಂದನ್ನು ರಚಿಸಿ ಅಲೆಮಾರಿಗಳ ಕಲ್ಯಾಣಕ್ಕಾಗಿ ವರದಿ ತಯಾರಿಸಲು ಸೂಚಿಸುಸಿತ್ತು[೬೪]. ಆ ನಂತರ ಅಲೆಮಾರಿಗಳ ಅಧ್ಯಯನಗಳು ಭಾರತದಲ್ಲಿ ವ್ಯಾಪಕವಾಗಿ ನಡೆಯುತ್ತವೆ. ಅದರಲ್ಲೂ ಉತ್ತರ ಭಾರತದ ಅಲೆಮಾರಿಗಳನ್ನು ಕುರಿತ ಅಧ್ಯಯನಗಳು ಹೆಚ್ಚಾಗಿ ನಡೆಯುತ್ತವೆ, ೧೯೪೯ ರಲ್ಲಿ ಭಾರ್ಗವ ಅವರು The Criminal Tribes of India ಎಂಬ ಪುಸ್ತಕವನ್ನು ಪ್ರಕಟಿಸುತ್ತಾರೆ.

ಕರ್ನಾಟಕದಲ್ಲಿ ಪಿ.ಕೆ.ಮಿಶ್ರಾರವರು Nomads of Mysore city ಎಂಬ ಪುಸ್ತಕವನ್ನು ೧೯೭೧ರಲ್ಲಿ ಪ್ರಕಟಿಸಿದರು. ಕರ್ನಾಟಕದಲ್ಲಿ ಅಲೆಮಾರಿಗಳ ಕುರಿತು ಅಧ್ಯಯನಗಳು ವಿರಳವೆಂದೇ ಹೇಳಬೇಕಾಗುತ್ತದೆ. ಅಲ್ಲಲ್ಲಿ ಕೆಲವು ವ್ಯಕ್ತಿಗಳ ಆಸಕ್ತಿಯಿಂದ ಚಿಕ್ಕಪುಟ್ಟ ಪುಸ್ತಕಗಳನ್ನು ಅಲೆಮಾರಿಗಳ ಕುರಿತು ಪ್ರಕಟಿಸಿದ್ದರೂ ಮಾನವಶಾಸ್ತ್ರೀಯ ಶೈಕ್ಷಣಿಕ ಶಿಸ್ತಿನಿಂದ ಅಲೆಮಾರಿಗಳನ್ನು ಅಧ್ಯಯನ ಮಾಡಿದ ಪ್ರಯತ್ನಗಳು ವಿರಳವೆಂದೇ ಹೇಳಬೇಕಾಗುತ್ತದೆ. ೧೯೯೩ ರಲ್ಲಿ ಕರ್ನಾಟಕದಲ್ಲಿ ಸಾಹಿತ್ಯ ಅಕಾಡೆಮಿ ಪ್ರಕಟಿಸಿದ ಉಪಸಂಸ್ಕೃತಿ ಮಾಲೆಯಲ್ಲಿ ಕೆಲವು ಅಲೆಮಾರಿಗಳನ್ನು ಅಧ್ಯಯನ ಮಾಡಲಾಗಿದೆ.

ಗ್ರಾಮ ಅಧ್ಯಯನಗಳು

ವಸಾಹತು ಆಡಳಿತದ ಸಂದರ್ಭದಲ್ಲಿಯೇ ಭಾರತದಲ್ಲಿ ಗ್ರಾಮಗಳ ಅಧ್ಯಯನಗಳು ಪ್ರಾರಂಭವಾದವು. 'ಬ್ರಿಟೀಷ್ ಆಡಳಿತಗಾರರು ಸ್ಥಳೀಯ ಭೂ ಹಂಚಿಕೆ ಮತ್ತು ಕಂದಾಯ ವಸೂಲಿ ಮಾಡುವ ಸಲುವಾಗಿ ಗ್ರಾಮಗಳ ಅಧ್ಯಯನಗಳನ್ನು ಪ್ರೋತ್ಸಾಹಿಸಿದರು'[೬೫]. ಏಕರೂಪಿ ಸಮಾಜಗಳಿಂದ ಬಂದಿದ್ದ ವಸಾಹತು ಆಡಳಿತಗಾರರಿಗೆ ಭಾರತದಲ್ಲಿ ಹಳ್ಳಿಗಳು ಸಹಜವಾಗಿಯೇ ಒಗಟುಗಳಂತೆ ಕಂಡಿದ್ದವು. ಒಂದೇ ಜಾತಿ ಸಮುದಾಯ ವಾಸಿಸುವ ಹಳ್ಳಿಗಳು, ಹಲವು ಜಾತಿಗಳು ಒಟ್ಟಾಗಿ ವಾಸಿಸುವ ಹಳ್ಳಿಗಳು ಮತ್ತು ಅವುಗಳ

ಒಟ್ಟಾರೆಯ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ಚಲನೆಗಳನ್ನು ಅಧ್ಯಯನ ಮಾಡವುದು ಅಂದಿನ ಆಡಳಿತಗಾರರಿಗೆ ಕಾನೂನು ಸುವ್ಯವಸ್ಥೆಯ ಕ್ರಮದ ಭಾಗವಾಗಿ ಅನಿವಾರ್ಯವಾಗಿತ್ತು. ಗ್ರಾಮಗಳ ಅಧ್ಯಯನಗಳು ಕಂಪನಿ ಆಡಳಿತದ ಸಂದರ್ಭದಲ್ಲಿ ಹತ್ತೊಂಬತ್ತನೇ ಶತಮಾನದ ಪೂರ್ವಾರ್ಧದಲ್ಲಿ ಪ್ರಾರಂಭವಾದವು. ಗ್ರಾಮಗಳ ಅಧ್ಯಯನಕ್ಕೆ ಅಂದು ಶೈಕ್ಷಣಿಕ ವೈಧಾನಿಕತೆ ಎಂಬುದಿರಲಿಲ್ಲ. ಅರ್ಥಶಾಸ್ತ್ರಜ್ಞರು, ಮಾನವಶಾಸ್ತ್ರಜ್ಞರು, ಆಡಳಿತಗಾರರು, ಭೂಗೋಳಶಾಸ್ತ್ರಜ್ಞರು ಮತ್ತು ಮಿಶನರಿಗಳು ಹೀಗೆ ಭಿನ್ನ ವರ್ಗಕ್ಕೆ ಸೇರಿದ ಆಸಕ್ತ ಅಧ್ಯಯನಕಾರರು ಹಳ್ಳಿಗಳ ಅಧ್ಯಯನಗಳನ್ನು ಕೈಗೊಂಡರು. ಎಲ್.ಪಿ. ವಿದ್ಯಾರ್ಥಿ ಈ ಅಧ್ಯಯನಗಳ ಹಂತಗಳನ್ನು ಹೀಗೆ ಗುರುತಿಸಿದ್ದಾರೆ.

೧. ೧೮೭೧ ರಿಂದ ೧೯೪೭ ವರೆಗೆ ಆರಂಭದ ಹಂತ

೨. ೧೯೪೭ ರಿಂದ ಇತ್ತೀಚಿನ ವರೆಗೆ ವಿಶ್ಲೇಷಣೆಯ ಹಂತ[೬೬].

೧೮೭೧ ರಲ್ಲಿ ಸರ್ ಹೆನ್ರಿ ಸಮ್ನರ್ ಮೈನ್ 'Village communities in the east and in the west' ಎಂಬ ಗ್ರಂಥವು ಭಾರತದ ಹಳ್ಳಿಗಳ ಕುರಿತ ಮೊದಲ ಕ್ರಮಬದ್ಧ ಅಧ್ಯಯನವಾಗಿದೆ. ಇದಕ್ಕೂ ಮುನ್ನ ಪಾದ್ರಿಯಾಗಿದ್ದ ರೆವರೆಂಡ್ ವಿಲಿಯಂ ಟೆನ್ನಂಟ್ ೧೭೯೮ ರಲ್ಲಿ India Recreation ಎಂಬ ಪುಸ್ತಕ ರಚಿಸಿದ್ದನು. ಆದರೆ ಪುಸ್ತಕವು ೧೮೦೩ ರಲ್ಲಿ ಪ್ರಕಟವಾಯಿತು. ಈ ಗ್ರಂಥವು ಭಾರತದ ಹಳ್ಳಿಗಳ ಆರ್ಥಿಕ ಸಂಬಂಧಗಳನ್ನು ವಿವರಿಸುತ್ತದೆ[೬೭]. ಮೈನ್ ೧೮೬೧ ರಲ್ಲಿ ರಚಿಸಿದ Ancient law ಪುಸ್ತಕವು ಮುಖ್ಯವಾಗಿ ಭಾರತದ ಹಳ್ಳಿಗಳ ನ್ಯಾಯ ಪಂಚಾಯ್ತು ಮತ್ತು ವಿಧಿನಿಷೇಧಗಳು ಮತ್ತು ಶಿಕ್ಷೆಗಳ ಸ್ವರೂಪವನ್ನು ವಿವರಿಸುವ ಗ್ರಂಥವಾಗಿದೆ.

೧೯ನೇ ಶತಮಾನದ ಕೊನೆಯ ಹೊತ್ತಿಗೆ ಬ್ರಿಟೀಷ್ ಆಡಳಿತಕ್ಕೆ ತನ್ನ ಅಧ್ಯಯನಗಳಿಂದ ಅಗಾಧ ಪ್ರಮಾಣದ ಆಡಳಿತಾತ್ಮಕ ಅನುಕೂಲಗಳನ್ನು ಒದಗಿಸದವನು ಬಾಡೆನ್ ಪೋವೆಲ್. ಮೂಲತಃ ಒಬ್ಬ ಸಾಮಾನ್ಯ ಆಡಳಿತಾಧಿಕಾರಿಯಾಗಿದ್ದ ಪೋವೆಲ್, ಮೈನ್ ಮಾಡಿದ ಗ್ರಾಮಗಳ ಅಧ್ಯಯನಗಳಿಂದ ಪ್ರಭಾವಿತನಾಗಿದ್ದ. ಆ ನಂತರ ಬಾಡೆನ್ ಪೋವೆಲ್ ಒಬ್ಬ ಮಾನವಶಾಸ್ತ್ರಜ್ಞನಂತೆ ಹಳ್ಳಿಗಳ ಅಧ್ಯಯನಗಳಿಗೆ ತೊಡಗುತ್ತಾನೆ. ಉತ್ತರ ಭಾರತದಲ್ಲಿ ಮುಖ್ಯವಾಗಿ ಈತ ತನ್ನ ಅಧ್ಯಯನಗಳನ್ನು ವಿಸ್ತರಿಸಿಕೊಂಡಿದ್ದನು. ಈತನ ಆಸಕ್ತಿಯ ಕ್ಷೇತ್ರವೆಂದರೆ ಹಳ್ಳಿಗಳಲ್ಲಿನ ಭೂ ಹಂಚಿಕೆ ಮತ್ತು ವ್ಯವಸಾಯೀ ಸಂಬಂಧಗಳು. ಅಲ್ಲದೆ ಈತ ಹಳ್ಳಿಗಳ ಆರ್ಥಿಕ ಸಂರಚನೆಯನ್ನು ಆಧರಿಸಿಯೇ ಅವುಗಳ ಸ್ವರೂಪವನ್ನು ಅರ್ಥ ಮಾಡಿಕೊಳ್ಳಲು ಯತ್ನಿಸಿದ್ದ. 'The land systems of British India ಎಂಬ ಈತನ ಬರಹ ಮೂರು ಸಂಪುಟಗಳಲ್ಲಿ ಆಕ್ಸಫರ್ಡ್ ವಿಶ್ವವಿದ್ಯಾಲಯದಿಂದ ೧೮೯೨ ರಲ್ಲಿ ಪ್ರಕಟವಾಯಿತು. ಪೋವೆಲ್ ಗ್ರಾಮೀಣ ಭಾರತದ ಭೂಹಂಚಿಕೆ ಮತ್ತು ಭೂಕಂದಾಯ ಕುರಿತ ನಂಬಲರ್ಹ ಮಾಹಿತಿಗಳ ಪ್ರಮಾಣ ಗ್ರಂಥವಾಗಿದೆ'[೬೮]. ಬಾಡೆನ್ ಪೋವೆಲ್‌ನ ಅಧ್ಯಯನಗಳನ್ನು ಆಧರಿಸಿಯೇ ವಸಾಹತು ಆಡಳಿತ ತನ್ನ ಕಂದಾಯದ ವಿಧಾನದಲ್ಲಿ ಅನೇಕ ಮಾರ್ಪಾಡಗಳನ್ನು ಮಾಡಿತು.

ಇನ್ನು ಇಂಡಿಯಾದವರೇ ಆದ ಲಾಲ್ ಬಿಹಾರಿ ದೇವ್ ಎನ್ನುವವರು Bangal peasent life ಎಂಬ

ಕೃತಿಯನ್ನು ರಚಿಸಿದರು. 'ಈ ಬರಹವು ಬ್ರಿಟೀಷ್ ಸರಕಾರ ಏರ್ಪಡಿಸಿದ ಸಾಹಿತ್ಯ ಸ್ಪರ್ಧೆಯೊಂದರ ಫಲಿತಾಂಶವಾಗಿದೆ. ಈ ಬರಹದ ಮುಖ್ಯ ವಸ್ತು ಉಗ್ರ ಕ್ಷತ್ರಿಯ ಜಾತಿಗೆ ಸೇರಿದ ಗೋವಿಂದ ಸಮಂತ ಎಂಬ ವ್ಯಕ್ತಿ ಈತ ಬಂಗಾಳದ ಕನ್ನಾನ್‌ಪುರ ಎಂಬ ಹಳ್ಳಿಗೆ ಸೇರಿದವನು. ಸ್ಪರ್ಧೆಯೊಂದರಲ್ಲಿ ಬಹುಮಾನ ಪಡೆದ ಈ ಬರಹವನ್ನು ಬ್ರಿಟೀಷ್ ಸರಕಾರ ಪ್ರಕಟಿಸಿತು. ಇದು ಟಿಪಿಕಲ್ ಎತ್ನೋಗ್ರಫಿಕಲ್ ಬರಹದಂತಿರದೆ ಕಥನದ ರೂಪದಲ್ಲಿದೆ. ಇದು ಬಂಗಾಳದ ಗ್ರಾಮ ಜೀವನದ ಆರ್ಥಿಕ ಚಟುವಟಿಕೆಗಳನ್ನು ಸ್ಥೂಲವಾಗಿ ನಿರೂಪಿಸುತ್ತದೆ'[೧೯].

ಇಂತಹುದ್ದೇ ಇನ್ನೊಂದು ಪುಸ್ತಕ ಸರ್ ಜಾರ್ಜ್ ಗ್ರಿಯರ್‌ಸನ್ ಅವರದು. Bihar peasant life ಎಂಬ ಶೀರ್ಷಿಕೆಯ ಈ ಗ್ರಂಥವು ಬಿಹಾರದ ರೈತ ಸಂಸ್ಕೃತಿಯ ಸಂಪೂರ್ಣ ಚಿತ್ರಣವನ್ನು ನೀಡುತ್ತದೆ. ಬಾಂಬೆಯಲ್ಲಿ ಕೃಷಿ ಇಲಾಖೆಯ ನಿರ್ದೇಶಕನಾಗಿದ್ದ ಎಚ್.ಎಚ್.ಮಾನ್ 'Land and Labour in Deccan village ಎಂಬ ಪುಸ್ತಕವನ್ನು ೧೯೨೧ ರಲ್ಲಿ ಪ್ರಕಟಿಸಿದನು. ಇದು ಗ್ರಾಮಗಳ ಅಧ್ಯಯನಗಳಿಗೆ ಒಂದು ಸೈದ್ಧಾಂತಿಕ ನೆಲೆಗಟ್ಟನ್ನು ಒದಗಿಸಿದ ಪುಸ್ತಕ'[೨೦]. ಈತ ಎರಡು ಗ್ರಾಮಗಳನ್ನು ಮಾದರಿಯನ್ನಾಗಿ ಇಟ್ಟುಕೊಂಡು ಸದರಿ ಅಧ್ಯಯನವನ್ನು ಪೂರೈಸಿದ್ದಾನೆ. ಒಂದು ಹಳ್ಳಿಯಲ್ಲಿನ ಕೃಷಿ ಉತ್ಪನ್ನ, ಅದಕ್ಕಾಗಿ ಉತ್ಪಾದನಾ ವೆಚ್ಚ, ಮಾರುಕಟ್ಟೆಯ ಚಟುವಟಿಕೆಗಳು ಮತ್ತು ಕೃಷಿಕರಿಗಾಗುವ ಲಾಭ ನಷ್ಟದ ಕುರಿತ ವಸ್ತುನಿಷ್ಟ ವರದಿಯನ್ನು ಈ ಪುಸ್ತಕ ಹೊಂದಿದೆ.

ಮಾನ್ ಅವರ ಅಧ್ಯಯನ ವಿಧಾನವನ್ನೇ ಮುಖ್ಯಮಾಗಿಟ್ಟುಕೊಂಡು ಪ್ರೊ.ಗಿಲ್ಬರ್ಟ್ ಸ್ಲೇಟರ್ ಅವರು Some South Indian villages ಎಂಬ ಪುಸ್ತಕವನ್ನು ೧೯೧೮ ರಲ್ಲಿ ಪ್ರಕಟಿಸಿದರು. ಮದ್ರಾಸ್ ವಿಶ್ವವಿದ್ಯಾಲಯವು ಈ ಪುಸ್ತಕವನ್ನು ಪ್ರಕಟಿಸಿತು. ಇದೇ ಸಂದರ್ಭದಲ್ಲಿ ಬಂದ ಜಾನ್ ಮಟ್ಟನ್ ಅವರ Village Govt in British India' ಮತ್ತು ರಾಧಾಕಮಲ್ ಮುಖರ್ಜಿಯವರ Foundation of Economics, Democracy of the east and Field and Farmer in oudh ಪುಸ್ತಕಗಳು ಅಂದಿನ ಉತ್ತರ ಭಾರತದ ಹಳ್ಳಿಗಳಲ್ಲಿನ ನ್ಯಾಯದಾನ ಪದ್ಧತಿ ಮತ್ತು ಆರ್ಥಿಕ ಸಂಬಂಧಗಳನ್ನು ವಿವರಿಸುತ್ತವೆ. ಇನ್ನು ಭಾರತದಲ್ಲಿ ನಡೆದ ಎರಡು ಮುಖ್ಯವಾದ ಅಧ್ಯಯನಗಳನ್ನು ಇಲ್ಲಿ ಉಲ್ಲೇಖಿಸಬೇಕಿದೆ. ಭಾರತದಲ್ಲಿ ಅಮೇರಿಕಾದ ಮಿಶನರಿಯಾಗಿದ್ದ W.H.ವೈಸರ್ ಅವರ ಅಧ್ಯಯನಗಳು ಒಂದು ಅರ್ಥದಲ್ಲಿ ಗ್ರಾಮಗಳ ಅಧ್ಯಯನಕ್ಕೆ ಹೊಸ ಮಾದರಿಯನ್ನೇ ಹಾಕಿಕೊಟ್ಟವು. 'ಉತ್ತರ ಪ್ರದೇಶದ ಲಕ್ನೋ ಬಳಿಯ ಕರೀಂಪುರ ಎಂಬ ಹಳ್ಳಿಯಲ್ಲಿಯೇ ತನ್ನ ಪತ್ನಿಯ ಜೊತೆ ಇದ್ದುಕೊಂಡು ವೈಸರ್ Hindu, Jajmani System ಎಂಬ ಡಾಕ್ಟರಾಲ್ ಪ್ರಬಂಧವನ್ನು ೧೯೩೩ ರಲ್ಲಿ ರಚಿಸಿದನು. ತನ್ನ ಹೆಂಡತಿಯ ಜೊತೆಯಲ್ಲಿ ೧೯೩೬ Behind the mud walls ಎಂಬ ಪುಸ್ತಕವನ್ನೂ ಈತ ರಚಿಸಿದ. ಈ ಎರಡೂ ಕೃತಿಗಳು ಅಮೇರಿಕಾದ ಖ್ಯಾತ ಮಾನವಶಾಸ್ತ್ರಜ್ಞ ರಾಬರ್ಟ್ ರೆಡ್‌ಫೀಲ್ಡ್‌ರ ಅಧ್ಯಯನ ವಿಧಾನವನ್ನು ಅನುಸರಿಸಿ ರೂಪಗೊಂಡವು.

ಸರಿಸುಮಾರು ಇದೇ ಕಾಲಘಟ್ಟಕ್ಕೆ ಕರ್ನಾಟಕದಲ್ಲೂ ಗ್ರಾಮಗಳ ಅಧ್ಯಯನಗಳು ಪ್ರಾರಂಭವಾದವು.

೧೯೫೫ ರಲ್ಲಿ H.S.ಧಿಲ್ಲಾನ್ ಅವರ Leadership and groups in an South Indian village ಪುಸ್ತಕವನ್ನು ಕೇಂದ್ರ ಯೋಜನಾ ಆಯೋಗ ಪ್ರಕಟಿಸುತ್ತದೆ. ಧಿಲ್ಲಾನ್ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಹರಿಪುರ ಎಂಬ ಗ್ರಾಮವನ್ನು ಅಧ್ಯಯನ ಮಾಡಿದ್ದಾರೆ. ಇನ್ನೂ ಎಂ.ಎನ್. ಶ್ರೀನಿವಾಸರ ಪ್ರಸಿದ್ಧ ಗ್ರಂಥ Relegion and Society among coorgs of South India ೧೯೫೨ ರಲ್ಲಿ ಪ್ರಕಟವಾಯಿತು. ಜೊತೆಗೆ ಇವರ Remembered village ಕೃತಿಯು ಇಂದಿಗೂ ಗ್ರಾಮಗಳ ಅಧ್ಯಯನಗಳಿಗೆ ಒಂದು ಮುಖ್ಯ ಆಕರ ಗ್ರಂಥವಾಗಿದೆ.

೧೯೫೨-೫೩ ರಲ್ಲಿ A.R.Beals ಬೆಂಗಳೂರು ಸಮೀಪದ ನಮ್ಹಳ್ಳಿ ಎಂಬ ಗ್ರಾಮವನ್ನು ಅಧ್ಯಯನ ಮಾಡಿದ್ದಾನೆ. Gopalapura: A South Indian Village ಎಂಬ ಹೆಸರಲ್ಲಿ ಈ ಕೃತಿ ಪ್ರಕಟವಾಯಿತು. W. ಮೆಕಾರ್ಮಿಕ್ ಬೆಂಗಳೂರು ಸಮೀಪದ ಮೊರಸವಳ್ಳಿ ಮತ್ತು ಹುಲ್ಲಿಪನಹಳ್ಳಿ ಎಂಬ ಎರಡು ಗ್ರಾಮಗಳನ್ನು ಅಧ್ಯಯನ ಮಾಡಿ Sister's daughters marriage in a Mysore village ಎಂಬ ಕೃತಿ ಪ್ರಕಟಿಸಿದರು. ಅಮೇರಿಕಾದ ಇನ್ನೊಬ್ಬ ಮಾನವಶಾಸ್ತ್ರಜ್ಞ ಇ.ಬಿ.ಹಾರ್ಪರ್ ಮಲೆನಾಡಿನ ತೋಟಗದಾಳ್ ಎಂಬ ಗ್ರಾಮವನ್ನು ಅಧ್ಯಯನ ಮಾಡಿದ್ದಾರೆ. ಅಲ್ಲಿನ ಜಾಜಮಾನಿ ವ್ಯವಸ್ಥೆಯನ್ನು ಅಧ್ಯಯನ ಮಾಡುವುದು ಈ ಯೋಜನೆಯ ಉದ್ದೇಶವಾಗಿತ್ತು. Two systems of Economic Exchange in village India ಎಂಬ ಹೆಸರಲ್ಲಿ ಈ ಪುಸ್ತಕ ಪ್ರಕಟವಾಯಿತು. ಇನ್ನೊಬ್ಬ ಬ್ರಿಟೀಷ್ ಮಾನವಶಾಸ್ತ್ರಜ್ಞ ಸ್ಕಾರಲೆಟ್ ಇಪ್‌ಸ್ಟೀನ್ ಮಂಡ್ಯ ಜಿಲ್ಲೆಯ ವಾಂಗಲ ಮತ್ತು ಮಂಡಲ ಎಂಬ ಹಳ್ಳಿಗಳನ್ನು ೧೯೫೪-೫೫ ರ ಸಾಲಿನಲ್ಲಿ ಅಧ್ಯಯನ ಮಾಡಿದನು. Economic Development and Social change in South India ಎಂಬ ಹೆಸರಲ್ಲಿ ಈ ಅಧ್ಯಯನ ಪ್ರಕಟವಾಗಿದೆ. ಸರಿಸುಮಾರು ಇದೇ ಕಾಲಘಟ್ಟದಲ್ಲಿ ಕೆ.ಈಶ್ವರನ್ ಅವರ Sivapura: A South Indian Village ಪುಸ್ತಕ ಪ್ರಕಟವಾಯಿತು. ಧಾರವಾಡ ಬಳಿಯ ಶಿವಪುರ ಎಂಬ ಹಳ್ಳಿಯನ್ನು ಕೆ. ಈಶ್ವರನ್ ಅವರು ಈ ಕೃತಿಯಲ್ಲಿ ಅಧ್ಯಯನಕ್ಕೊಳಪಡಿಸಿದ್ದಾರೆ. ಈ ಕೃತಿಯಲ್ಲಿ ಗ್ರಾಮಗಳಲ್ಲಿ ರೈತರು ರೂಢಿಸಿಕೊಂಡು ಬಂದಿರುವ 'ಆಯಾ' ವ್ಯವಸ್ಥೆಯನ್ನು ಅಧ್ಯಯನಕ್ಕೊಳಪಡಿಸಲಾಗಿದೆ[೨]. ಕರ್ನಾಟಕದಲ್ಲಿ ಆ ನಂತರ ಅನೇಕರು ಗ್ರಾಮಗಳ ಅಧ್ಯಯನ ಕೈಗೊಂಡಿರುವುದು ಕಂಡು ಬರುತ್ತದೆ. ಅರ್ಚಕ ರಂಗಸ್ವಾಮಿಯವರು 'ಹುಟ್ಟಿದ ಹಳ್ಳಿ', ಅರ್ಜುನ ಗೊಳಸಂಗಿಯವರ 'ಗೊಳಸಂಗಿ ಗ್ರಾಮ ಒಂದು ಜನಪದೀಯ ಅಧ್ಯಯನ' ಇವುಗಳಲ್ಲದೆ ಚನ್ನಣ್ಣ ವಾಲೀಕಾರ್ ಮುಂತಾದ ಜಾನಪದ ವಿದ್ವಾಂಸರು ಗ್ರಾಮಗಳ ಅಧ್ಯಯನವನ್ನು ಕೈಗೊಂಡಿರುವುದು ಕಂಡು ಬರುತ್ತದೆ.

ಈ ಮೇಲಿನ ಗ್ರಾಮ ಅಧ್ಯಯನಗಳು ಹೆಚ್ಚೂ ಕಡಿಮೆ ಯುರೋಪಿನ ಫಂಕ್ಷನಲ್ ಥಿಯರಿಯ ಅಧ್ಯಯನ ಕ್ರಮದಲ್ಲಿ ಕೈಗೊಂಡವುಗಳು. ಆರಂಭದಲ್ಲಿ ಈ ಅಧ್ಯಯನಗಳಿಗೆ ನಿರ್ದಿಷ್ಟ ಶೈಕ್ಷಣಿಕ ವಿಧಾನವೆಂಬುದಿರಲಿಲ್ಲ. ಅಲ್ಲದೆ ಗ್ರಾಮಗಳ ಅಧ್ಯಯನಕ್ಕೆ ತೊಡಗಿದ ಮೊದಲ ಘಟ್ಟದ ಅಧ್ಯಯನಕಾರರು ಶೈಕ್ಷಣಿಕ ವಲಯದಿಂದ ಬಂದವರೇನಲ್ಲ. ಮೈನ್‌ನಂತಹ ಆಡಳಿತಗಾರರು ಕೆಲವು ಆಡಳಿತಾತ್ಮಕ

ಅನುಕೂಲಗಳಿಗಾಗಿ ಗ್ರಾಮಗಳ ಅಧ್ಯಯನವನ್ನು ಆಕಸ್ಮಿಕವಾಗಿ ಕೈಗೊಂಡರು. ಆನಂತರ ಮಿಶನರಿಗಳು ಗ್ರಾಮಗಳ ಅಧ್ಯಯನವನ್ನು ಕೈಗೊಂಡಿದ್ದಾರೆ. ಈ ಕಾರಣದಿಂದ ಆರಂಭದ ಅಧ್ಯಯನಕಾರರು ಯಾವ ಶೈಕ್ಷಣಿಕ ತಯಾರಿಯೂ ಇಲ್ಲದೆ ಅಧ್ಯಯನ ಕೈಗೊಂಡರು ಆದರೆ ಅಮೇರಿಕಾದ ಮಾನವಶಾಸ್ತ್ರಜ್ಞ ರಾಬರ್ಟ್ ರೆಡೆಫೀಲ್ಡ್ ೧೯೩೦ ರಲ್ಲಿ ಪ್ರಕಟಿಸಿದ Tepoztalan: A Mexican Village ಎಂಬ ಗ್ರಂಥವು ಗ್ರಾಮಗಳ ಅಧ್ಯಯನಗಳಿಗೆ ಒಂದು ಶೈಕ್ಷಣಿಕ ವಿಧಾನದ ಮಾದರಿಯನ್ನು ಕಲ್ಪಿಸಿಕೊಟ್ಟಿತು. ಇದರ ಜೊತೆಗೆ ಅಮೇರಿಕಾ ಮತ್ತು ಇಂಗ್ಲೆಂಡಿನ ಆಡಳಿತಗಾರರು, ಮಿಶನರಿಗಳು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಮಾನವಶಾಸ್ತ್ರಜ್ಞರು ರೆಡ್‌ಫೀಲ್ಡ್‌ರ ಶೈಕ್ಷಣಿಕ ವಿಧಾನವನ್ನು ಹೆಚ್ಚೂ ಕಡಿಮೆ ಯಥಾವತ್ತಾಗಿ ಅನುಸರಿಸಿದರು.

ವಸಾಹತುಶಾಹಿ ಸಂಕಥನವಾಗಿ ಮಾನವಶಾಸ್ತ್ರ

ಮೇಲುನೋಟಕ್ಕೆ ತುಸು ಅಸಂಗತವೆನ್ನಿಸುವ ಮೂರು ಉಲ್ಲೇಖಗಳನ್ನು ನೀಡುವುದರ ಮೂಲಕ ಈ ಭಾಗದ ಬರಹವನ್ನು ಪ್ರಾರಂಭಿಸುತ್ತೇನೆ. ಇಲ್ಲಿಯವರೆಗೆ ಯುರೋಪು ಮತ್ತು ಅಮೇರಿಕಾದ ಅಧ್ಯಯನಕಾರರು ಭಾರತ ಮತ್ತು ಕರ್ನಾಟಕದಲ್ಲಿ ನಡೆಸಿದ ಸಾಮಾಜಿಕ ಅಧ್ಯಯನಗಳನ್ನು ಗಮನಿಸಿದ್ದೇವೆ. ಈ ಅಧ್ಯಯನಗಳನ್ನು ತಾತ್ವಿಕವಾಗಿ ವಿವೇಚಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಮೊದಲೇ ಹೇಳಿದಂತೆ ಭಾರತದಲ್ಲಿ ಸಾಮಾಜಿಕ ಅಧ್ಯಯನಗಳನ್ನು ಕೈಗೊಂಡವರಲ್ಲಿ ಓರಿಯಂಟಲಿಸ್ಟರು, ಮಿಶನರಿಗಳು ಮತ್ತು ಕಂಪನಿ ಸರ್ಕಾರದ ಆಡಳಿತಗಾರರು ಪ್ರಮುಖರು. ಈ ಮೂರೂ ಗುಂಪುಗಳನ್ನು ಪ್ರತಿನಿಧಿಸುವ ವಿದ್ವಾಂಸರ ಉಲ್ಲೇಖಗಳನ್ನು ಇಲ್ಲಿ ದಾಖಲಿಸಿ ನಂತರ ಮುಂದಿನ ಚರ್ಚೆಗೆ ಹೋಗಬಹುದಾಗಿದೆ.

> 'ಭಾರತವು ನಮಗೆ ಏನನ್ನು ಕಲಿಸುತ್ತದೆ?' ಎಂಬ ಶೀರ್ಷಿಕೆಯನ್ನು ನಾನು ಯಾಕಾಗಿ ನನ್ನ ಈ ಉಪನ್ಯಾಸ ಮಾಲಿಕೆಗೆ ಕೊಟ್ಟೆನೆಂದು ನಿಮಗೆ ಗೊತ್ತೇ? ನಿಜ, ಭಾರತ ಬಹಳ ಸಂಗತಿಗಳನ್ನು ನಮ್ಮಿಂದ ಕಲಿಯಬೇಕಿದೆ. ಆದರೆ ಅದಕ್ಕಿಂತ ಹೆಚ್ಚಾಗಿ ನಾವು ಭಾರತದಿಂದ ಹಲವು ಸಂಗತಿಗಳನ್ನು ಕಲಿಯಬೇಕಿದೆ. ನಮಗೆ ಬಹುಮುಖ್ಯವಾಗಿ ಬೇಕಾದ ವಿಚಾರಗಳನ್ನು ನಾವು ಭಾರತದಿಂದ ಕಲಿಯಬೇಕಿದೆ.
>
> ಇಡೀ ಜಗತ್ತನ್ನೊಮ್ಮೆ ಅವಲೋಕಿಸಿದರೆ ನಮಗೆ ಗೊತ್ತಾಗುತ್ತದೆ. ಆ ದೇಶ ಎಲ್ಲ ಬಗೆಯ ಸಂಪತ್ತುಗಳಿಂದ ಮೈದುಂಬಿಕೊಂಡಿದೆ. ನಿಸರ್ಗವು ಆ ದೇಶಕ್ಕೆ ಶಕ್ತಿ ಮತ್ತು ಸೌಂದರ್ಯಗಳೆರಡನ್ನೂ ಧಾರಳಾವಾಗಿ ದಯಪಾಲಿಸಿದೆ. ಅದೊಂದು ಭೂಮಿಯ ಮೇಲಿರುವ ಸ್ವರ್ಗ. ಅಲ್ಲಿಯ ಜನರೂ ಅಷ್ಟೇ ಆಕಾಶದ ಕೆಳಗೆ ಬದುಕುವ ಜನಾಂಗಗಳಲ್ಲಿಯೇ ಹೆಚ್ಚು ಪ್ರಬುದ್ಧರಾದವರು'[೨].
>
> 'ಹಿಂದುಗಳು ಒಂದು ಕ್ಷುದ್ರ ಜನಾಂಗಕ್ಕೆ ಸೇರಿದವರು. ಇಂಗ್ಲೀಷರಾದ ನಾವು ಯಾವ ಬಗೆಯ ನೈತಿಕ ಮೌಲ್ಯಗಳನ್ನು ರೂಢಿಸಿಕೊಂಡು ಬಂದಿದ್ದೇವೋ ಅವುಗಳಿಗೆ ಹಿಂದುಗಳು ವ್ಯತಿರಿಕ್ತರಾದವರು. ಅಂದರೆ ನಮಗಿಂತ ಭಿನ್ನರಾದವರು. ಸತ್ಯಕ್ಕೆ ಅತ್ಯಂತ ಮಹತ್ವ

ನೀಡುವ ಬ್ರಿಟನ್ ಮೌಲ್ಯಗಳಿಗೆ ಹಿಂದುಗಳು ಹೊರತಾದವರು’[೬೩].

‘ನಾಗರಿಕ ಸೇವೆಗಾಗಿ ಅಥವಾ ಸೇನೆಯಲ್ಲಿ ಸೇವೆ ಸಲ್ಲಿಸಲು ಇಲ್ಲಿಂದ ಭಾರತಕ್ಕೆ ಯಾರಾದರೂ ಯುವಕರು ಹೋದರೆ ನಿಮಗೆ ಗೊತ್ತಾಗುತ್ತದೆ. ಭಾರತದಲ್ಲಿ ನೀವು ಯಾರನ್ನು ಬೇಟಿ ಮಾಡಿದರು ಅವರು ಸುಳ್ಳುಗಾರರೆಂದು. ಸುಳ್ಳು ಹೇಳುವುದು ಭಾರತದ ಜನರ ಸಹಜ ಸ್ವಭಾವ ಅಥವಾ ಆ ದೇಶದ ಸ್ವಭಾವದಲ್ಲಿಯೇ ಈ ಗುಣ ಅಂತರ್ಗತವಾದಂತಿದೆ. ಸತ್ಯ ಹೇಳಲೇಬೇಕೆಂದು ಅವರು ತಮ್ಮನ್ನು ಎಂದೂ ನಿಗ್ರಹಿಸಿಕೊಂಡವರಲ್ಲ. ಅವರ ಯಾವ ಮಾತುಗಳನ್ನೂ ನಂಬಲು ಸಾಧ್ಯವಿಲ್ಲ. ಹಿಂದುಗಳೆಂದು ನಾವು ಯಾರನ್ನು ಕರೆಯುತ್ತೇವೆಯೋ ಅವರ ಈ ಬಗೆಯ ಸ್ವಭಾವವು ಅತ್ಯಂತ ಅಸಹ್ಯಕರವಾದದ್ದು’[೬೪].

ಮ್ಯಾಕ್ಸ್‌ಮುಲ್ಲರ್ ಭಾರತದ ಕಡುಮೋಹಿ. ವಸ್ತುವಾದಿ ಯುರೋಪಿನಲ್ಲಿ ಭಾರತದ ಕುರಿತು ಜೀವಮಾನಪೂರ್ತಿ ಅಧ್ಯಯನ ಮಾಡಿದ ಪ್ರಕಾಂಡ ಪಂಡಿತ. ಕಂಪನಿ ಸರ್ಕಾರದ ಆಡಳಿತದ ಅವಧಿಯಲ್ಲಿ ಭಾರತದಲ್ಲಿ ಆಡಳಿತ ನಡೆಸಲು ಆಯ್ಕೆಯಾಗಿದ್ದ ಐ.ಸಿ.ಎಸ್ ಅಭ್ಯರ್ಥಿಗಳಿಗೆ ಭಾರತವನ್ನು ಪರಿಚಯಿಸಲೆಂದು ಮ್ಯಾಕ್ಸ್ ಮುಲ್ಲರ್ ಆಕ್ಸಫರ್ಡ್‌ನಲ್ಲಿ ಏಳು ಉಪನ್ಯಾಸಗಳನ್ನು ನೀಡುತ್ತಾನೆ. ಭಾರತವನ್ನು ಆಳುವ ಮುನ್ನ ಆ ದೇಶದ ವಸ್ತು ವಿಷಯಗಳ ಕುರಿತು ಅಭ್ಯರ್ಥಿಗಳಿಗೆ ತರಬೇತಿ ನೀಡುವುದು ಅಂದಿನ ವಾಡಿಕೆಯೂ ಆಗಿತ್ತು. ಈ ಏಳೂ ಉಪನ್ಯಾಸಗಳನ್ನು ಆಯ್ದು ‘ಇಂಡಿಯಾ ವಾಟ್ ಕ್ಯಾನ್ ಇಟ್ ಟೀಚ್ ಅಸ್?’ ಎಂಬ ಪುಸ್ತಕವನ್ನು ಪ್ರಕಟಿಸಲಾಗಿದೆ. ಈ ಪುಸ್ತಕದಿಂದ ಮೇಲಿನ ಉಲ್ಲೇಖಗಳನ್ನು ಆಯ್ದುಕೊಳ್ಳಲಾಗಿದೆ.

‘ಇಂದು ಬಹಳ ಮುಂದುವರೆದಿರುವ ಪಶ್ಚಿಮದ ದೇಶಗಳು ಗಾಢ ಅಜ್ಞಾನದ ಪಾತಾಳದಲ್ಲಿ ಹುದುಗಿ ಹೋಗಿದ್ದಾಗ, ಈ ಪೂರ್ವದ ದೇಶಗಳು ಮುಂದುವರಿದ ವಿಜ್ಞಾನ ಮತ್ತು ಶ್ರೇಷ್ಠ ಕಲೆಗಳ ಯುಗದಲ್ಲಿ ಬದುಕುತ್ತಿದ್ದವು. ಈ ದೇಶದ ವಿವಿಧ ಸಂಸ್ಥೆಗಳು ಅದರಲ್ಲೂ ರಾಜಕೀಯ ಮತ್ತು ಸಾಮಾಜಿಕ ರಂಗಗಳು, ಗಣಿತ ಜ್ಞಾನ, ಖಗೋಳಶಾಸ್ತ್ರ, ನೀತಿಶಾಸ್ತ್ರ ಮತ್ತು ಮನೋವಿಜ್ಞಾನದ ಕ್ಷೇತ್ರಗಳಲ್ಲಿ ಮಾಡಿರುವ ಸಾಧನೆಗಳಿಂದ ಭಾರತೀಯರು ದೂರದ ದೇಶಗಳಲ್ಲಿ ತುಂಬಾ ಪ್ರಸಿದ್ಧರು. ಯುರೋಪು ಭಾರತಕ್ಕೆ ಕಾಲಿಡುವ ಮುನ್ನ, ಈ ದೇಶದ ತತ್ವಜ್ಞಾನಿಗಳು ಯುರೋಪಲ್ಲಿ ಸುಪ್ರಸಿದ್ಧರಾಗಿದ್ದರು’[೬೫].

‘ಇಂಡಿಯಾದ ಸಾಮಾಜಿಕ ವ್ಯವಸ್ಥೆಯಲ್ಲಿ ಗುರುತರ ಬದಲಾವಣೆಗಳನ್ನು ತರುವಲ್ಲಿ ಎದುರಾಗುವ ದಾಟಲಾಗದ ಬಹುದೊಡ್ಡ ಅಡೆತಡೆಗಳೆಂದರೆ ಇಂಡಿಯಾದ ಜನರ ವಿಚಿತ್ರ ಜೀವನ ವಿಧಾನಗಳು. ಆಚರಣೆಗಳು ಮತ್ತು ಎಂದೂ ನಾಶ ಮಾಡಲಾರದಂತಹ ಸಂಪ್ರದಾಯವಾದಿ ನಿಲುವುಗಳು. ಯಾವ ಜನ ತಮ್ಮಷ್ಟಕ್ಕೆ ತಾವು ನೆಮ್ಮದಿಯಿಂದಿರಲು ಯತ್ನಿಸುವರೋ ಅವರ ಕಲ್ಯಾಣವನ್ನು ಸಾಧ್ಯವಾಗಿಸಬಹುದು. ನೆಮ್ಮದಿಯನ್ನು ಬಯಸುವ ಜನಸಮುದಾಯ ತಮಗಾಗಿ ಹಗಲಿರಳೂ ದುಡಿವ ವ್ಯವಸ್ಥೆಗೆ ಯಾವತ್ತೂ

ಒತ್ತಾಸೆಯಾಗಿರಬೇಕು. ನನಗೆ ಕಾಣಿಸುತ್ತಿರುವಂತೆ ಇಂಡಿಯಾದ ಜನ ತಾವು ಸುಖವಾಗಿರಲು ಇಚ್ಛಿಸುತ್ತಿಲ್ಲ. ಹೋಗಲಿ ವ್ಯವಸ್ಥೆಗೆ ಸಹಕಾರಿಯಾಗಿಯೂ ಇಲ್ಲ. ಈ ಜನರ ಒಳಿತಿಗಾಗಿ ರೂಪಿಸುವ ಯಾವುದೇ ಮಹತ್ವದ ಯೋಜನೆಗಳನ್ನು ಕೇವಲ ತಮ್ಮ ಕನಿಷ್ಠ ದರ್ಜೆಯ ಆಚರಣೆಗಳನ್ನು, ಜೀವನ ವಿಧಾನಗಳನ್ನು ಮತ್ತು ಕ್ಷುದ್ರ ನಂಬಿಕೆಗಳನ್ನು ಅಭಿವೃದ್ಧಿ ಯೋಜನೆಗಳು ನಾಶಮಾಡುತ್ತವೆ ಎಂಬ ಏಕೈಕ ಕಾರಣಕ್ಕೆ ಇವರು ಅವುಗಳನ್ನು ಹಠಮಾರಿತನದಿಂದ ವಿರೋಧಿಸುತ್ತಾರೆ'[೬೬].

'ಇಂಡಿಯಾದ ಜನರಿಗೆ ಅಸಮಾನ್ಯ ಉದಾಸೀನತೆ, ಸೋಮಾರಿತನಗಳ ಜೊತೆಗೆ ಬಡತನ ಸಹಜವಾಗಿಯೇ ಅಂಟಿಕೊಂಡು ಬಂದಿದೆ'[೬೭].

'ಇಂಡಿಯಾದ ಜನರು ನಿರಂಕುಶ ಪ್ರಭುತ್ವಕ್ಕೆ ತಲೆಬಾಗಿ ದಾಸ್ಯವನ್ನು ಒಪ್ಪಿಕೊಳ್ಳುವುದು ಒಂದು ಸಂಪ್ರದಾಯದಂತೆ ಬೆಳೆದು ಬಂದಿದೆ. ಇವರು ದಾಸ್ಯವನ್ನು ನಿರುಮ್ಮಳವಾಗಿ ಒಪ್ಪಿಕೊಳ್ಳುವುದೇ ಒಂದು ವೈಚಿತ್ರ್ಯ. ತಮ್ಮ ಹೀನಸ್ಥಿತಿಗೆ ಕಾರಣವಾದ ರಾಜ್ಯಾಡಳಿತ ಯಾರ ಕೈಯಲ್ಲಿದೆ? ಈ ರಾಜ ತಮ್ಮ ದೇಶದವನಾ ಅಥವಾ ಹೊರಗಿನವನಾ? ಎಂಬ ಬಗ್ಗೆಯೂ ಈ ಜನ ತಲೆ ಕೆಡಿಸಿಕೊಳ್ಳುವುದಿಲ್ಲ'. (ರಾಮ ಆಳಿದರೇನು ರಾವಣ ಆಳಿದರೇನು ಎಂಬ ಜನಪ್ರಿಯ ಗಾದೆಯೊಂದಿದೆ ಇಲ್ಲಿ)[೬೮].

೧೭೯೨ ರಲ್ಲಿ ಭಾರತಕ್ಕೆ ಧರ್ಮ ಪ್ರಚಾರಕ್ಕಾಗಿ ಬಂದಿದ್ದ ಫ್ರೆಂಚ್ ಪಾದ್ರಿ ಅಬ್ಬೆದುಬಾಯಿಸ್‌ನ 'ಹಿಂದೂ ಮ್ಯಾನರ್ಸ್ ಕಸ್ಟಮ್ಸ್ ಅಂಡ್ ಸೆರಿಮೊನಿಸ್' ಪುಸ್ತಕದಿಂದ ಮೇಲಿನ ಉಲ್ಲೇಖಗಳನ್ನು ಆಯ್ದುಕೊಳ್ಳಲಾಗಿದೆ. ದುಬಾಯಿಸ್ ಹಳೇ ಮೈಸೂರ್ ಭಾಗದಲ್ಲಿ ಕ್ರಿಶ್ಚಿಯನ್ ಧರ್ಮ ಪ್ರಚಾರ ಮಾಡುತ್ತಲೇ ಅಲ್ಲಿನ ಜನರ ಕಷ್ಟಸುಖಗಳ ಭಾಗವಾಗಿ ಬದುಕಿದವನು. ಸಿಡುಬು ರೋಗದಿಂದ ಸಾಯುತ್ತಿದ್ದ ಸ್ಥಳೀಯ ಜನರ ಪ್ರಾಣ ಉಳಿಸಲು ಹೆಣಗಿದವನು. ಈತ 'ಪಂಚತಂತ್ರ' ಕೃತಿಯನ್ನು ಫ್ರೆಂಚ್ ಭಾಷೆಗೆ ಆ ಕಾಲಕ್ಕೇ ಭಾಷಾಂತರಿಸಿದ್ದನು.

'ಡೊಂಬ ಅಥವಾ ಡೊಂಬೊ ಎಂಬ ಪದವು 'ದುಂಬಾ' ಎಂಬ ಮೂಲ ಪದದಿಂದ ಹುಟ್ಟಿದೆ. 'ದುಂಬಾ' ಎಂದರೆ 'ದೆವ್ವಾ' ಎಂದರ್ಥ: ಇದು ಕಳ್ಳತನವನ್ನು ರೂಢಿಸಿಕೊಂಡಿರುವ ಒಂದು ಸಮುದಾಯದ ಹೆಸರೂ ಹೌದು. ಎಚ್.ಎ.ಸ್ಟುವರ್ಟ್ ಹೇಳುವಂತೆ ಡೊಂಬರು ಮೂಲತಃ ದ್ರಾವಿಡಿಯನ್ ಸಮುದಾಯವಾಗಿದ್ದು, ಇವರು ನೇಕಾರಿಕೆ ಮತ್ತು ಮನೆಗೆಲಸ ಮಾಡುತ್ತ ವಿಶಾಖಪಟ್ಟಣದ ಬೆಟ್ಟ ಪ್ರದೇಶದಲ್ಲಿ ಕಾಣಸಿಗುತ್ತಾರೆ. ಈ ಡೊಂಬರು ಬೆಂಗಾಳ್, ಬಿಹಾರ್ ಮತ್ತು ವಾಯುವ್ಯ ಭಾರತದ 'ಡೋಮ್' ಜಾತಿಯ ಉಪಶಾಖೆಯಂತೆ ಕಂಡು ಬರುತ್ತಾರೆ. ಉತ್ತರ ಭಾರತದಲ್ಲಿ 'ಡೋಮ್' ಸಮುದಾಯವನ್ನು ಅತ್ಯಂತ ಕ್ಷುದ್ರವಾಗಿ ಕಾಣಲಾಗುತ್ತದೆ. ಇಲ್ಲಿಯೂ ಡೊಂಬರನ್ನು ಹಾಗೆಯೇ ಕಾಣಲಾಗುತ್ತದೆ. ಏಕೆಂದರೆ ಇವರು ದನ, ಹಂದಿ, ಕುದುರೆ ಮತ್ತು ಇಲಿ ಮಾಂಸವನ್ನು ಮತ್ತು ಸತ್ತ ಇತರ ಪ್ರಾಣಿಗಳ ಮಾಂಸವನ್ನು ತಿನ್ನುತ್ತಾರೆ. ಉರಿಯಾಗಳು ಮತ್ತು ಬಂಗಾಳಿಗಳು ಇವರನ್ನು

'ಚಾಂಡಾಲ'ರು ಎಂದು ಕರೆಯುತ್ತಾರೆ'[೬೯].

ಡೊಂಬರು ಅತ್ಯಂತ ನುರಿತ ಸಂಗೀತಗಾರರೂ ಹೌದು. ಇವರು ಶಹನಾಯಿ ಮತ್ತು ಡ್ರಮ್‌ಗಳನ್ನು ಸೊಗಸಾಗಿ ನುಡಿಸುತ್ತಾರೆ. ಇವರು ಜೈಪುರದ ಅರಸನ ಆಸ್ಥಾನದ ಸಂಗೀತಗಾರರೂ ಆಗಿದ್ದರು. ಈಗಲೂ ಡೊಂಬರವನು ಭಿಕ್ಷಕ್ಕೆ ಮನೆ ಮನೆಗೆ ಹೋಗುವಾಗಲೂ ಶಹನಾಯಿ ನುಡಿಸುತ್ತಲೇ ಹೋಗುತ್ತಾನೆ''[೭೦].

'ನೆಲ್ಲೂರಿನ ಮ್ಯಾನ್ಯುಯಲ್‌ನಲ್ಲಿ ಉಲ್ಲೇಖಿಸಲ್ಪಟ್ಟಂತೆ 'ನೆಲ್ಲೂರು' ತಹಶೀಲ್ದಾರನು ಡೊಂಬರಿಗೆ 'ಮೀರಾಸಿ' ಎಂಬ ಕಂದಾಯವನ್ನು ಪಡೆಯಲು ಅನುಮತಿ ಮಾಡಿಕೊಟ್ಟಿದ್ದನಂತೆ. ಅಂದರೆ ಡೊಂಬರಿಗೆ ಕೆಲವು ಹಳ್ಳಿಗರು ಪಾರಂಪರಿಕ ಕೊಡುಗೆಯಾಗಿ ಈ ಕಂದಾಯವನ್ನು ಸಲ್ಲಿಸಬೇಕಿತ್ತು. ಮೈಸೂರು ಭಾಗದಲ್ಲಿ ಇದನ್ನು 'ಡೊಂಬರ ಲಿಂಗದ ವೀರಕಾಣಿಕೆ' ಎಂದು ಕರೆಯುತ್ತಾರೆ ಎಂದು ವಿಲ್ಸನ್ ಎಂಬ ಅಧಿಕಾರಿ ವರದಿ ಮಾಡಿದ್ದಾನೆ. ವೆಂಕಟಗಿರಿ ಎಂಬಲ್ಲಿ ೧೮೦೧ ರಲ್ಲಿ ಡೊಂಬರು ಒಂದು ನಿಶ್ಚಿತ ಕರ ಪಡೆಯುವ ಸೌಲಭ್ಯ ಇತ್ತು ಎಂದು ಹೇಳಲಾಗುತ್ತದೆ'[೭೧].

'ಡೊಂಬರು ಕುಖ್ಯಾತ ದರೋಡೆಕೋರರೂ ಹೌದು. ತಾವು ಕದ್ದ ಬಟ್ಟೆಗಳನ್ನು ಬೆಲೆ ಬಾಳುವಂತಿದ್ದರೆ ಅವನ್ನು ಮಾರುವುದಿಲ್ಲ. ಬೇರೆಡೆ ಹೋದಾಗ ಅವುಗಳನ್ನು ಧರಿಸುತ್ತಾರೆ. ಡಕಾಯಿತಿಗೆ ಇವರು ಕಬ್ಬಿಣದ ಸಲಕರಣೆಗಳನ್ನು ಬಳಸುತ್ತಾರೆ. ಅಲ್ಲದೆ ಉಳಿದ ಕ್ರಿಮಿನಲ್‌ಗಳು ಬಳಸುವ ದರೋಡೆಯ ತಂತ್ರಗಳನ್ನು ಡೊಂಬರು ಬಳಸುತ್ತಾರೆ. ಇವರು ಅತ್ಯಂತ ನುರಿತ ದನಕಳ್ಳರು. ಈ ಪ್ರಾಂತ್ಯದ ದನಗಳ ಸಂತೆಯಲ್ಲಿ ಡೊಂಬರು ತಾವು ಕದ್ದ ದನಗಳನ್ನು ಮಾರಾಟ ಮಾಡುತ್ತಾರೆ'[೭೨].

ಡೊಂಬರನ್ನು ಕುರಿತ ಮೇಲಿನ ಉಲ್ಲೇಖಗಳನ್ನು ಎಡ್ಗರ್ ಥರ್ಸ್‌ಟನ್‌ನ 'ಕ್ಯಾಸ್ಟ್ ಆಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾದ' ಸಂಪುಟದಿಂದ ಆಯ್ದುಕೊಳ್ಳಲಾಗಿದೆ. ಥರ್ಸ್‌ಟನ್ ಮದ್ರಾಸ್‌ನ ಆಂಥ್ರೋಪಲಾಜಿಕಲ್ ಮ್ಯೂಸಿಯಂನ ಮುಖ್ಯಸ್ಥನಾಗಿದ್ದವನು. ಜೊತೆಗೆ Ethnographic survey of India ಹಮ್ಮಿಕೊಂಡ ಭಾರತದ ಜಾತಿಗಳ ಮತ್ತು ಆದಿವಾಸಿಗಳ ಅಧ್ಯಯನಕ್ಕಾಗಿ ಮದ್ರಾಸ್ ಪ್ರಾಂತ್ಯದ ಮುಖ್ಯಸ್ಥನಾಗಿ ಥರ್ಸ್‌ಟನ್ ನೇಮಕಗೊಂಡಿದ್ದನು.

ಇಲ್ಲಿ ನಾನು ಮೂರು ಜನ ಯುರೋಪಿನ ವಿದ್ವಾಂಸರನ್ನು ಪ್ರಾತಿನಿಧಿಕವಾಗಿ ಉಲ್ಲೇಖಿಸಿದ್ದೇನೆ. ಓರಿಯಂಟಲಿಸ್ಟರನ್ನು ಪ್ರತಿನಿಧಿಸುವ ಮ್ಯಾಕ್ಸ್‌ಮುಲ್ಲರ್, ಯುರೋಪಿನ ಪಾದ್ರಿಗಳನ್ನು ಅಬೆದುಬಾಯಿಸ್ ಮತ್ತು ಕಂಪನಿ ಆಡಳಿತದ ಅಧಿಕಾರಿಗಳನ್ನು ಎಡ್ಗರ್ ಥರ್ಸ್‌ಟನ್ ಅನುಕ್ರಮವಾಗಿ ಪ್ರತಿನಿಧಿಸುತ್ತಾರೆ. ಕಂಪನಿ ಆಡಳಿತದ ಆರಂಭದಲ್ಲಿ ಮತ್ತು ಕಂಪನಿ ಆಡಳಿತದ ಸಂದರ್ಭದಲ್ಲಿ ಇಂಡಿಯಾವನ್ನು ಅರ್ಥ ಮಾಡಿಕೊಳ್ಳಲು ಯತ್ನಿಸಿದ ವಿವಿಧ ಜ್ಞಾನಕ್ಷೇತ್ರಗಳ ಪಂಡಿತರನ್ನು ಈ ಮೂರು ಮಂದಿ ವಿದ್ವಾಂಸರು ಪ್ರತಿನಿಧಿಸುತ್ತಾರೆ. ಭಾರತವನ್ನು ಅದರ ಹೊರಗಿದ್ದುಕೊಂಡು ಪ್ರಾಚೀನ ಪಠ್ಯಗಳ ಮೂಲಕ ಅದನ್ನು

ವಿವರಿಸ ಹೊರಟವರು ಓರಿಯಂಟಲಿಸ್ಟರು. ಇವರು ಯುರೋಪಿನ ಗಣ್ಯ ವರ್ಗಕ್ಕೆ ಸೇರಿದ ಅಭಿಜಾತ (Classical) ತಿಳುವಳಿಯ ಪರಿಸರಕ್ಕೆ ಸೇರಿದವರು. ಪ್ರಾಚೀನ ಸಂಸ್ಕೃತಿ, ಸಾಹಿತ್ಯ ಮತ್ತು ಕಲೆಗಳನ್ನು ಒಂದು ಆದರ್ಶವಾದೀ ಚೌಕಟ್ಟಿನಲ್ಲಿ ಪ್ರೀತಿಸುವ ಜನ ಇವರು. ಇಂಗ್ಲೆಂಡಿನ ಪ್ರಮುಖ ವಿಶ್ವವಿದ್ಯಾಲಯಗಳಲ್ಲಿ ಕೆಲಸಕ್ಕಿದ್ದ ಕೆಲವು ಪ್ರಮುಖ ಓರಿಯಂಟಲಿಸ್ಟ ವಿದ್ವಾಂಸರು ಇಂಡಿಯಾವನ್ನು ಆಳಲು ಹೋಗುವ ಅಧಿಕಾರಿಗಳಿಗೆ ಆಕ್ಸ್‌ಫರ್ಡ್‌ನಲ್ಲಿ ತರಬೇತಿ ನೀಡುವ ಕೆಲಸವನ್ನೂ ನಿರ್ವಹಿಸುತ್ತಿದ್ದರು.

ಇನ್ನು ಕ್ರಿಶ್ಚಿಯನ್ ಧರ್ಮ ಪ್ರಚಾರಕ್ಕೆ ಇಂಡಿಯಾಕ್ಕೆ ಬಂದ ಬಹುಪಾಲು ಪಾದ್ರಿಗಳು ಯುರೋಪಿನ ಮಧ್ಯಮ ವರ್ಗಕ್ಕೆ ಸೇರಿದ ಜನ. ಇವರು ಯುರೋಪಿನ ಟಿಪಿಕಲ್ ಉದಾರವಾದಿ ಮಾನವತಾವಾದವನ್ನು ಪ್ರತಿನಿಧಿಸುತ್ತಾರೆ. ಮೇಲು ನೋಟಕ್ಕೆ ಧರ್ಮ ಪ್ರಚಾರಕ್ಕೆಂದು ಇಂಡಿಯಾಕ್ಕೆ ಬಂದರೂ, ಇಲ್ಲಿನ ಜನರ ಕಷ್ಟ ಸುಖಗಳಿಗೆ ಈ ಪಾದ್ರಿಗಳು ಸ್ಪಂದಿಸಿದರು. ಇಲ್ಲಿನ ಜನರ ಗಾಯಗಳಿಗೆ ಔಷಧಿ ಹಚ್ಚಿದರು. ಅಬ್ಬೆದುಬಾಯಿಸ್, ವೆರಿಯರ್ ಎಲ್ವಿನ್ ಮುಂತಾದ ಮಿಶಿನರಿಗಳು ತಮ್ಮ ಮಾನವೀಯತೆಯ ಕಾರಣಕ್ಕೆ ಭಾರತದ ಇತಿಹಾಸದಲ್ಲಿ ದಾಖಲಾಗಿದ್ದಾರೆ. ಆದರೆ ಇವರು ವಿದ್ವಾಂಸರಾಗಿ ಯುರೋಪಿನ ಅಭಿಜಾತ ಶೈಕ್ಷಣಿಕ ವಿಧಾನವನ್ನೇ ನೆಚ್ಚಿಕೊಂಡವರು. ಇನ್ನು ಆಡಳಿತಾಧಿಕಾರಿಗಳಾಗಿದ್ದ ರಿಸ್ಲೆ. ಎಂಥೋವನ್, ಮೆಕೆಂಜಿ, ಕ್ರೂಕ್, ಹಂಟರ್ ಥರ್ಸಟನ್‌ನಂತವರು ನೇರವಾಗಿ ಕಂಪನಿ ಆಡಳಿತಕ್ಕೆ ಜವಾಬ್ದಾರರಾಗಿದ್ದವರು. ಇವರು ಇಲ್ಲಿನ ಜನರನ್ನು ಯುರೋಪಿನ ಕಣ್ಣುಗಳಿಂದ ನೋಡಿದರು. ಮತ್ತು ತಮ್ಮ ಆಡಳಿತಕ್ಕೆ ಅನುಕೂಲವಾಗಬಲ್ಲ ವರದಿಗಳನ್ನು ತಮ್ಮಿಷ್ಟಕ್ಕೆ ತಾವು ಸಿದ್ಧಪಡಿಸಿಕೊಂಡವರು.

ಈ ಅಧ್ಯಾಯದ ಆರಂಭದಲ್ಲಿ ನಾನು ಮಾಡಿರುವ ಮೂರು ಉಲ್ಲೇಖಗಳು ಮೇಲುನೋಟಕ್ಕೆ ಭಿನ್ನವಾಗಿ ಕಂಡರೂ ಸಹ ಭಾರತವನ್ನು ನೋಡುವ ಪಶ್ಚಿಮದ ಬೌದ್ಧಿಕ ಚಟುವಟಿಕೆಗಳ ಮಟ್ಟದಲ್ಲಿಯೇ ಅವು ತಾತ್ವಿಕವಾಗಿ ಭಿನ್ನವಾದವುಗಳೇನಲ್ಲ. ಪೌರವಾತ್ಯವಾದ, ಅಭಿಜಾತ ಮಾನವಶಾಸ್ತ್ರ ಅಥವಾ ಯುರೋಪಿನ ಸಮಾಜ ವಿಜ್ಞಾನ ಯಾವುದೇ ಜ್ಞಾನಶಿಸ್ತು ಜ್ಞಾನದ ಅತ್ಯುನ್ನತ ಮಟ್ಟದಲ್ಲಿ ತಮ್ಮ ಅಧಿಕಾರ ದಾಹದ ನಗ್ನತೆಯನ್ನು ಅನುಭವಿಸುತ್ತವೆ. ಇದನ್ನು ಮಾರ್ಕ್ಸ್ 'ಬೂರ್ಜ್ವಾ ನಾಗರೀಕತೆಯಲ್ಲಿ ಅಗಾಧ ಕಪಟ ಮತ್ತು ಕ್ರೌರ್ಯಗಳು ಯಾವತ್ತೂ ಅಂತರ್ಗತವಾಗಿರುತ್ತವೆ. ಅವು ತಮ್ಮ ನಿಜ ಸ್ವರೂಪದಲ್ಲಿ ನಮ್ಮ ಕಣ್ಣಿಗೆ ಕಾಣುವುದಿಲ್ಲ. ತಾನು ಹುಟ್ಟಿದ ನೆಲದಲ್ಲಿ ಅವಕ್ಕೆ ವಿಶೇಷ ಮನ್ನಣೆಗಳಿವೆ. ಆದರೆ ವಸಾಹತುಗಳ ಮಧ್ಯೆ ಅವು ತಮ್ಮ ನಗ್ನತೆಯನ್ನು ಧಾರಾಳ ಪ್ರದರ್ಶಿಸುತ್ತವೆ '[೮೩] ಎನ್ನುತ್ತಾನೆ. ಪ್ರಾಯಶಃ ಯುರೋಪಿನ ಸಾಮ್ರಾಜ್ಯಶಾಹಿ ಚಲನೆಗಳನ್ನು ಮತ್ತು ಅದರ ಅಂತರ್ಗತ ಭಾಗವಾಗದ ವಿರಾಟ್ ಕ್ರೌರ್ಯವನ್ನು ಮಾರ್ಕ್ಸ್ ಮೊದಲೇ ಊಹಿಸಿದ್ದ. 'ಓರಿಯಂಟಲಿಸ್ಟರು ಕಲ್ಪಿಸುವಂತೆ ಭಾರತಕ್ಕೆ ಒಂದು ಭವ್ಯ ಮತ್ತು ಸುವರ್ಣ ಯುಗವೊಂದಿತ್ತು ಎಂಬುದನ್ನು ಮಾರ್ಕ್ಸ್ ಸ್ಪಷ್ಟವಾಗಿ ಅಲ್ಲಗಳೆಯುತ್ತಾನೆ [೮೪]. ಹಾಗೆ ನೋಡಿದರೆ ಯುರೋಪಿನಲ್ಲಿಯೇ ಹುಟ್ಟಿ, ಯುರೋಪಿನ ಮತ್ತು ನಾವು ಕರೆಯುವ ಪಶ್ಚಿಮದ ವಿನಾಶಕಾರಿ ಹಿಂಸೆಯ ಸ್ವರೂಪವನ್ನು ಮಾರ್ಕ್ಸ್ ತನ್ನ ಸಮಕಾಲೀನ ರಾಜಕೀಯ ವಿದ್ಯಮಾನಗಳನ್ನು ನೋಡುವ ಕ್ರಮದಿಂದ ಎಲ್ಲರಿಗಿಂತ ಮೊದಲೇ ಊಹಿಸಿದ್ದ. ಆ ಕಾರಣಕ್ಕಾಗಿ ಆಂಥೋನಿ ಗ್ರಾಂಸಿ, ಎಡ್ವರ್ಡ್‌ಸೈದ್, ಫ್ರಾಂಜ್

ಫ್ಯಾನನ್, ಅಲ್ಬರ್ಟ್‌ಮೆಮ್ಮಿ ಮುಂತಾದ ವಸಾಹತೋತ್ತರ ಚಿಂತಕರ ಬೇರುಗಳು ಮಾರ್ಕ್ಸ್‌ವಾದದಲ್ಲಿವೆ. ಈ ಭಾಗದ ಬರಹದಲ್ಲಿ ಕಂಪನಿ ಆಡಳಿತದ ಸಂದರ್ಭದಲ್ಲಿ ಭಾರತವನ್ನು ಅಧ್ಯಯನ ಮಾಡಿದ ಓರಿಯಂಟಲಿಸ್ಟರು, ಮಿಶನರಿಗಳು ಮತ್ತು ಕಂಪನಿ ಆಡಳಿತದ ಅಧಿಕಾರಿಗಳ ಅಧ್ಯಯನಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಓರಿಯಂಟಲಿಸ್ಟರು: ಗ್ರಾಂಥಿಕ ಸತ್ಯಗಳ ಆರಾಧಕರು

ಈ ಮೊದಲೇ ಹೇಳಿದಂತೆ ವಸಾಹತು ಸಂದರ್ಭದ ಅಥವಾ ಅದಕ್ಕೂ ಪೂರ್ವದಲ್ಲಿ ಭಾರತವನ್ನು ವಿವರಿಸಿಕೊಂಡ ಪಶ್ಚಿಮದ ಬೌದ್ಧಿಕ ವಲಯವು ಪ್ರಾಚೀನ ಗ್ರಂಥಗಳ ಅಭ್ಯಾಸದಿಂದಾಗಿ ಲಭಿಸಿದ ಗ್ರಂಥೀಯ ಸತ್ಯಗಳನ್ನು ಅತ್ಯಂತಿಕವಾದವುಗಳೆಂದು ಗ್ರಹಿಸಿತು. ಈ 'ಹಿಂದೆ' ಇದ್ದ ಭಾರತವು 'ಇಂದು' ಸತ್ತು ಹೋಗಿದೆ ಎಂದ ಭಾರತದ ಕಡುಮೋಹಿ ಮ್ಯಾಕ್ಸ್‌ಮುಲ್ಲರ್ ತನ್ನ ಜೀವಿತಾವಧಿಯಲ್ಲಿ ಎಂದೂ ಭಾರತಕ್ಕೆ ಕಾಲಿಡಲಿಲ್ಲ. ಈ ಬಗೆಯ ಗ್ರಾಂಥಿಕ ಸತ್ಯಗಳನ್ನು ನಂಬುವ ಪ್ರವೃತ್ತಿ ಭಾರತವನ್ನು ನೋಡುವ ದೃಷ್ಟಿಕೋನವನ್ನೇ ಏಕಮುಖವಾಗಿಸುತ್ತಾ ಬಂದಿದೆ. ಇಲ್ಲವೆ, ಸಮಾಜವೊಂದರ ಕುರಿತ ಈ ಬಗೆಯ ಪಾರ್ಶ್ವಿಕ ಗ್ರಹಿಕೆಯು ಅದನ್ನು ಮತ್ತೆ ಮತ್ತೆ ನೋಡುವ ಪ್ರಯತ್ನಗಳನ್ನು ನಿರಾಕರಣೆಯ ಅತ್ಯಂತಿಕ ಸ್ಥಿತಿಗೆ ತಂದು ನಿಲ್ಲಿಸುತ್ತದೆ. ಪ್ರಾಯಶಃ ಮಾನವಶಾಸ್ತ್ರದ ಹುಟ್ಟು ಈ ಬಗೆಯ ನಿರಾಕರಣೆಯ ನೆಲೆಯಿಂದ ಆಗಿರಬೇಕು. ಏಕೆಂದರೆ ಭಾರತಕ್ಕೆ ಬರುವ ಮೊದಲೇ ಯುರೋಪಿನ ಮಾನವಶಾಸ್ತ್ರಕ್ಕೆ ಅನ್ಯರನ್ನು ನಿರಾಕರಿಸುವ ಅಥವಾ ಹೀಗಳೆಯುವ ಪ್ರವೃತ್ತಿ ಮೈಗೂಡಿತ್ತು. ನಿರಾಕರಣೆಯ ಸ್ಥಾಯಿ ಎಂದರೆ ಅಹಂಶ್ರೇಷ್ಠತೆ. ನಾನು ಮಾತ್ರ ಶ್ರೇಷ್ಠ ಉಳಿದದ್ದು ಕನಿಷ್ಠ ಎಂಬ ಸ್ಥಾಯೀಭಾವ ಮಾನವಶಾಸ್ತ್ರದ ಶೈಕ್ಷಣಿಕ ವಿಧಾನವನ್ನು ರೂಪಿಸುತ್ತಲೇ ಬಂದಿದೆ. ಈ ಬಗೆಯ ಆತ್ಮಪ್ರತ್ಯಯ ಯುರೋಪಿಗೆ ಪ್ರಾಪ್ತವಾಗಿದ್ದು ಅದರ ರಾಜಕೀಯ ವಿಜಯಗಳಿಂದ. ವಿಜ್ಞಾನ ಮತ್ತು ತಂತ್ರಜ್ಞಾನಗಳ ಕ್ಷೇತ್ರದಲ್ಲಿ ಅದು ಮಾಡಿದ ನಿಬ್ಬೆರಗಿನ ಸಾಧನೆಗಳಿಂದ. ಮ್ಯಾಕ್ಸ್ ಮುಲ್ಲರ್ ಯುರೋಪಿನ ಆತ್ಮಪ್ರತ್ಯಯದ ಜ್ವಲಂತ ನಾಯಕ. ಈ ಓರಿಯಂಟಲಿಸ್ಟರ ಬರವಣಿಗೆಗಳನ್ನು ಓದಿ ಮುಗಿಸಿದ ಮೇಲೆ ಭಾರತವನ್ನು ಇವರು ಎಷ್ಟು ಗಾಢವಾಗಿ ಪ್ರೀತಿಸುತ್ತಾರೆ ಎಂಬ ಭ್ರಮೆ ಆವರಿಸಿಬಿಡುತ್ತದೆ. ಆದರೆ ಅವರು ಪ್ರೀತಿಸುವುದು ಯಾವುದೋ ಕಾಲದಲ್ಲಿ ಜೀವಂತವಾಗಿತ್ತು ಎಂದು ನಂಬುವ 'ಸುವರ್ಣ ಯುಗದ' ಭಾರತವನ್ನು. ಅವರ ಆದರ್ಶದ ಚೌಕಟ್ಟಿನಲ್ಲಿ ಮೈದಾಳಿದ ಭಾರತವನ್ನು ಮಾತ್ರ ಅವರು ಮೋಹಿಸುತ್ತಾರೆ. ವರ್ತಮಾನದ ಭಾರತ ಅವರ ಪ್ರಕಾರ ನಿಷ್ಪ್ರಯೋಜಕ.

ರೋನಾಲ್ಡ್ ಇಂಡೆನ್, ಓರಿಯಂಟಲಿಸ್ಟರು ಭಾರತವನ್ನು ಕುರಿತು ಕೈಗೊಂಡ ಅಧ್ಯಯನಗಳನ್ನು, ಯುರೋಪಿನ ರಾಜಕೀಯಾರ್ಥಿಕ ನೆಲೆಯಲ್ಲಿಟ್ಟು ವಿಶ್ಲೇಷಿಸುತ್ತಾರೆ. ಇಂಡಾಲಜಿಯ ಅಧ್ಯಯನಗಳು ತಮ್ಮ ತಾತ್ವಿಕ ನೆಲೆಗಳೊಳಗೆ ಯಾವ ಬಗೆಯ ಸತ್ಯಗಳನ್ನು ಮುಚ್ಚಿಕೊಂಡಿದ್ದವೆಂದು ಇಂಡೆನ್ ತಮ್ಮ ಕೃತಿ 'ಇಮ್ಯಾಜನಿಂಗ್ ಇಂಡಿಯಾ'ದಲ್ಲಿ ವಿವರಿಸಿದ್ದಾರೆ. ಪಶ್ಚಿಮದ ವಿದ್ವಾಂಸರು ವಸಾಹತುಗಳಲ್ಲಿ ಬೆಳೆಸಿದ ಜ್ಞಾನಶಿಸ್ತುಗಳಿಗೆ ಶೈಕ್ಷಣಿಕ ಉದ್ದೇಶಗಳಿದ್ದವು ಎಂಬ ಸತ್ಯವನ್ನು ಇಂಡೆನ್ ತಮ್ಮ ಅಧ್ಯಯನಗಳಿಂದ ಅಲ್ಲಗಳೆಯುತ್ತಾರೆ. ಭಾರತದಲ್ಲಿ ಕಂಪನಿ ಆಡಳಿತಕ್ಕೆ ಭದ್ರ ಬುನಾದಿ ಹಾಕಿಕೊಟ್ಟಿದ್ದು ಇಂಡಾಲಜಿಯ

ಅಧ್ಯಯನಕಾರರು ಎಂದು ಇಂಡೆನ್ ಹೇಳುತ್ತಾರೆ. ಅಲ್ಲದೆ ಈ ಪಶ್ಚಿಮದ ವಿದ್ವಾಂಸರು ವಸಾಹತುವಾಗಿದ್ದ ಭಾರತದೊಡನೆ ಬೆಸೆದುಕೊಂಡಿದ್ದ ಸಂಬಂಧವನ್ನು ಇಂಡೆನ್ ಹೀಗೆ ವಿವರಿಸುತ್ತಾರೆ. 'ಜ್ಞಾನಿ (ಜ್ಞಾನವನ್ನು ಪಡೆದಾತ) ಮತ್ತು ಜ್ಞಾನಕ್ಕೆ ಗುರಿಯಾಗಿರುವ ವಸ್ತುಗಳ ನಡುವೆ ಶ್ರೇಣೀಕೃತ ಸಂಬಂಧ ಸ್ಥಾಪಿತವಾಗಿದೆ. ಜ್ಞಾನಿಗಳು ಎನಿಸಿಕೊಳ್ಳುವ ವಿಜ್ಞಾನಿಗಳು, ತಜ್ಞರು ಮತ್ತು ನಾಯಕರು ಪ್ರಮುಖವೆಂದೂ ಜ್ಞಾನಕ್ಕೆ ವಸ್ತುವಾಗಿರುವ ಜನ ಮತ್ತು ಅವರ ತಿಳುವಳಿಕೆಗಳು ಅಪ್ರಮುಖವೆಂದೂ ತಿಳಿಯಲಾಗಿದೆ [೮೦]. ಓರಿಯಂಟಲಿಸ್ಟರ ಅಧ್ಯಯನಗಳು ಪ್ರಮುಖವಾಗಿ ಜಗತ್ತಿನ ಪ್ರಾಚೀನ ಭಾಷೆಗಳ ಪಠ್ಯಗಳನ್ನು ಪ್ರಮುಖವಾಗಿ ಪರಿಗಣಿಸಿದವು. ಈ ಅಧ್ಯಯನ ಶಿಸ್ತು ನಂತರ ಸಾಮಾಜಶಾಸ್ತ್ರ ಮತ್ತು ಮಾನವಶಾಸ್ತ್ರ ಮುಂತಾದ ಸಮಾಜ ವಿಜ್ಞಾನಗಳ ಅಧ್ಯಯನ ಶಿಸ್ತುಗಳನ್ನು ಅತ್ಯಂತ ಅಮೂರ್ತ ನೆಲೆಯಲ್ಲಿಯೇ ಪ್ರಭಾವಿಸಿತು. ಇದೇ ಕಾರಣಕ್ಕೆ ಇಂಡೆನ್ ಯಾವುದೇ ಅಧ್ಯಯನ ಶಿಸ್ತು ಚಾರಿತ್ರಿಕವಾಗಿ ರೂಪುಗೊಳ್ಳುವ ಸಂದರ್ಭದಲ್ಲಿ, ಕೆಲವು 'ಯಜಮಾನ' (ಹೆಜಿಮಾನಿಕ್) ಪಠ್ಯಗಳನ್ನೂ, ನಿರೂಪಣೆಗಳನ್ನು ಹೊಂದಿರುತ್ತದೆ[೮೧]. ಎನ್ನುತ್ತಾನೆ.

ವಸಾಹತು ಕಾಲಘಟ್ಟದಲ್ಲಿ ಭಾರತವನ್ನು ಬೌದ್ಧಿಕವಾಗಿ ವಿವರಿಸಲು ಹೊರಟ ಸಮಾಜವಿಜ್ಞಾನಗಳ ಬಹುತೇಕ ಜ್ಞಾನಶಿಸ್ತುಗಳು ಈ ಬಗೆಯ ಯಜಮಾನಿಕೆಯ ಗೋಪುರಗಳಲ್ಲಿ ಕುಳಿತು ತಮ್ಮ ಕೆಳಗಿದ್ದ ಜನರನ್ನು ವಿವರಿಸಲು ಯತ್ನಿಸಿದವು. ಗ್ರೀಕ್ ಮತ್ತು ರೋಮನ್ ಸಾಮ್ರಾಜ್ಯದಂತೆ 'ಒಂದು ಕಾಲದಲ್ಲಿ' ಭಾರತವು ರಾಜಕೀಯವಾಗಿ ಅತ್ಯುನ್ನತ ಸ್ಥಿತಿಯಲ್ಲಿತ್ತು. ಭಾರತದ ದೇವತೆಗಳಿಂದ ಹರಸಲ್ಪಟ್ಟ ನಾಡು, ಅದು ಅತ್ಯಂತ ಸಂಪದ್ಭರಿತ ನೆಲ ಎಂದೆಲ್ಲ ವರ್ಣಿಸುವಾಗ ಓರಿಯಂಟಲಿಸ್ಟರು ರೋಮಾಂಚಿತರಾಗುತ್ತಾರೆ. ವರ್ತಮಾನದ ಭಾರತದ ವಿಷಯ ಬಂದಾಗ ಆ ರೋಮಾಂಚನ ವಿಷಾದದಲ್ಲಿ ಅಂತ್ಯಗೊಳ್ಳುತ್ತದೆ. ಭಾರತ ಸಂಪದ್ಭರಿತವಾದದ್ದು, ಆದರೆ ಅಲ್ಲಿನ ಜನ ನಿರ್ಲಜ್ಜರು, ಸುಳ್ಳರು, ಪರರ ಆಳ್ವಿಕೆಗೆ ಒಳಪಡಲೇಬೇಕಾದ ಅರಾಜಕತೆಯ ಆರಾಧಕರು ಎಂಬ ತೀರ್ಮಾನಕ್ಕೆ ಓರಿಯಂಟಲಿಸ್ಟರು ಬರುತ್ತಾರೆ. 'ಈ ಬಗೆಯ ಮನಃಸ್ಥಿತಿ ಸಮಾಜ ವಿಜ್ಞಾನದ ಬಹುಪಾಲು ಎಲ್ಲ ಜ್ಞಾನಶಿಸ್ತುಗಳನ್ನು ಪ್ರಭಾವಿಸಿದೆ. ಮತ್ತು ಅವುಗಳಲ್ಲಿ ಅಂತರ್ಗತವಾಗಿದೆ. ಇಂದು ಅಭಿವೃದ್ಧಿ ಅರ್ಥಶಾಸ್ತ್ರದ ಸಂವಾದವು ಬಹುಶಃ ಇದೇ ದೃಷ್ಟಿಕೋನವನ್ನು ಬಿಂಬಿಸುತ್ತದೆ. ಈ ದೃಷ್ಟಿಯು ಸಾಂಪ್ರದಾಯಿಕ, ಮೂಢ ನಂಬಿಕೆಗಳಿಂದಾವೃತವಾದ ಭಾರತವು ಸದಾ ಆಧುನಿಕ, ವೈಚಾರಿಕ ಪಶ್ಚಿಮದಿಂದ ಪಾಠ ಕಲಿಯುವ ಶಿಷ್ಯನಾಗಿಯೇ ಇರಬೇಕೆಂದು ಪ್ರತಿಪಾದಿಸುತ್ತದೆ [೮೨].

ಭಾರತದಲ್ಲಿ ಏಶಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್ ಎಂಬ ಸಂಸ್ಥೆಯು ಓರಿಯಂಟಲ್ ಅಧ್ಯಯನಗಳನ್ನು ಪ್ರಾರಂಭಿಸಿತು. ಈ ಹಂತದಲ್ಲಾಗಲೇ ಭಾರತದ ಉತ್ತರ ಭಾಗವು ಈಸ್ಟ್ ಇಂಡಿಯಾ ಕಂಪನಿಯ ಹಿಡಿತಕ್ಕೆ ಬಂದಿತ್ತು. ೧೭೫೭ ರಿಂದ ೧೭೮೫ ರ ಅವಧಿಯಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಆಡಳಿತಗಾರರು ಬಂಗಾಳದ ಆಡಳಿತವನ್ನು ಪುನರ್ರೂಪಿಸುವ ಕೆಲಸ ಮಾಡಿದರು. ತಮ್ಮ ಆಳ್ವಿಕೆಗೆ ಒಳಪಟ್ಟ ಪ್ರದೇಶದ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ ಸ್ಥಳೀಯ ಸಮಾಜದ ನಿಯಮಗಳನ್ನು ಅರ್ಥಮಾಡಿಕೊಳ್ಳಲು ಯತ್ನಿಸಿದರು. ವಾರನ್ ಹೇಸ್ಟಿಂಗ್ಸ್‌ನ ಕಾಲಘಟ್ಟದಲ್ಲಿ ಈ ಬಗೆಯ ಪ್ರಯತ್ನಗಳು ವ್ಯವಸ್ಥಿತವಾಗಿ ನಡೆಯತೊಡಗಿದವು. ಭಾರತದ ಬೇರೆ ಬೇರೆ ಭಾಗಗಳಲ್ಲಿನ ಸಮಾಜಗಳನ್ನು ಅರ್ಥ

ಮಾಡಿಕೊಳ್ಳಲು ಮತ್ತು ಆ ಮೂಲಕ ಘರ್ಷಣೆ ರಹಿತ ಆಡಳಿತ ನಡೆಸುವುದನ್ನು ರೂಢಿಮಾಡಿಕೊಳ್ಳತೊಡಗಿದರು. ಆಗ ಇವರ ನೆರವಿಗೆ ಬಂದವರೇ ಓರಿಯಂಟಲಿಸ್ಟ್ ಅಧ್ಯಯನಕಾರರು. ಈ ಓರಿಯಂಟಲಿಸ್ಟರು ಆಗಲೇ ಸಂಸ್ಕೃತವನ್ನು ಕಲಿತು, ಭಾರತದ ಸಾಮಾಜಿಕ ವ್ಯವಸ್ಥೆಯನ್ನು ಪ್ರತಿನಿಧಿಸುವ ಇಲ್ಲಿನ ಪ್ರಾಚೀನ ಕೃತಿಗಳನ್ನು ಇಂಗ್ಲೀಷಿಗೆ ಅನುವಾದಿಸುವ ಕೆಲಸವನ್ನು ಪ್ರಾರಂಭಿಸಿದ್ದರು. ಮ್ಯಾಕ್ಸ್ ಮುಲ್ಲರ್ ಸಂಸ್ಕೃತದ ಹಿತೋಪದೇಶವನ್ನು ಇಂಗ್ಲೀಷಿಗೆ ಅನುವಾದಿಸಿದ್ದನು. ಅಲ್ಲದೆ 'ಪೂರ್ವದ ಪವಿತ್ರ ಗ್ರಂಥಗಳು' ಎಂಬ ಮಾಲಿಕೆಯಲ್ಲಿ ಭಾರತದ ಪ್ರಾಚೀನ ಪಠ್ಯಗಳನ್ನು ಇಂಗ್ಲೀಷಿಗೆ ತರ್ಜುಮೆ ಮಾಡುವ ಬೃಹತ್ ಕೆಲಸವನ್ನು ಮ್ಯಾಕ್ಸ್‌ಮುಲ್ಲರ್ ನಿರ್ವಹಿಸಿದ್ದನು. ಈ ಬಗೆಯ ಪ್ರಯತ್ನದ ಹಿಂದೆ ಭಾರತದ ಸಮಾಜವನ್ನು ಅರ್ಥಮಾಡಿಕೊಳ್ಳುವ ಮತ್ತು ಆ ಮೂಲಕ ನಿಯಂತ್ರಿಸುವ ರಾಜಕೀಯ ಉದ್ದೇಶಗಳಿದ್ದವು. ಓರಿಯಂಟಲಿಸ್ಟರು ಈ ಕೆಲಸದ ಜೊತೆಗೆ ಭಾರತದಲ್ಲಿ ನ್ಯಾಯ ವಿತರಣೆಯ ಕೆಲಸವನ್ನೂ ಮಾಡುತ್ತಿದ್ದರು. ಬರ್ನಾರ್ಡ್ ಕೋನ್ ಅದನ್ನು ಹೀಗೆ ವಿವರಿಸುತ್ತಾನೆ. 'ಓರಿಯಂಟಲಿಸ್ಟರು, ಮುಖ್ಯವಾಗಿ ಈಸ್ಟ್ ಇಂಡಿಯಾ ಕಂಪನಿಯ ನ್ಯಾಯ ವಿತರಣೆಯ ಕೆಲಸದಲ್ಲಿ ಭಾಗಿಯಾಗಿದ್ದರು. ಅವರಲ್ಲಿ ಹಾಲ್ಹೆಡ್, ಜೋನ್ಸ್ ಮತ್ತು ಕೋಲ್‌ಬ್ರೂಕ್ ಪ್ರಮುಖರು. ನ್ಯಾಯಾಧೀಶರಾಗಿ ಇವರು ಭಾರತದ ಜನರ ಜೊತೆ ಮುಖಾಮುಖಿ ಮಾಡಬೇಕಿತ್ತು. ನ್ಯಾಯಾಲಯದಲ್ಲಿ ಭಾರತದ ಪ್ರಜೆಗಳ ಹಲವು ವ್ಯಾಜ್ಯಗಳನ್ನು ಬಗೆಹರಿಸಬೇಕಿತ್ತು. ಈ ಕಾರಣದಿಂದ ಭಾರತದ ಸ್ಥಳೀಯ ಪಂಡಿತರಿಂದ ಸಂಸ್ಕೃತ ಭಾಷೆಯಲ್ಲಿನ ನ್ಯಾಯ ನಿರ್ಣಯಗಳನ್ನು ಅಧ್ಯಯನ ಮಾಡುವುದು ಅನಿವಾರ್ಯವಾಗಿತ್ತು. ಮತ್ತು ಇವರು ಹಿಂದೂ ಕಾನೂನುಗಳ ಶ್ರೇಷ್ಠತೆಯಿಂದ ಪ್ರಭಾವಿತರಾಗಿದ್ದರು. ಇದರಿಂದ ತಮ್ಮ ನ್ಯಾಯಾಲಯಗಳಲ್ಲಿ ವ್ಯಾಜ್ಯಗಳನ್ನು ಬಗೆಹರಿಸುವಾಗ ಹಿಂದೂ ಕಾನೂನುಗಳನ್ನು ಬಳಸುತ್ತಿದ್ದರು. ಭಾರತದ ಹಿಂದೂಗಳು ಹೊರದೇಶದ ಬ್ರಿಟನ್ ಕಾನೂನುಗಳಿಗಿಂತ, ಸ್ಥಳೀಯ ಹಿಂದೂ ಕಾನೂನುಗಳ ಅಡಿಯಲ್ಲಿ ಆಳ್ವಿಕೆಗೆ ಒಳಪಡುವುದು ಸೂಕ್ತ ಎಂದು ಓರಿಯಂಟಲಿಸ್ಟರು ನಂಬಿದ್ದರು'[೮೮]. ಇದಕ್ಕೆ ಪೂರಕವಾಗಿ ಓರಿಯಂಟಲಿಸ್ಟರಿಗೆ ಪ್ರಾಚೀನ ಕೃತಿಗಳ ಓದು ಸಹಾಯ ಮಾಡಿತ್ತು 'ಓರಿಯಂಟಲಿಸ್ಟರು ಭಾರತವನ್ನು ಮತ್ತು ಹಿಂದೂ ಸಮಾಜವನ್ನು ಅರ್ಥ ಮಾಡಿಕೊಳ್ಳಲು ಪ್ರಾಚೀನ ಪಠ್ಯಗಳು ಸಹಾಯ ಮಾಡುತ್ತವೆ ಎಂದು ನಂಬಿದ್ದರು'[೮೯]. ಭಾರತದ ಪ್ರಾಚೀನ ಪಠ್ಯಗಳೂ ಸಹ ಇಲ್ಲಿನ ಮೇಲ್ವರ್ಗಗಳ ಸೃಷ್ಟಿಯೇ ಆಗಿದ್ದವು. ಈ ಪಠ್ಯಗಳಲ್ಲಿ ಸಮಾಜವನ್ನು ನಿಯಂತ್ರಿಸುವ ಯಥಾಸ್ಥಿತಿವಾದಿ ಚಿಂತನೆಗಳು ಓರಿಯಂಟಲಿಸ್ಟರಿಗೆ ಧಾರಾಳವಾಗಿ ಲಭ್ಯವಾದವು. ಈ ಕಾರಣಕ್ಕಾಗಿ ಭಾರತದಲ್ಲಿನ ಪ್ರಾಚೀನ ಪಠ್ಯಗಳ ಸಂಪಾದನೆ, ಭಾಷೆಗಳ ಅಧ್ಯಯನ, ಶಬ್ದಕೋಶಗಳ ರಚನೆ ಮುಂತಾದ ಶೈಕ್ಷಣಿಕ ಚಟುವಟಿಕೆಗಳು ಓರಿಯಂಟಲಿಸ್ಟರ ಮುಂದಾಳತ್ವದಲ್ಲಿ ನಡೆದವು.

ಈ ಎಲ್ಲ ಶೈಕ್ಷಣಿಕ ಚಟುವಟಿಕೆಗಳ ಹಿಂದೆ ಇದ್ದ ಉದ್ದೇಶಗಳು ಮಾತ್ರ ಸ್ಪಷ್ಟವಾಗಿದ್ದವು. ಭಾರತವನ್ನು ಅದರ ಪ್ರಾಚೀನ ಪಠ್ಯಗಳ ಮೂಲಕ ಅರ್ಥಮಾಡಿಕೊಳ್ಳಬಹುದು. ಪ್ರಾಚೀನ ಪಠ್ಯಗಳಲ್ಲಿ ಅದರಲ್ಲೂ ಧರ್ಮಶಾಸ್ತ್ರಗ್ರಂಥಗಳಲ್ಲಿ ಈ ದೇಶದ ಸಾಮಾಜಿಕ ಕಾನೂನುಗಳಿವೆ. ಅವುಗಳನ್ನು ಅರ್ಥ ಮಾಡಿಕೊಂಡು ನ್ಯಾಯ ತೀರ್ಮಾನಗಳ ಸಂದರ್ಭದಲ್ಲಿ ಪ್ರಧಾನವಾಗಿ ಈ ಸ್ಥಳೀಯ ಕಾನೂನುಗಳನ್ನು ಬಳಸಬೇಕು.

ಏಕೆಂದರೆ ಭಾರತದ ಜನಕ್ಕೆ ತಮ್ಮನ್ನು ತಾವು ಆಳಿಕೊಳ್ಳುವ ಸಾಮರ್ಥ್ಯವಿಲ್ಲ. ಅವರು ಮಾನವ ವಿಕಾಸದ ಚರಿತ್ರೆಯ ಯಾವುದೋ ಹಂತದಲ್ಲಿ ನಿಂತುಬಿಟ್ಟಿದ್ದಾರೆ. ನಮ್ಮಿಂದ ಭೌತಿಕವಾಗಿ ಸೋತಿರುವ ಇವರನ್ನು ಶತಾಯುಗತಾಯ 'ನಾಗರೀಕರ'ನ್ನಾಗಿಸಬೇಕು ಎಂಬುದು ಓರಿಯಂಟಲಿಸ್ಟರ ಗ್ರಹಿಕೆಯಾಗಿತ್ತು. ತಮ್ಮಿಂದ 'ಸೋತವರು' ಅವೈಚಾರಿಕ ಜಗತ್ತಿನಲ್ಲಿದ್ದಾರೆ ಎಂದೇ ಓರಿಯಂಟಲಿಸ್ಟರು ನಂಬಿದ್ದರು. ಸೋತವರನ್ನು ನಿರಂತರವಾಗಿ ಆಳಬೇಕೆಂದರೆ ಅವರ ಆತ್ಮಪ್ರತ್ಯಯವನ್ನು ನಾಶಮಾಡಬೇಕು. ಆತ್ಮಪ್ರತ್ಯಯದ ನಾಶವೆಂದರೆ, ಆಳಿಸಿಕೊಳ್ಳುವವನು ಸದಾ ಗುಲಾಮನಾಗಿ ತನ್ನ ಬದುಕಿನುದ್ದಕೂ ತಲೆ ತಗ್ಗಿಸಿ ಬದುಕುವ ಹೀನಾಯಸ್ಥಿತಿ. ಭಾರತವನ್ನು, ನಾಗರಿಕವಲ್ಲದ, ಮೂಢನಂಬಿಕೆಗಳ ಮೊತ್ತವಾದ, ಸಜ್ಜನಿಕೆ ಇಲ್ಲದ ಭೂಪ್ರದೇಶವೆಂದು ಓರಿಯಂಟಲಿಸ್ಟರು ವಿಕೃತವಾಗಿ ಚಿತ್ರಿಸಿದ್ದು ಈ ಕಾರಣದಿಂದ. ನಾಗರಿಕರಾದ 'ನಾವು' ಅನಾಗರಿಕರಾದ 'ಅವರನ್ನು' ರಾಜಕೀಯವಾಗಿ ಆಳುವುದು ಚಾರಿತ್ರಿಕವಾಗಿ ಅನಿವಾರ್ಯ ಎಂಬ ಭ್ರಮೆಯನ್ನು ಈ ಓರಿಯಂಟಲಿಸ್ಟರು ಸೃಷ್ಟಿಸಿದರು. ಬ್ರಿಟೀಷರ ಸೈನಿಕ ದಿಗ್ವಿಜಯಗಳಿಗೆಲ್ಲ ಈ ಬೌದ್ಧಿಕ ಜಗತ್ತಿನ ಓರಿಯಂಟಲಿಸ್ಟರು ಸಮರ್ಥನೆಗಳನ್ನು ಒದಗಿಸಿದ್ದಾರೆ. ಬ್ರಿಟೀಷರ ಆಕ್ರಮಣಗಳನ್ನು, ಕೊಲೆಗಳನ್ನು, ಹಿಂಸಾತ್ಮಕ ಆಡಳಿತದ ನಡೆಗಳನ್ನು ಬೌದ್ಧಿಕ ಲೋಕದ ಈ ಜನ ನ್ಯಾಯಬದ್ಧಗೊಳಿಸಿದ್ದಾರೆ. ಅದಕ್ಕೇ ಮ್ಯಾಕ್ಸ್ ಮುಲ್ಲರ್ ಬ್ರಿಟೀಷ್ ಆಡಳಿತವನ್ನು ಭಾರತದಲ್ಲಿ ನೆಲೆಗೊಳ್ಳಲು ಬೌದ್ಧಿಕವಾಗಿ ಸಹಾಯ ಮಾಡಿದ ವಿಲಿಯಂ ಜೋನ್ಸ್‌ನನ್ನು ತನ್ನ ಪುಸ್ತಕವೊಂದರಲ್ಲಿ ನೆನಪಿಸಿಕೊಳ್ಳುತ್ತಾನೆ. ಭಾರತವನ್ನು ರಾಜಕೀಯವಾಗಿ ಆಕ್ರಮಿಸಿಕೊಳ್ಳಲು ಬೌದ್ಧಿಕವಾಗಿ ನೆರವಾದ ವಿಲಿಯಂ ಜೋನ್ಸ್ ಓರಿಯಂಟಲಿಸ್ಟ್‌ರ ಅಗ್ರಗಣ್ಯ ದಂಡನಾಯಕ ''. ಎಂದು ಜೋನ್ಸ್‌ನನ್ನು ಈತ ಕೊಂಡಾಡುತ್ತಾನೆ.

ಯುರೋಪ್ ಮತ್ತು ಯುರೋಪೇತರ 'ಪೂರ್ವ'ದ ಜಗತ್ತುಗಳನ್ನು ಭಿನ್ನವಾಗಿಸುವ ಮತ್ತು ಪೂರ್ವವನ್ನು ವೈಭವಗಳು ಮುಗಿದ ಅಧಃಪತನಗೊಂಡ ಭೂಪ್ರದೇಶವಾಗಿಸುವ ಹುನ್ನಾರಗಳು ಓರಿಯಂಟಲ್ ಅಧ್ಯಯನಗಳಲ್ಲಿ ಮೇಲು ನೋಟಕ್ಕೆ ಕಾಣಿಸುತ್ತವೆ. ತಾವು ಆಳುವ ಪ್ರದೇಶವನ್ನು ಮತ್ತು ಅಲ್ಲಿ ವಾಸಿಸುವ ಜನಾಂಗಗಳ ಆತ್ಮಪ್ರತ್ಯಯವನ್ನು ನಾಶ ಮಾಡುವುದು ಈ ಅಧ್ಯಯನಗಳ ರಾಜಕೀಯ ಉದ್ದೇಶ. ಆಳ್ವಿಕೆಗೆ ಒಳಪಡುವವನ ಚರಿತ್ರೆಯನ್ನು ಸುವರ್ಣಯುಗವಾಗಿಸಿ, ವರ್ತಮಾನದಲ್ಲಿ ಸುವರ್ಣಯುಗದ ಅವಶೇಷಗಳನ್ನು ತಡವುತ್ತಾ ಒಂದು ನಾಡಿನ ಇತಿಹಾಸವನ್ನು ಕನವರಿಸುವುದು ಓರಿಯಂಟಲ್ ಅಧ್ಯಯನಗಳ ಸ್ವಾಭಾವಿಕ ಗುಣ. ಈ ದೃಷ್ಟಿಕೋನವು ಯುರೋಪಿನ ಸಾಮ್ರಾಜ್ಯಶಾಹಿ ಆಕ್ರಮಣಗಳ ಭಾಗವಾಗಿಯೇ ಈ ಅಧ್ಯಯನಗಳಲ್ಲಿ ಬೆರೆತು ಹೋಗಿದೆ. ಆಳಿಸಿಕೊಳ್ಳುವವನ ವರ್ತಮಾನದ ಅಸ್ತಿತ್ವವನ್ನೇ ನಗಣ್ಯವಾಗಿಸಿಬಿಡುವುದು ಮತ್ತು ಅಧ್ಯಯನಕ್ಕೆ ಒಳಪಡುವವನನ್ನು ಓರಿಯಂಟಲ್ ಅಧ್ಯಯನಗಳು ಕೇವಲ 'ವಸ್ತು'ವನ್ನಾಗಿಸುತ್ತವೆ. ಆಳ್ವಿಕೆಯು ಸುಗಮವಾಗಬೇಕಾದರೆ ಆಳಿಸಿಕೊಳ್ಳುವವನು 'ಅನಾಗರಿಕನು' 'ದುಷ್ಟನು' ಮತ್ತು 'ಕ್ರಿಮಿನಲ್' ಗುಣದವನು ಆಗಬೇಕು. ಆಗ ಯುರೋಪು 'ಅನಾಗರಿಕನನ್ನು' ನಾಗರಿಕವಾಗಿಸುವ ಸಂತನ ಪಾತ್ರ ವಹಿಸುತ್ತದೆ. 'ದುಷ್ಟನನ್ನು, ಕ್ರಿಮಿನಲ್'ನನ್ನು ಜನಪರವಾಗಿಸುವ ಪ್ರಜಾಪ್ರಭುತ್ವದ ಪೋಷಕನಂತೆ ನಟಿಸುತ್ತದೆ. ಈವತ್ತು ಜಗತ್ತನ್ನು ತನ್ನ ಕಪಿಮುಷ್ಟಿಯಲ್ಲಿಟ್ಟುಕೊಳ್ಳುವ

ಸಾಮ್ರಾಜ್ಯಶಾಹಿ ರಾಜಕಾರಣಕ್ಕೆ ಈ ಬಗೆಯ ಸೋಗಲಾಡಿತನದ ಕ್ರೌರ್ಯ ಮೈಗೂಡಿಕೊಂಡೇ ಇದೆ. ಈ ಸಾಮ್ರಾಜ್ಯಶಾಹಿಗಳು ಜಗತ್ತಿನ ಶಾಂತಿಯ ಬಗ್ಗೆ ಮಾತಾಡುತ್ತಾರೆ. ಸ್ವತಃ ಅವರೇ ಮುಗ್ಧರಾಷ್ಟ್ರಗಳ ಮೇಲೆ ದಂಡೆತ್ತಿ ಹೋಗುತ್ತಾರೆ. ಮಿತಿಮೀರಿದ ಅಣ್ವಸ್ತ್ರಗಳನ್ನು ತಾವು ತಯಾರಿಸಿಟ್ಟುಕೊಂಡು ಜಗತ್ತಿನ ಯಾವ ರಾಷ್ಟ್ರಗಳೂ ಅಣ್ವಸ್ತ್ರಗಳನ್ನು ತಯಾರಿಸಬಾರದಂದೆ ಅಪ್ಪಣೆ ಕೊಡಿಸುತ್ತಾರೆ. ಪ್ರಜಾಪ್ರಭುತ್ವದ ಮಹಾಪೋಷಕರಂತೆ ತೋರಿಸಿಕೊಳ್ಳುವ ಅವರು ಮಿಲಿಟರಿ ಸರ್ವಾಧಿಕಾರಿಗಳನ್ನು ಬಹಿರಂಗವಾಗಿಯೇ ಬೆಂಬಲಿಸುತ್ತಾರೆ. ತಾವು ಯಾರನ್ನು ವಿರೋಧಿಸುವರೋ ಅವರನ್ನು ಖಳನಾಯಕರನ್ನಾಗಿಸುವ ಹುನ್ನಾರಗಳನ್ನು ಯಾವತ್ತೂ ಸಾಮ್ರಾಜ್ಯಶಾಹಿಗಳು ಸಾಕಿಕೊಂಡು ಬಂದಿದ್ದಾರೆ. ತಮ್ಮ ವಿರೋಧಿಗಳನ್ನು ನಾಶ ಮಾಡುವ ಪ್ರಕ್ರಿಯೆಯಲ್ಲಿ ಅವರನ್ನು ಜಗತ್ತಿಗೆ ಮಾರಕವಾಗಬಲ್ಲ ಕೇಡಿಗಳನ್ನಾಗಿ ಸಾಮ್ರಾಜ್ಯಶಾಹಿಗಳು ಬಿಂಬಿಸುತ್ತಾರೆ. ಆ ಮೂಲಕ ತಮ್ಮ ಕೊಲೆಗಡುಕ ಆಕ್ರಮಣಕಾರಿ ರಾಜಕಾರಣಕ್ಕೆ ಸಮರ್ಥನೆಗಳನ್ನು ಒದಗಿಸಿಕೊಳ್ಳುತ್ತಾರೆ.

ಓರಿಯಂಟಲ್ ಅಧ್ಯಯನಗಳು ಈ ಬಗೆಯ ರಾಜಕಾರಣದ ಮುಖವಾಣಿಗಳಾಗಿದ್ದವು. ಈ ಅಧ್ಯಯನಗಳು ಸೃಷ್ಟಿಸಿದ 'ಪೂರ್ವವು' ರಾಜಕೀಯವಾಗಿ ಯುರೋಪಿಗೆ ಅಧೀನವಾಗಿತ್ತು. ರಾಜಕೀಯವಾಗಿ ಅಧೀನನಾದವನ ಚರಿತ್ರೆಯನ್ನು ತಮಗೆ ಅನುಕೂಲವಾಗುವಂತೆ ರೂಪಿಸಿಕೊಳ್ಳುವ ಧಾಡಸಿತನ ಎಲ್ಲ ಸಾಮ್ರಾಜ್ಯಶಾಹಿಗಳಿಗೆ ಅಂತರ್ಗತವಾಗಿರುತ್ತದೆ. 'ಇಲ್ಲದ' ಚರಿತ್ರೆಯನ್ನು ಅವರು ಯಾವುದೋ ಮಾಯೆಯಿಂದ ಸೃಷ್ಟಿ ಮಾಡಿಬಿಡಬಲ್ಲರು. ಪೂರ್ವದ ಕುರಿತ ಓರಿಯಂಟಲಿಸ್ಟರ ಕಲ್ಪನೆಗಳು ಶೂನ್ಯದಲ್ಲಿ ಸೃಷ್ಟಿಯಾಗಿಬಿಡುತ್ತವೆ ಎಂದು ಎಡ್ವರ್ಡ್ ಸೈದ್ ಅಭಿಪ್ರಾಯ ಪಡುತ್ತಾನೆ.[೯]. ಇಂದಿಗೂ ಓರಿಯಂಟಲಿಸ್ಟರು ಸೃಷ್ಟಿಸಿದ 'ಮಧ್ಯ ಪ್ರಾಚ್ಯ' ಮತ್ತು 'ಪೂರ್ವಗಳು' ಸಾಮ್ರಾಜ್ಯಶಾಹಿಗಳು ಸೃಷ್ಟಿಸಿದ ಬಿಕ್ಕಟ್ಟುಗಳಲ್ಲಿಯೇ ತಲ್ಲಣಗೊಳ್ಳುತ್ತಾ ಬದುಕುತ್ತಿವೆ. ಅವರು ಹುಟ್ಟು ಹಾಕಿದ ಭ್ರಮೆಗಳು ಅಯುಧಗಳಾಗಿ ಈ ದೇಶಗಳನ್ನು ಕತ್ತರಿಸುತ್ತಲೇ ಇವೆ. ಓರಿಯಂಟಲ್ ಅಧ್ಯಯನಗಳ ಹಿಂದಿನ ರಾಜಕೀಯ ಹುನ್ನಾರಗಳನ್ನು ಬಿಂಬಿಸುವ ಕಾರಣಕ್ಕಾಗಿಯೇ ಸೈದ್‌ರ ಕೃತಿ 'ಓರಿಯಂಟಲಿಸಂ' ೨೦ನೇ ಶತಮಾನದ ದಾರ್ಶನಿಕ ಕೃತಿಗಳಲ್ಲೊಂದು.

ಓರಿಯಂಟಲಿಸ್ಟರ ಅಧ್ಯಯನಗಳು ಪೂರ್ವವನ್ನು ಅಧ್ಯಯನ ಮಾಡುವ ಯುರೋಪಿನ ಹಲವು ಶೈಕ್ಷಣಿಕ ಶಿಸ್ತುಗಳಿಗೆ ಒಂದು ಸೈದ್ಧಾಂತಿಕ ಪರಿಪ್ರೇಕ್ಷ್ಯವನ್ನು ರೂಪಿಸಿದವು. ಅದರಲ್ಲೂ ಯುರೋಪು ಭಾರತದಂತಹ ದೇಶಗಳಲ್ಲಿ ಕೈಗೊಂಡ ಸಾಮಾಜಿಕ ಅಧ್ಯಯನಗಳ ಮೇಲೆ ಇನ್ನಿಲ್ಲದ ಪ್ರಭಾವ ಬೀರಿತು. ಹಾಗೆ ಸಮಾಜ ವಿಜ್ಞಾನಗಳ ಶೈಕ್ಷಣಿಕ ಶಿಸ್ತುಗಳಿಗೆ ತಾವು ಹುಟ್ಟಿದ ಯುರೋಪಿನ ನೆಲೆಯಲ್ಲಿಯೇ ಶೈಕ್ಷಣಿಕ ವೈಧಾನಿಕತೆ ರೂಪುಗೊಂಡಿರಲಿಲ್ಲ. ಈ ಅಧ್ಯಯನಗಳು ಶುದ್ಧ ವಿಜ್ಞಾನದಿಂದ ಸಂಶೋಧನಾ ವಿಧಾನವನ್ನು ಕಡ ತೆಗೆದುಕೊಂಡರೆ, ಓರಿಯಂಟಲಿಸ್ಟ್ ಅಧ್ಯಯನಗಳ ರಾಜಕೀಯ ಸೈದ್ಧಾಂತಿಕತೆಯನ್ನು ಚಾಚು ತಪ್ಪದೆ ಅಳವಡಿಸಿಕೊಂಡವು. ವಿಜ್ಞಾನ ಮತ್ತು ಓರಿಯಂಟಲ್ ಅಧ್ಯಯನಗಳು ಆಗಲೇ ಯುರೋಪಿನ ತುಂಬ ಶೈಕ್ಷಣಿಕ ಮಾದರಿಗಳನ್ನು ರೂಪಿಸಿಬಿಟ್ಟಿದ್ದವು. ಈ ಕಾರಣದಿಂದ ಸಮಾಜ ವಿಜ್ಞಾನಗಳು ಈ ಎರಡು ಕ್ಷೇತ್ರಗಳಿಂದ ಹೆಚ್ಚು ಪ್ರಭಾವಿತವಾದವು. ಓರಿಯಂಟಲಿಸ್ಟರ ಜೊತೆಗೆ ಭಾರತದ ಸಮಾಜವನ್ನು ಸಮೀಪಿಸಿದವರು ಮಿಶನರಿಗಳು. ಈ ಮಿಶನರಿಗಳು ಯಾವ ಬಗೆಯಲ್ಲಿ ಭಾರತದ ಸಮಾಜವನ್ನು

ಗ್ರಹಿಸಿದರು ಎಂಬುದನ್ನು ಸ್ಥೂಲವಾಗಿ ವಿವರಿಸಲು ಯತ್ನಿಸುತ್ತೇನೆ.

ಮಿಶನರಿಗಳು: ಕಾಗೆ ಗೂಡೊಳಗಿನ ಪರಪುಟ್ಟಗಳು

ಆಧುನಿಕಪೂರ್ವ ಭಾರತದಲ್ಲಿ ಅದರಲ್ಲೂ ಕಂಪನಿ ಆಡಳಿತದ ಸಂದರ್ಭದಲ್ಲಿ ಭಾರತದ ಸಾಮಾಜಿಕ ಚರಿತ್ರೆಯನ್ನು ರೂಪಿಸುವಲ್ಲಿ ಯುರೋಪಿನ ಪಾದ್ರಿಗಳು ಮಹತ್ತರ ಪಾತ್ರ ವಹಿಸಿದ್ದಾರೆ. ಯುರೋಪಿನ ವರ್ತಕರು ಭಾರತಕ್ಕೆ ನಡೆಸಿಕೊಂಡು ಬಂದ ಹಡಗುಗಳಲ್ಲಿ ಮಿಶನರಿಗಳೂ ಸಹ ಭಾರತಕ್ಕೆ ಬಂದರು. ಅವರ ಉದ್ದೇಶ ಸ್ಪಷ್ಟವಾಗಿತ್ತು. ಭಾರತದಂತಹ ದೇಶದಲ್ಲಿ ಕ್ರಿಶ್ಚಿಯನ್ ಧರ್ಮವನ್ನು ಪ್ರಚಾರ ಮಾಡುವುದು ಮತ್ತು ದೀನ ದಲಿತರನ್ನು ಮತಾಂತರಗೊಳಿಸುವುದು ಇವರ ಉದ್ದೇಶಗಳಾಗಿದ್ದವು. ಭಾರತಕ್ಕೆ ಮೊದಲು ಬಂದ ಪೋರ್ಚ್‌ಗೀಸರ ಕಾಲದಲ್ಲಿ ಅಷ್ಟಾಗಿ ಮಿಶನರಿ ಚಟುವಟಿಕೆಗಳಿರಲಿಲ್ಲ. ಆದರೆ ಡಚ್ಚರು, ಫ್ರೆಂಚರು ಮತ್ತು ಬ್ರಿಟೀಷರು ತಮ್ಮ ಹಡಗುಗಳಲ್ಲಿ ಮಿಶನರಿಗಳನ್ನು ಹೊತ್ತು ತಂದರು. ಯಾವತ್ತು ಪ್ಲಾಸಿ ಕನದನದಲ್ಲಿ ಬ್ರಿಟೀಷರಿಗೆ ಗೆಲುವಾಯಿತೋ ಆಗ ಕಂಪನಿ ಆಡಳಿತವು ಹೆಚ್ಚಾಗಿ ಸೈನಿಕ ಆಕ್ರಮಣಗಳ ಮೂಲಕ ಭಾರತವನ್ನು ಆಕ್ರಮಿಸಲು ಯತ್ನಿಸಿತು. ಆದರೆ ಈ ತೋಳ್ಬಲದ ಆಕ್ರಮಣಗಳು ಅಷ್ಟು ಸುಲಭವಾಗಿ ಭಾರತದಲ್ಲಿ ಯಶ ಕಾಣಲಿಲ್ಲ. ಭಾರತದ ಅತೃಪ್ತ ಪಾಳೇಗಾರರು, ಕಾಡುಗಳಲ್ಲಿ ತಮ್ಮಷ್ಟಕ್ಕೆ ತಾವು ಬುದುಕುತ್ತಿದ್ದ ಆದಿವಾಸಿಗಳು, ರೈತರು ಮತ್ತು ಸಮಾಜದ ಅಂಚಿನ ಜನಗಳು ಕಂಪನಿ ಸೈನ್ಯವನ್ನು ಅಲ್ಲಲ್ಲಿ ಯಶಸ್ವಿಯಾಗಿ ಹಿಮ್ಮೆಟ್ಟಿಸಿದ್ದರು. ರಾಜಮಹಲ್ ಬೆಟ್ಟ ಪ್ರದೇಶ, ಈಶಾನ್ಯ ಭಾರತ ಮತ್ತು ದಂಡಕಾರಣ್ಯದಲ್ಲಿ ಕಂಪನಿ ಆಡಳಿತದ ಸೈನ್ಯವು ಭಾರೀ ಮುಖಭಂಗ ಅನುಭವಿಸಿತ್ತು. ಎಲ್ಲೆಲ್ಲಿ ತಮ್ಮ ಸೈನ್ಯ ಸೋತು ಕೈ ಚಲ್ಲಿತೋ ಆ ಪ್ರದೇಶಗಳಿಗೆ ಕಂಪನಿ ಆಡಳಿತ ಮಿಶನರಿಗಳನ್ನು ಕಳುಹಿಸಿ ಕೊಟ್ಟಿತು. ಜೊತೆಗೆ ಕಂಪನಿ ಆಡಳಿತದ ಅಧಿಕಾರಿಗಳು ಅಧ್ಯಯನಕಾರರ ವೇಷಗಳಲ್ಲಿ ಆಯಾ ಪ್ರದೇಶಗಳಲ್ಲಿ ಕಾರ್ಯಾಚರಣೆ ಪ್ರಾರಂಭಿಸಿದರು. ಏಕೆಂದರೆ ಗೆರಿಲ್ಲಾ ಮಾದರಿಯ ಯುದ್ಧಗಳಿಂದ ದೇಶೀಯ ನಿವಾಸಿಗಳು ಕಂಪನಿ ಸೈನ್ಯವನ್ನು ಬೆನ್ನಟ್ಟಿ ಸೋಲಿಸಿದ್ದರು. ಇಂತಹ ಪ್ರದೇಶಗಳಲ್ಲಿ ಬಲ ಪ್ರಯೋಗ ಅಷ್ಟು ಸುಲಭವಲ್ಲವೆಂದು ಅರಿತ ಕಂಪನಿ ಆಡಳಿತ ಮಿಶನರಿಗಳನ್ನು ಅಲ್ಲಿಗೆ ಕಳುಹಿಸಿತು. ಮಿಶನರಿಗಳು ಧರ್ಮ ಪ್ರಚಾರವನ್ನು ಸ್ವತಂತ್ರವಾಗಿ ಮಾಡುವಂತಿರಲಿಲ್ಲ. ಅವರು ಕಂಪನಿ ಆಡಳಿತಕ್ಕೆ ಅಧೀನರು. ಕಂಪನಿ ಆಡಳಿತದ ನೌಕರರಿಗೆ ಅನ್ವಯವಾಗುವ ಎಲ್ಲ ನಿಯಮಗಳು ಮತ್ತು ಕ್ರಮಗಳಿಗೆ ಒಳಪಟ್ಟು ಮಿಶನರಿಗಳು ಕಾರ್ಯನಿರ್ವಹಿಸಬೇಕಿತ್ತು. ಒಂದು ಅರ್ಥದಲ್ಲಿ ಇಂಗ್ಲೆಂಡಿನ ರಾಣಿಯ ಆಧಿಪತ್ಯದ ಅಡಿಯಲ್ಲಿ ಮಿಶನರಿಗಳು ಬ್ರಿಟೀಷ್ ಸರಕಾರದ ನೌಕರರು ಮಾತ್ರ[೨]. ಆಕ್ಸ್‌ಫರ್ಡ್‌ನಲ್ಲಿ ಮಿಶನರಿಗಳಿಗೆ ವಿಶೇಷ ತರಬೇತಿಯನ್ನೂ ನೀಡಲಾಗುತ್ತಿತ್ತು. ಹಾಗೆ ತರಬೇತಿ ಪಡೆದು ಬಂದವರಲ್ಲಿ ವೆರಿಯರ್ ಎಲ್ವಿನ್ನರೂ ಒಬ್ಬರು. ಹೀಗೆ ಆಕ್ಸ್‌ಫರ್ಡ್‌ನಲ್ಲಿ ಮಿಶನರಿಗಳಿಗೆ ತರಬೇತಿ ಕೊಡುತ್ತಿದ್ದವರು ಓರಿಯಂಟಲಿಸ್ಟರು. ಏಕೆಂದರೆ ಇಡೀ ಯುರೋಪಿನಲ್ಲಿ ಭಾರತದ ತಜ್ಞರೆಂದರೆ ಇಂಡಾಲಜಿಯನ್ನು ರೂಪಿಸಿದ ಓರಿಯಂಟಲಿಸ್ಟರು. ಅವರು ಈ ಮಿಶನರಿಗಳಿಗೆ ಭಾರತದಲ್ಲಿ ನಡೆಸಬಹುದಾದ ಕಾರ್ಯಾಚರಣೆಗಳ ಕುರಿತು ತರಬೇತಿ ನೀಡುತ್ತಿದ್ದರು. ಈ ಕಾರಣದಿಂದ ರಾಜಕೀಯ ಸೈದ್ಧಾಂತಿಕತೆಯ ದೃಷ್ಟಿಯಿಂದ ಓರಿಯಂಟಲಿಸ್ಟರಿಗೂ ಮತ್ತು ಮಿಶನರಿಗಳಿಗೂ

ಅಂತಹ ವ್ಯತ್ಯಾಸಗಳೇನಿಲ್ಲ. ಆದರೆ ಮಿಶನರಿಗಳು ತಮ್ಮ ಕೆಲವು ನಿಲುವುಗಳಿಂದ ಓರಿಯಂಟಲಿಸ್ಟರಿಗಿಂತ ಭಿನ್ನವಾಗಿ ನಿಲ್ಲುತ್ತಾರೆ. ಬರ್ನಾರ್ಡ್ ಕೋನ್ ಅದನ್ನು ಹೀಗೆ ವಿವರಿಸುತ್ತಾರೆ.

‘ಭಾರತದಲ್ಲಿ ತಮ್ಮ ಭಿನ್ನ ಜವಾಬ್ದಾರಿಗಳನ್ನು ನಿಭಾಯಿಸುತ್ತಿದ್ದ ಮಿಶನರಿಗಳಿಗೂ ಮತ್ತು ಓರಿಯಂಟಲಿಸ್ಟರಿಗೂ ಅನೇಕ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳಿದ್ದವು. ಈ ಭಿನ್ನಾಭಿಪ್ರಾಯಗಳು ಅವರು ಭಾರತದಲ್ಲಿ ನಿರ್ವಹಿಸುತ್ತಿದ್ದ ವಿಭಿನ್ನ ಕಾರ್ಯ ಚಟುವಟಿಕೆಗಳಿಂದ ಹುಟ್ಟಿಕೊಂಡಿದ್ದವು. ಓರಿಯಂಟಲಿಸ್ಟರು ಬ್ರಿಟನ್ನಿನ ಮೇಲ್ವರ್ಗಗಳಿಂದ ಬಂದವರಾಗಿದ್ದರು ಮತ್ತು ಭಾರತದ ಪ್ರಾಚೀನ ಗ್ರಂಥಗಳನ್ನು ತೀವ್ರವಾಗಿ ಅಧ್ಯಯನ ನಡೆಸಿದ್ದರು. ವಿಲಿಯಂ ಜೋನ್ಸ್‌ನಂತಹ ವಿದ್ವಾಂಸರು ಪರ್ಶಿಯಾ ಮತ್ತು ಸಂಸ್ಕೃತವನ್ನು ಯುರೋಪಿನ ಭಾಷೆಗಳಂತೆಯೇ ಶ್ರದ್ಧೆಯಿಂದ ಕಲಿತಿದ್ದರು. ಇದರಿಂದಾಗಿ ಓರಿಯಂಟಲಿಸ್ಟರು ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಅತ್ಯಂತ ಸಂಪ್ರದಾಯವಾದಿಗಳಾಗಿದ್ದರು ಮತ್ತು ಯಥಾಸ್ಥಿತಿವಾದಿಗಳಾಗಿದ್ದರು’. ಇದಕ್ಕೆ ಕಾರಣವೂ ಸ್ಪಷ್ಟವಾಗಿದೆ. ಓರಿಯಂಟಲಿಸ್ಟರು ಇಂಗ್ಲೆಂಡಿನ ನೋಬಲ್ ವರ್ಗಕ್ಕೆ ಸೇರಿದವರು. ಜೊತೆಗೆ ಬ್ರಿಟೀಷ್ ಆಡಳಿತದ ರಾಜಕೀಯ ಸೈದ್ಧಾಂತಿಕತೆಯನ್ನು ಪ್ರಚುರಗೊಳಿಸುವ ವಾಹಕಗಳಾಗಿ ಕೆಲಸ ಮಾಡುತ್ತಿದ್ದರು. ಎಲ್ಲದಕ್ಕಿಂತ ಹೆಚ್ಚಾಗಿ ಯಾವ ಬ್ರಿಟೀಷ್ ಸರಕಾರ ವಸಾಹತವಾದವನ್ನು ಸಮರ್ಥಿಸುತ್ತಿತ್ತೋ, ಆ ಸಮರ್ಥನೆಯು ಓರಿಯಂಟಲಿಸ್ಟರ ವರ್ಗ ಹಿತಾಸಕ್ತಿಗೆ ಪೂರಕವೂ ಆಗಿತ್ತು. ಈ ಕಾರಣದಿಂದ ಓರಿಯಂಟಲಿಸ್ಟರು ವಸಾಹತುವಾದದ ಉಗ್ರ ಸಮರ್ಥಕರೂ ಆಗಿದ್ದರು. ಈ ಉಗ್ರ ಸಮರ್ಥನೆಯು ಅವರು ಶೈಕ್ಷಣಿಕ ಚಟುವಟಿಕೆಗಳ ತಾತ್ವಿಕತೆಯನ್ನು ಯಾವತ್ತೂ ನಿಯಂತ್ರಿಸುತ್ತ ಬಂದಿತು. ಯುರೋಪೇತರ ‘ಅನ್ಯ’ವು ಅವೈಚಾರಿಕವಾದದ್ದು ಎಂಬ ಅಹಂನಿಷ್ಠತೆಯು ಈ ದೃಷ್ಟಿಕೋನವನ್ನು ಹೆಚ್ಚು ಹೆಚ್ಚು ನಿಖರಗೊಳಿಸಿತು. ಆಕ್ಸ್‌ಫರ್ಡ್‌ನಲ್ಲಿ ಇವರಿಂದ ರೂಪಿಸಲ್ಪಟ್ಟ ‘ಮಿಶನರಿಗಳು ಭಾರತದ ಸಮಾಜವು ಯಾವತ್ತೂ ಅತ್ಯಂತ ಅಸಂಗತ ಮತ್ತು ವಿನಾಶಕಾರಿ ಅಂಶಗಳಿಂದಲೇ ಬೆಳೆದು ಬಂದಿದೆ ಎಂಬ ಪಾಠ ಹೇಳಿಸಿಕೊಂಡು ಭಾರತಕ್ಕೆ ಬಂದರು’. ಆದರೆ ಭಾರತದ ಸಮಾಜವನ್ನು ಅರ್ಥಮಾಡಿಕೊಳ್ಳುವ ನಿಟ್ಟಿನಲ್ಲಿ ಓರಿಯಂಟಲಿಸ್ಟರಿಗೂ ಮತ್ತು ಮಿಶನರಿಗಳಿಗೂ ಅನೇಕ ಭಿನ್ನಾಭಿಪ್ರಾಯಗಳು ತಲೆದೋರಿದವು. ಭಾರತವನ್ನು ಗ್ರಾಂಥಿಕ ಸತ್ಯಗಳಿಂದ ಗ್ರಹಿಸುತ್ತಿದ್ದ ಓರಿಯಂಟಲಿಸ್ಟರು ರಮ್ಯ ಆದರ್ಶದ ಇಂಡಿಯಾವನ್ನು ಕನಸುತ್ತಿದ್ದರು. ಆದರೆ ಭಾರತದ ದೀನ ದಲಿತರ ನಡುವೆ ಕಾರ್ಯ ನಿರ್ವಹಿಸುತ್ತಿದ್ದ ಮಿಶನರಿಗಳು ಇದಕ್ಕೆ ವಿರುದ್ಧವಾದ ನಿಲುವುಗಳನ್ನು ಹೊಂದಲಾರಂಭಿಸಿದರು. ‘ಭಾರತವನ್ನು ಕುರಿತು ಓರಿಯಂಟಲಿಸ್ಟರಿಗೂ ಮತ್ತು ಮಿಶನರಿಗಳಿಗೂ ಅನೇಕ ಭಿನಾಭಿಪ್ರಾಯಗಳು ತಲೆದೋರಿದವು. ಓರಿಯಂಟಲಿಸ್ಟರು ಭಾರತದ ಸಮಾಜವನ್ನು ಥಿಯರಿಟಿಕಲ್ ಆಗಿ ನೋಡುತ್ತಿದ್ದರು. ಅವರು ಅಭ್ಯಸಿಸಿದ ಪ್ರಾಚೀನ ಗ್ರಂಥಗಳ ಮೂಲಕ, ಮತ್ತು ಧಾರ್ಮಿಕ ಸಂಗತಿಗಳ ಮೂಲಕ ಭಾರತದ ನಾಗರೀಕತೆಯನ್ನು, ಸಮಾಜವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದರು. ಜೊತೆಗೆ ಭಾರತದ ಸಮಾಜ ಸುವರ್ಣಯುಗದಿಂದ ಬಹುದೂರ ನಡೆದು ಬಂದು ದಿವಾಳಿ ಹಂತವನ್ನು ತಲುಪಿದೆ ಎಂಬ ತೀರ್ಮಾನಕ್ಕೆ ಓರಿಯಂಟಲಿಸ್ಟರು ಬಂದರು’. ಓರಿಟಂಯಲಿಸ್ಟರ ಚರ್ಚೆಯಲ್ಲಿ ಭಾರತವು ಯಾಕಾಗಿ ದಿವಾಳಿಯಾಗಿದೆ? ಎಂಬ ಪ್ರಶ್ನೆಯು ಶತಮಾನಗಳಿಂದ ಗೈರು ಹಾಜರಾಗುತ್ತಲೇ

ಬಂದಿತು. ಅವರು ಮೈದುಂಬಿ ಭಾರತದ ಪ್ರಾಚೀನತೆಯನ್ನು ಹೊಗಳುತ್ತಿದ್ದರು. ಗ್ರೀಕ್ ಮತ್ತು ರೋಮ್ ನಾಗರಿಕತೆಗಳಿಂದ ಕಲಿಯಲಾರದ ಸಂಗತಿಗಳನ್ನು ನಾವು ಭಾರತದಿಂದ ಕಲಿಯಬೇಕಿದೆ ಎಂದು ಘಂಟಾಘೋಷವಾಗಿ ಹೇಳುತ್ತಿದ್ದರು. ಆದರೆ ಇದ್ದಕ್ಕಿದ್ದಂತೆ ದಿವಾಳಿಯಾದ ಭಾರತದ ಸ್ಥಿತಿಗೆ ಕಾರಣರಾರು ಎಂದರೆ 'ಇಲ್ಲಿ ಬದುಕುವ, ದಟ್ಟ ದಾರಿದ್ರ್ಯ ಅನುಭವಿಸುತ್ತಿರುವ, ಸೋಮಾರಿಗಳು ಮತ್ತು ಸುಳ್ಳುಗಾರರೂ ಆದ ಜನ,' ಇವರ ಮೂಢನಂಬಿಕೆಗಳಿಂದ, ಅಂಧಶ್ರದ್ಧೆಗಳಿಂದ, ವಿಕೃತ ಆಚರಣೆಗಳಿಂದ ಮತ್ತು ತಾವು ನಂಬಿರುವ ಧಾರ್ಮಿಕ ಮೌಲ್ಯಗಳ ಕಾರಣಕ್ಕಾಗಿ ಈ ಜನ ಬದುಕುತ್ತಿರುವ ಭಾರತವು ಸುವರ್ಣ ಯುಗದಿಂದ ದಿಢೀರೆಂದು ಜಾರಿ ಅರಾಜಕತೆಯ ಪಾತಾಳಕ್ಕೆ ಕುಸಿದು ಹೋಗಿದೆ ಎಂಬುದು ಓರಿಯಂಟಲಿಸ್ಟರ ಗ್ರಹಿಕೆ. ಭಾರತವು ಈ ಸ್ಥಿತಿಗೆ ಬರುವುದಕ್ಕೆ ಇಲ್ಲಿ ಬದುಕುವ ಸಾಮಾನ್ಯ ಜನರೇ ನೇರ ಹೊಣೆ. ಇವರು ಅನಾಗರಿಕರು, ಕಿಂಚಿತ್ ರಾಜಕೀಯ ಪ್ರಜ್ಞೆ ಇಲ್ಲದ ಮೂಢರು. ಈ ಕಾರಣದಿಂದ ಭಾರತವು ಅನಾಗರಿಕರ ದೇಶವಾಗಿ ರೂಪಾಂತರಗೊಂಡಿದೆ ಎಂದು ಇವರು ನಂಬಿದ್ದರು.

ಆದರೆ ಮಿಶನರಿಗಳು ಭಾರತಕ್ಕೆ ಬಂದು ಜನರ ನಡುವೆ ಬದುಕಲು ಪ್ರಾರಂಭಿಸಿದ್ದರು. ಒಂದು ಅರ್ಥದಲ್ಲಿ ಇಲ್ಲಿನ ಜನರ ಕಷ್ಟಸುಖಗಳ ಭಾಗವೇ ಆಗಿಬಿಟ್ಟಿದ್ದರು. ಅವರು ಭಾರತವನ್ನು ಬೇರೆಯದೇ ಅರ್ಥದಲ್ಲಿ ಗ್ರಹಿಸಿದರು. 'ಭಾರತದ ಶ್ರೇಣೀಕರಣವನ್ನು ಬ್ರಾಹ್ಮಣರು ನಿಯಂತ್ರಿಸುತ್ತಿದ್ದಾರೆ. ಹಿಂದೂ ಸಮಾಜವು ಜಾತಿ ಪದ್ಧತಿಯಿಂದ ಅಸ್ತಿತ್ವದಲ್ಲಿದೆ. ಹಿಂದೂ ಧರ್ಮವನ್ನು ನಾಶ ಮಾಡಿದರೆ ಮಾತ್ರ ಈ ವಿಷಮ ಸಮಾಜವನ್ನು ಸರಿಪಡಿಸಲು ಸಾಧ್ಯ' ಎಂದು ಮಿಶನರಿಗಳು ನಂಬಿದ್ದರು. ಈ ಬಗೆಯ ಆಶಯವು ಭಾರತದಲ್ಲಿ ಮಿಶನರಿ ಚಟುವಟಿಕೆಗಳನ್ನು ವಿಸ್ತರಿಸುವ ಭಾಗವಾಗಿಯೆ ವ್ಯಕ್ತವಾಗತೊಡಗಿತ್ತು. 'ಇದರಿಂದಾಗಿ ಮಿಶನರಿಗಳು ಭಾರತದ ಸಮಾಜವನ್ನು ಅನುಭವಾತ್ಮಕ ಹಿನ್ನೆಲೆಯಿಂದ ಅಧ್ಯಯನ ಮಾಡಲು ತೊಡಗಿದರು. ಇದರಿಂದಾಗಿ ಭಾರತದ ದೇಶದ ಸ್ಥಳೀಯ ಭಾಷೆಗಳಿಗೆ ಬೈಬಲ್ಲನ್ನು ಭಾಷಾಂತರಿಸಲು ಮತ್ತು ಕ್ರಿಶ್ಚಿಯನ್ ಧರ್ಮದ ತತ್ವಗಳನ್ನು ಸ್ಥಳೀಯ ಭಾಷೆಗಳಲ್ಲಿ ರೂಪಾಂತರಿಸಲು ಸಾಧ್ಯವಾಯಿತು. ಜೊತೆಗೆ ಭಾರತದ ವಿವಿಧ ಭಾಷೆಗಳ ಅಧ್ಯಯನಗಳು ಪ್ರಾರಂಭವಾದವು. ೧೮೦೧ ರಲ್ಲಿ ವಿಲಿಯಂ ಕ್ಯಾರಿಯ 'ಡೈಲಾಗ್ ಇಂಟೆಂಡೆಡ್ ಟು ಫೆಸಿಲಿಟೇಟ್‌ದ ಅಕ್ವೇರಿಂಗ್ ಆಫ್ ದಿ ಬೆಂಗಾಳಿ ಲಾಂಗ್‌ವೇಜ್' ಎಂಬ ಪುಸ್ತಕವು ಪ್ರಕಟವಾಯಿತು. ಇದರಿಂದ ಸ್ಥಳೀಯ ಪಾರಂಪರಿಕ ಕಸಬುದಾರರ ಸಂಭಾಷಣೆಗಳನ್ನು ಅರ್ಥ ಮಾಡಿಕೊಳ್ಳಲು ಸುಲಭವಾಯಿತು'[೧೬]. ಮಿಶನರಿಗಳ ಚಟುವಟಿಕೆಗಳು ಕಂಪನಿ ಆಡಳಿತಕ್ಕೆ ಪೂರಕವಾಗಿದ್ದರೂ ಸಹ, ಭಾರತದ ಜನರ ಮಧ್ಯೆ ಬದುಕುತ್ತಿದ್ದ ಪಾದ್ರಿಗಳು ಉದಾರವಾದಿಗಳಾಗಿದ್ದರು. ಅಬ್ಬೆದುಬಾಯಿಸ್ 'ಆಳ್ವಿಕೆಗೊಳಪಡುವ ಜನಸಮುದಾಯದ ಅಂತಃಸ್ಸತ್ವ, ನಡವಳಿಕೆ ಮತ್ತು ಅವರ ಸಾಂಸ್ಥಿಕ ಗುಣಧರ್ಮಗಳನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಯಾವ ರಾಜಕೀಯ ತಂತ್ರದ ಮೂಲಕ ಈ ಬಗೆಯ ಜನರನ್ನು ಆಳಬಹುದು ಎಂದು ನಿರ್ಧರಿಸಿ ಆ ಬಗೆಯ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತರುವುದರ ಮೂಲಕ ಸುಲಭ ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸಬಹುದು ಎನ್ನುತ್ತಾನೆ.[೧೭]

೧೭೯೨ ರಲ್ಲಿ ಅಬ್ಬೆದುಬಾಯಿಸ್ ಭಾರತಕ್ಕೆ ಪಾದ್ರಿಯಾಗಿ ಬಂದವನು. ತನ್ನ ೨೭ನೇ ವಯಸ್ಸಿನಲ್ಲಿ

ಭಾರತಕ್ಕೆ ಬಂದ ಈತ, ಸುದೀರ್ಘ ಮೂವತ್ತೊಂದು ವರ್ಷಗಳ ಕಾಲ ಇಂಡಿಯಾದಲ್ಲಿ, ಅದರಲ್ಲೂ ಕರ್ನಾಟಕದ ಹಲವು ಪ್ರದೇಶಗಳಲ್ಲಿ ತಿರುಗಾಡಿದ್ದಾನೆ. ಅಬ್ಬೆದುಬಾಯಿಸ್ ಹಲವು ವಿದೇಶಿ ವಿದ್ವಾಂಸರಂತೆಯೇ ಭಾರತವನ್ನು ಗ್ರಹಿಸಿದವನು. ಪೂರ್ವದ ದೇಶಗಳು ಹಲವು ಪುರಾತನ ವಿಸ್ಮಯಗಳನ್ನ ಗರ್ಭೀಕರಿಸಿಕೊಂಡಿವೆ ಎಂಬ ಓರಿಯಂಟಲ್ ನಂಬಿಕೆಗಳಿಂದ ಈತ ಮುಕ್ತವಾಗೇನೂ ಇಲ್ಲ. ಕ್ರಿಶ್ಚಿಯನ್ ಮತಧರ್ಮದ ಪ್ರಚಾರಕ್ಕೆ ಈತನನ್ನ ನೇಮಿಸಿದರೂ ಸಹ, ಈತ ಇಂಡಿಯಾದ ಜನ ಜೀವನವನ್ನು ಅರ್ಥ ಮಾಡಿಕೊಳ್ಳಲು ಯತ್ನಿಸಿದ. ಬ್ರಾಹ್ಮಣರು ಮಾತ್ರ ಇಂಡಿಯಾದಲ್ಲಿ ಶ್ರೇಷ್ಠ ಜೀವನ ವಿಧಾನವನ್ನು ರೂಢಿಸಿಕೊಂಡಿದ್ದಾರೆ ಎನ್ನುತ್ತಲೇ ಸಿಡುಬು ರೋಗದಿಂದ ಸಾಯುತ್ತಿದ್ದ ಜನರಿಗೆ ಜಾತಿ ಭೇದಗಳನ್ನೆಣಿಸದೆ ಲಸಿಕೆ ಹಾಕಲು ಈತ ತವಕಿಸಿದ್ದಾನೆ. ಮಿಷನರಿಯಾಗಿ ಭಾರತಕ್ಕೆ ಬಂದರೂ ಇಲ್ಲಿನ ಶ್ರಮಿಕರ ಮಧ್ಯೆ ಬೆರೆತು ಅವರ ಸುಧಾರಣೆಗಾಗಿ ಚಿಂತಿಸಿದ ಈತ ಕರ್ನಾಟಕದ ವೆರಿಯರ್ ಎಲ್ವಿನ್‌ನಂತೆ ಕಾಣುತ್ತಾನೆ. ಕರ್ನಾಟಕದ ದಕ್ಷಿಣ ಜಿಲ್ಲೆಗಳಲ್ಲಿ ಅದರಲ್ಲೂ ಹಳೆಮೈಸೂರು ಭಾಗದ ಶ್ರೀರಂಗಪಟ್ಟಣ, ಹಾಸನ ಜಿಲ್ಲೆಗಳು ಈತನ ಕರ್ಮಭೂಮಿ. ಪಂಚತಂತ್ರವನ್ನು ಫ್ರೆಂಚ್ ಭಾಷೆಗೆ ಈತ ಅನುವಾದಿಸಿದ್ದಾನೆ. 'Hindu manners, customs and ceremonies' ಈತನ ಪ್ರಸಿದ್ಧ ಗ್ರಂಥ. ಆಧುನಿಕಪೂರ್ವ ಕರ್ನಾಟಕದ ಸಮಾಜವನ್ನು ಅರ್ಥಮಾಡಿಕೊಳ್ಳಲು ಈ ಕೃತಿ ಸಹಾಯ ಮಾಡುತ್ತದೆ. ಅಲ್ಲದೆ ಅಂದಿನ ಕರ್ನಾಟಕದ ಸಮಾಜದ ಚರಿತ್ರೆಯನ್ನು ಪ್ರಾಮಾಣಿಕ ಮಾಹಿತಿಗಳ ಮೂಲಕ ಈ ಪುಸ್ತಕ ಕಟ್ಟಿಕೊಡುತ್ತದೆ. ಸ್ವತಹ ಹಲವು ಆದಿವಾಸಿ ಮತ್ತು ಕೆಳಜಾತಿ ಸಮುದಾಯಗಳ ಮಧ್ಯೆ ಬದುಕಿ, ಅವರ ವೈವಿಧ್ಯಮಯ ತಿಳುವಳಿಕೆಯನ್ನ ಮತ್ತು ಅನುಭವದ ಪ್ರಪಂಚವನ್ನ ಅಬ್ಬೆದುಬಾಯಿಸ್ ಈ ಕೃತಿಯಲ್ಲಿ ವಿವರಿಸಲೆತ್ನಿಸಿದ್ದಾನೆ.

ಅಬ್ಬೆದುಬಾಯಿಸ್ ಮತ್ತು ಎಲ್ವಿನ್ ತರಹದ ಪಾದ್ರಿಗಳು ಈ ಕಾರಣಗಳಿಂದ ವೈರುಧ್ಯಮಯ ದಾರಿಯಲ್ಲಿಯೇ ನಡೆದುಕೊಂಡು ಬಂದಿದ್ದಾರೆ. ಇದಕ್ಕೆ ಕಾರಣಗಳೂ ಇವೆ. ಯುರೋಪಿನಿಂದ ಭಾರತಕ್ಕೆ ಬಂದ ಬಹುಪಾಲು ಪಾದ್ರಿಗಳಿಗೆ ಭಾರತದ ಸಮಾಜದ ಆಂತರಿಕ ಶ್ರೇಣೀಕರಣವು ಹಿಂಸೆಯ ಕೂಪದಂತೆ ಕಂಡಿತು. ಹೀಗೆ ಕಾಣಲು ಯುರೋಪಿನ ಪಾದ್ರಿಗಳ ವರ್ಗೀಯ ಸ್ಥಾನಮಾನಗಳೂ ಪ್ರಚೋದಿಸಿದ್ದವು. ಓರಿಯಂಟಲಿಸ್ಟರಿಗೂ ಮತ್ತು ಮಿಶನರಿಗಳಿಗೂ ಯುರೋಪಿನ ಸಮಾಜದಲ್ಲಿಯೇ ವರ್ಗ ವೈಷಮ್ಯಗಳಿದ್ದವು. 'ಓರಿಯಂಟಲಿಸ್ಟರು ಬ್ರಿಟನ್ನಿನ ಉಚ್ಚ ವರ್ಗಗಳಿಂದ ಬಂದರೆ ಮಿಶನರಿಗಳು, ಅದರಲ್ಲೂ ಹೆಚ್ಚಿನ ಸಂಖ್ಯೆಯ ಮಿಶನರಿಗಳು ಬ್ರಿಟನ್ನಿನ ಕೆಳವರ್ಗಗಳಿಂದ ಬಂದವರಾಗಿದ್ದರು. ಈ ಮಿಶನರಿಗಳು ತಮ್ಮನ್ನು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸಬಲೀಕರಿಸಿಕೊಳ್ಳುವಂತೆಯೇ ಭಾರತದ ಸಮಾಜವನ್ನೂ ಸಬಲೀಕರಿಸಲು ಯತ್ನಿಸಿದರು. ಓರಿಯಂಟಲಿಸ್ಟರಂತೆ ಮಿಶನರಿಗಳು ಭಾರತದ ಸಮಾಜದ ಯಥಾಸ್ಥಿತಿಯನ್ನು ಮುಂದುವರೆಸದೆ ಅದನ್ನು ಬದಲಿಸುವ ಪ್ರಯತ್ನ ಮಾಡಿದರು'[೮] ಎಲ್ವಿನ್ ಬಸ್ತಾರ್ ಪ್ರಾಂತ್ಯದಲ್ಲಿ ಇದೇ ಬಗೆಯ ಸಮಾಜಕಾರ್ಯದಲ್ಲಿ ತೊಡಗಿದರು. ಎಲ್ವಿನ್ ಪಾದ್ರಿಯಾಗಿದ್ದು ಆ ನಂತರ ಆದಿವಾಸಿಗಳ ಮಧ್ಯೆ ಕೆಲಸ ಮಾಡಲು ಹೋದವರು. ಆಗ ಅವರಿಗೂ ಭಾರತದ ಮಿಶನರಿಗಳನ್ನು ನಿಯಂತ್ರಿಸುತ್ತಿದ್ದ ಆರ್ಚ್ ಬಿಷಪ್ಪರಿಗೂ ದೊಡ್ಡ ಯುದ್ಧವೇ ನಡೆದು ಹೋಗುತ್ತದೆ. ಕಂಪನಿ ಆಡಳಿತ ಮತ್ತು ಇಂಗ್ಲೆಂಡಿನ ರಾಣಿಯ

ಆದೇಶಗಳನ್ನು ಚಾಚೂ ತಪ್ಪದೆ ನಿರ್ವಹಿಸುತ್ತಿದ್ದ ಬಿಷಪ್ಪರ ರಾಜಕೀಯ ಹುನ್ನಾರುಗಳನ್ನು ಎಲ್ವಿನ್ ತಮ್ಮ ಆತ್ಮಕಥೆಯಲ್ಲಿ ಮನೋಜ್ಞವಾಗಿ ವಿವರಿಸಿದ್ದಾರೆ. 'ನನಗೂ ಮಿಷನರಿ ಚಳುವಳಿಗೂ ಆದ ಢಿಕ್ಕಿ ಅದು ಮಾಡಿರುವ ಕೆಲಸದ ಬಗ್ಗೆ ಅಲ್ಲ. ಅದು ನನ್ನ ಆಕ್ಸ್‌ಫರ್ಡ್ ದಿನಗಳಿಂದ ಬೆಳೆದು ಬಂದ ಮಾನಸಿಕ ಹಾಗೂ ಬೌದ್ಧಿಕ ಭಾವನೆಗಳ ಕಾರಣದಿಂದ. ಧರ್ಮವೆಂದರೆ ನಮ್ಮನ್ನು ಅಥವಾ ನಮ್ಮ ನೆರೆಹೊರೆಯವರನ್ನು ಪಾಪದಿಂದ ಮುಕ್ತರನ್ನಾಗಿ ಮಾಡುವುದು, ಅಥವಾ ನಮ್ಮ ಧರ್ಮಕ್ಕೆ ಪರಿವರ್ತಿಸುವುದು ಅಲ್ಲ ಎಂದು ನನಗೆ ಆಧ್ಯಾತ್ಮಿಕ ಸಾಹಿತ್ಯಾಭ್ಯಾಸದಿಂದ ತಿಳಿದು ಬಂದಿದೆ. ಆತ್ಮವು ತನ್ನ ಮುಕ್ತಿಯನ್ನು ಅರಸುವುದೇ ಧರ್ಮವೆಂದು ನನ್ನ ಭಾವನೆ. ಮಿಷನ್‌ಗಳ ಬಗ್ಗೆ ಆಧ್ಯಾತ್ಮಿಕವಾದಿಗಳು ಅಷ್ಟೇನು ಆಸಕ್ತಿಯನ್ನು ತೋರದಿರುವುದು ಗಮನಿಸಬೇಕಾದ ವಿಷಯ. ಕಂಡೂ ಕಾಣದಂತೆ ಈ ಭಾವನೆ ನನ್ನ ಮೇಲೆ ಪರಿಣಾಮವನ್ನುಂಟು ಮಾಡುತ್ತಾ ಬಂದಿತು. ಹೀಗಾಗಿ ನಾನು ಆಕ್ಸ್‌ಫರ್ಡ್ ಬಿಟ್ಟಾಗ ಧರ್ಮವೆಂದರೆ ಬೇರೆಯವರನ್ನು ತನ್ನ ಮತಕ್ಕೆ ಸೇರಿಸಿಕೊಳ್ಳುವುದು ಎಂಬ ಅರ್ಥ ನನ್ನ ತಲೆಯಲ್ಲಿ ಉಳಿಯಲೇ ಇಲ್ಲ'[೯೯]. ಎನ್ನುತ್ತಾರೆ ಎಲ್ವಿನ್. ಎಲ್ವಿನ್ ಪಾದ್ರಿಯಾಗಿ ಭಾರತಕ್ಕೆ ಬಂದರೂ ಇಂಗ್ಲೆಂಡಿನ ಸಾಮ್ರಾಜ್ಯಶಾಹಿ ನೀತಿಯನ್ನು ಉದಾರವಾದದ ನೆಲೆಯಲ್ಲಿ ವಿರೋಧಿಸಿದವರು. ಈ ಕಾರಣಕ್ಕಾಗಿ ಭಾರತದಲ್ಲಿ ಮಿಷನರಿಗಳನ್ನು ನಿಯಂತ್ರಿಸುತ್ತಿದ್ದ ಬಿಷಪ್ಪರ ಗುಂಪನ್ನೇ ಎಲ್ವಿನ್ ಎದುರು ಹಾಕಿಕೊಂಡರು. ಅವರು ಗಾಂಧೀಜಿಯ ಸೇವಾ ಮನೋಭಾವದಿಂದ ಪ್ರಭಾವಿತರಾದರೂ ಮುಂದೆ ತಮ್ಮದೇ ಆದ ತಾತ್ವಿಕ ಚೌಕಟ್ಟಿನಲ್ಲಿ ಆದಿವಾಸಿಗಳನ್ನು ಗ್ರಹಿಸಿ ಅವರ ಸೇವೆಗೆ ಅರ್ಪಿಸಿಕೊಂಡವರು. ಅವರೇ ಹೇಳುವಂತೆ 'ಸಾಮಾನ್ಯ ಅರ್ಥದಲ್ಲಿ ನಾನೆಂದೂ ಮಿಷನರಿ ಆಗಿರಲಿಲ್ಲ. ನಾನು ಕ್ರೈಸ್ತ ಸಂಘಕ್ಕೆ ಸೇರಿದ್ದರ ಮುಖ್ಯ ಉದ್ದೇಶ ಪಾಂಡಿತ್ಯ ಮತ್ತು ಆಧ್ಯಾತ್ಮಿಕತೆಗಳ ಸಂಪಾದನೆಗೆ ಹಾಗೂ ಪುನರುದ್ಧಾರಕ್ಕೇ ಹೊರತು ಮತಾಂತರ ಗೊಳಿಸುವುದಕ್ಕಲ್ಲ. ಹೀಗೆ ನಾನು ತಿಳಿದು ಕೊಂಡ ಕಾರಣಕ್ಕಾಗಿಯೇ ನಾನು ಸೇರಿದ ಸ್ವಲ್ಪ ಕಾಲದಲ್ಲಿಯೇ ಅದರಲ್ಲಿದ್ದವರ ಜೊತೆಗೆ ಭಿನ್ನಭಿಪ್ರಾಯಗಳು ತಲೆದೋರಿದವು'[೧೦೦].

ಎಲ್ವಿನ್ ಆನಂತರ ಬಸ್ತಾರ್ ಪ್ರಾಂತ್ಯದ ಆದಿವಾಸಿಗಳ ಮಧ್ಯೆ ತಾವೂ ಬೆರೆತು ಹೋಗುತ್ತಾರೆ. ಆದಿವಾಸಿಗಳ 'ಒಳಗಿನವರಾಗಿ' ಅವರ ಜೊತೆ ಬದುಕಲಾರಂಭಿಸುತ್ತಾರೆ. ಮುಂದೆ ಭಾರತಕ್ಕೆ ಅಧಿಕಾರ ಹಸ್ತಾಂತರವಾಗಿ ನೆಹರು ಪ್ರಧಾನಿಯಾಗಿ ಆದಿವಾಸಿಗಳ ಅಭಿವೃದ್ಧಿ ಕುರಿತ ನೀತಿಯನ್ನು ರೂಪಿಸುವ ಹಂತದಲ್ಲಿ ಎಲ್ವಿನ್ ಪ್ರಧಾನ ಪಾತ್ರ ವಹಿಸುತ್ತಾರೆ. ಒಂದು ಅರ್ಥದಲ್ಲಿ ಭಾರತದಲ್ಲಿ ಈವತ್ತಿಗೂ ಜಾರಿಯಲ್ಲಿರುವುದು ಎಲ್ವಿನ್ ಪ್ರಣೀತ ಆದಿವಾಸಿಗಳ ಅಭಿವೃದ್ಧಿ ಮಾದರಿಯೆ. ಆದರೆ ಒಂದು ವೈರುಧ್ಯವನ್ನು ಇಲ್ಲಿ ನಾವು ಗಮನಿಸಲೇಬೇಕು. ಭಾರತದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಮಿಶನರಿಗಳು ಇಲ್ಲಿನ ಜನರ ಕುರಿತು ಎಷ್ಟೇ ಉದಾರವಾದಿಗಳಾಗಿದ್ದರೂ ಸಹ, ತಾತ್ವಿಕವಾಗಿ ಅವರು ಇಂಗ್ಲೆಂಡಿನ ರಾಜಕಾರಣಕ್ಕೆ ಪೂರಕವಾಗಿದ್ದರು. ಮಿಶನರಿಗಳು ಒಂದು ಅರ್ಥದಲ್ಲಿ ಭಾರತದಲ್ಲಿ ಮಾನವಶಾಸ್ತ್ರೀಯ ಅಧ್ಯಯನಗಳ ಹರಿಕಾರರೂ ಹೌದು. ಜೊತೆಗೆ ಭಾರತದ ವಿವಿಧ ಭಾಷೆಗಳನ್ನು ಶಾಸ್ತ್ರೀಯ ಅಧ್ಯಯನಮಾಡಲು ತೊಡಗಿದರು. ಭಾರತದ ಸ್ಥಳೀಯ ಭಾಷೆಗಳ ಕೋಶ ರಚನೆ ಉಪಭಾಷೆಗಳ ಅಧ್ಯಯನಗಳನ್ನು ಈ

ಮಿಶನರಿಗಳು ಕೈಗೊಂಡರು. 'ದಕ್ಷಿಣ ಭಾರತದಲ್ಲಿ ೫೦ ವರ್ಷಗಳನ್ನು ಕಳೆದ ರಾಬರ್ಟ್ ಕಾಲ್ಡ್‌ವೆಲ್, ಕಂಪರೇಟಿವ್ ಗ್ರಾಮರ್ ಆಫ್ ದಿ ದ್ರವಿಡಿಯನ್ ಆಫ್ ಸೌತ್ ಇಂಡಿಯನ್ ಫ್ಯಾಮಿಲಿ ಆಫ್ ಲಾಂಗವೇಜಸ್ ಕೃತಿಯನ್ನು ಪ್ರಕಟಿಸಿದ. ಇದು ದಕ್ಷಿಣ ಭಾರತದ ದ್ರಾವಿಡ ಭಾಷೆಗಳನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡಿತು. ಇದರಿಂದ ದಕ್ಷಿಣ ಭಾರತದ ರಾಜಕಾರಣದ ಮೇಲೆ ವಿಶೇಷ ಪರಿಣಾಮಗಳೂ ಆದವು'[೨೨]. ಮತಾಂತರ ಒಂದೇ ಮಿಶನರಿಗಳ ಮುಖ್ಯ ಕೆಲಸವಾಗಿಬಿಟ್ಟಿದ್ದರೆ ಪ್ರಾಯಶಃ ಯಾವ ಪಾದ್ರಿಗಳೂ ಹೀಗೆ ಭಾರತದ ಚರಿತ್ರೆಯಲ್ಲಿ ದಾಖಲಾಗುತ್ತಿರಲಿಲ್ಲ. ಹಾಗೆಯೇ ಮತಾಂತರ ಒಂದೇ ಮಿಶನರಿಗಳ ಪ್ರಧಾನ ಉದ್ದೇಶವೂ ಆಗಿರಲಿಲ್ಲ. ಎಲ್ಲಿ ಕಂಪನಿ ಆಡಳಿತದ ಸೈನ್ಯವು ಭಾರತದ ನಿರ್ದಿಷ್ಟ ಪ್ರದೇಶವನ್ನು ವಶಪಡಿಸಿಕೊಳ್ಳಲು ವಿಫಲವಾಗುತ್ತಿತ್ತೋ ಅಲ್ಲೆಲ್ಲ ಈ ಮಿಶನರಿಗಳು ತಮ್ಮ ಶೈಕ್ಷಣಿಕ ಮತ್ತು ಧಾರ್ಮಿಕ ಚಟುವಟಿಕೆಗಳಿಂದ ಕಂಪನಿ ಆಡಳಿತಕ್ಕೆ ನೆರವಾಗುತ್ತಿದ್ದರು. ಹಾಗೆ ಯುರೋಪಿನಿಂದ ಭಾರತಕ್ಕೆ ಬಂದ ಮಿಶನರಿಗಳು ಬುದ್ಧಿಯ ಮಟ್ಟದಲ್ಲಿ ಮತ್ತು ರಾಜಕೀಯವಾಗಿ ಕಂಪನಿ ಆಡಳಿತದ ಪರವಾಗಿದ್ದರೆ, ಅವರ ಹೃದಯ ಈ ಜನರನ್ನು ಭಾವನಾತ್ಮಕವಾಗಿ ನೋಡುತ್ತಿತ್ತು. ಈ ಕಾರಣಕ್ಕಾಗಿ ಅಬ್ಬೆದುಬಾಯಿಸ್ ಮತ್ತು ವೆರಿಯರ್ ಎಲ್ವಿನ್ ಪಾದ್ರಿಗಳಾಗಿ ಭಾರತಕ್ಕೆ ಬಂದರೂ ಸಹ ಈ ದೇಶದ ಸಮಾಜ ಸುಧಾರಕರೂ ಆಗಿ ರೂಪಾಂತರಗೊಂಡರು. ಆದರೆ ಇವರು ರಾಜಕೀಯವಾಗಿ ಉಪಯೋಗವಾಗಿದ್ದು ಮಾತ್ರ ಕಂಪನಿ ಆಡಳಿತಕ್ಕೆ.

ಕಂಪನಿ ಆಡಳಿತದ ಅಧಿಕಾರಿಗಳ ಅಧ್ಯಯನಗಳು

ಹಾಗೆ ನೋಡಿದರೆ ಭಾರತದಲ್ಲಿ ಓರಿಯಂಟಲಿಸ್ಟರ ಜೊತೆಗೆ ಸ್ಥಳೀಯ ಸಮಾಜದ ರೂಪುರೇಷೆಗಳನ್ನು ಅರ್ಥ ಮಾಡಿಕೊಳ್ಳಲು ಯತ್ನಿಸಿದವರಲ್ಲಿ ಮೊದಲಿಗರು ಕಂಪನಿ ಆಡಳಿತದ ಅಧಿಕಾರಿಗಳು. ಒಂದು ಅತಿಗೆ ಹೋಗಿ ಹೇಳುವುದಾದರೆ, ಭಾರತದಲ್ಲಿ ಸಾಮಾಜಿಕ ಅಧ್ಯಯನಗಳು ಪ್ರಾರಂಭವಾದದ್ದೇ ಕಂಪನಿ ಆಡಳಿತದ ಅಧಿಕಾರಿಗಳಿಂದ. ಈ ಅಧಿಕಾರಿಗಳಿಗೆ ಯಾವುದೋ ಬಗೆಯ ಶೈಕ್ಷಣಿಕ-ತರಬೇತಿ ಇರಲಿಲ್ಲ. ಸಾಲದ್ದಕ್ಕೆ ಅಂದು ಸಾಮಾಜಿಕ ಅಧ್ಯಯನಗಳಿಗೆ ಯುರೋಪಿನಲ್ಲಿಯೇ ಒಂದು ಶಾಸ್ತ್ರದ ಚೌಕಟ್ಟು ಇರಲಿಲ್ಲ. ಈವತ್ತು ಸಮಾಜ ವಿಜ್ಞಾನಗಳ ಜ್ಞಾನಶಿಸ್ತುಗಳೆಂದು ಯಾವ ಅಧ್ಯಯನ ಕ್ರಮಗಳನ್ನು ಗುರುತಿಸುತ್ತೇವೋ ಆ ಶಿಸ್ತುಗಳಿಗೆ ಯುರೋಪಿನಲ್ಲಿಯೇ ಒಂದು ಶೈಕ್ಷಣಿಕ ವಿಧಾನವೆಂಬುದು ರೂಪುಗೊಂಡಿರಲಿಲ್ಲ. ಅಂತಹ ಸಂದರ್ಭದಲ್ಲಿ ಭಾರತದಲ್ಲಿ ಕಂಪನಿ ಆಡಳಿತದ ಅಧಿಕಾರಿಗಳು ಭಾರತದ ಸಮಾಜಗಳ ಕುರಿತ ಅಧ್ಯಯನಗಳನ್ನು ಕೈಗೊಂಡರು. ಸ್ಕಾಟ್ಲ್ಯಾಂಡ್‌ನಲ್ಲಿ ವೈದ್ಯನಾಗಿದ್ದು ಅಕಸ್ಮಾತ್ ಭಾರತಕ್ಕೆ ಬಂದ ಫ್ರಾನ್ಸಿಸ್ ಬುಕನಾನ್‌ನನ್ನು ಬಂಗಾಳದ ಹಳ್ಳಿಯೊಂದನ್ನು ಅಧ್ಯಯನ ಮಾಡಲು ನೇಮಿಸಲಾಗಿತ್ತು. ಪೋಲೀಸ್ ಇನ್‌ಸ್ಪೆಕ್ಟರ್ ಆಗಿದ್ದ ಫಾಸೆಟ್ ಎಂಬಾತನನ್ನು ಮಲಬಾರಿನ ರೈತರನ್ನು ಅಭ್ಯಸಿಸಲು ತೊಡಗಿಸಲಾಗಿತ್ತು. ಆರ್ಕಿಟೆಕ್ಟನಾಗಿದ್ದ ಮೆಂಕೆಂಜಿಯನ್ನು ಭೂಮಿಯನ್ನು ಸರ್ವೆ ಮಾಡಲು, ಕೈಫಿಯತ್ತುಗಳನ್ನು ಸಂಗ್ರಹಿಸಲು ಮತ್ತು ದಕ್ಷಿಣ ಭಾರತದ ಹಳ್ಳಿಗಳ ಸಾಮಾಜಿಕ ಸಂರಚನೆಯನ್ನು ಅಧ್ಯಯನ ಮಾಡುವ ಹೊಣೆಗಾರಿಕೆಯನ್ನು ನೀಡಲಾಗುತ್ತದೆ. ಹೀಗೆ ಕಂಪನಿ ಆಡಳಿತದ ವಿವಿಧ ಕ್ಷೇತ್ರಗಳಲ್ಲಿದ್ದ ಅಧಿಕಾರಿಗಳನ್ನು ಭಾರತದಲ್ಲಿ ವಿವಿಧ ಶೈಕ್ಷಣಿಕ

ಜವಾಬ್ದಾರಿಗಳನ್ನು ನಿರ್ವಹಿಸಲು ನೇಮಿಸಲಾಗುತ್ತದೆ. ಈ ಅಧ್ಯಾಯದ ಆರಂಭದಲ್ಲಿ ನಾನು ವಿವರಿಸಿರುವಂತೆ ನಾಲ್ಕು ಮುಖ್ಯ ಕ್ಷೇತ್ರಗಳನ್ನು ಕಂಪನಿ ಆಡಳಿತವು ಅಧ್ಯಯನ ಮಾಡಲು ತಮ್ಮ ಅಧಿಕಾರಿಗಳನ್ನು ನೇಮಿಸಲಾಗಿತ್ತು.

೧. ಬುಡಕಟ್ಟುಗಳ ಅಧ್ಯಯನ

೨. ಜಾತಿಗಳ ಅಧ್ಯಯನ

೩. ಅಲೆಮಾರಿಗಳ ಅಧ್ಯಯನ

೪. ಗ್ರಾಮಗಳ ಅಧ್ಯಯನ

ಜಾತಿ, ಬುಡಕಟ್ಟು ಮತ್ತು ಗ್ರಾಮಗಳ ಅಂತಸ್ಥ ಜಗತ್ತಿನಲ್ಲಿ ನೈಜ ಭಾರತ ಅಡಗಿದೆ ಎಂಬ ಓರಿಯಂಟಲಿಸ್ಟರ ಗ್ರಹಿಕೆಯನ್ನು ಆಧರಿಸಿಯೇ ಭಾರತದಲ್ಲಿ ಸಾಮಾಜಿಕ ಅಧ್ಯಯನಗಳು ಪ್ರಾರಂಭವಾಗುತ್ತವೆ. ಯಾವುದೇ ದೇಶದ ಗುಟ್ಟುಗಳು ಅಲ್ಲಿನ ಉತ್ಪಾದನಾ ಕೇಂದ್ರಗಳಲ್ಲಿ ಅಡಗಿರುತ್ತವೆ. ಉತ್ಪಾದನಾ ಶಕ್ತಿಗಳೇ ಒಂದು ದೇಶದ ಅಂತಃಶಕ್ತಿಯನ್ನು ರೂಪಿಸುತ್ತವೆ. ಈ ಕೇಂದ್ರಗಳನ್ನು ಮತ್ತು ಅವುಗಳನ್ನು ಪೋಷಿಸುವ ಉತ್ಪಾದನಾ ಶಕ್ತಿಗಳನ್ನು ಅರ್ಥಮಾಡಿಕೊಳ್ಳುವುದು ಕಂಪನಿ ಆಡಳಿತಕ್ಕೆ ಅನಿವಾರ್ಯವಾಗಿತ್ತು. ಅರ್ಥ ಮಾಡಿಕೊಳ್ಳುವ ಅವರ ತುರ್ತುಗಳ ಹಿಂದೆ ಅನೇಕ ಒತ್ತಡಗಳು ಕೆಲಸ ಮಾಡಿದ್ದವು.

೧. ಭಾರತದಲ್ಲಿ ಅದರಲ್ಲೂ ಉತ್ತರ ಭಾರತದಲ್ಲಿ ಕಂಪನಿ ಆಡಳಿತಕ್ಕೆ ಪ್ರತಿರೋಧ ಶುರುವಾದದ್ದೇ ರೈತರಿಂದ, ಆದಿವಾಸಿಗಳಿಂದ, ಅಲೆಮಾರಿ ಮತ್ತು ಕಸಬುದಾರ ಸಮುದಾಯಗಳಿಂದ. ತಮ್ಮ ಗೆರಿಲ್ಲಾ ಮಾದರಿಯ ಆಕ್ರಮಣದಿಂದ ಕಂಪನಿ ಸೈನ್ಯವನ್ನು ಇವರು ಹಲವು ಕಡೆಗಳಲ್ಲಿ ಸೋಲಿಸಿದ್ದರು.

೨. ಭಾರತವನ್ನು ಆಳಬೇಕೆಂದರೆ ಇಲ್ಲಿನ ದುಡಿವ ವರ್ಗಗಳ ಅಂತರಂಗ ಮೊದಲು ಅರ್ಥವಾಗಬೇಕು. ಇಲ್ಲಿನ ಜನ ಆಚರಣೆ, ಭಾಷೆ, ಜೀವನ ವಿಧಾನ, ವಿಧಿನಿಷೇಧಗಳು ಮತ್ತು ಸ್ಥಳೀಯ ಕಾನೂನುಗಳು ಈ ಎಲ್ಲ ಸಂಗತಿಗಳು ಕಂಪನಿ ಆಡಳಿತಕ್ಕೆ ತಕ್ಷಣದ ಅಗತ್ಯಗಳಾಗಿದ್ದವು.

೩. ಕಂಪನಿ ಆಡಳಿತವು ತನ್ನ ಸೈನ್ಯ ಮತ್ತು ಆಡಳಿತದ ವೆಚ್ಚಕ್ಕೆ ಭಾರಿ ಮೊತ್ತದ ಹಣವನ್ನು ಹೊಂದಿಸಬೇಕಿತ್ತು. ಜೊತೆಗೆ ಸ್ಥಳೀಯ ಸಂಪನ್ಮೂಲಗಳನ್ನು ತನ್ನ ಹಿಡಿತಕ್ಕೆ ತಂದುಕೊಳ್ಳದೆ ಕಂಪನಿ ಆಡಳಿತವು ತನ್ನ ಖಜಾನೆಯನ್ನು ತುಂಬಿಕೊಳ್ಳುವುದು ಸಾಧ್ಯವಿರಲಿಲ್ಲ. ಅಂದು ಭಾರತದಲ್ಲಿನ ಮುಖ್ಯ ಉತ್ಪಾದನಾ ಕ್ಷೇತ್ರವೆಂದರೆ ಕೃಷಿ. ಕೃಷಿ ಹಳ್ಳಿಗಳಲ್ಲಿತ್ತು. ಕೃಷಿಯಲ್ಲಿ ತೊಡಗಿದ್ದವರು ಆದಿವಾಸಿಗಳು ಮತ್ತು ಗ್ರಾಮವಾಸಿ ರೈತ ಸಮುದಾಯಗಳು. ಇವರಿಗೆ ಪೂರಕವಾಗಿ ಕುಶಲಕರ್ಮಿ ವರ್ಗ ಮತ್ತು ಸೇವಕ ಸಮುದಾಯಗಳು ಹಳ್ಳಿಗಳಲ್ಲಿ ವಾಸಿಸುತ್ತಿದ್ದರು.

೪. ಹಳ್ಳಿಗಳು ಅಂದು ಭಾರತದ ಅತಿಮುಖ್ಯ ಆದಾಯವನ್ನು ಉತ್ಪಾದಿಸುವ ಕೇಂದ್ರಗಳು. ಈ ಉತ್ಪಾದನಾ ಕೇಂದ್ರಗಳಿಂದ ಕಂಪನಿ ಆಡಳಿತವು ತನ್ನ ಆದಾಯವನ್ನು ಕಂದಾಯದ ಮೂಲಕ ಹೆಚ್ಚಿಸಿಕೊಳ್ಳಬೇಕಿತ್ತು. ಈ ಕಾರಣದಿಂದ ಭಾರತದ ರೈತರು, ಕುಶಲಕರ್ಮಿಗಳು ಮತ್ತು ಸೇವಕ ಸಮುದಾಯಗಳನ್ನು ಬೆಸೆದುಕೊಂಡಿದ್ದ ವ್ಯವಸಾಯಿ ಸಂರಚನೆಯನ್ನು ಕಂಪನಿ ಆಡಳಿತ ಅರ್ಥ

ಮಾಡಿಕೊಳ್ಳುವುದು ಅನಿವಾರ್ಯವೂ ಆಗಿತ್ತು. ಇದನ್ನೇ ಕೋನ್ ಹೀಗೆ ವಿವರಿಸುತ್ತಾರೆ. '೧೯ ನೇ ಶತಮಾನದ ಮಧ್ಯಭಾಗದ ಹೊತ್ತಿಗೆ ಬ್ರಿಟೀಶ್ ಆಡಳಿತವು ಇಂಡಿಯಾದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಬದುಕಿನ ಮೇಲೆ ಹಿಡಿತ ಸಾಧಿಸಲು ಪ್ರಾರಂಭಿಸಿತ್ತು. ಬ್ರಿಟೀಷರು ಕಂದಾಯ ವ್ಯವಸ್ಥೆಯನ್ನು ರೂಪಿಸಲು, ಅದನ್ನು ಕಾರ್ಯಬದ್ಧಗೊಳಿಸಲು ಮತ್ತು ಕೃಷಿ ಭೂಮಿಯನ್ನು ವಶಪಡಿಸಿಕೊಳ್ಳುವ ವಿಧಾನಗಳನ್ನು ಕಂಡುಕೊಳ್ಳಲು ಭಾರತದ ಹಳ್ಳಿಗಳ ಸಾಮಾಜಿಕತೆಯನ್ನು ಅಧ್ಯಯನ ಮಾಡಲು ತಮ್ಮ ಆಡಳಿತದಲ್ಲಿನ ಮಿಲಿಟರಿಯೇತರ ಅಧಿಕಾರಿಗಳನ್ನು ಹಳ್ಳಿಗಳಿಗೆ ಕಳುಹಿಸಿತು. ಭೂ ಒಡೆತನದ ನಿಯಂತ್ರಣ ಮತ್ತು ಭೂ ಕಂದಾಯವನ್ನು ನಿಗದಿಗೊಳಿಸುವ ಉದ್ದೇಶಗಳು ಈ ಕಾರ್ಯ ತಂತ್ರದ ಹಿಂದೆ ಕೆಲಸ ಮಾಡಿದ್ದವು[೧೦೨]. ಇದಕ್ಕಾಗಿ ಬಾಡೆನ್ ಪೋವೆಲ್‌ನಂತಹ ಅಧಿಕಾರಿಯನ್ನು ಭಾರತದ ಕೃಷಿ ವ್ಯವಸ್ಥೆ ಮತ್ತು ಭೂ ಹಂಚಿಕೆಯನ್ನು ಅಧ್ಯಯನ ಮಾಡಲು ನೇಮಿಸಲಾಗಿತ್ತು. ಈತ ೧೮೯೮ರಲ್ಲಿ 'The land system of British India' ಎಂಬ ಗ್ರಂಥವನ್ನು ಮೂರು ಸಂಪುಟಗಳಲ್ಲಿ ಪ್ರಕಟಿಸುತ್ತಾನೆ.

ನಂತರ ೧೮೯೪ರಲ್ಲಿ ಭಾರತದ ಜನಗಣತಿ ಮಾಡಲು ಕಂಪನಿ ಆಡಳಿತ ಮುಂದಾಯಿತು. ಹರ್ಬರ್ಟ್ ರಿಸ್ಲೆಯಂತಹ ಅಧಿಕಾರಿಯನ್ನು ಈ ಸರ್ವೇ ಕೆಲಸದ ಸೂಪರಿಡಿಂಟೆಂಡ್ ಆಗಿ ನೇಮಿಸಲಾಯಿತು. ೧೯೦೧ ರಲ್ಲಿ ಸಂಸ್ಥೆಯನ್ನು ಹುಟ್ಟುಹಾಕಲಾಯಿತು. 'ಈ ಸಂಸ್ಥೆಯ ಹುಟ್ಟು ಭಾರತದಲ್ಲಿ ಮಾನವಶಾಸ್ತ್ರದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿತು. ಮುಂದೆ ಭಾರತದ ಎಲ್ಲ ಪ್ರಾಂತ್ಯಗಳ ಜಾತಿ ಮತ್ತು ಬುಡಕಟ್ಟುಗಳ ಕುರಿತ ವಿವರಗಳು ಹಲವು ಸಂಪುಟಗಳಲ್ಲಿ ಪ್ರಕಟಗೊಂಡವು. ಇಂಡಿಯನ್ ಗೆಜೆಟಿಯರ್ ಆಫ್ ಇಂಡಿಯಾ ದ ೨೬ ಸಂಪುಟಗಳು ಪ್ರಕಟಗೊಂಡವು'[೧೦೩]. ಈ ಸಂಸ್ಥೆಯಲ್ಲಿ ಕೆಲಸ ಮಾಡಲು ಆರಂಭಿಸಿದವರೆಲ್ಲ ಕಂಪನಿ ಆಡಳಿತದ ಅಧಿಕಾರಿಗಳು. 'ಇವರು ಕಲೆ ಹಾಕಿದ ಮಾಹಿತಿಗಳು ಮತ್ತು ಅವುಗಳ ವಿಶ್ಲೇಷಣೆಯ ತಾತ್ವಿಕ ಚೌಕಟ್ಟಿನಲ್ಲಿಯೇ ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರವು ಜಗತ್ತಿನ ಶೈಕ್ಷಣಿಕ ವಲಯದಲ್ಲಿ ಪ್ರವರ್ಧಮಾನಕ್ಕೆ ಬಂದವು'[೧೦೪]. ಇದರ ಜೊತೆಗೆ ಬ್ರಿಟೀಷ್ ಅಧಿಕಾರಿಗಳಿಗೆ ಕಾನೂನು ಸುವ್ಯವಸ್ಥೆಯ ಸಮಸ್ಯೆಯೂ ಕಾಡಿತು. ಈ ಮೊದಲೇ ಹೇಳಿದಂತೆ ಇಂಡಾಲಜಿಕಲ್ ಅಧ್ಯಯನಗಳು ಸಹ ಬ್ರಿಟೀಷ್ ಅಧಿಕಾರಿಗಳಿಗೆ ಭಾರತವನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡಿದವು. ಭಾರತದಲ್ಲಿ ಕಂಪನಿ ಆಡಳಿತದ ಆರಂಭದ ಹಂತದಲ್ಲಿ ಸಂಸ್ಕೃತ ಮತ್ತು ಅರೇಬಿಕ್ ಭಾಷಾ ಪಂಡಿತರು ಸ್ಥಳೀಯ ವ್ಯಾಜ್ಯಗಳನ್ನು ಬಗೆಹರಿಸಲು ಬ್ರಿಟೀಷ್ ನ್ಯಾಯಾಧೀಶರಿಗೆ ದೇಶೀಯ ಪಾರಂಪರಿಕ ನಿಯಮಗಳನ್ನು ಅರ್ಥೈಸಿದವರು ಸ್ಥಳೀಯ ಸಂಸ್ಕೃತ ಪಂಡಿತರು. ೧೭೭೬ ರಲ್ಲಿಯೇ ಹಿಂದೂ ಕಾನೂನುಗಳನ್ನು ಸ್ಥಳೀಯ ಪಂಡಿತರ ಸಹಾಯದಿಂದ ಇಂಗ್ಲೀಷ್‌ಗೆ ಭಾಷಾಂತರಿಸಲಾಯಿತು. ಈ ಕಾನೂನುಗಳನ್ನು ಬ್ರಿಟೀಷ್ ನ್ಯಾಯಾಧಿಶರಿಗೆಂದೇ ಭಾಷಾಂತರಿಸಲಾಗಿತ್ತು[೧೦೫]. ಹೆನ್ರಿ ಮೈನ್ ಎಂಬ ಕಂಪನಿ ಆಡಳಿತದ ಅಧಿಕಾರಿಯು ಭಾರತವನ್ನು ಕುರಿತು ಎರಡು ಅತಿ ಮುಖ್ಯ ಕೃತಿಗಳನ್ನು ರಚನೆ ಮಾಡಿದ. ೧೮೬೧ ರಲ್ಲಿ ಆತ 'ಪ್ರಾಚೀನ ಕಾನೂನುಗಳು' ೧೮೭೧ ರಲ್ಲಿ 'ಪೂರ್ವ ಮತ್ತು ಪಶ್ಚಿಮದಲ್ಲಿನ ಗ್ರಾಮ ಸಮುದಾಯಗಳು' ಎಂಬ ಈ ಕೃತಿಗಳು ಭಾರತವನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡಿದವು.

ಈ ಮೊದಲೇ ಹೇಳಿದಂತೆ ಭಾರತದಲ್ಲಿ ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರದ ಬೆಳವಣಿಗೆಯಲ್ಲಿ ಕಂಪನಿ ಆಡಳಿತದ ವಿವಿಧ ಕ್ಷೇತ್ರಗಳ ಅಧಿಕಾರಿಗಳು ಮಹತ್ವದ ಪಾತ್ರ ವಹಿಸಿದರು. ಸಿಪಾಯಿ ದಂಗೆಯ ನಂತರ ಭಾರತದಲ್ಲಿನ ವಿವಿಧ ಸಮುದಾಯಗಳು ಬ್ರಿಟೀಷ್ ಆಡಳಿತದ ವಿರುದ್ಧ ಸಾಂಘಿಕವಾಗಿ ಅಲ್ಲದಿದ್ದರೂ ಅಲ್ಲಲ್ಲಿ ಅನೇಕ ಬಗೆಯ ಪ್ರತಿರೋಧಗಳಲ್ಲಿ ತೊಡಗಿಸಿಕೊಂಡಿದ್ದವು. ಅದರಲ್ಲೂ ಹೆಚ್ಚಾಗಿ ಗ್ರಾಮೀಣ ಭಾಗದ ಜನರು ಬ್ರಿಟೀಷ್ ಆಡಳಿತದ ವಿರದ್ಧ ಒಂದು ಕೈ ಹೆಚ್ಚಾಗಿಯೇ ಪ್ರತಿಭಟಿಸಲಾರಂಭಿಸಿದರು. ಯಾವ ಯಾವ ಜನ ಕಂಪನಿ ಆಡಳಿತವನ್ನು ವಿರೋಧಿಸುತಿದ್ದಾರೆ? ಯಾಕಾಗಿ ವಿರೋಧಿಸುತ್ತಿದ್ದಾರೆ? ಎಂಬುದನ್ನು ತಿಳಿದುಕೊಳ್ಳಲೆಂದೇ ಈ ಸಮುದಾಯಗಳನ್ನು ಅಧ್ಯಯನ ಮಾಡಲಾಯಿತು. ಈ ಸಂದರ್ಭದಲ್ಲಿ ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರೀಯ ಅಧ್ಯಯನ ವಿಧಾನಗಳು ಹೆಚ್ಚಾಗಿ ಬಳಕೆಯಾದವು. ಈ ಅಭಿಜಾತ ಜ್ಞಾನಶಿಸ್ತುಗಳಿಗೆ ತಾವು ಅಧ್ಯಯನ ಮಾಡುವ ಸಮಾಜಗಳ ಅಂತಸ್ಥ ಜಗತ್ತನ್ನು ತತ್ವಶಾಸ್ತ್ರೀಯವಾಗಿ ಅರ್ಥ ಮಾಡಿಕೊಳ್ಳುವ ಜರೂರತ್ತುಗಳಿರಲಿಲ್ಲ.

ಕಾರಣ ಸ್ಪಷ್ಟವಾಗಿಯೇ ಇದೆ. ಈ ಜ್ಞಾನಶಿಸ್ತುಗಳು ಅಧೀನ ದೇಶಗಳ ಸಮಾಜಗಳನ್ನು ವಸಾಹತು ರಾಜಕಾರಣದ ಭಾಗವಾಗಿಯೇ ಅಧ್ಯಯನ ಮಾಡಿದವು. ತಾತ್ವಿಕವಾಗಿ ಈ ಜ್ಞಾನಶಿಸ್ತುಗಳು ಸೋತ ಜನಸಮುದಾಯಗಳ ಜೊತೆ ಬೆಸೆದುಕೊಳ್ಳಲಿಲ್ಲ. ಈ ಸಮುದಾಯಗಳನ್ನು, ಆಳುವ 'ಹೊರಗಿನ' ಜನರ ಆಶಯಗಳಿಗೆ ಅನುಗುಣವಾಗಿಯೇ ಈ ಜ್ಞಾನಶಿಸ್ತುಗಳು ಅಧ್ಯಯನಕ್ಕೊಳಪಡಿಸಿದವು. ಇವು ಕೇವಲ ಶೈಕ್ಷಣಿಕವಾಗಿ ಮಾತ್ರವಲ್ಲ, ರಾಜಕೀಯವಾಗಿಯೂ ಸಹ ಅಧೀನ ಸಮುದಾಯಗಳ ಹಿತಾಸಕ್ತಿಗಳ ವಿರುದ್ಧವಾಗಿದ್ದವು. ಈ ಜ್ಞಾನಶಿಸ್ತುಗಳಿಗೆ ಆಳ್ವಿಕೆಗೊಳಪಟ್ಟ ಸಮುದಾಯಗಳ 'ಒಳಗಿನ' ಜಗತ್ತಿನ ಅನಾವರಣ ಸಾಧ್ಯವಾಗಲೇ ಇಲ್ಲ. ಕಾರಣ ಈ ಜ್ಞಾನಶಿಸ್ತುಗಳು ರಾಜಕೀಯವಾಗಿ ಮತ್ತು ತಾತ್ವಿಕವಾಗಿ 'ಹೊರಗಿನ'ವುಗಳಾಗಿಯೇ ಚಾಲ್ತಿಯಲ್ಲಿದ್ದವು.

ಒಳಗಿನವರಾಗುವುದು: ಹಾಗೆಂದರೇನು?

ಸಮಾಜ ವಿಜ್ಞಾನದಲ್ಲಿ 'ಒಳಗಿನವರಾಗಿ' ಅಧ್ಯಯನ ಮಾಡುವುದರ ಕುರಿತು ಅನೇಕ ಚರ್ಚೆಗಳೇರ್ಪಟ್ಟಿವೆ. ಒಳಗಿನವರಾಗುವುದೆಂದರೇನು? ಇದನ್ನು ಕೇವಲ ಒಂದು ಶೈಕ್ಷಣಿಕ ವಿಧಾನದ ಪ್ರಶ್ನೆಯನ್ನಾಗಿ ಮಾತ್ರ ಪರಿಗಣಿಸಿ ಚರ್ಚೆಯನ್ನು ಬೆಳೆಸಲಾಗಿದೆ. ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರಗಳ ಸಂದರ್ಭದಲ್ಲಿ ಈ ಪ್ರಶ್ನೆ ಪದೇಪದೇ ವಿದ್ವಾಂಸರನ್ನು ಕಾಡಿರುವುದುಂಟು. ಅದರಲ್ಲೂ ತಮ್ಮದಲ್ಲದ ಸಂಸ್ಕೃತಿಯನ್ನು, ಸಮಾಜವನ್ನು ಅಧ್ಯಯನ ಮಾಡಲು ಹೊರಟ ಯುರೋಪಿನ ಸಮಾಜವಿಜ್ಞಾನಿಗಳು 'ಒಳಗಿನವರಾಗುವ' ಅಥವಾ 'ಹೊರಗಿನವರಾಗುವ' ಬಿಕ್ಕಟ್ಟನ್ನು ಎದುರಿಸಿದರು ಮತ್ತು ಅದನ್ನೇ ಒಂದು ಶೈಕ್ಷಣಿಕ ಚರ್ಚೆಯಾಗಿ ಬೆಳೆಸಿದರು. ೧೯ನೇ ಶತಮಾನದ ಯುರೋಪಿನ ಸಾಮಾಜಿಕ ಅಧ್ಯಯನಗಳ ತಾತ್ವಿಕತೆಯ ಭಾಗವಾಗಿಯೇ ಈ ಬಿಕ್ಕಟ್ಟು ಅಲ್ಲಿನ ವಿದ್ವಾಂಸರ ಮಧ್ಯೆ ತಲೆದೋರಿದೆ. ತಾವು ಅಧ್ಯಯನ ಮಾಡಲೆಂದು ಆರಿಸಿಕೊಂಡ ಸಮಾಜ ಅವರದ್ದಲ್ಲ. ನೇರ ಯುದ್ಧದಲ್ಲಿ ಸೋತ ಇಲ್ಲವೆ ಶರಣಾದ ವಸಾಹತುವೊಂದರ ಸಮಾಜವನ್ನು ಯುರೋಪಿನ ಜನ ಅಧ್ಯಯನ ಮಾಡಲು ಬಂದಾಗ ಅವರು ಸಹಜವಾಗಿಯೇ 'ಅನ್ಯ'ರಾಗುತ್ತಿದ್ದರು.

ಅಲ್ಲದೆ ಅವರ ರಾಜಕೀಯ ಉದ್ದೇಶಗಳ ಈಡೇರಿಕೆಗಾಗಿಯೇ ರೂಪುಗೊಂಡ ಅವರ ಶೈಕ್ಷಣಿಕ ವಿಧಾನವೂ ಸಹ ಅವರನ್ನು ತಾವು ಅಧ್ಯಯನ ಮಾಡುವ ಸಮಾಜಗಳ ಒಳಗಿನವರಾಗಲು ತಾತ್ವಿಕವಾಗಿ ಅಡ್ಡಿ ಮಾಡುತ್ತಿತ್ತು. ಭಾರತದಂತಹ ಏರುಪೇರಿನ ಸಮಾಜವನ್ನು ಅಧ್ಯಯನ ಮಾಡಲು ಬಂದ ಆರಂಭದ ಮಾನವಶಾಸ್ತ್ರಜ್ಞರು (ಇವರ್‍ಯಾರು ಶುದ್ಧಾಂಗವಾಗಿ ಮಾನವಶಾಸ್ತ್ರವನ್ನು ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡಿ ಬಂದವರಲ್ಲ) ಈ ಸಮಸ್ಯೆಯನ್ನು ತಮಗರಿವಿಲ್ಲದಂತೆ ಎದುರಿಸಿದ್ದಾರೆ.

ಅಭಿಜಾತ ಮಾನವಶಾಸ್ತ್ರದ ಶೈಕ್ಷಣಿಕ ಚರ್ಚೆಗಳಲ್ಲಿ 'ಒಳಗಿನವ' ಮತ್ತು 'ಹೊರಗಿನವ' ಎಂಬ ಬಿಕ್ಕಟ್ಟಿನ ಚರ್ಚೆಯು ದೀರ್ಘ ಕಾಲದವರೆಗೆ ಈ ಕ್ಷೇತ್ರದ ವಿದ್ವಾಂಸರನ್ನು ಕಾಡುತ್ತ ಬಂದಿದೆ. ಅಮೇರಿಕಾದ ಇಬ್ಬರು ಮಾನವಶಾಸ್ತ್ರಜ್ಞರಾದ ರಾಬರ್ಟ್ ಮಾರ್ಟನ್ ಮತ್ತು ಎಡ್ಮಂಡ್ ಲೀಚ್ ಈ ಚರ್ಚೆಯನ್ನು ವಿಸ್ತಾರವಾಗಿ ಬೆಳೆಸಿದ್ದಾರೆ. ಭಾರತದ ಸಂದರ್ಭದಲ್ಲಿ ಎಂ.ಎನ್.ಶ್ರೀನಿವಾಸ್, ಕನ್ನಡದ ಸಂದರ್ಭದಲ್ಲಿ ರಹಮತ್ ತರೀಕೆರೆ, ಎಂ.ಚಂದ್ರಪೂಜಾರಿ ಈ ಚರ್ಚೆಯನ್ನು ಇನ್ನಷ್ಟು ವಿಸ್ತರಿಸಿದ್ದಾರೆ. ಈ ಚರ್ಚೆಯನ್ನು ಮಾರ್ಟನ್, ಲೀಚ್ ಮತ್ತು ಎಂ ಎನ್ ಶ್ರೀನಿವಾಸ್ ಒಂದು ರೀತಿಯ ಶೈಕ್ಷಣಿಕ ಬಿಕ್ಕಟ್ಟಿನ ಚರ್ಚೆಯಾಗಿ ಮಾತ್ರ ಪರಿಭಾವಿಸಿದ್ದಾರೆ. ಎಡ್ಮಂಡ್ ಲೀಚ್ ಅಧ್ಯಯನಕಾರರನ್ನು 'ನಾವು' ಎಂದು, ಅಧ್ಯಯನಕ್ಕೊಳಪಡುವವರನ್ನು 'ಅವರು' ಎಂದು ವಿಂಗಡಣೆ ಮಾಡುತ್ತಾನೆ[೧೦೬]. ಈ ಚರ್ಚೆಯ ಕುರಿತ ಮುಖ್ಯಾಂಶಗಳನ್ನು ಹೀಗೆ ಪಟ್ಟಿ ಮಾಡಬಹುದಾಗಿದೆ.

೧. 'ಅಧ್ಯಯನಕ್ಕೆ ಒಳಪಡುವವರು' ಮತ್ತು 'ಅಧ್ಯಯನ ಮಾಡುವವರು' ಎಂಬ ವಿಂಗಡಣೆ ಮಾಡಿದವರು ಪಶ್ಚಿಮದ ಸಮಾಜಶಾಸ್ತ್ರಜ್ಞರು ಮತ್ತು ಮಾನವಶಾಸ್ತ್ರಜ್ಞರು.

೨. ಅಧ್ಯಯನ ಮಾಡುವವರೆಂದರೆ ಯುರೋಪಿನವರಾದ 'ನಾವು', ಯುರೋಪಿನವರಲ್ಲದ 'ಬೇರೆಯವರನ್ನು' ಅಧ್ಯಯನ ಮಾಡುವುದರಿಂದ 'ನಮ್ಮನ್ನು ನಾವು' ಅರ್ಥ ಮಾಡಿಕೊಳ್ಳಬಹುದು. 'ನಮ್ಮನ್ನು' ಅರ್ಥ ಮಾಡಿಕೊಳ್ಳುವ ದಾರಿ ಯಾವುದೆಂದರೆ 'ನಾವು' 'ಇತರರನ್ನು' (Others) ಅಧ್ಯಯನ ಮಾಡುವುದು[೧೦೭].

೩. 'ನಮ್ಮದೇ' ಸಮಾಜವನ್ನು ಒಳಗಿನವರಾಗಿ ಅಧ್ಯಯನ ಮಾಡುವುದು ಕಷ್ಟಕರ[೧೦೮].

೪. ಅಧ್ಯಯನಕಾರ ಅಧ್ಯಯನ ಮಾಡುವ ಸಮುದಾಯಕ್ಕಿಂತ ಭಿನ್ನ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಬದುಕುತ್ತಿರುವುದರಿಂದ, ಅಧ್ಯಯನಕಾರ ಮತ್ತು ಅದ್ಯಯನಕ್ಕೊಳಪಡುವವರ ನಡುವೆ ಅಂತರ ಸಹಜವಾಗಿಯೇ ಏರ್ಪಡುತ್ತದೆ[೧೦೯].

೫. ನಮ್ಮದು ಏಣಿ ಶ್ರೇಣಿಗಳಿರುವ ಸಮಾಜವಾಗಿರುವುದರಿಂದ, ಈ ವ್ಯವಸ್ಥೆಯು 'ನಮ್ಮವರು' ಹೊರಗಿನವರು ಅಥವಾ 'ಪರಕೀಯರು' ಎನ್ನುವ ವಿಂಗಡನೆ ಮಾಡುತ್ತದೆ[೧೧೦].

೬. ಏಣಿಶ್ರೇಣಿಯ ನೆಲೆಗಳು 'ನಮ್ಮವರು' ಮತ್ತು 'ಹೊರಗಿನವರು' ಎಂಬ ಗ್ರಹೀತಗಳು ಸಂಶೋಧನೆ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ಸಂಶೋಧಕರ ಸ್ಥಾನ, ಅವರಿಗೆ ಸಿಗುವ ಮಾಹಿತಿಯನ್ನು ಸಾಕಷ್ಟು ಪ್ರಭಾವಿಸುತ್ತದೆ[೧೧೧].

೭. ಅಧ್ಯಯನಕಾರ 'ತನ್ನದಲ್ಲದ' ಸಮಾಜದಿಂದ ಸಹಜವಾಗಿಯೇ 'ಹೊರಗಿನವನಾಗಿರುತ್ತಾನೆ' ಆದರೆ ತನ್ನದೇ ಸಮಾಜವನ್ನು ಅಧ್ಯಯನ ಮಾಡುವಾಗಲೂ ಸಹ ಅವನನ್ನು 'ಅವನದೇ' ಸಮಾಜವು ಉತ್ತೇಜಿಸಲಾರದು[೧೦೭].

೮. ಆದಿವಾಸಿಗಳಂತಹ ಅಂಚಿನ ಸಮುದಾಯಗಳ ಭಾಷೆ ಅಧ್ಯಯನಕಾರನಿಗೆ ಅಪರಿಚಿತವಾದ ಕಾರಣ ಅವನು 'ಹೊರಗಿನವನಾಗುತ್ತಾನೆ' ಆಗ ಅವನು ಮಾಹಿತಿ ಸಂಗ್ರಹಿಸಲು ಸಾಧ್ಯವಾಗುವುದಿಲ್ಲ.

೯. ಅಧ್ಯಯನಕಾರ ಎಂತಹುದೇ ನಿಕೃಷ್ಟ ಸಮುದಾಯವನ್ನು ಅಧ್ಯಯನ ಮಾಡಲು ಹೋದರೂ ಅವನು ಸಹಾನುಭೂತಿಯಿಂದ ಸಂದರ್ಭಗಳಿಗೆ ಹೊಂದಿಕೊಳ್ಳಬೇಕಾಗುತ್ತದೆ. ಆ ಜನರ ಕುರಿತು ಕರುಣೆ ತೋರಬೇಕಾಗುತ್ತದೆ[೧೦೯].

೧೦. ಅಧ್ಯಯನಕಾರ ತಾನು ಅಧ್ಯಯನ ಮಾಡುವ ಸಮುದಾಯದ ಹೊರಗಿನವರಾದ ಕಾರಣ ತಾನು ಅಧ್ಯಯನ ಮಾಡುವ ಸಮುದಾಯದ ಜೊತೆ ಸ್ನೇಹದಿಂದ ವರ್ತಿಸಿದರೆ ಮಾತ್ರ ಆತ ಮಾಹಿತಿ ಪಡೆಯಬಲ್ಲ[೧೧೦].

೧೧. ಮುಚ್ಚಿದ ಮತ್ತು ತೆರೆದ ಸಮುದಾಯಗಳು ಇರುವುದರಿಂದ ಅವಲೋಕನ ಮತ್ತು ಸಹಭಾಗಿತ್ವ ಅವಲೋಕನ ತಂತ್ರಗಳನ್ನು ಬಳಸಿ ಮಾಹಿತಿ ಪಡೆಯಬಹುದು. ಸಂಶೋಧಕರು ಬುಡಕಟ್ಟು ಸಮುದಾಯದ 'ನಮ್ಮವರು' ಪರಿಕಲ್ಪನೆಯಲ್ಲಿ ಸೇರಿಕೊಳ್ಳಲು ಒಂದೇ ಒಂದು ದಾರಿ ಇದೆ. ವೆರಿಯರ್ ಎಲ್ವಿನ್‌ರಂತೆ ಬುಡಕಟ್ಟು ಜನರೊಂದಿಗೆ ವೈವಾಹಿಕ ಸಂಬಂಧ ಬೆಳೆಸುವುದು ಮಾತ್ರ ಅವರೊಂದಿಗೆ ನಿಜವಾದ ಅರ್ಥದಲ್ಲಿ ಅವರ ನಮ್ಮವರ ಪರಿಕಲ್ಪನೆಯಲ್ಲಿ ಸೇರಿಕೊಳ್ಳುವ ದಾರಿ[೧೧೧].

೧೨. ಬುಡಕಟ್ಟು ಅಥವಾ ಗ್ರಾಮ ಸಮಾಜದವರೇ ಸಂಶೋಧನೆ ಕೈಕೊಳ್ಳುವುದು ಸಂಶೋಧನಾ ಕ್ಷೇತ್ರ ಹೇರುವ ಮಿತಿಯನ್ನು ಮೀರಲು ಸಹಕಾರಿಯಾಗಬಹುದು[೧೧೨].

೧೩. ಸಂಶೋಧಕ ಮತ್ತು ಸಂಶೋಧನೆಗೆ ಒಳಪಡುವವರ ಮಧ್ಯೆ ಒಂದು ಗೋಡೆ ಏರ್ಪಡುವುದು ಸಹಜ. ಅದನ್ನು ದಾಟಲು ಸಂಶೋಧಕ ಆಯಾ ಸಂದರ್ಭದಲ್ಲಿ ಸಾಮಾಜಿಕ, ಸಾಂಸ್ಕೃತಿಕ ಮತ್ತು ಸಾಮುದಾಯಿಕ ಸಂಬಂಧಗಳನ್ನು ಬಳಸಿಕೊಂಡರೆ ವಾಸ್ತವಕ್ಕೆ ಹತ್ತಿರವಿರುವ ಚಿತ್ರಣ ನೀಡಲು ಸಾಧ್ಯ[೧೧೩].

೧೧. 'ಒಳಗಿನವರಾಗುವುದು'ಎಂಬುದನ್ನು ತಾತ್ವಿಕವಾದ ಅರ್ಥದಲ್ಲಿ, ಅಧ್ಯಯನಕಾರರು ರೂಪಾಂತರಗೊಳ್ಳುವ ಅರ್ಥದಲ್ಲಿ ಗ್ರಹಿಸಬೇಕಿದೆ. ನಿಜವಾಗಿ 'ಒಳಗಿನವರಾವುದು' ಒಂದರೆ, ಅಧ್ಯಯನಕಾರರು ಆ ಸಮುದಾಯಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಸಮಗ್ರವಾಗಿ ತಿಳಿದಿರುವುದು ಮಾತ್ರವಲ್ಲ. ಆರ್ಥಿಕ ಸಾಮಾಜಿಕ ಒತ್ತಡಗಳಿಗೆ ಸಿಕ್ಕು ಸಮುದಾಯದ ಜೀವನ ಹೇಗೆಲ್ಲ ಬದಲಾಗುತ್ತಿದೆ ಎಂಬುದನ್ನು ಗಮನಿಸುವುದು[೧೧೪].

ಮೇಲಿನ ಟಿಪ್ಪಣಿಗಳಿಂದ ಕೆಲವು ಅಂಶಗಳನ್ನು ಚರ್ಚಿಸುವ ಮೂಲಕ ಈ ಸಮಸ್ಯೆಯನ್ನು ವಿವರಿಸಿಕೊಳ್ಳಬಹುದಾಗಿದೆ. ಇಲ್ಲಿ 'ಅಧ್ಯಯನಕ್ಕೆ ಒಳಪಡುವವರು' ಮತ್ತು 'ಅಧ್ಯಯನ ಮಾಡುವವರು'

ಎಂಬ ವರ್ಗಗಳು ಕ್ರಮವಾಗಿ 'ಅವರು' ಮತ್ತು 'ನಾವು' ಎಂಬ ಕೆಟಗರಿಗಳಲ್ಲಿ ತಮ್ಮನ್ನು ವಿಂಗಡಿಸಿಕೊಳ್ಳುತ್ತವೆ. ವಿಂಗಡಿಸಿಕೊಳ್ಳುತ್ತವೆ ಎನ್ನುವುದಕ್ಕಿಂತ ಅಧ್ಯಯನಕಾರರರು 'ನಾವು' ಮತ್ತು ಅಧ್ಯಯನಕ್ಕೆ ಒಳಪಡುವವರು 'ಅವರು'(Others) ಎಂದು ತಮ್ಮನ್ನು ಬೇರ್ಪಡಿಸಿಕೊಳ್ಳುತ್ತಾರೆ. ಅಧ್ಯಯನಕಾರರಾದ ತಾವು ಅಧ್ಯಯನಕ್ಕೊಳಪಡುವ ಜನಕ್ಕಿಂತ 'ಭಿನ್ನರು, ಮೇಲಿನವರು, ಬುದ್ಧಿವಂತರು, ಸೂಕ್ಷ್ಮಜ್ಞರು' ಇತ್ಯಾದಿಯಾಗಿ ಅಧ್ಯಯನಕಾರರು ತಮ್ಮನ್ನು ವಿಂಗಡಿಸಿಕೊಳ್ಳುತ್ತಾರೆ. ಈ ಬಗೆಯ ವಿಂಗಡನೆಯು ಸಾಧ್ಯವಾಗುವುದು ಅಧ್ಯಯನಕಾರನಿಗೆ ಅಧ್ಯಯನಕ್ಕೆ ಒಳಪಡುವವರ ಜೊತೆ ಯಾವುದೇ ಬಗೆಯ ಸಂಬಂಧವಿಲ್ಲದ ನಿರ್ಭಾವುಕ ಸ್ಥಿತಿಯಲ್ಲಿ. ಅಧ್ಯಯನಕ್ಕೆ ಒಳಪಡುವವರು, ಅಧ್ಯಯನಕ್ಕೆ ಒಳಪಡುವ 'ವಸ್ತುಗಳು' ಮಾತ್ರ. ವಿಜ್ಞಾನದ ಸಂಶೋಧನೆಯಲ್ಲಿ ಟೇಬಲ್ ಮೇಲೆ ಇರುವ ಇಲಿ ವಿಜ್ಞಾನಿಗೆ ಹೊಸ ಶೋಧಕ್ಕೆ ಬಳಸುವ ಸಾಧನ ಮಾತ್ರ. ಆ ವಿಜ್ಞಾನಿ ಅದನ್ನು ತಾನು ಕಂಡುಕೊಳ್ಳುವ 'ಸತ್ಯಕ್ಕಾಗಿ' ಅದನ್ನು ನಿರ್ಭಾವುಕವಾಗಿ ಕೊಯ್ಯುತ್ತಾನೆ. ಆ ಇಲಿ ಕೇವಲ ಉಪಯೋಗದ ವಸ್ತು, 'ಸತ್ಯವನ್ನು' ಕಂಡುಕೊಳ್ಳಲು ಇರುವ ಒಂದು ಪದಾರ್ಥ ಮಾತ್ರ. ಇದೇ ಬಗೆಯ ನಿಲುವು ಸಮಾಜ ವಿಜ್ಞಾನದ ಸಂಶೋಧನಾ ವಿಧಾನದಲ್ಲೂ ವ್ಯಕ್ತವಾಗುತ್ತದೆ. ಕಾರಣ ಸಮಾಜ ವಿಜ್ಞಾನವು, ಶುದ್ಧ ವಿಜ್ಞಾನದ ಅಧ್ಯಯನ ವಿಧಾನದಿಂದ ಪ್ರೇರೇಪಿತವಾಗಿರುವುದು. 'ಅಧ್ಯಯನಕ್ಕೆ ಒಳಪಡುವವರು' ಮತ್ತು 'ಅಧ್ಯಯನಕಾರರು' ಎಂಬ ವಿಂಗಡಣೆಯು ಯುರೋಪಿನ ರಾಜಕೀಯ ಯಜಮಾನಿಕೆಯಿಂದಲೂ ಬಂದಿದೆ. ಶೈಕ್ಷಣಿಕ ಕ್ಷೇತ್ರದಲ್ಲಿನ ವಿಜ್ಞಾನದ ಅಧ್ಯಯನ ವಿಧಾನವು 'ಶ್ರೇಷ್ಠ'ವೆಂದು ಒಪ್ಪಿದ್ದು ಮತ್ತು ಯುರೋಪಿನವರಾದ 'ನಾವು' 'ಇತರರಿಗಿಂತ' ಮುಂದುವರೆದಿದ್ದೇವೆ ಎಂಬ ಆತ್ಮಪ್ರತ್ಯಯವೂ ಸಹ ಈ ಬಗೆಯ ವಿಂಗಡನೆಯನ್ನು ಪ್ರಚೋದಿಸಿದೆ. ಮಾನವಶಾಸ್ತ್ರದ ಅಧ್ಯಯನ ವಿಧಾನದಲ್ಲಿಯೇ ಈ ಬಗೆಯ ಅಹಂಕಾರ ವಾಚ್ಯವಾಗಿಯೇ ಕಾಣುತ್ತದೆ. ಆದರೆ ಇದರ ಇನ್ನೊಂದು ಅಪಾಯವೆಂದರೆ ಮಾನವಶಾಸ್ತ್ರದ ಒಟ್ಟಾರೆಯ ಪರಿಭಾಷೆ ಮತ್ತು ಅದರ ಸೈದ್ಧಾಂತಿಕ ಪರಿವೇಷವೂ ಸಹ ಯಜಮಾನಿಕೆಯ ದನಿಯನ್ನು ಪ್ರತಿಧ್ವನಿಸುತ್ತದೆ. ಅಂದರೆ ಮಾನವಶಾಸ್ತ್ರದ ತಾತ್ವಿಕ ಚೌಕಟ್ಟಿನಲ್ಲೂ ಸಾಂಕೇತಿಕವಾಗಿ ಈ ಯಜಮಾನಿಕೆಯ ಠೇಂಕಾರ ಧ್ವನಿಸುತ್ತದೆ. ಮಾನವಶಾಸ್ತ್ರವು, ಮೂರನೇ ಜಗತ್ತಿನ ದೇಶಗಳ ಜನರನ್ನು ಅಧ್ಯಯನದ 'ವಸ್ತು' ಎಂದು ಪರಿಗಣಿಸುತ್ತದೆ. ಜನರು ಕೊಡುವ ತಿಳುವಳಿಕೆಯನ್ನು 'ಮಾಹಿತಿ' ಎಂದು, ತಿಳುವಳಿಕೆಯನ್ನು ಕೊಡುವ ವ್ಯಕ್ತಿಯನ್ನು ಮಾಹಿತಿಕಾರ (Informent) ಎಂದು ಗ್ರಹಿಸುತ್ತದೆ. ಮೆಮ್ಮಿ ಇದನ್ನು ಹೀಗೆ ವಿವರಿಸುತ್ತಾರೆ. 'ವಸ್ತು ಎಂದರೆ ಅದು ಪ್ರಯೋಗಾಲಯದಲ್ಲಿರುವ ಬಿಳಿ ಇಲಿಯಂತೆ. ಅದು ವಿಜ್ಞಾನದ ಬೆಳವಣಿಗೆಗೆ ಮತ್ತು ಪ್ರಯೋಗಗಳಿಗೆ ಬಳಕೆಯಾಗುವ ವಸ್ತು ಮಾತ್ರ. ಈ 'ವಸ್ತು'ವಿನ ಕುರಿತು ಯಾರಿಗೂ 'ಋಣದ ಭಾರ ಬಾಧಿಸುವುದಿಲ್ಲ'[೧೯]. ಮಾವನಶಾಸ್ತ್ರದ ಅಧ್ಯಯನ ವಿಧಾನವು ಅಧ್ಯಯನಕ್ಕೊಳಪಡುವ ಜನರನ್ನು ವಸ್ತು ಎಂದು ಪರಿಗಣಿಸುವುದು ಆ ಅಧ್ಯಯನ ಶಿಸ್ತಿನಲ್ಲಿ ಕೆಲಸ ಮಾಡುವ ಅಧ್ಯಯನಕಾರರ ಅಧಿಕಾರದ ಸಂಬಂಧಗಳಿಂದ ನಿರ್ದೇಶಿತವಾಗಿರುತ್ತದೆ. 'ಮಾನವಶಾಸ್ತ್ರೀಯ ಅಧ್ಯಯನಗಳು ನಡೆದದ್ದು ವಸಾಹತುಶಾಹಿ ಆಡಳಿತಗಾರರ ಅಡಿಯಲ್ಲಿ. ವಸಾಹತುಗಳ ಸೋತ ಜನರನ್ನು ಅಲ್ಲಿ ಕೇವಲ ಅಧ್ಯಯನಗಳ 'ವಸ್ತು'ಗಳನ್ನಾಗಿ ಮಾತ್ರ ಈ ಆಡಳಿತಗಾರರದು ಪರಿಭಾವಿಸಿದರು'[೨೦].

ಎನ್ನುತ್ತಾರೆ ಲೆವಿಸ್ಟ್ರಾಸ್. ಇಲ್ಲಿ ಅಧ್ಯಯನಕಾರ ಎನ್ನುವವನು ಅಧ್ಯಯನ ಮಾಡುವವರಿಂದ ಪ್ರಜ್ಞಾಪೂರ್ವಕವಾಗಿಯೇ ತನ್ನನ್ನು ಬೇರ್ಪಡಿಸಿಕೊಂಡಿದ್ದಾನೆ. ಈ ವಿಂಗಡನೆಯು ಆಳುವವರ ಮತ್ತು ಆಳಿಸಿಕೊಳ್ಳುವವರ ಸಂಬಂಧದ ಕಾರಣಕ್ಕಾಗಿ ಸಂಭವಿಸಿದೆ. ಇಲ್ಲಿ ವ್ಯಕ್ತಿಗಳು (ಅಧ್ಯಯನಕ್ಕೆ ಒಳಪಡುವವರು) ಇಲಿಗಳಾಗುವುದು, ಪ್ರಾಣಿಗಳಾಗುವುದು ಸಹಜ. ಏಕೆಂದರೆ ಅಧ್ಯಯನ ಮಾಡುವವನು ತನ್ನ ಅಧಿಕಾರದ ಕಾರಣಕ್ಕಾಗಿ ಮೇಲೆ ನಿಂತಿರುತ್ತಾನೆ. ಉಳಿದವರನ್ನು ಪ್ರಾಣಿಗಳು ಎಂಬಂತೆ ಪರಿಭಾವಿಸುತ್ತಾನೆ. 'ವಸಾಹತುಗಾರ ತನ್ನ ಆಡಳಿತವನ್ನು ಮತ್ತು ಅಧಿಕಾರದ ಮುಂದುವರಿಕೆಯನ್ನು ಸಸೂತ್ರಗೊಳಿಸಿಕೊಳ್ಳಲು ಆಳಿಸಿಕೊಳ್ಳುವವರನ್ನು ಪ್ರಾಣಿಗಳಂತೆ ನೋಡುವ ಅಭ್ಯಾಸವನ್ನು ರೂಢಿಸಿಕೊಳ್ಳುತ್ತಾನೆ. ಇದರ ಜೊತೆಗೆ ತನ್ನನ್ನು ತಾನೇ ಒಂದು ಪ್ರಾಣಿಯೆಂಬಂತೆ ಭಾವಿಸಿಕೊಳ್ಳುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳುತ್ತಾನೆ. ಹೀಗೆ ಪಶುವಾಗಿ ರೂಪಾಂತರಗೊಂಡ ತನ್ನ ಸ್ಥಿತಿಯನ್ನು ವಸಾಹತುಗಾರ ಜತನದಿಂದ ಕಾಪಾಡಿಕೊಂಡು ಬರುತ್ತಾನೆ..... ಆಫ್ರಿಕನ್ನರು, ಹಿಂದೂ ಮಹಾಸಾಗರದ ದ್ವೀಪವಾಸಿಗಳು ಅಥವಾ ಭಾರತೀಯರು ಸಂಹಾರಕ್ಕೊಳಪಡುವುದಕ್ಕಾಗಿಯೇ ಇದ್ದಾರೆ. ಇವರು ಒಬ್ಬರಾದ ನಂತರ ಒಬ್ಬರು ಪರಾಭವಕ್ಕೊಳಗಾದ ಜನ. ಯಾವ ಚೌಕಟ್ಟಿನಲ್ಲಿ ಯುರೋಪಿನ ನಾಗರೀಕತೆ ಮುಕ್ತವಾಗಿ ಬೆಳೆಯಿತೋ ಆ ಚೌಕಟ್ಟಿನ ಆಚೆಗೆ ಈ ಸೋತ ಜನ ಬದುಕುತ್ತಿದ್ದಾರೆ'[೧೫]. ಎನ್ನುತ್ತಾನೆ ಏಮಿ ಸಿಸಾರೆ. ಅಲ್ಜೀರಿಯಾದ ಸ್ವಾತಂತ್ರ್ಯ ಹೋರಾಟಗಾರರನ್ನು ಪ್ರಾಣಿಗಳಂತೆ ನಡೆಸಿಕೊಳ್ಳುತ್ತಿದ್ದ ಪೋಲೀಸರು ಮನೆಯಲ್ಲಿ ತಮ್ಮ ಹೆಂಡತಿ ಮಕ್ಕಳನ್ನು ಪ್ರಾಣಿಗಳಂತೆ ಬಡಿಯುತ್ತಿದ್ದರು ಎಂದು ಫ್ಯಾನನ್ ತಮ್ಮ The wretched of the Earth ಕೃತಿಯಲ್ಲಿ ವಿವರಿಸುತ್ತಾರೆ[೧೬].

ಈ ಕಾರಣದಿಂದ ಮಾನವಶಾಸ್ತ್ರದ ಅಧ್ಯಯನಗಳು ತಾವು ಅಧ್ಯಯನ ಮಾಡುವ ಸಮುದಾಯಗಳನ್ನು 'ವಸ್ತುಗಳು' 'ಆಕರಗಳು' ಎಂದೇ ಭಾವಿಸಿದವು. ಕಂಪನಿ ಆಡಳಿತದ ಸಂದರ್ಭದಲ್ಲಿ ಭಾರತದ ಜನಸಮುದಾಯಗಳ ಸಂಕ್ಷಿಪ್ತ ಇತಿಹಾಸ ಬರೆದ ಹಂಟರ್ 'ಭಾರತ ಹಲವು ಜನಾಂಗಗಳ ಒಂದು ವಸ್ತು ಸಂಗ್ರಹಾಲಯ. ಇಲ್ಲಿ ನಾವು ಮನುಷ್ಯನ ಕ್ಷುದ್ರ ಸಂಸ್ಕೃತಿಯ ಜೊತೆ ಜೊತೆಗೆ ಶ್ರೇಷ್ಠ ಸಂಸ್ಕೃತಿಯನ್ನೂ ಅಧ್ಯಯನ ಮಾಡಬಹುದಾಗಿದೆ. ಇಲ್ಲಿ ಅಧ್ಯಯನಕ್ಕೆ ಸಿಕ್ಕುವ ಆಕರಗಳು ಪಳಯುಳಿಕೆಗಳಲ್ಲ. ಒಣಗಿ ಹೋದ ಎಲುಬಿನ ಚೂರುಗಳಲ್ಲ, ಜೀವಂತ ಬುಡಕಟ್ಟುಗಳು. ಈ ಬುಡಕಟ್ಟುಗಳು ಅತ್ಯಂತ ಕುತೂಹಲಕರ ಆಚರಣೆ ಮತ್ತು ಧಾರ್ಮಿಕ ನಂಬಿಕೆಗಳನ್ನು ರೂಪಿಸಿಕೊಂಡು ಬದುಕುತ್ತಿವೆ'[೧೭]. ಎನ್ನುತ್ತಾನೆ. ಹಂಟರ್ ಮನುಷ್ಯನನ್ನು ಅಧ್ಯಯನಕ್ಕೆ ಒಳಗಾಗುವ 'ಆಕರ' ಎಂದು ಪರಿಗಣಿಸುತ್ತಾನೆ. ವಸಾಹತು ಸಂದರ್ಭದಲ್ಲಿ 'ಸಮುದಾಯಗಳನ್ನು ಮಾಹಿತಿ ನೀಡುವ ಆಕರಗಳನ್ನಾಗಿ ಮಾತ್ರ ನೋಡುವ ದೃಷ್ಟಿಕೋನ ರೂಪುಗೊಂಡಿತು. ಫೀಲ್ಡ್, ಫೀಲ್ಡ್‌ವರ್ಕ್, ಫೀಲ್ಡ್ ಮೆಟೀರಿಯಲ್ ಎಂಬ ಪರಿಭಾಷೆಗಳ ಹಿಂದಿರುವ ಅಮಾನುಷ ಮನೋಭಾವವನ್ನು ಗಮನಿಸಬೇಕು' ಎನ್ನುತ್ತಾರೆ ರಹಮತ್ ಅವರು[೧೮]. ಈ ಮೇಲಿನ ಉಲ್ಲೇಖಗಳಿಂದ ನಮಗೆ ತಿಳಿದು ಬರುವ ಸಂಗತಿಯೆಂದರೆ, ಪಶ್ಚಿಮದ ಮಾನವಶಾಸ್ತ್ರಜ್ಞರು ತಮ್ಮ ಆಳ್ವಿಕೆಗೊಳಪಟ್ಟ ಜನರನ್ನು ಸಾಮಾನ್ಯ ಅರ್ಥದಲ್ಲೂ ಮನುಷ್ಯರೆಂದು ಪರಿಭಾವಿಸಲು ಸಿದ್ಧರಿಲ್ಲ. ಸೋತ ಸಮುದಾಯಗಳು ಅನಾಗರಿಕವಾಗಿವೆ. ಅವು ಎತ್ನಿಕ್ ಹಂತದಲ್ಲಿರುವುದರಿಂದ ಇನ್ನೂ ವಿಕಾಸದ ಹಂತದಲ್ಲಿವೆ. ಅವು

ವಿಕಾಸವಾಗುವ ಮೊದಲೇ ಅವುಗಳನ್ನು ಅಧ್ಯಯನಕ್ಕೆ ಒಳಪಡಿಸಬೇಕು ಎಂದು ಮಾನವಶಾಸ್ತ್ರೀಯ ಅಧ್ಯಯನಗಳು ಪರಿಭಾವಿಸುತ್ತವೆ.

ಸೈದ್ಧಾಂತಿಕವಾಗಿ ಮನುಷ್ಯನನ್ನು 'ವಸ್ತುವೆಂದು' ಭಾವಿಸುವ ಮನಸ್ಥಿತಿಯು ತನ್ನನ್ನು ತಾನು ಶ್ರೇಷ್ಠವೆಂದೂ, ಅನ್ಯವೆಂದೂ ಭಾವಿಸುತ್ತದೆ. ಆಗ 'ನಾವು' ಎಂಬ ಆತ್ಮಪ್ರತ್ಯಯ ಮತ್ತು 'ಅವರು' ಎಂಬ ಹೀಗಳೆಯುವಿಕೆಗಳು ಸಹಜವಾಗಿಯೇ ಮೈದಾಳುತ್ತವೆ. ಯುರೋಪಿನ ಜನ ತಮ್ಮ ಅಧಿಕಾರಸ್ಥ ಸ್ಥಾನ ಮಾನಗಳಿಂದಾಗಿಯೇ ಅವರು ಆಳಿಸಿಕೊಳ್ಳುವ ಜನರಿಗಿಂತ 'ತಾವು' ಭಿನ್ನರೆಂದು ಪರಿಭಾವಿಸಿದರು. ಅಧಿಕಾರವು ಇಲ್ಲಿ ಮನುಷ್ಯನನ್ನು ನೋಡುವ ದೃಷ್ಟಿಕೋನವನ್ನು ನಿರ್ಣಾಯಕವಾಗಿ ರೂಪಿಸಿರುವುದು ಕಂಡುಬರುತ್ತದೆ. ಈವತ್ತೂ ಸಹ ಅಧ್ಯಯನಕಾರರು ಆದಿವಾಸಿಗಳನ್ನು ಅಧ್ಯಯನ ಮಾಡಲು ಹೋಗುವಾಗ, ಅಧ್ಯಯನಕ್ಕೊಳಪಡುವ ಆದಿವಾಸಿಗಳಿಗಿಂತ ತಾವು 'ಉತ್ತಮರು' ಮುಂದುವರಿದವರು ಎಂಬ 'ಅನ್ಯ' ಭಾವನೆಗಳನ್ನು ಜೀವಂತವಾಗಿರಿಸಿಕೊಂಡೇ ಹೋಗುತ್ತಾರೆ.

ಈ ಚರ್ಚೆಗೆ ಇನ್ನೊಂದು ಅಮಾನವೀಯ ಮುಖವೂ ಇದೆ. ಅದು ಅಧ್ಯಯನಕ್ಕೆ ಒಳಪಡುವ ಜನರ ತಿಳುವಳಿಕೆಯನ್ನು 'ಮಾಹಿತಿ' ಎಂದು ಪರಿಗಣಿಸುವುದು. 'ಹೊರಗಿನ' ವಿದ್ವಾಂಸರಿಗೆ ಅಧ್ಯಯನಕ್ಕೊಳಪಡುವ ಜನ ಸುಲಭವಾಗಿ ಮಾಹಿತಿಯನ್ನು ನೀಡುವುದಿಲ್ಲ. 'ಹೊರಗಿನ' ಜನರಿಗೆ ಮಾಹಿತಿ ಸಂಗ್ರಹಿಸುವುದು ಕಷ್ಟ ಎಂದು ಭಾವಿಸಲಾಗುತ್ತದೆ. ಅದಕ್ಕೆ ಲೀಚ್ ಅಧ್ಯಯನಕಾರನು ತಾನು ಅಧ್ಯಯನ ಮಾಡುವ ಜನರ ಜೊತೆ ಸ್ನೇಹದಿಂದ ಇರುವುದು ಒಳ್ಳೆಯದು. ಅಧ್ಯಯನಕ್ಕೊಳಪಡುವ ಸಮುದಾಯದ ಜನರ ವಿಶ್ವಾಸ ಗಳಿಸುವುದರಿಂದ ಅವರು ಯಥೇಚ್ಛವಾಗಿ ಮಾಹಿತಿ ನೀಡುವರು[೨೫] ಎನ್ನುತ್ತಾನೆ. ಎಂ.ಎನ್.ಶ್ರೀನಿವಾಸ್ ತಮ್ಮ 'The Insider versur the out sider in the study of cultures ಎಂಬ ಲೇಖನದಲ್ಲಿ ಮೈಸೂರಿನಲ್ಲಿ ತಾವು ವಾಸಿಸುತ್ತಿದ್ದ ಬ್ರಾಹ್ಮಣ ಅಗ್ರಹಾರದ ಪಕ್ಕದಲ್ಲಿಯೇ ಇದ್ದ ಕುರುಬರ ಬಂಡೀಕೇರಿಗೆ ಯಾವ ಬಗೆಯಲ್ಲಿ ತಾವು ಹೊರಗಿನವರಾಗಿದ್ದರು ಎಂಬುದನ್ನು ವಿವರಿಸುತ್ತಾರೆ. ಶ್ರೀನಿವಾಸ್ ಮುಂದುವರಿದು 'ಅಧ್ಯಯನಕಾರನೊಬ್ಬ 'ತನ್ನದಲ್ಲದ' ಸಮಾಜವನ್ನು ಅಧ್ಯಯನ ಮಾಡುವಾಗ ಕೈಗೊಳ್ಳುವ ಕ್ಷೇತ್ರಕಾರ್ಯಕ್ಕಿಂತ 'ತನ್ನದೆ' ಸಮುದಾಯವನ್ನು ಅಧ್ಯಯನಕ್ಕೊಳಪಡಿಸುವಾಗ ಮಾಡುವ ಕ್ಷೇತ್ರಕಾರ್ಯವು ಅತ್ಯಂತ ಕಷ್ಟಕರದ್ದು. ಕೆಲವೊಂದು ಕಡೆ ಅಧ್ಯಯನಕಾರನಿಗೆ ಅಧ್ಯಯನಕ್ಕೊಳಪಡುವ ಸಮುದಾಯುಗಳು ಅಧ್ಯಯನಕಾರನನ್ನು ಒಪ್ಪಿಕೊಳ್ಳಬಹುದು. ಆದರೆ ಹಲವು ಸಲ 'ತನ್ನದೇ' ಸಮಾಜವನ್ನು ಅಧ್ಯಯನ ಮಾಡುವ ಅಪರಿಚಿತನಿಗೆ ಅವನದೇ ಸಮಾಜವು ಉತ್ತೇಜನ ನೀಡಲಾರದು'[೨೬]. ಎನ್ನುತ್ತಾರೆ.

ಇಲ್ಲಿ ಮಾನವಶಾಸ್ತ್ರಜ್ಞನೊಬ್ಬ ತಾನು ಅಧ್ಯಯನ ಮಾಡುವ ಸಮುದಾಯವನ್ನು ಯಾವ ತಾತ್ವಿಕ ನೆಲೆಗಟ್ಟಿನಲ್ಲಿ ಗ್ರಹಿಸಿದ್ದಾನೆ? ಯಾಕಾಗಿ ಆ ಸಮುದಾಯವನ್ನು ಅಧ್ಯಯನ ಮಾಡುತ್ತಿದ್ದಾನೆ? ಹೇಗೆ ಅಧ್ಯಯನ ಮಾಡುತ್ತಿದ್ದಾನೆ? ಎಂಬ ಪ್ರಶ್ನೆಗಳು ಮುಖ್ಯವಾಗುತ್ತವೆ. ತನ್ನ ಅಧಿಕಾರಸ್ಥ ಸ್ಥಾನಮಾನಗಳಿಂದ ಮೇಲೆ ನಿಂತು ನೋಡುವ ಪ್ರವೃತ್ತಿಯು ಅಧ್ಯಯನಕಾರನನ್ನು ಸಹಜವಾಗಿಯೇ 'ಅನ್ಯ'ವಾಗಿಸುತ್ತದೆ ಎಂಬುದನ್ನು ಈಗಾಗಲೇ ನಾವು ನೋಡಿದ್ದೇವೆ. ಜೊತೆಗೆ ತಾನು ಅಧ್ಯಯನ ಮಾಡುವ ಸಮುದಾಯವನ್ನು

ಪದಾರ್ಥದ (ಸಾಮಾಗ್ರಿ, ಆಕರ) ಮಟ್ಟಕ್ಕೆ ಇಳಿಸುವುದು ಮತ್ತು ಅಧ್ಯಯನಕ್ಕೆ ಒಳಗಾಗುವ ಸಮುದಾಯವು ಒಂದು ತಿಳುವಳಿಕೆಯ ಜಗತ್ತನ್ನು ಕಟ್ಟಿಕೊಂಡು ಬಂದಿದೆ ಎಂಬುದನ್ನೇ ನಿರ್ಲಕ್ಷಿಸುವುದನ್ನು ಗಮನಿಸಿದ್ದೇವೆ. ಇದನ್ನು ಫೆಲಿಕ್ಸ್ ಪೆಡೆಲ್ ಹೀಗೆ ವಿವರಿಸುತ್ತಾರೆ. ‘ಅಧ್ಯಯನಕ್ಕೆ ಒಳಪಡುವ’ ಸಮುದಾಯಗಳ ವರ್ತಮಾನದ ಸ್ಥಿತಿಗೂ ಮತ್ತು ಮಾನವಶಾಸ್ತ್ರದ ಅಕಾಡೆಮಿಕ್ ಚರ್ಚೆಗಳಿಗೂ ಮಧ್ಯೆ ಒಂದು ದೊಡ್ಡ ಕಂದರ ಏರ್ಪಟ್ಟಿದೆ. ಈ ಚರ್ಚೆಗಳು ಸಮುದಾಯಗಳಿಂದ (ಆದಿವಾಸಿಗಳಿಂದ) ಏನನ್ನೂ ಕಲಿಯ ಬಯಸುವುದಿಲ್ಲ. ಬದಲಿಗೆ ಅವರನ್ನು ‘ಮಾಹಿತಿದಾರರೆಂದು’ ಮಾತ್ರ ಪರಿಗಣಿಸುತ್ತವೆ. ಅವರಿಂದ ಪಡೆದುಕೊಂಡದ್ದನ್ನು ‘ಜ್ಞಾನ’ ಎಂದು ಈ ಚರ್ಚೆಗಳು ಪರಿಗಣಿಸುವುದಿಲ್ಲ. ಅಬ್ಜಕ್ಟಿವಿಟಿಯ ಪ್ರಶ್ನೆಯನ್ನೇ ಮುಂದು ಮಾಡಿಕೊಂಡ ವಸಾಹತುಶಾಹಿ ಮಾನವಶಾಸ್ತ್ರವು ಅಧ್ಯಯನಕ್ಕೊಳಪಡುವ ಸಮುದಾಯಗಳನ್ನು ಯಾವತ್ತೂ ನಕಾರಾತ್ಮಕವಾಗಿ ಚಿತ್ರಿಸುತ್ತಾ ಬಂದಿದೆ’[೨೬]. ಈ ನಕಾರಾತ್ಮಕತೆಯು ಯಾವತ್ತೂ ಮಾನವಶಾಸ್ತ್ರಜ್ಞರನ್ನು ‘ಒಳಗಿನವರಾಗಲು’ ಬಿಡುವುದಿಲ್ಲ. ಅದಕ್ಕೇ ‘ಈ ಮಾನವಶಾಸ್ತ್ರಜ್ಞರು ಯಾವತ್ತೂ ಸಮುದಾಯಗಳ ಸಮಾಜದ ಭಾಗವಾಗದೆ ಹೊರಗೇ ನಿಂತುಬಿಟ್ಟರು’[೨೭].

‘ಒಳಗಿನವರಾಗುವೆಂದರೆ’ ಕೇವಲ ‘ಮಾಹಿತಿ’ ಪಡೆಯುವ ಉದ್ದೇಶದಿಂದ ಸಮುದಾಯಗಳ ಜೊತೆ ಆತ್ಮೀಯತೆಯನ್ನು ನಟಿಸುವುದಲ್ಲ. ಸಮುದಾಯಗಳನ್ನು ಕರುಣೆಯಿಂದ ನೋಡುವುದಲ್ಲ. ಬದಲಿಗೆ ಸಮುದಾಯಗಳ ಅಂತಸ್ಥ ಜಗತ್ತಿನ ಭಾಗವಾಗಿ ಬೆರೆತು ಹೋಗುವುದು. ಆದರೆ ಇಲ್ಲಿಯವರೆಗೆ ನಡೆದ ಸಾಮಾಜಿಕ ಅಧ್ಯಯನಗಳಲ್ಲಿ ‘ಒಳಗಿನವರಾಗುವ’ ಚರ್ಚೆಯು ಕೇವಲ ಶುದ್ಧ ಶೈಕ್ಷಣಿಕ ಬಿಕ್ಕಟ್ಟಾಗಿ ಮಾತ್ರ ಪ್ರಚಲಿತದಲ್ಲಿರುವುದು ಕಂಡುಬರುತ್ತದೆ. ಎಡ್ಮಂಡ್ ಲೀಚ್, ರಾಬರ್ಟ್ ಮಾರ್ಟನ್, ಮಲಿನೋವಸ್ಕಿ ಮತ್ತು ಎಂ.ಎನ್.ಶ್ರೀನಿವಾಸ್‌ರಂತಹ ಮಾನವಶಾಸ್ತ್ರಜ್ಞರು ‘ಒಳಗಿನವರಾಗುವು’ದೆಂದರೆ ಸಮುದಾಯಗಳಿಂದ ‘ಮಾಹಿತಿ’ ಪಡೆಯುವ ಸಲುವಾಗಿ ನಟಿಸುವುದೆಂದೇ ಭಾವಿಸಿದಂತಿದೆ. ಅಧ್ಯಯನಕಾರ ನಿರ್ಭಾವುಕವಾಗಿ ಮತ್ತು ಯಾಂತ್ರಿಕವಾಗಿ ತಾನು ಅಧ್ಯಯನ ಮಾಡುವ ಸಮುದಾಯದ ಜೊತೆ ಸಂಬಂಧವಿರಿಸಿಕೊಂಡರೆ ಸಾಕು. ಅದು ‘ಮಾಹಿತಿ’ ಪಡೆಯುವ ಸಲುವಾಗಿ ನಟಿಸುವ ಯಾಂತ್ರಿಕ ಸಂಬಂಧವಾಗಿರಬೇಕು ಎಂಬ ತೀರ್ಮಾನಗಳಿಗೆ ಈ ಅಧ್ಯಯನಕಾರರು ಬರುತ್ತಾರೆ. ಅಧ್ಯಯನಕಾರನಿಗೆ ಈ ಬಗೆಯ ಪ್ರವೃತ್ತಿ ಮೈಗೂಡುವುದು ಒಂದು ಅಮಾನವೀಯ ಸಾಮ್ರಾಜ್ಯಶಾಹಿ ನಿಲುವುಗಳಿಂದ ಮಾತ್ರ. ಮಂಗಳ ಗ್ರಹದಲ್ಲಿ ನೀರು ಇದೆಯೋ ಇಲ್ಲವೋ ಎಂಬ ಸಂಶೋಧನೆ, ಚಂದ್ರನ ಮೇಲೆ ಮನುಷ್ಯ ನಡೆದಾಡಲೆಂದು ನಡೆಸುವ ಸಂಶೋಧನೆಗಳು ಹೀಗೆ ನಿರ್ಭಾವುಕ ನೆಲೆಯಲ್ಲಿ ನಡೆಯಬಹುದು. ಆದರೆ ಸರಕಾರದ ಯಾವುದೋ ಬೃಹತ್ ಯೋಜನೆಯಿಂದ ನಿರಾಶ್ರಿತರಾದ, ಪರಿಹಾರಗಳಿಂದ ವಂಚಿತರಾದ ಜನರನ್ನು ಅಧ್ಯಯನ ಮಾಡುವಾಗ ಮಂಗಳ ಗ್ರಹವನ್ನು ಅಧ್ಯಯನ ಮಾಡಿದಂತೆ ಮಾಡಲಾಗುವುದಿಲ್ಲ. ಸಂಶೋಧನೆಗೆ ಮಂಗಳ ಗ್ರಹವು ಪ್ರತಿಕ್ರಿಯಿಸುವುದಿಲ್ಲ. ಅದೊಂದು ನಿರ್ಜೀವ ಗ್ರಹ. ಆದರೆ ಸಮುದಾಯಗಳು ಜೀವಂತವಾಗಿರುತ್ತವೆ. ಒಂದು ದೇಶದ ಪ್ರಭುತ್ವದ ಜೊತೆ, ದಬ್ಬಾಳಿಕೆಯ ಜೊತೆ ಸಮುದಾಯಗಳು ಮುಖಾಮುಖಿಯಾಗುತ್ತಿರುತ್ತವೆ. ಒಪ್ಪತ್ತಿನ ಊಟಕ್ಕಾಗಿ ವರ್ತಮಾನದ ಜೊತೆ ರಕ್ತವನ್ನು ಬೆವರಾಗಿಸುವ ಸಮುದಾಯಗಳನ್ನು ಮಂಗಳ

ಗ್ರಹದಂತದೆ ನಿರ್ಭಾವುಕವಾಗಿ ಅಧ್ಯಯನ ಮಾಡಲಾಗುವುದಿಲ್ಲ. ಜೊತೆಗೆ ಅಧ್ಯಯನಗಳು ಅದರಲ್ಲೂ ಸಮಾಜ ವಿಜ್ಞಾನಗಳ ಕ್ಷೇತ್ರದಲ್ಲಿ ನಡೆಯುವ ಅಧ್ಯಯನಗಳು ಮಂಗಳ ಗ್ರಹವನ್ನು ಆವರಿಸಿರುವ ನಿರ್ವಾತದಲ್ಲಿ ನಡೆಯುವುದಿಲ್ಲ. ಬದಲಿಗೆ ಒಂದು ದೇಶದ ರಾಜಕಾರಣದ ಮಧ್ಯೆ ನಡೆಯುತ್ತವೆ. ಜೀವಂತ ಮನುಷ್ಯನ ದುಃಖ ದುಮ್ಮಾನಗಳ ಮಧ್ಯೆ, ಶೋಷಣೆ, ದುಡಿಮೆ ಮತ್ತು ದಬ್ಬಾಳಿಕೆ ಇತ್ಯಾದಿ ಸಂಗತಿಗಳ ನಡುವೆ ನಡೆಯುತ್ತದೆ. ಆಗ ಅಧ್ಯಯನಕಾರ ಅಭಿಜಾತ ಮಾನವಶಾಸ್ತ್ರದ ಅಧ್ಯಯನ ವಿಧಾನವನ್ನೇ ಅನುಸರಿಸಿದರೆ ಯಾಂತ್ರಿಕ ಆತ್ಮೀಯತೆಯನ್ನು ಪ್ರದರ್ಶಿಸುತ್ತ ಕೇವಲ 'ಮಾಹಿತಿ' ಪಡೆಯುವ ಗ್ರಾಮಲೆಕ್ಕಿಗನಂತೆ ರೂಪಾಂತರಗೊಳ್ಳುತ್ತಾನೆ. ಪಡೆದ 'ಮಾಹಿತಿ'ಯನ್ನು ಪ್ರಭುತ್ವಕ್ಕೆ ಮೆಚ್ಚಿಗೆಯಾಗುವ ರೀತಿಯಲ್ಲಿ ಮರುಮಂಡಿಸುತ್ತಾನೆ. ಅವನು ರಾಜಕೀಯವಾಗಿ ತಾನು ಅಧ್ಯಯನ ಮಾಡುವ ಸಮುದಾಯದ ಅಂತಸ್ಥ ಜಗತ್ತಿನ ಜೊತೆ ಬೆರೆತು ಹೋಗಲಾರ. ಅವನು ಬೌದ್ಧಿಕವಾಗಿ, ರಾಜಕೀಯವಾಗಿ, ಯಾವತ್ತೂ ಅಧ್ಯಯನಕ್ಕೆ ಒಳಪಟ್ಟ ಸಮುದಾಯದ 'ಹೊರಗಿನವನಾಗಿಯೇ' ಉಳಿಯುತ್ತಾನೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಟ್ಟು ಮುಂದುವರೆಯುವುದು ಒಳ್ಳೆಯದು.

ಕನ್ನಡದ ಹಿರಿಯ ಸಂಶೋಧಕರಲ್ಲಿ ಒಬ್ಬರಾದ ಡಾ.ಚಿದಾನಂದಮೂರ್ತಿಗಳ ಪುಸ್ತಕ 'ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ' ತುಂಬಾ ಪ್ರಸಿದ್ಧವಾದದ್ದು. ಆ ಪುಸ್ತಕ ರಚನೆಗೊಂಡ ಕಾಲಘಟ್ಟದಲ್ಲಿ (೧೯೮೫) ಅದೊಂದು 'ಕ್ರಾಂತಿಕಾರಿ' ಕೃತಿಯಾಗಿಯೂ ಪರಿಗಣಿಸಲ್ಪಟ್ಟಿತ್ತು. ಈ ಪುಸ್ತಕವು ಧಾರವಾಡ ವಿಶ್ವವಿದ್ಯಾಲಯದ ಪ್ರಸಾರಾಂಗವು ಏರ್ಪಡಿಸಿದ್ದ ಚಿದಾನಂದಮೂರ್ತಿಗಳ ಸರಣಿ ಉಪನ್ಯಾಸಗಳ ಸಂಕಲನವಾಗಿದೆ. ಚಿದಾನಂದಮೂರ್ತಿಯವರು ಈ 'ಅಸ್ಪೃಶ್ಯತೆಯ ಪರಿಕಲ್ಪನೆಯ' ಮೇಲೆ ಯಾಕಾಗಿ ಉಪನ್ಯಾಸ ನೀಡಲು ಬಯಸಿದರು ಎಂದು ತಮ್ಮ ಪುಸ್ತಕದ ಮುನ್ನುಡಿಯಲ್ಲಿ ಹೀಗೆ ವಿವರಿಸಿದ್ದಾರೆ. 'ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗದ ನಿರ್ದೇಶಕರಾದ ಶ್ರೀ ಚನ್ನವೀರ ಕಣವಿಯವರಿಂದ ಮೂರು ವಿಶೇಷ ಉಪನ್ಯಾಸಗಳನ್ನು ಕೊಡಲು ಆಹ್ವಾನ ಬಂದಾಗ ನನ್ನ ಮನಸ್ಸಿನ ತುಂಬ ದೇಶದಲ್ಲಿ ಅಲ್ಲಲ್ಲಿ ನಡೆಯುತ್ತಿದ್ದ ಮತಾಂತರದ ವಿಷಯವೇ ತುಂಬಿಕೊಂಡಿದ್ದು ಯಾವುದೋ ಒಂದು ನಿಗೂಢವಾದ ವ್ಯಾಕುಲವನ್ನು ತೀವ್ರವಾಗಿ ಅನುಭವಿಸುತ್ತಿದ್ದೆ. ಈ ಉಪನ್ಯಾಸಗಳಿಗೆ ಮೊದಲು ಬೇರೊಂದು ವಿಷಯವನ್ನು ಆಯ್ಕೆ ಮಾಡಿಕೊಂಡು ಕೆಲಸವನ್ನು ಆರಂಭಿಸಿ, ಅದರಲ್ಲಿ ತಕ್ಕಮಟ್ಟಿಗೆ ಮುಂದುವರೆದು, ಸದ್ಯದ ಸಾಮಾಜಿಕ ಪರಿಸ್ಥಿತಿಗೆ ಹೆಚ್ಚು ಪ್ರಸ್ತುತವೆನ್ನಿಸಬಹುದಾದ ಮೇಲಿನ ವಿಷಯವನ್ನು ಅಂತಿಮವಾಗಿ ಆಯ್ಕೆ ಮಾಡಿಕೊಂಡೆ'[೧೯]. ಎನ್ನುತ್ತಾರೆ. ಸದರಿ ಪುಸ್ತಕವು ಮಧ್ಯಕಾಲೀನ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಕುರಿತು ಇರುವ ಉಲ್ಲೇಖಗಳನ್ನು ಇಟ್ಟುಕೊಂಡು, ಅಸ್ಪೃಶ್ಯ ಸಮಾಜದ ಚಿತ್ರಣವನ್ನು ಕಟ್ಟಿಕೊಡುತ್ತದೆ. ಜೊತೆಗೆ ಇಂತಹ ಕಾಲಘಟ್ಟದಲ್ಲಿ ಅಸ್ಪೃಶ್ಯರು ಹೀಗೆ... ಹೀಗೆ ಇದ್ದರು ಎಂದು ವೈಭವೀಕರಿಸುತ್ತದೆ. ಜೊತೆಗೆ ಕಾಲ ಕೂಡಿ ಬಂದಾಗ ಅಸ್ಪೃಶ್ಯತೆ ತಾನೇ ತಾನಾಗಿ ನಾಶವಾಗುತ್ತದೆ[೨೦] ಎಂಬ ವಾದವನ್ನೂ ಮುಂದಿಡುತ್ತದೆ.

ಈ ಪುಸ್ತಕದಲ್ಲಿ ಕರ್ನಾಟಕದ ಸಾಮಾಜಿಕ ಚರಿತ್ರೆಯಲ್ಲಿನ ಅಸ್ಪೃಶ್ಯರ ಕುರಿತ ಭಾಗಶಃ ಮಾಹಿತಿಗಳಿವೆ. ಭಾರತದ ಸಮಾಜದಲ್ಲಿ ಅವರಿಗೆ ಪ್ರಾಪ್ತವಾಗಿದ್ದ ಸ್ಥಾನಮಾನ, ಆರ್ಥಿಕ ಸ್ಥಿತಿಗತಿಯ ಕುರಿತ ವಿವರಗಳೂ

ಇವೆ. ಚರಿತ್ರೆಯಲ್ಲಿ ಅಸ್ಪೃಶ್ಯರು ಇದ್ದರು, ಆದರೆ ಈಗ ಅವರ ಸ್ಥಿತಿ ಚೆನ್ನಾಗಿಲ್ಲ. ಆದರೆ ಅವರು ಈ ಕಾರಣದಿಂದಾಗಿ ಮತಾಂತರಗೊಂಡು ಬೇರೆ ಧರ್ಮಕ್ಕೆ ಹೋಗುವುದು ಸರಿ ಅಲ್ಲ. ಕಾಲ ಬಂದಾಗ ಅಸ್ಪೃಶ್ಯತೆ ತಾನೇ ತಾನಾಗಿ ಹೋಗುತ್ತದೆ. ಈ ಕಾರಣದಿಂದ ಅಸ್ಪೃಶ್ಯರು ಹಿಂದೂ ಧರ್ಮದ ಜೊತೆಗೆ ಹೊಂದಾಣಿಕೆ ಮಾಡಿಕೊಂಡು ಹೋಗಬೇಕು ಎಂಬ ಚಿದಾನಂದಮೂರ್ತಿಗಳ ನಿಲುವು ತಣ್ಣಗೆ ಪುಸ್ತಕದುದ್ದಕ್ಕೂ ಪ್ರಕಟವಾಗಿದೆ. ಯಾವುದೋ ಕಾಲದಲ್ಲಿ ಒಂದು ಸಾಂಸ್ಕೃತಿಕ ಆವರಣಕ್ಕೆ ಸೀಮಿತವಾಗಿದ್ದ ಅಸ್ಪೃಶ್ಯರ ತೋರಿಕೆಯ ಗಣ್ಯತೆಯನ್ನು ಪ್ರಧಾನವಾಗಿಟ್ಟುಕೊಂಡು ಅವರನ್ನು ಹಿಂದೂ ಧರ್ಮದ ಚೌಕಟ್ಟಿನೊಳಗೆ ಬಂಧಿಸಿಡುವ ಹುನ್ನಾರಗಳು ಈ ಕೃತಿಯಲ್ಲಿ ಪ್ರಕಟವಾಗುತ್ತವೆ. ಸಾಲದ್ದಕ್ಕೆ ವಚನ ಚಳುವಳಿಯ ಸಂದರ್ಭದಲ್ಲಿ ಬಸವಾದಿ ಪ್ರಮಥರು ಮಾಡಿದ ದಲಿತೋದ್ಧಾರದ ಉಲ್ಲೇಖಗಳೂ ಇಲ್ಲಿ ಧಾರಾಳವಾಗಿ ಲಭ್ಯವಾಗುತ್ತವೆ. ಒಂದು ಸಮುದಾಯಕ್ಕೆ ಚರಿತ್ರೆಯಲ್ಲಿ ಲಭ್ಯವಾಗಿದ್ದಿರಬಹುದಾದ ತೋರಿಕೆಯ ಗಣ್ಯತೆಯು ವರ್ತಮಾನದಲ್ಲಿ ಅದರ ಹಸಿವೆಯನ್ನು ನೀಗಿಸಲಾರದು. ಇದನ್ನು ಫ್ರಾಂಜ್ ಫ್ಯಾನನ್ ಅವರ ಮಾತುಗಳಲ್ಲಿ ಹೇಳುವುದಾದರೆ 'ಹದಿನೈದನೆಯ ಶತಮಾನದಲ್ಲಿ ಒಂದು ಭವ್ಯ ನಿಗ್ರೋ ಸಂಸ್ಕೃತಿ ಅಸ್ತಿತ್ವದಲ್ಲಿತ್ತು ಎಂಬ ಅನ್ವೇಷಣೆ ನನಗೆ ಮಾನವತೆಯ ಮೇಲೆ ಯಾವುದೇ ಬಗೆಯ ಹೆಚ್ಚಿನ ಅಧಿಕಾರವನ್ನು ವರ್ತಮಾನದಲ್ಲಿ ಕೊಡುವುದಿಲ್ಲ. ಇದನ್ನು ನೀವು ಒಪ್ಪಿ ಅಥವಾ ಬಿಡಿ. ವರ್ತಮಾನದ ಈ ಕ್ಷಣದಲ್ಲಿ ನನಗೆ ನನ್ನ ಗತ ಯಾವುದೇ ಬಗೆಯ ಮಾರ್ಗದರ್ಶನವನ್ನೂ ಕೊಡಲಾರದು'[೨]. ಹಿಂದೂ ಧರ್ಮದ ಒಳಗೆ ಅನೇಕ ಕಾರಣಗಳಿಗಾಗಿ ಸಾಮಾಜಿಕಾರ್ಥಿಕ ಅಧಿಕಾರಗಳಿಲ್ಲದ ಅಸ್ಪೃಶ್ಯರಿಗೆ ತೋರಿಕೆಯ ಗಣ್ಯತೆಯು ಲಭ್ಯವಾಗಿದೆ. ಆದರೆ ಗಣ್ಯತೆಯು ತೀರಾ ಸಾಂಕೇತಿಕವಾಗಿದ್ದು, ಅದು ಒಂದು ನಿಶ್ಚಿತ ಆಧ್ಯಾತ್ಮಿಕ ಆವರಣದೊಳಗೆ ಸಂಭವಿಸಿ ಮರೆಯಾಗಿಬಿಡುತ್ತದೆ. ಈ ಬಗೆಯ ಸಾಹಿತ್ಯಿಕ ಉಲ್ಲೇಖಗಳನ್ನು ಇಟ್ಟುಕೊಂಡು ಚಿದಾನಂದಮೂರ್ತಿಯವರು ಅಸ್ಪೃಶ್ಯತೆಯ ಕುರಿತು ಮಾತಾಡುತ್ತಾರೆ. ಈವತ್ತಿನ ಚಿದಾನಂದಮೂರ್ತಿಯವರ ರಾಜಕೀಯ ನಿಲುವುಗಳನ್ನು ಗಮನಸಿದರೆ ಅವರು ಸಮುದಾಯಗಳ 'ಒಳಗಿನವರೋ' ಅಥವಾ 'ಹೊರಗಿನವರೋ' ಎಂಬುದನ್ನು ಸುಲಭವಾಗಿಯೇ ನಿರ್ಧರಿಸಬಹುದು.

ಬ್ರಾಹ್ಮಣರ ಅಗ್ರಹಾರದಲ್ಲಿದ್ದ ಎಂ.ಎನ್.ಶ್ರೀನಿವಾಸ್ ಪಕ್ಕದಲ್ಲೇ ಇದ್ದ ಕುರುಬರ ಬಂಡೀಕೇರಿಗೆ ಹೊರಗಿನವರಾಗಿದ್ದರು. ಮನುಷ್ಯನೊಬ್ಬ 'ಅನ್ಯನಾಗುವುದು' ಹೊರಗಿನವನಾಗುವುದು ಕೇವಲ ಕೇರಿಯಿಂದ ಕೇರಿಗೆ ಹೋದಾಗ ಮಾತ್ರವಲ್ಲ. ಪಕ್ಕದ ಮನೆಗೆ ಹೋದಾಗಲೂ ವ್ಯಕ್ತಿಯೊಬ್ಬ ಆ ಮನೆಯ ಒಟ್ಟಾರೆಯ ಸಂದರ್ಭದಲ್ಲಿ ಹೊರಗಿನವನೇ ಆಗಿರುತ್ತಾನೆ. ಆದರೆ ಒಳಗಿನವರಾಗುವುದೆಂದರೇನು? ಒಳಗಿನವರಾಗುವುದೆಂದರೆ ಕೇವಲ ಮಾಹಿತಿ ಪಡೆಯಲು ಛದ್ಮ ವೇಷ ಹಾಕಿಕೊಂಡು ನಟಿಸುವುದಲ್ಲ. ಇದೊಂದು ಶೈಕ್ಷಣಿಕ ವಿಧಾನದ ಪ್ರಶ್ನೆಯೂ ಅಲ್ಲ. ಇದು ರಾಜಕೀಯ ಸಿದ್ಧಾಂತದ ಪ್ರಶ್ನೆ. ಯಾವ ರಾಜಕಾರಣದ ಭಾಗವಾಗಿ ನಾವು ಸಮುದಾಯಗಳನ್ನು ಅಧ್ಯಯನ ಮಾಡಲು ತೊಡಗುತ್ತಿದ್ದೇವೆ? ಯಾಕಾಗಿ ನಾವು ಈ ಸಮುದಾಯಗಳನ್ನು ಅಧ್ಯಯನ ಮಾಡಬೇಕು? ಎಂಬ ಪ್ರಶ್ನೆಗಳನ್ನು ಮುಖ್ಯವಾಗಿಟ್ಟುಕೊಂಡು ಅಧ್ಯಯನಕ್ಕೊಳಪಡುವ ಸಮುದಾಯಗಳ ಪರವಾದ ಆಶಯಗಳ ಭಾಗವಾಗಿ ಬಿಡುವುದು ಈ 'ಹೊರಗಿನ'

ಮತ್ತು 'ಒಳಗಿನ' ಎಂಬ ಶುಷ್ಕ ಬಿಕ್ಕಟ್ಟನ್ನು ನಿವಾರಿಸಬಲ್ಲದು. ಚಿದಾನಂದಮೂರ್ತಿಯವರು ತಾವು ನಂಬುವ ಮತ್ತು ಶೈಕ್ಷಣಿಕವಾಗಿ ಅದನ್ನು ಅನುಸರಿಸುವ ಕಾರಣದಿಂದ ಅವರು ಅಸ್ಪೃಶ್ಯ ಸಮುದಾಯಗಳ 'ಹೊರಗಿನವರೋ' ಅಥವಾ 'ಒಳಗಿನವರೋ' ಎಂಬುದನ್ನು ಸುಲಭವಾಗಿ ನಿರ್ಧರಿಸಬಹುದಾಗಿದೆ. ಅಸ್ಪೃಶ್ಯರು ಮತಾಂತರಗೊಂಡುಬಿಟ್ಟರೆ ಹಿಂದೂಧರ್ಮದ ಗತಿ ಏನು ಆಗಬಹುದು ಎಂದು ವ್ಯಾಕುಲಗೊಳ್ಳುವ ಸಂಶೋಧಕನೊಬ್ಬ ಅಸ್ಪೃಶ್ಯ ಸಮುದಾಯಗಳ ದುಮ್ಮಾನಗಳ ಭಾಗವಾಗಲು ಸಾಧ್ಯವಿಲ್ಲ. ಜೊತೆಗೆ ಅವನು 'ಒಳಗಿನವನಾಗಲೂ' ಆಗುವುದಿಲ್ಲ.

ರಾಬರ್ಟ್ ಮಾರ್ಟನ್, ಎಡ್ಮಂಡ್ ಲೀಚ್ ಮತ್ತು ಎಂ.ಎನ್.ಶ್ರೀನಿವಾಸ್ ಅವರು ಅದೇ ಸಮುದಾಯದಲ್ಲಿ ಹುಟ್ಟಿದ ವ್ಯಕ್ತಿಯೊಬ್ಬ ಅವನದೇ ಸಮುದಾಯವನ್ನು ಅಧ್ಯಯನ ಮಾಡುವುದು ಕಷ್ಟ. ಆದರೆ ಹೀಗೆ ತನ್ನದೇ ಸಮುದಾಯವನ್ನು ಅಧ್ಯಯನ ಮಾಡುವುದರಿಂದ ಸುಲಭವಾಗಿ 'ಮಾಹಿತಿಗಳನ್ನು' ಪಡೆಯಬಹುದು ಮತ್ತು ಅವನು ಸಹಜವಾಗಿಯೇ 'ಒಳಗಿನವನಾಗಿರುತ್ತಾನೆ' ಎಂಬ ತೀರ್ಮಾನಕ್ಕೆ ಬರುತ್ತಾರೆ. ಆದರೆ ಅದೇ ಸಮುದಾಯದ ವ್ಯಕ್ತಿ ತನ್ನದೇ ಸಮುದಾಯವನ್ನು ಅಧ್ಯಯನ ಮಾಡುವಾಗ ಸುಲಭವಾಗಿ ಮಾಹಿತಿಗಳನ್ನು ಪಡೆಯಬಹುದು. ಆದರೆ ಅವನು 'ಒಳಗಿನವನಾಗಿರುತ್ತಾನೆ' ಎಂದು ಸರಳವಾಗಿ ತೀರ್ಮಾನಿಸಲು ಬರುವುದಿಲ್ಲ. ತನ್ನದೇ ಸಮುದಾಯವನ್ನು ಅಧ್ಯಯನ ಮಾಡುವವನು ಯುರೋಪಿನ ಅಭಿಜಾತ ಶೈಕ್ಷಣಿಕ ವಿಧಾನವನ್ನು ಅನುಸರಿಸಿದಲ್ಲಿ ಅವನು ಯುರೋಪಿನ ವಿದ್ವಾಂಸರು ಬರುವ ತೀರ್ಮಾನಗಳಿಗೆ ಪೂರಕವಾಗಿಯೇ ಇರುತ್ತಾನೆ. ಅದಕ್ಕೊಂದು ಉದಾಹರಣೆಯನ್ನು ನೀಡಬಹುದಾಗಿದೆ. ಡಾ.ಎಂ.ಕೃಷ್ಣಮೂರ್ತಿ ಎನ್ನುವವರು Crimes and customs among the Lambanis in Chitradurga District ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. 'ಚಿತ್ರದುರ್ಗ ಜಿಲ್ಲೆಯ ಲಂಬಾಣಿಗಳ ಅಪರಾಧಗಳನ್ನು ಮತ್ತು ಸಂಪ್ರದಾಯಗಳನ್ನು ವಿವರಿಸುವುದು ಈ ಅಧ್ಯಯನದ ಉದ್ದೇಶ[೨೨]. ಎಂದು ಸದರಿ ಲೇಖಕರು ಹೇಳಿಕೊಂಡಿದ್ದಾರೆ. ೧೯೮೯ ರಿಂದ ೧೯೯೦ ರ ಅವಧಿಯಲ್ಲಿ ಇವರು ತಮ್ಮ ಅಧ್ಯಯನದ ಸಲುವಾಗಿ ಜಿಲ್ಲೆಯಲ್ಲಿ ಕ್ಷೇತ್ರಕಾರ್ಯ ಮಾಡಿದ್ದಾರೆ[೨೩]. ಸದರಿ ಪುಸ್ತಕದ ಅರ್ಧಭಾಗದಲ್ಲಿ ಲಂಬಾಣಿಗಳ ಉಡುಗೆ, ತೊಡುಗೆ, ಆಹಾರ ಕ್ರಮ, ಕುಡಿತ, ವ್ಯಾಪಾರ ಮುಂತಾದ ಸಾಮಾನ್ಯ ಸಂಗತಿಗಳ ವಿವರಣೆಗಳಿದ್ದರೆ, ಉಳಿದರ್ಧ ಭಾಗದಲ್ಲಿ ಲಂಬಾಣಿಗಳ 'ಅಪರಾಧೀ ಕೃತ್ಯಗಳ' ಸುದೀರ್ಘ ಬರವಣಿಗೆ ಇದೆ. ಲೇಖಕರು ಪುಸ್ತಕದುದ್ದಕ್ಕೂ ಲಂಬಾಣಿಗಳ 'ಅಪರಾಧಿ ಚಟುವಟಿಕೆಗಳನ್ನು' 'ಮನಮುಟ್ಟುವಂತೆ', ಅಂಕಿ ಅಂಶಗಳ ಜೊತೆಗೆ, ತಾವು ತೆಗೆದ ಅದ್ಭುತ ಫೋಟೋಗಳನ್ನು 'ಮನಮೋಹಕವಾಗಿ' ಮುದ್ರಿಸಿದ್ದಾರೆ. ಸದರಿ ಪುಸ್ತಕದ ಕೆಲವು ಉಲ್ಲೇಖಗಳನ್ನು ನೋಡುವ.

> 'ಭಾರತದ ಬಹಳ ಮುಖ್ಯ ಸಮಸ್ಯೆ ಎಂದರೆ ಎಲ್ಲರೂ ಗುರುತಿಸಿರುವಂತೆ ಜನಸಂಖ್ಯೆ. ಇದರ ಜೊತೆಗೆ ಅಪರಾಧವೂ ಸಹ ಒಂದು. ಇದೊಂದು ಮುಖ್ಯ ವ್ಯವಹಾರವಾಗಿ ಅನೇಕರಿಗೆ ಸಮಾಜ ಬಾಹಿರ ಮತ್ತು ಅನ್ಯಾಯದ ಮಾರ್ಗಗಳ ಮೂಲಕ ಹಣಗಳಿಸುವ ಮೂಲವೂ ಆಗಿದೆ. ಆದರೆ ಕೆಲವು ಬುಡಕಟ್ಟುಗಳು ಮಾತ್ರ ಈ ಅನ್ಯಾಯದ ಮಾರ್ಗದಲ್ಲಿ

ಹಣಗಳಿಸುವ ಪ್ರವೃತ್ತಿಯನ್ನು ತಮ್ಮ ಬದುಕಿನ ಸಂಪ್ರದಾಯವಾಗಿ ಬೆಳೆಸಿಕೊಂಡು ಬಂದಿವೆ. ಅದಕ್ಕಾಗಿಯೇ ಅವುಗಳನ್ನು ಕ್ರಿಮಿನಲ್ ಟ್ರೈಬ್‌ಗಳೆಂದು ಕರೆಯಲಾಗಿದೆ'[೧೩೪].

ಬ್ರಿಟಿಷರು ಕಂಪನಿ ಆಡಳಿತದ ಸಂದರ್ಭದಲ್ಲಿ ರಸ್ತೆ ಸಾರಿಗೆ ಸಂಪರ್ಕವನ್ನು ಸುಧಾರಿಸಿದ ಮೇಲೆ ಲಂಬಾಣಿಗಳ ಅಲೆಮಾರಿ ವ್ಯಾಪಾರೀ ಜೀವನದ ಮೇಲೆ ಅನೇಕ ಪರಿಣಾಮಗಳಾದವು. ಬಸ್ಸು, ರೈಲುಗಳ ಓಡಾಟದಿಂದ ಅವರ ವ್ಯಾಪಾರಿ ಚಟುವಟಿಕೆಗಳು ನಿಂತು ಹೋದವು. ಈ ಕಾರಣದಿಂದ ಲಂಬಾಣಿಗಳು ಅನೇಕ ನಿಯಮಬಾಹಿರ ಅಪರಾಧಿ ಕೃತ್ಯಗಳಿಗೆ ಕೈ ಹಾಕಿದರು. ಅಕ್ರಮ ಸಾರಾಯಿ ವ್ಯಾಪಾರವು ಅವರ ಅಪರಾಧಗಳಲ್ಲಿ ಅತ್ಯಂತ ಮುಖ್ಯವಾದದ್ದು. ಕುಡಿತ ಮತ್ತು ಮಾಂಸಹಾರಗಳು ಇವರಿಗೆ ಅತ್ಯಂತ ಪ್ರಿಯವಾದವು. ಇವರು ಸಾಮಾನ್ಯವಾಗಿ ಕುರಿ, ಆಡು ಮತ್ತು ಕೋಳಿಗಳನ್ನು ತಮ್ಮ ನೆರೆಯ ಗ್ರಾಮಗಳಿಂದ ಕದಿಯುತ್ತಾರೆ'[೧೩೫].

'ಮಲಿನೋವಸ್ಕಿಯವರ ಮೇಲಿನ ಹೇಳಿಕೆಗಳ ಆಧಾರದ ಮೇಲೆ ಲಂಬಾಣಿಗಳ ಸಂಪ್ರದಾಯಗಳ ಕುರಿತು ಕೆಲವು ವ್ಯಾಖ್ಯಾನಗಳನ್ನು ಮಾಡಬಹುದಾಗಿದೆ. ಮಲಿನೋವಸ್ಕಿಯು ಅನಾಗರಿಕ ಸಮಾಜಗಳ ಕುರಿತು ತುಂಬಾ ಕಾಳಜಿ ಇರುವ ವಿದ್ವಾಂಸ. ಆದ್ದರಿಂದ ಲಂಬಾಣಿಗಳನ್ನು ಅಪರಾಧಿ ಬುಡಕಟ್ಟು ಎಂದು ಕರೆಯುವುದು ಸೂಕ್ತವಾಗಿದೆ. ಈ ಅಪರಾಧಿ ಬುಡಕಟ್ಟು ಈವತ್ತೂ ಅಭಿವೃದ್ಧಿ ಹೊಂದುತ್ತಿರುವ ಆಧುನಿಕ ಭಾರತದಲ್ಲಿ ಅಸ್ತಿತ್ವದಲ್ಲಿದೆ'[೧೩೬].

ಹೀಗೆ ಇನ್ನೂ ಈ ಬಗೆಯ ಬರವಣಿಗೆಯನ್ನು ಸದರಿ ಪುಸ್ತಕದಿಂದ ಉಲ್ಲೇಖಿಸಬಹುದು. ಕೆನಡಿ, ಮುಂಜುಂದಾರ್, ಮಲಿನೋವಸ್ಕಿ ಮುಂತಾದ ಮಾನವಶಾಸ್ತ್ರಜ್ಞರ ಜ್ಞಾನದ ಬೆಳಕಿನಲ್ಲಿ ಸದರಿ ಪುಸ್ತಕದ ಲೇಖಕರು ಲಂಬಾಣಿಗಳನ್ನು ಒಂದು 'ಅಪರಾಧಿ ಬುಡಕಟ್ಟು' ಎಂದು ಸಾಬೀತುಪಡಿಸುವಲ್ಲಿ 'ಯಶಸ್ವಿಯಾಗಿದ್ದಾರೆ'. ಯಾಕೆ ಲಂಬಾಣಿಗಳು ಅಪರಾಧಿ ಕೃತ್ಯಗಳಲ್ಲಿ ತೊಡಗಿದರು? ಹಾಗೆ ತೊಡಗಿಕೊಂಡ ಕಾಲಘಟ್ಟದ ರಾಜಕೀಯಾರ್ಥಿಕ ಸಂದರ್ಭಗಳಾವವು? ನಿಜಕ್ಕೂ ಲಂಬಾಣಿಗಳು ಉದ್ದೇಶಪೂರ್ವಕವಾಗಿ ಅಪರಾಧಿ ಕೃತ್ಯಗಳನ್ನು ರೂಢಿಸಿಕೊಂಡರೇ? ಹೀಗೆ ರೂಢಿಸಿಕೊಂಡ ಅಪರಾಧಿ ಪ್ರವೃತ್ತಿಗಳಿಗೆ ಅವರ ಸಮಕಾಲೀನ ಸಂದರ್ಭ ಯಾವ ಬಗೆಯಲ್ಲಿ ಕಾರಣವಾಗಿತ್ತು? ತಾವು ಕ್ಷೇತ್ರಕಾರ್ಯ ಮಾಡಿದ ತಾಂಡಾಗಳಲ್ಲಿನ ಎಲ್ಲಾ ಲಂಬಾಣಿಗರೂ ಕಳ್ಳತನ ಮುಂತಾದ ಅಪರಾಧಿ ಕೃತ್ಯಗಳಲ್ಲಿ ತೊಡಗಿಕೊಂಡಿರುವರೇ ? ಎಂಬ ಪ್ರಶ್ನೆಗಳನ್ನು ಸದರಿ ಲೇಖಕರು ಮುಖ್ಯವಾಗಿ ಕೇಳಿಕೊಂಡಿಲ್ಲ. ಮದ್ಯ ತಯಾರಿಸುವ ದೇಸಿ ಕ್ರಮವಾದ 'ಭಟ್ಟಿ ಇಳಿಸುವ' ವಿಧಾನವನ್ನು ಯಾರೋ ವಿದೇಶಿ ಆಡಳಿತಗಾರರು ಅಪರಾಧ ಎಂದು ಕರೆದಾಕ್ಷಣ ಸ್ಥಳೀಯರೂ ಅದನ್ನು ಅಪರಾಧ ಎಂದು ಪರಿಗಣಿಸುವುದು ಎಷ್ಟು ಸೂಕ್ತ? ಭಟ್ಟಿ ಇಳಿಸುವ ಕ್ರಮದಿಂದ ಉತ್ಪಾದಿಸಲಾದ ಮದ್ಯವು 'ಸರಕಾರ' ಮಾರುವ ಮದ್ಯಕ್ಕಿಂತ ಗುಣಮಟ್ಟದಲ್ಲಿ ಉತ್ತಮವಾಗಿದ್ದರೂ ಭಟ್ಟಿ ಮದ್ಯವನ್ನು 'ಅಕ್ರಮ' ಎಂದು ಘೋಷಿಸುವ ಹಿಂದಿರುವ ಬಂಡವಾಳಶಾಹಿ ಹುನ್ನಾರಗಳಾವವು? ಎಂಬ ಪ್ರಶ್ನೆಗಳು ಸದರಿ ಪುಸ್ತಕದ ಉದ್ದಕ್ಕೂ ಗೈರು ಹಾಜರಾಗಿವೆ. ಪುಸ್ತಕದ ಉದ್ದಕ್ಕೂ ಅಚ್ಚಾಗಿರುವ

ಛಾಯಾಚಿತ್ರಗಳಿಗೆ ಲಂಬಾಣಿ ಜನ ನಗುನಗುತ್ತಾ ಫೋಜು ಕೊಟ್ಟಿದ್ದಾರೆ. ಬಟ್ಟಿ ಸಾರಾಯಿ ಮಾಡುವ ವಿಧಾನದ ಛಾಯಾಚಿತ್ರಗಳಿಗೆ ಈ ಜನ ಅಮಾಯಕರಂತೆ ಪೋಜುಕೊಟ್ಟಿದ್ದಾರೆ. ಸಾಲದ್ದಕ್ಕೆ ಪುಸ್ತಕದ ಉದ್ದಕ್ಕೂ ಲಂಬಾಣಿಗಳು ಒಂದು ಅಪರಾಧಿ ಬುಡಕಟ್ಟು ಸಮುದಾಯವಾಗಿ ಚಿತ್ರಿತವಾಗಿದ್ದಾರೆ. ಇಲ್ಲಿ ಮುಖ್ಯವಾಗಿ ಹೇಳಬೇಕೆಂದಿರುವ ಸಂಗತಿ ಯಾವುದೆಂದರೆ, ಈ ಪುಸ್ತಕ ಬರೆದ ಲೇಖಕರೂ ಸಹ ಲಂಬಾಣಿ ಸಮುದಾಯಕ್ಕೆ ಸೇರಿದವರು. ತಾವು ಹುಟ್ಟಿ ಬೆಳೆದ ಜಿಲ್ಲೆಯಲ್ಲಿನ ತಮ್ಮ ಸಮುದಾಯವನ್ನು, ಅವರು ವ್ಯಕ್ತಿಯಾಗಿ ಬೆಳೆಯಲು ಕಾರಣವಾದ ತನ್ನದೇ ಸಮುದಾಯವನ್ನು ಲೇಖಕರು 'ಅಪರಾಧಿ ಬುಡಕಟ್ಟು' ಎಂದು ಘೋಷಿಸಿದ್ದಾರೆ. ನನ್ನ ಉದ್ದೇಶ ಈ ಲೇಖಕರನ್ನು ಟೀಕಿಸುವುದಲ್ಲ. ಬದಲಿಗೆ ತನ್ನದೇ ಸಮುದಾಯವನ್ನು ಅಧ್ಯಯನ ಮಾಡುವ ಅಧ್ಯಯನಕಾರ ಯಾವ ಬಗೆಯಲ್ಲಿ 'ಹೊರಗಿನವನಾಗಿಬಿಡುತ್ತಾನೆ' ಎಂಬುದನ್ನು ಇಲ್ಲಿ ವಿವರಿಸಲು ಪ್ರಯತ್ನಿಸಿದೇನೆ. ಇಲ್ಲಿ ಲೇಖಕರಿಗೆ ಲಂಬಾಣಿಗಳನ್ನು 'ದುರ್ದೈವಿ'ಗಳನ್ನಾಗಿಸಿದ ಈ ದೇಶದ ರಾಜಕೀಯಾರ್ಥಿಕ ಸಂಗತಿಗಳು ಮುಖ್ಯವಾಗುವುದೇ ಇಲ್ಲ. ಯಾಕಾಗಿ ಲಂಬಾಣಿಗಳು ಅಪರಾಧಿ ಚಟುವಟಿಕೆಗಳನ್ನು ರೂಢಿಸಿಕೊಂಡರು? ಅವರ ಅಪರಾಧಿ ಚಟುವಟಿಕೆಗಳನ್ನು ಹಾಗೆಂದು ಪರಿಗಣಿಸಿದ ರಾಜಕಾರಣದ ಸ್ವರೂಪವೇನು? ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳದೆ ಯುರೋಪಿನ ಒಂದಿಷ್ಟು ಜನ ಇಲ್ಲಿನವರನ್ನು ಅರ್ಥಮಾಡಿಕೊಳ್ಳದೆ ರೂಪಿಸಿದ ಅಮಾನವೀಯ ಕಾನೂನುಗಳನ್ನೇ ಮುಖ್ಯವಾಗಿಸಿಕೊಂಡು 'ನಮ್ಮ' ಸಮುದಾಯಗಳನ್ನು 'ನಾವೇ' ಅಪರಾಧಿಗಳು ಎಂದು ಕರೆದರೆ ನಾವು ಒಳಗಿನವರಾಗಲು ಸಾಧ್ಯವೇ? ಸಾವಿರಾರು ವರ್ಷಗಳ ಕಾಲ ಈ ದೇಶದ ಅಮಾನವೀಯ ಸಾಮಾಜಿಕ ನಿಯಮಗಳಿಂದ ತಮ್ಮ ಹತಾಶೆಗಳನ್ನು ಒಡಲಿನಲ್ಲಿಟ್ಟುಕೊಂಡು ಶೋಷಿತ ಸಮುದಾಯಗಳು ಬದುಕಿ ಬಂದಿವೆ. ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯಗಳಿಲ್ಲದೆ ತುಟಿಕಚ್ಚಿ ಬದುಕಿ ಬಂದಿವೆ. ಇಂತಹ ಸಮುದಾಯಗಳ ಲೌಕಿಕ ಮತ್ತು ಅಲೌಕಿಕ ಬದುಕುಗಳು ಅತ್ಯಂತ ಸಂಕೀರ್ಣವಾಗಿರುತ್ತವೆ. ಅವುಗಳನ್ನು ನಾವು ಆ ಸಮುದಾಯಗಳ ಕಷ್ಟಸುಖಗಳ ಭಾಗವಾಗಿಯೇ ಅಧ್ಯಯನ ಮಾಡಬೇಕು. ಹಾಗೆ ಮಾಡಿದಾಗ ಮಾತ್ರ ನಾವು ಆ ಸಮುದಾಯಗಳ ''ಒಳಗಿನವರಾಗಲು' ಸಾಧ್ಯ.

ಸಾಮಾಜಿಕ ಅಧ್ಯಯನಗಳ ಸಂದರ್ಭದಲ್ಲಿ 'ಒಳಗಿನವರಾಗುವ' ಮತ್ತು 'ಹೊರಗಿನವರಾಗುವ' ಪ್ರಕ್ರಿಯೆನ್ನು ಒಂದು ಶೈಕ್ಷಣಿಕ ಬಿಕ್ಕಟ್ಟಾಗಿ ಮಾತ್ರ ಚರ್ಚಿಸಲಾಗಿದೆ. 'ಮಾಹಿತಿ' ಪಡೆಯುವ ಮತ್ತು 'ಕ್ಷೇತ್ರಕಾರ್ಯ'ವನ್ನು ಸುಲಭವಾಗಿಸಿಕೊಳ್ಳುವ ದೃಷ್ಟಿಯಿಂದ ಅಧ್ಯಯನಕಾರನೊಬ್ಬ ವಹಿಸಬೇಕಾದ ಅಥವಾ ನಟಿಸಬೇಕಾದ ಪಾತ್ರದ ಸುತ್ತ ಈ ಚರ್ಚೆ ಯಾಂತ್ರಿಕವಾಗಿ ನಡೆದು ಬಂದಿದೆ. ಯುರೋಪಿನವರು ಸಾಮಾಜಿಕವಾಗಿ, ಆರ್ಥಿಕವಾಗಿ ಎಲ್ಲದಕ್ಕಿಂತ ಹೆಚ್ಚಿನದಾಗಿ ಜನಾಂಗಿಕವಾಗಿಯೂ ಆಳುವ ದೇಶಗಳ ಸಮುದಾಯಗಳಿಗೆ ಹೊರಗಿನವರೇ ಆಗಿದ್ದರು. ಆಳಿಸಿಕೊಳ್ಳುವ ಸಮುದಾಯಗಳನ್ನು ರಾಜಕೀಯವಾಗಿ ನಿಕೃಷ್ಟವಾಗಿಸಿದ ಅವರ ಚಿಂತನೆ ಶೈಕ್ಷಣಿಕ ವಲಯವನ್ನೂ ನಿಯಂತ್ರಿಸಿದೆ. ಅಧಿಕಾರವು ಜ್ಞಾನವನ್ನು ಪ್ರಭಾವಿಸಿದರೆ, ಜ್ಞಾನವು ಅಧಿಕಾರ ರೂಪುಗೊಳ್ಳಲು ಕಾರಣವಾಗುತ್ತದೆ. ಇಲ್ಲಿ ಫುಕೋ ಹೆಚ್ಚು ಪ್ರಸ್ತುತವಾದ ಚಿಂತನೆಗಳನ್ನು ಮಾಡಿದ್ದಾನೆ. ಜ್ಞಾನ/ಅಧಿಕಾರಗಳು ಪರಸ್ಪರ ಪೂರಕ ಪ್ರಕ್ರಿಯೆಗಳನ್ನು ಉತ್ಪಾದಿಸುತ್ತವೆ ಎಂಬುದು ಆತನ

ವಾದ. ಈ ಕಾರಣದಿಂದ ವಸಾಹತು ಸಂದರ್ಭದ ಮಾನವಶಾಸ್ತ್ರದ ಅಧ್ಯಯನಗಳಲ್ಲಿ ವಸಾಹತು ರಾಜಕಾರಣ ನಿರ್ಣಾಯಕ ಪಾತ್ರ ವಹಿಸಿರುವುದನ್ನು ನಾವು ಈಗಾಗಲೇ ನೋಡಿದ್ದೇವೆ. ಅಧ್ಯಯನಕಾರನೊಬ್ಬ ತನ್ನ ದೇಶ, ಜನಾಂಗ, ಬಣ್ಣ ಮುಂತಾದ ಸಂಗತಿಗಳಿಂದ 'ಹೊರಗಿನವನಾಗಲು' ಸಾಧ್ಯವಿಲ್ಲ. ಎಲ್ವಿನ್‌ರಂತೆ ಬುಡಕಟ್ಟು ಮಹಿಳೆಯೊಬ್ಬಳನ್ನು ಮದುವೆಯಾದ ತಕ್ಷಣ ಆ ಸಮುದಾಯದ 'ಒಳಗಿನವನಾಗಲು'[೧೩೭] ಸಾಧ್ಯವಿಲ್ಲ. ಒಳಗಿನವನಾಗುವ ಅಥವಾ ಹೊರಗಿನವನಾಗುವ ಸಂದರ್ಭ ಅಧ್ಯಯನಕಾರ ತಾನು ನಂಬಿದ ಸೈದ್ಧಾಂತಿಕ ರಾಜಕಾರಣವನ್ನು ಅವಲಂಬಿಸಿರುತ್ತದೆ. ಸಮಾಜಶಾಸ್ತ್ರ, ಮಾನವಶಾಸ್ತ್ರ ಅಥವಾ ಅರ್ಥಶಾಸ್ತ್ರ ಮುಂತಾದ ಸಾಮಾಜಿಕ ಅಧ್ಯಯನಗಳ ಶಾಸ್ತ್ರಶಿಸ್ತುಗಳು ಯುರೋಪಿನ ರಾಜಕೀಯ ಅಗತ್ಯಗಳಿಗೆ ತಕ್ಕಂತೆ ರೂಪುಗೊಂಡವು. ಈ ಕಾರಣದಿಂದ ಈ ಶಾಸ್ತ್ರಶಿಸ್ತುಗಳ ಅಧ್ಯಯನ ವಿಧಾನಗಳನ್ನೂ ಸಹ ಯುರೋಪಿನ ಸೈದ್ಧಾಂತಿಕ ರಾಜಕಾರಣ ರೂಪಿಸಿತು. ಜೊತೆಗೆ ಈ ಅಭಿಜಾತ ಶೈಕ್ಷಣಿಕ ವಿಧಾನವೂ ಸಹ ಆಳಿಸಿಕೊಳ್ಳುವ ವಸಾಹತುಗಳಲ್ಲೂ ಪ್ರಚಲಿತಗೊಂಡಿತು. ಅಭಿಜಾತ ಶೈಕ್ಷಣಿಕ ವಿಧಾನವು ವಹಾಸತುಶಾಹಿ ರಾಜಕಾರಣದ ಭಾಗವಾಗಿಯೇ ರೂಪುಗೊಂಡ ಕಾರಣ ವಸಾಹತು ಸಂದರ್ಭದ ಅಧ್ಯಯನಕಾರರ ರಾಜಕೀಯ ದೃಷ್ಟಿಕೋನಕ್ಕೆ ಪೂರಕವೂ ಆಗಿತ್ತು. ಇದರಿಂದಾಗಿ ಈ ವಿಧಾನವನ್ನು ಅನುಸರಿಸಿದ ಪಶ್ಚಿಮದ ಮಾನವಶಾಸ್ತ್ರಜ್ಞರು ಸಹಜವಾಗಿಯೇ 'ಹೊರಗಿನವರಾಗಿದ್ದರು'. ಆದರೆ ವಿದೇಶೀ ವಿಶ್ವವಿದ್ಯಾಲಯಗಳಲ್ಲಿ ತರಬೇತಿ ಪಡೆದು ಬಂದ ದೇಶೀಯ ಮಾನವಶಾಸ್ತ್ರಜ್ಞರು ಯುರೋಪಿನ ಅಭಿಜಾತ ಶೈಕ್ಷಣಿಕ ವಿಧಾನದ ನಿಯೋಗಿಗಳಂತೆ ಅಧ್ಯಯನ ಮಾಡಿದ ಕಾರಣಕ್ಕೆ ಇವರೂ ಹೊರಗಿನವರಾದರು. ಮೊದಲೇ ಹೇಳಿದಂತೆ ಅಧ್ಯಯನಕಾರನೊಬ್ಬ 'ಒಳಗಿನವನಾಗುವುದು' ಇಲ್ಲವೆ 'ಹೊರಗಿನವನಾಗುವುದು' ಅವನು ನಂಬಿದ ಸೈದ್ಧಾಂತಿಕ ರಾಜಕಾರಣವನ್ನು ಅವಲಂಬಿಸಿರುತ್ತದೆ.

ಆದರೆ ಬೇರೆ ಬೇರೆ ಉದ್ದೇಶಗಳಿಗಾಗಿ ಇಂಡಿಯಾಕ್ಕೆ ಬಂದ ಕಂಪನಿ ಅಧಿಕಾರಿಗಳನ್ನೇ 'ತಾತ್ಕಾಲಿಕವಾಗಿ' ಮಾನವಶಾಸ್ತ್ರಜ್ಞರನ್ನಾಗಿ ರೂಪಾಂತರಿಸಿ ಭಾರತದಲ್ಲಿ ಸಮಾಜಗಳ ಅಧ್ಯಯನಕ್ಕೆ ತೊಡಗಿಸಲಾಯ್ತು. ರಿಸ್ಲೆ, ಎಂಥೊವನ್, ಥರ್ಸ್ಟನ್ ಮತ್ತು ಎಲ್ಲೋ ಪೋಲೀಸ್ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದ ಫಾಸೆಟ್‌ರಂತಹ ಅಧಿಕಾರಿಗಳನ್ನು ತಂದು ಸಮುದಾಯಗಳ ಅಧ್ಯಯನ ಮಾಡಲು ಕಂಪನಿ ಆಡಳಿತ ಆಜ್ಞಾಪಿಸಿತು. ಮಾನವಶಾಸ್ತ್ರಜ್ಞರಾಗಿ ರೂಪಾಂತರಗೊಂಡ ಈ ಅಧಿಕಾರಿಗಳ ಮುಂದೆ ವೈವಿಧ್ಯಮಯ ಸಮುದಾಯಗಳಿದ್ದವು. ಸಾಮಾಜಿಕಾರ್ಥಿಕ ಅಧಿಕಾರಗಳನ್ನು ಹೊಂದಿದ ಅಲ್ಪಸಂಖ್ಯಾತ ಜನವರ್ಗ ಒಂದೆಡೆ, ಯಾವ ಅಧಿಕಾರಗಳೂ ಇಲ್ಲದ ಮೂಕ ನಿರ್ಗತಿಕ ಸಮುದಾಯಗಳು ಇನ್ನೊಂದೆಡೆ. ಯುರೋಪಿನವರ ದೃಷ್ಟಿಯಲ್ಲಿ 'ನಾಗರಿಕರಾಗಿದ್ದವರು' ಇಲ್ಲಿನ ಆಳುವ ಜನ ಮಾತ್ರ. ಈ ಕಾರಣಕ್ಕಾಗಿಯೇ ಆಳುವ ವರ್ಗದ 'ನಾಗರಿಕತೆಯನ್ನೇ' ಭಾರತದ 'ಸಂಸ್ಕೃತಿ' ಎಂದು ಯುರೋಪಿನ ವಿದ್ವಾಂಸರು ಭಾವಿಸಿದರು. ಏಕೆಂದರೆ ನಾಗರಿಕತೆಯೆಂದರೆ 'ಇದು' ಮಾತ್ರ ಎಂಬ ಮಾದರಿಯನ್ನು ಯುರೋಪಿನ ಸಮಾಜವಿಜ್ಞಾನಿಗಳು ನಿರ್ಧರಿಸಿಬಿಟ್ಟಿದ್ದರು. 'Whatever was not Greek was barbarian'[೧೩೮] ಎಂದ ಅರ್ನಾಲ್ಡ್, ಜಗತ್ತಿನ ಯಾವ ಸಂಸ್ಕೃತಿಯೂ ಗ್ರೀಕ್ ಸಂಸ್ಕೃತಿಗೆ ಸಮವಾದುದಲ್ಲ ಎಂದು ಒಂದು ಮಾದರಿಯನ್ನು ಎತ್ತಿ

ನಿಲ್ಲಿಸಿಬಿಟ್ಟಿದ್ದ. ಯುರೋಪಿನ ಅಭಿಜಾತ ಮಾನವಶಾಸ್ತ್ರ ಅರ್ನಾಲ್ಡ್‌ನ ಆದರ್ಶ ಮಾದರಿ ನಾಗರಿಕತೆಯ ಚರ್ಚೆಯನ್ನು ಚಾಚು ತಪ್ಪದೆ ಅನುಕರಿಸಿತು. ಅರ್ನಾಲ್ಡ್ ಮಾದರಿಯ ಚರ್ಚೆಯನ್ನು ಆಳಿಸಿಕೊಳ್ಳುವ ದೇಶದೊಳಗಿನ ವಿದ್ವಾಂಸರೂ ಅನುಕರಿಸಿದರು. ಬ್ರಾಹ್ಮಣರ ಮನೆಯ ಗಿಳಿ ಮತ್ತು ಬೇಡರ ಮನೆಯ ಗಿಳಿಗಳ ವರ್ತನೆಗಳನ್ನು ಉದಾಹರಿಸುತ್ತಾ ಡಿ.ವಿ.ಜಿ. ಸಂಸ್ಕೃತಿಯೆಂದರೆ ಯಾವುದು? ಎಂಬುದನ್ನು ಚರ್ಚಿಸಲು ಮುಂದಾಗುತ್ತಾರೆ. ಒಟ್ಟಿನಲ್ಲಿ ಪಶ್ಚಿಮದ ಸಾಮಾಜಿಕ ಅಧ್ಯಯನಗಳ ಪರಿಕಲ್ಪನೆಗಳು ಆಳಿಸಿಕೊಳ್ಳುವ ದೇಶಗಳ ಅಂತರಂಗಗಳನ್ನು ನಾಶ ಮಾಡಲೆಂದೇ ಹುಟ್ಟಿದಂತೆ ಭಾಸವಾಗುತ್ತವೆ. ಏಕೆಂದರೆ ಈ ಪರಿಕಲ್ಪನೆಗಳು ಶುದ್ಧಾಂಗವಾಗಿ ಒಂದು ಶೈಕ್ಷಣಿಕ ಅಥವಾ ಸಂಸ್ಕೃತಿ ಮೀಮಾಂಸೆಯ ಕಾರ್ಖಾಗಾರಗಳಲ್ಲಿ ತಯಾರಾದವುಗಳೇನಲ್ಲ. ಈ ಪರಿಕಲ್ಪನೆಗಳು ಯುರೋಪಿನ ಆಕ್ರಮಣಕಾರಿ ಮತ್ತು ಉಪಯೋಗವಾದಿ ರಾಜಕೀಯ ಆಕಾಂಕ್ಷೆಗಳನ್ನು ಗರ್ಭೀಕರಿಸಿಕೊಂಡೇ ಸೋತ ದೇಶಗಳ ಸಮಾಜವನ್ನು ವಿವರಿಸಲು ಮುಂದಾದವು. ಸೋತ ದೇಶದ ಮೇಲೆ ಸಂಪೂರ್ಣ ಹಿಡಿತ ಸಾಧಿಸುವುದು ಮತ್ತು ಅವುಗಳ ಮೇಲೆ ತಮ್ಮ ಗೆಲುವನ್ನು ನಿರಂತರವಾಗಿ ಸ್ಥಾಪಿಸುವುದು ಯುರೋಪಿನ ದೇಶಗಳ ಪ್ರಮುಖ ಉದ್ದೇಶಗಳಾಗಿದ್ದವು. ಇದನ್ನೇ ಡಿ.ಆರ್. ನಾಗರಾಜ್ 'ಸಂಪೂರ್ಣ ಸ್ವಾಧೀನತೆ ಮತ್ತು ನಿಯಂತ್ರಣ' ಎಂದು ವಿವರಿಸುತ್ತಾರೆ[೬].

ಒರಟಾಗಿ ಹೇಳಬೇಕೆಂದರೆ, ಪೂರ್ವವನ್ನು ಅಧ್ಯಯನ ಮಾಡಲು ಪಶ್ಚಿಮದಲ್ಲಿ ಹುಟ್ಟಿದ ಅನೇಕ ಪರಿಕಲ್ಪನೆಗಳು ಒಂದೋ, ಯುರೋಪಿನ ನಾಗರಿಕ 'ಅಹಂ'ನಿಂದ ರೂಪುಗೊಂಡವು, ಇಲ್ಲವೆ ಮಹತ್ವಾಕಾಂಕ್ಷೆಯ ಯುರೋಪಿನ ಆಕ್ರಮಣಕಾರೀ ರಾಜಕಾರಣದಿಂದ ರೂಪುಗೊಂಡವು. ಹೀಗಾಗಿ, ಈ ಪರಿಕಲ್ಪನೆಗಳನ್ನು ವೈಚಾರಿಕ ಆಕೃತಿಗಳೆಂದು ಭಾವಿಸುವಾಗ ಅನೇಕ ತೊಡಕುಗಳು ನಮ್ಮನ್ನು ಬಾಧಿಸುತ್ತವೆ. ಏಕೆಂದರೆ, ಯುರೋಪಿನ ಸೈನ್ಯದ ಜೊತೆಗೇ, ಅದರ ಆಕ್ರಮಣದ ಜೊತೆ ಜೊತೆಗೇ ಸಮಾಜವಿಜ್ಞಾನಗಳ ಅನೇಕ ಶಿಸ್ತುಗಳು ಆಳಿಸಿಕೊಳ್ಳುವ ದೇಶಗಳ ಗಡಿಗಳನ್ನು ಪ್ರವೇಶಿಸಿದವು. ಮತ್ತು ಈ ಜ್ಞಾನಶಿಸ್ತುಗಳ ಶೈಕ್ಷಣಿಕ ವಿಧಾನಗಳು ತಾತ್ವಿಕವಾಗಿ ಆ ಸೈನ್ಯದ ಆಕ್ರಮಣಗಳಿಗೆ ಪೂರಕವಾಗಿಯೇ ಇದ್ದವು. ಆಳಿಸಿಕೊಳ್ಳುವ ದೇಶಗಳಲ್ಲಿ ಬದುಕುತ್ತಿದ್ದ ಸಮುದಾಯಗಳ ವೈಶಿಷ್ಟ್ಯತೆಗಳನ್ನು ಈ ಯುರೋಪಿನ ಅಧ್ಯಯನಗಳು ಒಂದೋ, ಸರಳೀಕರಿಸಿ ಅರ್ಥೈಸಿದವು, ಇಲ್ಲವೆ, ತಮ್ಮ ಸಂಸ್ಕೃತಿ ಮೀಮಾಂಸೆಯ ಒಟ್ಟು ಚರ್ಚೆಯಲ್ಲಿ ಈ ಸಮುದಾಯಗಳ ಕೌಶಲ ಮತ್ತು ಪರಂಪರೆಗಳನ್ನು ಇಡಿಯಾಗಿ ಕ್ಷುದ್ರ ಜಗತ್ತಿನ ಚಟುವಟಿಕೆಗಳೆಂದು ಪರಿಗಣಿಸಿದವು. ಯುರೋಪಿನ ಆಧುನಿಕ ಅಹಂ ಮತ್ತು ದಿಗ್ವಿಜಯದ ಭರಾಟೆಯಲ್ಲಿದ್ದ ಅವರ ಆಕ್ರಮಣಶೀಲ ಪ್ರವೃತ್ತಿಗಳು ಆಳಿಸಿಕೊಳ್ಳುವವರ ಅಂತರಂಗಗಳನ್ನು ಅರ್ಥಮಾಡಿಕೊಳ್ಳಲು ವಿಫಲವಾದವು. ಪ್ರಾಚೀನ ಕಾವ್ಯಗಳ ಸಂಪಾದನೆ, ಕೋಶರಚನೆ, ಭಾಷೆಗಳ ಅಧ್ಯಯನ, ಶಾಸನ ಸಂಪಾದನೆಗಳು ವಿಪುಲವಾಗಿ ನಡೆದರೂ ಸಹ ಈ ಶೈಕ್ಷಣಿಕ ಪ್ರಯತ್ನಗಳಿಗೆ ಸ್ಥಳೀಯವೆನ್ನಿಸುವ ಕಾಳಜಿಗಳೇನಿರಲಿಲ್ಲ.

ಯುರೋಪಿನಿಂದಾಚೆಗಿರುವ ಭೂಖಂಡಗಳಲ್ಲಿ ವೈಭವ ಮುಗಿದು ಹೋಗಿ ಅವರೆಲ್ಲ ಮತ್ತೆ ಅನಾಗರಿಕ ಮತ್ತು ಬರ್ಬರ ಜೀವನ ವಿಧಾನಗಳ ಕೆಸರಲ್ಲಿ ಹೂತು ಹೋಗಿದ್ದಾರೆಂದೇ ಅಲ್ಲಿಂದ ಬಂದ ಅಧ್ಯಯನಕಾರರು ನಂಬಿದ್ದರು. ಈ ಬಗೆಯ ಪೂರ್ವಗ್ರಹವೇ ಸ್ಥಳೀಯ ಸಮುದಾಯಗಳನ್ನು ಅರ್ಥೈಸುವಲ್ಲಿ ಈ ವಿದ್ವಾಂಸರನ್ನು

ಕಟ್ಟಿಹಾಕಿತು. ವೈವಿಧ್ಯ, ವಿಚಿತ್ರವೆನ್ನಿಸುವ ಮತ್ತು ಅಸಾಧಾರಣ ಏರುಪೇರುಗಳಿರುವ, ವಿಲಕ್ಷಣ ಸಾಮಾಜಿಕ ನಂಬಿಕೆಗಳಲ್ಲಿ ಬದುಕುತ್ತಿದ್ದ ಜನಸಮುದಾಯಗಳನ್ನು ಯುರೋಪಿನ ಶೈಕ್ಷಣಿಕ ಶಿಸ್ತುಗಳು ವಿವರಿಸಿಕೊಳ್ಳಲು ವಿಫಲವಾದವು. ಭಾರತವೆಂಬ ದೇಶ ಸಾಕಿಕೊಂಡು ಬಂದಿದ್ದ ಸಾಮಾಜಿಕಾರ್ಥಿಕ ವಿಷಮತೆಯ ಕಾರಣಕ್ಕಾಗಿಯೇ, ತುಳಿತಕ್ಕೊಳಪಟ್ಟ ಸಮುದಾಯಗಳು ಕಟ್ಟಿಕೊಂಡು ಬಂದಿದ್ದ ಪ್ರತಿರೋಧದ ಮಾದರಿಗಳೂ ಸಹ ಒಂದು ಕ್ಷಣ ಯುರೋಪಿನ ದುಂಡಾವರ್ತಿಯ ಆಕ್ರಮಣಶೀಲತೆಯನ್ನು ದಿಕ್ಕು ತಪ್ಪಿಸಿಬಿಟ್ಟವು. (ಈಶಾನ್ಯ ಭಾರತದಲ್ಲಿ ಮತ್ತು ದಂಡಕಾರಣ್ಯದಲ್ಲಿ ಸೋತು ಕೈಚೆಲ್ಲಿ ಕುಳಿತ ಕಂಪನಿ ಸೈನ್ಯದ ವಿಫಲ ಆಕ್ರಮಣಗಳೇ ಇದಕ್ಕೆ ಸಾಕ್ಷಿ) ಸೋತ ಸಮುದಾಯಗಳ, ಅಪರಿಚಿತ ಜಗತ್ತುಗಳ ಅಂತಃಸ್ಸತ್ವಕ್ಕಿದ್ದ ಬಿಗುವು ಮತ್ತು ಸೆಡವುತನಗಳು ಆಳುವ ದೊರೆಗಳಿಗೆ ಪರಿಚಯವಾದವು. ಆಗ ಅವರ ನೆರವಿಗೆ ಬಂದದ್ದು ಆಗ ತಾನೇ ಯುರೋಪಿನಲ್ಲಿ ಕಣ್ಣು ಬಿಡುತ್ತಿದ್ದ Ethnography ಎಂಬ ಶೈಕ್ಷಣಿಕ ಶಿಸ್ತು. 'ಮಾನವಕುಲಶಾಸ್ತ್ರ' ಎಂದು ಕನ್ನಡದ ಸಂದರ್ಭದಲ್ಲಿ ಭಾಷಾಂತರಗೊಂಡ ಈ ಶೈಕ್ಷಣಿಕ ಶಿಸ್ತು, ಆಳುವ ಜನ ಇಲ್ಲಿನ ಸಮುದಾಯಗಳನ್ನು ಅರ್ಥ ಮಾಡಿಕೊಳ್ಳಲು ನೆರವಾಯ್ತು. ಆದರೆ, ಜನರನ್ನು ಅವರ ನಡವಳಿಕೆ ಮತ್ತು ತಿಳುವಳಿಕೆಯನ್ನು ಜ್ಞಾನದ ಮಟ್ಟದಲ್ಲಿ ಅರ್ಥೈಸುವ ಮತ್ತು ತತ್ವಶಾಸ್ತ್ರೀಯವಾಗಿ ಈ ಸಮುದಾಯಗಳ ಜಗತ್ತನ್ನು ವಿವರಿಸಿಕೊಳ್ಳುವ ತುರ್ತಾಗಲಿ, ತುಡಿತವಾಗಲಿ ಈ ಶೈಕ್ಷಣಿಕ ಶಿಸ್ತಿಗೆ ಜನ್ಮತಃ ಇರಲಿಲ್ಲ. ಒಂದು ಸೃಜನಶೀಲ ಶೈಕ್ಷಣಿಕ ಆಕೃತಿಯಾಗಿ ಮಾನವಕುಲಶಾಸ್ತ್ರ ಮೂರನೇ ಜಗತ್ತನ್ನು ನೋಡಲೆತ್ನಿಸಲಿಲ್ಲ. ಇದಕ್ಕೆ ಕಾರಣ ಈ ಜ್ಞಾನಶಿಸ್ತನ್ನು ಕೇವಲ ತಮ್ಮ ಆಕ್ರಮಣಕಾರಿ ಆಳ್ವಿಕೆಯ ವಿಸ್ತರಣೆಗೆ ಯುರೋಪಿನ ಜನ ಒಂದು ಆಯುಧದಂತೆ ಮಾತ್ರ ಬಳಸಿದರು. ೧೭೭೪ರಲ್ಲಿ ಪ್ರಾರಂಭವಾದ ವಿಲಿಯಂ ಜೋನ್ಸ್‌ನ ನೇತೃತ್ವದಲ್ಲಿ ಪ್ರಾರಂಭವಾದ 'ಏಶಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್' ಎಂಬ ಅರೆಶೈಕ್ಷಣಿಕ ಶಿಬಿರದ ಮೂಲಕ ಪ್ರಾರಂಭವಾದ ಕಂಪನಿ ಆಡಳಿತದ ಎಲ್ಲ ಬಗೆಯ ಶೈಕ್ಷಣಿಕ ಕಸರತ್ತುಗಳಿಗೆ, ಬಿಳಿ ಜನರ ಒರಟು ಆಕ್ರಮಣಕಾರಿ ತುರ್ತುಗಳಿಗೆ ಮಾಹಿತಿ ಒದಗಿಸುವ ಜರೂರುಗಳಿದ್ದವು. 'As a centre of reference and bureau of Information' ಎಂದೇ ಏಶಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್‌ನ್ನು ಅಂದಿನ ಬಂಗಾಳ ಸರಕಾರ ಪರಿಗಣಿಸಿತ್ತು. ಕಂಪನಿ ಆಡಳಿತಕ್ಕೆ ಮತ್ತು ಮಿಲಿಟರಿ ಅಧಿಕಾರಿಗಳಿಗೆ ಮಾಹಿತಿ ಒದಗಿಸುವ ಕೇಂದ್ರವೆಂದೇ ಈ ಸಂಸ್ಥೆ ಪರಿಗಣಿಸಲ್ಪಟ್ಟಿತು. ಹರ್ಬರ್ಟ್ ರಿಸ್ಲೆಯ ನಾಯಕತ್ವದಲ್ಲಿ ರಚನೆಯಾದ Ethnographic Survey of India ಸಂಸ್ಥೆ ಅನಂತರ ಪೂರ್ಣಪ್ರಮಾಣದಲ್ಲಿ ಮಾನವಶಾಸ್ತ್ರೀಯ ವಿವರಗಳನ್ನು ಕಲೆ ಹಾಕಲಾರಂಭಿಸಿತು. ಜಾತಿಗಳ ಮತ್ತು ಆದಿವಾಸಿಗಳ (Caste and Tribes) ಅಧ್ಯಯನಗಳು ವ್ಯಾಪಕವಾಗಿ ಪ್ರಾರಂಭವಾದವು. ಆದರೆ ಈ ಅಧ್ಯಯನಗಳು, ಅಧ್ಯಯನಗಳಾಗಿರದೆ ಕಂಪನಿ ಆಡಳಿತಕ್ಕೆ ಪೂರಕವಾಗುವ ಮಾಹಿತಿಯನ್ನು ಒದಗಿಸುವ ಕೆಲಸವನ್ನು ಮಾತ್ರ ಮಾಡಿದವು. ಇಂಡಿಯಾದ ಜನಸಮುದಾಯಗಳ ಬದುಕಿನ ವಿವರಗಳನ್ನು ಕೇವಲ 'ಮಾಹಿತಿ'ಯೆಂದು ಮಾತ್ರ ಪರಿಗಣಿಸಲಾಯ್ತು. ಇಲ್ಲಿಯ ಜನರ ಜೀವನದ ಸಂಗತಿಗಳು ಕೇವಲ ಮಾಹಿತಿಗಳಾಗಿ ಮಾತ್ರ ಈ ಜನಕ್ಕೆ ದಕ್ಕಿದವು. ಶತಮಾನಗಳಿಂದ ಈ ಸಮುದಾಯಗಳು ಕಟ್ಟಿಕೊಂಡು ಬಂದಿದ್ದ ಪಾರಂಪರಿಕ ಕೌಶಲಗಳ

'ತಿಳುವಳಿ'ಕೆಯನ್ನು ವಿವರಿಸಿಕೊಳ್ಳುವ ಜರೂರು ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ ರಿಸ್ಲೆ, ವಿಲಿಯಂ ಕ್ರೂಕ್‌ರಂತಹ ಅಧಿಕಾರಿಗಳಿಗೆ ಇರಲಿಲ್ಲ. ಜೊತೆಗೆ ತತ್ವಶಾಸ್ತ್ರೀಯ ಮಟ್ಟದಲ್ಲಿ 'ತಿಳುವಳಿಕೆಯನ್ನು' ಜ್ಞಾನವನ್ನಾಗಿಸಿ ಭಾಷಾಂತರಿಸಿಕೊಳ್ಳುವ ಯಾವ ಶೈಕ್ಷಣಿಕ ಪೂರ್ವಸಿದ್ಧತೆಗಳಾಗಲಿ, ತರಬೇತಿಯಾಗಲಿ ಈ ಜನಕ್ಕೆ ಇರಲಿಲ್ಲ. ತಮಗೆ ಮಾಹಿತಿ ನೀಡುವ ಸಮುದಾಯ ದಟ್ಟ ದಾರಿದ್ರ್ಯದಿಂದ ನರಳುತ್ತಿದೆ, ಅದರ ಲೌಕಿಕದ ಬದುಕಲ್ಲಿ ಸ್ವಲ್ಪಮಟ್ಟಿನ ಸುಧಾರಣೆ ತರುವುದು ತಮ್ಮ ಉದ್ದೇಶವಾಗಬೇಕು ಎಂಬ ಕಿಂಚಿತ್ ಕಾಳಜಿ ಈ 'ಶೈಕ್ಷಣಿಕ' ಚಟುವಟಿಕೆಗಳಿಗಿರಲಿಲ್ಲ. ಅವರಿಗೆ ಈ ದೇಶದ ಜನರು ಅಧ್ಯಯನಕ್ಕೊಳಪಡುವ 'ವಸ್ತು'ಗಳು ಮಾತ್ರ. ಅಧ್ಯಯನಕ್ಕೊಳಪಡುವ ಜನ ನೀಡುವ ತಿಳುವಳಿಕೆಯನ್ನು ಅವರು ಕೇವಲ 'ಮಾಹಿತಿ'ಯೆಂದು ಮಾತ್ರ ಪರಿಗಣಿಸಿದರು. ಈ ವಿದ್ವಾಂಸರು ಬಳಸುವ ಪರಿಭಾಷೆ ಯುರೋಪಿನ ಗಣ್ಯತೆ ಮತ್ತು ಕಲೋನಿಯಲ್ ಅಹಂಕಾರದಿಂದ ರೂಪುಗೊಂಡಂತೆ ಭಾಸವಾಗುತ್ತದೆ. ದುರಂತವೆಂದರೆ, ಪಾದ್ರಿಗಳಾಗಿ ಬಂದ ಎಲ್ವಿನ್ ಮತ್ತು ದುಬಾಯಿಸ್‌ರಂತಹ ವ್ಯಕ್ತಿಗಳು ಈ ದೇಶದ ಜನರ ದೌರ್ಭಾಗ್ಯವನ್ನು ಕಂಡು ಅಂತಃಕರಣಪೂರ್ವಕವಾಗಿ ಇಲ್ಲಿನ ದೀನದಲಿತರ, ರೋಗಪೀಡತ ಅಸಹಾಯಕರ ಸೇವೆಗೆ ತಮ್ಮ ಬದುಕನ್ನೇ ಮೀಸಲಿಟ್ಟರೂ ಸಹ ಅವರು ಅನುಸರಿಸಿದ ಶೈಕ್ಷಣಿಕ ವಿಧಾನ ಮಾತ್ರ ಅಭಿಜಾತ ಮಾನವಶಾಸ್ತ್ರದ್ದು.

ಆದರೆ ಯುರೋಪಿನಲ್ಲಿ ಮಾನವಶಾಸ್ತ್ರದ ಶುದ್ಧ ರಾಜಕೀಯ ಉದ್ದೇಶಗಳನ್ನು ಪ್ರಶ್ನಿಸಿ ಅದನ್ನು ಒಂದು ಜ್ಞಾನಶಿಸ್ತನ್ನಾಗಿ ರೂಪಿಸಿದ್ದು ಅಲ್ಲಿನ ರಚನಾವಾದಿಗಳು. ತತ್ವಶಾಸ್ತ್ರದ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ ಲೆವಿಸ್ಟ್ರಾಸ್ ಇಂತಹ ಪ್ರಯತ್ನಕ್ಕೆ ಮುಂದಾದನು. ಮೂಲತಃ ತತ್ವಶಾಸ್ತ್ರದ ವಿದ್ಯಾರ್ಥಿಯಾಗಿದ್ದ ಲೆವಿಸ್ಟ್ರಾಸ್ ತನ್ನ ಕ್ಷೇತ್ರದಲ್ಲಿನ ಕೆಲವು ಪ್ರಶ್ನೆಗಳನ್ನು ವಿವರಿಸಿಕೊಳ್ಳಲು ಲ್ಯಾಟಿನ್ ಅಮೇರಿಕಾದ ಆದಿಮ ಸಮಾಜಗಳ ನೆರವನ್ನು ಪಡೆಯಲು ಹೊರಟಾಗ ಆತನಿಗೆ ಯುರೋಪಿನ ಅಭಿಜಾತ ಮಾನವಶಾಸ್ತ್ರದ ದೃಷ್ಟಿದೋಷಗಳು ಮತ್ತು ಶೈಕ್ಷಣಿಕ ಮಿತಿಗಳು ಕಂಡುಬಂದವು. ಲೆವಿಸ್ಟ್ರಾಸ್ ಆನಂತರ ತಾನೇ ಒಬ್ಬ ಮಾನವಶಾಸ್ತ್ರಜ್ಞನಾಗಿ ತನ್ನನ್ನು ರೂಪಾಂತರಿಸಿಕೊಳ್ಳುವಷ್ಟು ಈತ ಮಾನವಶಾಸ್ತ್ರಕ್ಕೆ ತಕ್ಕುದಾದ ಶಸ್ತ್ರ ಚಿಕಿತ್ಸೆಯನ್ನು ಮಾಡಲಾರಂಭಿಸಿದ. ಮುಂದೆ ಏಮಿ ಸಿಸಾರೆ, ಮೆಮ್ಮಿ, ಫ್ಯಾನನ್‌ರಂತಹ ಜನ ಮಾನವಶಾಸ್ತ್ರಕ್ಕೆ ಹೊಸ ರೂಪವನ್ನೇ ಕೊಟ್ಟರು. ಆನಂತರ ಯುರೋಪಿನ ಮಾರ್ಕ್ಸ್‌ವಾದಿಗಳು ಮಾನವಶಾಸ್ತ್ರದ ಕ್ಷೇತ್ರದಲ್ಲಿ ಶೈಕ್ಷಣಿಕ ಕ್ರಾಂತಿಯನ್ನೇ ಮಾಡಿದರು. ಗ್ರಾಮ್ಸ್ಕಿ ಈ ಕ್ರಾಂತಿಯ ಮುಂಚೂಣಿಯ ದಂಡನಾಯಕನಾಗಿದ್ದ.

ಆದರೆ ಭಾರತದಲ್ಲಿ, ಅದೂ ಕನ್ನಡದಲ್ಲಿ ಈ ಬಗೆಯ ಕ್ರಾಂತಿಕಾರಕವೆನ್ನಿಸುವ ಬದಲಾವಣೆಗಳು ಸಾಮಾಜಿಕ ಅಧ್ಯಯನಗಳಲ್ಲಿ ಸಂಭವಿಸಿವೆ ಎಂದು ಧೈರ್ಯವಾಗಿ ಹೇಳಲಾಗುವುದಿಲ್ಲ. ಭಾರತದ ಸಮಾಜ ವಿಜ್ಞಾನಿಗಳಿಗೆ ಲೂಯಿ ಡುಮೋನಂತಹ ವಿದ್ವಾಂಸ, ಅರ್ನಾಲ್ಡ್‌ನಂತಹ ಆದರ್ಶವಾದಿ ಮಾದರಿಯಾಗಿ ಒದಗಿ ಬಂದರು. ಎಸ್.ಸಿ. ರಾಯ್, ಮುಜುಂದಾರ್, ಆರ್.ಡಿ. ಚಂದ್ರಾರಂತಹ ಆರಂಭದ ಮಾನವಶಾಸ್ತ್ರಜ್ಞರು ಯಾವ ತಕರಾರುಗಳಿಲ್ಲದೆ ಯುರೋಪಿನ ಕ್ಲಾಸಿಕಲ್ ಮಾನವಶಾಸ್ತ್ರದ ಶೈಕ್ಷಣಿಕ ವಿಧಾನವನ್ನು ಚಾಚು ತಪ್ಪದೆ ಅನುಸರಿಸಿ ಅಂದಿನ ಕಂಪನಿ ಆಡಳಿತದ ಶಬಾಷ್‌ಗಿರಿ ಪಡೆದರು. ೨೦ನೇ ಶತಮಾನದ ಆರಂಭದಲ್ಲಿ ಭಾರತದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಸಮಾಜಶಾಸ್ತ್ರ ಮತ್ತು

ಮಾನವಶಾಸ್ತ್ರಗಳ ಅಧ್ಯಯನ ವಿಭಾಗಗಳು ಪ್ರಾರಂಭವಾದವು. ಆದರೆ ಈ ಅಧ್ಯಯನಗಳಿಗೆ 'ಒಳಗಿನವುಗಳಾಗುವ' ತಾತ್ವಿಕ ಹಿನ್ನೆಲೆ ಇರಲಿಲ್ಲ. ಕಂಪನಿ ಸೈನ್ಯದ ವಿರುದ್ಧ ಮತ್ತು ಆಡಳಿತದ ವಿರುದ್ಧ, ತಿರುಗಿಬಿದ್ದ ಸಮುದಾಯಗಳನ್ನು ಹದ್ದುಬಸ್ತಿನಲ್ಲಿಡಲು ಅವುಗಳನ್ನು ಪಟ್ಟಿಮಾಡಲು ಮತ್ತು ಅವುಗಳ ಚಟುವಟಿಕೆಗಳನ್ನು ದಾಖಲಿಸಲು ಪ್ರಾರಂಭಿಸಿದ ರಿಸ್ಲೆ ಅನುಯಾಯಿಗಳ ಕಸರತ್ತುಗಳೊಂದಿಗೆ Enthnography ಹೆಸರಲ್ಲಿ ಸಾಮಾಜಿಕ ಅಧ್ಯಯನಗಳು ಇಂಡಿಯಾದಲ್ಲಿ ಪ್ರಾರಂಭವಾದವು. ಈ 'ಅಧ್ಯಯನಗಳು' ಮುಂದೆ ೧೮೭೧ರಲ್ಲಿ ರೂಪಗೊಂಡ Criminal Tribal Act ಎಂಬ ಕಾಯ್ದೆಗೆ ಪೂರ್ಣ ಪ್ರಮಾಣದ ಆಕರಗಳಾದವು. ವಾಸ್ತವವಾಗಿ ಇಂತಹದ್ದೊಂದು ನಿಷ್ಕರುಣೆಯ ಕಾಯ್ದೆಯನ್ನು ರೂಪಿಸಲೆಂದೇ Enthnographic Servey of Indiaದಲ್ಲಿನ ವಿವಿಧ ಇಲಾಖೆಯ ಅಧಿಕಾರಿಗಳು ತಮ್ಮ ಅಧ್ಯಯನಗಳನ್ನು ಕೈಗೊಂಡಿದ್ದರು. ಕಂಪನಿ ಆಡಳಿತ ಅದಕ್ಕಾಗಿ ಹೇರಳ ಹಣವನ್ನು ವಿನಿಯೋಗಿಸಿತ್ತು. (ನಿನ್ನೆ ಮೊನ್ನೆ ಅಮೆರಿಕಾದ ರಕ್ಷಣಾ ಇಲಾಖೆ ಇರುವ ಪೆಂಟಗಾನ್ ಸಹ ವಿವಿಧ ದೇಶಗಳ ಭಾಷೆಗಳನ್ನು ಅಧ್ಯಯನ ಮಾಡಲು ಹಣ ಸಹಾಯ ಮಾಡುತ್ತಿತ್ತು!) ಜನಗಣತಿ, ಗೆಜೆಟಿಯರ್, ಸಂಪಾದನೆ, ಭೂಮಾಪನ ಮುಂತಾದ ಅರೆ ಶೈಕ್ಷಣಿಕ ಚಟುವಟಿಕೆಗಳು ಸ್ಥಳೀಯ ಜನತೆಯ ಸ್ವಭಾವಗಳನ್ನು ಅರ್ಥ ಮಾಡಿಕೊಳ್ಳಲು ನಡೆಸಿದ ಕಸರತ್ತುಗಳೇ ಆಗಿವೆ. ಇಂತಹ ಕಸರತ್ತುಗಳ ಫಲವಾಗಿಯೇ, ಮ್ಯೂಸಿಯಂ ನೋಡಿಕೊಂಡಿದ್ದ ಥರ್ಸ್ಟ್‌ನ್ ಎಂಬಾತ ರಾತ್ರೋರಾತ್ರಿ ಮಾನವಶಾಸ್ತ್ರಜ್ಞನಾಗಿ ರೂಪುಗೊಳ್ಳುತ್ತಾನೆ. ಎಲ್ಲೋ ಪೊಲೀಸ್ ಕೆಲಸ ಮಾಡಿಕೊಂಡಿದ್ದ ಫಾಸೆಟ್ ಎಂಬಾತ ಮಲಬಾರಿನ ನಾಯರ್ ಸಮುದಾಯವನ್ನು ಅಧ್ಯಯನ ಮಾಡಿಬಿಟ್ಟ! ದುರಂತದ ಸಂಗತಿಯೆಂದರೆ, ಥರ್ಸ್ಟ್‌ನ್, ಫಾಸೆಟ್‌ರಂತಹ ಜನ ಬರೆದ ಆವತ್ತಿನ ಪುಸ್ತಕಗಳು ಇಂದೂ ಸಮಾಜವಿಜ್ಞಾನಗಳ ಕ್ಷೇತ್ರದ ಜನಕ್ಕೆ ಪ್ರಮಾಣ ಗ್ರಂಥಗಳಾಗಿ ಉಳಿದುಬಿಟ್ಟಿರುವುದು. ಇನ್ನೂ ಒಂದು ದುರಂತವೆಂದರೆ, ಭಾರತದ ಮಾನವಶಾಸ್ತ್ರಜ್ಞರು ಇನ್ನೂ ಥರ್ಸ್ಟ್‌ನ್‌ರಂತವರ ಅಧ್ಯಯನಗಳನ್ನು ತಾತ್ವಿಕವಾಗಿ ಒಪ್ಪಿಕೊಂಡಿರುವುದು.

Ethnographic Servey of Indiaದ ಶೈಕ್ಷಣಿಕ ಚಟುವಟಿಕೆಗಳ ಹಿಂದಿದ್ದ ಉದ್ದೇಶಗಳು ಶುದ್ಧ ಶೈಕ್ಷಣಿಕವಾದವುಗಳೇನಾಗಿರಲಿಲ್ಲ ಎಂಬುದನ್ನು ಮೊದಲೇ ಹೇಳಲಾಗಿದೆ. ಮತ್ತು ಈ ಸಂಸ್ಥೆಯ ಶೈಕ್ಷಣಿಕ ಉದ್ದೇಶಗಳನ್ನು ಜಾರಿಗೆ ತರಲು ನೇಮಕಗೊಂಡ ವಿದ್ವಾಂಸರಿಗೆ ಯಾವ ಶಾಸ್ತ್ರೀಯ ತರಬೇತಿಯೂ ಇರಲಿಲ್ಲ. ಈ ದೇಶವನ್ನಾಳಲು ಮತ್ತು ತಮ್ಮ ಆಡಳಿತದ ಎಲ್ಲೆಗಳನ್ನು ವಿಸ್ತರಿಸಲು ಜನರನ್ನು ಮತ್ತು ಅವರ ಬದುಕಿನ ವಿವರಗಳನ್ನು ತಿಳಿದುಕೊಳ್ಳುವ ಅಗತ್ಯ ಇದ್ದ ಕಾರಣಕ್ಕಾಗಿ ಮೇಲಿನ ವಿದ್ವಾಂಸರು, ಈ ದೇಶದ ಜನರ, ಸಂಸ್ಕೃತಿಯ ವಿವರಗಳನ್ನು ದಾಖಲಿಸಲಾರಂಭಿಸಿದರು. ಬಂಡೆದ್ದ ದುಡಿವವರ್ಗದ ಜನರನ್ನು ಅಪರಾಧಿ ಸಮುದಾಯಗಳೆಂದು ಕರೆಯಲು ತಕ್ಕ ಪುರಾವೆಗಳನ್ನೂ ಈ ವಿದ್ವಾಂಸರು ಕಲೆಹಾಕಿದರು. ಮಾಹಿತಿಗಳನ್ನು ಕಲೆಹಾಕಿ ಪ್ರಕಟಿಸುವುದು, ಅದರಲ್ಲೂ ಕಂಪನಿ ಆಡಳಿತದ ವಿರುದ್ಧ ತಿರುಗಿಬಿದ್ದ ಸಮುದಾಯಗಳ ಜೀವನ ವಿವರಗಳನ್ನು ಸಂಗ್ರಹಿಸಿ ಅಚ್ಚುಹಾಕಿಸುವುದು Ethnographic Servey of Indiaದ ಮೂಲ ಉದ್ದೇಶಗಳಲ್ಲೊಂದಾಗಿತ್ತು. ಈ ಎಲ್ಲ ಶೈಕ್ಷಣಿಕ ಚಟುವಟಿಕೆಗಳು ತಮಗರಿವಿಲ್ಲದಂತೆ

ಕಂಪನಿ ಆಡಳಿತದ ಉಪಯೋಗವಾದಿ ಸಿದ್ಧಾಂತವನ್ನು ಸಾಕಿಕೊಂಡು ಬಂದಿದ್ದವು. ಅಲ್ಲದೆ ಮಾನವಕುಲಶಾಸ್ತ್ರದ ಪರಿಕಲ್ಪನೆಗಳೂ ಸಹ ಸೃಜನಶೀಲವಲ್ಲದ ಅಪ್ಪಟ ಊಳಿಗಮಾನ್ಯ ಸ್ವಭಾವಗಳನ್ನು ಮೈಗೂಡಿಸಿಕೊಂಡು ಬೆಳೆದು ಕೊಬ್ಬಿಹೋದವು. ಈ ಪರಿಕಲ್ಪನೆಗಳಿಗೆ ಭಾರತದ ವೈವಿಧ್ಯಮಯ ತಿಳುವಳಿಕೆಗಳಾಗಲಿ, ಸನಾತನ ಅಸಮಾನ ಆರ್ಥಿಕತೆಯಿಂದ ವಿಷಮಗೊಂಡ ಸಮಾಜದ ಚಲನೆಗಳಾಗಲಿ ಅರ್ಥವಾಗಲಿಲ್ಲ. ಮಾಹಿತಿ ಕಲೆ ಹಾಕುವುದೇ ಮಾನವಶಾಸ್ತ್ರದ ಅಭ್ಯಾಸಿಗಳ ಪರಮಶಿಸ್ತು ಎಂಬ ಗ್ರಹಿಕೆಗಳು ಬೆಳೆದು ನಿಂತವು. ಈ ಮಾಹಿತಿ ಯಾರಿಗೆ, ಯಾಕಾಗಿ ಬಳಕೆಯಾಗುತ್ತದೆ? ಎಂಬ ಕಾಳಜಿಗಳೇ ಈ ಅಧ್ಯಯನಗಳಲ್ಲಿ ಗೈರು ಹಾಜರಾಗಿದ್ದವು. ಮುಖ್ಯವಾಗಿ ಶಾಸ್ತ್ರಶಿಸ್ತೊಂದನ್ನು ತತ್ವಶಾಸ್ತ್ರೀಯವಾಗಿ ಬೆಳೆಸುವ ಸೃಜನಶೀಲ ಆಯಾಮಗಳು ಈ ಪರಿಕಲ್ಪನೆಗಳಲ್ಲಿ ಹುಲುಸಾಗಿ ಬೆಳೆಯಲಿಲ್ಲ. ಭಾರತದ ಸಂದರ್ಭದಲ್ಲಿ ಸಬಾಲ್ಟರ್ನ್ ಅಧ್ಯಯನಗಳು ಪ್ರಾರಂಭವಾಗುವವರೆಗೂ ಈ ಕ್ಷೇತ್ರ ಯುರೋಪಿನ ಶೈಕ್ಷಣಿಕ ಚಟುವಟಿಕೆಗಳ ನಕಲಾಗಿಯೇ ಉಳಿದಿತ್ತು. ಕನ್ನಡದಲ್ಲಿ ಇಂದಿಗೂ ಮಾನವಶಾಸ್ತ್ರದ ಅಧ್ಯಯನಗಳಿಗೆ ಕ್ಲಾಸಿಕಲ್ ಮಾನವಶಾಸ್ತ್ರವು ಸೈದ್ಧಾಂತಿಕವಾಗಿ ಒಪ್ಪಿತ ಶಿಸ್ತಾಗಿಯೇ ಉಳಿದುಬಿಟ್ಟಿದೆ. ಅಲ್ಲದೆ ಕಂಪನಿ ಸರಕಾರ ತನ್ನ ಆಡಳಿತದ ಅನುಕೂಲಕ್ಕೆ ಬಳಸಿಕೊಂಡ ಶೈಕ್ಷಣಿಕ ಶಿಸ್ತೊಂದು ರೂಪಿಸಿದ ದುಡಿವ ವರ್ಗಗಳ ಪ್ರತಿರೋಧಗಳನ್ನು ಗ್ರಹಿಸುವ ವಿಧಾನವೂ ಸಹ ಇನ್ನೂ ಭಾರತದಲ್ಲಿ ಜೀವಂತವಾಗಿದೆ. ದುಡಿವ ಜನರು ಸಹಜ ಹಕ್ಕುಗಳಿಗಾಗಿ ಹೋರಾಟಕ್ಕೆ ತೊಡಗುವುದನ್ನು ಯಾವ ಅಧ್ಯಯನಗಳು ಅಪರಾಧವೆಂದು ಪರಿಗಣಿಸಿದವೋ ಆ ಬಗೆಯ ಆಲೋಚನಾ ಕ್ರಮ ಇಂದಿಗೂ ಬದಲಾಗದೇ ಉಳಿದುಬಂದಿದೆ. ಇಂದಿಗೂ ಪೊಲೀಸರ ಪಠ್ಯಕ್ರಮದಲ್ಲಿ 'ಅಪರಾಧಿ ಬುಡಕಟ್ಟು ಕಾಯ್ದೆಯನ್ನು' ಪಠ್ಯವಾಗಿ ಬೋಧಿಸಲೆಂದು ಉಳಿಸಿಕೊಳ್ಳಲಾಗಿದೆ. ಊಳಿಗಮಾನ್ಯ ಆಡಳಿತ ಸಹಜವಾಗಿಯೇ ಈ ಬಗೆಯ ಉಪಯೋಗಕ್ಕಾಗಿ ಸೃಜನಶೀಲವಾದ ತಿಳುವಳಿಕೆಯ ಜಗತ್ತನ್ನು ಅರೆಪ್ರಜ್ಞೆಯಲ್ಲಿರಿಸಿ ಬಿಡುತ್ತದೆ. ೧೯ನೇ ಶತಮಾನದ ಕೊನೆಯ ಹೊತ್ತಿನಲ್ಲಿ ಪ್ರಾರಂಭವಾದ ಮಾನವಶಾಸ್ತ್ರದ ಅಧ್ಯಯನಗಳು ಯಾವ ಬಗೆಯಲ್ಲಿ ಆಡಳಿತಕ್ಕೆ ಪೂರಕವಾಗಿದ್ದವೋ ಆ ಸ್ಥಿತಿ ಸಂಪೂರ್ಣವಾಗಿ ಬದಲಾಗಿಲ್ಲ. ಜೊತೆಗೆ ಅಂದಿನ ಅಧ್ಯಯನಗಳ ರಾಜಕೀಯ ದೃಷ್ಟಿಕೋನ ಇಂದಿಗೂ ನಾಡಿನ ಜನರ ಪ್ರತಿಭಟನೆಗಳನ್ನು ಗ್ರಹಿಸುವಾಗ ಪ್ರಧಾನಪಾತ್ರ ವಹಿಸುವುದು ದುರಂತದ ಸಂಗತಿಯೇ ಸರಿ.

ನಾಡಿನ ಆಡಳಿತ ಮತ್ತು ಶೈಕ್ಷಣಿಕ ಸಂದರ್ಭಗಳೆರಡೂ ಸೃಜನಶೀಲವಾಗಿ ಜಡಗೊಂಡಾಗ ಮಾತ್ರ ಈ ಬಗೆಯ ದುರಂತಗಳು ಸಂಭವಿಸಲು ಸಾಧ್ಯ. ಯಾರೋ ಸಾಮ್ರಾಜ್ಯಶಾಹಿಗಳ ಆಸ್ಥಾನದ ಪಂಡಿತ ಇಲ್ಲಿನ ಜನರ ಹೋರಾಟವನ್ನು ದೇಶದ್ರೋಹದ ಚಟುವಟಿಕೆಯೆಂದು ಪರಿಗಣಿಸಿಬಿಡುವುದು ಅವನ ಸಾಮ್ರಾಜ್ಯಶಾಹಿ ಪರ ರಾಜಕೀಯ ದೃಷ್ಟಿಕೋನಕ್ಕೆ ಪೂರಕವಾದ ಸಂಗತಿಯಾಗಿಬಿಡಬಹುದು. ಆದರೆ ಜನತಂತ್ರ ವ್ಯವಸ್ಥೆಯಲ್ಲಿ ಅದೇ ಬಗೆಯ ಊಳಿಗಮಾನ್ಯತೆ ನಮ್ಮನ್ನು ಆಳಿಬಿಡುತ್ತದೆಯೆಂದರೆ ರಾಜಕೀಯವಾಗಿ ನಮ್ಮ ಆಡಳಿತ ವ್ಯವಸ್ಥೆ ಬದಲಾಗದೇ, ಮುಂದಕ್ಕೆ ಚಲಿಸದೆ ವಸಾಹತು ಕಾಳಘಟ್ಟದ ಸ್ಥಿತಿಯಲ್ಲಿಯೇ ನಿಂತುಬಿಟ್ಟಿದೆಯೆನ್ನಿಸುತ್ತದೆ. ಇಲ್ಲಿ ಆಳ್ವಿಕೆಯನ್ನು ಪೋಷಿಸಲು ಮಾತ್ರ ನಿಯಮಗಳು ಕಟ್ಟುನಿಟ್ಟಾಗಿ

ಜಾರಿಯಾಗುತ್ತವೆ. ಜನತಂತ್ರ, ಜನರ ಸೃಜನಶೀಲ ಅಂತಃಸ್ಸತ್ವಕ್ಕೆ ತಕ್ಕಂತೆ ಅನುಷ್ಠಾನಗೊಳ್ಳದೆ, ಆದರ್ಶದ ಚೌಕಟ್ಟಿನಲ್ಲಿ ಮಾತ್ರ ಜಡವಾಗಿಬಿಡುತ್ತದೆ.

ಹೀಗಾಗಿಯೂ ಮಾನವಶಾಸ್ತ್ರವು, ತಾನು ಸಾಮ್ರಾಜ್ಯಶಾಹಿಗಳ ಜೊತೆ ನಡೆದುಹೋದ ದೇಶಗಳಲ್ಲಿ ಸ್ಥಳೀಯ ಸಂವೇದನೆಗಳ ಭಾಗವಾಗಲು ಯತ್ನಿಸಿದೆ. ಅದರಲ್ಲಿ ಮಾರ್ಕ್ಸ್‌ವಾದಿಗಳ ಪ್ರಯತ್ನವಂತೂ ಅಮೂಲ್ಯವಾದದ್ದಾಗಿದೆ.

ಜ್ಞಾನ ಮತ್ತು ಅಧಿಕಾರ: ನಿರ್ವಸಾಹತೀಕರಣ ಚಿಂತನೆ

ಹಿಂದಿನ ಅಧ್ಯಾಯದಲ್ಲಿ ವಸಾಹತು ಸಂದರ್ಭದ ಅಧ್ಯಯನಕಾರರು ಮತ್ತು ಅವರ ಅಧ್ಯಯನಗಳ ಸ್ವರೂಪಗಳನ್ನು ವಿವರಿಸಲಾಗಿದೆ. ಅಲ್ಲಿ ವಸಾಹತು ಕಾಲಘಟ್ಟದ ಅಧ್ಯಯನಗಳಿಗೂ ಮತ್ತು ಶಕ್ತಿ ರಾಜಕಾರಣಕ್ಕೂ ಇರುವ ಅವಿನಾಭಾವ ಸಂಬಂಧವನ್ನು ವಿವರಿಸಲು ಪ್ರಯತ್ನಿಸಲಾಗಿದೆ. ಇವತ್ತು ನಾವು ಯಾವುದನ್ನು ಸಮಾಜ ವಿಜ್ಞಾನ ಎಂದು ಕರೆಯುತ್ತೇವೋ ಅದರ ಅಧ್ಯಯನ ಶಿಸ್ತುಗಳ ಶೈಕ್ಷಣಿಕ ವಿಧಾನಗಳನ್ನು ರೂಪಿಸಿದ್ದು ಮತ್ತು ಪ್ರಚಲಿತಗೊಳಿಸಿದ್ದು ಯುರೋಪು. ಆನಂತರ ಈ ಬಗೆಯ ಅಧಿಕಾರವು ಅಮೇರಿಕಾಕ್ಕೆ ಹಸ್ತಾಂತರಗೊಂಡಿತು. ಯಾವುದು ಸಂಶೋಧನೆ? ಸಂಶೋಧನೆಯ ಆದ್ಯ ಕಾಳಜಿಗಳೇನು? ಸಂಶೋಧನೆಯಿಂದ 'ಯಾವ' ಸತ್ಯವನ್ನು ಕಂಡುಕೊಳ್ಳಬೇಕು? ಸತ್ಯವೆಂದರೆ ಯಾವುದು? ಯಾವ ಶೈಕ್ಷಣಿಕ ವಿಧಾನದ ಮೂಲಕ ಕಂಡುಕೊಂಡ ಅಧ್ಯಯನದ ಫಲಿತವು ಸತ್ಯವಾಗಿರುತ್ತದೆ? ಎಂಬುದನ್ನು ನಿರ್ಧರಿಸುವ ಅಧಿಕಾರವು ಯುರೋಪಿನಿಂದ ಅಮೇರಿಕಾಕ್ಕೆ ವರ್ಗಾವಾಯಿತು. ಕಾರಣ ಜಗತ್ತನ್ನು ನಿಯಂತ್ರಿಸುವ ಅಧಿಕಾರವನ್ನು ಅಮೇರಿಕಾವು ಯುರೋಪಿನಿಂದ ಕಿತ್ತುಕೊಂಡಿತ್ತು. ಆ ನಂತರ ಅಮೇರಿಕಾ ಪ್ರಣೀತ ಶೈಕ್ಷಣಿಕ ವಿಧಾನಗಳು ಸಮಾಜ ವಿಜ್ಞಾನಗಳಲ್ಲಿ ಅದರಲ್ಲೂ ಮಾನವಶಾಸ್ತ್ರದಲ್ಲಿ ಹೆಚ್ಚು ಮುಂಚೂಣಿಗೆ ಬಂದವು. ಮೆಲಿನೋವಸ್ಕಿಯ ಸಹಭಾಗಿ ಅನುಭವಾತ್ಮಕ ಅಧ್ಯಯನ, ರೆಡ್‌ಕ್ಲಿಫ್ ಬ್ರೌನ ಅವರ ಸ್ಟ್ರಕ್ಚರಲ್ ಫಂಕ್ಷನಲಿಸಂ ಮಾನವಶಾಸ್ತ್ರದ ವಿಧಿವಿಧಾನಗಳನ್ನು ನಿರ್ಣಾಯಕವಾಗಿ ಪ್ರಭಾವಿಸಿದವು.

ಈ ಕಾಲಘಟ್ಟದಿಂದ ಸಮಾಜವಿಜ್ಞಾನಗಳ ಅಧ್ಯಯನ ವಿಧಾನಗಳು ಮಹಾಕಥನಗಳಾಗಿ ಬೆಳೆದು ನಿಂತವು. ಜಗತ್ತಿನೆಲ್ಲೆಡೆ ಈ ಕಥನಗಳು ತೀವ್ರ ಪ್ರಭಾವ ಬೀರಿದ ಕಾರಣಕ್ಕಾಗಿ ಅಮೇರಿಕಾವು ಜಗತ್ತಿನ ಸಮಾಜಗಳ ಹಲವು ಸಂಗತಿಗಳನ್ನು ಅರ್ಥಮಾಡಿಕೊಳ್ಳುವ ಮತ್ತು ನಿಯಂತ್ರಿಸುವ ಶಕ್ತಿಯಾಗಿ ಬೆಳೆದು ನಿಂತಿತು. 'ಅಮೇರಿಕಾದ ಅನೇಕ ಫೌಂಡೇಶನ್‌ಗಳು ಭಾರತದಲ್ಲಿ ಸಾಮಾಜಿಕ ಅಧ್ಯಯನಗಳನ್ನು ಕೈಗೊಳ್ಳಲು ಧನಸಹಾಯ ಮಾಡತೊಡಗಿದವು. ಪಠ್ಯಕ್ರಮ ರೂಪಿಸುವುದು, ವಿದ್ಯಾರ್ಥಿ ವೇತನಗಳನ್ನು ನೀಡುವುದರ ಜೊತೆಗೆ ಹಲವು ಶೈಕ್ಷಣಿಕ ಸಂಸ್ಥೆಗಳನ್ನು ಹುಟ್ಟುಹಾಕಿ ಅಲ್ಲಿ ನಡೆಯುವ ಅಧ್ಯಯನಗಳಿಗೆ ಈ ಫೌಂಡೇಶನ್‌ಗಳು ಅನುವು ಮಾಡಿಕೊಟ್ಟವು. ಇದರಿಂದಾಗಿ ವಸಾಹತೋತ್ತರ ಕಾಲಘಟ್ಟದ ನಂತರವೂ ಭಾರತದ ಸಾಮಾಜಿಕ ಅಧ್ಯಯನಗಳು ಮೊದಲಿನ 'ಜನಪ್ರಿಯ' ಮಾದರಿಯಲ್ಲಿಯೇ ಉಳಿದವು[೯೦]. ಅಮೇರಿಕಾವು ಏರಿಯಾ ಸ್ಟಡಿ ಮತ್ತು ಅನ್ವಯಿಕ ಶೈಕ್ಷಣಿಕ ಯೋಜನೆಗಳ ನೆಪದಲ್ಲಿ, ಮೂರನೇ ಜಗತ್ತಿನ ದೇಶಗಳಲ್ಲಿ ಸಾಮ್ರಾಜ್ಯಶಾಹಿ ಹುನ್ನಾರಗಳು ಮಿಳಿತಗೊಂಡ ಅಧ್ಯಯನ ವಿಧಾನಗಳನ್ನೇ ಪ್ರಚುರ ಪಡಿಸಿತು. ಯೋಗೇಂದ್ರಸಿಂಗ್ ಅದನ್ನು

ಹೀಗೆ ವಿವರಿಸುತ್ತಾರೆ. 'ಭಿನ್ನ ಶೈಕ್ಷಣಿಕ ವಿಧಾನ ಮತ್ತು ಯೋಜನೆಗಳನ್ನು ನಿರೂಪಿಸುವ ಅನ್ವಯಿಕ ಗುಣವುಳ್ಳ ಅಮೇರಿಕಾದ ಸಮಾಜಶಾಸ್ತ್ರದ ಮಾದರಿಯನ್ನು ಮೂರನೇ ಜಗತ್ತಿನ ರಾಷ್ಟ್ರಗಳು ಅನುಸರಿಸತೊಡಗಿದವು. ಅಲ್ಲದೆ ಸಮಾಜಶಾಸ್ತ್ರದ ಜೊತೆಗೆ ಅಮೇರಿಕಾದಲ್ಲಿ ಸಾಮಾಜಿಕ ಮಾನವಶಾಸ್ತ್ರವೂ ರೂಪುಗೊಂಡಿತು. ಇಂಡಿಯಾದ ಸಮಾಜಶಾಸ್ತ್ರವೂ ಸಹ ಅಮೇರಿಕಾದ ಸಮಾಜಶಾಸ್ತ್ರ ಮತ್ತು ಸಾಮಾಜಿಕ ಮಾನವಶಾಸ್ತ್ರದ ಪರಿಕಲ್ಪನೆ ಮತ್ತು ಹಿನ್ನೆಲೆಗಳಿಂದ ಸಹಜವಾಗಿಯೇ ಪ್ರಭಾವಿತವಾಯಿತು'[೧೧]. ಇದರ ಜೊತೆಗೆ ಭಾರತದ ಅಭಿವೃದ್ಧಿಯ ನಿಯಂತ್ರಕ ಶಕ್ತಿಯೂ ಯುರೋಪಿನಿಂದ ಅಮೇರಿಕಾಕ್ಕೆ ವರ್ಗಗೊಂಡಿತು. ಕೃಷಿ ಉತ್ಪಾದನೆ, ಕೈಗಾರಿಕೆ ಮತ್ತು ಅಭಿವೃದಿ ಯೋಜನೆಗಳಿಗೆ ಸಂಬಂಧಿಸಿದಂತೆ ಅಮೇರಿಕಾವು ಭಾರತಕ್ಕೆ ಮಾದರಿಯಾಯಿತು. ಇದೇ ಹೊತ್ತಿನಲ್ಲಿ 'ಮಾನವಶಾಸ್ತ್ರದ ಅಧ್ಯಯನಗಳು ಆದಿಮ ಬುಡಕಟ್ಟುಗಳನ್ನು ಸ್ವಲ್ಪ ಹಿಂಜರಿಕೆಯಿಂದಲೇ ಬಿಟ್ಟುಕೊಟ್ಟು ರೈತ ಸಮುದಾಯಗಳನ್ನು ಹೆಚ್ಚು ಪರಿಗಣಿಸಲಾರಂಭಿಸಿದವು. ವ್ಯವಸಾಯೀ ಸಂಸ್ಕೃತಿಯು ಒಂದು ನಾಗರೀಕತೆಗೆ ಅತ್ಯಂತ ಆದಿಮವಾದದ್ದು ಎಂದು ಮಾನವಶಾಸ್ತ್ರಜ್ಞರು ಭಾವಿಸಲಾರಂಭಿಸಿದು. ಮಾನವಶಾಸ್ತ್ರದ ಅಧ್ಯಯನಗಳಿಗೆ ಈ ಬಗೆಯ ನೆರವು ಕೊಟ್ಟಿದ್ದು ಅಮೇರಿಕಾದ ವಿಶ್ವವಿದ್ಯಾಲಯಗಳು. ಅದರಲ್ಲೂ ಚಿಕಾಗೋ ವಿಶ್ವವಿದ್ಯಾಲಯದ ಮಾನವಶಾಸ್ತ್ರ ವಿಭಾಗದ ಮುಖ್ಯಸ್ಥನಾಗಿದ್ದ ರಾಬರ್ಟ್ ರೆಡ್‌ಫೀಲ್ಡ್ ಈ ಬಗೆಯ ಅಧ್ಯಯನಗಳಿಗೆ ಅನುವು ಮಾಡಿದ'[೧೨].

ಅಮೇರಿಕಾವು ಯುರೋಪಿಗಿಂತ ತುಸು ಹೆಚ್ಚಾಗಿ ಮೃದು ಹುನ್ನಾರಗಳನ್ನು ರೂಪಿಸಿಕೊಂಡು ಮೂರನೇ ಜಗತ್ತಿನ ದೇಶಗಳಲ್ಲಿ ತನ್ನ ಕಾರ್ಯಾಚರಣೆಗಳನ್ನು ಆರಂಭಿಸಿತು. ಯುರೋಪಿನ ಒರಟು ತಂತ್ರಗಾರಿಕೆಯ ಮುಂದೆ ಅಮೇರಿಕಾವು ಹೆಚ್ಚು ಪ್ರಗತಿಪರವೂ, ಅಭಿವೃದ್ಧಿಶೀಲವೂ ಆದ ಏರಿಯಾ ಸ್ಟಡಿಗಳ ಮುಖವಾಡಗಳನ್ನು ಮುಂದುಮಾಡಿಕೊಂಡು ಪ್ರತ್ಯಕ್ಷವಾಯಿತು. ಮೂರನೇ ಜಗತ್ತಿನ ಅಭಿವೃದ್ಧಿಯ ಕುರಿತು ಸದಾ ಚಿಂತಿಸುವ ಬಿಡುವಿಲ್ಲದ ಹರಿಕಾರನಂತೆ ಅಮೇರಿಕಾವು ತನ್ನನ್ನು ಬಿಂಬಿಸಿಕೊಂಡಿತು. ಇದಕ್ಕೆ ಪೂರಕವಾಗಿ ವಿಶ್ವಬ್ಯಾಂಕ್. ಐ.ಎಂ.ಎಫ್ ಮತ್ತು ವಿಶ್ವಸಂಸ್ಥೆಯಂತಹ ಜಾಗತಿಕ ಸಂಸ್ಥೆಗಳು ಅಮೇರಿಕಾದ ಅಂಗಸಂಸ್ಥೆಗಳಾಗಿ ಬದಲಾದವು. ಅಮೇರಿಕಾವು ಈ ಮೊದಲೇ ಹೇಳಿದಂತೆ ತನ್ನ ವಿಶ್ವವಿದ್ಯಾಲಯಗಳ ಮೂಲಕ ಜಗತ್ತಿನ ಬೇರೆ ಬೇರೆ ಕಡೆಗಳಲ್ಲಿ ಅನೇಕ ಸ್ವಯಂಸೇವಾ ಸಂಸ್ಥೆಗಳನ್ನು, ಮತ್ತು ಫೌಂಡೇಶನ್‌ಗಳನ್ನು ಪ್ರಾರಂಭಿಸಿ ಅವುಗಳ ಮೂಲಕ ಶೈಕ್ಷಣಿಕ ಚಟುವಟಿಕೆಗಳನ್ನು ಹಮ್ಮಿಕೊಂಡಿತು. ಭಾರತದಲ್ಲಿ ಇದೇ ಸಂದರ್ಭದಲ್ಲಿ ಏರಿಯಾ ಸ್ಟಡಿಗಳು ಮತ್ತು ಗ್ರಾಮ ಅಧ್ಯಯನಗಳು ಪ್ರಾರಂಭಗೊಂಡವು. '೧೯೫೦ ರ ದಶಕದಲ್ಲಿ ಭಾರತದಲ್ಲೂ ಗ್ರಾಮ ಮತ್ತು ನಗರಗಳ ಅಧ್ಯಯನಗಳು ಪ್ರಾರಂಭವಾದವು. ಎಸ್.ಸಿ.ದುಬೆ, ಎಂ.ಎನ್.ಶ್ರೀನಿವಾಸ್. ರಾಮಕೃಷ್ಣ ಮುಖರ್ಜಿ ಮತ್ತು ಎ.ಆರ್.ದೇಸಾಯಿಯಂತಹ ಸಮಾಜಶಾಸ್ತ್ರಜ್ಞರು ಗ್ರಾಮಗಳ ಅಧ್ಯಯನ ಕೈಗೊಂಡರು. ಇವರ ಜೊತೆಗೆ ಅಮೇರಿಕಾ, ಬ್ರಿಟನ್ ಮತ್ತು ಫ್ರಾನ್ಸ್ ದೇಶದ ಹಲವು ಸಾಮಾಜಿಕ ಮಾನವಶಾಸ್ತ್ರಜ್ಞರೂ ಸಹ ಇಂಡಿಯಾದಲ್ಲಿ ಹಳ್ಳಿಗಳ ಅಧ್ಯಯನ ಕೈಗೊಂಡರು. ಅಮೇರಿಕಾದ ಸಾಮಾಜಿಕ ಮಾನವಶಾಸ್ತ್ರಜ್ಞ ಆಸ್ಕರ್ ಲಿವೀಸ್ ಉತ್ತರ ಭಾರತದ ಹಳ್ಳಿಯೊಂದನ್ನು ಅಧ್ಯಯನ ಮಾಡಿದ. (ಆಸ್ಕರ್ ಲಿವೀಸ್ ಈ ಹಿಂದೆ ಮೆಕ್ಸಿಕೋದ ಹಳ್ಳಿಯೊಂದನ್ನು ಅಧ್ಯಯನ ಮಾಡಿದ್ದ)

ಆಸ್ಕರ್ ಲಿವೀಸ್ ಈ ಅಧ್ಯಯನವನ್ನು ಭಾರತ ಸರಕಾರದ ಯೋಜನಾ ಆಯೋಗದ ಸಹಯೋಗದಲ್ಲಿ ಕೈಗೊಂಡಿದ್ದನು. ಅಲ್ಲದೆ ಈತ ಯೋಜನಾ ಆಯೋಗದ ಸಲಹೆಗಾರನೂ ಆಗಿದ್ದನು'[೧೫೩]. ಹೀಗೆ ಅಮೇರಿಕಾವು ವಿದ್ವಾಂಸರೆನ್ನಿಸಿಕೊಂಡ ತನ್ನ ಜನರನ್ನು ಭಾರತದಂತಹ ದೇಶದ ಆಡಳಿತದ ಆಯಕಟ್ಟಿನ ಸ್ಥಳಕ್ಕೆ ರವಾನೆ ಮಾಡಲಾರಂಭಿಸಿತು. ಅದೇ ಹೊತ್ತಿಗೆ 'ಎರಡನೇ ಮಹಾಯುದ್ಧದ ನಂತರ ಗ್ರಾಮಗಳ ಅಧ್ಯಯನಗಳಲ್ಲಿ ಅಗಾಧ ಪ್ರಮಾಣದ ಬದಲಾವಣೆಗಳು ಸಂಭವಿಸಿದವು. ಭಾರತದ ಸಾಮಾಜಿಕ ಮಾನವಶಾಸ್ತ್ರಜ್ಞರು ವಿದೇಶಗಳಿಗೆ ಹೋಗಿ ಅಲ್ಲಿನ ತಜ್ಞರಿಂದ ಗ್ರಾಮಗಳ ಅಧ್ಯಯನಗಳನ್ನು ಮಾಡುವ ವಿಧಾನದಲ್ಲಿ ತರಬೇತಿ ಪಡೆದು ಬಂದರು. ಆನಂತರ ಭಾರತದ ಗ್ರಾಮಗಳ ಅಧ್ಯಯನಗಳ ಶೈಕ್ಷಣಿಕ ವಿಧಾನದಲ್ಲಿ ಮೂಲಭೂತ ಬದಲಾವಣೆಗಳಾದವು'[೧೫೪].

ಗ್ರಾಮಗಳ ಅಧ್ಯಯನದಲ್ಲಿ ವಸಾಹತುಶಾಹಿ ಅಧ್ಯಯನಕಾರರು ಮತ್ತು ಅವರಿಂದ ತರಬೇತಿ ಪಡೆದು ಬಂದ ದೇಶೀಯ ನಿಯೋಗಿಗಳ ತಾವು ಅನುಸರಿಸುತ್ತ ಬಂದ ಅಧ್ಯಯನ ವಿಧಾನಕ್ಕೆ ಸಂಬಂಧಿಸಿದಂತೆ ಯಾವ ಮಹತ್ವದ ಮಾರ್ಪಾಡುಗಳನ್ನು ಮಾಡಿಕೊಂಡಿರಲಿಲ್ಲ. ಅಮೇರಿಕಾದ ನವವಸಾಹತು ನೀತಿಗೆ ಪೂರಕವಾದ ರಾಜಕೀಯ ಧೋರಣೆಗಳನ್ನು ಇವರು ಚಾಚೂ ತಪ್ಪದೆ ಅನುಸರಿಸಿದರು. 'ಅಮೇರಿಕಾ ಪಶ್ಚಿಮದ ಸಾಮ್ರಾಜ್ಯಶಾಹಿ ನೀತಿಯನ್ನು ಸಮರ್ಥಿಸುವ ಮತ್ತು ರಕ್ಷಿಸುವ ಶಕ್ತಿಯಾಗಿ ರೂಪುಗೊಂಡಿತ್ತು. ಆಂತರಿಕವಾಗಿ ತನ್ನೆಲ್ಲ ಉದ್ಯಮಗಳನ್ನು ಮತ್ತು ಕಾರ್ಪೋರೇಟ್ ಶಕ್ತಿಗಳನ್ನು ಬಲಪಡಿಸಲು, ಬಂಡವಾಳ ತೊಡಗಿಸಲು ಮತ್ತು ಸಾಮ್ರಾಜ್ಯಶಾಹಿ ಆಕ್ರಮಣಶೀಲತೆಯನ್ನು ಜಾರಿಯಲ್ಲಿಡಲು ಅಮೇರಿಕಾ ಮುಂದಾಯಿತು. ಈ ಕಾರಣಕ್ಕಾಗಿ ಯುರೋಪಿನ ಮಾಜಿ ವಸಾಹತುಗಳಾದ ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಾ ದೇಶಗಳ ಮಾಹಿತಿ ಸಂಗ್ರಹಿಸಲು ಮುಂದಾಯಿತು. ಈ ಕಾರಣಕ್ಕಾಗಿ ಅಮೇರಿಕಾ ಬೃಹತ್ ಪ್ರಮಾಣದ ಹಣವನ್ನು ವಿನಿಯೋಗಿಸತೊಡಗಿತು. ಇದಕ್ಕಾಗಿ ತಮ್ಮ ತಜ್ಞತೆಯನ್ನು ಧಾರೆ ಎರೆಯಲು ಅನೇಕ ಮಾನವಶಾಸ್ತ್ರಜ್ಞರು ಅಮೇರಿಕಾದ ಈ ಯೋಜನೆಗಳಲ್ಲಿ ತೊಡಗಿಕೊಂಡರು'[೧೫೫]. ಕೆಲವು 'ಮಾನವಶಾಸ್ತ್ರಜ್ಞರು ಅಮೇರಿಕಾದ ಇಂಟಲಿಜನ್ಸ್ ಏಜನ್ಸಿಯ ಅದರಲ್ಲೂ CIA ಯ ಅಲ್ಪಾವಧಿಯ ಇಲ್ಲವೇ ಪೂರ್ಣಾವಧಿಯ ನೌಕರರಾದರು. ಇವರು ಕೆಲವು ಅನುಮಾನಾಸ್ಪದ ಮತ್ತು ಪ್ರಶ್ನಾರ್ಹವಾದ ಮೂಲಗಳಿಂದ ಸಂಶೋಧನಗೆ ಹಣ ಪಡೆಯಲಾರಂಭಿಸಿದರು. ಇಲ್ಲವೆ ಖಾಸಗೀ ಸಂಸ್ಥೆಗಳ ಸಂಶೋಧನೆಗಳನ್ನು ಕೈಗೆತ್ತಿಕೊಂಡರು'[೧೫೬]. ಮೂರನೇ ಜಗತ್ತಿನ ದೇಶಗಳ ಅಭಿವೃದ್ಧಿಯ ಸಲುವಾಗಿ ಅನ್ವಯಿಕ ಅಧ್ಯಯನಗಳು ನಡೆಯುತ್ತವೆ ಎಂದು ಹೇಳಲಾಗುತ್ತಿತ್ತಾದರೂ, ಈ ಅಧ್ಯಯನಗಳಿಗೆ ಭಾರತದಂತಹ ದೇಶದ ಹಳ್ಳಿಗಳಲ್ಲಿನ ವರ್ಗ ವೈರುಧ್ಯಗಳನ್ನು ಅರ್ಥ ಮಾಡಿಕೊಳ್ಳುವ ಜರೂರುಗಳು ಇರಲಿಲ್ಲ. ಇವು ಇಂಡಿಯಾದ ಸಮಾಜವನ್ನು ಅಖಂಡವಾಗಿ ಗ್ರಹಿಸಿದವು. ಮತ್ತು ಮೇಲ್‌ಸ್ತರದ ವಿವರಗಳನ್ನೆ ನಂಬಿ ಸಿದ್ಧಾಂತಗಳನ್ನು ರೂಪಿಸಿದವು. ಹಾಗೆ ಭಾರತದ ಸಂದರ್ಭದಲ್ಲಿ ಅನೇಕ ಮಾನವಶಾಸ್ತ್ರಜ್ಞರು ತಮ್ಮ ಪ್ರಮೆಯಗಳನ್ನು ರೂಪಿಸಿದ್ದಾರೆ.

ಮೇಲಿನ ವಿವರಗಳನ್ನು ಇನ್ನೂ ಸಾಂದ್ರಗೊಳಿಸಬಹುದಾಗಿದೆ. ೨೦ನೇ ಶತಮಾನದ ಪೂರ್ವಾರ್ಧದಲ್ಲಿ ಎರಡು ಜಾಗತಿಕ ಯುದ್ಧಗಳಲ್ಲಿ ಪಾಲ್ಗೊಂಡ ಯುರೋಪಿನ ರಾಷ್ಟ್ರಗಳು ರಾಜಕೀಯವಾಗಿ ಮತ್ತು

ಆರ್ಥಿಕವಾಗಿ ತಲ್ಲಣಗೊಂಡವು. ಅಲ್ಲದೆ ಮಿತಿಮೀರಿದ ಆರ್ಥಿಕ ಪೈಪೋಟಿಯೂ ಸಹ ಯುರೋಪಿನ ದೇಶಗಳಲ್ಲಿ ಅನೇಕ ಸಂಘರ್ಷಗಳನ್ನು ಹುಟ್ಟು ಹಾಕಿತ್ತು. ಎರಡನೇ ಮಹಾಯುದ್ಧದ ನಂತರ ಯುರೋಪಿನ ಮಿತ್ರಕೂಟಕ್ಕೆ ಸಹಾಯ ಮಾಡಿದಂತೆ ಮಾಡಿ, ಏಷ್ಯಾದ ದೇಶವೊಂದರ ಮೇಲೆ ಅಣುಬಾಂಬ್ ಪ್ರಯೋಗ ಮಾಡಿ ಲಕ್ಷಾಂತರ ಜನರನ್ನು ಕೊಂದುಹಾಕಿದ ಅಮೇರಿಕಾವು ಯುರೋಪ್ ಮತ್ತು ಏಷ್ಯಾ ಖಂಡದ ದೇಶಗಳಿಗೆ ಯಜಮಾನನಾಗಿ ರೂಪುಗೊಂಡಿತು. ಯಾವಾಗ ಜಾಗತಿಕ ರಾಜಕಾರಣಕ್ಕೆ ಅಮೇರಿಕಾವು ಕೇಂದ್ರವಾಯಿತೋ ಆಗಿನಿಂದ ಅಮೇರಿಕಾ ಜಗತ್ತಿನ ಆಗುಹೋಗುಗಳ ನಿಯಂತ್ರಕ ಶಕ್ತಿಯಾಗಿ ಪರಿಣಮಿಸಿತು. ಆದರೆ ಅಮೇರಿಕಾದ ಗೋಮುಖ ವ್ಯಾಘ್ರತನ ವಿಯಟ್ನಾಂ ಯುದ್ಧದ ನಂತರ ಬಯಲಾಯಿತು. ಅಮೇರಿಕಾದ ರಾಜಕೀಯ ಚಲನೆಗಳು ಮೂರನೇ ಜಗತ್ತಿನ ಬುದ್ಧಿಜೀವಿಗಳನ್ನು ತಲ್ಲಣಗೊಳಿದವು. ವಿಯಟ್ನಾಂ ಮೇಲಿನ ದಾಳಿಯು ಮೂರನೇ ಜಗತ್ತಿನ ರಾಷ್ಟ್ರಗಳನ್ನು ದಿಕ್ಕೆಡಿಸಿತು. ಅನಂತರ ಈ ರಾಷ್ಟ್ರಗಳು ಕೇವಲ ರಾಜಕೀಯ ಕಾರಣಗಳಿಗಾಗಿ ಮಾತ್ರವಲ್ಲದೆ ಶೈಕ್ಷಣಿಕವಾಗಿಯೂ ಅಮೇರಿಕಾವನ್ನು ಅನುಮಾನಿಸಲಾರಂಭಿಸಿದವು. ಅಮೇರಿಕಾದ ಶೈಕ್ಷಣಿಕ ಸಿದ್ಧಾಂತಗಳು ಮತ್ತು ಅದು ಸೃಷ್ಟಿಸಿದ ಜಾಗತಿಕ ಮಹಾಕಥನಗಳನ್ನು ವಿದ್ವಾಂಸರು ಪ್ರಶ್ನಿಸಲಾರಂಭಿಸಿದರು. ಜೊತೆಗೆ ಅಮೇರಿಕಾವು ಯುರೋಪಿನ ಸಂಕಥನಗಳನ್ನೇ ಅಲ್ಪಸ್ವಲ್ಪ ಮಾರ್ಪಾಡಿನೊಂದಿಗೆ ಜಾರಿಗೊಳಿಸಿತ್ತು. ಮೂಲದಲ್ಲಿ ಈ ವಸಾಹತು ಸಂದರ್ಭದ ಸಂಕಥನಗಳು ಸಾಮ್ರಾಜ್ಯಶಾಹಿ ನೀತಿಗೆ ಪೂರಕವಾಗಿದ್ದ ಕಾರಣಕ್ಕೆ ಯುರೋಪು ಅಮೇರಿಕಾದ ಸಾಮ್ರಾಜ್ಯಶಾಹಿ ನೀತಿಗೆ ಪೂರಕವಾಗಿದ್ದ ಕಾರಣಕ್ಕೆ ಅದು ಅಮೇರಿಕಾದ ಸಾಮ್ರಾಜ್ಯಶಾಹಿ ಆತ್ಮದಲ್ಲಿ ಅಂತರ್ಗತವಾಯಿತು. ಈ ಕಾರಣದಿಂದ ಜಗತ್ತಿನ ಸೋತ ದೇಶಗಳ ವಿದ್ವಾಂಸರು ಮತ್ತು ಚಳುವಳಿಗಾರರು ವಸಾಹತುವಾದದ ಸಾಮ್ರಾಜ್ಯಶಾಹಿ ನೀತಿಯನ್ನು ಮತ್ತು ಶೈಕ್ಷಣಿಕ ವಿಧಾನಗಳನ್ನು ನಿರಾಕರಿಸಿದರು. ಇದನ್ನು ವಸಾಹತೋತ್ತರವಾದ ಎಂದೂ ಕರೆಯಲಾಗುತ್ತದೆ.

ವಸಾಹತೊತ್ತರ ಸಂದರ್ಭದ ಪ್ರಮುಖ ಚಿಂತಕರು ಯುರೋಪ್ ಸೃಷ್ಟಿಸಿದ ವಿರಾಟ್ ಕಥನಗಳನ್ನು ಪ್ರಶ್ನಿಸಲಾರಂಭಿಸಿದರು. ೨೦ನೇ ಶತಮಾನದ ಆರಂಭದಲ್ಲಿಯೇ ಪ್ರಾರಂಭವಾದ ಈ ವಸಾಹತೋತ್ತರ ಚರ್ಚೆಗಳು ಹಂತ ಹಂತವಾಗಿ ಘನೀಕರಣಗೊಂಡವು. ಮುಖ್ಯವಾಗಿ ವಸಾಹತುಗಳನ್ನು ನೋಡುವ ಮತ್ತು ಅವುಗಳನ್ನು ಅರ್ಥೈಸುವ ಸಲುವಾಗಿ ಯುರೋಪಲ್ಲಿ ರೂಪುಗೊಂಡ ಸಂಕಥನಗಳು ವಸಾಹತೋತ್ತರ ಕಾಲಘಟ್ಟದಲ್ಲಿ ತೀವ್ರ ಪರಿಶೀಲನೆಗೆ ಒಳಪಟ್ಟವಲ್ಲದೆ, ವಿಮೋಚನೆಗೊಂಡ ರಾಷ್ಟ್ರಗಳು ಪರ್ಯಾಯ ಬೌದ್ಧಿಕ ಕ್ರಮಗಳನ್ನು ಕಟ್ಟಿಕೊಳ್ಳಲು ವಸಾಹತೋತ್ತರ ಚಿಂತಕರು ಪ್ರೇರೇಪಿಸಿದರು. ಜೊತೆಗೆ ಯುರೋಪಿನ ಅಭಿಜಾತ ಶೈಕ್ಷಣಿಕ ವಿಧಾನದ ಹಿಂದಿರುವ ಸಾಮ್ರಾಜ್ಯಶಾಹಿ ಹುನ್ನಾರಗಳನ್ನು ಈ ಚಿಂತಕರು ಬಹಿರಂಗಗೊಳಿಸಿದರು. ಈ ಚಿಂತಕರಿಗೆ ಒಂದು ರಾಜಕೀಯ ದೃಷ್ಟಿಕೋನ ರೂಪುಗೊಳ್ಳಲು ಕಾರಣನಾದವನು ಆಂಥೋನಿಗ್ರಾಂಸಿ. ಅನಂತರ ಮೈಕೇಲ್ ಫುಕೋ, ಎಡ್ವರ್ಡ್ ಸೈದ್, ಫ್ರಾಂಜ್ ಫ್ಯಾನನ್ ಮತ್ತು ಅಲ್ಬರ್ಟ್ ಮೆಮ್ಮಿ ಈ ಚಿಂತಕರಲ್ಲಿ ಪ್ರಮುಖರು. ಫೋಕೋ ಜ್ಞಾನ ಮತ್ತು ಅಧಿಕಾರಗಳಿಗಿರುವ ಸಂಬಂಧಗಳನ್ನು ಚಾರಿತ್ರಿಕವಾಗಿ ವಿಶ್ಲೇಷಿಸಿದನು. 'ಎಲ್ಲಾ ಜ್ಞಾನಕ್ಷೇತ್ರಗಳಲ್ಲಿಯೂ ವಿಜೃಂಭಿಸುವ

ಡಿಸ್‌ಕೋರ್ಸ್‌ಗಳು ಆಯಾಯಾ ಕ್ಷೇತ್ರಗಳಲ್ಲಿ ಉನ್ನತ ಸ್ಥಾನದಲ್ಲಿರುವವರ ಅಧಿಕಾರವನ್ನು ಮತ್ತು ಸ್ಥಾನಮಾನಗಳನ್ನು ರಕ್ಷಿಸುವುದಕ್ಕಾಗಿ ಮತ್ತು ಮುಂದುವರೆಸುವುದಕ್ಕಾಗಿ ಜನ್ಮತಾಳಿರುತ್ತವೆ. ಪರಿಣಾಮತಃ ಒಂದು ಕ್ಷೇತ್ರದ ಪ್ರಭಾವೀ ಡಿಸ್‌ಕೋರ್ಸ್ ಅನ್ನು ಒಪ್ಪಿಕೊಳ್ಳದೆ ಮತ್ತು ಅದನ್ನು ಸ್ವೀಕರಿಸದೆ ಆ ಡಿಸ್‌ಕೋರ್ಸ್ ಅನ್ನು ರೂಪಿಸಿದ ಸಂಸ್ಥೆಯ ಹತ್ತಿರ ನಾವು ಹೋಗಲಾಗುವುದಿಲ್ಲ. ಆ ಸಂಸ್ಥೆಯು ಕೊಡುವ ಅಧಿಕಾರದಲ್ಲಿ ನಾವು ಭಾಗಿಗಳಾಗುವುದು ಸಾಧ್ಯವಿಲ್ಲ. ಆದ್ದರಿಂದಲೇ ಜ್ಞಾನಕ್ಕೂ ಅಧಿಕಾರಕ್ಕೂ ಹಾಗೂ ಪರಸ್ಪರ ಪೋಷಕ ಸಂಬಂಧವನ್ನು ಗುರುತಿಸಿ 'ಜ್ಞಾನವೆಂದರೆ ಅಧಿಕಾರ' ಎಂದು ಫೋಕೋ ತೀರ್ಮಾನಿಸುತ್ತಾನೆ...... ಅಧಿಕಾರ ಮತ್ತು ಜ್ಞಾನ ಇವುಗಳನ್ನು ಭಿನ್ನ ಸ್ವತಂತ್ರ ಸಂಗತಿಗಳೆಂಬಂತೆ ಫುಕೋ ಪರಿಗಣಿಸುವುದಿಲ್ಲ. ಅವೆರಡೂ ಪರಸ್ಪರ ಹೆಣೆದುಕೊಂಡು ಒಂದು ಬಗೆಯ ಅವಿನಾ ಸಂಬಂಧವನ್ನು ಹೊಂದಿವೆ. ಆದ್ದರಿಂದಲೇ ಫುಕೋ ಅವನ್ನು 'ಅಧಿಕಾರ / ಜ್ಞಾನ' (Power/knowledge) ಎಂದು ದಾಖಲಿಸುತ್ತಾನೆ. 'ಅಧಿಕಾರ ಮತ್ತು ಜ್ಞಾನ ಇವುಗಳು ನೇರವಾಗಿ ಒಂದು ಮತ್ತೊಂದನ್ನು ಒಳಗೊಳ್ಳುತ್ತವೆ..... ಯಾವುದೋ ಅಧಿಕಾರಾಧಾರಿತ ಸಂಬಂಧವೂ ಅದಕ್ಕೆ ಪೂರಕವಾಗುವ ಜ್ಞಾನಕ್ಷೇತ್ರದ ರಚನೆಯಾಗದೆ ಅಸ್ತಿತ್ವಕ್ಕೆ ಬರುವುದಿಲ್ಲ ಮತ್ತು ಅಧಿಕಾರಾಧರಿತ ಸಂಬಂಧಗಳನ್ನು ರೂಪಿಸದೆ ಯಾವ ಜ್ಞಾನಕ್ಷೇತ್ರವೂ ಅಸ್ತಿತ್ವದಲ್ಲಿರುವುದಿಲ್ಲ'[೮೬]. ಎನ್ನುತ್ತಾನೆ ಫುಕೋ. ಫುಕೋ ಆಧುನಿಕ ಜಗತ್ತಿನಲ್ಲಿ ಚಾಲ್ತಿಯಲ್ಲಿರುವ ಯುರೋಪಿನ ಸಾಂಪ್ರದಾಯಿಕ ತಿಳುವಳಿಕೆಯ ಕ್ರಮಗಳನ್ನು ಮತ್ತು ಶೈಕ್ಷಣಿಕ ಶಿಸ್ತುಗಳನ್ನು ತೀವ್ರ ವಿಮರ್ಶೆಗೆ ಒಳಪಡಿಸುತ್ತಾನೆ. ಯುರೋಪಿನ ಆಧುನಿಕ ಪೂರ್ವ ಕಾಲಘಟ್ಟದ ಸಮಾಜ ವಿಜ್ಞಾನಗಳ ಶೈಕ್ಷಣಿಕ ಶಿಸ್ತುಗಳು ಯಾವ ಬಗೆಯಲ್ಲಿ ಅಧಿಕಾರಸ್ಥ ಕೇಂದ್ರಗಳನ್ನು ಪೋಷಿಸಿದವು ಎಂಬುದನ್ನು ಫುಕೋ ತರ್ಕಬದ್ಧವಾಗಿ ವಿವರಿಸುತ್ತಾನೆ.

ವಸಾಹತೋತ್ತರ ಕಾಲಘಟ್ಟದ ಚಿಂತನೆಗಳಿಗೆ ಸೈದ್ಧಾಂತಿಕ ತಳಹದಿ ರೂಪಿಸಿದವನೆಂದರೆ ಫ್ರಾಂಜ್ ಫ್ಯಾನನ್. ಈತನ Black skin white mask ಮತ್ತು The wretched of the earth ಕೃತಿಗಳು ವಸಾಹತೀಕರಣಗೊಂಡ ಜನಾಂಗಗಳು ಕೀಳರಿಮೆಗಳಿಂದ ತಮ್ಮನ್ನು ಆಳುವ ಧಣಿಗಳ ಸಂಸ್ಕೃತಿಯನ್ನು ಅನುಕರಿಸುವ ಪ್ರವೃತ್ತಿಯನ್ನು ಫ್ಯಾನನ್ ತನ್ನ ಈ ಎರಡು ಕೃತಿಗಳಲ್ಲಿ ವಿವರಿಸಲೆತ್ನಿಸುತ್ತಾನೆ. ಪರತಂತ್ರ ವ್ಯವಸ್ಥೆಯಲ್ಲಿ ಅಧೀನ ಜನಾಂಗಗಳು, ಆಳುವ ವರ್ಗದ ಸಂಸ್ಕೃತಿ, ಭಾಷೆ ಮತ್ತು ಜೀವನ ವಿಧಾನಗಳನ್ನು ತಮ್ಮದನ್ನಾಗಿಸಿಕೊಳ್ಳುವ ಆತ್ಮದ್ವೇಷದ ಸಂದರ್ಭಗಳನ್ನು ಫ್ಯಾನನ್ ವಿವರಿಸುತ್ತಾನೆ. ಆಳ್ವಿಕೆಗೊಳಪಡುವ ಜನರ ರಾಜಕೀಯ ಪರಾತಂತ್ರವೇ ಅವರ ಆತ್ಮದ್ವೇಷಕ್ಕೆ ಕಾರಣವಾಗುತ್ತದೆ. ತಮ್ಮ ಸಾಂಸ್ಕೃತಿಕ ಚಹರೆಗಳನ್ನು ಬಿಟ್ಟುಕೊಡುವ ಈ ಜನ ಆಳುವವರ ಜೀವನ ವಿಧಾನವನ್ನು ಮೋಹಿಸುತ್ತಾರೆ. ಚರ್ಮ ಕಪ್ಪಾಗಿದ್ದರೂ, ತಮ್ಮ ಆಳುವ ಬಿಳಿ ಜನರ ಮುಖವಾಡಗಳನ್ನು ಧರಿಸಲು ಈ ಆಳಿಸಿಕೊಳ್ಳುವ ಜನ ಕಾತುರಗೊಳ್ಳುತ್ತಾರೆ. ತಮ್ಮ ತನವನ್ನು ದ್ವೇಷಿಸಿಕೊಳ್ಳುವುದರ ಜೊತೆಗೆ ಬಿಳಿಯರ ಸಂಸ್ಕೃತಿಯನ್ನು ಅನುಕರಿಸುವುದರಲ್ಲಿಯೇ ತಮ್ಮ ಸಾರ್ಥಕ್ಯವನ್ನು ಕಂಡುಕೊಳ್ಳುತ್ತಾರೆ ಎಂದು ಫ್ಯಾನನ್ ಆಳಿಸಿಕೊಳ್ಳುವ ಜನರ ಮನೋವ್ಯಾಪಾರವನ್ನು ವಿವರಿಸುತ್ತಾನೆ. ಜೊತೆಗೆ ವಸಾಹತುಶಾಹಿಯ ಜೊತೆಗಿನ ಪ್ರತಿರೋಧದಲ್ಲಿ ದುಡಿವ ವರ್ಗಗಳು ಅದರಲ್ಲೂ

ರೈತರು ಮಹತ್ತದ ಪಾತ್ರ ವಹಿಸುತ್ತಾರೆ. ಹಿಂಸಾತ್ಮಕ ಮಾರ್ಗದಿಂದ ಮಾತ್ರ ಯಶಸ್ಸು ದೊರಕುತ್ತದೆಂಬ ಸತ್ಯ ಎಲ್ಲರಿಗಿಂತ ಮೊದಲು ಆ ವರ್ಗಕ್ಕೆ ಅರಿವಾಗುತ್ತದೆ. ಅವರಿಗೆ ಸಾಮ್ರಾಜ್ಯಶಾಹಿಯೊಡನೆ ಯಾವುದೋ ವಿಧದ ರಾಜಿ ಅಥವಾ ಸಂಧಾನ ಸಾಧ್ಯವಿಲ್ಲ ಎನ್ನುತ್ತಾನೆ[೨೮].

ಇದರ ಜೊತೆಗೆ ಆಳ್ವಿಕೆಗೊಳಪಟ್ಟ ಜನರನ್ನು ಅರ್ಥಮಾಡಿಕೊಳ್ಳುವ ಯುರೋಪಿನ ಶೈಕ್ಷಣಿಕ ತಿಳುವಳಿಕೆಗೆ ಪರ್ಯಾಯವಾಗಿ ದೇಶೀ ಚಿಂತಕರು ತಮ್ಮದೇ ಆದ ವಿವೇಚನೆಗಳನ್ನು ರೂಪಿಸಿಕೊಳ್ಳುವ ಅಗತ್ಯಗಳನ್ನು ಫ್ಯಾನನ್ ಸೂಚಿಸುತ್ತಾನೆ. ಈ ಬಗೆಯ ಪರ್ಯಾಯ ದೃಷ್ಟಿಕೋನದಿಂದ ಮಾತ್ರ ನಮ್ಮನ್ನು ನಾವು ಅರ್ಥಮಾಡಿಕೊಳ್ಳಲು ಸಾಧ್ಯ ಎನ್ನುತ್ತಾನೆ.

ವಸಾಹತೋತ್ತರ ಚಿಂತನೆಯ ಸಂದರ್ಭದಲ್ಲಿ ಪ್ರಮುಖವಾಗಿ ಕೇಳಿಬರುವ ಮತ್ತೊಂದು ಹೆಸರು ಎಡ್ವರ್ಡ್ ಸೈದ್. ಈತನೂ ಗ್ರಾಂಸಿಯ ರಾಜಕೀಯ ಚಿಂತನೆಗಳಿಂದ ಪ್ರಭಾವಿತನಾದವನು. ಅದರಲ್ಲೂ ಈತನ Orientalism ಮತ್ತು Culture and Imperialism ಕೃತಿಗಳು ವಸಾಹತೋತ್ತರ ಚಿಂತನೆಗಳನ್ನು ಸೈದ್ಧಾಂತಿಕವಾಗಿ ಪ್ರೇರೇಪಿಸಿವೆ. ಈತನ 'ಓರಿಯಂಟಲಿಸಂ' ಕೃತಿ ಒಂದು ಅರ್ಥದಲ್ಲಿ ಪಶ್ಚಿಮದ ಶೈಕ್ಷಣಿಕ ಶಿಸ್ತುಗಳನ್ನು ನೋಡುವ ದೃಷ್ಟಿಕೋನವನ್ನು ರೂಪಿಸುವಷ್ಟು ದಾರ್ಶನಿಕವಾದದ್ದು. ಆಧುನಿಕಪೂರ್ವ ಯುರೋಪಿನ ಜ್ಞಾನಶಿಸ್ತುಗಳು ಹೇಗೆ ಸಾಮ್ರಾಜ್ಯಶಾಹಿ ಹುನ್ನಾರಗಳ್ನು ಪೂರೈಸಲು ಬಳಕೆಯಾಗುತ್ತವೆ ಎಂಬುದನ್ನು ಓರಿಯಂಟಲಿಸಂ ಕೃತಿ ವಿವರಿಸುತ್ತದೆ. ಯುರೋಪ್ 'ಪೂರ್ವ' ಎಂದು ಕರೆಯುವ ಕಲ್ಪಿತ ಭೂಭಾಗವು ಕೇವಲ ಶೈಕ್ಷಣಿಕ ಚರ್ಚೆಗಳಲ್ಲಿ ಮಾತ್ರ ಇಲ್ಲ. ಅದು ಯುರೋಪಿನ ಬಂಡವಾಳ ವಿಸ್ತರಣೆಯಾಗುವ ಮತ್ತು ಯುರೋಪಿನ ಅಧಿಕಾರದ ವ್ಯಾಪ್ತಿಗೆ ಒಳಪಡುವ ಅಧೀನ ರಾಷ್ಟ್ರಗಳ ಗುಂಪು. ಈ ರಾಷ್ಟ್ರಗಳನ್ನು ನಿಯಂತ್ರಿಸಲೆಂದೇ ಯುರೋಪಿನ ಜ್ಞಾನಶಿಸ್ತುಗಳು ವಸಾಹತಶಾಹಿಗಳಿಗೆ ಪೂರಕ ಮಾಹಿತಿಗಳನ್ನು ಒದಗಿಸುತ್ತವೆ. '೧೮ ನೇ ಶತಮಾನದ ಕೊನೆಯ ಹೊತ್ತಿಗೆ ಓರಿಯಂಟಲ್‌ವಾದವು ಯುರೋಪಿನ ಮುಖ್ಯ ಚರ್ಚೆಗಳಲ್ಲಿ ಆಕಾರಗೊಂಡಿತು. ಇದು 'ಪೂರ್ವ'ದ ಕುರಿತ ಸಂಗತಿಗಳ್ನು ವಿವರಿಸಲು ತನ್ನನ್ನು ಸೀಮಿತಗೊಳಿಸಿಕೊಂಡಿತು. ಇದು ಪೂರ್ವವನ್ನು ಕುರಿತು ವಿವರಿಸುವ, ಅಧಿಕೃತವೆಂದು ಭಾವಿಸಲ್ಪಡುವ ಮತ್ತು ಆಳುವ ಎಲ್ಲ ಕ್ರಿಯೆಗಳನ್ನು ಒಳಗೊಂಡಿತು. ಓರಿಯಂಟಲ್‌ವಾದವೆಂದರೆ ಅದು ಪಶ್ಚಿಮದ ಆಕ್ರಮಣಕಾರೀ ಪ್ರವೃತ್ತಿಯ ಭಾಗವಾಗಿಯೇ ರೂಪಿಸಲ್ಪಟ್ಟಿದೆ. ಅದು ಪೂರ್ವವನ್ನು ಆಳುವುದಕ್ಕಾಗಿಯೇ ರಚನೆಗೊಂಡ ಚಿಂತನಾಕ್ರಮ' ಎಂದು ಎಡ್ವರ್ಡ್ ಸೈದ್ ಓರಿಯಂಟಲ್‌ವಾದವನ್ನು ವಿವರಿಸುತ್ತಾನೆ.[೨೯].

ಸೈದ್ ಮುಂದುವರೆದು 'ಪಶ್ಚಿಮ ಮತ್ತು ಪೂರ್ವದ ಸಂಬಂಧವು ಅಧಿಕಾರದ ಮತ್ತು ಆಕ್ರಮಣದ ಸುತ್ತ ಹೆಣೆದುಕೊಂಡಿದೆ'[೩೦]. ಎನ್ನುತ್ತಾನೆ. ಜೊತೆಗೆ ಪುನರುಜ್ಜೀವನದ ನಂತರ ಯುರೋಪಿನಲ್ಲಿ ಕಾಣಿಸಿಕೊಂಡ ಸಮಾಜ ವಿಜ್ಞಾನಗಳ ವಿವಿಧ ಶಾಖೆಗಳಾದ ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಮತ್ತು ಸಮಾಜಶಾಸ್ತ್ರಗಳು ಅಧಿಕಾರಸ್ಥ ಕೇಂದ್ರಗಳ ಆದರ್ಶಗಳಿಗಾಗಿಯೇ ರೂಪುಗೊಂಡವು[೩೧]. ಅವು ಯುರೋಪಿನ ದಂಡಯಾತ್ರೆಗಳ ಜೊತೆಗೆ ವಸಾಹತುಗಳು ತಮ್ಮನ್ನು ವಿಸ್ತರಿಸಿಕೊಂಡವು ಎನ್ನುತ್ತಾನೆ. ಈ ಕಾರಣದಿಂದ ಬ್ರಿಟನ್ ವಿದ್ವಾಂಸನೊಬ್ಬ, ಈಜಿಪ್ತನಲ್ಲಿರಲಿ ಅಥವಾ ಇಂಡಿಯಾದಲ್ಲಿರಲಿ, ಆತ ೧೯ನೇ ಶತಮಾನದ ತನ್ನ

ಸಮಕಾಲೀನ ಅಧಿಕಾರಸ್ಥ ರಾಜಕಾರಣದ ಹೊರತಾಗಿ ತನ್ನ ವಸಾಹತುಗಳನ್ನು ಪರಿಭಾವಿಸಲಾರ. ೧೯ನೇ ಶತಮಾನದಲ್ಲಿ ಈಜಿಪ್ತ ಮತ್ತು ಇಂಡಿಯಾದಂತಹ ದೇಶಗಳ ಕುರಿತು ಸೃಷ್ಟಿಯಾದ ಜ್ಞಾನವು ಯುರೋಪಿನ ಆಕ್ರಮಣಕಾರೀ ರಾಜಕಾರಣದ ಮೊತ್ತವಾಗಿದೆ[೧೨] ಎನ್ನುತ್ತಾನೆ ಎಡ್ವರ್ಡ್ ಸೈದ್. ಸೈದ್‌ನ ಚಿಂತನೆಗಳು ಮೂರನೇ ಜಗತ್ತಿನಲ್ಲಿ ಆಧುನಿಕೋತ್ತರವಾದ ಹುಟ್ಟಲು ಕಾರಣವಾಗುತ್ತವೆ. ಭಾರತದಲ್ಲಿ ಅಶೀಶ್‌ನಂದಿ, ಅನಂದಕುಮಾರಸ್ವಾಮಿ, ಜಿ.ಎನ್.ದೇವಿ, ಕನ್ನಡದ ಸಂದರ್ಭದಲ್ಲಿ ಅನಂತಮೂರ್ತಿ ಮತ್ತು ಡಿ.ಆರ್.ನಾಗರಾಜ್ ಅವರು ಪ್ರಮುಖವಾಗಿ ಈ ವಾದವನ್ನು ಪ್ರಚುರಗೊಳಿಸಿದರು. ಆಧುನಿಕೋತ್ತರವಾದವು ದೇಶೀ ಜ್ಞಾನವನ್ನು ಸ್ಥಳೀಯ ಸಂಸ್ಕೃತಿಗಳು ಪಶ್ಚಿಮಕ್ಕೆ ಪರ್ಯಾಯವಾಗಿ ಕಟ್ಟಿಕೊಂಡಿರುವುದನ್ನು ಮತ್ತು ಈ ಸಂಸ್ಕೃತಿಗಳ ಸ್ಮೃತಿಯಲ್ಲಿ ಸಂಚಯಗೊಂಡಿರುವ ಜ್ಞಾನ ಪರಂಪರೆಯನ್ನು ಪಶ್ಚಿಮದ ಮಹಾಕಥನಗಳಿಗೆ ಪರ್ಯಾಯವಾಗಿ ಎತ್ತಿನಿಲ್ಲಿಸುವ ಕೆಲಸವನ್ನು ಮಾಡಿದರು. ದೇಶೀ ಪರಂಪರೆ, ದೇಶೀ ಜ್ಞಾನ, ಮತ್ತು ದೇಶೀಯ ಅಧ್ಯಯನ ವಿಧಾನಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಈ ಪ್ರಸ್ಥಾನದ ಚಿಂತಕರು ಮಹತ್ವದ ಕೆಲಸ ಮಾಡಿದರೂ ಸಹ, ಇವರು ಹೆಚ್ಚಾಗಿ ಯಾವುದನ್ನು ದೇಶೀಜ್ಞಾನ ಪರಂಪರೆ ಎಂದು ಭಾವಿಸಿದ್ದರೋ ಅದು ಮುಖ್ಯಧಾರೆ ಮತ್ತು ಪ್ರತಿಷ್ಠಿತ ವರ್ಗಗಳ ಜ್ಞಾನ ಪರಂಪರೆಯೇ ಆಗಿತ್ತು[೧೩]. ದೇಶೀಯ ಸಮುದಾಯಗಳ ಸ್ಮೃತಿಗಳಲ್ಲಿನ ಜ್ಞಾನ ರೂಪಗಳು ಯುರೋಪಿನ ಮಹಾಕಥನಗಳಿಗೆ ಪರ್ಯಾಯವಾಗಬಲ್ಲವು. ಆ ಕಾರಣದಿಂದಾಗಿ ಸಮುದಾಯಗಳಿಗೆ ಆವರಿಸಿರುವ ವಿಸ್ಮೃತಿಗಳಲ್ಲಿನ ಜ್ಞಾನರೂಪಗಳು ಯುರೋಪಿನ ಮಹಾಕಥನಗಳಿಗೆ ಪರ್ಯಾಯವಾಗಬಲ್ಲವು. ಆ ಕಾರಣದಿಂದಾಗಿ ಸಮುದಾಯಗಳಿಗೆ ಆವರಿಸಿರುವ ವಿಸ್ಮೃತಿಯನ್ನು ಹೋಗಲಾಡಿಸಿ, ಅವರ ಜ್ಞಾನಪರಂಪರೆಗಳಿಗೆ ಮರು ಜೀವ ನೀಡಬೇಕು ಎಂಬ ನಿಲುವುಗಳನ್ನು ಈ ಚಿಂತಕರು ಮಂಡಿಸಿದರು. ಜಿ.ಎನ್.ದೇವಿ Arter Amnesia: Tradition and change in Indian literary criticism ಕೃತಿಯಲ್ಲಿ ಈ ವಾದವನ್ನು ಮಂಡಿಸಿದರೆ, ಕನ್ನಡದಲ್ಲಿ ಡಿ.ಆರ್.ನಾಗರಾಜ ಅಕ್ಷರ ಚಿಂತನೆಯ ಮಾಲೆಯ ಮೂಲಕ ಅನೇಕ ಪುಸ್ತಕಗಳನ್ನು ಮಂಡಿಸುವುದರ ಮೂಲಕ ಈ ವಾದವನ್ನು ಹೆಚ್ಚು ವಿಸ್ತರಿಸಿದರು.

ಆದರೆ ವಸಾಹತೋತ್ತರ ಸಂದರ್ಭದಲ್ಲಿ ಭಾರತದಲ್ಲಿ ಸಬಾಲ್ಟರ್ನ್ ಅಧ್ಯಯನಗಳು ಹೆಚ್ಚಾಗಿ ಮಾರ್ಕ್ಸ್‌ವಾದಿಗಳಿಂದ ಆರಂಭವಾದವು. ಭಾರತ ದೇಶದ ಅಲಕ್ಷಿತ ಸಮುದಾಯಗಳಾದ ರೈತ, ಆದಿವಾಸಿ ಮತ್ತು ಅಲೆಮಾರಿ ಸಮುದಾಯಗಳ ತಿಳುವಳಿಕೆಯ ಜಗತ್ತನ್ನು ಅನಾವರಣ ಮಾಡುವ ಮೂಲಕ ಈ ಅಧ್ಯಯನಗಳು ತಮ್ಮದೇ ಆದ ಸೈದ್ಧಾಂತಿಕ ನೆಲೆಯೊಂದನ್ನು ರೂಪಿಸಿಕೊಂಡವು ಅಭಿಜಾತ ಮಾನವಶಾಸ್ತ್ರದ ಅಧ್ಯಯನ ವಿಧಾನವನ್ನು ಪ್ರಜ್ಞಾಪೂರ್ವಕವಾಗಿ ಮೀರುವ ಪ್ರಯತ್ನಗಳು ಭಾರತದಲ್ಲಿ ಈ ಅಧ್ಯಯನಗಳ ಮೂಲಕ ಸಂಭವಿಸಿದವು. ರಂಜಿತ್ ಗುಹಾ, ಡೇವಿಡ್ ಹಾರ್ಡಿಮನ್. ಸುಮಿತ್ ಸರ್ಕಾರ್, ಗಾಯತ್ರಿ ಸ್ಪಿವಾಕ್ ಮುಂತಾದ ಚಿಂತಕರು ಈ ಪ್ರಸ್ಥಾನವನ್ನು ಭಾರತದಲ್ಲಿ ಬೆಳೆಸಿದರು. ಈ ಅಧ್ಯಯನಗಳು ಮುಖ್ಯವಾಗಿ ಸ್ಥಾಪಿತ ಶೈಕ್ಷಣಿಕ ವಿಧಾನವನ್ನಷ್ಟೇ ಅಲ್ಲದೆ, ಸಮಕಾಲೀನ ರಾಜಕೀಯ ವಿದ್ಯಮಾನಗಳನ್ನು ಪ್ರಶ್ನಿಸಿದವು. ಇಲ್ಲಿಯವರೆಗೆ ಯಾವ ಶೈಕ್ಷಣಿಕ ಮತ್ತು ರಾಜಕೀಯ ನಂಬಿಕೆಗಳು ಮೂರನೇ ಜಗತ್ತನ್ನು

ಅದರಲ್ಲೂ ಭಾರತದ ತಿಳುವಳಿಕೆಯ ಕ್ಷೇತ್ರವನ್ನು ನಿಯಂತ್ರಿಸುತ್ತಾ ಬಂದಿದ್ದವೋ ಆ ಗ್ರಹೀತಗಳನ್ನು ಸಬಾಲ್ಟನ್ ಅಧ್ಯಯನಗಳು ಪ್ರಶ್ನಿಸಿದವು ಮತ್ತು ಈ ದೇಶದ ಕೆಳಜಾತಿ, ಆದಿವಾಸಿ, ಅಲೆಮಾರಿ ಮತ್ತು ಅಂಚಿನ ಸಮುದಾಯಗಳ ತಿಳುವಳಿಕೆಯ ಲೋಕವನ್ನು ಸೈದ್ಧಾಂತಿಕವಾಗಿ ಮಂಡಿಸುವ ಮೂಲಕ ಪರ್ಯಾಯ ಅಧ್ಯಯನ ವಿಧಾನವನ್ನು ಈ ಅಧ್ಯಯನಗಳು ರೂಪಿಸಿದವು.

ಪರ್ಯಾಯ ಶೈಕ್ಷಣಿಕ ವಿಧಾನದ ಹಂಬಲಗಳು

ನಮ್ಮ ನಡುವಿನ ಸೂಕ್ಷ್ಮ ಸಂವೇದಿ ಸಂಸ್ಕೃತಿ ಚಿಂತಕ, ಭಾಷಾಶಾಸ್ತ್ರಜ್ಞ ಮತ್ತು ಈಗ ಬುಡಕಟ್ಟು ಮತ್ತು ಅಲೆಮಾರಿಗಳ ನಡುವೆ ಕೆಲಸ ಮಾಡುತ್ತಿರುವ ಜಿ.ಎನ್.ದೇವಿ ತಮ್ಮ ಒಂದು ಲೇಖನದಲ್ಲಿ ಒಂದು ವ್ಯಕ್ತಿಗತ ಟಿಪ್ಪಣಿ ಬರೆದುಕೊಂಡಿದ್ದಾರೆ. 'ಇದು ಒಂದು ವ್ಯಕ್ತಿಗತ ಟಿಪ್ಪಣಿ ಗಿರೀಶ್ ಕರ್ನಾಡರ ಪ್ರಸಿದ್ಧ ನಾಟಕ ಹಯವದನವನ್ನು ಆರಂಭದಲ್ಲೇ ಉಲ್ಲೇಖಿಸಲಿಚ್ಛಿಸುತ್ತೇನೆ. ಅಪರಿಪೂರ್ಣತೆ ಈ ನಾಟಕದ ವಸ್ತು. ಅರ್ಧ ವ್ಯಕ್ತಿ, ಅರ್ಧ ಕುದುರೆ ಪಾತ್ರವಾದ 'ಹಯವನದ'ವನ್ನು ಗಿರೀಶ್ ಕಾರ್ನಾಡರು ನಾಟಕದ ಆರಂಭದಲ್ಲಿಯೇ ಪರಿಚಯಿಸುತ್ತಾರೆ. ಸಮಕಾಲೀನ ಬೌದ್ಧಿಕ ವಲಯದಲ್ಲಿ ವಿಮರ್ಶಕನಾಗಿ ದುಡಿಯುತ್ತಿರುವ ನನಗೆ, ನಾನೊಬ್ಬ ಬೌದ್ಧಿಕ ಹಯವದನ ಇರಬಹುದೇ ಎಂಬ ಭಾವನೆ ಆಗಾಗ ಕಾಡುತ್ತದೆ. ನನ್ನ ದೇಹದ ಎಲ್ಲಾ ರಕ್ತಕಣಗಳೂ ಭಾರತೀಯ ಮಣ್ಣು, ನೀರು, ಗಾಳಿಯಿಂದ ಮಾಡಲ್ಪಟ್ಟಿದ್ದರೆ, ನನ್ನ ಮಿದುಳಿನಲ್ಲಿ ಸಂಗ್ರಹಿತವಾಗಿರುವ ಜ್ಞಾನ ಎಲ್ಲಿಂದಲೋ ಬಂದಂತೆ ಕಾಣುತ್ತದೆ'[೨೨]. ಎನ್ನುತ್ತಾರೆ. ಬಹುಕಾಲ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತಕರಾಗಿ After Amnesia ದಂತಹ ಪುಸ್ತಕದ ಮೂಲಕ ದೇಶೀಯ ಜ್ಞಾನ ಪರಂಪರೆಗಳ ಮಹತ್ವದ ಕುರಿತು ತೀವ್ರವಾಗಿ ಬರೆದ ದೇವಿಯವರು ತಮ್ಮನ್ನು 'ಹಯವದನ' ರೂಪಕದ ಮೂಲಕ ಭಾವಿಸಿಕೊಳ್ಳುವುದು ದೇಶೀ ಚಿಂತಕನ ತೀವ್ರ ಆತ್ಮ ವಿಮರ್ಶೆಯಂತೆ ಕಾಣುತ್ತದೆ. ದೇವಿ ಒಬ್ಬ ಚಿಂತಕನಾಗಿ ವಸಾಹತೋತ್ತರ ಸಂದರ್ಭದ ತನ್ನೆಲ್ಲ ಓರಿಗೆಯ ಲೇಖಕರನ್ನು ಸಮರ್ಥವಾಗಿ ಪ್ರತಿನಿಧಿಸುವವರು. ಅದರಲ್ಲೂ ಆಧುನಿಕೋತ್ತರ ವಿದ್ವಾಂಸರಲ್ಲಿ ದೇವಿಯವರಿಗೆ ಅಗ್ರಸ್ಥಾನವಿದೆ. ಈ ಕಾರಣದಿಂದ ತಮ್ಮ ತಿಳುವಳಿಕೆಯನ್ನು 'ಅನ್ಯ' ಎಂದು ಭಾವಿಸುವ ಒರಟು ಸಿನಿಕತನ ದೇವಿಯವರಿಂದ ವ್ಯಕ್ತವಾಗಲಾರದು. ದೇವಿಯವರಂತೆ ಆಧುನಿಕೋತ್ತರ ಸಂದರ್ಭದಲ್ಲಿ ಸ್ಥಳೀಯ ಸಂಸ್ಕೃತಿಗಳ ಕುರಿತು ಚಿಂತಿಸುವ ಪ್ರತಿಯೊಬ್ಬ ಚಿಂತಕನಿಗೆ ಈ 'ಹಯವದನದ' ರೂಪಕವು ಲಗಾಮು ಹಾಕುತ್ತಲೇ ಇರುತ್ತದೆ. ಈ ಬಗೆಯ ಆತ್ಮವಿಮರ್ಶೆಯು ಪರ್ಯಾಯ ಚಿಂತನಾಕ್ರಮ ಮತ್ತು ಪರ್ಯಾಯ ಅಧ್ಯಯನ ವಿಧಾನಗಳನ್ನು ಹಂಬಲಿಸುವಂತಹ ರಚನಾತ್ಮಕ ತಳಮಳಗಳನ್ನು ಹುಟ್ಟುಹಾಕಬೇಕಿದೆ. ದೇವಿ ಸಾಹಿತ್ಯ ವಿಮರ್ಶೆ ಮತ್ತು ಭಾಷಾವಿಜ್ಞಾನದ ಅಧ್ಯಯನಗಳಿಂದ ಬುಡಕಟ್ಟು ಮತ್ತು ಅಲೆಮಾರಿ ಸಮುದಾಯಗಳ ಕಡೆಗೆ ನಡೆದು ಹೋದದ್ದು ಈ ಬಗೆಯ ರಚನಾತ್ಮಕ ತಳಮಳಗಳಿಂದಾಗಿಯೇ ಎನ್ನಿಸುತ್ತದೆ.

ಪಶ್ಚಿಮವನ್ನು ರಾಜಕೀಯವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ತೀವ್ರ ಪರಿಶೀಲನೆಗೆ ಒಳಪಡಿಸದ ಹೊರತು ಸ್ಥಳೀಯವಾದ ಮತ್ತು ದೇಶೀಯ ಅಧ್ಯಯನ ಕ್ರಮಗಳನ್ನು ಕಂಡುಕೊಳ್ಳಲು ಸಾಧ್ಯವಿಲ್ಲ. ಕಳೆದ ಮುನ್ನೂರು ವರ್ಷಗಳಿಂದ ಯಾರಿಂದ ನಾವು ವ್ಯಾಖ್ಯಾನಿಸಲ್ಪಟ್ಟೆವು? ಯಾರು ಹೇಗೆಲ್ಲ ನಮ್ಮನ್ನು

ವ್ಯಾಖ್ಯಾನಿಸಿದರು? ಯಾವ ವ್ಯಾಖ್ಯಾನದ ಕ್ರಮಗಳು ನಮ್ಮ ಚಿಂತನೆಗಳನ್ನು ನಿಯಂತ್ರಿಸುತ್ತಿವೆ? ಎಂಬುದನ್ನು ವಿವರಿಸಿಕೊಳ್ಳದ ಹೊರತು ನಾವು ಕನಸುವ ಪರ್ಯಾಯ ನೋಟದ ಕ್ರಮಗಳು ರೂಪುಗೊಳ್ಳಲಾರವು. ಅದರಲ್ಲೂ ಪಶ್ಚಿಮದ ಶೈಕ್ಷಣಿಕ ವಿಧಾನಗಳನ್ನು ಅದರ ರಾಜಕೀಯಾರ್ಥಿಕ ಹುನ್ನಾರಗಳಲ್ಲಿಟ್ಟು ಪರಿಭಾವಿಸದ ಹೊರತು ನಾವು ವಿಭಿನ್ನ ಮತ್ತು 'ನಮ್ಮದೇ' ಆದ ಅಧ್ಯಯನ ವಿಧಾನಗಳನ್ನು ಸೈದ್ಧಾಂತಿಕವಾಗಿ ನಿರೂಪಿಸಿಕೊಳ್ಳಲು ಸಾಧ್ಯವಿಲ್ಲ.

ನಾವು ನಮ್ಮನ್ನು ನೋಡಿಕೊಳ್ಳುವ ವಿಧಾನವು ನಮ್ಮ ಲೌಕಿಕ ಬದುಕಿಗೆ ಸಂಬಂಧಿಸಿದ್ದು. ನಮ್ಮ ಒಳಿತು ಕೆಡುಕುಗಳ ರಾಜಕಾರಣಕ್ಕೆ ಸಂಬಂಧಿಸಿದ್ದು. ಯಾಕೆಂದರೆ ಸಮಾಜ ವಿಜ್ಞಾನಗಳಲ್ಲಿ ನಡೆಯುವ ಸಂಶೋಧನೆಯು ನಾವು ಬದುಕುವ ಸಮಾಜಕ್ಕೆ ಮತ್ತು ಮನುಷ್ಯರಿಗೆ ಸಂಬಂಧಪಟ್ಟದ್ದಾಗಿದೆ. ಆದರೆ ಇಲ್ಲಿಯವರೆಗೆ ನಮ್ಮ ಸಮಾಜ ಮತ್ತು ಇಲ್ಲಿನ ಮನುಷ್ಯರನ್ನು ನಿರ್ವಚಿಸಿದ್ದು ಯುರೋಪಿನ ಹಲವು ಕ್ಷೇತ್ರಕ್ಕೆ ಸಂಬಂಧಿಸಿದ ವಿದ್ವಾಂಸರು. ಓರಿಯಂಟಲಿಸ್ಟರು, ಇತಿಹಾಸಜ್ಞರು, ಮಾನವಶಾಸ್ತ್ರಜ್ಞರು ತಮ್ಮನ್ನು ಕರೆತಂದ ವಸಾಹತುಶಾಹಿಗಳ ರಾಜಕೀಯ ದೃಷ್ಟಿಕೋನಕ್ಕೆ ಪೂರಕವಾಗಿಯೇ ನಮ್ಮನ್ನು ವ್ಯಾಖ್ಯಾನಿಸಿದರು. ಇಂಡೆನ್ ಪ್ರಕಾರ 'ಭಾರತವನ್ನು ಕುರಿತು ರಚನೆಗೊಂಡಿರುವ ಸಂವಾದಗಳನ್ನೆಲ್ಲ 'ವಿರಚಿಸುವುದು' ಮೊದಲ ಹೆಜ್ಜೆಯಾಗುತ್ತದೆ. ಈ ಸಂವಾದಗಳ ಸ್ವರೂಪ ಮತ್ತು ಪರಿಣಾಮಗಳ ಬಗ್ಗೆ ಎಚ್ಚರವನ್ನು ಪಡೆಯದೆ ಅವುಗಳಿಂದ ತಪ್ಪಿಸಿಕೊಂಡು ಬರಲು ಸಾಧ್ಯವಿಲ್ಲ'[೧೫೫]. ಈ ಮೊದಲೇ ಹೇಳಿದಂತೆ ಬೌದ್ಧಿಕವಾಗಿ ವಸಾಹತುಶಾಹಿಯಿಂದ ವಿಮೋಚನೆ ಪಡೆಯುವುದು ನಮಗೆ ಇನ್ನೂ ಸಾಧ್ಯವಿಲ್ಲ. ಏಕೆಂದರೆ 'ವಸಾಹತುಶಾಹಿಯು ವಸಾಹತೀಕರಣಕ್ಕೊಳಪಟ್ಟವರನ್ನು ಕೇವಲ ಭೌತಿಕವಾಗಿ ಮಾತ್ರ ಆಕ್ರಮಿಸಿಕೊಳ್ಳುವುದಿಲ್ಲ. ಆ ಜನರ ಮನಸ್ಸನ್ನು ವಸಾಹತೀಕರಣಗೊಳಿಸುತ್ತದೆ. ಜೊತೆಗೆ ವಸಾಹತೀಕರಣಗೊಂಡ ಸಮಾಜವು ತನ್ನ ಸಾಂಸ್ಕೃತಿಕ ಆದ್ಯತೆಗಳನ್ನು ಸಂಪೂರ್ಣವಾಗಿ ಬದಲಿಸಿಕೊಳ್ಳದಷ್ಟು ವಸಾಹತುಶಾಹಿಯು ತನ್ನ ಕಬಂಧ ಬಾಹುಗಳನ್ನು ವಿಸ್ತರಿಸಿಕೊಳ್ಳುತ್ತದೆ'[೧೫೬]. ಅಶೀಶ್ ನಂದಿ ವಸಾಹತಶಾಹಿಯನ್ನು ಕೇವಲ ಒಂದು ರಾಜಕೀಯಶಕ್ತಿ ಎಂದು ಮಾತ್ರ ಪರಿಭಾವಿಸುವುದಿಲ್ಲ. ಜೊತೆಗೆ ವಿಮೋಚಿತ 'ವಸಾಹತವು ಸ್ವಾತಂತ್ರ್ಯ ಸಿಕ್ಕ ತಕ್ಷಣ ಅದು ವಸಾಹತುಶಾಹಿಯಿಂದ ಮುಕ್ತಿ ಪಡೆದಂತಲ್ಲ. ವಸಾಹತುಶಾಹಿಯು ಒಂದು ಮನಃಸ್ಥಿತಿ. ಅದು ತನ್ನದಲ್ಲದ ಸಮಾಜದಲ್ಲೂ ಸುಲಭವಾಗಿ ಅಂತರ್ಗತವಾಗಿಬಿಡುವ ಪ್ರಕ್ರಿಯೆ'[೧೫೭]. ಎನ್ನುತ್ತಾರೆ.

ಇದರಿಂದಾಗಿ ವಸಾಹತು ಸಂದರ್ಭದ ಜ್ಞಾನಕ್ರಮಗಳು ವಸಾಹತುಗಲ್ಲಿ ಇಲ್ಲಿಯವರೆಗೂ ಪ್ರಶ್ನಿತವಾಗದೆ ಚಾಲ್ತಿಯಲ್ಲಿದ್ದವು. ಇಲ್ಲಿಯವರೆಗೂ ನಮ್ಮನ್ನು ನಾವು 'ಪಶ್ಚಿಮವು ಅಧ್ಯಯನ ಮಾಡುವ ರೀತಿಯಲ್ಲಿಯೇ ಮಾಡುತ್ತಿದ್ದೇವೆ. ಪಶ್ಚಿಮದ ಕಣ್ಣಿಗೆ ಕಂಡಂತೆ ಜಗತ್ತನ್ನು ನಾವು ನೋಡುತ್ತಿದ್ದೇವೆ. ಜಗತ್ತನ್ನು ನಮ್ಮದೇ ಆದ ರೀತಿಯಲ್ಲಿ ನೋಡಿದರೆ ಈ ಜಗತ್ತು ಬೇರೆ ತರಹ ಕಾಣಬಹುದೇ ಎಂಬುದನ್ನು ಕೂಡಾ ನಾವು ತಿಳಿದುಕೊಂಡಿಲ್ಲ. ಈ ಮೇಲಿನ ಹೇಳಿಕೆಯನ್ನು ಅರ್ಥಮಾಡಿಕೊಳ್ಳುವ ಸ್ಥಿತಿಯಲ್ಲೂ ನಾವಿಲ್ಲ. ಏಶಿಯಾದ ಮಾನವಶಾಸ್ತ್ರಜ್ಞರು, ಮನಃಶಾಸ್ತ್ರವನ್ನು ಮಾಡುವಾಗ ಪಶ್ಚಿಮ ತನಗೆ ತಾನೇ ಮಾತಾಡಿಕೊಳ್ಳುತ್ತದೆ'[೧೫೮].

ಈ ಹೇಳಿಕೆಯನ್ನು ನಾವು ಹಲವು ಉದಾಹರಣೆಗಳ ಮೂಲಕ ಸಮರ್ಥಿಸಬಹುದು. ಈ ಹಿಂದೆ ಲಂಬಾಣಿ ಸಮುದಾಯವನ್ನು ಅಧ್ಯಯನ ಮಾಡಿದ ಅದೇ ಸಮುದಾಯದ ವಿದ್ವಾಂಸರ ಉಲ್ಲೇಖಗಳನ್ನು ನಾವು ಗಮನಿಸಿದರೆ, ಕಂಪನಿ ಆಡಳಿತದ ಸಂದರ್ಭದ ಅಧ್ಯಯನಗಳಿಗೂ ಈವತ್ತು ನಾವು ಮಾಡುತ್ತಿರುವ ಸಮುದಾಯ ಅಧ್ಯಯನಗಳಿಗೂ ತಾತ್ವಿಕವಾಗಿ ಯಾವುದೇ ವ್ಯತ್ಯಾಸಗಳಿಲ್ಲ. ಕಂಪನಿ ಆಡಳಿತದ ಯಾವ ಅಧಿಕಾರಿಗಳು ಇಲ್ಲಿನ ಅಲೆಮಾರಿಗಳನ್ನು, ಆದಿವಾಸಿಗಳನ್ನು ಕಳ್ಳರು, ಅಪರಾಧಿಗಳು ಎಂದು ಪರಿಭಾವಿಸಿದ್ದರೋ ಅದೇ ಬಗೆಯ ಸೈದ್ಧಾಂತಿಕತೆ ಈವತ್ತೂ ವಿಮೋಚಿತ ವಸಾಹತುಗಳ ವಿದ್ವಾಂಸರಲ್ಲಿ ಜೀವಂತವಾಗಿದೆ. ಅಭಿಜಾತ ಮಾನವಶಾಸ್ತ್ರವು ತಾನು ಅಧ್ಯಯನ ಮಾಡುವ ಸಮುದಾಯಗಳ ಪರವಾಗಿರುವುದಿಲ್ಲ. ಮೆಮ್ಮಿಯ ಪ್ರಕಾರ 'ಮಾನವ ಶಾಸ್ತ್ರಜ್ಞನು ಯಾವತ್ತೂ ಶಕ್ತಿರಾಜಕಾರಣ ಮಾಡುವ ಪ್ರಬಲ ಗುಂಪಿನ ಪರವಾಗಿರುತ್ತಾನೆ. ಜೊತೆಗೆ ವಸಾಹತಶಾಹಿ ಆಡಳಿತದ ಚಲನೆಗಳನ್ನು ಯಾವತ್ತೂ ಸಮರ್ಥಿಸುತ್ತಿರುತ್ತಾನೆ, ಮತ್ತು ಆಳಿಸಿಕೊಳ್ಳುವ ಜನಕ್ಕೆ ತಮ್ಮ ಒಳಿತನ್ನು ಸಾಧಿಸಿಕೊಳ್ಳುವ ಶಕ್ತಿ ಇಲ್ಲದವರೆಂದು ನಂಬಿಸುತ್ತಾನೆ'[೧೫]. ಈ ಮೊದಲೇ ಹೇಳಿದಂತೆ ಆಳಿಸಿಕೊಳ್ಳುವ ಜನರನ್ನು ವಸಾಹತು ಶಕ್ತಿಗಳು ಬೌದ್ಧಿಕವಾಗಿ ನಾಶ ಮಾಡಿದವು. ಯಾವ ಓರಿಯಂಟಲಿಸ್ಟರು 'ಭವ್ಯ, ಆದರ್ಶ, ಭಾರತವನ್ನು' ರಮ್ಯವಾಗಿ ಚಿತ್ರಿಸಿದರೋ ಅದರ ವಿವರಗಳನ್ನು ಇಟ್ಟುಕೊಂಡು ಮುಂದೆ ಬಂದ ಆಡಳಿತಗಾರರು, ಯುರೋಪಿನ ಮಾನವಶಾಸ್ತ್ರಜ್ಞರು ವಸಾಹತು ಭಾರತದ ಆತ್ಮಪ್ರತ್ಯಯದ ನಾಶಕ್ಕೆ ಕೈ ಹಾಕಿದರು.

ಮಾನವಶಾಸ್ತ್ರದ ಶೈಕ್ಷಣಿಕ ಆದ್ಯತೆಗಳಲ್ಲಿ ಮೊದಲನೆಯದು. 'ಮಾಹಿತಿಯನ್ನು' ಕ್ರೋಢೀಕರಿಸುವುದು. ಸಂಗ್ರಹಿಸಿದ ಮಾಹಿತಿಯನ್ನು ಮಹತ್ವದ್ದೆಂದು ಸಂರಕ್ಷಿಸುವುದು. ತಾವು 'ಅಧ್ಯಯನ' ಮಾಡುವ ಜನರ ಮೇಲ್‌ಸ್ತರದ ವಿವರಗಳನ್ನೇ ಅತ್ಯಂತಿಕ ಸತ್ಯಗಳೆಂದು ಪರಿಗಣಿಸುವುದು ಅಭಿಜಾತ ಮಾನವಶಾಸ್ತ್ರದ ಗುಣ. ಇಲ್ಲಿ ಪಡೆದ 'ಮಾಹಿತಿ'ಯ ಮರುಪರಿಶೀಲನೆ ಇರುವುದಿಲ್ಲ. ಉದಾಹರಣೆಗೆ ಸಿದ್ದಿಯರು ಮುದ್ದೆ ಮಾಡುವಾಗ ಹಿಟ್ಟನ್ನು ಸರಿಯಾಗಿ ಮಿಶ್ರಣ ಮಾಡಲು ಒಂದು ಮರದ ಕೋಲನ್ನು ಬಳಸುತ್ತಾರೆ. ಮತ್ತು ಸಿದ್ದಿ ಸಮುದಾಯದವರು ಯಾವತ್ತೂ ಮುದ್ದೆಯನ್ನು ಆಹಾರಕ್ಕಾಗಿ ಬಳಸುತ್ತಾರೆ. ಸಿದ್ದಿಯರು ಮುದ್ದೆ ಮಾಡಲು ಬಳಸುವ ಮುದ್ದೆಕೋಲು 'ಇಷ್ಟು ಉದ್ದ, ಇಷ್ಟು ಅಗಲ' ಇರುತ್ತದೆ. ಈ ಮುದ್ದೆಕೋಲು ಕಾಲಾನಂತರ ನಶಿಸಿಹೋಗಿಬಿಡಬಹುದು ಇದನ್ನು ಮುಂದಿನ ಪೀಳಿಗೆಗಾಗಿ ರಕ್ಷಿಸಬೇಕು ಎಂದು ಮಾನವಶಾಸ್ತ್ರಜ್ಞನೊಬ್ಬ ಯೋಚಿಸಿಬಿಡುತ್ತಾನೆ. ಮದ್ರಾಸಿನ ಮಾನವಶಾಸ್ತ್ರೀಯ ವಸ್ತು ಸಂಗ್ರಹಾಲಯದಲ್ಲಿ ತೋಡ, ಬಡಗ ಮತ್ತು ಇರುಳ ಮುಂತಾದ ಸಮುದಾಯಗಳ ತಲೆ ಬುರುಡೆ, ಅಸ್ತಿ ಪಂಜರ ಸಮೇತ ಆಯಾ ಸಮುದಾಯಗಳ ದಿನ ಬಳಕೆಯ ಪರಿಕರಗಳ ಸಂಗ್ರಹವನ್ನು ನೋಡಬಹುದು. ಅಲ್ಲಿನ 'ವಸ್ತುಗಳು' ಕೆಲವು 'ಕಥೆ' ಹೇಳುತ್ತವೆ. ಆದರೆ ಪಶ್ಚಿಮದ ಮಾನವಶಾಸ್ತ್ರಕ್ಕೆ ಸಿದ್ದಿಯರು ಆಹಾರಕ್ಕೆ ಮುದ್ದೆಯನ್ನೇ ಏಕೆ ಬಳಸುತ್ತಾರೆ? ಸಿದ್ದಿಯರು ಈ ಮುದ್ದೆ ಕೋಲನ್ನು ಬಳಸಿ ದಿನಕ್ಕೆ ಎಷ್ಟು ಬಾರಿ ಅಡುಗೆ ಮಾಡುತ್ತಿದ್ದರು? ಸಿದ್ದಿಯರು ದಿನಕ್ಕೆ ಎಷ್ಟು ಬಾರಿ ಮುದ್ದೆಯನ್ನು ಊಟ ಮಾಡುತ್ತಿದ್ದರು? ಎಂಬ ಪ್ರಶ್ನೆಗಳು ಕಾಡುವುದಿಲ್ಲ. ಆ ಕ್ಷಣಕ್ಕೆ ಪಡೆದ ವಿವರಗಳು ಮಾತ್ರ ಮಾನವಶಾಸ್ತ್ರಕ್ಕೆ ಅತ್ಯಂತಿಕ. ಅದಕ್ಕೆ ಕ್ಲಿಫಾರ್ಡ್ 'ಮಾನವಶಾಸ್ತ್ರದ

ಸತ್ಯಗಳು ಅರ್ಧ ಸತ್ಯಗಳಾಗಿರುತ್ತವೆ. ಜೊತೆಗೆ ಈ ಸತ್ಯಗಳು ನಿಶ್ಚಿತ ಹಿತಾಸಕ್ತಿಗಳನ್ನು ರಕ್ಷಿಸಲು ಬದ್ಧವಾಗಿರುತ್ತವೆ’[೧೬೦] ಎನ್ನುತ್ತಾನೆ. ಅಭಿಜಾತ ಮಾನವಶಾಸ್ತ್ರ ಯಾವುದನ್ನು ಈ ಕ್ಷಣದ ಸತ್ಯ ಎಂದು ನಂಬುತ್ತದೋ ಅದು ಸ್ಥಳೀಯ ಸಾಮಾಜಿಕ ಸಂದರ್ಭದಲ್ಲಿ ಸಾಮಾನ್ಯ ವಿವರವಾಗಿ ಮಾತ್ರ ಲಭ್ಯವಾಗಿರುತ್ತದೆ. ಒಟ್ಟಿನಲ್ಲಿ ಅಭಿಜಾತ ಮಾನವಶಾಸ್ತ್ರಕ್ಕೆ ಭಾರತದಂತಹ ದೇಶದ ಸಮಾಜದ ತಿಳುವಳಿಕೆಯನ್ನು ಜ್ಞಾನದ ಮಟ್ಟದಲ್ಲಿ ವಿವರಿಸಿಕೊಳ್ಳುವ ಜರೂರು ಇರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇದೇ ಬಗೆಯ ಶೈಕ್ಷಣಿಕ ವಿಧಾನವನ್ನು ಸ್ಥಳೀಯ, ದೇಶೀಯ ಮಾನವಶಾಸ್ತ್ರಜ್ಞರು ಇಂದಿಗೂ ಅನುಸರಿಸುತ್ತಿರುವುದು ಒಂದು ವಿಪರ್ಯಾಸ.

ಜಿ.ಎನ್.ದೇವಿ ತಮ್ಮ ಲೇಖನದ ಕೊನೆಗೆ ‘ಬ್ರಿಟಿಶ್ ವಸಾಹತು ಕಾಲದಿಂದ ಪಶ್ಚಿಮ ಮತ್ತು ಭಾರತದ ನಡುವಿನ ಬೌದ್ಧಿಕ ವ್ಯಾಪಾರ ಏಕಮುಖವಾಗಿ ಸಾಗಿದೆ. ನಮ್ಮ ವಿಮರ್ಶಾ ವ್ಯಾಪಾರದಲ್ಲಿ ನಾವು ಎಷ್ಟರ ಮಟ್ಟಿಗೆ ವಿದೇಶಿಯನ್ನು ಸ್ವೀಕರಿಸುತ್ತಿದ್ದೇವೆ ಎಂದರೆ, ಅದರಲ್ಲಿನ ‘ದೇಶೀ’ ಅವಕಾಶ ಮತ್ತಷ್ಟು ಅನಿರ್ವಚನೀಯವಾಗುತ್ತಾ ಸಾಗಿದೆ’[೧೬೧] ಎನ್ನುತ್ತಾರೆ. ರಾಜಕೀಯವಾಗಿ ತಿರಸ್ಕರಿಸಿದ್ದನ್ನು ಬೌದ್ಧಿಕವಾಗಿ ಮತ್ತು ಆರ್ಥಿಕವಾಗಿ ಅವಲಂಬಿಸುವ ಹುಂಬ ನಿರ್ಧಾರಗಳ ಕುರಿತ ಹಳಹಳಿಕೆ ದೇವಿಯವರ ಲೇಖನದುದ್ದಕ್ಕೂ ವ್ಯಕ್ತವಾಗುತ್ತದೆ. ಜೊತೆಗೆ ದೇವಿ ‘ದೇಶೀ’ ಅಧ್ಯಯನ ವಿಧಾನವನ್ನು ಪ್ರಜ್ಞಾಪೂರ್ವಕವಾಗಿ ಹಂಬಲಿಸುತ್ತಾರೆ. ಆವೇಶದಿಂದ ಆಕ್ರಮಣ ಮಾಡುವ ದುಡುಕಿನ ಉಗ್ರಗಾಮಿಯಾಗದ, ನಿಂತಲ್ಲೇ ನಿಂತು ಮಿತಿಗಳನ್ನು ಆರಾಧಿಸುವ ಕೂಪ ಮಂಡೂಕವಾಗದ ದೇಶಿ ಅಧ್ಯಯನ ವಿಧಾನಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡಬೇಕೆಂದು ದೇವಿ ತಮ್ಮ ಲೇಖನದಲ್ಲಿ ಚರ್ಚಿಸಿದ್ದಾರೆ. ದೇಶೀ ಜ್ಞಾನ ಪರಂಪರೆ, ದೇಶಿ ಅಧ್ಯಯನ ವಿಧಾನ ಎಂಬ ಚರ್ಚೆಗಳು ಆಧುನಿಕೋತ್ತರ ಸಂದರ್ಭದಲ್ಲಿ ತುಸು ಹೆಚ್ಚಾಗಿಯೇ ನಡೆದವು. ಅಶೀಶ್ ನಂದಿ, ಡಿ.ಆರ್.ನಾಗರಾಜ್, ಮೊಗಳ್ಳಿ ಗಣೇಶ್ ಮತ್ತು ರಾಜೇಂದ್ರ ಚೆನ್ನಿ ಮುಂತಾದವರು ಈ ಕುರಿತು ಚರ್ಚಿಸಿದ್ದಾರೆ.

ದೇವಿ, ಡಿ.ಆರ್ ಮತ್ತು ಮೊಗಳ್ಳಿ, ರಾಜೆಂದ್ರಚೆನ್ನಿ ಅವರ ದೇಶೀ ಪರಿಕಲ್ಪನೆಗಳು ಏಕರೂಪವಾಗಿಲ್ಲ. ದೇವಿ ಮತ್ತು ಡಿ.ಆರ್. ವಿಸ್ಮೃತಿಯ ಪರಿಕಲ್ಪನೆ ಹಿನ್ನೆಲೆಯಲ್ಲಿ ಜಾಗತಿಕ ಮಟ್ಟದ ಸರ್ವಕಾಲಿಕ ಎನ್ನುವ ಅಧ್ಯಯನ ಮಾದರಿಗಳಿಗೆ ಮತ್ತು ಕಥನಗಳಿಗೆ ಸ್ಥಳೀಯ ಜ್ಞಾನ ಪರಂಪರೆಗಳು ಪರ್ಯಾಯಗಳು ಎಂದು ಭಾವಿಸುತ್ತಾರೆ. ಆದರೆ ಇವರು ನಂಬುವುದು ‘ಸ್ಥಳೀಯ’ ಜ್ಞಾನ ಪರಂಪರೆಗಳು ಮತ್ತೆ ಅಖಿಲ ಭಾರತ ಮಟ್ಟದ ವಿರಾಟ್ ಕಥನಗಳನ್ನೇ. ಅಕ್ಷರ ಚಿಂತನ ಮಾಲೆಯಲ್ಲಿ ಡಿ.ಆರ್. ಪ್ರಕಟಿಸಿದ ಹಲವು ಪುಸ್ತಕಗಳು ಇದನ್ನು ಸಮರ್ಥಿಸುತ್ತವೆ. ದಾವ್ ದ ಜಿಂಗ್, ದಾರು ಪ್ರತಿಮಾ ಪೂಜಿವೆಯಂತಹ ಕೆಲವು ಪುಸ್ತಕಗಳನ್ನು ಬಿಟ್ಟರೆ ಉಳಿದ ಕೃತಿಗಳು Pan Indian ಮಾದರಿಯನ್ನು ಸಮರ್ಥಿಸುವಂತವುಗಳೇ ಆಗಿವೆ.

ಮೊಗಳ್ಳಿ ಮತ್ತು ರಾಜೇಂದ್ರಚೆನ್ನಿ ದೇಶೀಯತೆಯನ್ನು ಇವರಿಗಿತ ಭಿನ್ನವಾಗಿಯೇ ಪರಿಭಾವಿಸುತ್ತಾರೆ. ಈ ನಾಡಿನ ಅಂಚಿನ ಸಮುದಾಯಗಳು, ಜಾನಪದದ, ಆದಿವಾಸಿಗಳ ತಿಳುವಳಿಕೆಯ ಮೂಲಕ ದೇಶೀಯತೆಯನ್ನು ಪರಿಕಲ್ಪಿಸಲು ಪ್ರಯತ್ನಿಸಲಾಗುತ್ತದೆ. ಮೊಗಳ್ಳಿ ‘ದೇಶೀ’ ತನ್ನ ಅಸ್ತಿತ್ವವನ್ನು ಪುನರ್

ಸೃಷ್ಟಿಸಿಕೊಳ್ಳುವ ಕಥನ'[೧೨] ಎನ್ನುತ್ತಾರೆ. ಅಖಿಲ ಭಾರತ ಮಟ್ಟದ ಚಿಂತಕರು ಪರ್ಯಾಯವೆಂದು ಸಮರ್ಥಿಸುವ ದೇಶೀ ಜ್ಞಾನ ಮತ್ತು ದೇಶೀ ಅಧ್ಯಯನ ವಿಧಾನಗಳನ್ನು ನಿರಾಕರಿಸುವ ಗುಣ ಇವರ ಚಿಂತನೆಯಲ್ಲಿದೆ. ಕನ್ನಡದ ಸಂದರ್ಭದಲ್ಲಿ ರಹಮತ್ ತರೀಕೆರೆಯವರ ಪ್ರತಿಸಂಸ್ಕೃತಿಯ ಪರಿಕಲ್ಪನೆ ಮತ್ತು ಸೂಫಿಗಳನ್ನು ಅಧ್ಯಯನ ಮಾಡಿದ ಕ್ರಮ, ಕನ್ನಡದ ಸಾಹಿತ್ಯ ಮೀಮಾಂಸೆಯನ್ನು ಸಂಸ್ಕೃತದ ಲಾಕ್ಷಣಿಕರ ಕ್ಲೀಷೆಗಳಿಂದ ಬೇರ್ಪಡಿಸಿ ಕನ್ನಡದ್ದೇ ಮೀಮಾಂಸೆಯನ್ನು ರೂಪಿಸಲು ಮಾಡಿದ ಪ್ರಯತ್ನಗಳು ಗಮನಾರ್ಹವಾದವುಗಳೇ ಆಗಿವೆ. ಜೊತೆಗೆ ಅಖಿಲ ಭಾರತ ಮಟ್ಟದ ವಿಸ್ಮೃತಿ ಚರ್ಚೆಯನ್ನು ಬುಡಕಟ್ಟೊಂದರ ಲೋಕ ದೃಷ್ಟಿಯ ಹಿನ್ನೆಲೆಯಲ್ಲಿ ವಿಮರ್ಶೆಗೊಳಪಡಿಸುವ ಹಿ.ಚಿ.ಬೋರಲಿಂಗಯ್ಯನವರ 'ವಿಸ್ಮೃತಿ ಮತ್ತು ಸಂಸ್ಕೃತಿ' ಪುಸ್ತಕವು ಈ ಬಗೆಯ ಪರ್ಯಾಯ ಅಧ್ಯಯನ ವಿಧಾನಗಳನ್ನು ಮಂಡಿಸುತ್ತದೆ. ಬಿ.ಎಂ.ಪುಟ್ಟಯ್ಯನವರ 'ಸಾವು ! ಒಂದು ಚರ್ಚೆ' ಎಸ್.ಎಸ್. ಹಿರೇಮಠರ ಕರ್ನಾಟಕ ದಲಿತ ಸಂಸ್ಕೃತಿ ಕುರಿತ ಅಧ್ಯಯನಗಳು, ಸಾಕಿಯವರ Making Historyಯ ಎರಡು ಸಂಪುಟಗಳು, ಮೊಗಳ್ಳಿ ಗಣೇಶರ ದೇಶಿ, ಮೌಖಿಕ ಕಥನಗಳ ಕುರಿತ ಅವರ ಬರವಣಿಗೆ, ರಾಜರಾಮ್ ಹೆಗಡೆಯವರ ಬಹುಪಾಲು ಬರಹಗಳು ಅಖಿಲ ಭಾರತ ಮಟ್ಟದ ದೇಶೀ ಚರ್ಚೆಯನ್ನು ಸೂಕ್ಷ್ಮ ನೆಲೆಯಲ್ಲಿ ವಿಮರ್ಶಿಸುತ್ತಾ, ಹೊಸ ಶೈಕ್ಷಣಿಕ ದೃಷ್ಟಿಕೋನವನ್ನು ರೂಪಿಸಲು ಪ್ರೇರೇಪಿಸುತ್ತವೆ.

ಈ ಮೇಲಿನ ಶೈಕ್ಷಣಿಕ ಸಾಹಸಗಳು ಸಬಾಲ್ಟರ್ನ್ ಅಧ್ಯಯನಗಳ ಶೈಕ್ಷಣಿಕ ವಿಧಾನಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತವೆ. ಅಲಕ್ಷಿತ ಅಧ್ಯಯನಗಳು ಆದಿವಾಸಿ, ರೈತ, ಕೆಳಜಾತಿ ಮತ್ತು ಮಹಿಳಾ ಲೋಕಗಳ ತಿಳುವಳಿಕೆಗಳನ್ನು ಚರಿತ್ರೆಯ ಭಾಗವಾಗಿಸುವ ಪ್ರಯತ್ನ ಮಾಡುತ್ತಾ ಬಂದಿವೆ. ಯಾವುದೋ ಆದಿವಾಸಿ ಸಮುದಾಯದ ವಿಧವೆ ಚಂದ್ರಾಳ ಸಾವನ್ನು ಮುಖ್ಯವಾಗಿಟ್ಟುಕೊಂಡು ಭಾರತದ ಸಾಮಾಜಿಕ ಚರಿತ್ರೆಯಲ್ಲಿ ಪುರುಷ ಪ್ರಧಾನ ಸಮಾಜದ ನ್ಯಾಯ ವ್ಯವಸ್ಥೆಯನ್ನು ಪರಿಶೀಲಿಸುವ ಮೂಲಕ ರಂಜಿತ್ ಗುಹಾ ಆದಿವಾಸಿಗಳ ಕಣ್ಣುಗಳ ಮೂಲಕ ದಬ್ಬಾಳಿಕೆಯು ಜಗತ್ತಿನ ಮುಂದೆ 'ಹೊಸ' ಚರಿತ್ರೆಯ ರಚನಾ ಮಾದರಿಯನ್ನು ಎತ್ತಿ ನಿಲ್ಲಿಸುತ್ತಾರೆ. ಆದಿವಾಸಿಗಳು 'ಮುಖ್ಯವಾಹಿನಿ' ಎಂಬ ಜಗತ್ತಿನ ಮುಂದೆ ಕ್ಷುಲ್ಲಕವಾಗಿ ಬಿಡುವ, ಅವರ ದುಃಖ ದುಮ್ಮಾನುಗಳು ದಾಖಲಾಗದೆ ನಗಣ್ಯವಾಗುವುದನ್ನು ಸಬಾಲ್ಟರ್ನ್ ಚರಿತ್ರೆ ರಚನಾಶಾಸ್ತ್ರವು ವಿರೋಧಿಸುತ್ತದೆ. ಅಲೆಮಾರಿ, ಆದಿವಾಸಿ, ರೈತ ಮತ್ತು ಮಹಿಳೆಯರ ಕಷ್ಟ ಸುಖಗಳ ಮೂಲಕ ರೂಪುಗೊಳ್ಳುವ ಸಾಮಾಜಿಕ ಚರಿತ್ರೆಯು ಯಾವುದನ್ನು ನಾವು ಅಖಿಲ ಭಾರತೀಯ ಚರಿತ್ರೆ ಎನ್ನುತ್ತೇವೋ ಆ ಚರಿತ್ರೆಗೆ ಸಹಜವಾಗಿಯೇ ತಾತ್ವಿಕವಾಗಿ ಪರ್ಯಾಯವಾಗುತ್ತದೆ. ಈ ಬಗೆಯ ಅಂಚಿನ ಸಮುದಾಯಗಳ ದುಮ್ಮಾನಗಳ ಭಾಗವಾಗಿ ರೂಪುಗೊಳ್ಳುವ ಚರಿತ್ರೆಯ ರಾಜಕೀಯ ಸಿದ್ಧಾಂತವೇ ದಂಡಯಾತ್ರೆಗಳ ಅಭಿಜಾತ ಚರಿತ್ರೆಶಾಸ್ತ್ರವನ್ನು ಲೇವಡಿ ಮಾಡಿಬಿಡುತ್ತದೆ. ಈವರೆಗೆ ಸಬಾಲ್ಟರ್ನ್ ಅಧ್ಯಯನ ಮಾಲಿಕೆಯಲ್ಲಿ ಹನ್ನೆರಡು ಸಂಪುಟಗಳು ಪ್ರಕಟವಾಗಿವೆ. ರಂಜಿತ್ ಗುಹಾ ಸಂಪಾದಕತ್ವದಲ್ಲಿ ನಡೆದ ಈ ಶೈಕ್ಷಣಿಕ ಯೋಜನೆಯ ಸೈದ್ಧಾಂತಿಕತೆಯನ್ನೂ ತಾತ್ವಿಕವಾಗಿ ವಿರೋಧಿಸುವ ಒಂದು ವಿದ್ವಾಂಸ ಪಡೆಯೂ ಇದೆ. ಮೊದಲು ಸಬಾಲ್ಟರ್ನ್ ಅಧ್ಯಯನ ಬಳಗದಲ್ಲಿಯೇ ಇದ್ದು ಸುಮಿತ್ ಸರ್ಕಾರ್ ಮತ್ತು ವೀಣಾದಾಸ್

ಸಬಾಲ್ಟರ್ನ್ ಅಧ್ಯಯನಗಳಲ್ಲಿರುವ ಕೆಲವು ಸೈದ್ಧಾಂತಿಕ ಗೋಂದಲಗಳನ್ನು ಪ್ರಶ್ನಿಸುತ್ತಾರೆ. ವೀಣಾದಾಸ್ ತಮ್ಮ Subaltern as perspective ಲೇಖನದಲ್ಲಿ ಈ ಕುರಿತು ವಿಶ್ಲೇಷಿಸುತ್ತಾರೆ.

ಸಬಾಲ್ಟರ್ನ್ ಸ್ಟಡೀಸ್‌ನ ಆರನೇ ಸಂಪುಟದಲ್ಲಿ ಪ್ರಕಟವಾದ ಮೇಲಿನ ಲೇಖನದಲ್ಲಿ ವೀಣಾದಾಸ್ ಮೊದಲ ಐದು ಸಂಪುಟಗಳ ಲೇಖನಗಳಲ್ಲಿಯ ಸೈದ್ಧಾಂತಿಕ ಬಿರುಕುಗಳನ್ನು ಇಲ್ಲಿ ಸೂಕ್ಷ್ಮ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಮೂಲತಃ ಸಾಮ್ರಾಜ್ಯಶಾಹಿಗಳ ಅಗತ್ಯಕ್ಕೆ ರೂಪುಗೊಂಡ ಮಾನವಶಾಸ್ತ್ರ ಮತ್ತು ಅದರ ಶೈಕ್ಷಣಿಕ ವಿಧಾನಗಳನ್ನು ಸೈದ್ಧಾಂತಿಕವಾಗಿ ಸಬಾಲ್ಟರ್ನ್ ಅಧ್ಯಯನಗಳು ನಿರಾಕರಿಸುತ್ತವೆ. ಆದರೆ ಸಬಾಲ್ಟರ್ನ್ ಅಧ್ಯಯನಗಳಲ್ಲೂ ಸಹ ಅಭಿಜಾತ ಮಾನವಶಾಸ್ತ್ರದ ಶೈಕ್ಷಣಿಕ ವಿಧಾನಗಳು ಸದ್ದಿಲ್ಲದೆ ನುಸುಳಿ ಬಂದಿರುವುದನ್ನು ವೀಣಾದಾಸ್ ಎತ್ತಿ ತೋರಿಸುತ್ತಾರೆ. ತನಿಕಾ ಸರ್ಕಾರ್, ಡೇವಿಡ್ ಆರ್ನಾಲ್ಡ್, ಪಾರ್ಥಚಟರ್ಜಿ ಮತ್ತು ಗೌತಮಭದ್ರ ಅವರ ಕೆಲವು ಲೇಖನಗಳಲ್ಲಿ ಅಭಿಜಾತ ಮಾನವಶಾಸ್ತ್ರದ ಅಧ್ಯಯನ ವಿಧಾನವು ನುಸುಳಿ ಬಂದಿರುವುದನ್ನು ವಿಶ್ಲೇಷಿಸುತ್ತಾರೆ.[೧೬] ಇದೇ ರೀತಿ, ಸುಮಿತ್ ಸರಕಾರ್ ಅವರ writing Social History ಪುಸ್ತಕದ Decline of sublterm in sublterm studies ಎಂಬ ಲೇಖನದಲ್ಲಿ ಸಬಾಲ್ಟರ್ನ್ ಅಧ್ಯಯನಗಳ ತಾತ್ವಿಕ ಮಿತಿಗಳನ್ನು ಗುರುತಿಸುತ್ತಾರೆ. ಸಬಾಲ್ಟರ್ನ್ ಅಧ್ಯಯನಗಳು ಸಾರ್ವಕಾಲಿಕ ಮತ್ತು ಜಾಗತೀಕವೆನ್ನಿಸುವ ಸತ್ಯ ಮತ್ತು ಶೈಕ್ಷಣಿಕ ವಿಧಾನಗಳನ್ನು ಪ್ರಶ್ನಿಸುತ್ತಲೇ ರೂಪಗೊಂಡವು ಎಂಬುದನ್ನು ಸುಮಿತ್ ಸರ್ಕಾರ್ ಒಪ್ಪುತ್ತಾರೆ. ಆದರೆ ಆನಂತರ ಸಬಾಲ್ಟರ್ನ್ ಅಧ್ಯಯನಗಳು ಭಾರತದ ಅಂಚಿನ ಸಮುದಾಯಗಳ ಕುರಿತು ಚರ್ಚಿಸದೆ ಮತ್ತೆ ಜಾಗತಿಕ ಮಟ್ಟದ ಚರ್ಚೆಗಳಿಗೆ ತಮ್ಮನ್ನು ಒಪ್ಪಿಸಿಕೊಂಡಿರುವುದನ್ನು ಸುಮಿತ್ ಸರ್ಕಾರ್ ವಿರೋಧಿಸುತ್ತಾರೆ[೧೭]. ಸಬಾಲ್ಟರ್ನ್ ಅಧ್ಯಯನಗಳ ಕುರಿತು ಸೈದ್ಧಾಂತಿಕವಾಗಿ ಅನೇಕ ಭಿನ್ನಾಭಿಪ್ರಾಯಗಳು ಸಹಜ ಮತ್ತು ಅವು ಅನಿವಾರ್ಯವೂ ಹೌದು. ಆದರೆ ಅಲಕ್ಷಿತ ಅಧ್ಯಯನಗಳು ಶೈಕ್ಷಣಿಕ ವಿಧಾನ ಮತ್ತು ರಾಜಕೀಯ ಸೈದ್ಧಾಂತಿಕತೆಯು ದೇಶೀಯ ಮಾನವಶಾಸ್ತ್ರಜ್ಞರಿಗೆ ಮತ್ತು ಸಾಮಾಜಿಕ ಚರಿತ್ರೆಕಾರರಿಗೆ ಒಂದು ದಿಕ್ಸೂಚಿ. ಮುಖ್ಯವಾಹಿನಿಯು ಭಾರತದ ಅಥವಾ ಸ್ಥಳೀಯ ಚರಿತ್ರೆಯನ್ನೇ ದುಡಿವ ವರ್ಗಗಳ ಕಣ್ಣುಗಳ ಮೂಲಕ ನೋಡುವ ಮತ್ತು ರೂಪಿಸುವ ವಿಧಾನವೇ ಒಂದು ಕ್ರಾಂತಿಕಾರಿ ಮತ್ತು ರಚನಾತ್ಮಕ ಶೈಕ್ಷಣಿಕ ಪ್ರಯತ್ನ.

ಕನ್ನಡದ ಸಂದರ್ಭದಲ್ಲಿ ಈ ತರಹದ ಪ್ರಯತ್ನಗಳು ಸಾಹಿತ್ಯ ಅಕಾಡೆಮಿಯ ಉಪಸಂಸ್ಕೃತಿ ಮಾಲೆಯ ಮೂಲಕ ನಡೆದವು. ಈ ಮಾಲೆಯ ಪುಸ್ತಕಗಳಿಗೆ ಬರಗೂರರು ಬರೆದ ಸಂಪಾದಕೀಯವು ಒಂದು ಅರ್ಥದಲ್ಲಿ ಇತ್ತೀಚಿನ ಸಬಾಲ್ಟರ್ನ್ ಅಧ್ಯಯನಗಳ ತಾತ್ವಿಕತೆಯನ್ನು ಧ್ವನಿಸುತ್ತದೆ. ಈ ಸಂಪಾದಕೀಯವು ಇಡೀ ಉಪಸಂಸ್ಕೃತಿ ಮಾಲೆಗೆ ಒಂದು ಸೈದ್ಧಾಂತಿಕ ನೀಲನಕ್ಷೆಯನ್ನು ರೂಪಿಸುತ್ತದೆ. ಉಪಸಂಸ್ಕೃತಿಗಳ ಅಧ್ಯಯನವು ಆಯಾ ಸಂಸ್ಕೃತಿಗಳ ವೈಭವೀಕರಣವಲ್ಲ; 'ನಾಗರೀಕ' ಎಂದು ಕರೆಸಿಕೊಳ್ಳುತ್ತಿರುವ ಸಮಾಜ ಮತ್ತು ಸಂಸ್ಕೃತಿಯು ಅಸಂಖ್ಯಾತ ಸಂಸ್ಕೃತಿಗಳನ್ನು ದೂರದಲ್ಲೇ ಬಿಟ್ಟು ದಾಪುಗಾಲು ಹಾಕಿದ ಇತಿಹಾಸದ ಒಡಕುತನವನ್ನು ತಂತಾನೆ ಹೊರಗೆಳೆಯುವ ಶಕ್ತಿಯುಳ್ಳ ವಿವರಗಳ ನಿರೂಪಣೆ ಮತ್ತು ವಿಶ್ಲೇಷಣೆ ವಸ್ತುಸ್ಥಿತಿಯ ಹೂರಣ ಮತ್ತು ಒಂದು ಅನಾವರಣ'[೧೮]. ಎಂದು ತಮ್ಮ ಯೋಜನೆಯ ಉದ್ದೇಶಗಳನ್ನು

ಬರಗೂರು ಪ್ರತಿಪಾದಿಸುತ್ತಾರೆ. ಆದರೆ ಈ ಮಾಲಿಕೆಯ ಒಂದೆರಡು ಪುಸ್ತಕಗಳ್ನು ಬಿಟ್ಟರೆ ಬಹುಪಾಲು ಕೃತಿಗಳು ಅಭಿಜಾತ ಮಾನವಶಾಸ್ತ್ರದ ಅಧ್ಯಯನ ವಿಧಾನವನ್ನೇ ಅನುಸರಿಸಿ ಬರೀ ಮಾಹಿತಿ ಕಲೆ ಹಾಕುವ ಪ್ರಯತ್ನಗಳಿಗೆ ತಮ್ಮನ್ನು ಸೀಮಿತಗೊಳಿಸಿಕೊಂಡಿವೆ. ಕೋಟಗಾನಹಳ್ಳಿ ರಾಮಯ್ಯನವರ 'ಸಿಂದ್ ಮಾದಿಗರ ಸಂಸ್ಕೃತಿ, ಲಕ್ಷ್ಮೀಪತಿ ಕೋಲಾರ ಅವರ 'ಮಾಸ್ತಿಕರ ಸಂಸ್ಕೃತಿ' ಮತ್ತು ಬೋರಲಿಂಗಯ್ಯನವರ 'ಸಿದ್ದಿಯರ ಸಂಸ್ಕೃತಿ' ಮುಂತಾದ ಕೆಲವು ಪುಸ್ತಕಗಳು ಸಮುದಾಯಗಳ ಬವಣೆಗಳ ಮೂಲಕ ಸಂಸ್ಕೃತಿ ಮತ್ತು ಸಮಾಜವನ್ನು ಗ್ರಹಿಸುವ ಕಾರಣಕ್ಕಾಗಿ ಭಿನ್ನವಾಗಿ ನಿಲ್ಲುತ್ತವೆ. ಆದರೆ ಉಳಿದವು ಕೇವಲ 'ಮಾಹಿತಿ' ಸಂಗ್ರಹಿಸುವುದಕ್ಕೇ ಹೆಚ್ಚು ಸೀಮಿತಗೊಂಡಿವೆ.

ಕನ್ನಡದಲ್ಲಿ ಇತ್ತೀಚಿನ ಕೆಲವು ಅಧ್ಯಯನಗಳು ತಮ್ಮ ತಾತ್ವಿಕ ನಿಲುವುಗಳ ಕಾರಣಕ್ಕಾಗಿ ಭಿನ್ನ ಶೈಕ್ಷಣಿಕ ವಿಧಾನವನ್ನು ರೂಪಿಸಿಕೊಳ್ಳಲು ತವಕಿಸುತ್ತಿರುವುದು ಗಮನಾರ್ಹ ಸಂಗತಿ. ಇಲ್ಲಿ ಹಲವು ಸಂದರ್ಭಗಳಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯವೇ ಅಧ್ಯಯನಕಾರನನ್ನು ತಾತ್ವಿಕವಾಗಿ ನಿಯಂತ್ರಿಸಿರುವುದು ಮತ್ತು ಮಾರ್ಕ್ಸ್, ಅಂಬೇಡ್ಕರ್, ಲೋಹಿಯಾ ಮತ್ತು ಪೆರಿಯಾರ್ ಅವರ ಚಿಂತನೆಗಳ ಬೆಳಕಲ್ಲಿ ನಮ್ಮ ಸಮಾಜದ ಚರಿತ್ರೆಯನ್ನು ಸೈದ್ಧಾಂತಿಕವಾಗಿ ರೂಪಿಸಲು ಹೊರಟಿರುವ ಎರಡು ಸಂದರ್ಭಗಳೂ ಆಗಿ ಹೋಗಿವೆ.

ಒಟ್ಟಾರೆಯ ಈ ಅಧ್ಯಾಯದ ಸಾರಾಂಶವನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು. ಪುನರುಜ್ಜೀವನ ಕಾಲಘಟ್ಟದ ನಂತರ ನಡೆದ ಜ್ಞಾನಕ್ರಾಂತಿಯ ಕಾರಣಕ್ಕಾಗಿ ಯುರೋಪಿನ ದೇಶಗಳು ವಿಜ್ಞಾನ ಮತ್ತು ತಂತ್ರಜ್ಞಾನದ ಕ್ಷೇತ್ರದಲ್ಲಿ ಮಾಡಿದ ಸಾಧನೆಗಳಿಂದ ಜಗತ್ತಿನ ಮೇಲೆ ಹಲವು ಬಗೆಗಳಲ್ಲಿ ಹಿಡಿತ ಸಾಧಿಸಲು ಸಾಧ್ಯವಾಯಿತು. ಕೈಗಾರಿಕಾ ಕ್ರಾಂತಿಯಿಂದ ಯುರೋಪಿನ ಸಮಾಜ ಊಳಿಗಮಾನ್ಯತೆಯಿಂದ ಬಂಡವಾಳಶಾಹಿ ವ್ಯವಸ್ಥೆಯ ಕಡೆಗೆ ನಡೆದು ಹೋಯಿತು. ಮುಂದೆ ಯುರೋಪಿನ ದೇಶಗಳು ಜಗತ್ತಿನ 'ಹಿಂದುಳಿದ' ದೇಶಗಳನ್ನು ಆಕ್ರಮಿಸಿಕೊಂಡು ವಸಾಹತುಗಳನ್ನಾಗಿ ರೂಪಾಂತರಿಸಿಕೊಂಡ ನಂತರ, ಅಲ್ಲಿನ ಸ್ಥಳೀಯ ಸಮಾಜಗಳನ್ನು ಅರ್ಥ ಮಾಡಿಕೊಳ್ಳಲು ತಾನೇ ರೂಪಿಸಿದ್ದ ಸಮಾಜಶಾಸ್ತ್ರ ಮತ್ತು ಮಾನವಶಾಸ್ತ್ರಗಳೆಂಬ ಜ್ಞಾನಶಿಸ್ತುಗಳನ್ನು ಬಳಸಿಕೊಂಡಿತು. ಈ ಜ್ಞಾನಶಿಸ್ತುಗಳು ಯುರೋಪಿನ ರಾಜಕೀಯ ಗಣ್ಯತೆಯನ್ನೇ ಸೈದ್ಧಾಂತಿಕ ನೆಲೆಗಟ್ಟಾಗಿಸಿಕೊಂಡಿದ್ದ ಕಾರಣಕ್ಕಾಗಿ, ತಾವು ಅಧ್ಯಯನ ಮಾಡುವ ಸಮುದಾಯಗಳು ಕೇವಲ ವಸ್ತು ಮತ್ತು ಆಕರಗಳೆಂದು ಪರಿಭಾವಿಸಿದವು. ತಮ್ಮ ಆಡಳಿತ ಸುಗಮಗೊಳ್ಳಲೆಂದ ಸ್ಥಳೀಯ ಸಮುದಾಯಗಳನ್ನು ಅಧ್ಯಯನ ಮಾಡಿದ ಯುರೋಪಿನ ಜನ ಒಂದು ಅಭಿಜಾತ ಶೈಕ್ಷಣಿಕ ವಿಧಾನವನ್ನು ಸಮಾಜ ವಿಜ್ಞಾನಗಳ ಕ್ಷೇತ್ರದಲ್ಲಿ ಅದರಲ್ಲೂ ಮಾನವಶಾಸ್ತ್ರದ ಕ್ಷೇತ್ರದಲ್ಲಿ ರೂಪಿಸಿದ್ದರು. ಆದರೆ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ಮೇಲೂ ಯುರೋಪಿನ ಶೈಕ್ಷಣಿಕ ಯಜಮಾನಿಕೆ ಅಬಾಧಿತವಾಗಿ ಮುಂದುವರೆಯಿತು. ೫೦ ರ ದಶಕದ ನಂತರ ಜಗತ್ತಿನ ರಾಜಕೀಯ ಯಜಮಾನಿಕೆಯು ಯುರೋಪಿನಿಂದ ಅಮೇರಿಕಾಕ್ಕೆ ವರ್ಗಾವಣೆಗೊಂಡಿತ್ತು. ಆದರೆ ಭಾರತದ ಪಾಲಿಗೆ ಯಜಮಾನ ಮಾತ್ರ ಬದಲಾಗಿದ್ದ. ರಾಜಕೀಯ ಮತ್ತು ಆರ್ಥಿಕ ಕ್ಷೇತ್ರದಲ್ಲಿನ ಭಾರತದ ಅವಲಂಬನೆ ಮುಂದುವರಿದೇ ಇತ್ತು. ಇದು ಶೈಕ್ಷಣಿಕ

ಕ್ಷೇತ್ರದಲ್ಲೂ ಮುಂದುವರೆಯಿತು.

ಆದರೆ ೮೦ ರ ದಶಕದ ನಂತರ ಭಾರತದಲ್ಲಿ ಭಿನ್ನ ಶೈಕ್ಷಣಿಕ ವಿಧಾನವನ್ನು ಕಂಡುಕೊಳ್ಳಲಾಯಿತು. ಗ್ರಾಂಸಿಯ ಸಬಾಲ್ಟನ್ ಪರಿಕಲ್ಪನೆಯನ್ನು ಆಧರಿಸಿ ಭಾರತದಲ್ಲಿ ರಂಜಿತ್ ಗುಹಾ ಸಂಪಾದಕತ್ವದಲ್ಲಿ ನಡೆದ ಸಬಾಲ್ಟನ್ ಅಧ್ಯಯನಗಳು ಪ್ರಾರಂಭವಾದವು. ಕನ್ನಡದಲ್ಲೂ ದಲಿತ ಬಂಡಾಯ ಚಳುವಳಿಯ ಭಾಗವಾಗಿ ಪ್ರಾರಂಭವಾದ ಚಿಂತನೆಗಳಲ್ಲಿ ಈ ಬಗೆಯ 'ಸಬಾಲ್ಟನ್' ವಿಷಯಗಳ ಕುರಿತ ಚರ್ಚೆ ಇದ್ದರೂ, ಬರಗೂರರು ಸಾಹಿತ್ಯ ಅಕಾಡೆಮಿಯಿಂದ ಉಪಸಂಸ್ಕೃತಿ ಮಾಲೆಯ ಪುಸ್ತಕಗಳ ಮೂಲಕ ಅಲಕ್ಷಿತ ಸಮುದಾಯಗಳ ಅಧ್ಯಯನಗಳನ್ನು ಪ್ರಾರಂಭಿಸಿದರು. ಆದರೆ ಈ ಮಾಲೆಯ ಬಹುತೇಕ ಲೇಖಕರು 'ಮಾಹಿತಿ' ಕಲೆಹಾಕುವ ಮತ್ತು ಅದನ್ನೇ ಸಂಶೋಧನೆ ಎಂದು ಭಾವಿಸುವ ಅಭಿಜಾತ ಮಾನವಶಾಸ್ತ್ರದ ಶೈಕ್ಷಣಿಕ ವಿಧಾನವನ್ನೇ ಅನುಸರಿಸಿದರು. ಕನ್ನಡದಲ್ಲಿ ವ್ಯಕ್ತಿಗತವಾಗಿ ಸಬಾಲ್ಟನ್ ಅಧ್ಯಯನಗಳನ್ನು ಕೈಗೊಂಡ ಅನೇಕ ಲೇಖಕರಿದ್ದಾರೆ. ಇವರು ಮಾರ್ಕ್ಸ್, ಗಾಂಧಿ, ಅಂಬೇಡ್ಕರ್ ಮತ್ತು ಲೋಹಿಯಾವಾದದ ಸೈದ್ಧಾಂತಿಕ ಹಿನ್ನೆಲೆಯಿಂದ ಬಂದವರು 'ಮುಖ್ಯಧಾರೆಯಿಂದ' ಅಲಕ್ಷಿತವಾದ ಸಮುದಾಯಗಳ ಅಂತಸ್ಥ ಜಗತ್ತುಗಳ ಅನಾವರಣ ಮಾಡುವ ಮೂಲಕ ಕನ್ನಡದಲ್ಲಿ ಈ ಬಗೆಯ ಪ್ರಯತ್ನಗಳು ನಿರಂತರವಾಗಿ ಸಾಗುತ್ತಿವೆ. ಸೂಫಿಗಳ, ಜನಪದ ಅನುಭಾವಿಗಳು ಮತ್ತು ಅಲೆಮಾರಿ, ಆದಿವಾಸಿ ಸಮುದಾಯಗಳ ಅಧ್ಯಯನಗಳು ಕನ್ನಡದಲ್ಲಿ ನಿರಂತರವಾಗಿ ಸಾಗುತ್ತಿವೆ. ಜೊತೆಗೆ ಜಾಗತಿಕ ಅಭಿಜಾತ ಶೈಕ್ಷಣಿಕ ವಿಧಾನವನ್ನು ನಿರಾಕರಿಸಿ ದೇಶೀ ಅಧ್ಯಯನ ವಿಧಾನಗಳನ್ನು ಕಂಡುಕೊಳ್ಳುವ ಪ್ರಯತ್ನಗಳು ಕನ್ನಡದಲ್ಲಿ ನಿರಂತರವಾಗಿ ನಡೆಯುತ್ತಿವೆ.

ಟಿಪ್ಪಣಿಗಳು

01. M.N. Srinivas, The Development of Socialogy and Social Anthropology In India, p 481,2002
02. ಬಂಜಗೆರೆ ಜಯಪ್ರಕಾಶ್, ಕನ್ನಡ ರಾಷ್ಟ್ರೀಯತೆ, ಪು ೯, ೨೦೦೦
03. ಅದೇ, ಪು ೧೦
04. Igor S Kon, A History Of Classical Socialogy, p 12, 1979
05. Ibid p 13
06. Ibid p 13
07. ಚಂದ್ರಪೂಜಾರಿ, ಸಮಾಜ ಸಂಶೋಧನೆ, ಪು ೧, ೨೦೦೫
08. Igor S Kon, A History Of Classical Socialogy, p 10, 1979
09. Ibid p 10
10. Ibid p 14
11. Ibid p 27
12. ಬಂಜಗೆರೆ ಜಯಪ್ರಕಾಶ್, ಕನ್ನಡ ರಾಷ್ಟ್ರೀಯತೆ, ಪು ೧೭, ೨೦೦೦
13. Fred Eggan, Social Anthropology and the Method of Controlled Comparison. Ed: Cutural And Social Anthropology Selected Readigs, p 476, 1970
14. Ibid p 473
15. E E Evans Pritchard, Social Anthropology, Universal Book Stal, p 4, 2000
16. Ibid p 5
17. Ibid p 7

18. Walter Goldsmith, Anthropology and the Modern World, Ed: Cutural And Social Anthropology Selected Readigs, p 481, 1970
19. Igor S Kon, A History Of Classical Socialogy, p 14, 1979
20. ನೋಡಿ : Edgor thurston ಪ್ರಸ್ತಾವನೆ cast and Tribes of Southern India-1909
21. Fred Eggan, Social Anthropology and the Method of Controlled Comparison. Ed: Cutural And Social Anthropology Selected Readigs, p 470, 1970
22. Ibid p 472
23. Ibid p 477
24. Ibid p 477
25. M.N. Srinivas, Socialogy and Social Anthropology In India, p 462, 2002
26. M.N. Srinivas, The Development of Socialogy and Social Anthropology In India p 485,2002
27. E E Evans Pritchard, Social Anthropology, Universal Book Stal, P 9, 2000
28. Behura N K, Anthropological Thought and Theories, p 18 1988
29. Ibid, p 19
30. Ibid, p 99
31. Yogendra Singh, Indian Socialogy:Retrospect and Prospect. Ed: M V Nadakarni, Land Marks In Development Of Social Science, p 89, 2002
32. Fred Eggan, Social Anthropology and the Method of Controlled Comparison. Ed: Cutural And Social Anthropology Selected Readigs, p 473, 1970
33. Jaganath Pathy, Anthropology Of Development, Demystification and Relevance, p5,1987
34. Antoni Grammci, Selection From the Prison Note Books, p 245, 1996
35. Bernard S. Cohn, Notes On The History Of The Study Of Indian Society And Culture. Ed: Milton Siger and Bernard S. Cohn , Structure And Change In Indian Society, p89, 1994
36. Ibid, p 7
37. Ibid, p 12
38. Ibid, p 25
39. ಯುರೋಪಿನದ್ದಲ್ಲದ ವಸ್ತು ಸಂಗತಿಗಳನ್ನು ಸೂಚಿಸಲು ಈಗಲೂ Ethnic ಎಂಬ ಪದವನ್ನು ಬಳಸಲಾಗುತ್ತದೆ. ಉದಾ: ರೆಡ್ ಇಂಡಿಯನ್‌ರ ಮತ್ತು ಆಫ್ರಿಕನ್ ಅಥವ ಮೂರನೇ ಜಗತ್ತಿನ ದೇಶಗಳ ಸಂಗೀತ, ಕಲೆ ಮುಂತಾದವುಗಳನ್ನು Ethno Music, Ethinic Art, Ethno Psycology ಎಂಬ ಪದಗಳನ್ನು ಬಳಸಿ ಹೆಸರಿಸಲಾಗುತ್ತದೆ. ಅಂದರೆ ಮುಖ್ಯವಾಹಿನಿಯಲ್ಲಿಲ್ಲದ, ಸೀಮಿತಿ, ಸ್ಥಳೀಯ ಎಂಬ ಅರ್ಥದಲ್ಲಿ ಬಳಸಲಾಗುತ್ತದೆ.
40. Jaganath Pathy, Anthropology Of Development, Demystification and Relevance, p46,1987
41. Vidyarthi, Anthropological Research In India, p137, 1978
42. Ibid, Vol 2, p 9
43. Ibid Vol 1, p 138
44. W W Hunter, A Brief History Of The Indian People, p 5, 1893
45. ನೋಡಿ : ನೆಹರು ಮುನ್ನುಡಿ Philosophy Of Nefa, Verriar Elvin
46. Vidyarthi ,Anthropological Research In India, Vol 2, p 144, 1978
47. ಎ ವಿ ನಾವಡ, ಒಂದು ಸೊಲ್ಲು ನೂರು ಸ್ವರ, ಪು.೧, ೧೯೯೯
48. ಅದೇ ಪು.೨
49. ಕು ಶಿ ಹರಿದಾಸಭಟ್ಟ, ಪು.೧೦
50. ತೀ ನಂ ಶಂಕರನಾರಾಯಣ, ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಪು.೧೬, ೧೯೮೨

51. A A D Luiz, Tribes Of Mysore, Preface, 1963
52. ಜೆ ಸದಾನಂದ, ಭಾರತದ ಸಾಮಾಜಿಕಶಾಸ್ತ್ರಗಳ ಅಧ್ಯಯನ ಸ್ಥಾನಮಾನ : ಒಂದು ಟಿಪ್ಪಣಿ, ಅಭಿವೃದ್ಧಿ ಅಧ್ಯಯನ ಸಂ ೧, ಸಂ ೧, ಪು ೨೬, ೨೦೦೧
53. ಅದೇ,ಪು ೨೭
54. M.N. Srinivas, The Development of Socialogy and Social Anthropology In India p 483,2002
55. Ibid, p 484
56. P K Mishra, Study Of Nomads,Ed: Surjit Chanrda Sinh, Research Programmes on Cultural Anthropology and Allied Disciplines, p 153, 1970
57. Mahaswetha Devi, An Act was Born, Ed : G.N. Devy, Budhan, No. 3, June, 1998
58. Ibid, p 4
59. The criminal Tribes Act, 1871 (SCF XXVII OF 1971) Quoted; Budhan G.N. Devy, p 7, No-4, Ang-Sept-1998
60. ನೋಡಿ: ವೆಂಕಟರಂಗೋ ಕಟ್ಟಿ, ಗ್ಯಾಝೆಟೀಯರು. ಮುಂಬಯೀ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು,ಗವರ್ನಮೆಂಟ ಸೆಂಟ್ರಲ್ ಬುಕ್ ಡಿಪೋ. ಮುಂಬಯಿ,೧೮೯೩
61. ಅದೇ,ಪು ೩೮೧
62. ನೋಡಿ : Edgar Thurston, K Rangachari, Castes & Tribes of Southern India, 1909
63. L K Ananth Krishna Iyer, The mysore Tribes and Caste-preface, p iv, 1934
64. P K Mishra, Study Of Nomads, Ed: Surjit Chanrda Sinh, Research Programmes on Cultural Anthropology and Allied Disciplines, p 151, 1970
65. Jaganath Pathy, Anthropology Of Development, Demystification and Relevance, p49,1987
66. Vidyarthi, Anthropological Research In India, Vol 1, p1, 1978
67. Ibid, p 2
68. Bernard S. Cohn, Notes On The History Of The Study Of Indian Society And Culture. Ed: Milton Siger and Bernard S. Cohn , Structure And Change In Indian Society, p 19, 1994
69. Vidyarthi, Anthropological Research In India, p 4, 1978
70. Ibid, p 5
71. Ibid, p 56
72. Max Mullar F, India What can It Teach Us, p 4, 1882
73. Ibid, p 23
74. Ibid, p 24
75. Abbe Dubois, Hindu Manners, Customs and Ceremonies, Preface, p 4, 1990
76. Ibid, p 5
77. Ibid, p 7
78. Ibid, p 3, 4
79. Edgar Thurston, K Rangachari, Castes & Tribes of Southern India, p173-174, 1909
80. Ibid p 176
81. Ibid p 187
82. Ibid p 187
83. Karl Marx, Engeles, The First Indian War Of Independence1857-1859, p30, 1959
84. Ibid p 12
85. ರೋನಾಲ್ಡ್ ಇಂಡೆನ್, ಅನು: ಓ ಎಲ್ ನಾಗಭೂಷಣಸ್ವಾಮಿ, ಭಾರತವನ್ನು ಕುರಿತ ಓರಿಯಂಟಲಿಸ್ಟರ ಗ್ರಹಿಕೆಗಳು, ಭಾರತೀಯ ಇತಿಹಾಸ, ಸಮಾಜ ಮತ್ತು ಸಂಸ್ಕೃತಿ, ಪು ೨೦೦, ೨೦೦೪

86. ಅದೇ ಪು ೨೧೧
87. ಅದೇ ಪು ೨೨೯
88. Bernard S. Cohn, Notes On The History Of The Study Of Indian Society And Culture. Ed: Milton Siger and Bernard S. Cohn , Structure And Change In Indian Society, p11, 1994
89. Ibid p 7
90. Max Mullar F, India What can It Teach Us, p 21, 1882
91. Edward W Said, Orientaism, p13,1979
92. ನೋಡಿ: ವೆರಿಯರ್ ಎಲ್ವಿನ್, ಅನು: ಎಚ್ ಎಲ್ ನಾಗೇಗೌಡ, ವೆರಿಯರ್ ಎಲ್ವಿನ್ನರ ಗಿರಿಜನ ಪ್ರಪಂಚ, ೨೦೦೪
93. Bernard S. Cohn, Notes On The History Of The Study Of Indian Society And Culture. Ed: Milton Siger and Bernard S. Cohn , Structure And Change In Indian Society, p10, 1994
94. Ibid p 10
95. Ibid p 10
96. Ibid p 9
97. Abbe Dubois, Hindu Manners, Customs and Ceremonies, Preface, p 3, 1990
98. Bernard S. Cohn, Notes On The History Of The Study Of Indian Society And Culture. Ed: Milton Siger and Bernard S. Cohn , Structure And Change In Indian Society, p11, 1994
99. ನೋಡಿ: ವೆರಿಯರ್ ಎಲ್ವಿನ್, ಅನು: ಎಚ್ ಎಲ್ ನಾಗೇಗೌಡ, ವೆರಿಯರ್ ಎಲ್ವಿನ್ನರ ಗಿರಿಜನ ಪ್ರಪಂಚ,ಪು ೬೩, ೨೦೦೪
100. ಅದೇ ಪು ೬೩
101. Bernard S. Cohn, Notes On The History Of The Study Of Indian Society And Culture. Ed: Milton Siger and Bernard S. Cohn , Structure And Change In Indian Society, p 9, 1994
102. Ibid p 3
103. M.N. Srinivas, The Development of Socialogy and Social Anthropology In India p 486,2002
104. Ibid p 485
105. Ibid p 484
106. Edmand Leach, Social Anthropology, Quoted:M.N. Srinivas, The Insider Versus The Outsider In The Study Of Culture, p 553,2002
107. Bronislaw Malinowski, Quoted:M.N. Srinivas, Indian Anthropologists and the Study of Indian Culure, p 589,2002
108. Edmand Leach, Social Anthropology, Quoted:M.N. Srinivas, The Insider Versus The Outsider In The Study Of Culture, p 553,2002
109. M.N. Srinivas, The Insider Versus The Outsider In The Study Of Culture, p 559,2002
110. ಚಂದ್ರಪೂಜಾರಿ, ಸಮಾಜ ಸಂಶೋಧನೆ, ಪು ೪೯, ೨೦೦೫
111. ಅದೇ ಪು ೭೦,೭೧
112. M.N. Srinivas, The Insider Versus The Outsider In The Study Of Culture, p 553,2002
113. M.N. Srinivas, Studing One's Own Culture, p 583,2002
114. Edmand Leach, Social Anthropology, Quoted:M.N. Srinivas, Studing One's Own Culture, p 582, 2002
115. ಚಂದ್ರಪೂಜಾರಿ, ಸಮಾಜ ಸಂಶೋಧನೆ, ಪು ೬೨,೬೩ ೨೦೦೫

116. ಅದೇ ಪು ೬೫
117. Rabert Morton, Insider and Outsider-A Chapter in the Socialogy of Knowledge Quoted: ಚಂದ್ರಪೂಜಾರಿ, ಸಮಾಜ ಸಂಶೋಧನೆ, ೨೦೦೫
118. ರಹಮತ್ ತರೀಕೆರೆ, ಸಮುದಾಯ ಅಧ್ಯಯನಗಳು ಹೇಗೆ ನಡೆಯುತ್ತಿವೆ ? ಬುಡಕಟ್ಟು ಅಧ್ಯಯನ ೧, ಪು ೪೧, ೨೦೦೩
119. Albert Memmi, The Coloniser and the Colonised, p 86 1967
120. Levi Struss, Anthropology:Its Achievement And Future, Current Anthopology Vol 7, p 126, 1966
121. Aime cesare, Discourse on colonialism, Trons, Joan pinkham, New York and London monthly Review press-1972 P.57-58, Qutoted:Ashis Naudi
122. Frantz Fanon, The Wretched Of the Earth, p 215,1966
123. W W Hunter, A Brief History Of The Indian People, p 42, 1893
124. ರಹಮತ್ ತರೀಕೆರೆ, ಸಮುದಾಯ ಅಧ್ಯಯನಗಳು ಹೇಗೆ ನಡೆಯುತ್ತಿವೆ ? ಬುಡಕಟ್ಟು ಅಧ್ಯಯನ ೧, ಪು ೩೬, ೨೦೦೩
125. Edmand Leach, Social Anthropology, Quoted:M.N. Srinivas, Studing One's Own Culture, p 582, 2002
126. M.N. Srinivas, The Insider Versus The Outsider In The Study Of Culture, p 553,2002
127. Felix Padel, The Sacrifice Of Human Bieng, p xv 2000
128. Ibid p 31
129. ಡಾ. ಎಂ. ಚಿದಾನಂದಮೂರ್ತಿ, ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ, ಪು vii, ೧೯೮೫
130. ಅದೇ ಪು ೧೬೦
131. Frantz Fanon, The Wretched Of the Earth, p 225,1966
132. M. Krishnamurthy, Crimes and customs among the Lambanis in Chitradurga District, p 11, 2000
133. Ibid p 14
134. Ibid p 79-80
135. Ibid p 91
136. Ibid p 109
137. ಚಂದ್ರಪೂಜಾರಿ, ಸಮಾಜ ಸಂಶೋಧನೆ, ಪು ೬೩, ೨೦೦೫
138. Matthew Arnold, Culture and Anarchy, p1
139. ಡಿ ಆರ್ ನಾಗರಾಜ್, ಸಾಹಿತ್ಯ ಕಥನ, ಪು ೫, ೧೯೯೬
140. Jaganath Pathy, Anthropology Of Development, Demystification and Relevance, p vi,1987
141. Yogendra Singh, Indian Socialogy:Retrospect and Prospect. Ed: M V Nadakarni, Land Marks In Development Of Social Science, p 89-90, 2002
142. M.N. Srinivas, Studing One's Own Culture, p 574,2002
143. Yogendra Singh, Indian Socialogy:Retrospect and Prospect. Ed: M V Nadakarni, Land Marks In Development Of Social Science, p 90, 2002
144. M.N. Srinivas, Village Studies, Perticipant Observation, p 516, 2002
145. Satish Saberwal, Inetrnational Social science: Some Political Aspects, 1970
146 Nelson, Quoted: Jaganath Pathy, Anthropology Of Development, Demystification and Relevance, 1987
147. Simans Jan, Foucault and the political-p-27-1979, Quoted: ಸಿ ಎನ್ ರಾಮಚಂದ್ರನ್
148. Frantz Fanon, The Wretched Of the Earth, p 47,1966
149. Edward W Said, Orientaism, p3,1979
150. Ibid p 5

151. Ibid p 9
152. Ibid p 11
153. ವಸಾಹತೋತ್ತರ ಚಿಂತನೆಯ ಸಂದರ್ಭದಲ್ಲಿ ಆಶೀಶ್ ನಂದಿ ದೇಶಿ ಜ್ಞಾನ ಪರಂಪರೆಗಳ ಕುರಿತು ಹೆಚ್ಚು ವಕಾಲತ್ತು ವಹಿಸಿದವರು. 'ಪ್ರಸ್ತುತ ಭಾರತ ಮತ್ತು ದೇಶಿ ಜ್ಞಾನ ಪರಂಪರೆಗಳು' ಎಂಬ ಅವರ ಲೇಖನದಲ್ಲಿ ಭಾರತದ ನ್ಯಾಯಾಧೀಶ ಜಸ್ಟೀಸ್ ರಾಧಾ ವಿನೋದ್ ಪಾಲ್ ಅವರು ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಟೋಕಿಯೋ ವಾರ್ ಕ್ರೈಮ್ಸ್ ಟ್ರಿಬ್ಯುನಲ್‌ನಲ್ಲಿ ಕೊಟ್ಟ ತೀರ್ಪನ್ನು ಅಮೇರಿಕಾದ ಕಾನೂನು ತಜ್ಞನೊಬ್ಬ ಶ್ಲಾಘಿಸಿರುವುದನ್ನು ಉಲ್ಲೇಖಿಸುತ್ತಾರೆ. ಆ ಟ್ರಿಬ್ಯುನಲ್‌ನಲ್ಲಿ ಇದ್ದ ಬೇರೆ ದೇಶಗಳ ಹತ್ತು ನ್ಯಾಯಾಧೀಶರಿಗಿಂತ ಅಂತಾರಾಷ್ಟ್ರೀಯ ಕಾನೂನಿನ ಅರಿವು ಇದ್ದದ್ದು ರಾಧಾವಿನೋದ್ ಪಾಲ್ ಅವರಿಗೆ ಎಂಬ ಸಂಗತಿಯು ಭಾರತದ ದೇಶಿ ಜ್ಞಾನ ಪರಂಪರೆಯನ್ನು ಪ್ರತಿನಿಧಿಸುತ್ತದೆ ಎನ್ನುತ್ತಾರೆ ಆಶೀಶ್ ನಂದಿ. ರಾಧಾವಿನೋದ್ ಪಾಲ್ ಈ ದೇಶದ ಪ್ರತಿಷ್ಠಿತ ವರ್ಗಕ್ಕೆ ಸೇರಿದವರು. ಜೊತೆಗೆ ಅವರು ಕೆಲಸ ಮಾಡುತ್ತಿದ್ದುದು ಅಂತಾರಾಷ್ಟ್ರೀಯ ವಾರ್ ಕ್ರೈಮ್ಸ್ ಟ್ರಿಬ್ಯುನಲ್‌ನಲ್ಲಿ ಮತ್ತು ಅವರು ಕೊಟ್ಟ ತೀರ್ಪು ಸಹ ಅಂತಾರಾಷ್ಟ್ರೀಯ ಅಪರಾಧಗಳಿಗಾಗಿ!, ನೋಡಿ: ಆಶೀಶ್ ನಂದಿ ವಿಚಾರ, ಆಶೀಶ್ ನಂದಿ, ಅನು: ಕು ಶಿ ಹರಿದಾಸ್‌ಭಟ್, ಅಕ್ಷರ ಪ್ರಕಾಶನ ಹೆಗ್ಗೋಡು, ೧೯೯೫
154. ಜಿ ಎನ್ ದೇವಿ, ಅನು: ವಿ ಬಿ ತಾರಕೇಶ್ವರ್, ದೇಶಿವಾದ, ಕನ್ನಡ ಅಧ್ಯಯನ, ಗಾಳಿ ಸಂಚಿಕೆ, ಸಂ ೫, ಸಂ ೨, ಪು ೯೫, ೧೯೯೯
155. ರೋನಾಲ್ಡ್ ಇಂಡೆನ್, ಅನು: ಓ ಎಲ್ ನಾಗಭೂಷಣಸ್ವಾಮಿ, ಭಾರತವನ್ನು ಕುರಿತ ಓರಿಯಂಟಲಿಸ್ಟರ ಗ್ರಹಿಕೆಗಳು, ಭಾರತೀಯ ಇತಿಹಾಸ, ಸಮಾಜ ಮತ್ತು ಸಂಸ್ಕೃತಿ, ಪು ೨೩೨, ೨೦೦೪
156. Ashis Nandi, The Intimate Enemy, Loss And Recovery Of Self Under Colonialism, p xi, 1983
157. Ibid p 3
158. ಬಾಲಗಂಗಾಧರ, ಅನು: ರಾಜರಾಮ ಹೆಗಡೆ, ವರ್ತಮಾನದ ಭವಿಷ್ಯ, ಭಾರತೀಯ ಇತಿಹಾಸ, ಸಮಾಜ ಮತ್ತು ಸಂಸ್ಕೃತಿ, ಪು ೩೪೯, ೨೦೦೪
159. Albert Memmi, The Coloniser and the Colonised, p 17, 1967
160. James Clifford, Writing Culture, The Poetics And Politics Of Ethnography, Ed: James Clifford, Gerge E, p 7, 1990
161. ಜಿ ಎನ್ ದೇವಿ, ಅನು: ವಿ ಬಿ ತಾರಕೇಶ್ವರ್, ದೇಶಿವಾದ, ಕನ್ನಡ ಅಧ್ಯಯನ, ಗಾಳಿ ಸಂಚಿಕೆ, ಸಂ ೫, ಸಂ ೨, ಪು ೧೦೧, ೧೯೯೯
162. ಮೊಗಳ್ಳಿ ಗಣೇಶ್, ದೇಶಿ ಸಂಶೋಧನಾ ವಿಧಾನ, ಬುಡಕಟ್ಟು ಅಧ್ಯಯನ ೪, ಪು ೨೦, ೨೦೦೫
163. ನೋಡಿ: Subaltern as perspective. Veena Das, p 310, Ranajit Guha, Ed: Subaltern studies Vol vi, 1989
164. ನೋಡಿ: Sumit Sarkar, The Decline of the subalterns in subaltern studies, p 82, 1997
165. ಬರಗೂರು ರಾಚಂದ್ರಪ್ಪ, ಪ್ರಸ್ತಾವನೆ, ಉಪಸಂಸ್ಕೃತಿ ಮಾಲೆ, ಪು ೩೧, ೧೯೯೩

ಅಧ್ಯಾಯ ೩

ಅಲೆಮಾರಿಗಳೆಂದರೆ ಯಾರು ?

ಡೊಂಬರೆಂದರೆ ಯಾರು ?

ಡೊಂಬ ಪದ ನಿಷ್ಪತ್ತಿ

ಡೊಂಬರ ಸೃಷ್ಟಿ ಪುರಾಣಗಳು

ಕುಮಾರರಾಮನ 'ಶಾಪ' ಮತ್ತು ಡೊಂಬರು

ವೈಕಲ್ಯದ ಶಾಪಗ್ರಸ್ತ ಹುಟ್ಟು

ಡೊಂಬರ ಸಮುದಾಯದ ಚಾರಿತ್ರಿಕ ಬೆಳವಣಿಗೆ

ಡೊಂಬರ ಪರಂಪರೆ ಮತ್ತು ಅವರ ಆರ್ಥಿಕತೆ

ಡೊಂಬರು : ದುರ್ಗಮ ಹಾದಿಯ ಪಥಿಕರು

ಕ್ರಿಮಿನಲ್ ಟ್ರೈಬ್ಸ್ ಆಕ್ಟ್ ಹಾಗೆಂದರೇನು?

ಅಲೆಮಾರಿಗಳ ಅಪರಾಧೀ ಪಯಣ !

ದಿ ಕ್ರಿಮಿನಲ್ ಟ್ರೈಬ್ಸ್ ಆಕ್ಟ್ ಮುಖ್ಯಾಂಶಗಳು

ಡೊಂಬರು ಕ್ರಿಮಿನಲ್ ಟ್ರೈಬ್ !

ನಿಲ್ಲದ ಯಾತನೆಯ ಪಯಣ

ಅಲೆಮಾರಿಗಳೆಂದರೆ ಯಾರು?

ಪೀಠಿಕೆ

ಪ್ರಸ್ತುತ ಅಧ್ಯಾಯದಲ್ಲಿ ಮೂರು ಮುಖ್ಯ ಸಂಗತಿಗಳನ್ನು ವಿವರಿಸಿಕೊಳ್ಳಲು ಯತ್ನಿಸಲಾಗಿದೆ. ಮೊದಲಿಗೆ ಅಲೆಮಾರಿಗಳೆಂದರೆ ಯಾರು? ಎಂಬ ಪ್ರಶ್ನೆಯನ್ನು ಈ ಅಧ್ಯಾಯದಲ್ಲಿ ಕೇಳಿಕೊಳ್ಳಲಾಗಿದೆ. ಪಶ್ಚಿಮದ ಮಾನವಶಾಸ್ತ್ರೀಯ ಅಧ್ಯಯನಗಳು ಅಲೆಮಾರಿಗಳನ್ನು ಜಾಗತಿಕವಾಗಿ ನೋಡುತ್ತವೆ. ಈ ಅಧ್ಯಯನಗಳು ಅಲೆಮಾರಿಗಳನ್ನು ಅಖಂಡವಾಗಿ ಗ್ರಹಿಸುತ್ತವೆ. ಹೀಗೆ ಗ್ರಹಿಸುವಾಗ ಯುರೋಪಿನ ಅಥವಾ ಬೇರೆ ದೇಶಗಳ ಅಲೆಮಾರಿಗಳಿಗೂ ಮತ್ತು ಭಾರತದಲ್ಲಿನ ಅಲೆಮಾರಿಗಳಿಗೂ ಒಂದು ಏಕರೂಪತೆ ಲಭ್ಯವಾಗಿಬಿಡುತ್ತದೆ. ಯುರೋಪ್ ಮತ್ತಿತರ ದೇಶಗಳಲ್ಲಿನ ಅಲೆಮಾರಿಗಳು ತಮ್ಮ ಆರ್ಥಿಕ ಮೂಲಗಳನ್ನು ಪರಂಪರಾನುಗತವಾಗಿ ಅವಲಂಬಿಸಿ ಇಂದಿಗೂ ಅಲೆಮಾರಿಗಳಾಗಿ ಉಳಿದಿರಬಹುದು. ಜೊತೆಗೆ ಇವರು ತಮ್ಮ ಪಾರಂಪರಿಕ ಆರ್ಥಿಕ ಕ್ಷೇತ್ರವನ್ನು ಉದ್ಯಮವಾಗಿಸಿಕೊಳ್ಳುವ ಸ್ವಾತಂತ್ರ್ಯವನ್ನೂ ಪಡೆದಿದ್ದಾರೆ. ಅಥವಾ ತಮ್ಮ ಪಾರಂಪರಿಕ ಆರ್ಥಿಕ ಚಟುವಟಿಕೆಗಳನ್ನು ಬಿಟ್ಟುಕೊಟ್ಟು ಬೇರೆಯದೇ ಆದ ಉತ್ಪಾದನಾ ಚಟುವಟಿಕೆಗಳಲ್ಲಿ ಇವರು ತೊಡಗಿಕೊಳ್ಳಬಹುದು. ಆದರೆ ಭಾರತದಲ್ಲಿನ ಅಲೆಮಾರಿಗಳಿಗೆ ಈ ಬಗೆಯ ಅವಕಾಶಗಳಿಲ್ಲ. ಇಲ್ಲಿನ ಅಲೆಮಾರಿಗಳು ತಮ್ಮ ಪರಂಪರೆಯಿಂದಲೇ 'ಶಾಪಗ್ರಸ್ತರು'. ಭಾರತದ ಅಲೆಮಾರಿಗಳು ಈ ದೇಶದ ಪಾರಂಪರಿಕ ಸಮಾಜದ ಪಳಿಯುಳಿಕೆಗಳು. ಇವರು ಆರ್ಥಿಕವಾಗಿ ಸ್ವಾವಲಂಬಿಗಳಲ್ಲ. ಇವರು ಈ ಸಮಾಜದ ಊಳಿಗಮಾನ್ಯ ವ್ಯವಸ್ಥೆಯ ಸೃಷ್ಟಿಗಳು. ಈ ಎಲ್ಲಾ ಕಾರಣಗಳಿಂದ ಭಾರತದಲ್ಲಿನ ಅಲೆಮಾರಿಗಳು ಮತ್ತು ಜಾಗತಿಕ ಮಟ್ಟದ ಅಲೆಮಾರಿಗಳಿಗೂ ಅನೇಕ ವ್ಯತ್ಯಾಸಗಳಿವೆ. ಪ್ರಬಂಧದ ಮೊದಲ ಭಾಗದಲ್ಲಿ ಈ ಕುರಿತು ಚರ್ಚಿಸಲಾಗಿದೆ.

ಡೊಂಬರೆಂದರೆ ಯಾರು? ಎಂಬ ಪ್ರಶ್ನೆಯನ್ನು ಎರಡನೇ ಭಾಗದಲ್ಲಿ ಕೇಳಿಕೊಳ್ಳಲಾಗಿದೆ. ಡೊಂಬರೆಂದರೆ ಯಾರು ಎಂಬ ಪ್ರಶ್ನೆಗೆ ಅನೇಕರು ಭಿನ್ನ ಭಿನ್ನ ಹೇಳಿಕೆಗಳನ್ನು ವಿದ್ವಾಂಸರು ದಾಖಲಿಸಿದ್ದಾರೆ. ಜೊತೆಗೆ ಭಾರತದ ವಿವಿಧ ರಾಜ್ಯಗಳಲ್ಲಿ ಬದುಕುತ್ತಿರುವ ಡೊಂಬರಿಗೂ ಮತ್ತು ಕರ್ನಾಟಕದಲ್ಲಿ ಬದುಕುತ್ತಿರುವ ಡೊಂಬರಿಗೂ ಅನೇಕ ಸಾಮ್ಯ ಮತ್ತು ವೈರುಧ್ಯಗಳಿವೆ. ಡೊಂಬರ ಸಾಮಾಜಿಕ ಸ್ಥಾನಮಾನಗಳು ಭಾರತದಾದ್ಯಂತ ಒಂದೇ ಆಗಿದ್ದರೂ, ಇವರು ಬೇರೆ ಬೇರೆ ರಾಜ್ಯಗಳಲ್ಲಿ ಭಿನ್ನ ವೃತ್ತಿ ಮತ್ತು ಚಹರೆಗಳನ್ನು ಹೊಂದಿರುವುದು ಕಂಡು ಬರುತ್ತದೆ. ಈ ಭಾಗದ ಬರಹದಲ್ಲಿ ಡೊಂಬರ ಸೃಷ್ಟಿ ಪುರಾಣಗಳನ್ನು

ಮುಖ್ಯವಾಗಿಟ್ಟುಕೊಂಡು ಅವರ ಸಮಾಜದ ಚರಿತ್ರೆಯನ್ನು ದಾಖಲಿಸುವ ಪ್ರಯತ್ನ ಮಾಡಲಾಗಿದೆ. ಇದರ ಜೊತೆಗೆ ಡೊಂಬರಂತಹ ಬೇರೆ ಅಲೆಮಾರಿ ಸಮುದಾಯಗಳ ಸೃಷ್ಟಿ ಪುರಾಣಗಳನ್ನು ತೌಲನಿಕವಾಗಿ ಇಲ್ಲಿ ಚರ್ಚೆಗೆ ಒಳಪಡಿಸಲಾಗಿದೆ.

ಮೂರನೇ ಭಾಗದಲ್ಲಿ ಡೊಂಬರ ಸಮಾಜದ ಚಾರಿತ್ರಿಕ ಬೆಳವಣಿಗೆಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕರ್ನಾಟಕದ ಸಮಾಜ ಒಂದು ರೂಪುರೇಷೆ ಪಡೆಯುವ ಕಾಲಘಟ್ಟದಿಂದ ಯಾವ ಬಗೆಯಲ್ಲಿ ಕನ್ನಡದ ಸಮುದಾಯಗಳು ರೂಪುಗೊಂಡವು ಎಂಬ ಚರ್ಚೆಯ ಜೊತೆಗೆ ಡೊಂಬರ ಸಮುದಾಯದ ಚಾರಿತ್ರಿಕತೆಯನ್ನು ಕಟ್ಟಿಕೊಡಲು ಯತ್ನಿಸಲಾಗಿದೆ. ಇಲ್ಲಿ ಜಾನಪದ ಮತ್ತು 'ಶಿಷ್ಟ' ಸಾಹಿತ್ಯದಲ್ಲಿನ ಉಲ್ಲೇಖಗಳನ್ನು ತೌಲನಿಕವಾಗಿ ಬಳಸಿಕೊಳ್ಳಲಾಗಿದೆ.

ನಾಲ್ಕನೇ ಹಂತದ ಬರವಣಿಗೆಯಲ್ಲಿ ಡೊಂಬರ ಸಮಾಜದ ಆರ್ಥಿಕತೆಯನ್ನು ಚರ್ಚಿಸಲಾಗಿದೆ. ಭಾರತದ ಸಮಾಜದ ಬೇರೆ ಬೇರೆ ಕಾಲಘಟ್ಟಗಳಲ್ಲಿ ಡೊಂಬರು ಯಾವ ಯಾವ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರು ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ. ವಸಾಹತು ಕಾಲಘಟ್ಟದಲ್ಲಿ ಅಲೆಮಾರಿಗಳನ್ನು ಮತ್ತು ಆದಿವಾಸಿಗಳನ್ನು ಬಹುವಾಗಿ ಕಾಡಿದ Criminal Tribes Act ಕುರಿತು ವಿವರವಾಗಿ ಈ ಅಧ್ಯಾಯದ ಕೊನೆಯ ಭಾಗದಲ್ಲಿ ಚರ್ಚಿಸಲಾಗಿದೆ.

ಅಲೆಮಾರಿಗಳನ್ನು ಕುರಿತ ಅಧ್ಯಯನಗಳು ಭಾರತದ ಸಂದರ್ಭದಲ್ಲಿ ವಿರಳವೆಂದೇ ಹೇಳಬೇಕಾಗುತ್ತದೆ. ವಸಾಹತುಶಾಹಿ ಆಡಳಿತದ ಸಂದರ್ಭದಲ್ಲಿ ನಡೆದ ಜಾತಿ ಮತ್ತು ಬುಡಕಟ್ಟು ಸಮುದಾಯಗಳ ಜೊತೆ ಮುಖ್ಯವಾಗಿ ಅಲೆಮಾರಿಗಳನ್ನು ಅಧ್ಯಯನ ಮಾಡಲಾಯಿತು. ಆದರೆ ವಸಾಹತು ಆಡಳಿತಕ್ಕೆ 'ಮಾಹಿತಿ' ಒದಗಿಸುವ ಯಾಂತ್ರಿಕ ಶೈಕ್ಷಣಿಕ ಪ್ರಕ್ರಿಯೆಯೆಂಬಂತೆ ಅಂದಿನ ಅಧ್ಯಯನಗಳು ನಡೆದವು. ಅಲ್ಲದೆ ಅಂದಿನ ಅಭಿಜಾತ ಮಾನವಶಾಸ್ತ್ರದ ಶೈಕ್ಷಣಿಕ ವಿಧಾನವು ಕೇವಲ 'ಮಾಹಿತಿ' ಸಂಗ್ರಹಿಸುವುದನ್ನೇ ಅಧ್ಯಯನ ಎಂದು ಭಾವಿಸುತ್ತಿದ್ದ ಕಾರಣಕ್ಕೆ ಅಂದಿನ ಅಧ್ಯಯನಗಳು ಕೇವಲ ಮಾಹಿತಿ ಸಂಗ್ರಹಣೆಗೆ ಮಾತ್ರ ಸೀಮಿತಗೊಂಡಿದ್ದವು. ಮುಖ್ಯವಾಗಿ ವಸಾಹತು ಸಂದರ್ಭದ ಅಲೆಮಾರಿಗಳ ಅಧ್ಯಯನಗಳು, ಅಲೆಮಾರಿಗಳನ್ನು ಅಂದಿನ ಸರಕಾರದ ಕಾನೂನು ಮತ್ತು ಸುಭದ್ರತೆಯ ಅಡಿಯಲ್ಲಿ ನಿಯಂತ್ರಿಸುವ ಸಲುವಾಗಿಯೇ ನಡೆದವು. ಕಂಪನಿ ಆಡಳಿತಕ್ಕೆ ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಹಿಡಿತಕ್ಕೆ ಸಿಗದ ಅಲೆಮಾರಿ ಸಮುದಾಯಗಳನ್ನು 'ತಮ್ಮ' ಕಾನೂನು 'ಸುವ್ಯವಸ್ಥೆ'ಯ ಅಡಿಯಲ್ಲಿ ತರುವ ಸಲುವಾಗಿ ಅಧ್ಯಯನಗಳು ನಡೆದವು. ವಸಾಹತೋತ್ತರ ಕಾಲಘಟ್ಟದಲ್ಲಿ ಅಲೆಮಾರಿಗಳ ಬದುಕಲ್ಲಿ ಮತ್ತು 'ಮುಖ್ಯವಾಹಿನಿಯು' ಅವರನ್ನು ನೋಡುವ ಕ್ರಮದಲ್ಲಿ ಅಂತಹ ಯಾವ ಬದಲಾವಣೆಗಳು ಸಂಭವಿಸಲಿಲ್ಲ. ೧೮೭೧ ರಲ್ಲಿ ವಸಾಹತು ಸರಕಾರ ತಂದ Criminal Tribes Act ನ್ನು 'ಸ್ವತಂತ್ರ' ಭಾರತದ ಸರಕಾರ ೧೯೫೨ ರಲ್ಲಿ ನಿಷೇಧಿಸಿದರೂ ಸಹ ಅದು Habitual Affenders Act ನ್ನು ರೂಪಿಸಿತು. ತಾತ್ವಿಕವಾಗಿ ಈ ಎರಡೂ ಕಾಯ್ದೆಗಳ ಮಧ್ಯೆ ಅಂತಹ ವ್ಯತ್ಯಾಸಗಳೇನು ಇಲ್ಲ.

ವಸಾಹತೋತ್ತರ ಕಾಲಘಟ್ಟದ ನಂತರ ಭಾರತದಲ್ಲಿ ಅಲ್ಲಲ್ಲಿ ಅಲೆಮಾರಿಗಳನ್ನು ಕುರಿತು ಅಧ್ಯಯನಗಳು

ನಡೆದವು. Anthropological survey of India ವು ಪಿ.ಕೆ. ಮಿಶ್ರಾ ತರಹದ ವಿದ್ವಾಂಸರಿಂದ ಕೆಲವು ಅಲೆಮಾರಿಗಳನ್ನು ಅಧ್ಯಯನಕ್ಕೊಳಪಡಿಸಿತು. ಮುಂದೆ ಇದೇ ಸಂಸ್ಥೆಯ People of India ಮಾಲಿಕೆಯಲ್ಲಿ ಪ್ರತಿ ರಾಜ್ಯದ ಸಮುದಾಯಗಳನ್ನು ಪಟ್ಟಿ ಮಾಡಿ ಮಾಹಿತಿ ಕಲೆ ಹಾಕುವಾಗ ಅಲೆಮಾರಿಗಳ ಕುರಿತು ಹೆಚ್ಚು ಗಮನ ಹರಿಸಲಾಯಿತು. ಅಲ್ಲಲ್ಲಿ ಕೆಲವು ವ್ಯಕ್ತಿಗತ ಆಸಕ್ತಿಯ ಅಧ್ಯಯನಗಳನ್ನು ಬಿಟ್ಟರೆ ಜಾತಿ ಮತ್ತು ಬುಡಕಟ್ಟು ಸಮುದಾಯಗಳನ್ನು ಕುರಿತು ನಡೆದ ಅಧ್ಯಯನಗಳಿಗೆ ಹೋಲಿಸಿದರೆ, ವಸಾಹತೋತ್ತರ ಕಾಲಘಟ್ಟದಲ್ಲಿ ಅಲೆಮಾರಿಗಳ ಕುರಿತ ಅಧ್ಯಯನಗಳು ಕಡಿಮೆ ಎಂದೇ ಹೇಳಬೇಕಾಗುತ್ತದೆ. ಮುಖ್ಯವಾಗಿ ಅಲೆಮಾರಿಗಳನ್ನು ನಮ್ಮ ವಿದ್ವಾಂಸರು ಹೇಗೆ ಗ್ರಹಿಸಿದ್ದಾರೆ? ಅಲೆಮಾರಿಗಳೆಂದರೆ ಯಾರು? ಎಂಬ ಕುರಿತು ಕೆಲವು ವ್ಯಾಖ್ಯಾನಗಳನ್ನು ಗಮನಿಸಬಹುದಾಗಿದೆ.

ಭಾರತದಲ್ಲಿ ಅಲೆಮಾರಿಗಳನ್ನು ವಿಶೇಷವಾಗಿ ಅಧ್ಯಯನ ಮಾಡಿರುವ ಪಿ.ಕೆ. ಮಿಶ್ರಾ ಅವರು ಅಲೆಮಾರಿಗಳನ್ನು ಹೀಗೆ ವಿವರಿಸುತ್ತಾರೆ. 'Nomad' ಎಂಬ ಪದವು ಅತ್ಯಂತ ಪ್ರಾಚೀನವಾದದ್ದು. ಅಲೆಮಾರಿತ್ವ ಹೇಗೆ ಆಚರಣೆಗೆ ಬಂದಿತು ಎಂಬ ಕುರಿತು ವಿದ್ವಾಂಸರಲ್ಲಿ ಅನೇಕ ಭಿನ್ನಾಭಿಪ್ರಾಯಗಳಿವೆ. ಕೆಲವು ವಿದ್ವಾಂಸರು ಅಲೆಮಾರಿತ್ವವು ರೂಪುಗೊಳ್ಳುವುದಕ್ಕೆ ಎರಡು ಕಾರಣಗಳನ್ನು ಗುರುತಿಸುತ್ತಾರೆ. ಅಲೆಮಾರಿ ಪದವು ಪಶುಪಾಲಕ ವೃತ್ತಿಯಿಂದ ಹುಟ್ಟಿದ ಕ್ರಿಯಾಧಾತು. ಮತ್ತೆ ಕೆಲವು ವಿದ್ವಾಂಸರು, ಶಿಲಾಯುಗದ ರೀತಿಯ ಸಂಸ್ಕೃತಿಯಲ್ಲಿ ಬದುಕುವ ಜೀವನ ವಿಧಾನವನ್ನು ಅಲೆಮಾರಿತ್ವ ಎನ್ನುತ್ತಾರೆ. Nomad ಎಂಬ ಪದವು ಗ್ರೀಕ್ ಮೂಲದ್ದಾಗಿದೆ. Nomas ಮತ್ತು ados ಎಂಬ ಎರಡು ಪದಗಳು ಸೇರಿ Nomad ಪದ ರೂಪುಗೊಂಡಿದೆ. Nomas ಮತ್ತು ados ಎಂದರೆ ಹುಲ್ಲುಗಾವಲುಗಳಿಗಾಗಿ ತಿರುಗಾಡುವುದು ಎಂದರ್ಥ. ಅಂದರೆ ಯಾವ ಜನಕ್ಕೆ ನಿಶ್ಚಿತ ವಾಸಸ್ಥಳವಿರುವುದಿಲ್ಲವೋ, ಯಾರು ವಲಸೆ ಜೀವನ ನಡೆಸುತ್ತಿರುವರೋ ಅವರು ಅಲೆಮಾರಿಗಳು'[೭]. ಎನ್ನುತ್ತಾರೆ ಮಿಶ್ರಾ ಅವರು.

ಬೆಕಾನ್ ಎಂಬ ವಿದ್ವಾಂಸ 'ಅಲೆಮಾರಿಗಳನ್ನು,' ಅಲೆಮಾರಿಗಳು, ಅರೆಅಲೆಮಾರಿಗಳು ಮತ್ತು ಅರೆ ನೆಲೆನಿಂತವರು ಎಂದು ಮೂರು ಭಾಗ ಮಾಡುತ್ತಾನೆ. ಈತನ ಪ್ರಕಾರ ನಿಜವಾದ ಅಲೆಮಾರಿಗಳು ಯಾವ ನಿಶ್ಚಿತ ವಾಸಸ್ಥಳದಲ್ಲಿ ನೆಲೆ ನಿಲ್ಲದೆ ಬದುಕುವುದಕ್ಕಾಗಿ ವರ್ಷವಿಡೀ ಅಲೆದಾಡುತ್ತಾರೆ. ಮತ್ತು ಇವರು ಕೃಷಿಯನ್ನು ಅವಲಂಬಿಸಿರುವುದಿಲ್ಲ. ಆದರೆ ಅರೆಅಲೆಮಾರಿಗಳು ತಮ್ಮ ನಿಶ್ಚಿತ ವಾಸಸ್ಥಳಗಳಲ್ಲಿ ಚಿಕ್ಕದಾಗಿ ಕೃಷಿ ಮಾಡುತ್ತಾರೆ. ಆದರೆ ಇವರು ಕೆಲವು ಋತುಗಳಲ್ಲಿ ವಲಸೆ ಹೋಗುತ್ತಾರೆ. ಮತ್ತು ತಮ್ಮ ಈ ವಾರ್ಷಿಕ ಅಲೆಮಾರಿತನದಲ್ಲಿ ಅಲ್ಲಲ್ಲಿ ಕೆಲವು ತಾತ್ಕಾಲಿಕ ವಾಸಸ್ಥಳಗಳನ್ನು ಗುರುತಿಸಿಕೊಂಡಿರುತ್ತಾರೆ. ಆದರೆ ಅರೆ 'ನೆಲೆನಿಂತವರು' ಮಾತ್ರ ನಿಶ್ಚಿತ ಹಳ್ಳಿಗಳಲ್ಲಿ ವಾಸಿಸುತ್ತಾ ವರ್ಷದ ಕೆಲವು ದಿನಗಳು ಮಾತ್ರ ಅಲ್ಲಿದ್ದು ಉಳಿದ ಸಮಯವನ್ನು ಅಲೆದಾಡುವುದರಲ್ಲಿಯೇ ಕಳೆಯುತ್ತಾರೆ'[೨]. ಎನ್ನುತ್ತಾನೆ.

ಕ್ರೆಡರ್ ಎನ್ನುವ ಮಾನವಶಾಸ್ತ್ರಜ್ಞ 'ಅಲೆಮಾರಿತ್ವ ಎನ್ನುವುದು ಆವರ್ತಿತ ಮತ್ತು ಒಂದು ಲಯಬದ್ಧ ಚಲನೆ. ಇದು ಅನಾವರ್ತಿತವಲ್ಲದ್ದು ಮತ್ತು ಕಾಲಬದ್ಧವಾದದ್ದು. ಈ ಬಗೆಯ ವಲಸೆಯ ಬದುಕು ನಿಶ್ಚಿತ ವಾಸಸ್ಥಳವನ್ನು ಕಾಯ್ದಿರಿಸಿಕೊಂಡಿರುವುದಿಲ್ಲ. ಪದೇ ಪದೇ ವಾಸಸ್ಥಳವನ್ನು ಅದು ಬದಲಾಯಿಸುತ್ತಿರುತ್ತದೆ.

ಅದಕ್ಕಾಗಿಯೇ ಅಲೆಮಾರಿತ್ವವು ಒಂದು ಲಯಬದ್ಧ ಚಲನಶೀಲ ಬದುಕು ಅಥವಾ ಆವರ್ತಿತ ಜೀವನ ವಿಧಾನವಾಗಿದೆ'[೬]. ಎನ್ನುತ್ತಾನೆ.

ಮಾರ್ಕೊವ್ ಅವರ ಪ್ರಕಾರ 'ಅಲೆಮಾರಿಗಳಲ್ಲಿ ಹೆಚ್ಚಿನ ಸಂಖ್ಯೆಯ ಸಮುದಾಯಗಳು ಪಶುಪಾಲಕ ವೃತ್ತಿಯನ್ನು ಅವಲಂಬಿಸಿವೆ. ಹೀಗಿದ್ದರೂ ಕೆಲವು ಅಲೆಮಾರಿಗಳು ಗುಡಿಕೈಗಾರಿಕೆ, ಚಿಕ್ಕ ವ್ಯಾಪಾರ ಮತ್ತು ಆದಿಮ ಲಘು ಕೃಷಿಯನ್ನು ಅವಲಂಬಿಸಿದ್ದಾರೆ. ಆದರೆ ಅಲೆಮಾರಿಗಳ ಬಹುಮುಖ್ಯ ಆರ್ಥಿಕ ಮೂಲವೆಂದರೆ ಪಶುಪಾಲನೆ. ಈ ಕಾರಣದಿಂದ 'ಅಲೆಮಾರಿತ್ವ' (Nomadism) ಎಂಬುದು, ಯಾವ ಸಮುದಾಯ ಪಶುಪಾಲನೆಯಲ್ಲಿ ತೊಡಗಿರುತ್ತದೋ, ಯಾವ ಸಮುದಾಯದ ಮುಖ್ಯ ಆರ್ಥಿಕ ಮೂಲವು ಪಶುಪಾಲನೆ ಆಗಿರುತ್ತದೋ ಅಂತಹ ಸಮುದಾಯಕ್ಕೆ ಈ ಪದವು ಅನ್ವಯವಾಗುತ್ತದೆ '[೭]. ಎನ್ನುತ್ತಾರೆ.

ಓ.ಪಿ.ಗೋಯಲ್ ಅವರ ಪ್ರಕಾರ 'Nomad ಎಂಬ ಪದವು ಗ್ರೀಕ್ ಪದವಾದ Pasture-Nomos ನಿಂದ ಹುಟ್ಟಿದೆ. Nomadic ಎಂಬ ಪದವು ಗುರಿ ಇಲ್ಲದ ತಿರುಗಾಟವನ್ನು ಪ್ರತಿನಿಧಿಸುತ್ತದೆ'[೮]. ಎನ್ನುತ್ತಾರೆ.

ಮೇಲಿನ ಉಲ್ಲೇಖಗಳನ್ನು ಗಮನಿಸಿ ನಾವು ಕೆಲವು ತೀರ್ಮಾನಗಳಿಗೆ ಬರಬಹುದಾಗಿದೆ. ಇಲ್ಲಿಯವರೆಗೆ ಅಖಿಲ ಭಾರತ ಮಟ್ಟದಲ್ಲಿ ನಡೆದ ಅಧ್ಯಯನಗಳು ಹೆಚ್ಚಾಗಿ ಪಶ್ಚಿಮದಲ್ಲಿ ನಡೆದ ಅಲೆಮಾರಿಗಳ ಅಧ್ಯಯನಗಳನ್ನು ತಾತ್ವಿಕವಾಗಿ ಒಪ್ಪಿಕೊಳ್ಳುತ್ತವೆ. ಮತ್ತು Nomad ಎಂಬ ಪದಕ್ಕೆ ಪಾಶ್ಚಾತ್ಯ ವಿದ್ವಾಂಸರು ಯಾವ ಯಾವ ಅರ್ಥ ವಿವರಣೆಗಳನ್ನು ಕೊಡುತ್ತಾರೋ ಅವುಗಳನ್ನು ಮುಖ್ಯವಾಗಿಟ್ಟುಕೊಂಡು ಭಾರತದಲ್ಲಿನ ಅಲೆಮಾರಿಗಳನ್ನು ಅಧ್ಯಯನ ಮಾಡಿರುವುದನ್ನು ಗಮನಿಸಬಹುದು. ಮುಖ್ಯವಾಗಿ Gypsologyಯ ಅಧ್ಯಯನ ವಿಧಾನವನ್ನೇ ಪಿ.ಕೆ.ಮಿಶ್ರಾ. ಎಸ್.ಎಸ್.ಶಶಿ, ಓ.ಪಿ.ಗೋಯಲ್ ಮತ್ತು ಚಮನ್‌ಲಾಲ್ ತರಹದ ವಿದ್ವಾಂಸರು ಅನುಸರಿಸಿರುವುದನ್ನು ನೋಡಬಹುದಾಗಿದೆ. Gypsology ಯು ಜಾಗತಿಕ ಮಟ್ಟದಲ್ಲಿ ಬೇರೆ ಬೇರೆ ದೇಶಗಳ ಅಲೆಮಾರಿಗಳನ್ನು ಅಧ್ಯಯನ ಮಾಡಲು ಇರುವ ಶಾಸ್ತ್ರಶಿಸ್ತು. ಇದಕ್ಕೆ ಒಂದು ಪ್ರತ್ಯೇಕ ಶೈಕ್ಷಣಿಕ ಶಿಸ್ತಿನ ಸ್ಥಾನಮಾನವಿಲ್ಲದಿದ್ದರೂ ಸಹ, ಮಾನವಶಾಸ್ತ್ರದ ಉಪಶಾಖೆಯಂತೆ ಇದು ಕಂಡು ಬರುತ್ತದೆ. ಯುನೆಸ್ಕೋದಂತಹ ಸಂಸ್ಥೆಗಳು ಜಾಗತಿಕ ಮಟ್ಟದಲ್ಲಿ ಜಿಪ್ಸಿಗಳ ಕುರಿತ ಈ ಬಗೆಯ ಅಧ್ಯಯನಗಳನ್ನು ವಿಶೇಷವಾಗಿ ಪ್ರೋತ್ಸಾಹಿಸುತ್ತಿವೆ.

ಈ Gypsology ಯ ಅಧ್ಯಯನ ಮಾದರಿಯಲ್ಲಿ ವಸಾಹತೋತ್ತರ ಕಾಲಘಟ್ಟದ ನಂತರ ಭಾರತದಲ್ಲಿ ಅಲೆಮಾರಿಗಳನ್ನು ಮೊದಲಿಗೆ ಅಧ್ಯಯನ ಮಾಡಿದವರು ಚಮನ್‌ಲಾಲ್. ಆ ನಂತರ ಎಸ್.ಎಸ್.ಶಶಿಯವರು Roma, culture and Heritage ಎಂಬ ಪುಸ್ತಕವನ್ನು ಪ್ರಕಟಿಸಿದರು. ಈ ಬಗೆಯ ಅಧ್ಯಯನಗಳು ಮುಖ್ಯವಾಗಿ ಜಾಗತಿಕ ಮಟ್ಟದ Gypsologyಯ ಅಧ್ಯಯನ ವಿಧಾನವನ್ನು ಒಪ್ಪಿಕೊಳ್ಳುತ್ತವೆ. ಪ್ರಪಂಚದ ಎಲ್ಲೆಡೆ ಇರುವ ಅಲೆಮಾರಿಗಳಿಗೆ ಒಂದು ಏಕ ಸ್ವರೂಪತೆ ಇದೆ. ಅವರು ಒಂದೇ ಮೂಲದಿಂದ ಬಂದ ಬೇರೆ ಬೇರೆ ಕುಲಗಳು ಎಂಬ ವಾದವನ್ನು ತೀವ್ರವಾಗಿ ನಂಬುತ್ತವೆ. ಅದರಲ್ಲೂ ಚಮನ್‌ಲಾಲ್ ಅವರು ಜಗತ್ತಿನ ಎಲ್ಲೆಡೆ ಇರುವ ಅಲೆಮಾರಿಗಳು (Gypsy) ಭಾರತಾಂಬೆಯ ಮಕ್ಕಳು. ಎಲ್ಲಾ ಅಲೆಮಾರಿಗಳಿಗೆ

ಮೂಲ ಭಾರತವೇ ಎಂಬ ತೀರ್ಮಾನಕ್ಕೆ ಬರುತ್ತಾರೆ[೬]. ಇನ್ನು ಶಶಿಯವರು, ಚಮನ್‌ಲಾಲ್ ಅವರಿಗಿಂತ ಭಿನ್ನವಾಗಿಲ್ಲ. ಶಶಿ ತಮ್ಮ ಪುಸ್ತಕ Roma ದಲ್ಲಿ 'Roma ಎಂಬ ಪದವು Rama ಎಂಬ ಪದದಿಂದ ನಿಷ್ಪತ್ತಿಯಾದಂತೆ ಕಂಡು ಬರುತ್ತದೆ'[೭] ಎನ್ನುತ್ತಾರೆ. ಇವರು ಲವ-ಕುಶರ ಸಂತತಿಯವರು ಎಂದು ತೀರ್ಮಾನಕ್ಕೆ ಶಶಿ ಬರುತ್ತಾರೆ. ಇದೇ ಪುಸ್ತಕಕ್ಕೆ ಮುನ್ನುಡಿ ಬರೆದಿರುವ ಭೂಪೇಂದ್ರಕುಮಾರ್ ಮೋದಿ ಎಂಬ Indologist 'ಆರ್ಯರು ಭಾರತಕ್ಕೆ ಬಂದು ಅದನ್ನು ಆಕ್ರಮಿಸಿಕೊಂಡರು ಎಂಬ ವಾದವನ್ನು ತಳ್ಳಿ ಹಾಕಲು ಅನೇಕ ಪುರಾವೆಗಳಿವೆ. Roma Gypsyಗಳ ಮೂಲವು ಭಾರತ ದೇಶ ಎಂದು ಸಾಬೀತಾಗಿದೆ. ಈ ಜಿಪ್ಸಿಗಳು ಬೇರೆ ಬೇರೆ ಕಾಲಘಟ್ಟಗಳಲ್ಲಿ ಪಶ್ಚಿಮದ ದೇಶಗಳಿಗೆ ವಲಸೆ ಹೋಗಿದ್ದಾರೆ. ಈ ಜಿಪ್ಸಿಗಳ ತಾತಂದಿರು ಭಾರತದಲ್ಲಿ ಹಿಂದುಗಳಾಗಿ ಬದುಕಿದವರು. ಅದರಲ್ಲೂ ಭಾರತದ ಪಶ್ಚಿಮ ರಾಜ್ಯಗಳಾದ ಸಿಂದ್, ಪಂಜಾಬ್, ರಾಜಸ್ಥಾನ, ಮಹಾರಾಷ್ಟ್ರ ಮತ್ತು ರಾಜಸ್ಥಾನಗಳಲ್ಲಿ ಬದುಕಿದವರು'[೮] ಎನ್ನುತ್ತಾರೆ. ಈ ಬಗೆಯ ಅಧ್ಯಯನಗಳು ಸ್ವಾತಂತ್ರ್ಯ ಪೂರ್ವದಲ್ಲಿ ರಾಷ್ಟ್ರ ಪ್ರೇಮದ ಕಾರಣಕ್ಕಾಗಿ ನಡೆದರೆ, ಇತ್ತೀಚೆಗೆ Hindu Heritage Pratishthan ದಂತಹ ಸಂಸ್ಥೆಗಳ ಮೂಲಕ ಸಂಘ ಪರಿವಾರದ ಜನ ಈ ಅಧ್ಯಯನಗಳನ್ನು ನಡೆಸುತ್ತಿದ್ದಾರೆ. ಶಶಿಯವರ ಪುಸ್ತಕವನ್ನು ಇದೇ ಪ್ರತಿಷ್ಠಾನವು ಪ್ರಕಟಿಸಿದೆ. ಸಂಘಪರಿವಾರದ ಸಾಂಸ್ಕೃತಿಕ ರಾಜಕಾರಣದ ಭಾಗವಾಗಿ ಈ ಬಗೆಯ ಶೈಕ್ಷಣಿಕ ಚಟುವಟಿಕೆಗಳು ಆದಿವಾಸಿ ಮತ್ತು ಅಲೆಮಾರಿ ಸಮುದಾಯಗಳನ್ನು ಇತ್ತೀಚೆಗೆ ಒಳಗೊಳ್ಳುತ್ತಿವೆ. ಅಲೆಮಾರಿಗಳನ್ನು ಜಾಗತಿಕ ಪರಿಪ್ರೇಕ್ಷ್ಯದಲ್ಲಿ ಅಧ್ಯಯನ ಮಾಡುವ ಸಂದರ್ಭದಲ್ಲಿ ಭಾರತದಂತಹ ದೇಶವೊಂದರಲ್ಲಿ ಅಲೆಮಾರಿಗಳು ರೂಪುಗೊಂಡ ಸಂಕೀರ್ಣ ಸಾಮಾಜಿಕ ಏರುಪೇರುಗಳನ್ನು ಗಮನಿಸಲು ಸಾಧ್ಯವಾಗುವುದಿಲ್ಲ.[೯] ಅಲ್ಲದೆ ಅಲೆಮಾರಿಗಳು ರೂಪುಗೊಳ್ಳಲು ಕಾರಣವಾದ ಸಂದರ್ಭಗಳು ಜಾಗತಿಕವಾಗಿ ಏಕರೂಪವಾಗಿಲ್ಲ. ಭಾರತದಲ್ಲಿಯೇ ಭಿನ್ನ ಗುಂಪುಗಳಿಗೆ ಸೇರಿದ ಅಲೆಮಾರಿಗಳು ರೂಪುಗೊಳ್ಳುವುದಕ್ಕೆ ಕಾರಣವಾಗುವ ಸಾಮಾಜಿಕಾರ್ಥಿಕ ಸಂದರ್ಭಗಳೂ ಒಂದೇ ತೆರನಾಗಿಲ್ಲ ಇದರಿಂದಾಗಿ ಅಲೆಮಾರಿಗಳನ್ನು ಅಖಂಡವಾಗಿ ಗ್ರಹಿಸುವ ಚಿಂತನೆಯೇ ತೊಡಕಿನದ್ದಾಗಿ ಕಾಣುತ್ತದೆ.

ಆಕ್ಸಫರ್ಡ್ ಇಂಡಿಯನ್ ಕಂಪ್ಯಾನಿಯನ್ ಟು ಸೋಶಿಯಾಲಜಿ ಮತ್ತು ಸೋಶಿಯಲ್ ಆಂಥ್ರೋಪಾಲಜಿ ವಿಶ್ವಕೋಶದಲ್ಲಿ ಅಪರ್ಣಾರಾವ್ ಮತ್ತು, ಮೈಕೇಲ್ ಜೆ.ಕಾಶಿಮಿರ್ ಅವರು ಮೂರು ವಿಧಗಳಲ್ಲಿ ಅಲೆಮಾರಿಗಳನ್ನು ವಿಂಗಡಿಸುತ್ತಾರೆ.

೧. ಪಶುಪಾಲಕರು ಅಥವಾ ಪಶುಸಾಕಣೆ ಮಾಡುವವರು

೨. ಬೇಟೆಗಾರರು, ಆಹಾರ ಸಂಗ್ರಾಹಕರು ಅಥವಾ ಮೇವು ಸಂಗ್ರಾಹಕರು

೩. ಅಲೆಮಾರಿ ವ್ಯಾಪಾರಿ ಸಮುದಾಯಗಳು

೧. ಪಶುಪಾಲಕರು ಅಥವಾ ಪಶುಸಾಕಣೆ ಮಾಡುವವರು

ಈ ಸಮುದಾಯದ ಜನ ಜಾನುವಾರುಗಳ ಸಾಕಾಣಿಕೆಯನ್ನೇ ಮುಖ್ಯ ವೃತ್ತಿಯನ್ನಾಗಿಸಿಕೊಂಡವರು. ಪಶುಪಾಲನೆಯ ಇವರ ಅವಲಂಬನೆಯು ಋತುಮಾನಕ್ಕೆ ಅನುಗುಣವಾಗಿರಬಹುದು, ಇಲ್ಲವೇ ವರ್ಷವಿಡೀ

ಪಶುಪಾಲನೆಯನ್ನೇ ಅವಲಂಬಿಸಿರಬಹುದು. ಇವರಲ್ಲಿ ಕೃಷಿಕ ಪಶುಪಾಲಕರೂ ಸಹ ಸೇರುತ್ತಾರೆ. ಇವರನ್ನು ವಲಸಿಗ ದನಗಾಹಿ ಕೃಷಿಕರೆಂದು ಕರೆಯಬಹುದು. ಕೆಲವು ಪಶುಪಾಲಕರು ತಮ್ಮ ಪಶುಗಳಿಗೆ ಮೇವನ್ನು ಉತ್ಪಾದಿಸುವುದಿಲ್ಲ. ತಾವು ಸಾಕುವ ಪಶುಗಳನ್ನು ನಡೆಸಿಕೊಂಡು ಹುಲ್ಲುಗಾವಲುಗಳನ್ನು ಅರಸುತ್ತಾ ಹೋಗುತ್ತಾರೆ. ಈ ಪಶುಪಾಲಕರು ವರ್ಷವಿಡೀ ಚಲಿಸುವ ದೂರವು ಇವರು ಮೇವನ್ನು ಸಂಗ್ರಹಿಸುವ ಪ್ರವೃತ್ತಿಯನ್ನು ನಿರ್ಬಂಧಿಸುತ್ತದೆ. ಆದರೆ ಎಲ್ಲಾ ಪಶುಪಾಲಕರೂ ಈ ಕೆಟಗರಿಯಲ್ಲಿ ಸೇರದೇ ಇರಬಹುದು. ಕೆಲವು ಸಲ ಒಂದೇ ಗುಂಪಿನ ಪಶುಪಾಲಕರಲ್ಲೂ ಪಶುಸಾಕಣೆಯ ಬಗೆಯಲ್ಲಿ ವ್ಯತ್ಯಾಸಗಳೂ ಇರಬಹುದು.

೨. ಬೇಟೆಗಾರರು, ಆಹಾರ ಸಂಗ್ರಾಹಕರು ಅಥವಾ ಮೇವು ಸಂಗ್ರಾಹಕರು

ಈ ಗುಂಪಿಗೆ ಸೇರುವ ಸಮುದಾಯಗಳಿಗೆ ಮುಖ್ಯವಾಗಿ ಬೇಟೆಗಾರಿಕೆ (ಮೀನುಗಾರಿಕೆ ಸೇರಿದಂತೆ), ಆಹಾರ ಸಂಗ್ರಹಣೆ ಮತ್ತು ಕೆಲವೆಡೆ ಚಿಕ್ಕದಾಗಿ, ಅಕಾಲಿಕವಾಗಿ ಕೈಗೊಳ್ಳುವ ಕೃಷಿ ಇವರ ಆರ್ಥಿಕ ಮೂಲಗಳು. ಆಹಾರ ಸಿಗುವವರೆಗೆ ಇವರು ಚಲಿಸುತ್ತಲೇ ಇರುತ್ತಾರೆ. ಸಿಕ್ಕ ಆಹಾರವನ್ನು ತಮ್ಮಲ್ಲಿ ಹಂಚಿಕೊಳ್ಳುತ್ತಾರೆ. ಆದರೆ ಅಲೆಮಾರಿತನ ಇದ್ದೇ ಇರುತ್ತದೆ. ಆದರೆ ಈ ಕೆಟಗರಿಯಲ್ಲಿ ಕುಮ್ರಿ ಬೇಸಾಯ ಮಾಡುವ ಸಮುದಾಯಗಳು ಸೇರುವುದಿಲ್ಲ. ಇವರೂ ಸಹ ಮೇವು ಮತ್ತು ಆಹಾರವನ್ನು ಹುಡುಕಿಕೊಂಡು ಅಲೆದರೂ, ಇವರಿಗೂ ಪ್ರಸ್ತುತ ಕೆಟಗರಿಯ ಸಮುದಾಯಗಳಿಗೂ ವ್ಯತ್ಯಾಸಗಳಿವೆ.

೩. ಅಲೆಮಾರಿ ವ್ಯಾಪಾರಿ ಸಮುದಾಯಗಳು

ಇವು ಮುಖ್ಯವಾಗಿ ಅನುತ್ಪಾದಕ ಸಮುದಾಯಗಳು. ಆದರೆ ಈ ಸಮುದಾಯಗಳ ಜನ ಉತ್ಪಾದನೆಯನ್ನು ಆಯ್ದುಕೊಳ್ಳುವವರು. ಹೆಚ್ಚಾಗಿ ಸ್ವಗೋತ್ರ ವಿವಾಹಗಳನ್ನು ಅವಲಂಬಿಸಿರುವವರು. ಕೆಲವು ಅಗತ್ಯ ವಸ್ತುಗಳನ್ನು ಮಾರಾಟ ಮಾಡುವ ಕಾರಣಕ್ಕಾಗಿ ಬಹುಕಾಲದ ವರೆಗೆ ಅಲೆಮಾರಿಗಳಾಗಿಯೇ ಇವರು ಬದುಕುತ್ತಾರೆ. ಈ ಉದ್ಯೋಗ ಇವರಿಗೆ ಅನುವಂಶೀಯವಾಗಿ ಇಲ್ಲವೆ ಅನಿವಾರ್ಯ ಕಾರಣಕ್ಕಾಗಿಯೂ ರೂಢಿಯಾಗಿರಬಹುದು. ಇವರು ನೆಲೆನಿಂತ ಜನರಿಗೆ ಮತ್ತು ಅಲೆಮಾರಿಗಳಿಗೂ ವ್ಯಾಪಾರದ ಮೂಲಕ ಸೇವೆ ಒದಗಿಸುತ್ತಾರೆ. ಇವರಲ್ಲಿ ಕೆಲವರಿಗೆ ಚಿಕ್ಕ ಕೃಷಿ ಭೂಮಿ, ಪಶುಗಳು ಇರುತ್ತವೆ. ಮತ್ತು ಇವುಗಳಿಗೆ ಬೇಕಾದ ಆಹಾರವನ್ನೂ ಸಣ್ಣ ಪ್ರಮಾಣದಲ್ಲಿ ಇವರು ಸಂಗ್ರಹಿಸಿರುತ್ತಾರೆ. ಇವರು ಮಾರಾಟ ಮಾಡುವ ವಸ್ತುಗಳು, ಇವರು ಒದಗಿಸುವ ಅನುಕೂಲ ಮತ್ತು ಇವರ ಸೇವೆ ಪಡೆಯುವ ಗ್ರಾಹಕರು ಒಂದೇ ತೆರನಾಗಿರುವುದಿಲ್ಲ. ಇಲ್ಲಿ ನಾವು ಮಾಡಿರುವ ವಿಶ್ಲೇಷಣೆಗೆ ಒಳಪಡದ ಕೆಲವು ಅಲೆಮಾರಿಗಳು ವಲಸೆ ಕೂಲಿಗಳಾಗಿ ಬದುಕುತ್ತಿದ್ದಾರೆ. ಈ ಅಲೆಮಾರಿ ವ್ಯಾಪಾರಿ ಸಮುದಾಯಗಳನ್ನು ಇತ್ತೀಚೆಗೆ 'ಸಹಕಾರಿ ಅಲೆಮಾರಿಗಳು', 'ಸೇವಕ ಅಲೆಮಾರಿಗಳು', 'ಆಹಾರ ಉತ್ಪಾದಿಸದ ಅಲೆಮಾರಿಗಳು' ಮತ್ತು 'ವ್ಯಾಪಾರಿ ಅಲೆಮಾರಿಗಳು' ಎಂಬ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತದೆ'[೧೦].

ಇನ್ನು ಯುರೋಪಿನವರು Nomad ಎಂಬ ಅರ್ಥದಲ್ಲಿ ಗ್ರಹಿಸುವ ಚೌಕಟ್ಟಿನಲ್ಲಿ ಭಾರತದ ಎಲ್ಲ ಅಲೆಮಾರಿಗಳನ್ನು ಕಲ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಅಲ್ಲಿ ಅಲೆಮಾರಿಗಳೆಂದರೆ, ಅಲೆಮಾರಿ

ಪಶುಪಾಲಕರು ಮತ್ತು ಅಲೆಮಾರಿ ಚಿಕ್ಕ ವರ್ತಕರು ಮಾತ್ರ ಪಶ್ಚಿಮದವರ ಅಧ್ಯಯನದ ವ್ಯಾಪ್ತಿಗೆ ಸೇರುತ್ತಾರೆ. ಮತ್ತು ಜಾಗತಿಕ ಮಟ್ಟದ ಅಲೆಮಾರಿಗಳಿಗೂ, ಭಾರತದಲ್ಲಿನ ಅಲೆಮಾರಿಗಳಿಗೂ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅನೇಕ ಭಿನ್ನತೆಗಳಿವೆ. ಈ ಕಾರಣದಿಂದ ಪಶ್ಚಿಮದವರು ಗ್ರಹಿಸುವ Nomads ಗೂ, ಭಾರತದ ಅಲೆಮಾರಿಗಳಿಗೂ ಪರಿಕಲ್ಪನೆಯ ಮಟ್ಟದಲ್ಲಿಯೇ ಅನೇಕ ಭಿನ್ನತೆಗಳಿವೆ.

ಮೇಲಿನ ವಿಂಗಡನೆಯಲ್ಲಿ ಆಹಾರ ಸಂಗ್ರಾಹಕರು, ಪಶುಪಾಲಕರು ಮತ್ತು ಅಲೆಮಾರಿ ವ್ಯಾಪಾರಿ ಸಮುದಾಯಗಳನ್ನು ಮಾತ್ರ ಪರಿಗಣಿಸಲಾಗಿದೆ. ಈ ವಿಂಗಡನೆಯು ಮುಖ್ಯವಾಗಿ ಜಾಗತಿಕ ಅಲೆಮಾರಿಗಳನ್ನು ವಿಂಗಡಿಸುವ ಕ್ರಮವನ್ನೇ ಅನುಸರಿಸುತ್ತದೆ. ಈ ಕಾರಣದಿಂದ ಭಾರತದ ಶ್ರೇಣೀಕೃತ ವ್ಯವಸ್ಥೆಯ ಕಾರಣಕ್ಕಾಗಿ ಅಲೆಮಾರಿಗಳಾಗಿ ರೂಪುಗೊಂಡ ಸಮುದಾಯಗಳು ಈ ವಿಂಗಡನೆಯಲ್ಲಿ ಗೈರು ಹಾಜರಾಗುತ್ತವೆ. ಮತ್ತು ಮೇಲಿನ ವಿಂಗಡನೆಯು ನಮ್ಮ ಸುತ್ತ ಇರುವ ಮೇಲು ನೋಟಕ್ಕೆ ಕಾಣುವ ಸಹಜ ಅಲೆಮಾರಿಗಳನ್ನು ಮಾತ್ರ ವಿವರಿಸುತ್ತದೆ. ಆದರೆ ಜಾತಿ ವ್ಯವಸ್ಥೆಯ ಕಾರಣಕ್ಕಾಗಿ ರೂಪುಗೊಂಡ ಮತ್ತು ಈ ದೇಶದ ವರ್ಗ ವ್ಯವಸ್ಥೆಯಲ್ಲಿ ಊಳಿಗಮಾನ್ಯ ಕೇಂದ್ರಗಳನ್ನು ಆರ್ಥಿಕವಾಗಿ ಅವಲಂಬಿಸಿದ್ದು, ಆನಂತರ ನೆಲೆತಪ್ಪಿಹೋದ ಅಲೆಮಾರಿಗಳು ಈ ವಿಂಗಡನೆಯಲ್ಲಿ ಕಾಣಿಸುವುದಿಲ್ಲ. ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿರುವ ಅಲೆಮಾರಿಗಳನ್ನು ಗಮನದಲ್ಲಿಟ್ಟುಕೊಂಡು ನಾನು ಅಲೆಮಾರಿಗಳನ್ನು ಕೆಲವು ಗುಂಪುಗಳಾಗಿ ವಿಂಗಡಿಸಿದ್ದೇನೆ. ವಿಂಗಡನೆಯು ಈ ಕೆಳಗಿನಂತಿದೆ.

೧. ಪ್ರದರ್ಶಕ ಕಲೆಗಳನ್ನು ಅವಲಂಬಿಸಿರುವ ಸಮುದಾಯಗಳು

೨. ಕರಕುಶಲ ಕಲೆಗಳನ್ನು ಅವಲಂಬಿಸಿರುವ ಸಮುದಾಯಗಳು

೩. ಧಾರ್ಮಿಕ ಸಂಬಂಧೀ ವೃತ್ತಿಗಳನ್ನು ಅವಲಂಬಿಸಿರುವವರು

೪. ಪಾರಂಪರಿಕ ಮೂಲ ವೃತ್ತಿಗಳಲ್ಲೇ ಇರುವ ಸಮುದಾಯಗಳು

೫. ಬೇಟೆ, ಪಶುಪಾಲನೆ ಮತ್ತು ಆಹಾರ ಸಂಗ್ರಹಣೆಯಂತಹ ಮೂಲ ಕಸಬುಗಳನ್ನು ಅವಲಂಬಿಸಿರುವವರು.

ಹೀಗೆ ಐದು ವಿಧಗಳಲ್ಲಿ ಅಲೆಮಾರಿಗಳನ್ನು ವಿಂಗಡಿಸಬಹುದು. ಈ ವಿಂಗಡಣೆಯ ಚೌಕಟ್ಟಿಗೆ ಬಾರದ ಅಲೆಮಾರಿಗಳೂ ಸಹ ಕರ್ನಾಟಕದಲ್ಲಿರಬಹುದು. ಮೊದಲನೆಯದಾಗಿ ಪ್ರದರ್ಶಕ ಕಲೆಗಳನ್ನು ಅವಲಂಬಿಸಿರುವ ಸಮುದಾಯಗಳನ್ನು ನೋಡೋಣ.

೧. ಪ್ರದರ್ಶಕ ಕಲೆಗಳನ್ನು ಅವಲಂಬಿಸಿರುವವರು

ಮುಖ್ಯವಾಗಿ ಇವರು ತಮ್ಮ ಪಾರಂಪರಿಕ ಸರಂಜಾಮುಗಳನ್ನು ಬಳಸಿಯೇ ಜನರನ್ನು ರಂಜಿಸಲೆತ್ನಿಸುತ್ತಾರೆ. ಆಧುನಿಕ ಮನರಂಜನಾ ಮಾಧ್ಯಮಗಳು ವಿಧಿಸುವ ನಿಶ್ಚಿತ ಶುಲ್ಕ, ಇಲ್ಲವೆ ನಿಯಮಗಳು ಇಲ್ಲಿರುವುದಿಲ್ಲ. ಡೊಂಬರಾಟದವನಿಗೆ, ಜಾತಿಗಾರರಿಗೆ, ಕಸರತ್ತುಗಳನ್ನು ಪ್ರದರ್ಶಿಸಲು ಬೀದಿಯ ಪಕ್ಕದ ಯಾವುದೇ ಬಯಲಾದರೂ ಆದೀತು. ಇಲ್ಲಿ ಪ್ರೇಕ್ಷಕ ತನಿಗಿಚ್ಛೆ ಬಂದಂತೆ ಹಣ ನೀಡಬಹುದು. ಇಲ್ಲವೆ ನೀಡದೆಯೂ ಇರಬಹುದು. ಈ ಕಲೆಗಳನ್ನು ಅವಲಂಬಿಸಿರುವ ಸಮುದಾಯಗಳೆಂದರೆ, ಡೊಂಬರು, ಜಾತಿಗಾರರು, ಕಿಳ್ಳೆಕ್ಯಾತರು, ಹಗಲುವೇಷಗಾರರು, ಕವಲೆತ್ತಿನವರು, ದೊಂಬಿದಾಸರು, ಕಿನ್ನರಿ ಜೋಗಿಗಳು, ಬುಡುಬುಡಿಕೆ,

ಗೊಂದಲಿಗರು, ಮೋಡಿಕಾರರು ಮುಂತಾದ ಸಮುದಾಯಗಳು ಈ ಗುಂಪಿಗೆ ಸೇರುತ್ತವೆ.

೨. ಕರಕುಶಲ ಕಲೆಗಳನ್ನು ಅವಲಂಬಿಸಿರುವ ಸಮುದಾಯಗಳು

ಇವರು ಪಾರಂಪರಿಕವಾಗಿ ತಮ್ಮ ಕರಕುಶಲ ವೃತ್ತಿಗಳನ್ನೇ ಅವಲಂಬಿಸಿಕೊಂಡಿರುವಂಥವರು. ಸಾಂಪ್ರದಾಯಿಕ ಉತ್ಪಾದನಾ ಸಾಧನಗಳಿಂದ ಹಳ್ಳಿಗರಿಗೆ ಉಪಯುಕ್ತವಾಗಬಲ್ಲ, ಕೃಷಿ ಸಂಬಂಧಿ ಇಲ್ಲವೆ ಗೃಹೋಪಯೋಗಿ ಉಪಕರಣಗಳನ್ನು ತಯಾರಿಸುತ್ತಾರೆ. ಇವರಲ್ಲಿ ಬಯಲು ಪತ್ತಾರ, ಬಯಲು ಕಮ್ಮಾರ, ಮೇದರು, ಪಿಂಜಾರರು, ಮುದ್ದೆಕಮ್ಮಾರರು, ಹಂಡಿಜೋಗಿಗಳು ಮುಂತಾದ ಸಮುದಾಯಗಳು ಈ ಗುಂಪಿಗೆ ಸೇರುತ್ತವೆ.

೩. ಧಾರ್ಮಿಕ ಸಂಬಂಧೀ ವೃತ್ತಿಗಳನ್ನು ಅವಲಂಬಿಸಿರುವವರು

ಇವರು ಮುಖ್ಯವಾಗಿ ಕೆಲವು ಅನುಭಾವಿ ಪಂಥಗಳಿಗೆ ಸೇರಿದವರು. ಅಲ್ಲದೆ ಶಕ್ತಿ ಆರಾಧಕರು. ಇವರು ದಾಸರ ಮತ್ತು ಅನುಭಾವಿಗಳ ಕಾವ್ಯಗಳನ್ನು, ತತ್ವಪದಗಳನ್ನು ಹಾಡುತ್ತ ಊರೂರು ಅಲೆಯುವವರು. ಇವರಲ್ಲಿ ದುರುಗ ಮುರುಗಿಯರು, ಗೊರವರು, ದೊಂಬಿದಾಸರು, ಸುಡುಗಾಡು ಸಿದ್ದರು, ಅರ್ಜುನಜೋಗಿಗಳು, ಭೈರಾಗಿಗಳು ಮುಂತಾದವರು ಮುಖ್ಯರು.

೪. ಪಾರಂಪರಿಕ ಮೂಲ ವೃತ್ತಿಗಳಲ್ಲೇ ಇರುವ ಸಮುದಾಯಗಳು

ಈ ಗುಂಪಿಗೆ ಸೇರಿದ ಸಮುದಾಯಗಳು ಆರ್ಥಿಕವಾಗಿ ಸಮಾಜದ ಪ್ರಬಲ ಸಮುದಾಯಗಳನ್ನು ಪಾರಂಪರಿಕವಾಗಿ ಅವಲಂಬಿಸಿರುವವರು. ಅವರಲ್ಲಿ, ಹೆಳವರು, ದಕ್ಕಲರು, ಮೊಂಡರು ಪ್ರಮುಖರು. ಹಲವು ಪಾಳೇಗಾರರಿಗೆ, ಭೂಮಾಲಿಕರಿಗೆ 'ಮನೆ ಮಕ್ಕಳಾಗಿ' ಇವರು ಸೇವೆ ಸಲ್ಲಿಸುತ್ತಾರಲ್ಲದೆ, ಹೆಳವರು ಊರೂರು ಸುತ್ತಿ ಅವರ ವಂಶಾವಳಿಯನ್ನು ದಾಖಲಿಸುತ್ತಾರೆ.

೫. ಬೇಟೆ, ಪಶುಪಾಲನೆ ಮತ್ತು ಆಹಾರ ಸಂಗ್ರಹಣೆಯಂತಹ ಮೂಲ ಕಸುಬುಗಳನ್ನು ಅವಲಂಬಿಸಿರುವವರು

ಈ ಗುಂಪಿಗೆ ಸೇರಿದ ಸಮುದಾಯಗಳು ಇನ್ನೂ ಬೇಟೆ, ಪಶುಪಾಲನೆ ಮತ್ತು ಆಹಾರ ಸಂಗ್ರಹಣೆಯನ್ನು ನಂಬಿದವರು. ಅಡವಿ ಚೆಂಚರು, ಯಾನಾದಿಗಳು, ಹಕ್ಕಿಪಿಕ್ಕಿಗಳು ಇನ್ನೂ ಬೇಟೆಯನ್ನೇ ನಂಬಿಕೊಂಡಿದ್ದಾರೆ. ಅಲೆಮಾರಿ ಕುರುಬರು ಪಶುಪಾಲನೆಯನ್ನು, ಗೋಸಂಗಿಗಳು, ಕಿಳ್ಳೆಕ್ಯಾತರು, ಒಳನಾಡ ಮೀನುಗಾರಿಕೆಯನ್ನು ಅವಲಂಬಿಸಿದ್ದಾರೆ. ಇನ್ನೂ ಪಾರಂಪರಿಕ ವೈದ್ಯವನ್ನೇ ನಂಬಿರುವ ರಾಜಗೊಂಡರು ಮತ್ತು ಅಲೆಮಾರಿ ವರ್ತಕರಾಗಿಯೇ ಜೀವಿಸುತ್ತಿರುವ ೨೪ ಮನೆ ತೆಲುಗು ಶೆಟ್ಟರು ಸಹ ಕರ್ನಾಟಕದಲ್ಲಿದ್ದಾರೆ. ಈ ಗುಂಪಿನಲ್ಲಿ ಅಡವಿ ಚೆಂಚರು, ಹಕ್ಕಿಪಿಕ್ಕಿಗಳು, ಯಾನಾದಿಗರು, ಅಲೆಮಾರಿ ಕುರುಬರು, ಗೋಸಂಗಿಗಳು, ಕಿಳ್ಳೆಕ್ಯಾತರು, ಪಾರ್ಧಿಗಳು ಮತ್ತು ತೆಲುಗು ಶೆಟ್ಟರು ಮುಖ್ಯವಾಗಿ ಸೇರಿಕೊಳ್ಳುತ್ತಾರೆ [೧೧].

ಈ ಮೇಲೆ ಪಟ್ಟಿ ಮಾಡಿರುವ ಅಲೆಮಾರಿ ಸಮುದಾಯಗಳಿಗೂ ಜಾಗತಿಕ ಮಟ್ಟದಲ್ಲಿ ಅಸ್ತಿತ್ವದಲ್ಲಿರುವ ಅಲೆಮಾರಿಗಳಿಗೂ ಮೇಲುನೋಟಕ್ಕೇನೇ ಹಲವು ವ್ಯತ್ಯಾಸಗಳಿರುವುದು ಕಂಡು ಬರುತ್ತದೆ. ಭಾರತವನ್ನು ಹೊರತುಪಡಿಸಿ ಬೇರೆ ಬೇರೆ ದೇಶಗಳಲ್ಲಿರುವ ಅಲೆಮಾರಿಗಳಿಗೆ ತಾವು ಅವಲಂಬಿಸಿರುವ ಕಸುಬುಗಳನ್ನು ಒಂದು ಉದ್ಯಮವನ್ನಾಗಿಸಿಕೊಳ್ಳುವ ಎಲ್ಲ ಅವಕಾಶಗಳಿವೆ. ಇವರಿಗೆ ತಮ್ಮ ಸಾಮಾಜಿಕ ಮತ್ತು ಆರ್ಥಿಕ

ಕ್ಷೇತ್ರದಲ್ಲಿ ಸ್ವಚ್ಛಂದವಾಗಿ ತಮ್ಮ ಕಸಬುಗಳನ್ನು ವರ್ತಮಾನಕ್ಕೆ ತಕ್ಕಂತೆ ರೂಪಿಸಿಕೊಳ್ಳುವ ಸಂದರ್ಭಗಳು ಆಯಾಚಿತವಾಗಿ ಸೃಷ್ಟಿಯಾಗುತ್ತವೆ. ಇಲ್ಲವೆ, ಇವರು ತಮ್ಮ ಕಸುಬನ್ನು ಬಿಟ್ಟು ಲಾಭದಾಯಕವೆನ್ನಿಸುವ ಯಾವುದಾದರೊಂದು ವೃತ್ತಿಯನ್ನು ಕೈಗೊಳ್ಳಲು ಈ ಅಲೆಮಾರಿಗಳು ಸ್ವತಂತ್ರರು. ಇವರಿಗೆ ಜಾತಿ ಅವಮಾನಗಳಾಗಲಿ, ಅಸಮಾನತೆಯಾಗಲಿ ಬಾಧಿಸುವುದಿಲ್ಲ. ಆದರೆ ಭಾರತದಲ್ಲಿನ ಅಲೆಮಾರಿಗಳಿಗೆ ಈ ಮಾತು ಅನ್ವಯಿಸುವುದಿಲ್ಲ.

ಭಾರತದ ಅಲೆಮಾರಿಗಳು ಈ ದೇಶದ ಸಾಮಾಜಿಕ ವ್ಯವಸ್ಥೆಯ ಕೆಳಸ್ತರದಿಂದ ಬಂದವರು. ಸಾವಿರಾರು ವರ್ಷಗಳಿಂದ ಸಾಮಾಜಿಕ ಮತ್ತು ಆರ್ಥಿಕ ಅಧಿಕಾರಗಳಿಲ್ಲದೆ ಬದುಕಿ ಬಂದವರು. ಈ ದೇಶದ ಸಾಮಾಜಿಕ ಚರಿತ್ರೆಯ ಉದ್ದಕ್ಕೂ ಆಳುವ ಜನಗಳ ಆರ್ಥಿಕ ವ್ಯವಸ್ಥೆಯನ್ನೇ ಅವಲಂಬಿಸಿಕೊಂಡು ಬಂದ 'ಸೇವಕ ವರ್ಗ' ಕ್ಕೆ ಸೇರಿದವರು. ಈ 'ಸೇವಕ ವರ್ಗ'ವು ಮುಖ್ಯವಾಗಿ ಊಳಿಗಮಾನ್ಯ ಕಾಲದ ವರ್ಗ ಸಮಾಜದ ಸೃಷ್ಟಿಯಾಗಿದೆ. ಕೃಷಿ ಭೂಮಿಯನ್ನು ಮುಖ್ಯವಾಗಿಟ್ಟುಕೊಂಡು, ಕೃಷಿಯನ್ನು ಒಟ್ಟು ಸಮಾಜದ ಆರ್ಥಿಕ ಮೂಲವನ್ನಾಗಿಸಿದ ಆಳುವ ವರ್ಗಗಳು, ಉತ್ಪಾದಕ ಶಕ್ತಿಗಳನ್ನು ನಿರ್ಣಾಯಕವಾಗಿ ಹಿಡಿತದಲ್ಲಿಟ್ಟುಕೊಂಡ ಮತ್ತು ಸಮಾಜದ ಒಟ್ಟಾರೆಯ ಉತ್ಪಾದನಾ ಚಟುವಟಿಕೆಗಳು ಊಳಿಗಮಾನ್ಯ ಕೇಂದ್ರದ ನಿಯಂತ್ರಣದಲ್ಲಿಯೇ ಸಂಚಯಗೊಂಡ ಕಾಲದಲ್ಲಿ ಈ ಸೇವಕ ಸಮುದಾಯಗಳು ರೂಪುಗೊಂಡವು. ಉದಾ. ಕರ್ನಾಟಕದಲ್ಲಿ ಗಂಗ, ಕದಂಬ ರಾಜವಂಶದ ಕಾಲದ ಸಮಾಜಕ್ಕಿಂತ ಊಳಿಗಮಾನ್ಯತೆಯು ಚಾಲುಕ್ಯರ ಕಾಲದಲ್ಲಿ ಹೆಚ್ಚು ಸಾಂದ್ರವೂ ಮತ್ತು ಶಕ್ತಿಶಾಲಿಯೂ ಆಗಿ ರೂಪುಗೊಂಡಿತ್ತು. ಈ ಸಂದರ್ಭದಲ್ಲಿ ಸಮಾಜದ ಒಟ್ಟಾರೆಯ ಉತ್ಪಾದನಾ ಚಟುವಟಿಕೆಗಳು ಊಳಿಗಮಾನ್ಯ ಕೇಂದ್ರದ ಆಣತಿಯ ಮೇರೆಗೆ ಭಾರತದ ಸಮಾಜದಲ್ಲಿ ರೂಪುಗೊಂಡಿವೆ. ಶ್ರಮ ವಿಭಜನೆ, ಆಸ್ತಿ ಹಕ್ಕು, ಮಿಗುತಾಯದ ಮೇಲಿನ ಒಡೆತನ, ಸಾಮಾಜಿಕ ಅಧಿಕಾರಗಳು ಇಲ್ಲಿನ ಶ್ರೇಣೀಕರಣವನ್ನು ಅವಲಂಬಿಸಿಯೇ ಹಂಚಿಕೆಯಾಗಿರುವುದು ಕಂಡು ಬರುತ್ತದೆ. ಪುರೋಹಿತರು, ಕ್ಷತ್ರಿಯರು, ಭೂಮಾಲಿಕರು, ಕೃಷಿಕರು, ವ್ಯಾಪಾರಿಗಳು, ಕುಶಲಕರ್ಮಿಗಳು ಮತ್ತು ಸೇವಕ ಸಮುದಾಯಗಳು ಊಳಿಗಮಾನ್ಯ ಕಾಲದ ವರ್ಗ ಸಮಾಜದ ಸೃಷ್ಟಿಗಳು. ಇಲ್ಲಿ ಕುಶಲಕರ್ಮಿ ಮತ್ತು ಸೇವಕ ಸಮುದಾಯಗಳ ಸಾಮಾಜಿಕ ಸ್ಥಾನಮಾನಗಳು ಮತ್ತು ಆರ್ಥಿಕ ಅವಲಂಬನೆಯ ಸಂದರ್ಭಗಳು ಏಕರೂಪವಾಗಿಲ್ಲ. ಎನ್ ಆರ್ ನಂದಿಯವರು 'ಊಳಿಗಮಾನ್ಯ ವ್ಯವಸ್ಥೆಯಲ್ಲಿ ಕುಶಲ ಕರ್ಮಿಗಳು ಮತ್ತು ಸೇವಕ ಸಮುದಾಯಗಳು ಒಟ್ಟಾರೆಯ ಉತ್ಪಾದನಾ ಚಟುವಟಿಕೆಗಳಲ್ಲಿ ಹೆಚ್ಚಿನ ಶ್ರಮವನ್ನು ಹಾಕಿಯೂ ಕೂಲಿರಹಿತ ದುಡಿಮೆಯಲ್ಲಿಯೇ ಬದುಕಬೇಕಿತ್ತು. ಜೊತೆಗೆ ಬ್ರಾಹ್ಮಣ ಮತ್ತು ದೇವಾಲಯಗಳಿಗೆ ಗುಲಾಮರಾಗಿ ಬದುಕಬೇಕಿತ್ತು'[೨]. ಎನ್ನುತ್ತಾರೆ. ಊಳಿಗಮಾನ್ಯ ಕಾಲಘಟ್ಟದಲ್ಲಿ ಕುಶಲಕರ್ಮಿಗಳಿಗೂ ಮತ್ತು ಸೇವಕ ಸಮುದಾಯಗಳಿಗೂ ಸಾಮಾಜಿಕ ಸ್ಥಾನಮಾನದಲ್ಲಿ ಅಂತಹ ವ್ಯತ್ಯಾಸಗಳೇನಿರಲಿಲ್ಲ[೩]. ಆದರೆ ಕುಶಲಕರ್ಮಿ ಸಮುದಾಯಗಳು ಕೃಷಿಕ ವರ್ಗಕ್ಕೆ ಅದರಲ್ಲೂ ಊಳಿಗಮಾನ್ಯ ವ್ಯವಸ್ಥೆಗೆ ಸವಾಲಾಗಿ ರೂಪುಗೊಳ್ಳುವ ಹಂತದಲ್ಲಿ ಈ ಎರಡೂ ಸಮುದಾಯಗಳ ಮಧ್ಯೆ ಸಹಜವಾಗಿ ಸಂಘರ್ಷಗಳು ಏರ್ಪಟ್ಟವು. ತಮ್ಮ ದುಡಿಮೆಗೆ ಗೌರವ ಸಲ್ಲುವ ನಿಟ್ಟಿನಲ್ಲಿ ಕುಶಲಕರ್ಮಿಗಳು ಸಂಘರ್ಷಕ್ಕಿಳಿದರು. 'ಸರಕು ಉತ್ಪಾದನೆಯ

ತಮ್ಮ ಶ್ರಮಕ್ಕೆ ಸೂಕ್ತ ಪ್ರತಿಫಲ ಹಾಗೂ ಸ್ವತಂತ್ರ ಮಾನ್ಯತೆಯನ್ನು ನಿರಾಕರಿಸುತ್ತಿದ್ದ ಮಠ, ಅಗ್ರಹಾರ ಹಾಗೂ ಊಳಿಗಮಾನ್ಯ ಪಾಳೇಗಾರರು ಮುಂತಾದವರ ಆಧಿಪತ್ಯವನ್ನು ಅವರೆಲ್ಲ ಒಂದಾಗಿ ಕಿತ್ತೊಗೆಯಲು ಪ್ರಯತ್ನಿಸಿದರು'[೧೫]. ಕಾರಣ ಸರಕು ಉತ್ಪಾದನೆಯ ಕುಶಲಕರ್ಮಿಗಳು ವ್ಯವಸಾಯಿ ಉತ್ಪಾದನಾ ಚಟುವಟಿಕೆಗಳಿಗೆ ಪೂರಕವಾಗಿದ್ದರು ಮತ್ತು ವ್ಯವಸಾಯಿ ಸಂಬಂಧಗಳನ್ನು ತಮ್ಮ ಸರಕು ಉತ್ಪಾದನೆಯ ಮೂಲಕ ಪರೋಕ್ಷವಾಗಿ ನಿಯಂತ್ರಿಸುತ್ತಿದ್ದರು. ಚಾಲುಕ್ಯರ ಕಾಲದಲ್ಲಿ ತನ್ನ ಸ್ಪಷ್ಟ ರೂಪ ಪಡೆದಿದ್ದ ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧ ಕುಶಲಕರ್ಮಿ ಶ್ರಮಜೀವಿಗಳು ಒಂದು ನ್ಯಾಯಬದ್ಧ ಹೋರಾಟವನ್ನು ರೂಪಿಸಿದರು. ಅದು ಬಸವಾದಿ ಶರಣರ ಚಳುವಳಿಯನ್ನು ಪರೋಕ್ಷವಾಗಿ ಹುಟ್ಟುಹಾಕಿತು. 'ಊಳಿಗಮಾನ್ಯತೆಯ ವಿರುದ್ಧ ಆರಂಭಿಸಿದ್ದ ಒಂದು ಸುದೀರ್ಘ ಸಂಘರ್ಷದ ಆರಂಭ ಬಿಂದುವಾಗಿ, ಅವರ ಆಶಯಗಳ 'ಸ್ವಪ್ನಸಾಂದ್ರೀಕೃತ' ರೂಪವಾಗಿ ವಚನಕಾರರ ಚಳುವಳಿಯು ಆ ನಿರ್ದಿಷ್ಟ ಕಾಲಘಟ್ಟದಲ್ಲಿ ಹೊಳೆಯಿತು'[೧೬]. ಜೊತೆಗೆ ಜಗತ್ತಿನ ಚರಿತ್ರೆಯಲ್ಲಿ ಶ್ರಮಜೀವಿ ವರ್ಗಗಳ ಜನತಾಂತ್ರಿಕ ಆಶಯಗಳ ಚಳುವಳಿಯಾಗಿ ಇದು ದಾಖಲಾಯಿತು. ಈ ಚಳುವಳಿಯು ಕೆಳಜಾತಿಗಳನ್ನು ಒಳಗೊಂಡು ಒಂದು ಆಧ್ಯಾತ್ಮಿಕ ಅವಕಾಶದ (Space)ಲ್ಲಿ ಈ ಸಮುದಾಯಗಳಿಗೆ ಕೆಲವು ಸಂದರ್ಭಗಳನ್ನು ಕಲ್ಪಿಸಿದರೂ ಸಹ ಅವುಗಳ ಸಾಮಾಜಿಕ ಸ್ಥಾನಮಾನಗಳ ಉನ್ನತೀಕರಣ ಸಾಧ್ಯವಾಗಲಿಲ್ಲ. ಇದಕ್ಕೆ ಚಳುವಳಿಯ ಸೈದ್ಧಾಂತಿಕತೆಯಲ್ಲಿನ ಹಲವು ಗೊಂದಲಗಳು ಕಾರಣವೂ ಆಗಿರಬಹುದು.

ಆದರೆ ವಚನ ಚಳುವಳಿಯ ನಂತರ ಕುಶಲಕರ್ಮಿಗಳ ಸಾಮಾಜಿಕ ಸ್ಥಾನಮಾನ ಮತ್ತು ಅಧಿಕಾರಿಗಳಿಗೆ ಸಂಬಂಧಿಸಿದಂತೆ ಕೆಲವು ಬದಲಾವಣೆಗಳು ಸಂಭವಿಸಿದವು. ಆದರೆ ಸೇವಕ ವರ್ಗಕ್ಕೆ ಸೇರಿದ್ದ ಕೆಳಜಾತಿಗಳ ಸ್ಥಾನಮಾನಗಳಲ್ಲಿ ಅಂತಹ ವ್ಯತ್ಯಾಸಗಳು ಸಂಭವಿಸಲಿಲ್ಲ. ಅವು ಸೇವಕ ಸಮುದಾಯಗಳಾಗಿಯೇ ಮುಂದುವರೆದವು. ಕಾರಣ ಈ ಸೇವಕ ಸಮುದಾಯಗಳು ತಮ್ಮ ಯಾವ ಉತ್ಪಾದನಾ ಚಟುವಟಿಕೆಗಳಿಂದಲೂ ಅಂದು ತಮ್ಮನ್ನು ನಿಯಂತ್ರಿಸುತ್ತಿದ್ದ ಊಳಿಗಮಾನ್ಯತೆಯನ್ನು ಪ್ರಭಾವಿಸುವ ಅವಕಾಶವಿರಲಿಲ್ಲ. ಸೇವಕ ಸಮುದಾಯಗಳು ಊಳಿಗಮಾನ್ಯ ಕಾಲದ ಸಮಾಜದ ಸೇವೆಗಳಲ್ಲಿಯೇ ನಿರತರಾಗಿದ್ದ ಕಾರಣ ಆರ್ಥಿಕವಾಗಿ ತಮ್ಮನ್ನು ಸಾಕುವ ಧಣಿಗಳನ್ನು ಅವಲಂಬಿಸಲೇಬೇಕಿತ್ತು. ಜೊತೆಗೆ ಊಳಿಗಮಾನ್ಯ ಉತ್ಪಾದನಾ ವ್ಯವಸ್ಥೆಯನ್ನು ಕುಶಲಕರ್ಮಿ ವರ್ಗ ಪರೋಕ್ಷವಾಗಿ ನಿಯಂತ್ರಿಸುವ ಮತ್ತು ಮುಖಾಮುಖಿ ಮಾಡುವಂತಹ ಸಂದರ್ಭಗಳು ಸೇವಕ ಸಮುದಾಯಗಳಿಗೆ ಸಾಧ್ಯವಾಗಲ್ಲಿಲ್ಲ. ಕುಶಲಕರ್ಮಿಗಳು ಕೃಷಿ ಸಂಬಂಧಿ ಚಟುವಟಿಕೆಗಳನ್ನು, ತಮ್ಮ ಉತ್ಪಾದನಾ ಪರಿಕರಗಳನ್ನು ಪೂರೈಸುವ ಸಾಮರ್ಥ್ಯದಿಂದಲೇ ನಿಯಂತ್ರಿಸಿದರು. ಆದರೆ ಸೇವಕ ಸಮುದಾಯಗಳಿಗೆ ಈ ಅವಕಾಶಗಳಿರಲಿಲ್ಲ. ಇದರಿಂದಾಗಿ ಈ ಸಮುದಾಯಗಳು ಸೇವಕ ವರ್ಗವಾಗಿಯೇ ಮುಂದುವರೆದವು ಮತ್ತು ಯಾವ ಸಾಮಾಜಿಕ ಅಧಿಕಾರಗಳೂ ಇವರಿಗೆ ಲಭ್ಯವಾಗಲಿಲ್ಲ. ಈ ಸೇವಕ ವರ್ಗವು ಊಳಿಗಮಾನ್ಯ ವ್ಯವಸ್ಥೆಯ ಆರ್ಥಿಕತೆಯನ್ನು ಅವಲಂಬಿಸಿಕೊಂಡೇ ಬದುಕಬೇಕಾಯಿತು. ಮತ್ತು ಶ್ರೇಣೀಕರಣ ವ್ಯವಸ್ಥೆಯಲ್ಲಿ ಈ ಸೇವಕ ವರ್ಗದ ಶ್ರಮಿಕರು ಅಂಚಿನ ಸಮುದಾಯಗಳಾಗಿ ಬದುಕಬೇಕಾಯಿತು. ಜೊತೆಗೆ ಯಾವಾಗ ಊಳಿಗಮಾನ್ಯ ವ್ಯವಸ್ಥೆಯು ಸ್ಫೋಟಗೊಂಡು, ಪಾರಂಪರಿಕ ವ್ಯವಸಾಯಿ

ಸಂರಚನೆಯಲ್ಲಿನ ಶ್ರಮ ವಿಭಜನೆ ಮತ್ತು ಕೊಡುಕೊಳುವಿಕೆಗಳು ನಾಶವಾದವೊ ಆಗ ಈ ಸೇವಕ ವರ್ಗಗಳಲ್ಲಿನ ಹಲವು ಸಮುದಾಯಗಳು ತಮ್ಮ ವೃತ್ತಿಯ ಕಾರಣಗಳಾಗಿ ಅಲೆಮಾರಿಗಳೂ ಆಗಿ ರೂಪಾಂತರಗೊಂಡವು.

ಇಂಡಿಯಾದ ಬಹುತೇಕ ಅಲೆಮಾರಿಗಳು ಈ ದೇಶದ ಶ್ರೇಣೀಕೃತ ವ್ಯವಸ್ಥೆಯ ಕಾರಣಕ್ಕಾಗಿ ರೂಪುಗೊಂಡವರು. ಭಾರತದ ಸಮಾಜದ ಇಂತಹುದ್ದೇ ಕಾಲಘಟ್ಟದಲ್ಲಿ ಅಲೆಮಾರಿಗಳು ಸೃಷ್ಟಿಯಾದರು ಎಂದು ಹೇಳಲಾಗುವುದಿಲ್ಲ. ಭಾರತದ ಸಾಮಾಜಿಕ ವ್ಯವಸ್ಥೆ ಎಷ್ಟು ಸಂಕೀರ್ಣವೋ, ಆ ವ್ಯವಸ್ಥೆಯ ಅಂತರ್ಗತ ಭಾಗವಾಗಿರುವ ಅಲೆಮಾರಿಗಳು ರೂಪುಗೊಳ್ಳುವುದಕ್ಕೆ ಕಾರಣವಾಗಿರುವ ಸಾಮಾಜಿಕ ಆರ್ಥಿಕ ಸಂಗತಿಗಳೂ ಸಹ ಅಷ್ಟೇ ಸಂಕೀರ್ಣವಾಗಿವೆ. ಶ್ರೇಣೀಕರಣದ ಕಾರಣಕ್ಕಾಗಿ ಇಂಡಿಯಾದಲ್ಲಿ ಬದುಕುತ್ತಿರುವ ದುಡಿವ ಕೆಳಜಾತಿ ಸಮುದಾಯಗಳು ಯಾವ ಯಾವ ಹಂತಗಳನ್ನು ದಾಟಿ ಬಂದಿರುವರೋ ಆ ಎಲ್ಲ ಹಂತಗಳನ್ನು ಅಲೆಮಾರಿಗಳೂ ಹಾದು ಬಂದಿದ್ದಾರೆ. ಭಾರತದ ರಾಜಕೀಯಾರ್ಥಿಕ ಚಲನೆಗಳು ಇಲ್ಲಿನ ಉತ್ಪಾದನಾ ಸಂಬಂಧಗಳನ್ನು ಸ್ಪಷ್ಟವಾಗಿ ನಿಯಂತ್ರಿಸಿವೆ. ಈ ಕಾರಣದಿಂದಾಗಿ ಭಾರತದ ಸಮಾಜವು ಹಲವು ಸ್ತರಗಳಲ್ಲಿ ಛಿದ್ರಗೊಂಡಿದೆ. ಹೀಗಾಗಿ ಭಾರತದ ಸಮಾಜದ ಪ್ರಧಾನ ಲಕ್ಷಣವೆಂದರೆ ಜಾತಿವ್ಯವಸ್ಥೆ. ಜಾತಿ ವ್ಯವಸ್ಥೆಯ ಮುಖ್ಯ ಉದ್ದೇಶ ಈ ದೇಶದ ಸಮಾಜದ ಒಟ್ಟಾರೆಯ ರಾಜಕೀಯಾರ್ಥಿಕ ಸ್ಥಿತಿಯನ್ನು ಸಾಮಾಜಿಕ ಶ್ರೇಣೀಕರಣದ ಮೂಲಕ ಸಮರ್ಥಿಸುವುದು. ಈ ಶ್ರೇಣೀಕರಣ ಮತ್ತು ಜಾತಿ ವ್ಯವಸ್ಥೆ ದುಡಿವವರ ಮತ್ತು ದುಡಿಸಿಕೊಳ್ಳುವವರ ಮಧ್ಯೆ ಬಂದು ಅಸಹಜ ಸಾಮಾಜಿಕ ಸಂಬಂಧವಾಗಿ ಏರ್ಪಟ್ಟಿದೆ. ಈ ಕಾರಣದಿಂದಾಗಿ ಭಾರತದ ಶ್ರೇಣೀಕರಣವು ಜಗತ್ತಿನ ಎಲ್ಲ ತರತಮ ವ್ಯವಸ್ಥೆಗಳಿಗಿಂತ ಹೆಚ್ಚು ಸಂಕೀರ್ಣ ಮತ್ತು ಅಷ್ಟೇ ಕ್ರೂರ ವ್ಯವಸ್ಥೆಯಾಗಿದೆ.

ಇಂಡಿಯಾದ ಶ್ರೇಣೀಕೃತ ವ್ಯವಸ್ಥೆಯಲ್ಲಿ ಹಲವು ಬಗೆಯ ಜಾತಿ ಸಮುದಾಯಗಳು ಕಂಡುಬರುತ್ತವೆ. ಸಾವಿರಾರು ವರ್ಷಗಳ ಕಾಲ ಪೋಷಿಸಿಕೊಂಡು ಬಂದಿರುವ ಈ ವಿಷಮ ಸಾಮಾಜಿಕ ವ್ಯವಸ್ಥೆಯಲ್ಲಿ ವಿಕ್ಷಿಪ್ತ ಆಳ್ವಿಕೆ ಮತ್ತು ಅಸಹಾಯಕ ಶರಣಾಗತಿ ಅನೂಚಾನವಾಗಿ ನಡೆದು ಬಂದಿದೆ. ಅಲ್ಪಸಂಖ್ಯಾತ ಆಳುವ ವರ್ಗ, ಬಹುಸಂಖ್ಯಾತ ಶ್ರಮಿಕರನ್ನು ಹೀನಾಯವಾಗಿ ಜಾತಿ ಶ್ರೇಣಿಗಳಲ್ಲಿ ಜೋಡಿಸಿಕೊಂಡು ಬಂದಿದೆ. ಮೇಲು ನೋಟಕ್ಕೆ ಇದು ಕೇವಲ ಸಾಮಾಜಿಕ ಮತ್ತು ಸಾಂಸ್ಕೃತಿಕ ರಂಗಗಳಲ್ಲಿ ಬಹುಸಂಖ್ಯಾತ ಶ್ರಮಿಕರನ್ನು ವಂಚಿಸುವ ಹುನ್ನಾರದಂತೆ ಕಂಡರೂ ಸಹ, ಈ ಹುನ್ನಾರದ ಹಿಂದೆ ಶ್ರಮಿಕರ ಉತ್ಪಾದನೆಯ ಮೇಲೆ ಮೇಲ್ವರ್ಗಗಳು ನಿರ್ಣಾಯಕ ಹಿಡಿತ ಸಾಧಿಸುವ ರಾಜಕಾರಣ ವ್ಯವಸ್ಥಿತವಾಗಿ ಕೆಲಸ ಮಾಡುತ್ತ ಬಂದಿದೆ. ಮನುಷ್ಯನ ಬದುಕಿಗೆ ರೂಪ ಕೊಡುವ, ಸಾಮಾಜಿಕ ಮತ್ತು ಸಾಂಸ್ಕೃತಿಕ ರಂಗಗಳಲ್ಲಿ ತಲೆ ಎತ್ತಿ ನಡೆಯುವ ಆತ್ಮಪ್ರತ್ಯಯವನ್ನು ಸಂಚಯಿಸುವ ಆರ್ಥಿಕ ಸ್ವಾವಲಂಬನೆಯನ್ನೇ ಈ ದೇಶದ ಆಳುವ ವರ್ಗ ನಾಶಮಾಡುತ್ತ ಬಂದಿದೆ. ಬಹುಸಂಖ್ಯಾತ ಶ್ರಮಿಕರು ಇನ್ನೂ ಆರ್ಥಿಕ ರಂಗದಲ್ಲಿ ಶತಮಾನಗಳಷ್ಟು ಹಿನ್ನಡೆ ಅನುಭವಿಸಿರುವುದಕ್ಕೆ ಈ ದೇಶದಲ್ಲಿ ನಿರಂತರವಾಗಿ ಸಾಕಿಕೊಂಡು ಬಂದಿರುವ ಅಮಾನವೀಯ ಅಸಮಾತನತೆಯೇ ಕಾರಣ. ವೃತ್ತಿಗನುಗುಣವಾಗಿ ಜಾತಿಗಳನ್ನು ವಿಂಗಡಿಸಿದರೂ ಸಹ, ಉತ್ಪಾದನೆಯ

ಅತ್ಯಂತಿಕ ಫಲಗಳನ್ನು ಆಳುವ ವರ್ಗವೇ ಅನುಭವಿಸುತ್ತಾ ಬಂದಿತು. ಆದರೆ ಕಸಬುಗಳನ್ನಾಧರಿಸಿ ರೂಪುಗೊಂಡ ಸಾಮಾಜಿಕ ಅಸಮಾನತೆ ಮಾತ್ರ ಸಮುದಾಯಗಳನ್ನು ನಿರಂತರವಾಗಿ ಕಾಡುತ್ತಲೇ ಬಂದಿದೆ. ಇದರ ಜೊತೆಗೆ ಉತ್ಪಾದನಾ ಕ್ಷೇತ್ರದಲ್ಲಿ ಯಾವ ಆಯ್ಕೆಗಳೂ ಇಲ್ಲದೆ, ಆತ್ಮಪ್ರತ್ಯಯವಿಲ್ಲದ ಅಸಹಾಯಕ ಸ್ಥಿತಿಯಲ್ಲಿ ಬಹುಸಂಖ್ಯಾತ ಶ್ರಮಿಕರು ಈ ದೇಶದ ಚರಿತ್ರೆಯುದ್ದಕ್ಕೂ ಬದುಕಿ ಬಂದಿದ್ದಾರೆ.

ಒಂದು ದೇಶದ ಚರಿತ್ರೆಯ ನಿರ್ಮಾಣದಲ್ಲಿ ಆ ದೇಶದ ಉತ್ಪಾದನಾ ಶಕ್ತಿಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಒಂದು ದೇಶದ ಸಮಾಜ, ಸಂಸ್ಕೃತಿ ಮತ್ತು ಐಕ್ಯತೆಗಳು ಸಾಧಿತವಾಗುವುದು ಆ ದೇಶದ ಶ್ರಮಿಕರಿಂದಲೇ. ಆದರೆ ಭಾರತವೆಂಬ ದೇಶದ ಚರಿತ್ರೆಯುದ್ದಕ್ಕೂ ನಡೆದ ಅನೇಕ ಯುದ್ಧಗಳಲ್ಲಿ, ಸಂಘರ್ಷಗಳಲ್ಲಿ ತಮ್ಮನ್ನು ಅರ್ಪಿಸಿಕೊಂಡೂ, ಈ ದೇಶದ ಸಂಸ್ಕೃತಿ ಸೌಧದ ಅಡಿಗಲ್ಲುಗಳಾಗಿ ಭಾರ ಹೊತ್ತು ನಿಂತಿರುವ ಶ್ರಮಿಕ ಸಮುದಾಯಗಳು ಇಂದಿಗೂ ಸ್ವಾವಲಂಬನೆಯ ಬದುಕಿಗೆ ಹಂಬಲಿಸುತ್ತಿವೆ. ಈ ದೇಶಕ್ಕೆ ಸಾವಿರಾರು ವರ್ಷಗಳ ಇತಿಹಾಸ, 'ಹೆಮ್ಮೆ'ಯಿಂದ ಹೇಳಿಕೊಳ್ಳಲಾಗುವ ಸಾಂಸ್ಕೃತಿಕ ಪರಂಪರೆ ಇದ್ದರೂ ಇವುಗಳನ್ನು ನಿರ್ಮಾಣ ಮಾಡಿದ ಸಮುದಾಯಗಳು ಇಂದಿಗೂ ಒಪ್ಪತ್ತಿನ ಊಟಕ್ಕೆ ದಿಕ್ಕಿಲ್ಲದೆ ದಿನ ಕಳೆಯುತ್ತಿವೆ. ಕಾರಣ ಆರ್ಥಿಕ ಮತ್ತು ಉತ್ಪಾದನಾ ಕ್ಷೇತ್ರದ ಮೇಲೆ ಆಳುವ ವರ್ಗಗಳು ಸಾಧಿಸಿದ ಹಿಡಿತವು ಜಾತಿ ವ್ಯವಸ್ಥೆಯನ್ನು ಲೌಕಿಕವಾಗಿ ಪೋಷಿಸಿಕೊಂಡು ಬಂದಿದೆ. ಜಾತಿ ವ್ಯವಸ್ಥೆಯ ಸಂರಕ್ಷಣೆಯೆಂದರೆ, ಅತ್ಯಂತಿಕವಾಗಿ ಆಳುವ ವರ್ಗಗಳು ಉತ್ಪಾದನಾ ಕ್ಷೇತ್ರದ ಮೇಲೆ ಸಾಧಿಸುವ ನಿರ್ಣಾಯಕ ಹಿಡಿತವೆಂದೇ ಅರ್ಥ. ಹುಟ್ಟಿನಿಂದಾಗಿಯೇ ತನ್ನ ಬದುಕಿನ ಕಾಲಾವಧಿಯ ಉದ್ದಕ್ಕೂ ಸಾಮಾಜಿಕ ಮತ್ತು ಆರ್ಥಿಕ ಅಧಿಕಾರಗಳಿಲ್ಲದೆ ತುಟಿ ಕಚ್ಚಿ ಬದುಕಿ ಇಲ್ಲವಾಗುವ ಅನೇಕ ಜಾತಿ ಸಮುದಾಯಗಳು ಇಂದೂ ಇಂಡಿಯಾದಲ್ಲಿ ಜೀವಂತವಾಗಿವೆ. ಸಾವಿರಾರು ವರ್ಷಗಳ ಕಾಲ ಸಾಮಾಜಿಕ ಮತ್ತು ಸಾಂಸ್ಕೃತಿಕ ರಂಗದ ಯಜಮಾನರಾಗಿ ಈ ದೇಶದ ವಿಷಮತೆಯನ್ನು ಸಾಂಗೋಪಾಂಗವಾಗಿ ರಕ್ಷಿಸಿಕೊಂಡು ಬಂದವರು ಇನ್ನೂ ಆಳುವ ವರ್ಗವಾಗಿದ್ದುಕೊಂಡೇ ಭ್ರಮೆಗಳನ್ನು ಹಂಚುತ್ತಿದ್ದಾರೆ. ಈ ಭೂಮಿಯ ಯಾವುದೋ ನಿರ್ವಾತದಲ್ಲಿರುವ ಗ್ರಹವೊಂದರಲ್ಲಿ ಜೀವಸಂಕುಲವಿದೆಯೋ ಇಲ್ಲವೋ ಎಂದು ಶೋಧಿಸಲು ಮನುಷ್ಯ ಆಕಾಶವನ್ನು ಗುರಿ ಮಾಡಿ ಹಾರುತ್ತಿದ್ದರೆ, ಇಂಡಿಯಾದ ದನಿ ಇಲ್ಲದ ಸಮುದಾಯಗಳು ಈ ಹೊತ್ತಿನ ಊಟಕ್ಕೆ ಬೀದಿಗಳಲ್ಲಿ ಬೆವರಾಗಿ, ಪರಂಪರೆಯ ನಿಕೃಷ್ಟ ಕಸುಬುಗಳನ್ನೆ ಅವಲಂಬಿಸಿ ಬದುಕುತ್ತಿವೆ. ಈ ಸಮುದಾಯಗಳಿಗೆ ವರ್ತಮಾನದಲ್ಲಿ ವೃತ್ತಿಗಳನ್ನು ಬದಲಿಸಿಕೊಳ್ಳುವಷ್ಟು ಆತ್ಮ ವಿಶ್ವಾಸವಿಲ್ಲ. 'ಜಾತಿ ಪದ್ಧತಿಯಿಂದಾದ ಈ ವೃತ್ತಿ ವಿಭಾಗ ಅಥವಾ ಕೆಲಸಗಳ ನೇಮಕವು ಖಂಡಿತವಾಗಿ ವಿನಾಶಕಾರಿಯಾಗಿದೆ. ಉದ್ಯಮ ಎಂದೂ ನಿಂತ ನೀರಲ್ಲ. ಅದರಲ್ಲಿ ತೀವ್ರವಾದ ಹಾಗೂ ಆಕಸ್ಮಿಕವಾದ ಬದಲಾವಣೆಗಳಾಗುತ್ತಲೇ ಇರುತ್ತವೆ. ಹೀಗೆ ಬದಲಾವಣೆಗಳಾಗುತ್ತಿರುವಾಗ ವ್ಯಕ್ತಿಗೆ ತನ್ನ ವೃತ್ತಿಯನ್ನು ಬದಲಾಯಿಸುವ ಸ್ವಾತಂತ್ರ್ಯ ಅವಶ್ಯಕವಾಗುತ್ತದೆ. ಬದಲಾಗುವ ಪರಿಸ್ಥಿತಿಗೆ ಹೊಂದಿಕೊಳ್ಳುವ ಸ್ವಾತಂತ್ರ್ಯವಿಲ್ಲದಿದ್ದರೆ ಅವನಿಗೆ ಜೀವನೋಪಾಯವೇ ಅಸಾಧ್ಯವಾಗುವುದು. ಜಾತಿ ಪದ್ಧತಿಯಲ್ಲಿ ಇಂತಹ ಸ್ವಾತಂತ್ರ್ಯವಿಲ್ಲ. ತನ್ನ ಜಾತಿಗೆ ಹೊಸದಾದ ವೃತ್ತಿಯನ್ನು ಕೈಗೊಳ್ಳುವ ಬದಲಾಗಿ, ಉಪವಾಸ ಬೀಳುವುದೇ ಹಿಂದೂವಿನ ಗತಿಯಾಗಿದ್ದರೆ, ಅದಕ್ಕೆ

ಮೂಲಕಾರಣ ಜಾತಿಯೇ ಆಗಿದೆ '[೧೬] ಎನ್ನುತ್ತಾರೆ ಅಂಬೇಡ್ಕರ್. ಅಂದರೆ ಜಾತಿ ವ್ಯವಸ್ಥೆಯ ಆಚರಣೆಯು ಅಂತಿಮವಾಗಿ ಒಂದು ವ್ಯವಸ್ಥಿತ ಆರ್ಥಿಕ ವಂಚನೆಯೇ ಆಗಿದೆ. ಯಾವುದೇ ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ರಂಗದ ಆತ್ಮಪ್ರತ್ಯಯವನ್ನು ನಾಶ ಮಾಡಬೇಕೆಂದರೆ, ಮೊದಲು ಆ ಸಮುದಾಯದ ಆರ್ಥಿಕ ಸ್ವಾವಲಂಬನೆಯನ್ನು ನಾಶ ಮಾಡಬೇಕಾಗುತ್ತದೆ. ಇಂಡಿಯಾದ ಜಾತಿ ಶ್ರೇಣೀಕರಣ ಶತಮಾನಗಳಿಂದ ಈ ಕೆಲಸವನ್ನು ಜತನದಿಂದ ಮಾಡಿಕೊಂಡು ಬಂದಿದೆ. ಈ ಕಾರಣಕ್ಕಾಗಿ ಜಗತ್ತಿನ ಎಲ್ಲ ಬಗೆಯ ಅಸಮಾನತೆಗಳಿಗಿಂತ, ಶೋಷಣೆಗಳಿಗಿಂತ ಇಂಡಿಯಾದ ಸಾಮಾಜಿಕಾರ್ಥಿಕ ರಂಗದ ವಿಷಮತೆ ಮತ್ತು ಶೋಷಣೆಯ ಆಯಾಮಗಳು ಅತ್ಯಂತ ಕ್ರೂರವಾದವುಗಳು.

ಜಾಗತೀಕರಣದ ಈ ಹೊತ್ತು ಜಗತ್ತಿನ ಎಲ್ಲ ಸಮುದಾಯಗಳು ಆರ್ಥಿಕ ಸ್ವಾವಲಂಬನೆಯ ಮೂಲಕ ತಮ್ಮ ಬದುಕಿಗೆ ಆತ್ಮಪ್ರತ್ಯಯವನ್ನು ತಂದುಕೊಳ್ಳುವತ್ತ ಹೆಜ್ಜೆ ಹಾಕುತ್ತಿವೆ. ಮನುಷ್ಯ 'ದೇವರನ್ನೇ' ನಿಬ್ಬೆರಗಾಗಿಸುವ ಸಾಧನೆಗಳನ್ನು ಮಾಡುತ್ತ ಅಚ್ಚರಿಗಳನ್ನು ಸೃಷ್ಟಿಸುತ್ತಿದ್ದಾನೆ. ಔದ್ಯೋಗಿಕ ರಂಗದಲ್ಲಿ ರೂಪುಗೊಂಡ ಉದ್ಯೋಗಾವಕಾಶಗಳನ್ನು ಪಡೆಯುವತ್ತ ಸಮುದಾಯಗಳು ವೇಗವಾಗಿ ಹೆಜ್ಜೆ ಇರಿಸುತ್ತಿವೆ. ಸಮುದಾಯಗಳ ಪರಂಪರೆಯ ಕುರುಹುಗಳು ಇಲ್ಲವಾಗುತ್ತಾ ಹೋಗುತ್ತಿವೆ. ದಿನ ಬೆಳಗಾದರೆ ಈ ಭೂಮಿಯ ಮೇಲೆ ಮನುಷ್ಯ ಅದ್ಭುತಗಳನ್ನು ಎತ್ತಿ ನಿಲ್ಲಿಸುತ್ತಿದ್ದಾನೆ. ಸುಖದ ಆಯಾಮಗಳು ಮನುಷ್ಯನ ಬದುಕನ್ನು ಆವರಿಸಿಕೊಳ್ಳುತ್ತಿವೆ. ಆದರೆ ಇಂಡಿಯಾದಲ್ಲಿ ಸಾವಿರ ವರ್ಷಗಳ ಹಿಂದಿನ ಸಮಾಜ ಇನ್ನೂ ಜೀವಂತವಾಗಿರುವ ವೈರುಧ್ಯ ಕಣ್ಣಿಗೆ ಎದ್ದು ಕಾಣುತ್ತಿದೆ. ಒಂದೆಡೆ ಜಗತ್ತಿನ ಅನಂತ ಸುಖಗಳನ್ನು ಅನುಭವಿಸುವ ಕಾರ್ಪೋರೇಟ್ ಜಗತ್ತು ಬದುಕುತ್ತಿದ್ದರೆ, ಅದರ ಕೂಗಳತೆಯ ದೂರದಲ್ಲಿ ಗವಿಗಳಲ್ಲಿ ವಾಸಿಸುತ್ತಾ ಗಡ್ಡೆಗೆಣಸುಗಳನ್ನು ತಿನ್ನುತ್ತಾ ಬದುಕುತ್ತಿರುವ ಆದಿವಾಸಿ ಸಮುದಾಯಗಳು ಅಸ್ತಿತ್ವದಲ್ಲಿವೆ. ಇದು ದೇಶವೊಂದರ ಸಮಾಜದ ಅಮಾನವೀಯ ಮತ್ತು ಅನೈಸರ್ಗಿಕ ಬೆಳವಣಿಗೆ. ಇದು ಇಂಡಿಯಾದಂತಹ ಪಾರಂಪರಿಕ ಸಮಾಜದಲ್ಲಿ ಸಹಜವಾಗಿಯೇ ಮೈದಾಳಿಬಿಡುವ ವೈರುಧ್ಯವೂ ಹೌದು.

ಭಾರತದಲ್ಲಿ ಒಂದು ಜಾತಿಯೆಂದರೆ, ಶ್ರಮ ವಿಭಜನೆಯ ಆಧಾರದಲ್ಲಿ ರೂಪುಗೊಂಡ ಒಂದು ಉತ್ಪಾದನಾ ಘಟಕ. ಪ್ರತಿಯೊಂದು ಜಾತಿ ಒಂದು ಸ್ವಯಂಪೂರ್ಣ ಉತ್ಪಾದನಾ ಘಟಕವಾಗಿ ತನ್ನ ಅಸ್ತಿತ್ವವನ್ನು ಸದಾ ಕಾಯ್ದುಕೊಳ್ಳುತ್ತಲೇ ಬಂದಿದೆ. ಜಾತಿಯೊಂದು ತನ್ನ ಆಚರಣೆ, ಲಾಂಛನ, ಭಾಷೆ ಇವುಗಳ ಮೂಲಕ ಭಾವನಾತ್ಮಕವಾಗಿ ತನ್ನ ಅಸ್ತಿತ್ವವನ್ನು ನಿಖರಗೊಳಿಸಿಕೊಳ್ಳುತ್ತಲೇ ಬಂದಿದೆ. ತಾನು ಅನುಸರಿಸುವ ಕಸುಬಿನಿಂದಾಗಿ ಒಂದು ಸಾಮಾಜಿಕ ಗುಂಪು ಸ್ವಯಂಪೂರ್ಣವಾಗಿ ಇನ್ನೊಂದು ಜಾತಿ ಸಮುದಾಯದಿಂದ ಅನೇಕ ಬಗೆಗಳಲ್ಲಿ ಭಿನ್ನವಾಗಿ ನಿಲ್ಲಲು ಯತ್ನಿಸುತ್ತದೆ. ಈ ಬಗೆಯ ಸ್ವಯಂಪೂರ್ಣತೆಯ ಮತ್ತು ಅನನ್ಯತೆಯ ಕಾಳಜಿಗಳು ಸಮುದಾಯದ ಬದುಕಿನ ಒಟ್ಟಾರೆ ಚಲನಶೀಲತೆಯ ಭಾಗವಾಗಿರದೆ, ಈ ಶ್ರೇಣೀಕರಣದ ರಾಜಕೀಯ ಒತ್ತಡಗಳಿಂದಲೂ ರೂಪುಗೊಂಡಂತವುಗಳು. ಎಷ್ಟೋ ಸಲ ಅನನ್ಯತೆಯ ಕುರಿತ ಬಿಕ್ಕಟ್ಟು ಬಾಹ್ಯ ಜಗತ್ತಿನ ಒತ್ತಡಗಳ ಕಾರಣಕ್ಕೆ ಸಮುದಾಯಗಳನ್ನು ಕಾಡುತ್ತಲೇ ಇರುತ್ತದೆ. ಈ ಬಿಕ್ಕಟ್ಟಿನ ಕಾರಣಕ್ಕಾಗಿಯೇ ಭಾರತದ ಉತ್ಪಾದಕ ಶಕ್ತಿಗಳ ಸಾಮಾಜಿಕಾರ್ಥಿಕ ಸ್ಥಿತಿಗತಿಗಳಲ್ಲಿ ಕ್ರಾಂತಿಕಾರಕ

ಬದಲಾವಣೆಗಳು ಸಂಭವಿಸಲಿಲ್ಲ. ಕಾಲದಿಂದ ಕಾಲಕ್ಕೆ ಈ ದೇಶವನ್ನು ನಿಯಂತ್ರಿಸಿದ ಆಳುವ ವರ್ಗ ರೂಪಾಂತರಗೊಂಡಂತೆ ಇಲ್ಲಿನ ದುಡಿವ ವರ್ಗಗಳ ಜೀವನ ವಿಧಾನಗಳೂ ಬದಲಾಗುತ್ತಲೇ ಬಂದವು. ಆದರೆ ದುಡಿವ ವರ್ಗದ, ಕೆಳಜಾತಿಗಳ ರಾಜಕೀಯಾರ್ಥಿಕ ಬದುಕಲ್ಲಿ ಅಗಾಧ ಬದಲಾವಣೆಗಳು ಸಂಭವಿಸಲಿಲ್ಲ. ಈ ಕಾರಣದಿಂದ ಭಾರತದ ಕೆಳಜಾತಿಗಳು ತಮ್ಮ ಸಾಮಾಜಿಕ ಸ್ಥಿತಿಗತಿಗಳನ್ನು ಪರಂಪರೆಯ ಅವಶೇಷವೋ ಎಂಬಂತೆ ಅನಿವಾರ್ಯವಾಗಿ ಒಪ್ಪಿಕೊಂಡು ಬಂದಿವೆ. ಅದರಲ್ಲಂತೂ ಅಲೆಮಾರಿಗಳು ಈ ದೇಶದ ಒಟ್ಟಾರೆ ಚರಿತ್ರೆಯ ಅನೂಹ್ಯ ಕಾಲಘಟ್ಟದಲ್ಲಿ ಬದುಕುತ್ತಿರುವಂತೆ ಭಾಸವಾಗುತ್ತಿದೆ.

ಸಾಮಾಜಿಕವಾಗಿ ಅಲೆಮಾರಿಗಳು ಯಾವತ್ತೂ ಉನ್ನತೀಕರಣಗೊಳ್ಳದಂತೆ ನಿಯಂತ್ರಿಸಿದ್ದು ಅವರ ಆರ್ಥಿಕ ಅವಲಂಬನೆ. ಆರ್ಥಿಕವಾಗಿ ಯಾವತ್ತೂ ಪರಾವಲಂಬಿಯಾಗಿದ್ದ ಅಲೆಮಾರಿಗಳು ಸಾಮಾಜಿಕವಾಗಿ ಅವಶೇಷಗಳ ಮಾದರಿಯಲ್ಲಿ ಬದುಕಿ ಬಂದಿದ್ದಾರೆ. ಕಾರಣ ಈ ದೇಶದ ಆರ್ಥಿಕ ಚರಿತ್ರೆಯ ಒಟ್ಟಾರೆ ಬೆಳವಣಿಗೆಯ ಒಂದು ಹಂತದಲ್ಲಿ ಜಡವಾಗಿ ನೆಲೆಯೂರಿದ ಅಲೆಮಾರಿ ಸಮುದಾಯಗಳು, ಈ ದೇಶದ ಸಮಾಜದ ಬೆಳವಣಿಗೆಯ ಓಘದಲ್ಲಿ ಸುಲಲಿತವಾಗಿ ಹರಿದು ಬದಲಾಗಲಿಲ್ಲ. ಇದರಿಂದಾಗಿ ಒಮ್ಮೊಮ್ಮೆ ಈ ಅಲೆಮಾರಿಗಳು ಎಷ್ಟೋ ಶತಮಾನಗಳ ಹಿಂದೆ 'ವಿಕಾಸವಾಗದ ಹಂತದಲ್ಲಿಯೇ' ಬದುಕುತ್ತಿದ್ದಾರೆ ಎಂದೆನ್ನಿಸಿಬಿಡುತ್ತದೆ. ಒಂದು ನಿಶ್ಚಿತ ಸಮುದಾಯಕ್ಕೆ ಸಾಮಾಜಿಕ, ರಾಜಕೀಯ ಸಮಗ್ರತೆ ಮತ್ತು ಚಹರೆಗಳು, ರೂಪುಗೊಳ್ಳುವುದು ಆ ಸಮುದಾಯ ಯಾವ ಬಗೆಯ ಉತ್ಪಾದನೆಯಲ್ಲಿ ತೊಡಗಿದೆ ಎಂಬುದನ್ನು ಅವಲಂಬಿಸಿರುತ್ತದೆ. ಅಲೆಮಾರಿಗಳ ಒಟ್ಟಾರೆಯ ಆರ್ಥಿಕತೆಯು ಈ ದೇಶದ ಊಳಿಗಮಾನ್ಯ ಮತ್ತು ಅರೆ ಊಳಿಗಮಾನ್ಯ ವ್ಯವಸ್ಥೆಯನ್ನು ಇಡಿಯಾಗಿ ಅವಲಂಬಿಸಿದ ಕಾರಣಕ್ಕೆ ಈ ಸಮುದಾಯಗಳ ಸಾಮಾಜಿಕ ವ್ಯವಸ್ಥೆಯಲ್ಲಿ ಭಾರೀ ಬದಲಾವಣೆಗಳು ಸಂಭವಿಸಲಿಲ್ಲ. ಡೊಂಬರೂ ಈ ದೇಶದ ಆರ್ಥಿಕತೆಯ ಎಲ್ಲ ಹಂತಗಳನ್ನೂ ದಾಟಿ ಬಂದಿದ್ದರೂ ಸಹ ಇಂದಿಗೂ ಅಲೆಮಾರಿಗಳಾಗಿ, ಅರೆಅಲೆಮಾರಿಗಳಾಗಿ ಬದುಕುತ್ತಿದ್ದಾರೆ.

ಡೊಂಬರೆಂದರೆ ಯಾರು ?

ಡೊಂಬ ಪದ ನಿಷ್ಪತ್ತಿ

ಡೊಂಬರೆಂದರೆ ಡೊಂಬರಾಟವಾಡುವವರು. ಬೀದಿ ಬಿದಿಯಲ್ಲಿ, ಚಿಕ್ಕ ಮೈದಾನದಲ್ಲಿ ತಾತ್ಕಾಲಿಕ ರಂಗವನ್ನು ಸಿದ್ಧಪಡಿಸಿ ತಮ್ಮ ಕಸರತ್ತುಗಳನ್ನು ಪ್ರದರ್ಶಿಸುವವರು ಮತ್ತು ಊರಿಂದ ಊರಿಗೆ ತಿರುಗುತ್ತಾ ಈ ಪ್ರದರ್ಶನ ಕಲೆಯನ್ನು ನಂಬಿಯೇ ಬದುಕುತ್ತಿರುವವರು. ಮತ್ತು ಈ ದೇಶದ ಶ್ರೇಣೀಕರಣದಲ್ಲಿ ಕೆಳಜಾತಿಗಳೆಂದು ಪರಿಗಣಿತರಾದವರು. ಇದು ಡೊಂಬರ ಕುರಿತ ಸರಳ ವಿವರಣೆ ಮಾತ್ರ. ಡೊಂಬರ ಸಮುದಾಯ ಕರ್ನಾಟಕದಾದ್ಯಂತ ಏಕರೂಪವಾಗಿಲ್ಲ. ಹಲವು ಹತ್ತು ವೃತ್ತಿಗಳಲ್ಲಿ ತೊಡಗಿಕೊಂಡಿದೆ. ಅಲ್ಲಲ್ಲಿ ಕೆಲವರು ನೆಲೆ ನಿಂತಿದ್ದಾರೆ. ಕೆಲವರು ಆರ್ಥಿಕ ಮೂಲಗಳನ್ನು ಹುಡುಕಿಕೊಂಡು ಹೋಗುವ ಅರೆಅಲೆಮಾರಿಗಳಾಗಿದ್ದಾರೆ. ಮತ್ತೆ ಕೆಲವರು ತಮ್ಮ ಪ್ರದರ್ಶನ ಕಲೆಯನ್ನು ಅವಲಂಬಿಸಿ ಅಲೆಮಾರಿಗಳಾಗಿಯೂ ಬದುಕುತ್ತಿದ್ದಾರೆ. ಜೊತೆಗೆ ಕರ್ನಾಟಕದ ವಿವಿಧ ಭಾಗಗಳಲ್ಲಿನ ಡೊಂಬರು ತಾವು

ಬದುಕಿರುವ ಪ್ರಭಾವಿ ಸಮಾಜದ ಸಂಪರ್ಕದಿಂದ ಭಿನ್ನ ಸಂಸ್ಕೃತಿಯನ್ನೂ ರೂಢಿಸಿಕೊಂಡಿದ್ದಾರೆ. ಜೊತೆಗೆ ವಿವಿಧ ವೃತ್ತಿಗಳಲ್ಲಿಯೂ ತೊಡಗಿಕೊಂಡಿದ್ದಾರೆ. ಆದರೆ ಇವರ ಸಾಮಾಜಿಕ ಸ್ಥಾನಮಾನ ಮಾತ್ರ ಉತ್ತಮಗೊಂಡಿಲ್ಲ. ಸಮಾಜದ ಅಂಚಿನ ಸಮುದಾಯವಾಗಿಯೇ ಇದು ಬದುಕುತ್ತಿದೆ. ಡೊಂಬರನ್ನು ಕುರಿತ ಅಧ್ಯಯನಗಳು ಮತ್ತು ಶಾಸ್ತ್ರೀಯ ವಿಶ್ಲೇಷಣೆಯು ವಸಾಹತು ಸಂದರ್ಭದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ನಡೆದ ಅಧ್ಯಯನಗಳಲ್ಲಿ ಡೊಂಬರನ್ನು ಕುರಿತ ಕೆಲವು ವ್ಯಾಖ್ಯಾನಗಳನ್ನು ನೋಡಬಹುದಾಗಿದೆ.

ಮೊದಲಿಗೆ ಮೈಸೂರು ಭಾಗದ ಸಮುದಾಯಗಳನ್ನು ಅಧ್ಯಯನ ಮಾಡಿದ ಎಚ್.ವಿ.ನಂಜುಡಯ್ಯನವರ ವಿವರಣೆಯನ್ನು ನೋಡಬಹುದಾಗಿದೆ.

ಎಚ್ ವಿ ನಂಜುಂಡಯ್ಯ ಅವರು ಡೊಂಬರನ್ನು ಹೀಗೆ ವಿವರಿಸುತ್ತಾರೆ.

‘ಡೊಂಬರು ಒಂದು ಅಲೆಮಾರಿ ಬುಡಕಟ್ಟು. ಈ ತರಹ ಅನೇಕ ಅಲೆಮಾರಿ ಬುಡಕಟ್ಟುಗಳು ಇಲ್ಲಿವೆ. ಅವುಗಳಲ್ಲಿ ಡೊಂಬರೂ ಒಂದು ಅಲೆಮಾರಿ ಬುಡಕಟ್ಟು ಸಮುದಾಯವಾಗಿದೆ. ಡೊಂಬರು ಸಹಜವಾಗಿಯೇ ಈಚೆಗೆ ಪಟ್ಟಣ ಮತ್ತು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. ಮೂಲತಃ ಇವರು ಕಸರತ್ತು ಮತ್ತು ಡೊಂಬರಾಟ ಮಾಡುವವರಾಗಿದ್ದಾರೆ.

‘ಡೊಂಬರ’ ಪದದ ಅರ್ಥವು ಇನ್ನು ನಿಷ್ಕರ್ಷೆಯಾಗಿಲ್ಲ. ಕೆಲವರು ಉತ್ತರ ಭಾರತದಲ್ಲಿ ನೆಲೆಸಿರುವ ‘ಡೊಂಬ’ ಎಂಬ ಜಾತಿಯಿಂದ ಇವರು ಆಚೆ ಬಂದವರು ಎಂದು ಊಹಿಸುತ್ತಾರೆ. ಇವರು ಜಾಡಮಾಲಿಗಳು ಮತ್ತು ದಿಕ್ಕಿಲ್ಲದ, ಇಲ್ಲವೆ ಬಡವರ ಶವಗಳನ್ನು ಸಾಗಿಸಲು ನೇಮಿಸಲ್ಪಟ್ಟವರು. ಜೊತೆಗೆ ಇವರಿಗೆ ದಕ್ಷಿಣದಲ್ಲಿ ಮಾದಿಗರ ಜೊತೆ ಸಂಪರ್ಕ ಬೆಳೆಯಿತು. ಆದರೆ ಮಾದಿಗರಿಗೆ ಹೋಲಿಸಿದರೆ ಡೊಂಬರು ಸಮಾಜದಲ್ಲಿ ಒಳ್ಳೆಯ ಸ್ಥಾನಮಾನಗಳನ್ನು ಪಡೆದರು. ಡೊಂಬರು ಒಂದು ತೆಲುಗು ಸಮುದಾಯವಾಗಿದೆ. ರಾಜ್ಯಕ್ಕೆ ಇವರು ಕರ್ನೂಲು ಮತ್ತು ನೆಲ್ಲೂರು ಜಿಲ್ಲೆಗಳಿಂದ ವಲಸೆ ಬಂದಿದ್ದಾರೆ.

ಡೊಂಬರು ಸಾರ್ವಜನಿಕ ಸ್ಥಳದಲ್ಲಿ ಪ್ರದರ್ಶನ ನೀಡುವ ಸಂದರ್ಭದಲ್ಲಿ ಚರ್ಮವಾದ್ಯಗಳನ್ನು ಜೋರಾಗಿ ಬಾರಿಸುತ್ತ ಜನರ ಮತ್ತು ನೋಡುಗರ ಗಮನ ಸೆಳೆಯುತ್ತಾರೆ. ಈ ತರಹ ಗಲಾಟೆ ಮಾಡುವುದನ್ನು ಕನ್ನಡದಲ್ಲಿ ‘ದೊಂಬಿ ಅಥವಾ ಡೊಂಬಿ’ ಎಂಬು ಕರೆಯಲಾಗುತ್ತದೆ. ಈ ದೊಂಬಿ ಎಂಬ ಪದದಿಂದ ‘ಡೊಂಬರ’ ಎಂಬ ಜಾತಿಯ ಹೆಸರು ಬಂದಿತು ಎಂದು ಹೇಳಲಾಗುವುದಿಲ್ಲ.

ಇವರನ್ನು ‘ಡೊಂಬರು’ ಎಂದು ಕರೆಯಲಾಗುತ್ತದೆ. ಆದರೆ ಈ ಪದ ‘ಡೊಮ್ಮರು’ ಎಂಬ ಮೂಲ ಪದದಿಂದ ಬಂದದ್ದಾಗಿದೆ. ‘ಡೊಂಬರ’ ಎಂಬುದು ಈ ಜಾತಿಯ ಮೂಲ ಹೆಸರಾಗಿದೆ’[೧೭].

ಎಡ್ಗರ್ ಥರ್ಸಟನ್ ಅವರ Castes & Tribes of Southern India, ಕೃತಿಯಲ್ಲಿ ಡೊಂಬರ ಕುರಿತ ವಿವರಗಳು ಈ ರೀತಿಯಾಗಿವೆ.

‘ಡೊಂಬ ಅಥವಾ ಡೊಂಬೊ ಎಂಬ ಪದವು ‘ದುಂಬಾ’ ಎಂಬ ಮೂಲ ಪದದಿಂದ ಹುಟ್ಟಿದೆ. ‘ದುಂಬಾ’ ಎಂದರೆ ‘ದೆವ್ವ’ ಎಂದರ್ಥ. ಇದು ಕಳ್ಳತನವನ್ನು ರೂಢಿಸಿಕೊಂಡಿರುವ ಒಂದು ಸಮುದಾಯದ ಹೆಸರೂ ಹೌದು[೧೮].

ಎಚ್.ಎ.ಸ್ಟುವರ್ಟ್ ಹೇಳುವಂತೆ 'ಡೊಂಬರು ಮೂಲತಃ ದ್ರಾವಿಡಿಯನ್ ಸಮುದಾಯವಾಗಿದ್ದು, ಇವರು ನೇಕಾರಿಕೆ ಮತ್ತು ಮನೆಗೆಲಸ ಮಾಡುತ್ತ ವಿಶಾಖಪಟ್ಟಣದ ಬೆಟ್ಟ ಪ್ರದೇಶದಲ್ಲಿ ಕಾಣಸಿಗುತ್ತಾರೆ. ಈ ಡೊಂಬರು ಬೆಂಗಾಳ್, ಬಿಹಾರ್ ಮತ್ತು ವಾಯುವ್ಯ ಭಾರತದ 'ಡೋಮ್' ಜಾತಿಯ ಉಪಶಾಖೆಯಂತೆ ಕಂಡುಬರುತ್ತಾರೆ. ಉತ್ತರ ಭಾರತದಲ್ಲಿ 'ಡೋಮರ್' ಸಮುದಾಯವನ್ನು ಅತ್ಯಂತ ಕ್ಷುದ್ರವಾಗಿ ಕಾಣಲಾಗುತ್ತದೆ. ಇಲ್ಲಿಯೂ ಡೊಂಬರನ್ನು ಹಾಗೆಯೇ ಕಾಣಲಾಗುತ್ತದೆ. ಏಕೆಂದರೆ ಇವರು ದನ, ಹಂದಿ, ಕುದುರೆ ಮತ್ತು ಇಲಿಗಳ ಮಾಂಸವನ್ನು ಮತ್ತು ಸತ್ತ ಇತರ ಪ್ರಾಣಿಗಳ ಮಾಂಸವನ್ನು ತಿನ್ನುತ್ತಾರೆ. ಉರಿಯಾಗಳು ಮತ್ತು ಬಂಗಾಳಿಗಳು ಇವರನ್ನು 'ಚಾಂಡಾಲ'ರು ಎಂದು ಕರೆಯುತ್ತಾರೆ. ಡೊಂಬರು ಪರ್ವತವಾಸಿಗಳು ಧರಿಸುವ ಬಟ್ಟೆಗಳನ್ನು ಮತ್ತು ಚದಾರಗಳನ್ನು ನೇಯುತ್ತಾರೆ. ಆದರೆ ಇವರು ಪರಿಯಾಗಳಂತೆ ಕೂಲಿಗಳು ಮತ್ತು ಜಾಡಮಾಲಿಗಳು. ಆದರೆ ಕೆಲವು ಡೊಂಬರು ಚಿಕ್ಕಪುಟ್ಟ ವ್ಯಾಪಾರ ಮಾಡುತ್ತಾರೆ. ಅಲ್ಲದೆ ತಮ್ಮನ್ನು ಶೋಷಣೆ ಮಾಡಿದ ಮತ್ತು ನಿಕೃಷ್ಟವಾಗಿ ಕಂಡ ಜನಕ್ಕಿಂತ ಹೆಚ್ಚು ತಿಳುವಳಿಕೆಯನ್ನು ಹೊಂದಿದ್ದಾರೆ. ಇವರು ಮಹಾನ್ ಕುಡುಕರು. ೧೮೭೧ ರ ಜನಗಣತಿ ವರದಿ ಪ್ರಕಾರ, ಬಹುತೇಕ ಹಳ್ಳಿಗಳಲ್ಲಿ ಡೋಮರು ನೇಕಾರಿಕೆ ವೃತ್ತಿಯನ್ನು ಅವಲಂಬಿಸಿದ್ದಾರೆ. ಆದರೆ ಜೈಪುರ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಇವರು ಕುದುರೆಗಳನ್ನು ಪಾಲನೆ ಮಾಡುವುದಕ್ಕೆ ನೇಮಕಗೊಳ್ಳುತ್ತಾರೆ. ಜೊತೆಗೆ ತಳವಾರರಾಗಿ, ಜಾಡಮಾಲಿಗಳಾಗಿ ಮತ್ತು ಮನೆಗೆಲಸದ ಕೂಲಿಗಳಾಗಿ ಬದುಕುತ್ತಿದ್ದಾರೆ. ಸಮಾಜದಲ್ಲಿ ಇವರ ಸ್ಥಿತಿಗತಿ ಹೇಳಿಕೊಳ್ಳುವಂತಹ ಮಟ್ಟದಲ್ಲಿಲ್ಲ. ಆದರೆ ಒಟ್ಟಾರೆಯಾಗಿ ಇವರು ನಿಧಾನಗತಿಯಲ್ಲಿ ಸುಧಾರಿಸುತ್ತಿದ್ದಾರೆ. ತಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಲು ಇವರು ಪರ್ಯಾಯ ವೃತ್ತಿಗಳನ್ನು ಅವಲಂಬಿಸಲು ಹಾತೊರೆಯುತ್ತಿದ್ದಾರೆ. ಚಿಲ್ಲರೆ ವ್ಯಾಪಾರದಲ್ಲಿ ತೊಡಗಿ ಪ್ರದೇಶದಿಂದ ಪ್ರದೇಶಕ್ಕೆ ಸಂಚರಿಸುತ್ತಾ ದುಡಿಮೆಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ'[೯].

ಎಫ್. ಫಾಸೆಟ್ ಹೇಳುವಂತೆ 'ಡೊಂಬರು ಕೆಳಜಾತಿಯ ಕಾಡು ಜನ, ಇವರು ವಿಶಾಖಪಟ್ಟಣದ ಪೂರ್ವ ಕರಾವಳಿ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಇವರು ಕೆಳಜಾತಿಯವರಾದ್ದರಿಂದ ಇವರಿಗೆ ಗ್ರಾಮಗಳಲ್ಲಿ ವಾಸಿಸಲು ಅವಕಾಶವಿಲ್ಲ. ಆದರೆ ಮೇಲ್ಜಾತಿಯ ಜನ ವಾಸಿಸುವ ಗ್ರಾಮಗಳ ಹೊರವಲಯದಲ್ಲಿಯೇ ಇವರು ತಮ್ಮ ಗುಡಿಸಲುಗಳನ್ನು ಕಟ್ಟಿಕೊಳ್ಳುತ್ತಾರೆ. ಡೊಂಬರು, 'ಪಾನೋ' ಪಂಗಡದ ಉಪಪಂಗಡವೆಂದು ಹೇಳಬಹುದು. ಇವರು 'ಕೋಂಡ್' ಪ್ರದೇಶದಲ್ಲಿ ಹೆಚ್ಚಾಗಿ ವಾಸಿಸುತ್ತಾರೆ. 'ದಲಿಯಾ' ಇವರೂ ಕೋಂಡ್ ಪ್ರದೇಶದಲ್ಲಿ ವಾಸಿಸುತ್ತಾರೆ. ಇವರು 'ಮೆಹರಿಯಾ ನರಬಲಿಗೆ' ಬಲಿಯಾಗುವ ಜನಾಂಗವಾಗಿದ್ದಾರೆ. 'ಕೋಂಡ್' ಆದಿವಾಸಿಗಳು ಇವರನ್ನು ಅತ್ಯಂತ ನಿಕೃಷ್ಟವಾಗಿ ಕಾಣುತ್ತಾರೆ. ಅಲ್ಲದೆ ಡೊಂಬರನ್ನು 'ಪಾನೋ' ಎಂಬ ಪರ್ಯಾಯ ಪದದಿಂದಲೂ ಕರೆಯುತ್ತಾರೆ. ಸವರ್ ಅಥವಾ ಸೋರಾ ಪ್ರದೇಶದ ಪೈದಿಗಳನ್ನು ಡೊಂಬರ ಕುಲಸಂಬಂಧಿಗಳೆಂದು ಪರಿಗಣಿಸಲಾಗುತ್ತದೆ. (ಇದೇ ಜನಾಂಗವನ್ನು ತೆಲುಗರು 'ಪೈದಿ'ಗಳೆಂದು, ಸವರ್‌ಗಳಿಂದ 'ಡೊಂಬೋ' ಎಂದು, ಕೋಂಡ್ ಆದಿವಾಸಿಗಳ 'ಪಾನೋ' ಎಂದು ಕರೆಯುತ್ತಾರೆ. ೧೮೮೧ರ ಜನಗಣತಿಯಲ್ಲಿ ಉಲ್ಲೇಖವಾಗಿರುವಂತೆ, ಕೋಂಡ್ ಆದಿವಾಸಿಗಳ ವಾಸಸ್ಥಳಗಳ ಬಳಿ ಇರುವ ಪಾನೋ

ಸಮುದಾಯದ ಜನರ ಹಟ್ಟಗಳನ್ನು 'ಡೊಂಬೋ ಸಾಯಿ' ಎಂದು ಕರೆಯಲಾಗುತ್ತದೆ) ಇವರು ನಿಜಕ್ಕೂ ಅತ್ಯಂತ ಕಡುಬಡತನದಿಂದ ಬದುಕುತ್ತಿದ್ದಾರೆ. ಈ ಪ್ರಾಂತ್ಯದ ಅತ್ಯಂತ ಶ್ರೀಮಂತ ಪ್ರದೇಶದಲ್ಲಿ ಬದುಕುತ್ತಿದ್ದರೂ ಇವರಿಗೆ ಬಡತನ ತಪ್ಪಿಲ್ಲ. ಇವರಿಗೆ ಬೇಟೆಯಾಡಲು ಬರುವುದಿಲ್ಲ. ಬಿಲ್ಲು ಬಾಣಗಳ ಉಪಯೋಗವಂತು ಗೊತ್ತೇ ಇಲ್ಲ. ಇವರಲ್ಲಿ ಕೆಲವರು ನೇಕಾರರಾಗಿ, ಬಡ್ಡಿವ್ಯಾಪಾರಿಗಳಾಗಿ ಈ ಗುಡ್ಡಗಾಡು ಪ್ರದೇಶದಲ್ಲಿ ಬದುಕುತ್ತಿದ್ದಾರೆ. ಕೆಲವರು ಕೋಂಡ, ಸವರ್ಸ್ ಮತ್ತು ಗಡಬ ಮುಂತಾದ ಆದಿವಾಸಿಗಳಿಗೂ ಮತ್ತು ನಾಗರಿಕ ಜಗತ್ತಿನ ವ್ಯಾಪಾರಿಗಳಿಗೂ ನಡುವೆ ಮಧ್ಯವರ್ತಿಗಳಾಗಿ ಕೆಲಸ ಮಾಡುತ್ತಿದ್ದಾರೆ. ನನಗೆ ಬಂದ ಮಾಹಿತಿಯ ಪ್ರಕಾರ, ಡೊಂಬರು ನುರಿತ ಕಳ್ಳರೂ ಹೌದು. ಕಳ್ಳತನ ಅವರಿಗೆ ರೂಢಿಯಾಗಿ ಬಿಟ್ಟಿದೆ. ಕಳ್ಳತನ ಮಾಡಿ ಸಿಕ್ಕಿಕೊಂಡ ನೂರಾರು ಜನ ಡೊಂಬರನ್ನು ನಾನು ವಿಶಾಖಪಟ್ಟಣದ ಜೈಲಿನಲ್ಲಿ ಬೇಟಿಯಾಗಿದ್ದೇನೆ'[೨೨]. ಎನ್ನುತ್ತಾನೆ ಫಾಸೆಟ್. ಎಚ್ ವಿ ನಂಜುಂಡಯ್ಯ ಮತ್ತು ಅನಂತ ಕೃಷ್ಣ ಅಯ್ಯರ್ ಅವರ ಪ್ರಕಾರ

'ಡೊಂಬರು ಮೂಲತಃ ಅಲೆಮಾರಿಗಳು, ಕೊರಚರು ಮುಂತಾದ ಅಲೆಮಾರಿಗಳಂತೆ ಡೊಂಬರೂ ಸಹ ಅಲ್ಲಲ್ಲಿ ಪಟ್ಟಣ ಮತ್ತು ಹಳ್ಳಿಗಳಲ್ಲಿ ನೆಲೆ ನಿಲ್ಲಲು ಯತ್ನಿಸುತ್ತಿದ್ದಾರೆ. ಡೊಂಬರು ಮೂಲತಃ ಕಸರತ್ತಿನವರು ಮತ್ತು ತಮ್ಮ ಪ್ರದರ್ಶನ ಕಲೆಯನ್ನು ನಂಬಿ ಬದುಕುವವರು.

ನಾವು ಇತ್ತೀಚಿಗೆ ಕರೆಯುವ 'ಡೊಂಬರ್'(Dombar) ಎಂಬ ಪದವು ಹಳೆಯ 'ಡೊಂಬರು'(Dombaru) ಅಥವಾ ದೊಮ್ಮರ(Dommara) ಎಂಬ ಪದದಿಂದ ಬಂದಿದೆ. ಈ ರಾಜ್ಯದಲ್ಲಿ ಅವರಿಗೆ ಬೇರೆ ಹೆಸರುಗಳಿಲ್ಲ. ವಿಶಾಖಪಟ್ಟಣ ಜಿಲ್ಲೆಯಲ್ಲಿ ಅವರನ್ನು ಈಟೇವಾಳ್ಳು(Itevallu) ಎಂದು ಕರೆಯಲಾಗುತ್ತದೆ. ಈ ಜನ ತಮ್ಮ ಕಸರತ್ತುಗಳನ್ನು ಪ್ರದರ್ಶಿಸುತ್ತಾ, ಎತ್ತರದ ಕಂಬವನ್ನು ಹತ್ತುತ್ತಾ, ಹಗ್ಗದ ಮೇಲೆ ತಮ್ಮ ಕೌಶಲ್ಯವನ್ನು ತೋರಿಸುವ ಕಾರಣಕ್ಕಾಗಿ ಅವರಿಗೆ ಈ ಹೆಸರು ಬಂದಂತೆ ಕಾಣುತ್ತದೆ [೨೩].

ನಿಜಾಮನ ಆಳ್ವಿಕೆಯ ಪ್ರದೇಶದ ಸಮುದಾಯಗಳ ಅಧ್ಯಯನ ಮಾಡಿದ ಸೈಯದ್ ಸಿರಾಜ್ ಉಲ್ ಹಸನ್ ರವರು ತಮ್ಮ The Castes & Tribes of H.E.H.Nizam's Dominions, ಕೃತಿಯಲ್ಲಿ ಹೀಗೆ ಹೇಳುತ್ತಾರೆ.

'ದೊಮ್ಮರ, ಡೊಂಬರಿ, ದೊಮ್ರಿ ಮತ್ತು ರೆಡ್ಡಿ ಡೊಂಬರ ಎಂಬ ಅಲೆಮಾರಿ ಸಮುದಾಯವು ಡೊಂಬರಾಟವನ್ನು ನೆಚ್ಚಿಕೊಂಡೇ ಬದುಕುತ್ತಿದೆ. ಈ ಸಮುದಾಯವು ನಿಜಾಮನ ಆಳ್ವಿಕೆಗೆ ಒಳಪಟ್ಟಿರುವ ತೆಲುಗು ಮತ್ತು ಕರ್ನಾಟಕದ ಜಿಲ್ಲೆಗಳಲ್ಲಿ ಮುಖ್ಯವಾಗಿ ಜೀವಿಸುತ್ತಿದೆ. ಇವರಿಗೆ ಮಹಾರಾಷ್ಟ್ರದ ಕೊಲ್ಹಾಟಿಗಳ ಜೊತೆ ಅನೇಕ ಸಾಮ್ಯಗಳಿದ್ದು, ಎರಡೂ ಸಮುದಾಯಗಳು ಒಂದೇ ಬಗೆಯ ಜೀವನ ವಿಧಾನಗಳನ್ನು ಅನುಸರಿಸುತ್ತಿವೆ. ಎರಡೂ ಸಮುದಾಯಗಳು ಸಮಾಜದಲ್ಲಿ ಅತ್ಯಂತ ಕೆಳಜಾತಿಗಳಾಗಿದ್ದು, ಹೆದ್ದಾರಿ ಕಳ್ಳತನ, ದರೋಡೆ ಮತ್ತು ಡಕಾಯತಿಗಳಲ್ಲಿ ನಿರತವಾಗಿವೆ. ಪೊಲೀಸರು ಈ ಸಮುದಾಯಗಳನ್ನು ಕ್ರಿಮಿನಲ್ ಸಮುದಾಯಗಳೆಂದು ಪರಿಗಣಿಸಿವೆ.

ಡೊಂಬರ ಎಂಬ ಪದ ನಿಷ್ಪತ್ತಿಯ ಕುರಿತು ನಿಖರತೆ ಇಲ್ಲ. ಡೊಂಬರ ಎಂಬ ಪದವು 'ದಿಮಾರಿ' ಮತ್ತು 'ದುಲ್ಮರಿ' ಎಂಬ ಪದಗಳಿಂದ ಹುಟ್ಟಿಕೊಂಡಿರಬಹುದು ಎಂದು ಊಹಿಸಲಾಗುತ್ತದೆ'[೨೨].

ಇನ್ನು ಮಾನವಶಾಸ್ತ್ರೀಯ ಅಧ್ಯಯನದ ಮೂಲಕ ಕನ್ನಡದಲ್ಲಿ ಮೊದಲಿಗೆ ಡೊಂಬರ ಕುರಿತು ವಿವರವಾದ ಮಾಹಿತಿಗಳನ್ನು ಕಲೆ ಹಾಕಿದ ಡಾ. ದೇವೇಂದ್ರಕುಮಾರ್ ಹಕಾರಿಯವರು ಡೊಂಬರನ್ನು ಹೀಗೆ ವಿವರಿಸುತ್ತಾರೆ.

'ಡೊಂಬ ಪದಕ್ಕೆ ಪರ್ಯಾಯವಾಗಿ ಅನೇಕ ಪದಗಳು ಬಳಕೆಯಲ್ಲಿವೆ. ದೊಂಬ, ಡಂಬರ, ಡೋಮ, ಡುಮ್ಮರ, ಡೊಮ್ಮಾರ, ಕೊಲ್ಲಟಿಗ, ದೋಮ ಇತ್ಯಾದಿ. ಕನ್ನಡ ನಿಘಂಟುಕಾರರು 'ದೊಂಬ, ಡೊಂಬ, ಡೊಮ್ಮರ ಎಂದು ಮೂರು ಪದಗಳನ್ನು ಸೂಚಿಸಿ, ಗಳೆಯ ಮೇಲೆ ಲಾಗ ಹಾಕಿ ಕಸರತ್ತುಗಳನ್ನು ತೋರಿಸುತ್ತಾ ಜೀವನವನ್ನು ನಡೆಸುವವನು' ಎಂದು ಅರ್ಥ ವಿವರಣೆ ನೀಡಿ ಕೊಲ್ಲಟಿಗ ಪದವನ್ನೂ ನೀಡಿದ್ದಾರೆ. ಶಬ್ದಮಣಿ ದರ್ಪಣದಲ್ಲಿ 'ಕೊಲ್ಲಟಿಗನೆನೆ ಡೊಂಬನು' (ಶಮದ ಪು ೬೦) ಎಂದು ವಿವರಿಸಲಾಗಿದೆ. ತೆಲುಗಿನ ಸೂರ್ಯಾಂದ್ರ ನಿಘಂಟು, ತಮಿಳು, ಮಲೆಯಾಳ ಮತ್ತು ತುಳು ಭಾಷೆಗಳಲ್ಲಿರುವ ದೊಮ್ಮರ, ತೊಮ್ಬ, ದೋಮ್ಬರ್, ಡೋಂಬರ್, ಡೊಂಬೆ, ದೊಮ್ಮರ್, ಕೋಲಕುಟ್ಟಾಡ್ಯೆ ಮುಂತಾದ ಪದಗಳಿಗೆ ಕನ್ನಡದಲ್ಲಿರುವ ದೊಂಬ (ಜನಾಂಗ) ಎನ್ನುವ ಅರ್ಥವೇ ಇದೆ'[೨೩] ಎನ್ನುತ್ತಾರೆ ಹಕಾರಿ.

ಹರಿಲಾಲ್ ಪವಾರ್ ಅವರ ಪ್ರಕಾರ

'ಡೊಂಬರು ಮೂಲತಃ ಉತ್ತರ ಭಾರತದವರು. ಇವರ ಮನೆಮಾತು ಗುಜರಾತಿ. ಗುಜರಾತಿ ಭಾಷೆಯಲ್ಲಿ ಡಮರ 'ಡುಮರು' ಅಂದರೆ ತಮಟೆ ಎಂದರ್ಥ. ಡೊಂಬರ ದಂತಕಥೆ ಐತಿಹ್ಯಗಳಲ್ಲಿಯೂ ಡಮರದ ಪ್ರಸ್ತಾಪವಿದೆ. ಮೊದಲಿನಿಂದಲೂ ಇವರು ತಮ್ಮ ಶಕ್ತಿ ಪ್ರದರ್ಶನ ಸಮಯದಲ್ಲಿ ಹಿನ್ನೆಲೆ ವಾದ್ಯವಾಗಿ 'ಡುಮರು'ವನ್ನು ಬಳಸುತ್ತಿದ್ದರು. ಆದುದರಿಂದ ಡೊಂಬ ಪದವು ಡುಮರ-ಡುಂಬರ-ಡಂಬರ-ದೊಂಬರ-ಡೊಂಬರ ಎಂದಾಗಿರಬೇಕು'[೨೪].

ವಿಕಿಪಿಡಿಯಾ ವಿಶ್ವಕೋಶದಲ್ಲಿ

'ಡೋಮ್' ಜನಾಂಗವು ಪ್ರಪಂಚದೆಲ್ಲೆಡೆ ವಾಸಿಸುತ್ತಿದ್ದು, ಈ ಸಮುದಾಯದ ಜನರು ಅನೇಕ ಧರ್ಮಗಳನ್ನು ಅವಲಂಬಿಸಿದ್ದಾರೆ. ಜಿಪ್ಸಿ ಜನಾಂಗಕ್ಕೆ (Cluster) ಸೇರಿದ ಇವರು ದಕ್ಷಿಣ ಏಶಿಯಾ ಅದರಲ್ಲೂ ಭಾರತದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದಾರೆ. ಭಾರತದಲ್ಲಿ ವಾಸಿಸುವ ಡೊಂಬರು ಹಿಂದೂ ಧರ್ಮವನ್ನು ಅನುಸರಿಸುತ್ತಾರೆ. ತೆಲುಗು ಇವರ ಮಾತೃಭಾಷೆ. 'ಡೋಮ್' ಪದವು ಮುಂಡಾ ಭಾಷಾ ಮೂಲದ ಡೊಂಬಿ ಎಂಬ ಪದದಿಂದ ಬಂದಿದೆ, ಮುಂಡಾ ಭಾಷೆಯು ವೇದಪೂರ್ವ ಭಾರತದ ಆದಿಮ ಭಾಷೆಯಾಗಿದೆ. 'ಡೋಮ್' ಪದವು ಡ್ರಮ್ಮಿಂಗ್(Drumming), ಅಂದರೆ ಸಂಸ್ಕೃತದ 'ಡಮರ' ಮತ್ತು 'ಡಮರು' ಎಂಬ ಪದಗಳಿಂದ ಬಂದಿರಲೂ ಬಹುದು. ಅಲ್ಲದೆ ತಮಿಳಿನ ಇಟುಂಪಿ(Itumpi), ಅಂದರೆ ಕುಚೇಷ್ಟೆ ಮಾಡುವವ ಎಂಬ ಪದದಿಂದ ಬಂದಿರಲೂ ಬಹುದೆಂದು ಹೇಳಲಾಗುತ್ತದೆ. ಆದರೆ ಇಂಡೋ ಆರ್ಯನ್‌ಪೂರ್ವ ಕಾಲಘಟ್ಟಕ್ಕೆ ಸೇರಿದ ಭಾರತದ ಹಲವು ಆದಿಮ ಜನಾಂಗಗಳಲ್ಲಿ ಈ

ಸಮುದಾಯವು ಒಂದು ಎಂಬುದನ್ನು ಎಲ್ಲಾ ವಿದ್ವಾಂಸರು ಒಪ್ಪುತ್ತಾರೆ. ಈ ಸಮುದಾಯಕ್ಕಿರುವ ಬೇರೆ ಬೇರೆ ಹೆಸರುಗಳನ್ನು ಹೀಗೆ ಪಟ್ಟಿ ಮಾಡಲಾಗಿದೆ. ೧, ಡೋಮ್ ೨, ಆರ್ಯಕುಟ್ಟಡಿ ೩, ಬಲಿಜದಾಸ್ ೪,ಡೊಂಬನ್ ೫, ಡೊಂಬರು ೬, ಡೊಮ್ಮರ ೭, ಕಲಾಯಿ ೮, ಕಾಸಿದಾಸ್ ೯, ಕೊಹಾಟಿ ೧೦, ಬಾಳೆಸೆಟ್ಟಿ ೧೧, ದಾಸರು ೧೨, ಡೊಂಬರ ೧೩, ಡೊಂಬು ೧೪, ಕಲ್ಲೈಕುಟ್ಟಡಿ ೧೫, ಕಝುಯಿ ೧೬, ಪೈದಿ.

ಡೊಂಬರೆಂದರೆ ಮನರಂಜಕರು, ಉತ್ತರ ಭಾರತದ ಹಲವು ಕಡೆ ಇವರು ಸ್ಮಶಾನ ಕಾಯುವ ಕೆಲಸ, ರದ್ದಿ ಆಯುವುದು, ನೇಕಾರಿಕೆ ಮತ್ತು ಬುಟ್ಟಿ ಹೆಣೆದು ಜೀವನ ಸಾಗಿಸುತ್ತಾರೆ. ಆದರೆ ಇವರು ಸಂಗೀತಗಾರರು. ಮಧ್ಯಕಾಲೀನ ಸಾಹಿತ್ಯದಲ್ಲಿ ಡೋಮ್ ಜನ ಸಂಗೀತಗಾರರಾಗಿಯೇ ಚಿತ್ರಿಸಲ್ಪಟ್ಟಿದ್ದಾರೆ. ಇವರು ಜಾನಪದ ರಾಗವಾದ ಡೊಂಬುಲಿಯನ್ನು ಸುಶ್ರಾವ್ಯವಾಗಿ ನುಡಿಸುತ್ತಾರೆ. ಒಟ್ಟಿನಲ್ಲಿ ಇವರು ಭಾರತದ ನುರಿತ ಜನಪದ ಸಂಗೀತಗಾರರು. ಕೆಲವು ಕಡೆ ಇವರು ರಸ್ತೆ ಬದಿಯ ಡೊಂಬರಾಟದ ಪ್ರದರ್ಶನದ ಮೂಲಕ ಜನರನ್ನು ರಂಜಿಸುತ್ತಾರೆ. ಡೊಂಬರಾಟ ದಕ್ಷಿಣ ಭಾರತದಲ್ಲಿ ತುಂಬಾ ಪ್ರಸಿದ್ಧ. ತಂತಿ ಮೇಲಿನ ನಡಿಗೆ ಮತ್ತು ಐವತ್ತು ಅರವತ್ತು ಅಡಿ ಎತ್ತರದ ದೊಡ್ಡ ಕಂಬದ ಮೇಲೆ ಇವರು ಕಸರತ್ತು ಮಾಡುತ್ತಾರೆ’[೨೯].

ಡೊಂಬರೆಂದರೆ ಯಾರು? ಎಂಬ ಪ್ರಶ್ನೆಗೆ ಮೇಲಿನ ಎಲ್ಲ ವಿದ್ವಾಂಸರು ‘ಡೊಂಬ’ ಎಂಬ ಪದದ ನಿಷ್ಪತ್ತಿಯ ಮೂಲ ಹುಡುಕುವುದನ್ನೇ ಉತ್ತರ ಎಂದು ಭಾವಿಸಿದ್ದಾರೆ. ಜೊತೆಗೆ ಒಂದು ಹಂತದವರೆಗೆ ‘ಡೊಂಬ’ ಪದದ ಮೂಲವನ್ನು ಕಂಡುಕೊಳ್ಳುವುದರ ಮೂಲಕ ಡೊಂಬರೆಂದರೆ ಯಾರು? ಎಂಬುದಕ್ಕೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ. ಬಹುತೇಕ ಮೇಲಿನ ಎಲ್ಲ ವಿದ್ವಾಂಸರು ಡೊಂಬರ ಎಂಬ ಸಮುದಾಯವು ಭಾರತದ ವಿವಿಧ ರಾಜ್ಯಗಳಲ್ಲಿ ಇದೆ ಎಂದು ಒಪ್ಪಿಕೊಳ್ಳುತ್ತಾರೆ. ಅಲ್ಲದೆ ಇದೊಂದು ದ್ರಾವಿಡ ಜನಾಂಗಕ್ಕೆ ಸೇರಿದ ಸಮುದಾಯವೆಂದು ತೀರ್ಮಾನಿಸುತ್ತಾರೆ. ಮತ್ತು ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ‘ಡೋಮ್’ ಸಮುದಾಯವು ವಲಸೆ ಬಂದಿದೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಥರ್ಸಟನ್ ಮತ್ತು ಅನಂತಕೃಷ್ಣ ಅಯ್ಯರ್ ಕರ್ನಾಟಕದಲ್ಲಿನ ಡೊಂಬರು ತೆಲುಗು ಮೂಲದವರು, ಇವರ ಮಾತೃಭಾಷೆ ತೆಲುಗು ಎಂದು, ಇವರು ಕರ್ನೂಲು, ನೆಲ್ಲೂರು ಮತ್ತು ವಿಶಾಖಪಟ್ಟಣದ ಕಡೆಯಿಂದ ಕರ್ನಾಟಕಕ್ಕೆ ಬಂದಿರಬಹುದು ಎಂದು ಹೇಳುತ್ತಾರೆ. ವಿಚಿತ್ರವೆಂದರೆ ‘ಡೊಂಬ’ ಎಂಬ ಕನ್ನಡ ಪದವನ್ನು ಇಟ್ಟುಕೊಂಡು ಸದರಿ ಸಮುದಾಯದ ಹೆಸರಿನ (ಡೊಂಬರ) ಮೂಲ ಹುಡುಕಲು ತೊಡಗುತ್ತಾರೆ. ಥರ್ಸಟನ್ ‘ದುಂಬಾ’ ಪದದಿಂದ ‘ಡೊಂಬ’ ಪದ ಹುಟ್ಟಿದೆ, ‘ದುಂಬಾ’ ಎಂದರೆ ‘ದೆವ್ವಾ’ ಎಂದು ವಿವರಿಸುತ್ತಾನೆ. ಹಾಗಾದರೆ ದೆವ್ವಕ್ಕೂ ಡೊಂಬರ ಸಮುದಾಯಕ್ಕೂ ಏನು ಸಂಬಂಧ? ಇವರ ಪ್ರಕಾರ ಕನ್ನಡ ಪರಿಸರಕ್ಕೆ ಸಂಬಂಧವೇ ಇಲ್ಲದ ‘ಡೊಂಬರ’ ಸಮುದಾಯದ ಹೆಸರನ್ನು ಕನ್ನಡದ ಡೊಂಬರ ಎಂಬ ಪದದ ಅರ್ಥ ವಿವರಣೆಯ ಮೂಲಕ ಯಾಕಾಗಿ ವಿಶ್ಲೇಷಣೆಗೆ ಒಡ್ಡಬೇಕು? ಇಂಗ್ಲೀಷಿನ Drumming ಎಂಬ ಪದದಿಂದ, ಸಂಸ್ಕೃತದ ‘ಡಮರು’ ಪದದಿಂದ ‘ಡೊಂಬರ’ ಎಂಬ ಪದವು ಹುಟ್ಟಿರಬಹುದು ಎಂದು ಚರ್ಚಿಸಲಾಗುತ್ತದೆ. ಆದರೆ ಕ್ರಿ.ಶ.೯ನೇ ಶತಮಾನದ ಕಲ್ಹಣನ ರಾಜತರಂಗಿಣಿ ಕೃತಿಯಲ್ಲಿ ಡೊಂಬರ ಉಲ್ಲೇಖವಿದೆ. ಪಂಪನ ಕಾವ್ಯದಲ್ಲಿ ಡೊಂಬರ ಉಲ್ಲೇಖವಿದೆ. ಇಂಗ್ಲೀಷಿನ Drumming ಎಂಬ

ಪದದಿಂದ 'ಡೊಂಬರ' ಎಂಬ ಪದ ಹುಟ್ಟಿರಬಹುದು ಎಂದು ಒಪ್ಪಿಕೊಳ್ಳುವುದಾದರೆ, ಡೊಂಬರ ಸಮುದಾಯವು ಇಂಗ್ಲೀಷ್ ಭಾಷಾ ಪರಿಸರದಿಂದ ಬಂದಿರಬೇಕು. ಇಲ್ಲವೇ, ಇಂಗ್ಲೀಷ್ ಆ ಕಾಲಕ್ಕೇ ಜಗತ್ತಿನ ಭಾಷೆಯಾಗಿರಬೇಕು. ಕ್ರಿ.ಶ.೯ನೇ ಶತಮಾನಕ್ಕೇನೇ ಇಂಗ್ಲೀಷ್ ಜಗತ್ತಿನ ಭಾಷೆಯಾಗಿತ್ತೇ? ಅಥವಾ ಡೊಂಬರು ಇಂಗ್ಲೀಷ್ ಭಾಷಾ ಪರಿಸರದಿಂದ ಬಂದವರೇ? ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಾಗುತ್ತದೆ. ಜೊತೆಗೆ ಸಂಸ್ಕೃತದ 'ಡಮರು' ಎಂಬ ಪದದಿಂದ ಡೊಂಬರು ಪದ ನಿಷ್ಪತ್ತಿಯಾಗಿರಬಹುದು ಎಂಬ ವಾದವಿದೆ. ಹಾಗಾದರೆ, ಡೊಂಬರನ್ನು ವೇದಪೂರ್ವಕಾಲದ ಅಥವಾ ಇಂಡೋಆರ್ಯನ್ ಜನಾಂಗಗಳ ಸಂಕರಪೂರ್ವದ ಭಾರತದ ಆದಿಮ ಸಮುದಾಯಗಳಲ್ಲೊಂದು ಎಂದು ಯಾಕೆ ತೀರ್ಮಾನಿಸಬೇಕು?

ತಂತಿಯ ಮೇಲೆ ನಡೆದು ಅಥವಾ ಲಾಗಹಾಕಿ ಕಸರತ್ತು ಮಾಡುವಾಗ ಜನರು 'ದೊಂಬಿ' ಮಾಡುತ್ತಾರೆ. ಈ ದೊಂಬಿ ಎಂಬ ಪದದಿಂದ ಡೊಂಬರ ಎಂಬ ಹೆಸರು ಬಂದಿರಬೇಕು ಎಂದು ಹಕಾರಿ ತೀರ್ಮಾನಿಸುತ್ತಾರೆ. ಜೀವವನ್ನು ಪಣಕ್ಕಿಟ್ಟು ತಂತಿ ಮೇಲೆ ನಡೆಯುವಾಗ ಅದನ್ನು ನೋಡುವ ಜನ ಯಾಕಾಗಿ 'ದೊಂಬಿ' ಮಾಡುತ್ತಾರೆ? ತಂತಿ ಮೇಲೆ ನಡೆಯುವ ಪರಿಯನ್ನು ನೋಡಿ ಜನ ಒಂದೋ ಆವಕ್ಕಾಗಿ ಮಾತು ಹೊರಡದೆ ಮೂಕವಿಸ್ಮಿತರಾಗುತ್ತಾರೆ, ಇಲ್ಲವೆ ಡೊಂಬರ ಈ ಸ್ಥಿತಿಯನ್ನು ನೋಡಿ ಮರುಕಪಡುತ್ತಾರೆ. ಅದು ಬಿಟ್ಟು ಜನ 'ದೊಂಬಿ' ಮಾಡುವ ಪ್ರಸಂಗವಾದರೂ ಅಲ್ಲಿ ಏಕೆ ಏರ್ಪಡುತ್ತದೆ? ಡೊಂಬರು ಪ್ರದರ್ಶನ ನೀಡುವ ಸಂದರ್ಭದಲ್ಲಿ ಡೋಲನ್ನು ಬಾರಿಸುತ್ತಾರೆ. ಡೋಲು ಢಂ,ಢಂ ಎಂದು ಸದ್ದು ಮಾಡುತ್ತದೆ. ಈ ಶಬ್ದದಿಂದ 'ಡೋಮ್' ಎಂಬ ಪದ ಹುಟ್ಟಿರಬೇಕು ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಡೊಂಬರು ಭಾರತದಾದ್ಯಂತ ಎಲ್ಲಾ ಕಾಲಕ್ಕೂ ಒಂದೇ ವೃತ್ತಿಯಲ್ಲಿ ತೊಡಗಿದವರಲ್ಲ. ಕಲ್ಹಣನ ಕಾಲಕ್ಕೇ ಉತ್ತರ ಭಾರತದಲ್ಲಿ ರಾಜನ ಆಸ್ಥಾನದಲ್ಲಿ ಸಂಗೀತಗೋಷ್ಠಿ ನಡೆಸುವಷ್ಟು ನುರಿತ ಸಂಗೀತಗಾರರಾಗಿದ್ದರೆಂದರೆ, ಒರಟಾಗಿ ಡೋಲು ಬಡಿಯುವ ಬೀದಿ ಪ್ರದರ್ಶಕರಿಂದ ಒಂದು ಸಮುದಾಯಕ್ಕೆ ಈ ಹೆಸರು ಬರಲು ಸಾಧ್ಯವೇ?

'ಡೊಂಬ' ಎಂಬ ಪದ ಹೇಗೆ ಹುಟ್ಟಿರಬಹುದು ಎಂದು ಚರ್ಚಿಸಿರುವ ವಿದ್ವಾಂಸರು ಈ ಸಂಭಾವ್ಯ ಪ್ರಶ್ನೆಗಳಿಗೆ ಮುಖಾಮುಖಿ ಮಾಡಿದಂತಿಲ್ಲ. ಒಂದು ಅಸಂಬದ್ಧ ಹುಡುಕಾಟದಂತೆ ಈ ಪ್ರಯತ್ನಗಳು ಭಾಸವಾಗುತ್ತವೆ. ಒಂದು ಜಾತಿಯ ಹೆಸರನ್ನು, ಅದರಲ್ಲೂ ಕೆಳಜಾತಿಯ ಹೆಸರನ್ನು ವಿಶ್ಲೇಷಿಸುವಾಗ ವಿಶ್ಲೇಷಿಸುವವನ ಮನಸ್ಸಿನ ನಕಾರಾತ್ಮಕತೆಯಲ್ಲ ಈ ಚರ್ಚೆಯಲ್ಲಿ ಢಾಳಾಗಿ ಕಾಣಿಸಿಕೊಳ್ಳುತ್ತದೆ. ಶಬ್ದನಿಷ್ಪತ್ತಿ ಶಾಸ್ತ್ರದಿಂದ ಒಂದು ಶಬ್ದದ ಸಂಯುಕ್ತ ರೂಪವನ್ನು ಎರಡಾಗಿಸಿ ಅದರ ಅರ್ಥವಿವರಣೆಗೆ ತೊಡಗಬಹುದು. ಅದರಲ್ಲೂ ಸಮಾಸಯುಕ್ತ ಪದಗಳನ್ನು ಹೀಗೆ ಒಡೆದು ಅರ್ಥವನ್ನು ಬೆದಕಬಹುದು. ಆದರೆ ರೂಢನಾಮಗಳನ್ನು ಮನಸ್ಸಿಗೆ ತೋಚಿದಂತೆಲ್ಲ ಒಡೆದು ಅರ್ಥ ಹುಡುಕಲು ಹೋದರೆ ಪ್ರಾಯಶಃ ಅರ್ಥದ ಬದಲು ಕೆಲವು ಶುಷ್ಕ ತರ್ಕಗಳನ್ನು ತೇಲಿಬಿಡಬಹುದಷ್ಟೇ. 'ಡೊಂಬ' ಪದ ಹೀಗೆ ಹುಟ್ಟಿತು ಎಂದು ತೀರ್ಮಾನಿಸಿರುವ ಮೇಲಿನ ವಿದ್ವಾಂಸರ ನಿರ್ಣಯಗಳೆಲ್ಲ ಪರಸ್ಪರ ತಾಳೆಯಾಗುವುದೇ ಇಲ್ಲ.

ಶಬ್ದನಿಷ್ಪತ್ತಿಶಾಸ್ತ್ರವು ಒಂದು ಹಂತದ ವರೆಗೆ ನಮ್ಮನ್ನು ಕೆಲವು ನಿರ್ಣಯಗಳಿಗೆ ಬರುವಂತೆ ಪ್ರೇರೇಪಿಸಬಹುದು. ಆದರೆ ಎಲ್ಲ ಪದಗಳಿಗೂ ಅರ್ಥವಿರುತ್ತದೆಯೇ? ಈ ಪದಕ್ಕೆ 'ಇದೇ ಅರ್ಥ' ಸಂಭವನೀಯ ಎಂದು ತೀರ್ಮಾನಿಸುವುದು ಕಷ್ಟ. ನನ್ನ ಪ್ರಕಾರ 'ಪದವೊಂದು' ಹುಟ್ಟಿರಬಹುದಾದ ಮೂಲವನ್ನೇ ಹಿಡಿದುಕೊಂಡು ವರ್ತಮಾನದಲ್ಲಿ ಅದರ ವಿವರಣೆ 'ಹೀಗೆ' ಮಾತ್ರ ಇರುತ್ತದೆ ಎಂದು ತೀರ್ಮಾನಿಸುವುದು ಕಷ್ಟ. 'ಡೊಂಬ' ಎಂಬ ಪದ ಹೇಗೆ ಬಂತು ಎಂಬ ಪ್ರಶ್ನೆಗೆ ಉತ್ತರ ಸುಲಭ ಸಾಧ್ಯವಲ್ಲ. ಮತ್ತು ಈ ಚರ್ಚೆ ಶೈಕ್ಷಣಿಕವಾಗಿ ನಮ್ಮನ್ನು ಬಹುದೂರ ಕರೆದುಕೊಂಡೂ ಹೋಗಲಾರದು.

ಈ ಎಲ್ಲ ವಿದ್ವಾಂಸರು ಹೇಳಿದಂತೆ 'ಡೊಂಬರು ಕೆಳಜಾತಿಗೆ ಸೇರಿದವರು. ಸತ್ತ ಪ್ರಾಣಿಗಳನ್ನು ತಿನ್ನುವವರು, ಬಟ್ಟೆ ಕದಿಯುವವರು, ಕಳ್ಳರು' ಇತ್ಯಾದಿ ಸಂಗತಿಗಳನ್ನು ಪರಿಶೀಲಿಸಬಹುದು. ಆದರೆ ಇದಕ್ಕೂ ಮುನ್ನ 'ಡೊಂಬರು' ತಮ್ಮನ್ನು ತಾವು ಹೇಗೆ ವಿಶ್ಲೇಷಿಸಿಕೊಳ್ಳುತ್ತಾರೆ. 'ತಮ್ಮ' ಚರಿತ್ರೆಯನ್ನು ಡೊಂಬರು ಹೇಗೆ ಕಟ್ಟಿಕೊಂಡು ಬಂದಿದ್ದಾರೆ ಎಂಬುದನ್ನು ಪರಿಶೀಲಿಸಬಹುದಾಗಿದೆ. ಸಮುದಾಯವೊಂದರ ಚರಿತ್ರೆಯನ್ನು ಶಬ್ದ ನಿಷ್ಪತ್ತಿಶಾಸ್ತ್ರದಿಂದ, ಶಾಸನ, ತಾಳೆಗರಿ, ಶಿಷ್ಟ ಕಾವ್ಯಗಳಲ್ಲಿನ ಉಲ್ಲೇಖಗಳಂತಹ ಅಭಿಜಾತ ದಾಖಲೆಗಳಿಂದ ರೂಪಿಸುವುದು ಸಹಜ. ಮತ್ತು ಇದೊಂದು ಜನಪ್ರಿಯ ಮತ್ತು ಸಾಂಪ್ರದಾಯಿಕ ಶೈಕ್ಷಣಿಕ ಪ್ರಯತ್ನ ಮಾತ್ರ. ಆದರೆ ಒಂದು ಸಮುದಾಯದ ಕುರಿತು 'ಬೇರೆಯವರು' ಸೃಷ್ಟಿಸಿದ ದಾಖಲೆಗಳನ್ನು ಇಲ್ಲಿ ಪ್ರಮಾಣಬದ್ಧ ಆಕರಗಳೆಂದು ಪರಿಗಣಿಸಲಾಗುತ್ತದೆ. ಆದರೆ ಸಮುದಾಯ 'ತನ್ನನ್ನು ತಾನು' ಹೇಗೆ ಭಾವಿಸುತ್ತದೆ ? ತನ್ನ ಚರಿತ್ರೆಯನ್ನು ಸಮುದಾಯವು ಯಾವ ಬಗೆಯಲ್ಲಿ ರೂಪಿಸಿಕೊಂಡು ಬಂದಿದೆ? ಎಂಬುದನ್ನು ಹೆಚ್ಚಾಗಿ ಪರಿಶೀಲಿಸುವುದು ವಿರಳ. ಇಂತಹ ಪ್ರಯತ್ನಗಳು ಕನ್ನಡದಲ್ಲಿ ವಿರಳವಾಗಿಯಾದರೂ ನಡೆದಿವೆ. ಕೋಟಿಗಾನಹಳ್ಳಿ ರಾಮಯ್ಯನವರ 'ಸಿಂದ್ ಮಾದಿಗರ ಸಂಸ್ಕೃತಿ', ಲಕ್ಷ್ಮೀಪತಿ ಕೋಲಾರ ಅವರ 'ಮಾಸ್ತಿಕರ ಸಂಸ್ಕೃತಿ' ಕೃತಿಗಳು ಸಮುದಾಯಗಳ ಮೌಖಿಕ ಸಾಹಿತ್ಯವನ್ನು ಬಹುಮುಖ್ಯ ಆಕರವೆಂದು ಪರಿಗಣಿಸಿ ರೂಪುಗೊಂಡಿವೆ. ಹೀಗೆ ಸಮುದಾಯಗಳು ತಾವು ಕಟ್ಟಿಕೊಂಡು ಬಂದ ತಮ್ಮ ಸಮುದಾಯದ ಸೃಷ್ಟಿಪುರಾಣಗಳನ್ನು ಜತನದಿಂದ ಕಾಪಾಡಿಕೊಂಡು ಬಂದಿವೆ. ಡೊಂಬರೆಂದರೆ ಯಾರು? ಎಂಬ ಪ್ರಶ್ನೆಗೆ ಈ ಸಮುದಾಯದ ಸೃಷ್ಟಿ ಪುರಾಣಗಳಲ್ಲಿ ಉತ್ತರಗಳು ಸಿಗಬಹುದೆಂಬ ಕಾರಣಕ್ಕಾಗಿ ಡೊಂಬರ ಸಮುದಾಯದ ಸೃಷ್ಟಿ ಪುರಾಣಗಳನ್ನು ಗಮನಿಸಬಹುದಾಗಿದೆ.

ಡೊಂಬರ ಸೃಷ್ಟಿ ಪುರಾಣಗಳು

ಸಮುದಾಯಗಳ ಸಾಮಾಜಿಕ ಚರಿತ್ರೆಯನ್ನು ಬರೆಯುವಾಗ ಸಾಮಾನ್ಯವಾಗಿ ಸಾಮಾಜಿಕ ಮಾನವಶಾಸ್ತ್ರಜ್ಞರು ಅಭಿಜಾತ (classical) ದಾಖಲೆಗಳನ್ನು ಹುಡುಕಿಕೊಂಡು ಹೋಗುವುದು ಸಾಮಾನ್ಯ. ಈ ಅಭಿಜಾತ ದಾಖಲೆಗಳೆಂದರೆ, ಮಹಾಕಾವ್ಯಗಳು, ಶಾಸನಗಳು ಮತ್ತು ಶಿಷ್ಟ ಪುರಾಣದಲ್ಲಿನ ಉಲ್ಲೇಖಗಳು. ಉದಾಹರಣೆಗೆ, ಪಂಪನ ಆದಿಪುರಾಣದಲ್ಲಿ ಯಾವುದಾದರೊಂದು ಸಮುದಾಯದ ಉಲ್ಲೇಖ ಮತ್ತು ಅದರ ವೃತ್ತಿಗೆ ಸಂಬಂಧಿಸಿದ ಸಂಗತಿಗಳು ಉಲ್ಲೇಖಿತಗೊಂಡಿದ್ದರೆ ಅದೇ ಉಲ್ಲೇಖವನ್ನು ಆಧರಿಸಿ ಕೆಲವು ತೀರ್ಮಾನಗಳಿಗೆ ಬರವುದು ಒಂದು ವಾಡಿಕೆಯಂತೆ ನಡೆದು ಬಂದಿದೆ. ಈ ಬಗೆಯ ಅಭಿಜಾತ ದಾಖಲೆಗಳನ್ನು

ಮನಸೋತು ಸಮೀಪಕ್ಕೆ ಬಂದನು. ಹಾಗೆ ಬಂದ ಆತನು ಗುರುಗಳನ್ನೊಡ್ಡಿ ಆಕೆಯನ್ನು ಕೂಡಿದನು. ಅವಳಿಗೆ ಮಕ್ಕಳಾಗಲು ಅವರಿಗೆ ಲಾಗು ಲಂಘನ ಗಣಿಯೇರಿಕೆ ಮೊದಲಾದ ವಿದ್ಯೆಗಳೆಲ್ಲವನ್ನೂ ಕಲಿಸಿ ನೀನು ದಾಯಿಗದಿಂದ ಜೀವಿಸು ಎಂದು ನೇಮಿಸಿ ಹೋದನು. ಆ ವಂಶದಲ್ಲಿ ಅನೇಕ ದೊಂಬರು ಹುಟ್ಟಿ ವಿದ್ಯೆಗಳನ್ನು ತೋರಿಸಿ ಮಾನ್ಯತೆ ಪಡೆದರು[೨].

ಪುರಾಣ ೨

ಮತ್ತೊಂದು ಪಟ್ಟಣದ ಮುಂದಣ ಬಯಲಿನಲ್ಲಿ ಗುರಳನ್ನು ಹಾಕಿದ್ದರು. ಆ ಪಟ್ಟಣದ ರಾಜಗುರುವಾದ ಜಂಗಮನು ಬಂದು ದೊಂಬರ ಚೆನ್ನಿಯನ್ನು ನೋಡಿ ಆಸಕ್ತನಾಗಿ ಆಕೆಯನ್ನು ಬೇಡಿದನು. ಚೆನ್ನಿಯು ರಾಜಗುರುವನ್ನು ತನ್ನ ವೇಷವನ್ನು ಬಿಟ್ಟು ದೊಂಬನಾಗಿ ಕತ್ತೆ ಕಾಯ್ದುಕೊಂಡಿರಬೇಕೆನ್ನಲು, ಚೆನ್ನಿಯು ಹೇಳಿದಂತೆಯೇ ಆತನು ಕಾಯ್ದುಕೊಂಡು ಅಲ್ಲೇ ಇದ್ದನು. ರಾಜನು ತನ್ನ ಗುರುವನ್ನು ಕಾಣದೆ ಹುಡುಕಿಕೊಂಡು ಬಂದು ಡೊಂಬರ ಗುರುಗಳ ಸಮೀಪದಲ್ಲಿ ಬಿದ್ದಿದ್ದ ಕಾವಿ ವಸ್ತ್ರ ಲಿಂಗ, ರುದ್ರಾಕ್ಷಿಗಳನ್ನು ಕಂಡು ಗುರುಭಕ್ತಿಪೂರ್ವಕ ವಂದಿಸಿ ಹರಕೆಯನ್ನು ಬೇಡಿದನು. ಆತನು ನನಗೆ ನೀಡುವ ಸಾಮರ್ಥ್ಯವಿಲ್ಲ, ಚೆನ್ನಿಯನ್ನು ಕೇಳೆಂದನು ಅರಸನು ಹೋಗಿ ಚೆನ್ನಿಗೆ ಸಾಷ್ಟಾಂಗಪ್ರಣತನಾಗಲು ಆ ಗುರುಭಕ್ತಿಗೆ ಮೆಚ್ಚಿದ ಶಿವನು ಅವರೆಲ್ಲರನ್ನೂ ಕೈಲಾಸಕ್ಕೊಯ್ದನು. ಅದರಿಂದ ಡೊಂಬಕುಲವೆ ದೊಡ್ಡದು ಎಂದನು[೨].

ಪುರಾಣ ೩

ಒಬ್ಬ ರೆಡ್ಡಿಗೆ ತನ್ನ ಕಿರಿಯ ಹೆಂಡತಿಯಿಂದ ಕೈಕಾಲಿಲ್ಲದ ಮಗು ಹುಟ್ಟುತ್ತದೆ. ಅನಂತರ ಈ ನತದೃಷ್ಟ ಮಗು ರೆಡ್ಡಿಯ ಕುಟುಂಬಕ್ಕೆ ಮುಂದೊಂದು ದಿನ ದೊಡ್ಡ ಮಟ್ಟದ ಕಂಟಕ ತರುತ್ತಾನೆ ಎಂದು ಭವಿಷ್ಯ ಹೇಳಲಾಗುತ್ತದೆ. ರೆಡ್ಡಿ ತನ್ನ ಹೆಂಡತಿಗೆ ಆ ಮಗುವನ್ನು ದೂರ ಇಡಲು ಹೇಳುತ್ತಾನೆ. ರೆಡ್ಡಿ ಹೆಂಡತಿಯ ಮಾತೃ ಹೃದಯ ಇದಕ್ಕೆ ಒಪ್ಪುವುದಿಲ್ಲ. ಆಕೆ ತನ್ನ ಮಗುವನ್ನು ದನದ ಕೊಟ್ಟಿಗೆಯಲ್ಲಿನ ಗೋದಲಿಯಲ್ಲಿ ಅವಿತಿಡುತ್ತಾಳೆ. ದುರಾದೃಷ್ಟವೋ ಏನೋ ದನದ ಕೊಟ್ಟಿಗೆಯಲ್ಲಿನ ದನಗಳು ಒಂದೊಂದೇ ಸಾಯಲಾರಂಭಿಸುತ್ತವೆ. ಕೊನೆಗೆ ಆ ಮಗುವನ್ನು ದನದ ಕೊಟ್ಟಿಗೆಯಿಂದಲೂ ದೂರ ಹಾಕಲಾಗುತ್ತದೆ. ರೆಡ್ಡಿಯ ಹೆಂಡತಿಯು ಆ ಮಗುವನ್ನು ಭಿಕ್ಷುಕನೊಬ್ಬನಿಗೆ ನೀಡಿ ರಕ್ಷಿಸಲು ಹೇಳುತ್ತಾಳೆ. ಆದರೆ ಭಿಕ್ಷುಕ ಆ ಮಗುವನ್ನು ಬತ್ತಿ ಹೋದ ಹಾಳುಬಾವಿಯಲ್ಲಿ ಹಾಕಿಬಿಡುತ್ತಾನೆ. ಯಾರೂ ಇಚ್ಚಿಸದ ಮಗು ಜೀವ ಪಡೆದು ಜಗತ್ತಿಗೆ ಬಂದಾಗ ಯಾರೂ ಅದನ್ನು ಪೋಷಿಸಲು ಮುಂದಾಗುವುದಿಲ್ಲ. ಒಣಗಿದ ಬಾವಿಯೊಳಗಿನ ಮಗುವಿನ ಅಳು ಪಾರ್ವತಿ ಪರಮೇಶ್ವರರಿಗೆ ಕೇಳಿಸುತ್ತದೆ. ಕೈಲಾಸದಿಂದ ಕೆಳಗಿಳಿದು ಬಂದ ಅವರು ಮಗುವಿಗೆ ಕೈಕಾಲುಗಳನ್ನು ದಯಪಾಲಿಸುತ್ತಾರೆ. ಜೊತೆಗೆ ಕುಂಬಾರರ ಮನೆಯಿಂದ ಮಡಿಕೆಯೊಂದನ್ನು ತರಿಸಿಕೊಟ್ಟು ಭಿಕ್ಷೆ ಬೇಡಿ ಬದುಕು ಎಂದು ಹರಸುತ್ತಾರೆ. ಕೈಕಾಲು ಪಡೆದ ಮಗು ಅತ್ಯಂತ ಅಮಿತಾನಂದದಿಂದ ಬಾವಿಯ ಆಳದಿಂದ ದಡದ ಮೇಲಕ್ಕೆ ಜಿಗಿಯುತ್ತದೆ. ಎದುರಿಗೇ ನಿಂತಿದ್ದ ಮತ್ತು ತನಗೆ ಕೈಕಾಲುಗಳನ್ನು ನೀಡಿದ ಪಾರ್ವತಿ ಪರಮೇಶ್ವರರ ಕಾಲಿಗೆ ಮಗು ಭಕ್ತಿಯಿಂದ ನಮಸ್ಕರಿಸುತ್ತದೆ. ಈ ಮಗು ಮುಂದೆ ಡೊಂಬರಾಟವನ್ನು ತನ್ನ ವೃತ್ತಿಯನ್ನಾಗಿ ಸ್ವೀಕರಿಸುತ್ತದೆ. ಈ ಮಗುವಿನ ಅನುಯಾಯಿಗಳೇ ಮುಂದೆ

ಡೊಂಬರೆಂಬ ಸಮುದಾಯವಾಗಿ ರೂಪುಗೊಳ್ಳುತ್ತದೆ[೨೮].

ಪುರಾಣ ೪

ರೆಡ್ಡಿಯ ಹೆಂಡತಿಯೊಬ್ಬಳು ಹೊಲದಲ್ಲಿದ್ದ ತನ್ನ ಗಂಡನಿಗೆ ಮಧ್ಯಾಹ್ನದ ಊಟಕ್ಕಾಗಿ ಬುತ್ತಿಯನ್ನು ಒಯ್ಯುತ್ತಿದ್ದಾಗ ಹೆಣ್ಣು ಮಗುವಿಗೆ ಜನ್ಮ ನೀಡುತ್ತಾಳೆ. ಹೆರಿಗೆಯಾದ ಊರ ಹೊರಗಿನ ಸ್ಥಳದಲ್ಲಿಯೇ ತಾಯಿ ಮತ್ತು ಮಗುವಿಗೆ ಗುಡಿಸಲೊಂದನ್ನು ನಿರ್ಮಿಸಲಾಗುತ್ತದೆ. ಇದೇ ಸಂದರ್ಭದಲ್ಲಿ ಆ ರೆಡ್ಡಿಯ ಹಿರಿಯ ಹೆಂಡತಿ ತನ್ನ ಸವತಿ ಮೇಲಿನ ಮತ್ಸರದಿಂದ ಊರ ಹೊರಗೆ ಮಗುವಿಗೆ ಜನ್ಮ ನೀಡಿದ ತಾಯಿ ಮಗು ಇಬ್ಬರೂ ಬೇರೆ ಜಾತಿಯವರು ಎಂಬ ಗೊಂದಲ ಹುಟ್ಟಿಸುತ್ತಾಳೆ. ರೆಡ್ಡಿಯು ಹಿರಿಯ ಹೆಂಡತಿಗೆ ತನ್ನ ಆಸ್ತಿಯನ್ನೆಲ್ಲ ಕೊಡುತ್ತಾನೆ. ಊರ ಹೊರಗೇ ಇದ್ದ ಕಿರಿಯ ಹೆಂಡತಿಗೆ ಮದ್ದಳೆ, ಹಗ್ಗ ಮತ್ತು ನೆಡುಗಂಬವನ್ನು ನೀಡುತ್ತಾನೆ. ರೆಡ್ಡಿ ನೀಡಿದ ಉಪಕರಣಗಳನ್ನು ಬಳಸಿಕೊಂಡೇ ಅನೇಕ ವಿಧದ ಕಸರತ್ತುಗಳನ್ನು ಕಲಿತು, ಈ ಕಸರತ್ತುಗಳನ್ನು ಪ್ರದರ್ಶಿಸಿಯೇ ಹೊಟ್ಟೆ ತುಂಬಿಸಿಕೊಳ್ಳಲು ಈ ತಾಯಿ ಮಗಳು ಮುಂದಾಗುತ್ತಾರೆ. ಬೀದಿಯಲ್ಲಿ ಹಗ್ಗದ ಮೇಲೆ ನಡೆಯುವ ಮತ್ತು ಕಸರತ್ತುಗಳನ್ನು ತೋರಿಸಿ ಹೊಟ್ಟೆ ತುಂಬಿಸಿಕೊಳ್ಳುವ ಈ ಹುಡುಗಿಯನ್ನು ಯಾರೂ ಮದುವೆಯಾಗಲು ಮುಂದೆ ಬರುವುದಿಲ್ಲ. ರೆಡ್ಡಿಯ ಚಿಕ್ಕ ಹೆಂಡತಿಯ ಈ ಮಗಳೇ ಮುಂದೆ 'ಡೊಂಬರ ಚಿನ್ನಾಸಾನಿ' ಎಂದೂ, ವೇಶ್ಯೆಯೆಂದೂ ಪರಿಗಣಿಸಲ್ಪಡುತ್ತಾಳೆ. ಈ ಕಾರಣಕ್ಕಾಗಿಯೇ ಡೊಂಬರ ಸಮುದಾಯದಲ್ಲಿ ವೇಶ್ಯಾವಾಟಿಕೆ ವಾಡಿಕೆಯೆಂಬಂತೆ ನಡೆದುಕೊಂಡು ಬಂದಿದೆ ಎನ್ನಲಾಗುತ್ತದೆ[೨೯].

ಪುರಾಣ ೫

ಡೊಂಬರ ಮೂಲವು ಲಂಬಾಣಿಗರ ಮೂಲ ಪುರುಷ 'ಮೋಲ'ನ ಕಥೆಯ ಸುತ್ತ ಹೆಣೆದುಕೊಳ್ಳುತ್ತದೆ. ಲಂಬಾಣಿಗಳು ಮತ್ತು ಡೊಂಬರು ಮೂಲದಲ್ಲಿ ಒಂದೇ ಆಗಿದ್ದರೆಂದು ಕಾಣುತ್ತದೆ. ಡೊಂಬರ ಮದ್ರಾಸ್ ಪ್ರಾಂತ್ಯದ ನೆಲ್ಲೂರು ಜಿಲ್ಲೆಯಲ್ಲಿ ಹೆಚ್ಚು ಕಾಣಿಸಿಕೊಳ್ಳುತ್ತಾರೆ. ಅವರು ತಮ್ಮ ಮೂಲಸ್ಥಾನವೆಂದು 'ಡೊಂಬರ ಮುದ್ದಲಾಪುರಂ' ಎಂಬ ತೆಲುಗು ಗ್ರಾಮವೊಂದನ್ನು ಗುರುತಿಸುತ್ತಾರೆ. ವಿಜಯನಗರ ಸಾಮ್ರಾಜ್ಯದ ಆಸ್ಥಾನದಲ್ಲಿ ಡೊಂಬರು ಆಸ್ಥಾನದ ಡೊಂಬರಾಟದವರಾಗಿದ್ದರಲ್ಲದೆ, ರಾಜನಿಂದ ವಿಶೇಷವಾದ ಇನಾಮುಗಳನ್ನು ಪಡೆಯುತ್ತಿದ್ದರಂತೆ. ಈಗಲೂ ಜಮ್ಮಲ ಮಡುಗು, ತಾಡಪತ್ರಿ, ಪದ್ದಟ್ಟೂರು ಮತ್ತು ಗುಡಮಚೇರ್ಲ ಗ್ರಾಮಗಳನ್ನು ಡೊಂಬರು ಇನಾಮಾಗಿಯೇ ಪಡೆದಿದ್ದೇವೆ ಎಂದು ಹೇಳುತ್ತಾರೆ. ವಿಜಯನಗರ ಪತನಾನಂತರ ಡೊಂಬರು ಮೈಸೂರು ಪ್ರಾಂತ್ಯದ ಎಲ್ಲೆಡೆ ಚದುರಿ ಹೋದರು[೩೦].

ಪುರಾಣ ೬

ಡೊಂಬರು ತಮ್ಮನ್ನು 'ಮೊತಾತಿಕಾಪುವಿನ' ಮಕ್ಕಳು ಎಂದು ಕರೆದುಕೊಳ್ಳುತ್ತಾರೆ. ಈ 'ಕಾಪು' ಹುಟ್ಟುತ್ತಲೇ ಕೈಕಾಲುಗಳನ್ನು ಕಳೆದುಕೊಂಡು ಬೀದಿಯ ಅನಾಥ ಮಗುವಾಗಿರುತ್ತದೆ. ಈತ ಅಳುವುದನ್ನು ನೋಡಿದ ಶ್ರೀರಾಮಚಂದ್ರ ಮತ್ತು ಆತನ ಹೆಂಡತಿ ಈತನಿಗೆ ಕೈಕಾಲುಗಳನ್ನು ಕೊಡುತ್ತಾರೆ. ಈತ ಆ ನಂತರ

ಡೊಂಬರಾಟವನ್ನು ತ್ಯಜಿಸುತ್ತಾನೆ. ಇವರು ಚಿನ್ನಮ್ಮನ ಮೂಲಕ ತಮ್ಮ ಮೂಲವನ್ನು ಕಂಡುಕೊಳ್ಳಲು ಯತ್ನಿಸುತ್ತಾರೆ. ಜೈಲಿನಲ್ಲಿದ್ದ ತನ್ನ ತಂದೆಯ ಬಿಡುಗಡೆಗಾಗಿ ಚಿನ್ನಮ್ಮ ತನ್ನಲ್ಲಿನ ವಿದ್ಯೆಯನ್ನು ರಾಜನ ಮುಂದೆ ಪ್ರದರ್ಶಿಸುತ್ತಾಳೆ. ರಾಜ ಇದರಿಂದ ಸಂತೋಷಗೊಂಡು ಚಿನ್ನಮ್ಮನ ತಂದೆಯನ್ನು ಬಿಡುಗಡೆ ಮಾಡುತ್ತಾನೆ. ಆದರೆ ಮುಂದೆ ಚಿನ್ನಮ್ಮನನ್ನು ಯಾರೂ ಮದುವೆಯಾಗುವುದಿಲ್ಲ. ಅವಳು ಮುಂದೆ ವೈಶ್ಯಾವೃತ್ತಿಯನ್ನು ಕೈಗೊಳ್ಳುತ್ತಾಳೆ [೨೧].

ಪ್ರಾಚೀನ ಉಲ್ಲೇಖಗಳ ಪ್ರಕಾರ ಕೊಲ್ಹಾಟಿಗಳು ಶಿಲಿಂಧ್ರು ಪುರುಷ ಮತ್ತು ಕ್ಷತ್ರಿಯ ಮಹಿಳೆಯ ಹಾದರದಿಂದ ಹುಟ್ಟಿದವರು. ಇವರ ಸಂಪ್ರದಾಯಗಳನ್ನು ನೋಡಿದರೆ ಕೊಲ್ಹಾಟಿಗಳು ಉತ್ತರ ಭಾರತಕ್ಕೆ ಸೇರಿದವರು ಎಂದು ಭಾವಿಸಬಹುದಾಗಿದೆ. ಉತ್ತರ ಭಾರತದ ಬಾವ್ರಿಗಳು, ಕಂಜಾರರ ಮತ್ತು ವಾಘ್ರಿಗಳ ಜೊತೆ ಇವರಿಗೆ ಸಂಬಂಧಗಳಿವೆ. ಇನ್ನೊಂದು ಕಥೆಯ ಪ್ರಕಾರ ಕೊಲ್ಹಾಟಿ ಖಾತ್ರಿ ಸಮುದಾಯದ ಮಹಿಳೆಯ ಹಾದರದ ಕಾರಣಕ್ಕಾಗಿ ಜನಿಸುತ್ತಾರೆ. ಏಕೆಂದರೆ ಕ್ಷತ್ರಿಯ ಮಹಿಳೆಯು ಕೆಳಜಾತಿಯ ಪುರುಷನ ಜೊತೆ ಲೈಂಗಿಕ ಸಂಬಂಧ ಹೊಂದಿದ್ದಳು. ಆದರೆ ಈ ಸಮುದಾಯದ ಮೂಲ ಮತ್ತು ಕೊಲ್ಹಾಟಿ ಪದದ ನಿಷ್ಪತ್ತಿಯ ಕುರಿತು ನಿಖರವಾಗಿ ಹೇಳಲಾಗುವುದಿಲ್ಲ. ಕೊಲ್ಹಾಟಿಗಳನ್ನು ಮೂರು ವಿಧದಲ್ಲಿ ವಿಂಗಡಿಸಲಾಗಿದೆ.

೧. ಪಾಲ್ ಅಥವಾ ಕಾನೆ ಕೊಲ್ಹಾಟಿಗಳು

೨. ದುಕ್ಕರ್ ಅಥವಾ ಪೊತ್ರಿ ಕೊಲ್ಹಾಟಿಗಳು

೩. ಡೊಂಬಾರಿಗಳು

ಇವರೆಲ್ಲ ಮರಾಠವಾಡ ಜಿಲ್ಲೆಗಳಲ್ಲಿ ಕಾಣಸಿಗುತ್ತಾರೆ. ಪಾಲ್ ಕೊಲ್ಹಾಟಿಗಳು ಮೂಲತಃ ಅಲೆಮಾರಿಗಳು. ಇವರು ತಾತ್ಕಾಲಿಕವಾಗಿ ವಾಸಿಸಲು ಗುಡಿಸಲುಗಳನ್ನು ಕಟ್ಟಿಕೊಳ್ಳುತ್ತಾರೆ. ವಲಸೆ ಹೋಗುವಾಗ ಗುಡಿಸಲು ನಿರ್ಮಿಸಲು ಬಳಸುವ ಗರಿಗಳನ್ನು ಕತ್ತೆಗಳ ಮೇಲೆ ಹೇರಿಕೊಂಡು ಹೋಗುತ್ತಾರೆ. ಈ ಸಮುದಾಯದ ಗಂಡಸರು ತುಂಬಾ ಸೋಮಾರಿಗಳು. ಆದರೆ ಹೆಂಗಸರು ತುಂಬಾ ಸುಂದರವಾಗಿರುತ್ತಾರೆ. ಇವರು ಸಾಮಾನ್ಯವಾಗಿ ವೇಶ್ಯವಾಟಿಕೆಯಿಂದ ಹಣ ಗಳಿಸುತ್ತಾರೆ. ಇವರ ಗಂಡಸರೇ ವೇಶ್ಯವಾಟಿಕೆಯನ್ನು ಬೆಂಬಲಿಸುತ್ತಾರೆ. ದುಕ್ಕರ್ ಕೊಲ್ಹಾಟಿಗಳು ಗಂಡಸರು ದುಡಿಮೆಗಾರರು, ಇವರು ಕಾಡು ಹಂದಿಗಳನ್ನು ಬೇಟೆಯಾಡುತ್ತಾರೆ. ಅಲ್ಲದೆ ಇವರು ಹಂದಿ ಸಾಕಾಣಿಕೆ ಮಾಡುತ್ತಾರೆ. ಇವರು ನೆಲೆನಿಂತಿದ್ದು, ಕೃಷಿಯಲ್ಲಿ ತೊಡಗಿದ್ದಾರೆ. ಜೊತೆಗೆ ಹಳ್ಳಿಯಲ್ಲಿ ಕಾವಲುಗಾರರಾಗಿ ಕೆಲಸ ನಿರ್ವಹಿಸುತ್ತಾರೆ. ಡೊಂಬಾರಿಗಳು ತೆಲಂಗಾಣದಲ್ಲಿರುವ ಡೊಂಬರ ಸಮುದಾಯದ ಒಂದು ಶಾಖೆಯಾಗಿದೆ. ಆದರೆ ಉಳಿದೆರಡು ಪಂಗಡಗಳಿಗಿಂತ ಡೊಂಬಾರಿಗಳು ಅತ್ಯಂತ ಹಿಂದುಳಿದ ಪಂಗಡವಾಗಿದೆ. ಪಾಲ್ ಮತ್ತು ದುಕ್ಕರ್ ಕೊಲ್ಹಾಟಿಗಳು ಗುಜರಾತಿ ಮಿಶ್ರಿತ ಮರಾಠಿ ಮಾತನಾಡುತ್ತಾರೆ. ಆದರೆ ಡೊಂಬಾರಿಗಳ ಮನೆಮಾತು ತೆಲುಗು ಮತ್ತು ಕನ್ನಡ ಸಂಕರಗೊಂಡ ಮಿಶ್ರ ಭಾಷೆಯಾಗಿದೆ[೨೨].

ಪುರಾಣ ೭

ಒಂದು ಐತಿಹ್ಯದ ಪ್ರಕಾರ ಡೊಂಬ ಮತ್ತು ಕೊರವರು ಸೋದರ ವೃಂದಗಳಾಗಿದ್ದುವು. ಇಬ್ಬರು

ಸೋದರರಿಗೂ ಕನ್ಯಾಶೋಧ ನಡೆಯಿತು. ಅದು ಕನ್ನೆಯರ ಅಭಾವವಿದ್ದ ಕಾಲ. ಹೀಗಾಗಿ ಇಬ್ಬರು ಸೋದರರೂ ಒಂದೇ ಕನ್ನೆಗಾಗಿ ಹಂಬಲಿಸಿದರು. ಡೊಂಬರು ಕನ್ನೆಯ ತೆರ ಇಪ್ಪತ್ತು ವರಹ ಕೊಡುವುದಾಗಿ ತಿಳಿಸಿದಾಗ ಅದಕ್ಕೆ ಕೊರವರು ತಾವು ಇಪ್ಪತ್ತೈದು ವರಹ ಕೊಡುವುದಾಗಿ ಹೇಳಿದರು. ಈ ಕಾರಣದಿಂದ ಆ ಕನ್ನೆ ಕೊರವನ ಹೆಂಡತಿಯಾದಳು. ಅಂದಿನಿಂದ ಈ ಎರಡೂ ಸಮುದಾಯ ಭಿನ್ನವಾದುವು ಅಷ್ಟೇ ಅಲ್ಲ, ಪರಸ್ಪರ ದ್ವೇಷವೂ ಬೆಳೆಯಿತು[೩೩].

ಪುರಾಣ ೮

ಇದೇ ಬಗೆಯ ಇನ್ನೊಂದು ಐತಿಹ್ಯ, ಕಂಪ್ಲಿ ಅರಸು ಮನೆತನದ ಕಂಪಿಲ ಮತ್ತು ಡೊಂಬರ 'ರತ್ನಾಜಿ' ಎನ್ನುವವಳಿಗೆ ಸಂಬಂಧ ಕಲ್ಪಿಸುತ್ತದೆ. ಕಂಪಿಲರಾಜ ಡೊಂಬರ 'ರತ್ನಿ'ಯ ಕುಣಿತ ಕಸರತ್ತು ಕಂಡು ಅವಳ ರೂಪಕ್ಕೆ ಮನಸೋತು ಮದುವೆಯಾದನಂತೆ. ಆದರೆ 'ರತ್ನಾಜಿ' ಕಂಪಿಲರಾಜನ ಮಗ ಕುಮಾರರಾಮನನ್ನು ಮೋಹಿಸಿದಳಂತೆ. ಅರಸನಿಗೆ ಗೊತ್ತಾಗದಂತೆ ಚೆನ್ನಿಗ ಕುಮಾರರಾಮನನ್ನು ತನ್ನ ಅರಮನೆಗೆ ಕರೆಸಿಕೊಂಡು ಕಾಮಾಂಧಳಾಗಿ ವರ್ತಿಸಿದಳು. ಕುಮಾರರಾಮ ಚಿಕ್ಕತಾಯಿಗೆ ಬುದ್ಧಿ ಹೇಳಿ ಅಲ್ಲಿಂದ ಕಾಲುಕಿತ್ತ. ಕೋಪ ಅವಮಾನಗಳಿಂದ ಕುದಿದ ರತ್ನಾಜಿ ಗಂಡನಿಗೆ ಏನೆಲ್ಲ ಹೇಳಿ, ರಾಮನ ಮೇಲೆ 'ತಾಯ್ಗಂಡ'ತನದ ಅಪವಾದ ಹೊರಿಸಿ, ಕುಮಾರರಾಮನನ್ನು ಹೊರ ಹಾಕಿದಳು. ಅರಸನ ಆಜ್ಞೆಯಂತೆ ಕುಮಾರರಾಮನನ್ನು ಕೊಲ್ಲಿಸಲಾಯಿತು. ಮನೆ ದೇವರು ಜಟಿಂಗ 'ರತ್ನಿ'ಗೆ ಶಾಪ ಕೊಟ್ಟ. 'ಊರಿಗೆಲ್ಲ ಸೆರಗು ಹಾಸು'. ಅಂದಿನಿಂದ ಡೊಂಬರ ಹೆಂಗಸರು ವೇಶ್ಯಾ ವೃತ್ತಿಯಿಂದಲೂ ಬದುಕುವಂತಾಯಿತು, ಇತ್ಯಾದಿ. ಕಂಪಿಲರಾಜ ಕಂಪಿಲ ಮತ್ತು ರತ್ನಾಜಿಗೆ ಸಂಬಂಧಿಸಿದ ಮತ್ತೊಂದು ಐತಿಹ್ಯದ ಪಾಠಾಂತರ ಪ್ರಕಾರ ಕಂಪಿಲರಾಜ 'ರತ್ನಾಜಿ'ಯನ್ನು ಅವಳ ಕೆಟ್ಟ ನಡತೆಗೆ ಅರಮನೆಯಿಂದ ಹೊರದೂಡಿಸಿದ. ಆಗ ಅವಳು ಬೀದಿ ಹೆಣ್ಣಾಗಿ ಬಾಳಿದಳು-ಮುಂತಾಗಿ ಬರುತ್ತದೆ. ವೇಶ್ಯಾವೃತ್ತಿಗಿಳಿದ 'ರತ್ನಿ'ಯ ಮಕ್ಕಳು ಕೂಡ ಕುಣಿತ ಕಸರತ್ತು ಮಾಡುತ್ತ ಬಂದರು. ಇವರೇ ಡೊಂಬರಾದರು; ಅಥವಾ ಡೊಂಬರೆಂದು ಕರೆಯಲ್ಪಟ್ಟರು. ಕೋಣೆಯ ಕೂಸಾಗಿ ಕೊಳೆಯದೇ ಕಾಡಿನ ಮಕ್ಕಳಾಗಿ ಅಲ್ಲಿ ಇಲ್ಲಿ ಅಲೆದು ಬೀದಿ ಗುಂಡುಕಲ್ಲಿನಂತೆ ಬೆಳೆದ ಈ ಬಗೆಯ ಜನವೃಂದ, ತಮ್ಮ ಚಿತ್ತಾಕರ್ಷಕ ಕಲೆ, ಕಸರತ್ತುಗಳಿಂದಾಗಿ ಅಲ್ಲಲ್ಲಿ ಹೆಚ್ಚಿನ ಶ್ರೇಣಿಯ ಜನರ ಜೊತೆ, ಕೆಲವೊಮ್ಮೆ ಅರಸು ಕುಲದವರ ಜೊತೆ, ಸಂಪರ್ಕ ಹೊಂದಿರುವ ಸಾಧ್ಯತೆಯನ್ನು ಈ ಬಗೆಯ ಐತಿಹ್ಯಗಳಿಂದ ಊಹಿಸಬಹುದು. ಕೆಲವೊಮ್ಮೆ ಇಂತ ಐತಿಹ್ಯಗಳಿಗೆ ಸಾಹಿತ್ಯಕ ಕೃತಿಗಳಲ್ಲಿಯೂ ಪ್ರವೇಶ ದೊರೆತು ಅವು ಚಾರಿತ್ರಿಕ ಸಂಗತಿಗಳಿಗೂ ಆಕರವಾಗಬಹುದು[೩೪].

ಡೊಂಬರ ಸೃಷ್ಟಿ ಪುರಾಣಗಳ ಜೊತೆಗೆ ಕರ್ನಾಟಕದ ಬೇರೆ ಬೇರೆ ಅಲೆಮಾರಿ ಸಮುದಾಯಗಳ ಸೃಷ್ಟಿ ಪುರಾಣಗಳನ್ನು ತೌಲನಿಕವಾಗಿ ಗಮನಿಸಿ ಒಟ್ಟಾರೆಯಾಗಿ ಅವುಗಳನ್ನು ವಿಶ್ಲೇಷಿಸಬಹುದಾಗಿದೆ.

ಹೆಳವರ ಸೃಷ್ಟಿ ಪುರಾಣ

ಒಕ್ಕಲಿಗ ವ್ಯಕ್ತಿಯೊಬ್ಬನಿಗೆ ಏಳು ಜನ ಮಕ್ಕಳಿದ್ದರು. ಅದರಲ್ಲಿ ಕಿರಿಯವನು ಹುಟ್ಟುತ್ತಲೇ ಕುಂಟನಾಗಿದ್ದ. ತನ್ನ ಕಿರಿಯ ಮಗನನ್ನು ಅದರಲ್ಲೂ ಕುಂಟನಾಗಿದ್ದ ಕಾರಣಕ್ಕಾಗಿಯೇ ಏನೋ ಅವನ ತಾಯಿ ಆತನನ್ನು

ತುಂಬಾ ಪ್ರೀತಿಸುತ್ತಿದ್ದಳು. ಇದನ್ನು ಕಂಡು ಉಳಿದ ಆರು ಜನ ಅಣ್ಣಂದಿರು ತಾವು ದುಡಿಯುತ್ತಿರುವುದನ್ನು ನೋಡಿಯೂ ಏನೂ ದುಡಿಯದ ಕುಂಟನನ್ನು ಪ್ರೀತಿಸುವ ತಾಯಿಯ ಪಕ್ಷಪಾತವನ್ನು ಆಕ್ಷೇಪಿಸುತ್ತಿದ್ದರು. ಅಲ್ಲದೆ ತಮ್ಮ ಕಿರಿಯ ಸಹೋದರನನ್ನು ಈ ಕಾರಣಕ್ಕಾಗಿಯೇ ದ್ವೇಷಿಸುತ್ತಿದ್ದರು. ಜೊತೆಗೆ ತಮ್ಮ ಅಂಗವಿಕಲ ಸಹೋದರನನ್ನು ಕೊಲ್ಲಲು ಪ್ರಯತ್ನಿಸಿದರು. ಹಾಗೆ ಅವರು ಕೊಲ್ಲುವ ಪ್ರಯತ್ನ ಮಾಡಿದಾಗೆಲ್ಲ ಕುಂಟ ಸಹೋದರನನ್ನು ಅವರ ಮನೆಯ ಹೋರಿಯೊಂದು ಸದಾ ರಕ್ಷಿಸುತ್ತಿತ್ತು. ತಮ್ಮ ಪ್ರಯತ್ನಗಳೆಲ್ಲ ವಿಫಲವಾದಾಗ ಅವರು ತಮ್ಮ ಆಸ್ತಿ ಹಂಚಿಕೆ ಮಾಡಿಕೊಂಡು ಕುಂಟ ತಮ್ಮನನ್ನು ಒಂಟಿಯಾಗಿಸಲು ಮುಂದಾದರು. ಕುಂಟ ವ್ಯಕ್ತಿ ಆಸ್ತಿಯನ್ನು ತೆಗೆದುಕೊಂಡು ದುಡಿದು ಬದುಕಲು ಸಾಧ್ಯವೇ ಎಂದು ಯೋಚಿಸಿದ ಶಿವನು ಅಣ್ಣ ತಮ್ಮಂದಿರ ಮಧ್ಯೆ ರಾಜೀ ಸೂತ್ರವೊಂದನ್ನು ಏರ್ಪಡಿಸಿದನು. ಪಿತ್ರಾರ್ಜಿತವಾಗಿ ಬಂದ ಆಸ್ತಿ ಎಲ್ಲವನ್ನು ಆರು ಜನ ಅಣ್ಣತಮ್ಮಂದಿರು ಹಂಚಿಕೊಳ್ಳಬೇಕು. ಆದರೆ ಅಂಗವಿಕಲ ತಮ್ಮ ತನ್ನ ಅಣ್ಣಂದಿರ ಮನೆಗೆ ಎತ್ತಿನ ಮೇಲೆ ಹೋಗಿ ಗಂಟೆ ಬಾರಿಸಿ ಅವರಿಂದ ತನ್ನ ಪಾಲು ಪಡೆದು ಬದುಕಬೇಕು ಎಂದು ಶಿವನು ತೀರ್ಪು ನೀಡಿದನು. ಅಣ್ಣಂದಿರು ಅವನಿಗೆ ಬೇಕಾದ ದಾನ ನೀಡುತ್ತಾ ಬಂದರು. ಕುಂಟ (ಹೆಳವ) ವ್ಯಕ್ತಿ ಎತ್ತಿನ ಮೇಲೆ ಏರಿ ಗಂಟೆ ಬಾರಿಸುತ್ತಾ ಅಣ್ಣಂದಿರ ಮನೆಗೆ ಹೋಗಿ ತನ್ನ ಪಾಲನ್ನು ಪಡೆಯುವುದು ಮುಂದುವರೆದುಕೊಂಡು ಬಂದಿತು. ಮುಂದೆ ಈತನ ತಲೆಮಾರಿನ ಎಲ್ಲರೂ ಇದೇ ವೃತ್ತಿಯನ್ನು ಅನುಸರಿಸಿಕೊಂಡು ಬಂದರು. ಈ ಕುಂಟ (ಹೆಳವ) ನ ಸಂತತಿಯೇ ಮುಂದೆ ಹೆಳವರೆಂದು ಕರೆಯಲ್ಪಟ್ಟರು. ಇವರು ತಮ್ಮ ಒಕ್ಕಲಿಗರ ಮನೆಗೆ ಹೋಗಿ ಅವರ ಕುಲಗೋತ್ರಗಳ ಇತಿಹಾಸವನ್ನು ಹೇಳುತ್ತ ಭಿಕ್ಷೆ ಪಡೆಯುತ್ತ ಜೀವಿಸಲಾರಂಭಿಸಿದರು.[೩೯]

ಹೆಳವರ ಇನ್ನೊಂದು ಸೃಷ್ಟಿ ಪುರಾಣ

ಒಂದಾನೊಂದು ಕಾಲದಲ್ಲಿ ಮೂವತ್ತಮೂರು ಕೋಟಿ ದೇವಾದಿ ದೇವತೆಗಳು ಶಿವನೊಡ್ಡೋಲಗದಲ್ಲಿ ಸಭೆ ಸೇರಿದರು. ಆ ಸಭೆಯಲ್ಲಿ ಶೃಂಗಿ ಹಾಗೂ ಭೃಂಗಿ ಅಷ್ಟೇ ಪ್ರಮುಖರು. 'ಶೃಂಗಿ' ಶಿವಪಾರ್ವತಿಯರನ್ನು ಸರಿಸಮವಾಗಿ ಭಕ್ತಿಗೌರವದಿಂದ ಕೈಮುಗಿಯುತ್ತಿದ್ದನು. ಆದರೆ ಭೃಂಗಿಯ ಭಕ್ತಿ ಶಿವನೊಬ್ಬನಿಗೆ ಮೀಸಲು. ಈ ಸೋಜಿಗದ ಸಂಗತಿಯನ್ನರಿತ ಪಾರ್ವತಿಯು ಭೃಂಗಿಯನ್ನುದ್ವೇಶಿಸಿ, ಶಿವನೊಬ್ಬನಿಗೆ ನಮಸ್ಕಾರ ಮಾಡುವಿ, ನನಗೇಕೆ ನಮಸ್ಕರಿಸುವುದಿಲ್ಲ? ಎಂದು ಕೇಳಿದಳು. ಆಗ ತಾಯಿ ನನ್ನ ಪರಮದೈವ ಶಿವನೊಬ್ಬನೇ, ನನ್ನ ಭಕ್ತಿ ಗೌರವ ಶಿವನೊಬ್ಬನಿಗೆ ಮೀಸಲಿಟ್ಟಿರುವೆ ಎಂದನು. ಈ ಮಾತುಗಳನ್ನು ಸಹಿಸದೇ ಕುಪಿತಳಾದ ಪಾರ್ವತಿ ಕ್ಷಣಾರ್ಧದಲ್ಲಿಯೇ ಭೃಂಗಿಗೆ ಕೈಕಾಲು ಊನವಾಗುವಂತೆ ಶಾಪ ವಿಧಿಸಿದಳು. ಮಾತ್ರವಲ್ಲ ಅವನ ದೇಹದಲ್ಲಿರುವ ರಕ್ತ ಮಾಂಸಗಳನ್ನು ದೃಷ್ಟಿಮಾತ್ರದಿಂದಲೇ ಹೀರಿಕೊಂಡಳು. ಕೊನೆಗೆ ಅಲ್ಲಿ ಉಳಿದದ್ದು ಭೃಂಗಿಯ ಎಲುಬಿನ ಹಂದರ. ಅದು ಕೂಡ ಕಣ್ಣ ಮುಂದೆ ಇರಬಾರದೆಂದು ಆಕಾಶ ಭೂಮಿಯ ಮಧ್ಯ ಹಾರಾಡುವಂತೆ ಮಾಡಿದಳು. ಶಿವನಿಗೆ ಈ ವಿಷಯ ನಾರದನಿಂದ ಗೊತ್ತಾದಾಗ, ಪಾರ್ವತಿಯನ್ನು ಕರೆದು ಕೋಪದಿಂದ ಗದರಿಸಿದನು. ಅವರಿಬ್ಬರ ನಡುವೆ ವಾಗ್ವಾದ ನಡೆಯಿತು. ಭೃಂಗೇಶ್ವರ ನನ್ನ ಮಗ, ಅವನ ಭಕ್ತಿ ಗೌರವಕ್ಕೆ ಮೆಚ್ಚಿರುವೆನು. ಅವನಿಗೆ ಈ ಶಿಕ್ಷೆ ಆಗಬಾರದೆಂದು ಹೇಳಿ ತನ್ನ ಕೈಯಲ್ಲಿಯ ತ್ರಿಶೂಲ

ಆಧಾರವಾಗಿಟ್ಟನು. ಕ್ಷಣಾರ್ಧದಲ್ಲಿಯೇ ಭೃಂಗಿಯ ಎಲುಬಿನ ಹಂದರ ತ್ರಿಶೂಲದ ಮೇಲೆ ಬಂದು ನಿಂತಿತು. ಕೊನೆಗೆ ಪಾರ್ವತಿ ಸೋತೆನೆಂದು ಶಿವನಿಗೆ ಶರಣಾದಳು. ಶಿವನ ಅಪ್ಪಣೆ ಮೇರೆಗೆ ಭೃಂಗೇಶ್ವರನಿಗೆ ವಿಧಿಸಿದ ಶಾಪ ಹಿಂತೆಗೆದುಕೊಂಡು, ಮತ್ತೆ ರಕ್ತ ಮಾಂಸವನ್ನು ಧಾರೆ ಎರೆದಳು. ಭೃಂಗೇಶ್ವರನಿಗೆ ಶಿವನಂದಿ ಮತ್ತು ಲಿಂಗ ಮುದ್ರೆ ಕೊಟ್ಟು ಈ ಭೂಮಂಡಲ ಇರುವವರೆಗೆ ನಿನ್ನ ಕೀರ್ತಿ ಚಿರಾಯುವಾಗಲಿ. ಜಾತಿ ಮತ ಭೇದವನ್ನು ಅರಿತು ಕುಲಗೋತ್ರ ಆಗುಹೋಗುಗಳನ್ನು ಹೊಗಳುತ್ತ ಅವರಿಂದ ಸಂಭಾವನೆಯಾಗಿ ದವಸ ಧಾನ್ಯಗಳನ್ನು ಪಡೆದು ಜೀವನ ಸಾಗಿಸು ಎಂದು ಆಶೀರ್ವದಿಸಿ ಮಾಯವಾದರು. ಮುಂದೆ ಭೃಂಗೇಶ್ವರನಿಂದ ಹೆಳವ ಪರಂಪರೆ ಬೆಳೆಯಿತು. ಕಾರಣ ಭೃಂಗೇಶ್ವರ ಹೆಳವರ ಮೂಲಪುರುಷನೆಂದು ಐತಿಹ್ಯ[೬೬].

ಹಕ್ಕಿಪಿಕ್ಕಿಯರು

ಹಕ್ಕಿಪಿಕ್ಕಿಯರು ಹಿಂದೆ ರಜಪೂತ ವಂಶಕ್ಕೆ ಸೇರಿದವರು. ಕ್ಷತ್ರಿಯ ವಂಶಸ್ಥರು. ಮಹಾರಾಷ್ಟ್ರ, ಗುಜರಾತ್, ರಾಜಾಸ್ಥಾನಗಳಲ್ಲಿ ಇವರ ಸಂಬಂಧಿಗಳು ಬಹಳ ಶ್ರೀಮಂತಿಕೆಯಿಂದ ಇದ್ದಾರೆಂದು ಹೇಳುತ್ತಾರೆ. ರಾಣಾ ಶಿವಾಜಿ ಮಹಾರಾಜರೆ ನಮ್ಮ ಗುರುಗಳು. ಅವರು ಚಾಮುಂಡೇಶ್ವರಿಯನ್ನು ಚೆನ್ನಾಗಿ ಪೂಜಿಸಿ ಭಕ್ತರಾಗಿ ಕುಲದೇವತೆಯಾಗಿ ನಡೆಸಿಕೊಳ್ಳುತ್ತಿದ್ದರು. ಅಕ್ಬರ್ ಮತ್ತು ರಾಣಾ ಪ್ರತಾಪಸಿಂಗರ ಜಗಳದಿಂದಾಗಿ ನಾವು ಈ ಕಡೆ ಬರಬೇಕಾಯಿತು. ಅಕ್ಬರ್ ದೇಶವನ್ನೆಲ್ಲ ತನ್ನದನ್ನಾಗಿ ಮಾಡಿಕೊಳ್ಳಬೇಕೆಂದುಕೊಂಡು ರಾಣಾನ ನಗರಕ್ಕೆ ಬಂದು ಡೇರೆ ಹಾಕಿದ. ರಾಣಾ ಹೋಗಿ 'ಅಮ್ಮ ಅಮ್ಮ ಚಾಮುಂಡೇಶ್ವರಿ ಅಕ್ಬರ್ ಬಂದಿದಾನೆ' ಅಂತ ಕೇಳಿಕೊಂಡ. ಅಮ್ಮ ಒಂದು ಹುಣಸೆ ಮಾವಿನ ಬೀಜ ಎರಡನ್ನೂ ಕೊಟ್ಟಳು. 'ಇವನ್ನು ಹಾಕಿ ಬೆಳಸು. ಇವು ಬೆಳೆದು ದೊಡ್ಡವಾದರೂ ನಿನ್ನನ್ನು ಅಕ್ಬರ್ ಗೆಲ್ಲಲಾಗುವುದಿಲ್ಲ' ಎಂದು ಆಶೀರ್ವದಿಸಿದಳು. ಅದೇ ರೀತಿ ಬೀಜ ಹಾಕಿ ಬೆಳಸಲು ಅಕ್ಬರ್ ಅಲ್ಲಿಂದ ತನ್ನ ಡೇರೆಗಳನ್ನು ಕೀಳಲಿಕ್ಕೆ ಶುರುಮಾಡಿದ. ರಾಣಾನಿಗೆ ಅಮ್ಮ ಇನ್ನೂ ಒಂದು ಮಾತು ಹೇಳಿದಳು: 'ಈ ಬಂಗಾರದ ಕುದುರೆ ಹತ್ತು. ಇದು ಒಂದು ಹೊಡೆತಕ್ಕೆ ದೇವಕೊಂಡಕ್ಕೆ ಹೋಗುತ್ತೆ. ಇನ್ನೊಂದು ಹೊಡೆತಕ್ಕೆ ಸುರಿಸ್‌ಕೊಂಡಕ್ಕೆ ಹೋಗುತ್ತೆ, ಎಂದು ಹೇಳಿ ಕೊಟ್ಟಿತು. ಆ ಕುದುರೆಯನ್ನೇರಿದ ರಾಣಾ ಒಂದು ಹೊಡೆತಕ್ಕೆ ದೇವಕೊಂಡಕ್ಕೆ ಬಂದ. ಅಲ್ಲಿ ಸ್ನಾನ ಮಾಡಿದ. ಆಮೇಲೆ ಆ ನೀರು ಹುಳ ಆಯಿತು. ಇನ್ನೊಂದು ಹೊಡೆತಕ್ಕೆ ಸುರಿಸ್‌ಕೊಂಡಕ್ಕೆ ಹೋದ. ಅಲ್ಲಿ ಬಾಯಿ ತೊಳೆದ. ಆಗ ದೇವಿ ಮತ್ತೆ ಪ್ರತ್ಯಕ್ಷ ಆಗಿ 'ಈಗ ಒಂದು ಕತ್ತಿ ಗೊಡ್ತೀನಿ ಈ ಕತ್ತಿಗೆ ಅಕ್ಬರನೇ ಸಿಕ್ತಾನೊ, ಅವನ ಮಗನೆ ಸಿಕ್ತಾನೋ ಗೊತ್ತಿಲ್ಲ' ಅಂತೇಳಿ ಕತ್ತಿ ಕೊಟ್ಟು ಮಾಯವಾಗಿ ಬಿಟ್ಟಿತು. ಆಮೇಲೆ ಜಗಳ ಆಯಿತು. ಅಕ್ಬರ್ ಸಿಗಲಿಲ್ಲ. ಅವನ ಮಗ ಸಿಕ್ಕಿಬಿಟ್ಟ, ರಕ್ತ ನೀರುಕೋಡಿ ರೀತಿ ಹರೀತು. ಅಮ್ಮ ಮುಂಚೆನೆ ಹೇಳಿತ್ತು. ಮೊದಲ ರಕ್ತನ ನನಿಗೆ 'ತಗೊ ಅಮ್ಮ' ಅಂತ ಕತ್ತಿಯಿಂದ ಕಾಣಿಸಬೇಕು ಅಂತ. ಈ ಜಗಳದಲ್ಲಿ ರಾಣಾ ಅಮ್ಮನಿಗೆ ರಕ್ತ ತೋರಿಸೋದನ್ನ ಮರೆತುಬಿಟ್ಟ. ಬದಲಿಗೆ ರಕ್ತ ತೆಗೆದು ತನ್ನ ಹಣೆಗೆ ಇಟ್ಟುಕೊಂಡ. ದೇವಿ ಅವನಿಗೆ ಶಾಪಕೊಟ್ಟಿತು. 'ನಿನ್ನ ಕತ್ತಿ ನಿನಗೇ ತಿರುಗಲಿ' ಎಂದು. ಪ್ರತಾಪ ಸತ್ತ. ಅವನ ಹೆಂಡತಿ ಬಂದು ನೋಡಿದಳು. ತನ್ನ ಗಂಡ ಕಾಣಲಿಲ್ಲ. ಆಗ ಅಮ್ಮನಿಗೆ 'ನನ್ನ ಗಂಡನ ತಲೆ ತೋರಿಸಿಬಿಟ್ಟರೆ ನಾನು ಸತಿ ಆಗ್ತೀನಿ' ಅಂತ ಬೇಡಿಕೊಂಡಳು. ಆಗ ಮುಂಡ

ಎದ್ದು ನಿಂತುಬಿಟ್ಟಿತು. ಹತ್ತು ನಿಮಿಷ ಆದಮೇಲೆ ಕೆಳಗೆ ಬಿದ್ದಿತು. ರಾಣಿ ತನ್ನ ಮಗನಿಗೆ 'ಮಗನೆ ನಿನ್ನ ಅಪ್ಪನ ಜೊತೆ ನಾನೂ ಸತಿ ಆಗ್ತೀನಿ' ಎಂದು ಸೌದೆ ಇಟ್ಟುಕೊಂಡು ಸತ್ತು ಹೋದಳು. ಆಗ ಉಳಿದ ಸಣ್ಣ ಮಕ್ಕಳಾದ ನಾವು ಗತಿಯಿಲ್ಲದೆ ಅಲ್ಲಿ ಇಲ್ಲಿ ಬೇಡೋದು ತಿನ್ನೋದು, ಬೇಟೆ ಆಡೋದು ಮಾಡುತ್ತ ಊರೂರು ಸುತ್ತುತ್ತ ಕರ್ನಾಟಕಕ್ಕೆ ಬಂದೆವು ಎಂದು ತಮ್ಮ ಜನಾಂಗದ ಐತಿಹಾಸಿಕತೆಯ ಬಗ್ಗೆ ಹಕ್ಕಿಪಿಕ್ಕಿಯರು ಹೇಳುತ್ತಾರೆ [೩೭].

ಗೊಂಬೆರಾಮರು

ಗೊಂಬೆ ರಾಮರ ಒಂದು ಐತಿಹ್ಯದ ಪ್ರಕಾರ, ಇವರು ಮರಾಠ ಒಕ್ಕಲಿಗರಾಗಿದ್ದು, ಅವರ ಮೂಲ ವೃತ್ತಿ ಬೇಸಾಯವಾಗಿತ್ತು. ಆ ಮನೆತನದ ಒಬ್ಬ ಹೆಣ್ಣು ಮಗಳು ಕತ್ತಾರೆ ಕಾಳಾಚಾರಿ ಎಂಬ ಅಕ್ಕಸಾಲಿಗನೊಂದಿಗೆ ಇಟ್ಟುಕೊಂಡ ಸಂಬಂಧದಿಂದಾಗಿ ಆಕೆಯನ್ನು ಆಕೆಯ ಏಳು ಜನ ಮಕ್ಕಳನ್ನೂ ಜಾತಿಯಿಂದ ಹೊರಹಾಕಲಾಯಿತು. ಆ ಆಚಾರಿ ಆ ಮಕ್ಕಳಿಗೆ ಚರ್ಮ ಮತ್ತಿತರ ವಸ್ತುಗಳಿಂದ ಚಿತ್ರಗೊಂಬೆಗಳನ್ನು ಮಾಡಿ ಅವುಗಳನ್ನು ಕುಣಿಸಿ ಜೀವನ ಮಾಡುವ ವಿದ್ಯೆ ಕಲಿಸಿಕೊಟ್ಟ. ಹೀಗೆ, ಈ ಬಹಿಷ್ಕೃತ ಜನ ತಮ್ಮದೇ ಒಂದು ಗುಂಪು ಮಾಡಿಕೊಂಡು ಜೀವನಾನುಕೂಲಕ್ಕಾಗಿ ಬೇರೆ ಬೇರೆ ಕಡೆ ವಲಸೆ ಹೋದರು. ಇವರೇ ಇಂದು ಭಾರತದ ಬೇರೆ ಬೇರೆ ರಾಜ್ಯಗಳಲ್ಲೂ ಜಾವಾ ಮೊದಲಾದ ವಿದೇಶಗಳಲ್ಲೂ ಇರುವವರು ಎಂಬ ಅಭಿಪ್ರಾಯವಿದೆ[೩೮].

ಸುಡುಗಾಡು ಸಿದ್ಧರು

ನವಕೋಟಿ ಸಿದ್ಧರ ಉಗಮವನ್ನು ಕುರಿತು ಒಂದು ಸ್ವಾರಸ್ಯಕರವಾದ ಐತಿಹ್ಯ ಹೀಗಿದೆ; ದೇವಾದಿದೇವತೆಗಳನ್ನು ಕಾಡಿದ ಶನಿಯು ಶಿವನನ್ನು ಗಣಪತಿಯನ್ನು ಮತ್ತು ಮಾರುತಿಯನ್ನು ಇನ್ನೂ ಕಾಡಿರಲಿಲ್ಲವಂತೆ. ಕೊನೆಗೊಮ್ಮೆ ಶನಿಯು ಪರಶಿವನ ಮುಂದೆ ಪ್ರತ್ಯಕ್ಷನಾಗಿ 'ದೇವಾ! ನಾಳೆ ನಿಮ್ಮಲ್ಲಿಗೆ ಪ್ರವೇಶ ಮಾಡಬೇಕೆಂದು ಇಚ್ಛಿಸಿದ್ದೇನೆ, ದಯವಿಟ್ಟು ಮನ್ನಿಸಬೇಕೆಂದು' ಕೇಳುತ್ತಾರೆ. ಮಾರನೆ ದಿನ ಶನಿಯು ಬರುವ ಪೂರ್ವದಲ್ಲಿ ಪರಶಿವನು ಉಪಾಯದಿಂದ ಸುಡುಗಾಡಿಗೆ ಹೋಗಿ ಆಗತಾನೆ ಹೂಳಿದ ಶವಗಳನ್ನು ಹೊರತೆಗೆದು ಆ ಜಾಗದಲ್ಲಿ ಅವಿತುಕೊಳ್ಳುತ್ತಾನೆ. ಶನಿ ಕಾಡುವ ವೇಳೆ ಮುಗಿದ ಮೇಲೆ ಪರಶಿವನು ಹೊರಬೀಳುತ್ತಾನೆ. ಗಾಳಿ, ಬೆಳಕಿಲ್ಲದ ಆ ಜಾಗದಲ್ಲಿ ಅವಿತುಕೊಂಡಿದ್ದರಿಂದ ಶಿವನು ಸಂಪೂರ್ಣ ಬೆವೆತು ಹೋಗಿರುತ್ತಾನೆ. ಪರಶಿವನು ಹಣೆಯ ಮೇಲಿರುವ ಹನಿ ಹನಿ ಬೆವರನ್ನು ತೆಗೆದು ಭೂಮಿಗೆ ಎಸೆದನು. ಹೀಗೆ ಎಸೆದ ಬೆವರಿನಲ್ಲಿ ನವಕೋಟಿ ಜನರು ಜನ್ಮತಾಳಿದರು. ಸುಡುಗಾಡಿನಲ್ಲಿ ಅವರು ಹುಟ್ಟಿದ್ದರಿಂದ ಅವರನ್ನು 'ಸುಡುಗಾಡು ಸಿದ್ಧರು' ಎಂದು ನಾಮಕರಣ ಮಾಡಿ, ಅವರ ಜೀವನೋಪಾಯಕ್ಕಾಗಿ ಶಿವನು, 'ಉಪದೇಶಿಸಿ, ವಿಭೂತಿ, ಕಾವಿ, ರುದ್ರಾಕ್ಷಿ, ಕಮಂಡಲಗಳನ್ನು ದಯಪಾಲಿಸಿ ಅಜ್ಞಾನದಲ್ಲಿರುವ ಲೋಕಕ್ಕೆ ಕಲ್ಯಾಣವನ್ನುಂಟುಮಾಡುತ್ತಾ, ಶುಭ-ಅಶುಭಗಳನ್ನು ಮುಂಜಾಗ್ರತೆಯಾಗಿ ತಿಳಿಯದ ಜನಕ್ಕೆ ತಿಳಿಸುತ್ತ ದೇಶಸಂಚಾರ ಮಾಡಿದರೆಂದು' ಉಪದೇಶಿಸಿ ಕಳಿಸಿಕೊಡುತ್ತಾನೆ[೩೯].

ನಟುವರು

ಶಿವನಿಂದ ಶಾಪಕ್ಕೆ ಒಳಗಾಗಿ ಪ್ರಾಯಶ್ಚಿತ್ತಕ್ಕಾಗಿ ಅನೇಕರು ಭೂಲೋಕಕ್ಕೆ ಬರುತ್ತಿದ್ದರಂತೆ. ಭೂಲೋಕಕ್ಕೆ ಬಂದವರು ಸ್ವಲ್ಪ ಕಾಲ ಇದ್ದು, ಅನಂತರ ವಾಪಸ್ಸು ಹೋಗುತ್ತಿದ್ದರಂತೆ. ಆದರೆ ಕೈಲಾಸದಲ್ಲಿ ಶಿವನ ಡಮರುಗವನ್ನು ಜೋಪಾನವಾಗಿಟ್ಟುಕೊಳ್ಳುತ್ತಿದ್ದವನೊಬ್ಬ, ಕುತೂಹಲ ತಾಳಲಾರದೆ ಅದನ್ನು ಬಾರಿಸಿಬಿಟ್ಟ. ದೇವಲೋಕ ಮತ್ತು ಭೂಲೋಕ ಒಟ್ಟಿಗೆ ಗಾಭರಿಕೊಂಡವು. ಆಗ ಶಿವ ಪಾರ್ವತಿ ಜೊತೆ ಏಕಾಂತದಲ್ಲಿದ್ದನಂತೆ. ದೇವಲೋಕದ ಜನರೆಲ್ಲಾ ಶಿವನಲ್ಲಿ ಮೊರೆಯಿಟ್ಟರು. ಶಿವ ತಕ್ಷಣ ತನ್ನ ದಿವ್ಯಜ್ಞಾನದಿಂದ ನಡೆದ ಅಚಾತುರ್ಯವನ್ನು ಮನಗಂಡ. ತಕ್ಷಣವೇ ತಪ್ಪು ಮಾಡಿದಾತನಿಗೆ ಹಿಂದು ಮುಂದು ನೋಡದೆ ಶಿಕ್ಷೆ ನೀಡಿದ. ಆ ಶಿಕ್ಷೆ ಈ ಹಿಂದೆ ಯಾರಿಗೂ ನೀಡದಿದ್ದ ಶಿಕ್ಷೆಯಾಗಿತ್ತು. ಶಿವನ ವಾದ್ಯವನ್ನು ಬಾರಿಸಿದ ಆ ವ್ಯಕ್ತಿ ಮತ್ತೆಂದೂ ಮರಳಿ ಕೈಲಾಸಕ್ಕೆ ಬರಬಾರದೆಂಬುದೇ ಆ ಶಿಕ್ಷೆಯಾಗಿತ್ತು. ಶಾಪಕ್ಕೊಳಗಾದ ವ್ಯಕ್ತಿ ಜನ್ಮತಾಳಿದ. ಭೂಲೋಕದಲ್ಲಿ ಆತ ತಾನು ಕೈಲಾಸದಲ್ಲಿ ಮಾಡಿದ ತಪ್ಪನ್ನು ಸಾರುತ್ತಾ ಡಮರುಗದ ಬದಲಿಗೆ ಮೃದಂಗವನ್ನು ಬಾರಿಸುತ್ತಾ, ಕುಣಿಯುತ್ತಾ ನಡೆದ. ಆತನ ಸಂತತಿಯೆ ನಟುವ ಜನಾಂಗವೆಂದು ನಟುವರು ಭಾವಿಸಿದ್ದಾರೆ[೯೦].

ಕವಲೆತ್ತಿನವರು

ಒಂದಾನೊಂದು ಕಾಲದಲ್ಲಿ ವ್ಯಾಘ್ರಾಸುರ ಎಂಬೊಬ್ಬ ದೈತ್ಯ ಇದ್ದ. ತುಂಬ ಬಲಶಾಲಿ, ಭಾರಿ ತಪಸ್ಸು ಮಾಡಿ ಶಂಕರ ದೇವನನ್ನು ಮೆಚ್ಚಿಸಿದ, ಯಾರಿಂದಲೂ ಸಾವು ಬರಬಾರದೆಂದು ವರ ಪಡೆದ, ಅಂದಿನಿಂದ ಅವನ ಪೀಡೆ ಜಾಸ್ತಿಯಾಯಿತು. ಋಷಿಗಳು, ದೇವತೆಗಳು ಇವನ ಉಪಟಳವನ್ನು ಸಹಿಸದಾದರು. ದೇವತೆಗಳೆಲ್ಲ ವಿಷ್ಣುವಿನ ಮೊರೆಹೊಕ್ಕರು. ವಿಷ್ಣು ಬ್ರಹ್ಮನನ್ನು ತೋರಿಸಿದ. ಬ್ರಹ್ಮನಲ್ಲಿಗೆ ಹೋದಾಗ ಆತ ಶಿವನನ್ನು ತೋರಿಸಿದ. ಶಿವ ದೇವತೆಗಳ ಅಹವಾಲು ಕೇಳಿ ರಾಕ್ಷಸ ಸಂಹಾರಕ್ಕೆ ನಂದಿಯನ್ನು ತಯಾರು ಮಾಡಿದ. ವಿಷ್ಣುವೂ ನೆರವಿಗೆ ಬಂದ, ನಂದಿ ಎತ್ತಿನ ರೂಪ ಹೊಂದಿದ. ಶಿವ ವಾಲಗ ಬಾರಿಸುವವನಾದ. ವಿಷ್ಣು ಬಸವನಾಡಿಸುವವನಾದ. ಸುದರ್ಶನ ಚಕ್ರ ಘಂಟೆಯಾಯಿತು. ಎಲ್ಲರೂ ರಾಕ್ಷಸ ಲೋಕಕ್ಕೆ ಅವತರಿಸಿದರು. ಅಲ್ಲಲ್ಲಿ ಬಸವನ ಆಟ ಆಡಿಸುತ್ತ ವ್ಯಾಘ್ರಾಸುರನ ಆಸ್ಥಾನ ಪ್ರವೇಶಿಸಿದರು. ಅಸುರನಿಗೂ ಕುತೂಹಲ ಹುಟ್ಟಿತು. ಆಟ ತೋರಿಸಲು ಹೇಳಿದನು. ಬಗೆ ಬಗೆಯ ಆಟ ತೋರಿಸಿದರು. ದೈತ್ಯನಿಗೆ ಬಹಳ ಖುಷಿಯಾಯಿತು. 'ಬೇಕಾದುದನ್ನು ಬೇಡಿಕೊಳ್ಳಿ' ಅಂದ. 'ನೀನು ಸೂಡಿರುವ ಕೊಡೆ ಕೊಡು' ಅಂದ ವಾಲಗದ ಮನುಷ್ಯ. ದೈತ್ಯನಿಗೆ ಸಿಟ್ಟು ಬಂತು. ಒಂದೇ ತುತ್ತಿಗೆ ವಾಲಗದವನನ್ನು ನುಂಗಿಬಿಟ್ಟ. ಆಮೇಲೆ 'ನಿನಗೆ ಬೇಕಾದುದನ್ನು ಕೇಳು' ಎಂದು ಆಟ ಆಡಿಸುವವನಿಗೆ ಹೇಳಿದ. 'ನೀನು ಕುಳಿತಿರುವ ಗದ್ದುಗೆ ಬೇಕು' ಅಂದ. ಅವನ ಮೇಲೂ ಸಿಟ್ಟುಬಂತು. ನುಂಗಿಯೇಬಿಟ್ಟ, ಅಷ್ಟರಲ್ಲಿ ಬಸವ ಹೂಂಕರಿಸಿತು. 'ನಮ್ಮವರಿಬ್ಬರನ್ನು ನುಂಗಿದೆ; ನಿನ್ನನ್ನು ಸುಮ್ಮನೆ ಬಿಡುವುದಿಲ್ಲ' ಎಂದು ಹಾಯಲು ಮುಂದಾಯಿತು. ನಿನ್ನನ್ನು ಬಿಡುವುದೇನು' ಎಂದು ರಾಕ್ಷಸ ಅದನ್ನು ನುಂಗಿ ನೀರು ಕುಡಿದ. ಹೊಟ್ಟೆ ಸೇರಿದರೂ ಮೂವರೂ ಸಾಯಲಿಲ್ಲ ಅಲ್ಲೇ ಕುತೂಹಲ ಎಬ್ಬಿಸಿದರು. ವಿಷ್ಣು ತನ್ನ ಘಂಟೆಯಿಂದ ಅಸುರನ ಹೊಟ್ಟೆಯನ್ನು ಬಗೆದ.

ಶಿವ ತನ್ನ ಡಮರಿನ ಕೋಲಿನಿಂದ ಹೊಟ್ಟೆಯನ್ನು ಭೇದಿಸಿದ. ಬಸವ ಅಸುರನ ಕರುಳು ಮಾಲೆಯನ್ನು ಕೋಡಿಗೆ ಸುತ್ತಿಕೊಂಡು ಹೊರಬಂದಿತು, ಜತೆಗೆ ಉಳಿದಿಬ್ಬರೂ ಹೊರಬಂದರು. ರಾಕ್ಷಸ ಸತ್ತುಬಿದ್ದ, ಶಿವ, ವಿಷ್ಣು, ನಂದಿ ಇವರ ಕೆಲಸವಾಯಿತು. ದೇವತೆಗಳಿಗೆ ನೆಮ್ಮದಿಯುಂಟಾಯಿತು'. ಅಂದಿನಿಂದಲೂ ದುಷ್ಟರ ಸಂಹಾರಕ್ಕಾಗಿ, ಪೀಡೆ ಕಳೆಯುವುದಕ್ಕಾಗಿ ಈ ಆಟ ಆಡಿಸುತ್ತ ಬಂದಿದ್ದಾರೆ ಎಂದು ಈ ವಂಶದವರು ಇಂಥ ದಂತಕಥೆ ಹೇಳುವ ವಾಡಿಕೆಯಿದೆ[೪೪].

ಕುಮಾರರಾಮನ 'ಶಾಪ' ಮತ್ತು ಡೊಂಬರು

ಡೊಂಬರ ಮಹತ್ವದ ಪೌರಾಣಿಕ ದಾಖಲೆಗಳೆಂದರೆ ಕುಮಾರರಾಮ ಮತ್ತು ರತ್ನಾಜಿಯರ ಪ್ರಸಂಗಗಳು. ಕನ್ನಡದ ವಾಂಙ್ಮಯ ಇತಿಹಾಸದಲ್ಲಿ ಅತಿ ಹೆಚ್ಚು ಕಾವ್ಯಗಳಿಗೆ ವಸ್ತುವಾಗಿರುವವನು ಕುಮಾರರಾಮ. ಜೊತೆಗೆ ಕನ್ನಡದ ಭಾಷಿಕ ಪ್ರದೇಶಗಳಲ್ಲೆಲ್ಲ ಕುಮಾರರಾಮ ಪೂಜ್ಯನೀಯ ಐತಿಹಾಸಿಕ ಪುರುಷ. ಪ್ರಾಯಶಃ ಕರ್ನಾಟಕದಲ್ಲಿ ಕುಮಾರರಾಮನಷ್ಟು ಜನಪ್ರಿಯ ರಾಜ ಇನ್ನೊಬ್ಬನಿಲ್ಲ. ಕುಮಾರರಾಮನ ಮೇಲೆ ನಂಜುಂಡ ಕವಿ ಕುಮಾರರಾಮ ಚರಿತ, ಪಾಂಚಾಳ ಗಂಗ ಚೆನ್ನರಾಮನ ಸಾಂಗತ್ಯ, ಮಹಲಿಂಗ ಸ್ವಾಮಿ ಬಾಲರಾಮನ ಸಾಂಗತ್ಯ ಕೃತಿಗಳನ್ನು ರಚಿಸಿದ್ದಾರೆ. ಕರ್ನಾಟಕದಾದ್ಯಂತ ಕುಮಾರರಾಮನ ಕುರಿತ ಜನಪದ ಕಥನಕಾವ್ಯಗಳು ಹೇರಳವಾಗಿ ಸಿಗುತ್ತವೆ. ಕುಮಾರರಾಮ ಈವತ್ತಿಗೂ ಕನ್ನಡದ ವಾಂಙ್ಮಯ ಸಂದರ್ಭದಲ್ಲಿ ಜೀವಂತವಾಗಿದ್ದಾನೆ. ಕುಮಾರರಾಮನಿಗೆ ಸಂಬಂಧಿಸಿದ ಕಾವ್ಯಗಳಲ್ಲಿನ ಮುಖ್ಯ ಪ್ರಸಂಗ, ಕುಮಾರರಾಮ ಮತ್ತು ರತ್ನಾಜಿಯದು. ಇವರ ನಡುವೆ ನಡೆದಿರಬಹುದಾದ ಹತಾಶೆಯ ಪ್ರಣಯ ಪ್ರಸಂಗದ ಹಿನ್ನೆಲೆಗಳು ಮಾತ್ರ 'ಶಿಷ್ಟ ಮತ್ತು ಜಾನಪದ' ಕಾವ್ಯಗಳಲ್ಲಿ ವಿಭಿನ್ನವಾಗಿವೆ. 'ಶಿಷ್ಟ' ಕಾವ್ಯಗಳಾದ ಕುಮಾರರಾಮ ಚರಿತ, ಚನ್ನರಾಮ ಸಾಂಗತ್ಯ, ಬಾಲರಾಮನ ಸಾಂಗತ್ಯಗಳಲ್ಲಿ ಕಂಪಿಲನ ಎರಡನೇ ಹೆಂಡತಿ ಡೊಂಬರ ಸಮುದಾಯಕ್ಕೆ ಸೇರಿದ ರತ್ನಾಜಿಯು ವರಸೆಯಲ್ಲಿ ಮಗನಾಗಬೇಕಿದ್ದ ಕುಮಾರರಾಮನ ಪ್ರಣಯಕ್ಕೆ ಹಾತೊರೆಯುವುದು ಮತ್ತು ಆಕೆ ತನ್ನ ಪ್ರಯತ್ನದಲ್ಲಿ ವಿಫಲಳಾಗಿ ಕುಮಾರರಾಮನನ್ನು ಕೊಲ್ಲುವಂತೆ ಸಂಚು ಮಾಡುವ ಖಳನಾಯಕಿಯಾಗಿಯೂ ಚಿತ್ರಿತಳಾಗಿದ್ದಾಳೆ. ಆದರೆ ಹಲವು ಜನಪದ ಕಥನ ಗೀತೆಗಳಲ್ಲಿ ಮತ್ತು ಬುರ್ರಕಥಾ ಈರಮ್ಮ ಹಾಡಿರುವ ಕುಮಾರರಾಮನ ಕಾವ್ಯದಲ್ಲಿ ರತ್ನಾಜಿಯ ಪ್ರಸಂಗವು ತೀರಾ ಭಿನ್ನವಾಗಿ ರೂಪುಗೊಂಡಿರುವುದು ಕಂಡು ಬರುತ್ತದೆ. ಈ ಜನಪದ ಕಾವ್ಯಗಳಲ್ಲಿ ರತ್ನಾಜಿಯನ್ನು ಮೊದಲು ಇಷ್ಟಪಡುವವನು ಮತ್ತು ಮದುವೆಯಾಗ ಬಯಸುವವನು ಕುಮಾರರಾಮ. ಕಂಪಿಲರಾಯನೂ ಸಹ ರತ್ನಾಜಿಯನ್ನು ಕುಮಾರರಾಮನಿಗೆ ಮದುವೆ ಮಾಡಲು ಮುಂದಾಗುತ್ತಾನೆ. ಆದರೆ ಕಂಪಿಲ ರತ್ನಾಜಿಯನ್ನು ನೋಡಿ ಅವಳ ಸೌಂದರ್ಯಕ್ಕೆ ಮಾರು ಹೋಗಿ ತಾನೇ ಅವಳನ್ನು ಮದುವೆಯಾಗಲು ಬಯಸುತ್ತಾನೆ. ತನ್ನ ಮಗ ಕುಮಾರರಾಮ ಮದುವೆಯಾಗಬೇಕಿದ್ದ ರತ್ನಾಜಿಯನ್ನು ಮೋಸದಿಂದ ತನ್ನ ಪಟ್ಟದ ಖಡ್ಗಕ್ಕೆ ಮದುವೆ ಮಾಡಿಸಿ ತನ್ನ ಎರಡನೇ ಹೆಂಡತಿಯನ್ನಾಗಿಸಿಕೊಳ್ಳುತ್ತಾನೆ. ಪರಸ್ಪರ ಇಷ್ಟಪಟ್ಟು ಮದುವೆಯಾಗಬೇಕಿದ್ದ ರತ್ನಾಜಿ ಮತ್ತು

ಕುಮಾರರಾಮ, ಮಲತಾಯಿ ಮತ್ತು ಮಲಮಗ ಆಗಿಬಿಡುವ ಅನಿವಾರ್ಯತೆಯನ್ನು ಅನುಭವಿಸುತ್ತಾರೆ. ಕುಮಾರರಾಮ ಒಬ್ಬ ರಾಜಕುಮಾರನಾಗಿ ರತ್ನಾಜಿ ಭಗ್ನಪ್ರೇಮವನ್ನು ಸುಲಭವಾಗಿ ಪರಿಗಣಿಸುತ್ತಾನೆ. ಅವನಿಗೆ ತನ್ನ ತಂದೆ ಮತ್ತು ಅವನು ಕಟ್ಟಿದ ರಾಜ್ಯ ಮುಖ್ಯ. ಅದಕ್ಕಾಗಿ ಅವನು ತನ್ನ ಪ್ರೇಮವನ್ನೇ ‘ತ್ಯಾಗ’ ಮಾಡುತ್ತಾನೆ. ತಾನು ಬಯಸಿದ ಹುಡುಗಿಯನ್ನು ತನ್ನ ತಂದೆಯೇ ಮೋಸದಿಂದ ಮದುವೆಯಾದದ್ದನ್ನು ಪ್ರತಿಭಟಿಸದೆ ಒಪ್ಪಿಕೊಳ್ಳುವುದು ಕುಮಾರರಾಮನ ಊಳಿಗಮಾನ್ಯ ಪ್ರವೃತ್ತಿಯ ಸಹಜ ಸ್ವಭಾವವೂ ಹೌದು. ಆದರೆ ಕೆಳಜಾತಿಯಲ್ಲಿ ಹುಟ್ಟಿದ ಮತ್ತು ತನ್ನ ಇಚ್ಛೆಗೆ ಅನುಗುಣವಾಗಿ ಬದುಕಿ ಬಂದ ರತ್ನಾಜಿ ಈ ಮೋಸದ ಮದುವೆಯನ್ನು ಒಪ್ಪುವುದೇ ಇಲ್ಲ. ಕುಮಾರರಾಮನ ಮೇಲಿನ ತನ್ನ ಪ್ರೇಮವನ್ನು ರತ್ನಾಜಿ ಜೀವಂತವಾಗಿಟ್ಟುಕೊಂಡೇ ಬರುತ್ತಾಳೆ. ರಾಜ ತನಗಿಷ್ಟ ಬಂದವರನ್ನು, ಎಷ್ಟು ಜನರನ್ನು ಬೇಕಾದರೂ ಮದುವೆಯಾಗಬಹುದು. ಅವರಿಗೆಲ್ಲ ಪ್ರತ್ಯೇಕ ಅರಮನೆ, ಊಳಿಗದವರನ್ನು, ದಾಸಿಯರನ್ನು, ಬೀಜ ಒಡೆದ ಸೇವಕರನ್ನು ತನ್ನ ರಾಣಿಯರ ಸೇವೆಗೆ ನೇಮಿಸಬಹುದು. ಆದರೆ ಪಟ್ಟದ ರಾಣಿಯ ಹೊರತಾಗಿ ಯಾರಿಗೂ ರಾಜ್ಯಧಿಕಾರದ ಮೇಲೆ ಒಡೆತನವಿಲ್ಲ. ಕಿರಿಯ ರಾಣಿಯರು ರಾಜನ ಬಂಗಾರ ಪಂಜರದಲ್ಲಿ ಬಂಧಿಗಳಾದ ಭೋಗಕ್ಕೆ ಮೀಸಲಾದ ಪರಿಕರಗಳು ಮಾತ್ರ. ರತ್ನಾಜಿ ಸ್ವಚ್ಛಂದವಾಗಿ ಬದುಕುತ್ತಿದ್ದ ಡೊಂಬರ ಸಮುದಾಯದಿಂದ ಬಂದವಳು. ಅವಳು ಕಂಪಿಲನ ಮೋಸವನ್ನು ಮತ್ತು ಕುಮಾರರಾಮನ ನಿರ್ಲಿಪ್ತತೆಯನ್ನು ಸಹಜವಾಗಿಯೇ ವಿರೋಧಿಸುತ್ತಾಳೆ. ತಾನು ಪ್ರೇಮಿಸಿದ ಕುಮಾರರಾಮ ಶತಾಯಗತಾಯ ಅವಳಿಗೆ ಬೇಕು. ಅದಕ್ಕಾಗಿಯೇ ಅವಳು ಕುಮಾರರಾಮನನ್ನು ಪಡೆದುಕೊಳ್ಳಲು ಪ್ರಯತ್ನ ಮಾಡುತ್ತಾಳೆ. ಅದು ಈಡೇರದೇ ಹೋದಾಗ, ತನ್ನ ಸ್ವಾತಂತ್ರ್ಯವನ್ನು ಕಸಿದುಕೊಂಡ ಊಳಿಗಮಾನ್ಯ ವ್ಯವಸ್ಥೆಯನ್ನೇ ಸ್ಫೋಟಿಸಲು ಮುಂದಾಗುತ್ತಾಳೆ. ಆಮೇಲೆ ತನ್ನ ಪ್ರಯತ್ನದಲ್ಲಿ ಸೋಲುವುದು ಮತ್ತು ಕುಮಾರರಾಮನ ಶಾಪಕ್ಕೆ ಒಳಗಾಗುವುದು ಪುನಃ ರತ್ನಾಜಿಯೇ. ರತ್ನಾಜಿಯ ಚಾಡಿಯ ಮಾತಿಗೆ ಕುಮಾರರಾಮನ ತಲೆ ಕತ್ತರಿಸುವಂತೆ ಕಂಪಿಲ ಆಜ್ಞೆ ಮಾಡುತ್ತಾನೆ. ಮಂತ್ರಿ ಬೈಚಣ್ಣ ಉಪಾಯದಿಂದ ಕುಮಾರರಾಮನಂತಿದ್ದ ಹೋಲಿಕೆರಾಮನ ತಲೆ ಕತ್ತರಿಸಲಾಗುತ್ತದೆ. ಆಗ ‘ಕತ್ತರಿಸುತ್ತಲೇ ರುಂಡ ಆಕಾಶಕ್ಕೆ ನೆಗೆಯುತ್ತದೆ. ತನ್ನ ತಲೆಯಿಂದ ಬೀಳುವ ಪ್ರತಿ ಹನಿಯ ಜಾಗದಲ್ಲಿ ರತ್ನಾಜಿಯನ್ನು ಎದೆಯ ಮೇಲಿನ ಸೆರಗು ತೆಗೆಸಿ ಕುಣಿಸುವೆ ಎಂದು ಪ್ರತಿಜ್ಞೆ ಮಾಡಿ ರುಂಡ ಮರೆಯಾಗುತ್ತದೆ’[೪೨]. ಈವತ್ತಿಗೂ ಶಿವಮೊಗ್ಗ ಜಿಲ್ಲೆಯ ಹಳ್ಳಿಗಳಲ್ಲಿ ‘ಡೊಂಬರ ಹಬ್ಬ’ ಎಂಬ ಆಚರಣೆಯ ಸಂದರ್ಭದಲ್ಲಿ ಡೊಂಬರ ಹೆಣ್ಣುಮಕ್ಕಳು ಕುಮಾರರಾಮನನ್ನು ಸಂಪ್ರೀತಗೊಳಿಸಲು ಬೀದಿಯಲ್ಲಿ ಕುಣಿಯುತ್ತಾರೆ. ಇದಕ್ಕೆ ಅಂದು ಕುಮಾರರಾಮ ಕೊಟ್ಟ ಶಾಪವೇ ಕಾರಣ ಎಂದು ಡೊಂಬರು ನಂಬಿ ಈ ಆಚರಣೆಯಲ್ಲಿ ಪಾಲ್ಗೊಳ್ಳುತ್ತಾರೆ. ತಮ್ಮ ಸಮುದಾಯದಲ್ಲಿರುವ ‘ದೇವದಾಸಿ ಪದ್ಧತಿ ಮತ್ತು ಡೊಳ್ಳು ಪ್ರಸ್ತ’ ಆಚರಣೆಗಳನ್ನು ಡೊಂಬರು ಈ ಶಾಪದ ಮೂಲಕವೇ ಸಮರ್ಥಿಸಿಕೊಳ್ಳುತ್ತಾರೆ. ‘ಕುಮಾರರಾಮನಿಂದ ರತ್ನಾಜಿಗೆ ಬಂದ ಶಾಪದಿಂದಾಗಿ ತಾವು ತಮ್ಮ ಹೆಣ್ಣುಗಳನ್ನು ಡೊಳ್ಳಿಗೆ ಧಾರೆ ಎರೆದು ದೇವರ ಮುಂದೆ ಕುಣಿಸಬೇಕಾಗಿದೆ ಎನ್ನುತ್ತಾರೆ. ರತ್ನಾಜಿಗೆ ಬಂದ ಶಾಪ ತಮ್ಮ

ಕುಲಕ್ಕೇ ಬಂದ ಶಾಪ ಎನ್ನುತ್ತಾರೆ ಡೊಂಬರು’[೪೩].

‘ಶಿಷ್ಟ’ ಕವಿಗಳು ಬರೆದ ಕುಮಾರರಾಮನ ಕಾವ್ಯಗಳಲ್ಲಿ ರತ್ನಾಜಿ ಒಬ್ಬ ಖಳನಾಯಕಿ, ಶಿಕ್ಷೆಗೆ ಒಳಪಡುವವಳು. ‘ಅನೈತಿಕವಾಗಿ’ ಕುಮಾರರಾಮನನ್ನು ಬಯಸುವವಳು. ಆದರೆ ಜನಪದ ಕಾವ್ಯಗಳಲ್ಲಿ ರತ್ನಾಜಿ ಒಂದು ಹೆಣ್ಣಾಗಿ ಕುಮಾರರಾಮನನ್ನು ಬಯಸುತ್ತಾಳೆ. ಕುಮಾರರಾಮನೂ ಅವಳನ್ನು ಪ್ರೇಮಿಸುತ್ತಾನೆ. ಕಂಪಿಲನ ಮೋಸದಿಂದಾಗಿ ತನ್ನ ಪ್ರೇಮದಿಂದ ವಂಚಿತಳಾಗುವ ರತ್ನಾಜಿಯು ಸಹಜವಾಗಿ ಕುಮಾರರಾಮನನ್ನು ಬಯಸುತ್ತಾಳೆ. ಇವಳ ಬಯಸುವಿಕೆಯನ್ನು ಜನಪದ ಕಾವ್ಯದಲ್ಲಿ ‘ನೀತಿ, ಅನೀತಿಯ’ ಮಾನದಂಡಗಳಿಂದ ಅಳೆಯುವುದಿಲ್ಲ. ಇಲ್ಲಿ ಮಾನವ ಸಹಜವಾದ ಪ್ರೇಮ, ಪ್ರಣಯ ಮತ್ತು ನ್ಯಾಯಬದ್ಧ ಹಂಬಲಿಸುವಿಕೆಗಳು ವಿಜೃಂಭಿಸುತ್ತವೆ. ಮೊದಲಿಗೆ ತಾನು ಪ್ರೇಮಿಸಿದ ಕುಮಾರರಾಮ ತನ್ನವನು ಎಂದು ರತ್ನಾಜಿ ಭಾವಿಸುತ್ತಾಳೆ. ಅದಕ್ಕಾಗಿ ಶತಾಯಗತಾಯ ಅವನನ್ನು ಸೇರಲು ಹಂಬಲಿಸುತ್ತಾಳೆ. ಈ ಹಂಬಲಿಸುವಿಕೆಯು ‘ವ್ಯಸನವಾಗುವುದು’ ಕಂಪಿಲನೆಂಬ ವೃದ್ಧ ಬಲತ್ಕಾರದಿಂದ, ಮೋಸದಿಂದ ರತ್ನಾಜಿಯನ್ನು ಮದುವೆಯಾದ ಕಾರಣಕ್ಕಾಗಿ. ಜೊತೆಗೆ ಈ ‘ವ್ಯಸನವು’ ಸಹಜವಾಗಿಯೇ ಸೇಡಿನ ರೂಪು ಪಡೆಯುವುದು ಹೆಣ್ಣನ್ನು ಕೇವಲ ಭೋಗದ ವಸ್ತು ಎಂದು ತಿಳಿಯುವ ಊಳಿಗಮಾನ್ಯ ಸಾಮಾಜಿಕ ವ್ಯವಸ್ಥೆಯಲ್ಲಿ. ಆದರೆ ಶಿಷ್ಟ ಕಾವ್ಯಗಳು ಮಾತ್ರ ಸಹಜವಾಗಿ ಊಳಿಗಮಾನ್ಯ ಸಮಾಜದ ದೃಷ್ಟಿಯಿಂದಲೇ ರತ್ನಾಜಿಯನ್ನು ಗ್ರಹಿಸುತ್ತವೆ. ಶೀಲ, ಪಾತಿವ್ರತ್ಯ ಮುಂತಾದ ಕ್ಲೀಷೆಗಳ ಮೂಲಕ ರತ್ನಾಜಿಯನ್ನು ವಿಶ್ಲೇಷಿಸುತ್ತವೆ. ರತ್ನಾಜಿಯನ್ನು ಶಿಷ್ಟ ಕಾವ್ಯಗಳು ಒಂದು ಹೆಣ್ಣು ಎಂದು ಭಾವಿಸುವುದಿಲ್ಲ. ರತ್ನಾಜಿ ಒಬ್ಬ ರಾಜನ ಉಪಪತ್ನಿ, ಒಬ್ಬ ವ್ಯಕ್ತಿಗೆ ಮೀಸಲಾದ ‘ವಸ್ತು’, ಒಮ್ಮೆ ಮದುವೆಯಾಗಿ ಬಿಟ್ಟರೆ ಏನೇ ಆದರೂ (ಆ ಮದುವೆ ಮೋಸದ್ದೇ ಆಗಿದ್ದರೂ, ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡುವ ಹಿಂದು ಪರಂಪರೆಯ ಪ್ರಕಾರ) ಹೆಂಗಸು ಎಲ್ಲವನ್ನೂ ಸಹಿಸಿಕೊಂಡು ತನ್ನ ಗಂಡನ ಜೊತೆಗಿರಬೇಕು. ತನ್ನ ಆಸೆ ಆಕಾಂಕ್ಷೆಗಳನ್ನು ಗಂಡನ ಮೂಲಕ ಮಾತ್ರ ಈಡೇರಿಸಿಕೊಳ್ಳಬೇಕು ಎಂಬ ಮನೋಭಾವ ಈ ‘ಶಿಷ್ಟ’ ಕಾವ್ಯಗಳ ಹಿಂದೆ ಕೆಲಸ ಮಾಡಿದೆ. ಅದೇ ಕಾರಣಕ್ಕೆ ರತ್ನಾಜಿಯು ಖಳನಾಯಕಿ, ವರಸೆಯಲ್ಲಿ ಮಗನಾಗಬೇಕಿದ್ದ ಕುಮಾರರಾಮನನ್ನು ಬಯಸಿದ ‘ಅನೀತಿಯ’ ಹೆಣ್ಣು. ಈ ಕಾರಣಕ್ಕಾಗಿ ರತ್ನಾಜಿ ಶಿಕ್ಷೆಗಾಗಲಿ, ಶಾಪಕ್ಕಾಗಲಿ ಅರ್ಹಳು. ತಮಾಷೆಯೆಂದರೆ ಯಾವುದೋ ಕಾಲದಲ್ಲಿ ನಡೆದಿರಬಹುದಾದ ಈ ಕುಮಾರರಾಮ ಮತ್ತು ರತ್ನಾಜಿಯ ಪ್ರಸಂಗಗಳು ವರ್ತಮಾನದ ಡೊಂಬರ ಬದುಕನ್ನು ವಿಕಾರವಾಗಿ ನಿಯಂತ್ರಿಸುತ್ತಿರುವುದು. ಕರ್ನಾಟಕದಲ್ಲಿಯ ಡೊಂಬರು ತಮ್ಮ ಹೆಣ್ಣುಗಳನ್ನು ದೇವದಾಸಿಯರನ್ನಾಗಿಸುವುದು ಮತ್ತು ಡೊಳ್ಳುಪ್ರಸ್ತವನ್ನು ಸಮರ್ಥಿಸಿಕೊಳ್ಳುವುದು ಪುರಾಣದ ಕುಮಾರರಾಮನ ಶಾಪದ ಮೂಲಕ. ಇಂದಿಗೂ ಡೊಂಬರ ಸಮುದಾಯದಲ್ಲಿ ದೇವದಾಸಿ ಪದ್ಧತಿ ಅಲ್ಲಲ್ಲಿ ಜಾರಿಯಲ್ಲಿದೆ. ಜಾರಿ ಇದ್ದ ಕಡೆಗಳಲ್ಲೆಲ್ಲ ಕುಮಾರರಾಮ ಒಬ್ಬ ಊಳಿಗಮಾನ್ಯ ವ್ಯವಸ್ಥೆಯ ಪ್ರತಿನಿಧಿಯಂತೆ, ಈ ದೇವದಾಸಿ ಪದ್ಧತಿಯನ್ನು ಸಮರ್ಥಿಸುವ ರೂಪಕದಂತೆ ಡೊಂಬರ ಮನಸ್ಸಿನಲ್ಲಿ ಜೀವಂತವಾಗಿದ್ದಾನೆ. ಆದರೆ ಅವನ ಶಾಪದಿಂದ ಡೊಂಬರು ಯಾವತ್ತು ವಿಮೋಚಿತರಾಗುತ್ತಾರೋ ಕುಮಾರರಾಮನೇ ಉತ್ತರಿಸಬೇಕು!

ವೈಕಲ್ಯದ ಶಾಪಗ್ರಸ್ತ ಹುಟ್ಟು

ಈ ಎಲ್ಲಾ ಸೃಷ್ಟಿಪುರಾಣಗಳಲ್ಲಿ ಡೊಂಬರ ಮತ್ತು ಉಳಿದ ಅಲೆಮಾರಿಗಳ ಮೂಲ ಪುರುಷರು ಮುಖ್ಯವಾಹಿನಿಯಿಂದ ಬಹಿಷ್ಕೃತರಾದವರು, ತಿರಸ್ಕೃತರಾದವರು ಮತ್ತು ಯಾರಿಗೂ ಬೇಡವಾದವರು. ಅಂಗವೈಕಲ್ಯದಿಂದ ಹುಟ್ಟಿದ ಮಗು ತನ್ನ ಕುಟುಂಬದಿಂದಲೇ ಬಹಿಷ್ಕೃತಗೊಳ್ಳುತ್ತದೆ. ಪ್ರತ್ಯಕ್ಷರಾದ ಶಿವಪಾರ್ವತಿಯರು 'ಭಿಕ್ಷೆ ಬೇಡಿ ಬದುಕು' ಎಂದು ಹರಸುತ್ತಾರೆ! ಮತ್ತೆ ರೆಡ್ಡಿಯ ಹಿರಿಯ ಹೆಂಡತಿ, ಕಿರಿಯ ಹೆಂಡತಿಗೆ ಆಸ್ತಿ ಕೊಡುವುದನ್ನು ನಿರ್ಬಂಧಿಸುತ್ತಾಳೆ. ಚಿನ್ನಾಸಾನಿಯ ತಾಯಿಗೆ ಸಿಗುವುದು ಕೇವಲ ಕಸರತ್ತು ಮಾಡಿ ಬದುಕಬಹುದಾದ ಪರಿಕರಗಳು ಮಾತ್ರ. ಚಿಕ್ಕ ಹೆಂಡತಿ ಗಂಡನ ಆಸ್ತಿಗೆ 'ಹಕ್ಕುದಾರಳಲ್ಲ'. ಇನ್ನು ಕೆಲವು ಕಥೆಗಳಲ್ಲಿ ಡೊಂಬರ ಮೂಲ ಪುರುಷ ಹಾದರದಿಂದ ಹುಟ್ಟುತ್ತಾನೆ. ಇಲ್ಲವೇ ಅಂತರ್ಜಾತಿಯ ವಿವಾಹದಿಂದ ಜನಿಸುತ್ತಾನೆ. ಅಲ್ಬರೂನಿ ಸಹ ತನ್ನ ಪ್ರವಾಸ ಕಥನದಲ್ಲಿ ಇದನ್ನು ಉಲ್ಲೇಖಿಸುತ್ತಾನೆ. 'ಡೊಂಬರನ್ನು ಹಾದರದ ಮಕ್ಕಳೆಂದು ಪರಿಗಣಿಸಲಾಗುತ್ತದೆ. ಇವರು ಶೂದ್ರ ತಂದೆ ಮತ್ತು ಬ್ರಾಹ್ಮಣ ಸ್ತ್ರೀಯ ಹಾದರದಿಂದ ಹುಟ್ಟಿದವರಾದ್ದರಿಂದ ಇವರು ಕೆಳಜಾತಿಗೆ ಸೇರಿಸಲ್ಪಟ್ಟರು'"' ಎನ್ನುತ್ತಾನೆ ಅಲ್ಬರೂನಿ. ಕುಮಾರರಾಮ ಮತ್ತು ರತ್ನಾಜಿಯ ಪ್ರಸಂಗ ಅತ್ಯಂತ ಜನಪ್ರಿಯ ಕಥನ. ಇಲ್ಲಿ ರತ್ನಾಜಿ ಕುಮಾರರಾಮನನ್ನು ಬಯಸಿದ್ದಕ್ಕೆ 'ಬೇರೆಯವರಿಗೆ ಸೆರಗು ಹಾಸಿ ಬದುಕು' ಎಂಬ ಶಾಪಕ್ಕೊಳಗಾಗುತ್ತಾಳೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿಗಳೆಂದರ, ಡೊಂಬರ ಮೂಲ ಪುರುಷ ಸಮಾಜದಿಂದ ಬಹಿಷ್ಕೃತನಾದವನು. ಮತ್ತು ವಿಲೋಮ ವಿವಾಹದಿಂದ ಜನಿಸಿದವನು. ಹಾದರಕ್ಕೆ ಹುಟ್ಟಿದವನು. ಈ ಕಾರಣಕ್ಕಾಗಿ ಇವನಿಗೆ ಸಮಾಜದಲ್ಲಿ ಸ್ಥಾನಮಾನಗಳಿಲ್ಲ. ಇನ್ನು ಡೊಂಬರ ಮೂಲ ಪುರುಷ ವಿಕಲಾಂಗ. ಅವನಿಗೆ ಕೈಕಾಲುಗಳು ಬಂದರೂ 'ಮೇಲಿನಿಂದ ಬಂದವರು' ನೀನು ಕೇವಲ 'ಭಿಕ್ಷೆ ಬೇಡಿ ಮಾತ್ರ ಬದುಕು' ಎಂದು ಹರಸುತ್ತಾರೆ. ವೃದ್ಧ ಕಂಪಿಲನಿಂದ ಮೋಸದಿಂದ ಮದುವೆಯಾಗಲ್ಪಟ್ಟ ರತ್ನಾಜಿಯು ವಯೋ ಸಹಜ ಪ್ರೇಮದಿಂದ ತಾನು ಇಷ್ಟಪಟ್ಟಿದ್ದ ಕುಮಾರರಾಮನನ್ನು ಬಯಸಿದಾಕ್ಷಣ ಶಾಪಗ್ರಸ್ತಳಾಗುತ್ತಾಳೆ. ಇವಳ ಸಂತಾನವೇ ಡೊಂಬರು. ಯಾಕಾಗಿ ಒಂದು ಸಮುದಾಯ ಈ ಬಗೆಯ ಹೃದಯ ವಿದ್ರಾವಕ ಕಥನಗಳನ್ನು ಕಟ್ಟಿಕೊಂಡು ತನ್ನನ್ನು ವಿವರಿಸಿಕೊಳ್ಳುತ್ತದೆ? ಬಹಿಷ್ಕಾರ, ತಿರಸ್ಕಾರ, ಹಾದರ ಮತ್ತು ಶಾಪಗಳೇ ವಿಜೃಂಭಿಸುವ ತಮ್ಮ ಹುಟ್ಟಿನ ಕಥೆಗಳನ್ನು ಯಾಕಾಗಿ ಈ ಸಮುದಾಯ ಕಟ್ಟಿಕೊಂಡು ಬಂದಿದೆ? ಈ ಪುರಾಣದ ಕಥನಗಳಿಗೂ ಡೊಂಬರ ವರ್ತಮಾನದ ಸ್ಥಿತಿಗೂ ಸಂಬಂಧಗಳಿವೆಯೇ? ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಿದೆ.

ಶಿವನ ಸೇವೆಯನ್ನು ಮಾಡಲೆಂದೇ ಸುಡುಗಾಡು ಸಿದ್ಧರು ತಮ್ಮ ಕೃಷಿ ಭೂಮಿಯನ್ನು ಕಳೆದುಕೊಳ್ಳುವ ಶಾಪಕ್ಕೆ ಒಳಗಾಗುತ್ತಾರೆ. ಪಾರ್ವತಿಯ ಶಾಪದಿಂದ ಸುಡುಗಾಡು ಸಿದ್ಧರು ತಮ್ಮ ಆರ್ಥಿಕ ಮೂಲಗಳನ್ನು ಕಳೆದುಕೊಂಡು ಶಿವನ ಸೇವೆಗೆ ನಿಲ್ಲುತ್ತಾರೆ. ವ್ಯಾಘ್ರಾಸುರನ ಸಂಹಾರಕ್ಕೆ ಭೂಮಿಗೆ ಇಳಿದು ಬಂದು, ವ್ಯಾಘ್ರಾಸುರನನ್ನು ಕೊಂದ ನಂದಿಯನ್ನು ಲೋಕದ ಕಲ್ಯಾಣಕ್ಕಾಗಿ ಊರೂರಲ್ಲಿ ಆಡಿಸಲೆಂದೇ ಕವಲೆತ್ತಿನವರು ತಮ್ಮನ್ನು ಗುರುತಿಸಿಕೊಳ್ಳುತ್ತಾರೆ. ತಮ್ಮ ಸಹೋದರರಾದ ಮಾರ್‍ವಾಡಿಗಳು ತಮ್ಮ ಪಾಲಿನ ಆಸ್ತಿಯನ್ನು

ಅಪಹರಿಸಿದರೆಂದು ದಕ್ಷಿಣಕ್ಕೆ ವಲಸೆ ಬಂದ ಹಕ್ಕಿಪಿಕ್ಕಿಗಳು ಇಂದಿಗೂ ಅಲೆಮಾರಿಗಳಾಗಿದ್ದಾರೆ.

ಇದೇ ರೀತಿ ಹೆಳವರ ಮೂಲ ಪುರುಷ ಅಂಗ ವೈಕಲ್ಯದಿಂದಲೇ ಜನಿಸುತ್ತಾನೆ. ಕೈಲಾಸದ ಒಕ್ಕಾಲು ಭೃಂಗೇಶ್ವರ ಪಾರ್ವತಿಯ ಶಾಪಕ್ಕೆ ಒಳಗಾಗಿ ಭೂಲೋಕಕ್ಕೆ ಬರುತ್ತಾನೆ. ಇವರ ಮೂಲ ಪುರುಷ ಬಹುತೇಕ ಪುರಾಣಗಳಲ್ಲಿ ಶಾಪಗ್ರಸ್ತನಾಗುತ್ತಾನೆ. ಜೊತೆಗೆ ವೈಕಲ್ಯ, ಅದು ಹುಟ್ಟು ವೈಕಲ್ಯ ಹೆಳವರ ಮೂಲ ಪುರುಷನಿಗೆ ಇತ್ತು ಎಂದು ಈ ಸಮುದಾಯಗಳ ಬಹುತೇಕ ಎಲ್ಲ ಸೃಷ್ಟಿ ಪುರಾಣಗಳು ಹೇಳುತ್ತವೆ.

ಮತ್ತೆ ಈ ಪುರಾಣಗಳನ್ನು ಪ್ರಮಾಣಬದ್ಧ ದಾಖಲೆಗಳೆಂದು ನಂಬುವ ಪ್ರಶ್ನೆ ಹಲವರನ್ನು ಕಾಡಬಹುದು. ಶೋಷಿತ ಜನಾಂಗಗಳ ಚರಿತ್ರೆ ಯಾವತ್ತೂ ಅಸಹಾಯಕತೆಯ ಕುಲುಮೆಯಲ್ಲಿ, ತೀವ್ರವಾದ ಆತ್ಮದ್ವೇಷದಲ್ಲಿ ರೂಪುಗೊಳ್ಳುತ್ತದೆ. ತಮ್ಮ ಮೂಲ ಪುರುಷ ಕುಂಟನಾಗಿದ್ದ, ಅಲ್ಲದೆ ಆತ ಶಾಪಗ್ರಸ್ತನಾಗಿ ಭೂಮಿಗೆ ಬಂದವನು ಎಂದು ಆತ್ಮದ್ವೇಷದ ಪುರಾಣ ಕಟ್ಟಿಕೊಳ್ಳುವಷ್ಟು ದುಡಿವ ವರ್ಗಗಳು ಅಸಹಾಯಕವಾಗಿವೆ. ಇಲ್ಲಿ ಅಲೆಮಾರಿಗಳ ಮೂಲ ಪುರುಷನನ್ನು ಶಪಿಸುವುದಾಗಲಿ, ಅಂಗವೈಕಲ್ಯದಿಂದ ಅವನನ್ನು ಸೃಷ್ಟಿಸುವುದಾಗಲಿ ದೇವತೆಗಳೆ. ಅಂದರೆ 'ಮೇಲಿನ ಜನ,' ಮೇಲಿನ ಜನರೆಂದರೆ ಆಳುವವರು, ಅಪ್ಪಣೆ ಜಾರಿ ಮಾಡುವವರು ಮತ್ತು ದುಡಿಸಿಕೊಳ್ಳುವವರು. ಈ ಕಾರಣದಿಂದ ಸೃಷ್ಟಿ ಪುರಾಣಗಳು ಕೇವಲ 'ಕ್ಷುದ್ರ' ರಚನೆಗಳಲ್ಲ. ಅವು ಕೆಳಜಾತಿಗಳ ಆತ್ಮದ್ವೇಷವನ್ನು ಅಂತರ್ಯದಲ್ಲಿಟ್ಟುಕೊಂಡ ತಪ್ತ ಜ್ವಾಲಾಮುಖಿಗಳು. ಇದರಿಂದಾಗಿ ಸೃಷ್ಟಿ ಪುರಾಣಗಳನ್ನು ನಾವು ಆಯಾ ಸಮುದಾಯಗಳ ಆತ್ಮಕಥೆಗಳೆಂದೇ ಭಾವಿಸಬೇಕಾಗುತ್ತದೆ. 'ಈ ಸೃಷ್ಟಿ ಪುರಾಣಗಳ ಮೂಲಕ ತಮ್ಮ ಜಾತಿ ಅನುಸರಿಸಿಕೊಂಡು ಬಂದ ಆರ್ಥಿಕ ಚಟುವಟಿಕೆಗಳಿಗೆ ಇವರು ಒಂದು ಚರಿತ್ರೆಯ ಆಯಾಮವನ್ನು ಕಲ್ಪಿಸುತ್ತಾರೆ. ಕಾರಣ ಈ ದೇಶದ ಚರಿತ್ರೆಯಲ್ಲಿ ಆಳುವವರಿಂದ ಈ ಅಲೆಮಾರಿಗಳು ತಮ್ಮ ಆರ್ಥಿಕ ಮೂಲಗಳನ್ನು ಕಳೆದುಕೊಳ್ಳುತ್ತಾ ಬಂದಿದ್ದಾರೆ. ನಿಶ್ಚಿತ ಆರ್ಥಿಕ ಮೂಲವನ್ನು ಕಳೆದುಕೊಂಡವನು ಪುರಾಣಗಳಲ್ಲಿ ಸಾಂಕೇತಿಕವಾಗಿ ಅಂಗವಿಕಲನಾಗುತ್ತಾನೆ. ಆರ್ಥಿಕವಾಗಿ ಪರಾವಲಂಬಿಯಾಗುತ್ತಾನೆ. ಪ್ರತಿಭಟನೆಯೂ ಸಾಧ್ಯವಾಗದೆ ಆತ್ಮದ್ವೇಷದಲ್ಲಿ ನಲುಗುತ್ತಲೇ ಬದುಕುತ್ತಾನೆ. ಕರ್ಮಸಿದ್ಧಾಂತವನ್ನು ಗಾಢವಾಗಿ ಪ್ರತಿಪಾದಿಸುವ ಭಾರತದಲ್ಲಿ 'ಪೂರ್ವಜನ್ಮದ' ಶಾಪದಿಂದ ಈ ಜನ್ಮದಲ್ಲಿ ನಿರ್ಗತಿಕನಂತೆ ಬದುಕಬೇಕಾದ ಸ್ಥಿತಿಯನ್ನು ಅನುಭವಿಸುತ್ತಾ ಆತ್ಮ ಮರುಕದಲ್ಲಿಯೇ ಬದುಕನ್ನೂ ಕಳೆಯುತ್ತಾನೆ.

ಇಂಡಿಯಾದ ಶ್ರೇಣೀಕೃತ ವ್ಯವಸ್ಥೆಯಲ್ಲಿ ಅಲೆಮಾರಿಗಳು ಸಹಜವಾಗಿಯೇ ಕೆಳಜಾತಿಯ ಸ್ಥಾನಮಾನ ಪಡೆದಿರುವುದು ನಮಗೆಲ್ಲ ಗೊತ್ತಿರುವ ಸಂಗತಿಯೇ ಆಗಿದೆ. ಆದರೆ ನೆಲೆನಿಂತು ನಿಶ್ಚಿತ ಆದಾಯದ ಮೂಲಗಳನ್ನು ಕಂಡುಕೊಂಡಿರುವ ಕೆಳಜಾತಿಗಳಿಗೂ ಅಲೆಮಾರಿಗಳಿಗೂ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅನೇಕ ಭಿನ್ನತೆಗಳು ಇಂದಿಗೂ ಉಳಿದುಕೊಂಡು ಬಂದಿವೆ. ಈ ಅಲೆಮಾರಿಗಳ ಮೂಲವನ್ನೂ ಕಂಡುಕೊಳ್ಳುವ ಸಂದರ್ಭದಲ್ಲಿ ನಮಗೆ ಸಿಕ್ಕುವ ಆಕರಗಳೆಂದರೆ ಈ ಸಮುದಾಯಗಳು ಕಟ್ಟಿಕೊಂಡು ಬಂದ ಸೃಷ್ಟಿ ಪುರಾಣಗಳು. ಈ ಸೃಷ್ಟಿ ಪುರಾಣಗಳಲ್ಲಿ ಆಯಾ ಸಮುದಾಯಗಳು ರೂಪುಗೊಂಡ ಚಾರಿತ್ರಿಕ ಸಂದರ್ಭವು

ದಾಖಲಾಗಿರುತ್ತದೆ. ಅಲೆಮಾರಿಗಳ ಸೃಷ್ಟಿಯ ಮೂಲ ಮತ್ತು ಅವರ ಸಾಮಾಜಿಕ ಚರಿತ್ರೆಯನ್ನು ಕಟ್ಟಿಕೊಡುವ ಹಂತದಲ್ಲಿ ನಾವು ಸ್ಪಷ್ಟ ಪುರಾವೆಗಳ ಸಮಸ್ಯೆಯನ್ನು ಎದುರಿಸುತ್ತೇವೆ. ಅಲೆಮಾರಿಗಳ ಮತ್ತು ಕೆಳಜಾತಿಗಳ ಬದುಕಿನ ಚರಿತ್ರೆಯನ್ನು ರೂಪಿಸಲು ಕ್ಲಾಸಿಕಲ್ ಆಕರಗಳ ಕೊರತೆ ಇದೆ ಎಂದು ಖ್ಯಾತ ವಿದ್ವಾಂಸರಾದ ಚಿದಾನಂದಮೂರ್ತಿಯವರೇ ಒಪ್ಪಿಕೊಳ್ಳುತ್ತಾರೆ[೮೫]. ಪ್ರಾಚೀನ ಶಾಸನ ಮತ್ತು ಸಾಹಿತ್ಯ ಕೃತಿಗಳನ್ನು ಅವಲಂಬಿಸಿಯೇ ಇವರ ಚರಿತ್ರೆಯನ್ನು ಕಟ್ಟಿಕೊಡಲು ಹೋದರೆ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅಲೆಮಾರಿಗಳೇ ಕಟ್ಟಿಕೊಂಡು ಬಂದ ಅವರ ಸೃಷ್ಟಿಪುರಾಣಗಳೇ ಪರ್ಯಾಯ ಚರಿತ್ರೆಯನ್ನು ಕಂಡುಕೊಳ್ಳಲು ನಮ್ಮನ್ನು ಪ್ರೇರೇಪಿಸುತ್ತವೆ. ಈ ಸೃಷ್ಟಿಪುರಾಣಗಳ ಮೂಲಕ ತಮ್ಮ ಜಾತಿ ಅನುಸರಿಸಿಕೊಂಡು ಬಂದ ಆರ್ಥಿಕ ಚಟುಟಿಕೆಗಳಿಗೆ ಅವರು ಒಂದು ಚರಿತ್ರೆಯ ಆಯಾಮವನ್ನು ಕಲ್ಪಿಸುತ್ತಾರೆ.

ಹೀಗೆ ಅಲೆಮಾರಿಗಳ ಸೃಷ್ಟಿ ಪುರಾಣಗಳಲ್ಲಿ, ಅಲೆಮಾರಿಗಳು ಯಾರದೋ ಶಾಪಕ್ಕೆ ತಮ್ಮ ಆರ್ಥಿಕ ಮೂಲಗಳನ್ನು ಕಳೆದುಕೊಳ್ಳುತ್ತಾರೆ. ಇಲ್ಲವೆ ಹುಟ್ಟುತ್ತಲೇ ಬರುವ ಅಂಗವೈಕಲ್ಯದಿಂದಾಗಿ ಆರ್ಥಿಕವಾಗಿ ಪರಾವಲಂಬಿತನವನ್ನು ಅನುಭವಿಸಲಾರಂಭಿಸುತ್ತಾರೆ. ಮತ್ತು ಯಾರದೋ ಸೇವೆಗಾಗಿ, ಇಲ್ಲವೆ ಲೋಕದ ಒಳಿತಿಗಾಗಿ ತಿರುಗುತ್ತಾ ಅಲೆಮಾರಿಗಳಾಗಿರುವ ತಮ್ಮ ಸ್ಥಿತಿಯನ್ನು ತಮ್ಮ ಸೃಷ್ಟಿ ಪುರಾಣಗಳಲ್ಲಿ ಅಲೆಮಾರಿಗಳು ದಾಖಲಿಸಿದ್ದಾರೆ. ಬಹುತೇಕ ಎಲ್ಲ ಅಲೆಮಾರಿಗಳ ಸೃಷ್ಟಿ ಪುರಾಣಗಳನ್ನು ಗಮನಿಸಿದರೆ, ಆಯಾ ಸಮುದಾಯಗಳ ಹುಟ್ಟು ಯಾವುದೋ ಪೌರಾಣಿಕ ವ್ಯಕ್ತಿಯ ಶಾಪದಿಂದ ಸಂಭವಿಸುತ್ತದೆ. ಇಲ್ಲವೆ ಹುಟ್ಟು ಅಂಗ ವೈಕಲ್ಯದಿಂದಲೇ ಒಂದು ಸಮುದಾಯದ ಮೂಲ ಪುರುಷ ಜನಿಸುತ್ತಾನೆ. ಈ ಮೂಲಪುರುಷ ಒಂದು ವಿಲಕ್ಷಣ ಚಾರಿತ್ರಿಕ ಅಥವಾ ಪೌರಾಣಿಕ ಸಂದರ್ಭದಲ್ಲಿ ಜನಿಸುತ್ತಾನೆ. ಹೀಗೆ ಜನಿಸುವ ವ್ಯಕ್ತಿ ತನ್ನ ಸಮುದಾಯದ ಒಟ್ಟಾರೆ ಸಾಮಾಜಿಕಾರ್ಥಿಕ ಚಟುವಟಿಕೆಗಳು ಚಾರಿತ್ರಿಕವಾಗಿ ರೂಪುಗೊಳ್ಳಲು ಕಾರಣನಾಗುತ್ತಾನೆ. ಮತ್ತು ಆ ಸಮುದಾಯದ ಸಾಮಾಜಿಕಾರ್ಥಿಕ ಸ್ಥಿತಿಗತಿಗಳನ್ನು ಸಾಂಕೇತಿಕವಾಗಿ ಈತ ಪ್ರತಿನಿಧಿಸುತ್ತಾನೆ.

ಈ ಕಾರಣದಿಂದಾಗಿ, ಯಾವುದೋ ಕಾರಣದಿಂದ ಪ್ರಾಪ್ತವಾಗಿ ಬಿಡುವ ಶಾಪವು ಸಾಂಕೇತಿಕವಾಗಿ ಮಾತ್ರವಲ್ಲದೆ ಲೌಕಿಕ ಜಗತ್ತಿನಲ್ಲೂ ಈ ಸಮುದಾಯಗಳ ಸಾಮಾಜಿಕ ಆರ್ಥಿಕ ಚಟುವಟಿಕೆಗಳನ್ನು ನಿರ್ಣಾಯಕವಾಗಿ ನಿಯಂತ್ರಿಸಿಬಿಡುತ್ತದೆ. ಹೀಗೆ ಸೃಷ್ಟಿಪುರಾಣಗಳನ್ನು ನಾವು ರಮ್ಯ ಜಗತ್ತುಗಳೆಂದು ಭಾವಿಸುತ್ತೇವೆ. ಆದರೆ ಆ ರಮ್ಯ ಜಗತ್ತುಗಳ ಒಳಗೂ ಅಲೆಮಾರಿಗಳ ಹುಟ್ಟು ವೈಕಲ್ಯದಿಂದ ಇಲ್ಲವೆ ಶಾಪದಿಂದ ಸಂಭವಿಸುತ್ತದೆ. ಈ ರಮ್ಯ ಜಗತ್ತುಗಳ ಒಳಗೆ ಈ ಸಮುದಾಯಗಳ ಬದುಕು ಛಿದ್ರಗೊಂಡೇ ದಾಖಲಾಗಿರುವುದನ್ನು ಕಾಣಬಹುದಾಗಿದೆ. ಯಾವುದೋ ಕಾಲದಲ್ಲಿ ಕಟ್ಟಿಕೊಂಡಿರಬಹುದಾದ ಸೃಷ್ಟಿಪುರಾಣಕ್ಕೂ ಅಲೆಮಾರಿಗಳ ಇಂದಿನ ಸ್ಥಿತಿಗತಿಗಳಿಗೂ ಎಲ್ಲಿಂದೆಲ್ಲಿಯ ಸಂಬಂಧ ಎಂದು ಪ್ರಶ್ನಿಸಬಹುದು. ಅಲೆಮಾರಿಗಳ ಸದ್ಯದ ಸ್ಥಿತಿಗೂ ಅವರು ಕಟ್ಟಿಕೊಂಡು ಬಂದಿರುವ ಸೃಷ್ಟಿಪುರಾಣಗಳಲ್ಲಿನ ಅವುಗಳ ಹುಟ್ಟಿನ ಸಂಗತಿಗಳಿಗೂ ನೇರ ಸಂಬಂಧವಿದೆ. ಈ ಕಾರಣದಿಂದಾಗಿ ಅವರ ಸೃಷ್ಟಿ ಪುರಾಣಗಳು ಅಲೆಮಾರಿಗಳ ಸಾಮಾಜಿಕ ಚರಿತ್ರೆಯನ್ನು ರೂಪಿಸುವಾಗ ಮಹತ್ವದ ಪಾತ್ರ ವಹಿಸುತ್ತವೆ.

ದೊಂಬರ ಸಮುದಾಯದ ಚಾರಿತ್ರಿಕ ಬೆಳವಣಿಗೆ

ಭಾರತದ ಸಮಾಜದಲ್ಲಿ ಜಾತಿಯೊಂದು ನಿಶ್ಚಿತ ಉತ್ಪಾದನಾ ಘಟಕ ಎಂದು ಭಾವಿಸಲಾಗಿದೆ. ಒಂದು ನಿರ್ದಿಷ್ಟ ಸಂಸ್ಕೃತಿ, ಭಾಷೆ, ಜೀವನ ವಿಧಾನ ರೂಪುಗೊಳ್ಳಲು ಸಮಾಜವೊಂದಕ್ಕೆ ಆರ್ಥಿಕ ಸಮಗ್ರತೆಯೊಂದು ಸಾಧ್ಯವಾಗಲೇಬೇಕು. ಆರ್ಥಿಕತೆಯು ಸಮಾಜವೊಂದರ ಸಮಗ್ರ ಚಟುವಟಿಕೆಗಳ ಕೇಂದ್ರಬಿಂದು. ಈ ವಾದವನ್ನು ಜಗತ್ತಿನ ಬಹುತೇಕ ಎಲ್ಲ ಸಮಾಜಶಾಸ್ತ್ರಜ್ಞರು ಅನುಮೋದಿಸುತ್ತಾರೆ. ಭಾರತದ ಸಮಾಜದ ಚಾರಿತ್ರಿಕ ರೂಪಾಂತರಗಳನ್ನು ಅಧ್ಯಯನ ಮಾಡಿದ ಸಮಾಜಶಾಸ್ತ್ರಜ್ಞ ಭಗವತ್ ಶರಣ್ ಉಪಾಧ್ಯಾಯ 'ಗತಕಾಲದಲ್ಲಿ ಸ್ಪಷ್ಟವಾದ ಆರ್ಥಿಕ ಕಾರಣಗಳೇ ಸಾಮಾಜಿಕ ವ್ಯವಸ್ಥೆಯನ್ನು ಹುಟ್ಟು ಹಾಕಿದವು ಎಂಬುದರಲ್ಲಿ ಸಂದೇಹವಿಲ್ಲ'[೪೬]. ಎನ್ನುತ್ತಾರೆ. ಈ ಕಾರಣದಿಂದ ನಿರ್ದಿಷ್ಟ ಸಮುದಾಯದ ಜೀವನ ವಿಧಾನದ ಬೆಳವಣಿಗೆಗೆ ಆರ್ಥಿಕ ಅಂಶಗಳು ಕಾರಣವಾಗುತ್ತವೆ. ಈ ಅಂಶವನ್ನು ಸ್ಪಷ್ಟಪಡಿಸಿಕೊಳ್ಳಲು ಭಾರತದ ಸಮಾಜದ ಚಾರಿತ್ರಿಕ ಬೆಳವಣಿಗೆಯನ್ನು ಅವಲೋಕಿಸಬಹುದಾಗಿದೆ.

ಭಾರತದಲ್ಲಿ ವರ್ಣಗಳ ಕಾಲದಿಂದ ಆರಂಭವಾದ ಸಮಾಜದ ವಿಭಜನೆಯ ಪ್ರಹಸನವು ಇಂದಿಗೂ ತನ್ನ ವಿಕಟ ಅಟ್ಟಹಾಸವನ್ನು ತಣಿಸಿಕೊಂಡಿಲ್ಲ. ಯಾವುದೋ ಕಾಲಘಟ್ಟದಲ್ಲಿ ಉತ್ಪಾದನೆಯ ವಿಧಗಳನ್ನು ಆಧರಿಸಿ ಶ್ರೇಷ್ಠ ಮತ್ತು ಕನಿಷ್ಠ ಆರ್ಥಿಕ ರಚನೆಗಳು ರೂಪುಗೊಂಡವು. ಶ್ರೇಷ್ಠ ಸ್ಥಾನಮಾನಗಳು ವರ್ಣ ವ್ಯವಸ್ಥೆಯ ಮೇಲಿನ ಸಮುದಾಯಗಳಿಗೆ ಮಾತ್ರ ದಕ್ಕಿದವು. ಆದರೆ ಕನಿಷ್ಠವೆನ್ನಿಸುವ ಆರ್ಥಿಕ ಚಟುವಟಿಕೆಗಳು ಬಹುಸಂಖ್ಯಾತ ದುಡಿವ ವರ್ಗಗಳ ಮೇಲೆ ಹೇರಲ್ಪಟ್ಟವು. ಅಂಬೇಡ್ಕರ್ ಈ ಚರ್ಚೆಯನ್ನು ಹೀಗೆ ವಿವರಿಸಿದ್ದಾರೆ. 'ಸಾಮಾಜಿಕ ಶ್ರಮ ವಿಭಜನೆಯ ಕಟ್ಟಳೆಗೆ ಒಳಪಟ್ಟು ಉಳಿದ ವರ್ಗಗಳು ತಾರತಮ್ಯಗಳಿಗೆ ಒಳಗಾದವು. ಕೆಲವು ದೊಡ್ಡವಾದವು. ಉಳಿದವು ಸಣ್ಣಪುಟ್ಟ ಗುಂಪುಗಳಾದವು. ವೈಶ್ಯ ಮತ್ತು ಶೂದ್ರ ವರ್ಗಗಳು ಮೂಲ ಜೀವ ದ್ರವ್ಯವಾಗಿದ್ದು ಇಂದಿನ ಅಸಂಖ್ಯಾತ ಜಾತಿಗಳಿಗೆ ಆಕರವಾದವು.'[೪೭]. ಒಟ್ಟಾರೆ ಸಮಾಜದ ಅಂತಃಸ್ಸತ್ವವಾದ ದುಡಿವ ವರ್ಗಗಳು ಆಳುವ ವರ್ಗದ ಅಟ್ಟಹಾಸಕ್ಕೆ, ಪರಮೋಚ್ಛ ಸಾಮಾಜಿಕ ಅಧಿಕಾರ ದಾಹಕ್ಕೆ ವಿಘಟಿತಗೊಂಡು ಜಾತಿಗಳಾದವು. ಕೇವಲ ಶ್ರಮ ವಿಭಜನೆಯ ಲೌಕಿಕ ಕಾರಣಕ್ಕೆ ವಿಭಜನೆಗೊಂಡ ಜಾತಿಗಳಿಗೆ ಅಲೌಕಿಕವೆನ್ನಿಸುವ, ಆಧ್ಯಾತ್ಮಿಕ ಸ್ತರದಲ್ಲಿ ಅವುಗಳ ಲೌಕಿಕದ ಸ್ಥಿತಿಗಳನ್ನು ನ್ಯಾಯಬದ್ಧಗೊಳಿಸಲಾಯಿತು. ಶಾಸ್ತ್ರಗಳ ಮೂಲಕ, ಸಾಮಾಜಿಕ ಕಾನೂನುಗಳ ಮೂಲಕ ಜಾತಿಗಳು ಸಾಮಾಜಿಕವಾಗಿ ಸ್ವಯಂಪೂರ್ಣಗೊಂಡವು. ಕೇವಲ ಜಾತಿಯೊಂದು ತನ್ನ ಅಸ್ತಿತ್ವದ ಕಾರಣವನ್ನು ಮುಖ್ಯವಾಗಿಸಿಕೊಂಡು ಈ ದೇಶದ ಪರಂಪರೆಯ ರಚನೆಗಳನ್ನು ಮೋಹಿಸಿತು. ಈ ಕಾರಣಕ್ಕಾಗಿಯೇ ಜಾತಿಗಳು ತಮ್ಮ ಮಧ್ಯೆ ತೆಳುವಾದ ಬೇಲಿಗಳನ್ನೇ ಹೆಣೆದುಕೊಂಡವು. ದುರಂತವೆಂದರೆ, ಜಾತಿಯೊಂದು ಆಂತರಿಕವಾಗಿ ತನ್ನನ್ನು ತಾನೇ ಶ್ರೇಣೀಕರಣಕ್ಕೊಳಪಡಿಸಿಕೊಂಡಿತು. ಈ ಕಾರಣಕ್ಕಾಗಿ ಜಾತಿಯ ಒಳಗೇ ಶ್ರೇಷ್ಠ, ಕನಿಷ್ಠ ವೈರುಧ್ಯಗಳು ಬೆಳೆದು ನಿಂತವು. ಒಟ್ಟಾರೆಯಾಗಿ ಭಾರತದ ಜಾತಿ ಶ್ರೇಣೀಕರಣವು ಒಂದು ಅಸಹಜ ಸಾಮಾಜಿಕ ಸಂರಚನೆಯಾಗಿ ರೂಪುಗೊಂಡಿತು. ಮುಂದೆ ಈ ಸಂರಚನೆಯೇ ಕಾಲಕಾಲಕ್ಕೆ ವಿರಾಟ್ ನ್ಯಾಯಬದ್ಧ ಅಸ್ತಿತ್ವವನ್ನು ಪಡೆದುಕೊಂಡು ಬಿಟ್ಟಿತು.

ಇದರಿಂದಾಗಿ, ಭಾರತದ ಆರ್ಥಿಕ ರಂಗದಲ್ಲಾದ ಒಟ್ಟಾರೆ ಬದಲಾವಣೆಗಳಿಗೆ ಅನುಗುಣವಾಗಿ ಇಲ್ಲಿನ ಸಮಾಜದಲ್ಲಿ ಅನೇಕ ರೂಪಾಂತರಗಳು ಸಂಭವಿಸಿದವು. ಭಾರತದ ಆರ್ಥಿಕತೆ ಹೆಚ್ಚು ಹೆಚ್ಚು ಸಂಕೀರ್ಣಗೊಂಡಂತೆಲ್ಲ ಇಲ್ಲಿನ ಸಾಮಾಜಿಕ ರಚನೆಗಳೂ ಸಂಕೀರ್ಣಗೊಳ್ಳುತ್ತ ಹೋದವು. ಕಾಲ ಕಾಲಕ್ಕೆ ಶೋಷಕ ಮತ್ತು ಶೋಷಿತರ ಪಾತ್ರಗಳು ಬದಲಾಗುತ್ತ ಹೋದರೂ ಸಹ, ಅದೊಂದು ಕ್ಷಣಿಕ ಮೇಲಾಟವಾಗಿ ಕೊನೆಗೊಂಡಿತು. ಈ ದೇಶದ ಸಾಮಾಜಿಕ ಕಾನೂನುಗಳು ಮಾತ್ರ ದುಡಿವ ವರ್ಗ ಮತ್ತು ಮಹಿಳೆಯ ವಿಷಯದಲ್ಲಿ ಮಾತ್ರ ಕ್ರೂರವಾಗುತ್ತಲೇ ಹೋದವು. ಭಾರತದ ಒಟ್ಟಾರೆಯ ಆರ್ಥಿಕ ರೂಪಾಂತರಗಳು ದುಡಿವ ವರ್ಗಗಳ ಬದುಕಲ್ಲಿ ಹಿಂಸೆಯನ್ನು ಧಾರಾಳವಾಗಿ ಸಂಚಯಿಸಿ ವಿಜಯದ ನಗು ನಕ್ಕವು. ಈ ಆರ್ಥಿಕ ರೂಪಾಂತರಗಳು ನಿಶ್ಚಿತವಾಗಿ ದುಡಿವ ವರ್ಗಗಳನ್ನು ಹಿಂಸಿಸಿ ಪಶುಗಳಂತೆ ಕಿತ್ತು ತಿಂದವು. ಭಾರತದ ಸಮಾಜದ ಚಾರಿತ್ರಿಕ ಬೆಳವಣಿಗೆಯನ್ನು ಸಮಾಜಶಾಸ್ತ್ರಜ್ಞರು ಅನೇಕ ಬಗೆಗಳಲ್ಲಿ ವಿಂಗಡಿಸುತ್ತಾರೆ. ಧರ್ಮಗಳ ಬೆಳವಣಿಗೆಯ ಆಧಾರದಲ್ಲಿ, ವೇದಗಳ ಕಾಲ, ಬೌದ್ಧರಕಾಲ, ಜೈನಧರ್ಮ, ವೈಷ್ಣವ ಧರ್ಮ ಹೀಗೆ ಆಯಾ ಕಾಲಘಟ್ಟದಲ್ಲಿ ಧರ್ಮಗಳು ಸಮಾಜದ ಮೇಲೆ ಸಾಧಿಸಿದ ಹಿಡಿತವನ್ನು ಆಧರಿಸಿ ಸಾಮಾಜಿಕ ಚರಿತ್ರೆಯನ್ನು ರೂಪಿಸುವ ಕ್ರಮವನ್ನು ಕೆಲವರು ಅನುಸರಿಸುತ್ತಾರೆ. ಇನ್ನು ಕೆಲವರು ಗುಪ್ತರಯುಗ, ಮೌರ್ಯರ ಯುಗ, ಶಾತವಾಹನರ ಯುಗ ಎಂದು ರಾಜರ ಆಳ್ವಿಕೆಯ ಆಧಾರದ ಮೇಲೆ ಈ ಸಮಾಜದ ಚಾರಿತ್ರಿಕ ಬೆಳವಣಿಗೆಯನ್ನು ಗುರುತಿಸಲು ಯತ್ನಿಸುತ್ತಾರೆ. ಆದರೆ ಮಾರ್ಕ್ಸ್‌ವಾದಿ ಅಧ್ಯಯನಕಾರರು, ಸಮಾಜದ ಉತ್ಪಾದನೆಯ ವಿಧಾನದ ಆಧಾರದ ಮೇಲೆ ಅದರ ಚಾರಿತ್ರಿಕ ಬೆಳವಣಿಗೆಯನ್ನು ಅಧ್ಯಯನ ಮಾಡುತ್ತಾರೆ. ಒಂದು ಕಾಲಘಟ್ಟದ ಉತ್ಪಾದನಾ ವಿಧಾನವು ಆ ಕಾಲಘಟ್ಟದ ಉತ್ಪಾದನಾ ಸಂಬಂಧಗಳನ್ನು ಪ್ರಭಾವಿಸುತ್ತದೆ ಎಂಬ ಸಿದ್ಧಾಂತದ ಮೇಲೆ ಸಮಾಜದ ಚರಿತ್ರೆಯನ್ನು ಗ್ರಹಿಸಲು ಪ್ರಯತ್ನಿಸಲಾಗುತ್ತದೆ. ಈ ಕಾರಣದಿಂದ ಭಾರತದ ಸಮಾಜವನ್ನು,

೧. ಆದಿಮ ಸಮತಾವಾದಿ ಸಮಾಜ

೨. ಆರಂಭದ ಊಳಿಗಮಾನ್ಯ ಕಾಲ

೩. ರಾಜಶಾಹಿ ಯುಗ

೪. ಮಧ್ಯಯುಗೀನ ಊಳಿಗಮಾನ್ಯಕಾಲ

೫. ಸಾಮಂತಶಾಹಿ ಅಥವಾ ಅರೆ ಊಳಿಗಮಾನ್ಯ ಕಾಲ

೬. ವಸಾಹತು ಕಾಲಘಟ್ಟ

ಎಂದು ವಿಂಗಡಿಸಲಾಗುತ್ತದೆ. ಕೆಲವು ಸಲ ಈ ವಿಂಗಡನೆಯು ಸರಳವೂ ಮತ್ತು ಸಂಕೀರ್ಣವೂ ಆಗಿ ಕಾಣುತ್ತದೆ. ಅಲ್ಲದೆ ಸಮಾಜದ ಬೆಳವಣಿಗೆಯ ಹಂತಗಳನ್ನು ಸ್ಥೂಲವಾಗಿಯಾಗಲಿ, ನಿರ್ದಿಷ್ಟವಾಗಿಯಾಗಲಿ ವಿಂಗಡಿಸಲಾಗುವುದಿಲ್ಲ. ಆದರೆ ಸಮಾಜದ ಬೆಳವಣಿಗೆಗಳನ್ನು ಅಧ್ಯಯನ ಮಾಡುವ ಸಲುವಾಗಿ ಮೇಲಿನಂತೆ ಸರಳವಾಗಿ ವಿಂಗಡಿಸಬಹುದಾಗಿದೆ.

ಮೇಲಿನ ಆರು ಹಂತಗಳಲ್ಲಿ ಈ ದೇಶದ ದುಡಿವ ವರ್ಗ ಹಲವು ಬಗೆಯ ರೂಪಾಂತರಗಳಿಗೆ

ಮುಖಾಮುಖಿಯಾಗುತ್ತ ಬಂದಿದೆ. ಈಗಾಗಲೇ ಹೇಳಿದಂತೆ ದುಡಿವ ವರ್ಗಗಳು ಹೆಚ್ಚು ಹೆಚ್ಚು ಸಂಕೀರ್ಣ ವರ್ಗೀಕರಣಕ್ಕೆ ಒಳಗಾಗಿ, ಜಾತಿಗಳಾಗಿ ವಿಭಜನೆಗೊಳ್ಳುತ್ತಾ ಹೋದವು. ಕೆಲವು ಜಾತಿಗಳು ಸಮಾಜದ ಉತ್ಪಾದನೆಯಲ್ಲಿ ಮುಖ್ಯ ಪಾತ್ರ ವಹಿಸಿದರೆ, ಇನ್ನು ಕೆಲವು ಜಾತಿಗಳು ಉತ್ಪಾದನೆಗೆ ಪೂರಕವಾಗುವ ಪೋಷಕ ವರ್ಗಗಳಾಗಿ ರೂಪುಗೊಂಡವು. ಕೃಷಿಯೆಂಬ ಪ್ರಧಾನ ಉತ್ಪಾದನೆಯನ್ನು ಪೋಷಿಸಲು, ಬಡಗಿ, ಕಮ್ಮಾರ, ಅಕ್ಕಸಾಲಿಗ, ಕುಂಬಾರ ಮುಂತಾದ ಕುಶಲಕರ್ಮಿ ಜಾತಿಗಳು ರೂಪುಗೊಂಡವು. ಹೀಗೆಯೇ ಸಮಾಜವನ್ನು ರಂಜಿಸುವ ಮನರಂಜಕವರ್ಗ ಮತ್ತು ಊಳಿಗಮಾನ್ಯ ಪ್ರಭುಗಳನ್ನು ಆಶ್ರಯಿಸಿದ 'ಅನುತ್ಪಾದಕ' ಜಾತಿಗಳೂ ಹುಟ್ಟಿಕೊಂಡವು. ಮುಖ್ಯವಾಗಿ ಕುಶಲಕರ್ಮಿಗಳು ಮತ್ತು ಮನರಂಜಕ ಜಾತಿಗಳು ಮತ್ತು 'ಅನುತ್ಪಾದಕ' ಜಾತಿಗಳೆಲ್ಲ ಊಳಿಗಮಾನ್ಯ ಉತ್ಪಾದನಾ ವ್ಯವಸ್ಥೆಯನ್ನು ಅವಲಂಬಿಸಿಯೇ ಬದುಕಬೇಕಿತ್ತು. ಈ ಕಾರಣದಿಂದ ಊಳಿಗಮಾನ್ಯ ಆರ್ಥಿಕ ವ್ಯವಸ್ಥೆಯಲ್ಲಿ ಆದ ಬದಲಾವಣೆಗಳೆಲ್ಲ ಈ ವರ್ಗಗಳನ್ನು ಪ್ರಭಾವಿಸುತ್ತಿದ್ದವು. ಮತ್ತು ಯಾವಾಗ ಊಳಿಗಮಾನ್ಯ ವ್ಯವಸ್ಥೆಯು ಪಲ್ಲಟಗೊಂಡು ಆಧುನಿಕ ಉತ್ಪಾದನಾ ವ್ಯವಸ್ಥೆ ರೂಪಗೊಂಡಿತೋ ಅಂದಿನಿಂದ ಊಳಿಗಮಾನ್ಯ ವ್ಯವಸ್ಥೆಯನ್ನು ಅವಲಂಬಿಸಿದ್ದ ಸಮುದಾಯಗಳು ದಿಕ್ಕೆಟ್ಟು ಹೋದವು. ಈ ಸಮುದಾಯಗಳನ್ನು ಆರ್ಥಿಕವಾಗಿ ಪೋಷಿಸುತ್ತಿದ್ದ ಊಳಿಗಮಾನ್ಯತೆಯು ವಿಘಟನೆಗೊಂಡ ಮೇಲೆ ಕುಶಲಕರ್ಮಿಗಳು, ಮನರಂಜಕ ಸಮುದಾಯಗಳು ಮತ್ತು 'ಅನುತ್ಪಾದಕ' ಜಾತಿ ಸಮುದಾಯಗಳು ಅನಿವಾರ್ಯವಾಗಿ ತಮ್ಮ ಸಾಮಾಜಿಕ ಮತ್ತು ಆರ್ಥಿಕ ನೆಲೆಗಳನ್ನು ಕಳೆದುಕೊಂಡವು. ಈ 'ಅನುತ್ಪಾದಕ' ಜಾತಿಗಳು ಒಟ್ಟಾರೆಯ ಸಮಾಜದ ಉತ್ಪಾದನಾ ಸಂಬಂಧಗಳಲ್ಲಿ ಮಹತ್ವದ ಪಾತ್ರವನ್ನೇ ವಹಿಸುತ್ತಾ ಬಂದಿವೆ. ಆದರೆ ಇವರ ಶ್ರಮವು ಆಳುವ ವರ್ಗಗಳಿಗೆ ಬಿಟ್ಟಿಯಾಗಿ ದೊರಕುತ್ತಾ ಬಂದಿದೆ. ಹಾಗೆ ಶ್ರಮವು ಬಿಟ್ಟಿಯಾಗಿ ವ್ಯಯವಾಗುತ್ತಿದ್ದ ಕಾರಣಕ್ಕೆ ಇವರು 'ಅನುತ್ಪಾದಕರು'. ಇವರೇ ವಿಶಾಲಾರ್ಥದಲ್ಲಿ ಸೇವಕ ಸಮುದಾಯಗಳಾಗಿ ಅಥವ ಸೇವಕ ವರ್ಗವಾಗಿ ರೂಪುಗೊಂಡರು.

ದಕ್ಷಿಣ ಭಾರತದ ಮಧ್ಯಕಾಲೀನ ಇತಿಹಾಸದಲ್ಲಿ ಬ್ರಾಹ್ಮಣ, ದೇವಾಲಯ ಮತ್ತು ಭೂಮಾಲಿಕ ತ್ರಿಕೂಟ ವ್ಯವಸ್ಥೆಯು ಕುಶಲಕರ್ಮಿಗಳನ್ನು ಮತ್ತು ಆಶ್ರಿತ ಸೇವಕ ಜಾತಿಗಳನ್ನು ಅತ್ಯಂತ ಹೀನಾಯವಾಗಿ ಶೋಷಣೆಗೊಳಪಡಿಸಿದ್ದವು. 'ಬ್ರಾಹ್ಮಣರಿಗೆ ಮತ್ತು ದೇವಾಲಯಗಳಿಗೆ ಕುಶಲಕರ್ಮಿ ವರ್ಗ ಮತ್ತು ಸೇವೆ ಮಾಡುವ ಉಳಿದ ಶೂದ್ರ ಜಾತಿಗಳು ಅನಿವಾರ್ಯವಾಗಿ ಬಿಟ್ಟಿ ಚಾಕರಿ ಮಾಡಬೇಕಿತ್ತು. ಈ ಬಿಟ್ಟಿ ಸೇವೆ ಸಾಮಾಜಿಕ ಕಟ್ಟಳೆಯ ಭಾಗವಾಗಿಯೇ ನ್ಯಾಯಬದ್ಧವಾಗಿತ್ತು. ಇದರಿಂದಾಗಿ ಈ ಎರಡೂ ವರ್ಗಗಳು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹೀನಾಯ ಶೋಷಣೆಗೆ ಒಳಪಟ್ಟವು'[೪೮] ಎಂದು ಆರ್.ಎನ್.ನಂದಿಯವರು ವಿವರಿಸುತ್ತಾರೆ. ಈ ಹಂತದಲ್ಲಿಯೇ ಕರ್ನಾಟಕದಲ್ಲಿ ಕುಶಲಕರ್ಮಿ ಮತ್ತು ಕೆಳಜಾತಿ ಸಮುದಾಯಗಳ ಆಶಯಗಳ ಭಾಗವಾಗಿ ವಚನ ಚಳುವಳಿ ರೂಪುಗೊಂಡಿತು. ಆದರೆ ಸೀಮಿತ ಚೌಕಟ್ಟಿನ ಪ್ರತಿರೋಧದ ಕಾರಣಕ್ಕಾಗಿ ಮತ್ತು ಹಲವು ರಾಜಕೀಯ ಪಿತೂರಿಗಳ ಕಾರಣಕ್ಕಾಗಿ ಈ ಚಳುವಳಿ ದುರಂತದ ಅಂತ್ಯ ಕಂಡಿತು.

ಆದರೆ ಊಳಿಗಮಾನ್ಯ ಕಾಲಘಟ್ಟದಲ್ಲಿ ಈ ವರ್ಗಗಳ ಸೇವೆಯನ್ನು ನ್ಯಾಯಬದ್ಧಗೊಳಿಸಲಾಯಿತು.

ಬ್ರಾಹ್ಮಣ ಮತ್ತು ದೇವಾಲಯಗಳ ಬಿಟ್ಟಿ ಚಾಕರಿಯ ಹೊರತಾಗಿ ಕುಶಲಕರ್ಮಿ ಮತ್ತು ಸೇವಕ ವರ್ಗವು ಭೂಮಾಲಿಕರನ್ನು ಅವಲಂಬಿಸಿತು. 'ಈ ಕುಶಲಕರ್ಮಿಗಳ ಮತ್ತು ಸೇವಕ ವರ್ಗಗಳ ದುಡಿಮೆಗೆ ಮತ್ತು ಉತ್ಪಾದಿತ ವಸ್ತುಗಳಿಗೆ ಹಣದ ರೂಪದಲ್ಲಿ ಬೆಲೆ ನಿಗದಿ ಮಾಡಲಾಯಿತು. ಇಲ್ಲವೆ ಗೇಣಿ ಆಧಾರದಲ್ಲಿ ಭೂಮಾಲಿಕರು ತಮ್ಮ ಜಮೀನುಗಳನ್ನು ಈ ವರ್ಗಗಳಿಗೆ ಕೊಡಲಾರಂಭಿಸಿದರು. ಆದರೆ ಭೂಮಾಲಿಕ ವರ್ಗಕ್ಕೆ ಈ ಸಮುದಾಯಗಳು ಕಡ್ಡಾಯವಾಗಿ ಸೇವೆ ಸಲ್ಲಿಸಬೇಕಿತ್ತು. ಈ ಸಮುದಾಯಗಳು ಒಂದು ರೀತಿಯ ಜೀತದ ಕ್ರಮದಲ್ಲಿ ನಿರ್ದಿಷ್ಟಗೊಳ್ಳಲ್ಪಟ್ಟವು'[೪೯]. ಆದರೆ ಯಾವತ್ತು ಭೂಮಾಲಿಕ ವರ್ಗವು ತನ್ನ ಚಹರೆಗಳನ್ನು ಮತ್ತು ಆರ್ಥಿಕ ನಡೆಗಳನ್ನು ಬದಲಿಸುತ್ತಿತ್ತೋ ಆಗೆಲ್ಲ ಈ ಸಮುದಾಯಗಳು ವಿಚಲಿತಗೊಳ್ಳುತ್ತಿದ್ದವು. ಈ ಆರ್ಥಿಕ ಕಾರಣಕ್ಕಾಗಿಯೇ ಅಲೆಮಾರಿಗಳು ಭಾರತದ ಸಮಾಜದಲ್ಲಿ ರೂಪುಗೊಂಡರು. ಡೊಂಬರ ಸಮಾಜ ಇಂತಹ ಚಾರಿತ್ರಿಕ ಕಾಲಘಟ್ಟದಲ್ಲಿಯೇ ರೂಪುಗೊಂಡಿರಬೇಕು. ಜೊತೆಗೆ ಭೂಮಾಲಿಕ ಮತ್ತು ರಾಜಶಾಹಿ ವರ್ಗಗಳ ಸೇವೆಗೆಂದೇ ನಿಯುಕ್ತಗೊಂಡ ಕಾರಣಕ್ಕೆ ಹೆಳವರಂತಹ ಅನೇಕ ಅಲೆಮಾರಿ ಸಮುದಾಯಗಳ ಸಮಾಜದಲ್ಲೂ ಊಳಿಗಮಾನ್ಯ ಗುಣ ಸಹಜವಾಗಿಯೇ ಸಂಚಯಿತಗೊಂಡಿದೆ. ಇವು ಊಳಿಗಮಾನ್ಯ ಸಾಮಾಜಿಕ ಮೌಲ್ಯಗಳನ್ನೇ ಅನುಸರಿಸಿಕೊಂಡು ಬಂದವು. ಇದರಿಂದಾಗಿ ಭಾರತದ ಕೆಳಜಾತಿ ಸಮುದಾಯಗಳು ತಮ್ಮ ಸ್ಮೃತಿಕೋಶದ ಒಳಗೆ ಎಂತಹುದೇ ಸಮಾನತೆಯ ಮತ್ತು ಜನತಾಂತ್ರಿಕ ಆಶಯಗಳನ್ನು ಹೊಂದಿದ್ದರೂ ಲೌಕಿಕದ ಬದುಕಲ್ಲಿ ಅವು ಊಳಿಗಮಾನ್ಯ ಸಮಾಜದ ಮೌಲ್ಯಗಳನ್ನು ಅಳವಡಿಸಿಕೊಂಡಿರುತ್ತವೆ. ಸಂಕೇತದ ಮಟ್ಟದಲ್ಲಿ ಆಚರಣೆಯ ರೂಪದಲ್ಲಿ ಈ ಸಮುದಾಯಗಳು ಆದಿಮ ಚಹರೆಗಳನ್ನು ಪ್ರಕಟಿಸುವುದನ್ನು ಬಿಟ್ಟರೆ, ನಿತ್ಯದ ಬದುಕಲ್ಲಿ ತಮ್ಮನ್ನು ಶೋಷಣೆ ಮಾಡಿದ ಭೂಮಾಲಿಕ ವ್ಯವಸ್ಥೆಯ ಆಶಯಗಳನ್ನೇ ಪ್ರಕಟಿಸುತ್ತವೆ. ಈ ತರಹದ ಉದಾಹರಣೆಗಳನ್ನು ನೀವು ಡೊಂಬರಲ್ಲಿ ಇಂದಿಗೂ ಕಾಣಬಹುದು.

ಡೊಂಬರೂ ಸಹ ಈ ದೇಶದ ಎಲ್ಲ ಕೆಳಜಾತಿಗಳು ಅನುಸಂಧಾನ ಮಾಡಿದ ವಿವಿಧ ಸಾಮಾಜಿಕಾರ್ಥಿಕ ಸ್ತರಗಳನ್ನು ಹಾದು ಬಂದಿದ್ದಾರೆ. ಡೊಂಬರು ಈ ದೇಶದ ಸಮಾಜ, ವರ್ಗ ಸಮಾಜವಾಗಿ ರೂಪುಗೊಂಡ ನಂತರದ ಕಾಲಘಟ್ಟದಲ್ಲಿ ಅಸ್ತಿತ್ವಕ್ಕೆ ಬಂದವರೆಂದು ಊಹಿಸಬಹುದಾಗಿದೆ. ಇವರು ಸೃಷ್ಟಿ ಪುರಾಣಗಳನ್ನು ಗಮನಿಸಿದರೆ, ಸಮಾಜದ ಮೂಲ ಘಟಕವಾದ ಕುಟುಂಬವು ಸ್ಪಷ್ಟವಾಗಿ ಅಸ್ತಿತ್ವಕ್ಕೆ ಬಂದಿರುವುದನ್ನು ಮತ್ತು ಊಳಿಗಮಾನ್ಯ ಕಾಲಘಟ್ಟದ ಸಮಾಜದ ಎಲ್ಲ ಲಕ್ಷಣಗಳನ್ನು ಇಲ್ಲಿ ಕಾಣಬಹುದಾಗಿದೆ. ಈ ಸೃಷ್ಟಿ ಪುರಾಣಗಳ ಪ್ರಕಾರ ಡೊಂಬರು ಊಳಿಗಮಾನ್ಯ ಕಾಲಘಟ್ಟದಲ್ಲಿ ಭೂಮಾಲಿಕ ವ್ಯವಸ್ಥೆಯನ್ನು ಆರ್ಥಿಕವಾಗಿ ಅವಲಂಬಿಸಿದ ಸಮುದಾಯವಾಗಿ ರೂಪುಗೊಂಡಿರುವುದು ಸ್ಪಷ್ಟವಾಗುತ್ತದೆ.

ಈ ದೇಶದಲ್ಲಿ ಯಾರು ಯಾವ ಯಾವ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕು ಮತ್ತು ಯಾರು ಯಾವುದನ್ನು ಮಾಡಬಾರದು ಎಂಬ ನಿಯಮಗಳೇ ಭಾರತದ ಶ್ರೇಣೀಕರಣವನ್ನು ಜಾರಿಗೆ ತಂದವು. ಯಾವ ಗುಂಪಿನ ಜನ ಯಾವ ಬಗೆಯ ಉತ್ಪಾದನೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ನಿರ್ಧಾರವಾದದ್ದು, ಆಯಾ ಸಾಮಾಜಿಕ ಗುಂಪುಗಳು ಅಂದಂದಿನ ಚಾರಿತ್ರಿಕ ಘಟ್ಟದಲ್ಲಿ ಸಾಧಿಸಿದ ನಿರ್ಣಾಯಕ ಗೆಲುವು ಮತ್ತು

ಸೋಲುಗಳನ್ನೇ ಅವಲಂಬಿಸಿತ್ತು. ಸೋತ ಸಮುದಾಯಗಳು ತಮಗೆ ದಕ್ಕಿದ ಇಲ್ಲವೆ ಹೇರಲ್ಪಟ್ಟ ಕೆಲಸಗಳನ್ನು ಅನಿವಾರ್ಯವಾಗಿ ನಿರ್ವಹಿಸಲೇಬೇಕಾಯಿತು. ಇಲ್ಲಿ ಕೆಲವು ಸಮುದಾಯಗಳ ಗೆಲುವು ಎಂದರೆ, ಅಂದಂದಿನ ಒಟ್ಟು ಸಮಾಜದ ಹಣೆಬರಹವನ್ನು ರೂಪಿಸುವ ಆರ್ಥಿಕ ಮೂಲಗಳ ಮೇಲೆ ಸಾಧಿಸುವ ಹಿಡಿತವೇ ಆಗಿದೆ. ಯಾವ ಉತ್ಪಾದನಾ ವಿಧಾನದಿಂದಾಗಿ ಸಮಾಜದಲ್ಲಿ ಅಧಿಕ ಉತ್ಪಾದನೆಯಾಗುವುದೋ, ಆ ಉತ್ಪಾದನಾ ವಿಧಾನದ ಮೇಲೆ ನಿಶ್ಚಿತ ಒಡೆತನ ಸಾಧಿಸುವುದು ಗೆದ್ದ ಸಮುದಾಯಗಳ ಪರಿಪಾಠ. ಭಾರತದ ಸಮಾಜದ ಮೇಲೆ ಒಡೆತನ ಸಾಧಿಸಿದ ಸಮುದಾಯಗಳ ಬಹುಮುಖ್ಯ ಕೆಲಸ, ದುಡಿವ ಉತ್ಪಾದಕ ಸಮುದಾಯಗಳ ಕಾರ್ಯವೈಖರಿಯನ್ನು ಪರಂಪರೆಯ ಹೆಸರಲ್ಲಿ ಸಮರ್ಥಿಸುತ್ತ ಅದರ ಸಾತತ್ಯವನ್ನು ಪೋಷಿಸುವುದು. ಇದೇ ಕಾರಣದಿಂದಾಗಿ ಜಗತ್ತು ತಂತ್ರಜ್ಞಾನದ ಹೆಸರಲ್ಲಿ ಎಷ್ಟೇ ಮುಂದುವರೆದಿದ್ದರೂ ಭಾರತ ಇನ್ನೂ ಸಾಂಪ್ರದಾಯಿಕ ಉತ್ಪಾದನಾ ವಿಧಾನವನ್ನು ಸಮರ್ಥಿಸುತ್ತಲೇ ಇದೆ. ಹೀಗಾಗಿ ಭಾರತದ ಉತ್ಪಾದನಾ ಕ್ಷೇತ್ರಗಳಲ್ಲಿ ಅಗಾಧ ಪ್ರಮಾಣದ ಕ್ರಾಂತಿಗಳು ಸಂಭವಿಸಲಿಲ್ಲ. ಆಗಾಗ ನಡೆದುಹೋದ ಬದಲಾವಣೆಗಳು ಇಂಡಿಯಾದ ಸಮಾಜದ ದುಡಿವ ವರ್ಗಗಳ ಬದುಕಲ್ಲಿ ಯಾವ ಗಮನಾರ್ಹ ಹೊಸತನವನ್ನು ತರಲಿಲ್ಲ. ಕುಲಕಸುಬಿನ ಆಧಾರದ ಮೇಲೆ ಒಂದು ಜಾತಿಗೆ ಪ್ರಾಪ್ತವಾಗಿದ್ದ ಹೀನ ವೃತ್ತಿಗಳು, ಆಧುನಿಕ ಜಗತ್ತಿನಲ್ಲಿ ಇಲ್ಲವಾಗಿ ಅಂತಹ ಜಾತಿಗಳು ಸಾಮಾಜಿಕ ಅವಮಾನಗಳನ್ನು ಮೀರಿ ನಿಲ್ಲಲು ಸಾಧ್ಯವಾಯಿತಾದರೂ, ಆ ಜಾತಿಗಳ ಒಟ್ಟು ಆರ್ಥಿಕ ಸ್ಥಿತಿಗಳಲ್ಲಿ ಯಾವ ಬದಲಾವಣೆಗಳಾಗಲಿಲ್ಲ.

ಹೀಗಾಗಿ ಮಾನವ ಸಮಾಜದ ಚರಿತ್ರೆಯಲ್ಲಿ ಭಾರತದ ಶ್ರೇಣೀಕರಣಕ್ಕೆ ಒಂದು ವಿಶಿಷ್ಟ ಸ್ಥಾನಮಾನ ಪ್ರಾಪ್ತವಾಗಿದೆ. ಕಾಲ ಬದಲಾದರೂ, ಜಾಗತಿಕ ಮಟ್ಟದ ಉತ್ಪಾದನಾ ವ್ಯವಸ್ಥೆಯಲ್ಲಿ ಕ್ರಾಂತಿಗಳು ನಡೆದು ಹೋದರೂ, ಭಾರತದ ಜಾತಿಗಳು ನಮ್ಮ ಪಾರಂಪರಿಕ ಆರ್ಥಿಕ ಅವಲಂಬನೆಯನ್ನು ಕಾಯ್ದುಕೊಂಡೇ ಬಂದಿವೆ. ಇದಕ್ಕೆ ಅಲೆಮಾರಿಗಳು ಹೊರತಾಗೇನೂ ಇಲ್ಲ. ಇಡೀ ಜಗತ್ತಿನಲ್ಲಿ ಕೃಷಿಕರನ್ನು ಬಿಟ್ಟರೆ, ತಮ್ಮ ಸಾಂಪ್ರದಾಯಿಕ ಆರ್ಥಿಕ ಮೂಲಗಳನ್ನು ಉಳಿಸಿಕೊಂಡು ಬಂದವರೆಂದರೆ ಅಲೆಮಾರಿಗಳು ಮಾತ್ರ. ತಮ್ಮ ತಮ್ಮ ಆರ್ಥಿಕ ಮೂಲಗಳನ್ನು ಚಾರಿತ್ರಿಕವಾಗಿ ಅವಶೇಷಗಳ ಮಾದರಿಯಲ್ಲಿ ಅಲೆಮಾರಿಗಳು ಉಳಿಸಿಕೊಳ್ಳಲು ಕಾರಣ, ಭಾರತವೆಂಬ ಸಂಪ್ರದಾಯಶೀಲ ಸಮಾಜದಲ್ಲಿ ಯಾವತ್ತೂ ಬಹುದೊಡ್ಡ ಆರ್ಥಿಕ ಉತ್ಕ್ರಾಂತಿ ಸಂಭವಿಸದೇ ಹೋದದ್ದು. ಈ ಕಾರಣದಿಂದಾಗಿ ಸಾಮಾಜಿಕ ಅಸಮಾನತೆಯು ತನ್ನ ಅತ್ಯಂತ ಹೇಯ ಆಯಾಮಗಳನ್ನು ವಿಕಸಿಸಿಕೊಳ್ಳುತ್ತಲೇ ಹೋಯಿತು. ಹೀಗಾಗಿ ಭಾರತದ ಸಮಾಜದಲ್ಲಿ ಅಲೆಮಾರಿಗಳು ಸಹ ಈ ಶ್ರೇಣೀಕೃತ ಸಮಾಜದ ಒಂದು ಭಾಗವಾಗಿಯೇ ರೂಪಗೊಂಡಿದ್ದಾರೆ. ಅಲೆಮಾರಿಗಳು ಎಂದಾಕ್ಷಣ ಜೀವನ ನಿರ್ವಹಣೆಗಾಗಿ ಭಾರೀ ಡಿಗ್ರಿಗಳನ್ನು ಪಡೆದು ಅಮೇರಿಕಾ, ಜಪಾನುಗಳನ್ನು ತಿರುಗುವ ಆಧುನಿಕ ಅಲೆಮಾರಿ ಜನ ಈ ಪ್ರಬಂಧದ ಕಕ್ಷೆಗೆ ಬರುವುದಿಲ್ಲ. ಪಾರಂಪರಿಕ ಸಮಾಜದಲ್ಲಿ ನಿತ್ಯದ ಬದುಕಿನ ನಿರ್ವಹಣೆಗೆ, ಒಪ್ಪತ್ತಿನ ಊಟದ ಅನ್ವೇಷಣೆಯಲ್ಲಿ ೨೧ನೇ ಶತಮಾನದಲ್ಲೂ ಅಲೆದಾಡುವ ಸಾಮಾಜಿಕ ಅನಿವಾರ್ಯತೆಯನ್ನು ಅನುಭವಿಸುತ್ತಿರುವ ಸಮುದಾಯಗಳನ್ನು ಇಲ್ಲಿ ಅಲೆಮಾರಿಗಳು ಎಂದು ಪರಿಭಾವಿಸಲಾಗಿದೆ. ಅಲೆಮಾರಿತನ ಭಾರತದ ಅಸಮಾನ ಸಮಾಜದ ಒಂದು ಭಾಗವಾಗಿ ರಚನೆಗೊಂಡ ಸ್ಥಿತಿಯಾಗಿದೆ. ಆದರೆ

ಈವತ್ತು ನಮ್ಮ ಕಣ್ಣ ಮುಂದಿರುವ ಅಲೆಮಾರಿಗಳು, ಆಧುನಿಕ ಪೂರ್ವ ಇಂಡಿಯಾದಲ್ಲಿ ಹೇಗಿದ್ದರು? ಸರಿಸುಮಾರು ಎರಡು ಸಾವಿರ ವರ್ಷಗಳ ರಾಜರ ಆಳ್ವಿಕೆಯಲ್ಲಿ ಸಮಾಜದ ಅಂಚಿನ ಸಮುದಾಯಗಳಾದ ಅಲೆಮಾರಿಗಳು ಯಾವ ಬಗೆಯಲ್ಲಿ ಬದುಕಿದ್ದರು? ರಾಜ್ಯದ ಒಟ್ಟು ಉತ್ಪಾದನಾ ವ್ಯವಸ್ಥೆಯಲ್ಲಿ ಅವರ ಪಾತ್ರವೇನು? ಇಂಡಿಯಾದ ಚರಿತ್ರೆಯ ಯಾವ ಯಾವ ಕಾಲಘಟ್ಟಗಳಲ್ಲಿ ಅಲೆಮಾರಿಗಳು ಯಾವ ಬಗೆಯ ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದರು? ಎಂಬ ಪ್ರಶ್ನೆಗಳಿಗೆ ಸ್ಪಷ್ಟ ಚಿತ್ರಣ ಕೊಡಲು ಪ್ರಾಯಶಃ ಸಾಧ್ಯವಾಗಲಾರದು. ಆದರೆ ನಮ್ಮ ಪ್ರಾಚೀನ ಕೃತಿಗಳಲ್ಲಿ ಕ್ವಚಿತ್ತಾಗಿ ಅಲೆಮಾರಿಗಳು ಉಲ್ಲೇಖಗೊಳ್ಳುತ್ತಾರೆ. ಈ ಕ್ವಚಿತ್ ಉಲ್ಲೇಖಗಳ ಮೂಲಕ ಆಯಾ ಕಾಲಘಟ್ಟದ ಅಲೆಮಾರಿಗಳ ಆರ್ಥಿಕ ಚಟುವಟಿಕೆಗಳನ್ನು ವಿವರಿಸಿಕೊಳ್ಳಬಹುದಾಗಿದೆ. ಕರ್ನಾಟಕದ ಅಲೆಮಾರಿ ಸಮುದಾಯಗಳಲ್ಲಿ ಒಂದಾದ ಡೊಂಬರು ಕರ್ನಾಟಕದ ಸಾಮಾಜಿಕ ಚರಿತ್ರೆಯ ವಿವಿಧ ಹಂತಗಳಲ್ಲಿ ಹೇಗೆ ಚಿತ್ರಿತವಾಗಿದ್ದಾರೆ ಎಂಬುದನ್ನು ನೋಡೋಣ. ಡೊಂಬರ ಕುರಿತು ಅತ್ಯಂತ ಪ್ರಾಚೀನ ಉಲ್ಲೇಖ ಸಿಗುವುದು. ಪಂಪನ ವಿಕ್ರಮಾರ್ಜುನ ವಿಜಯದಲ್ಲಿ.

ವಿಕ್ರಮಾರ್ಜುನ ವಿಜಯದಲ್ಲಿ ಪಂಪ 'ಮೀನಾವೇ ಪಂದಿಯೆಂದೆನಿತಾನುಂ ತೆರನಾಗಿ ಡೊಂಬ ವಿದ್ದೆಯ ನಾಡಲ್ ನೀನರಿವೆ' ಎನ್ನುತ್ತಾನೆ.

ಶಾಂತಿನಾಥನ ಸುಕುಮಾರ ಚರಿತ್ರೆಯಲ್ಲಿ 'ಕಾಶಂಬೀ ಪುರದೋಳ್ ಬಹುಕರ್ಮಿಯೆಂಬ ಡೊಂಬನ ಮನೆಯೋಳ್ ಸ್ತ್ರೀ ವೇಷದಿಂ ಬೆಳ್ಗಿತ್ತೆಯಾಗಿ ಪುಟ್ಟು' ಎಂಬ ಉಲ್ಲೇಖವಿದೆ.

'ಡೊಂಬರ ಮಗುವಿಗೆ ತಂತಿಯೇ ನೆಲ ಡೊಂಬನ ಪೆಸರ್ ತವೆ ಕೊಲ್ಗಸಿಗ ನಕ್ಕುಂ' ಎಂದು ಅಂಡಯ್ಯ ಕಬ್ಬಿಗರ ಕಾವ್ಯದಲ್ಲಿ ಡೊಂಬರನ್ನು ಉಲ್ಲೇಖಿಸುತ್ತಾನೆ.

೧೧ನೇ ಶತಮಾನದ ಕಲ್ಹಣನ ರಾಜ ತರಂಗಿಣಿ ಕೃತಿಯಲ್ಲಿ ಚಾಂಡಾಲ, ಚರ್ಮಕಾರರಲ್ಲದೆ ಡೊಂಬರೂ ಸಹ ಅಸ್ಪೃಶ್ಯರು ಎನ್ನುತ್ತಾನೆ.

ಮಡಿವಾಳ ಮಾಚಿದೇವ ತಮ್ಮ ವಚನದಲ್ಲಿ 'ಊರಿಂದ ಹೊರಗಣ ಡೊಂಬ' ಎನ್ನುತ್ತಾರೆ.

'ಡಂಭಕ ಭಕ್ತಿಗೆ ಡೊಂಬ ಲಾಗವ ಹಾಕಿ' ಪುರಂದರದಾಸರ ಕೀರ್ತನೆಗಳಲ್ಲಿನ ಉಲ್ಲೇಖ.

೧೬ನೇ ಶತಮಾನದ ನಂಜುಂಡ ಕವಿಯ ಕುಮಾರರಾಮ ಸಾಂಗತ್ಯದಲ್ಲಿ.

೧೭ನೇ ಶತಮಾನದ ಪಾಂಚಾಳರಂಗನ ಚೆನ್ನರಾಮ ಸಾಂಗತ್ಯದಲ್ಲಿ.

೧೯ನೇ ಶತಮಾನದ ಮಹಾಲಿಂಗ ಸ್ವಾಮಿಯ ಬಲರಾಮನ ಸಾಂಗತ್ಯದಲ್ಲಿ[೫೦]. ಮತ್ತು ದೇವಚಂದ್ರನ ರಾಜಾವಳಿ ಕಥಾಸಾರದಲ್ಲಿ ಅಲ್ಲದೆ, ವಸಾಹತು ಕಾಲಘಟ್ಟದ ಕರ್ನಾಟಕದ ಸಮುದಾಯ ಅಧ್ಯಯನಗಳಲ್ಲೂ ಸಹ ಡೊಂಬರು, ಡೊಂಬರಾಟವನ್ನು ನೆಚ್ಚಿಕೊಂಡ ಉಲ್ಲೇಖಗಳನ್ನು ನೋಡಬಹುದು.

ಹನ್ನೊಂದನೇ ಶತಮಾನದಲ್ಲಿ ಭಾರತದ ಯಾತ್ರೆ ಕೈಗೊಂಡು ಇಲ್ಲಿನ ಸಮಾಜದ ವಿವರಗಳನ್ನು ಅಲ್ಬರೂನಿ ತನ್ನ 'ಇಂಡಿಯಾ' ಎಂಬ ಪುಸ್ತಕದಲ್ಲಿ ನೀಡಿದ್ದಾನೆ. ಭಾರತದಲ್ಲಿನ ಕೆಳಜಾತಿಗಳನ್ನು ವಿವರಿಸುವಾಗ ಅಲ್ಬರೂನಿ, 'ಭಾರತದ ಜಾತಿಯ ವ್ಯವಸ್ಥೆಯಲ್ಲಿ ಶೂದ್ರರಿಗಿಂತ ಕೀಳಾದವರು ಅಂತ್ಯಜರು, ಈ ಅಂತ್ಯಜರು

ತಮಗಿಂತ ಮೇಲ್ಜಾತಿಯವರ ಸೇವೆ ಮಾಡಲೆಂದು ನಿಯುಕ್ತರಾದವರು, ಇವರು ಮೇಲ್ಜಾತಿಗಳಿಗೆ ಹಲವು ಸೇವೆಗಳನ್ನು ಒದಗಿಸುತ್ತಾರೆ. ಈ ಸೇವಕರು ಎಂಟು, ಅಗಸ, ಚರ್ಮಕಾರ, ಮೋಡಿಕಾರ, ಬುಟ್ಟಿ ಹೆಣೆಯುವವನು, ನಾವಿಕ, ಮೀನುಗಾರ, ಬೇಟೆಗಾರ ಮತ್ತು ನೇಕಾರ..... ಆದರೆ ಈ ಗುಂಪಿಗೆ ಸೇರದ ಹಡಿ, ಡೊಂಬ, ಚಾಂಡಾಲ ಮತ್ತು ಬಧತಾ ಸಮುದಾಯಗಳು ಇವೆ. ಈ ನಾಲ್ಕು ಸಮುದಾಯಗಳು ಯಾರೂ ನಿರ್ವಹಿಸಲು ಹೇಸಿಗೆ ಪಡುವ ಗ್ರಾಮ ಸ್ವಚ್ಛತಾ ಕೆಲಸಗಳನ್ನು ನಿರ್ವಹಿಸುತ್ತಾರೆ. ಜೊತೆಗೆ ಅತ್ಯಂತ ಕ್ಷುದ್ರವೆನ್ನಿಸುವ ಸೇವೆಗಳಲ್ಲಿ ಈ ಸಮುದಾಯಗಳು ತೊಡಗಿವೆ. ಇವು ಸಮಾಜದ ಅತ್ಯಂತ ತಳ ಸಮುದಾಯಗಳು'[೫೧]. ಎನ್ನುತ್ತಾನೆ. ಹೆಚ್ಚು ಕಡಿಮೆ ಡಿ.ಡಿ.ಕೋಸಾಂಬಿಯವರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. 'ನಮ್ಮ ದೇಶದಲ್ಲಿ ಎಲ್ಲ ಬುಡಕಟ್ಟುಗಳ ಪೈಕಿ ಅತ್ಯಂತ ಹಿಂದುಳಿದವೆಂದು ಡೊಂಬರು, ವಡ್ಡರು, ಎರುಗರು, ಯಾನಾದಿ, ಬೋಯಿ ಬುಡಕಟ್ಟುಗಳನ್ನು ಗುರುತಿಸಬಹುದು'[೫೨]. ಎನ್ನುತ್ತಾರೆ.

'ಮಧ್ಯಯುಗದ (೧೧-೧೨ನೇ ಶ.) ಹೇಮಚಂದ್ರನು 'ಖಿಖ್ಖಿರಿ', 'ಝುಂಝುರಿ'ಗಳು ಸಂಸ್ಕೃತೇತರ ಅಥವಾ ದೇಶ್ಯ ಶಬ್ದಗಳೆಂದು ಹೇಳಿ, ಅವು ಚಂಡಾಲರು ಮತ್ತು ದೊಂಬರು ಊರನ್ನು ಪ್ರವೇಶಿಸುವಾಗ ಕೈಯಲ್ಲಿ ಹಿಡಿದು ಸದ್ದು ಮಾಡುತ್ತಿದ್ದ ಕೋಲುಗಳ ಹೆಸರೆಂದು ಹೇಳುತ್ತಾನೆ. ಕರ್ನಾಟಕದಲ್ಲಿ ಅಂತಹ ಕೋಲುಗಳಿಗೆ 'ಕಂಕರಿಗೋಲು', 'ಸಂಬಳಿಗೋಲು' ಎಂದು ಕರೆಯುತ್ತಿದ್ದರು. ಅಸ್ಪೃಶ್ಯರು ತಮ್ಮ ಬರುವನ್ನು ಕೂಗಿ ಹೇಳುವುದರ ಮೂಲಕವೋ ಕೋಲು ಕುಟ್ಟಿ ಸದ್ದು ಮಾಡುವುದರ ಮೂಲಕವೋ ಮೇಲ್ಜಾತಿಯವರಿಗೆ ತಿಳಿಸುವುದು ಅವರ ಕರ್ತವ್ಯವಾಗಿತ್ತು. ಅಸ್ಪೃಶ್ಯರು ಊರಲ್ಲಿ ಕೋಲು ಕುಟ್ಟಿ ಸದ್ದು ಮಾಡುತ್ತಿದ್ದ ವಿಷಯವನ್ನು ಫಾಹಿಯಾನ್ ಕೂಡ ಹೇಳುತ್ತಾನೆ. ಕಟುಕ, ಬೆಸ್ತ, ಡೊಂಬ, ಜಲಗಾರ, ಜನರನ್ನು ಗಲ್ಲಿಗೆ ಹಾಕುವವರು. ಇವರ ವಾಸವೆಲ್ಲ ಊರ ಹೊರಗೆ ಎಂದೂ ಮತ್ತು ಅವರ ಮನೆಗಳಿಗೆ ಗುರುತು ಮಾಡಿರುತ್ತಿದ್ದರೆಂದೂ ಹ್ಯುಯೆನ್‌ತ್ಸಾಂಗ್ ಹೇಳುತ್ತಾನೆ. ಅವರು ಊರಲ್ಲಿ ಸಂಚರಿಸುವಾಗ ರಸ್ತೆಯ ಎಡಪಕ್ಕದಲ್ಲೇ ಹೋಗಬೇಕಾಗಿತ್ತೆಂಬ ಸ್ವಾರಸ್ಯದ ಸಂಗತಿಯನ್ನು ಅದೇ ಪ್ರವಾಸಿ ಹಿಡಿದಿಟ್ಟಿದ್ದಾನೆ.'[೫೩]. ಡೊಂಬರು ತಮ್ಮ ಡೊಂಬರಾಟದ ಪ್ರದರ್ಶನದ ಜೊತೆಗೂ ಸಮಾಜದ ಅತ್ಯಂತ ನಿಕೃಷ್ಟ ಕೆಲಕಗಳಿಗೂ ನಿಯುಕ್ತರಾಗಿದ್ದರು ಎಂಬುದು ಮೇಲಿನ ಉಲ್ಲೇಖಗಳಿಂದ ತಿಳಿದು ಬರುತ್ತದೆ. ವಸಾಹತುಶಾಹಿ ಆಡಳಿತದ ಸಂದರ್ಭದಲ್ಲಿ ಮೈಸೂರು ಪ್ರಾಂತ್ಯದ ಸಮುದಾಯಗಳ ಕುಲಶಾಸ್ತ್ರೀಯ ಅಧ್ಯಯನ ಮಾಡಿದ ಎಚ್.ವಿ.ನಂಜುಂಡಯ್ಯನವರು ಡೊಂಬರನ್ನು ಹೀಗೆ ವಿವರಿಸುತ್ತಾರೆ.

'ಡೊಂಬರು ಈ ಸಮಾಜದ ಅತ್ಯಂತ ಕೆಳಜಾತಿ ಸಮುದಾಯವಾಗಿದೆ. ಅಲೆಮಾರಿ ಡೊಂಬರು ವಡ್ಡರು ಮತ್ತು ಬೇಡರ ಜೊತೆ ಊಟ ಮಾಡುತ್ತಾರೆ. ಆದರೆ ನೆಲೆನಿಂತ ಡೊಂಬರು ಅವರ ಜೊತೆ ಪ್ರತ್ಯೇಕಿಸಿಕೊಳ್ಳಲು ಒಂದು ಸ್ಪಷ್ಟ ಗೆರೆಯನ್ನು ಎಳೆದುಕೊಳ್ಳುತ್ತಾರೆ. ಹೊಲೆಯ ಮತ್ತು ಮಾದಿಗರನ್ನು ಬಿಟ್ಟರೆ ಇವರು ಮಾಡಿದ ಅಡುಗೆಯನ್ನು ಯಾರೂ ಊಟ ಮಾಡುವುದಿಲ್ಲ. ಇವರು ಎಲ್ಲ ಬಗೆಯ ಪ್ರಾಣಿಗಳ ಮಾಂಸವನ್ನು ತಿನ್ನುತ್ತಾರೆ. ಬೆಕ್ಕು, ಬಾವಲಿ, ಗೂಬೆ, ಇಲಿ ಮತ್ತು ಹೆಗ್ಗಣಗಳ ಮಾಂಸವನ್ನು ಇವರು ತಿನ್ನುತ್ತಾರೆ. ಕೆಲವರು ಕಾಗೆಯನ್ನು ತಿನ್ನುತ್ತಾರೆ. ಆದರೆ ಗೋಮಾಂಸ, ಕೋತಿ ಮತ್ತು ಹಾವಿನ ಮಾಂಸವನ್ನು ತಿನ್ನುವುದು ಇವರಲ್ಲಿ

ನಿಷಿದ್ಧ. ನೆಲೆನಿಂತ ಡೊಂಬರು ಗೂಬೆ ಮತ್ತು ಹೆಗ್ಗಣಗಳ ಮಾಂಸವನ್ನು ವರ್ಜಿಸಿದ್ದಾರೆ.

ಡೊಂಬರು ಅಸ್ಪೃಶ್ಯರೆಂದೇ ಪರಿಗಣಿಸಲ್ಪಟ್ಟಿದ್ದಾರೆ. ಮೇಲ್ಜಾತಿಯ ಮನೆಗಳ ಹೊರ ವರಾಂಡದವರೆಗೆ ಮಾತ್ರ ಇವರಿಗೆ ಪ್ರವೇಶ. ಡೊಂಬರು ವಿಪರೀತ ಕುಡಿಯುತ್ತಾರೆ. ಅವರ ಮಕ್ಕಳು ಮತ್ತು ಹೆಂಗಸರೂ ಸಹ ಕುಡಿತದ ದಾಸರಾಗಿದ್ದಾರೆ. ಇವರ ವಾಸದ ಪ್ರದೇಶಗಳು ಕತ್ತಲಾಗುತ್ತಿದ್ದಂತೆ ಭಯಂಕರ ಗದ್ದಲ ಮತ್ತು ಜಗಳಗಳಿಂದ ಸುದ್ದಿ ಮಾಡುತ್ತವೆ. ಗ್ರಾಮದ ಬಾವಿಯಲ್ಲಿ ಇವರು ನೀರನ್ನು ತರಬಹುದು. ಅಗಸರವನು ಇವರ ಬಟ್ಟೆಗಳನ್ನು ತೊಳೆದುಕೊಡುತ್ತಾನೆ. ಕ್ಷೌರಿಕನು ಇವರ ತಲೆಗೂದಲನ್ನು ಕತ್ತರಿಸಲು ತಕರಾರು ಮಾಡುವುದಿಲ್ಲ. ಆದರೆ ಅಲೆಮಾರಿ ಡೊಂಬರಿಗೆ ಅಗಸರವನಿಗೆ ಬಟ್ಟೆ ತೊಳೆಯಲು ಕೊಡುವ ಪ್ರಸಂಗವೇ ಬರುವುದಿಲ್ಲ. ಇರುವ ಸ್ವಲ್ಪ ಬಟ್ಟೆಯನ್ನು ತಾವೇ ತೊಳೆದುಕೊಳ್ಳುತ್ತಾರೆ. ಇವರಿಗೆ ದೇವಾಲಯಗಳ ಹೊರ ಆವರಣಕ್ಕೆ ಪ್ರವೇಶವಿದೆಯಾದರೂ, ದೇವಾಲಯದ ಯಾವುದೇ ಆಚರಣೆಗಳಲ್ಲೂ ಪಾಲ್ಗೊಳ್ಳಲು ಇವರಿಗೆ ಅವಕಾಶವಿಲ್ಲ. ಹಿಂದೂ ಸಮಾಜದಲ್ಲಿ ಕೊರಚರಿಗೆ ಯಾವ ಸ್ಥಾನಮಾನವಿದೆಯೋ ಡೊಂಬರಿಗೂ ಅದೇ ಮಟ್ಟದ ಸಾಮಾಜಿಕ ಸ್ಥಾನಮಾನಗಳು ಲಭ್ಯವಾಗಿವೆ'[೫೪].

೧೯ನೇ ಶತಮಾನದ ಕೊನೆಯ ಹೊತ್ತಿಗೆ ಡೊಂಬರಲ್ಲಿ ಆಗಲೆ ನೆಲೆ ನಿಲ್ಲುವ ಪ್ರವೃತ್ತಿ ಬೆಳೆದಿರುವುದನ್ನು ನಂಜುಡಯ್ಯ ದಾಖಲಿಸುತ್ತಾರೆ. ಜೊತೆಗೆ ನೆಲೆನಿಂತ ಮತ್ತು ಅಲೆಮಾರಿ ಡೊಂಬರ ನಡುವೆ ಮೂಡುತ್ತಿದ್ದ ಭಿನ್ನ ಚಹರೆಗಳನ್ನು ನಂಜುಂಡಯ್ಯ ಗುರುತಿಸುತ್ತಾರೆ. ಆದರೆ ಎರಡು ಗುಂಪುಗಳು ಆಧುನಿಕ ಪೂರ್ವ ಭಾರತದ ಸಮಾಜದಲ್ಲಿ ಶ್ರೇಣೀಕರಣ ವ್ಯವಸ್ಥೆಯ ತಳಸಮುದಾಯವಾಗಿರುವುದಂತೂ ಸ್ಪಷ್ಟ. ಸ್ಟೀಫನ್ ಫೋಕ್ಸ್ ಅದನ್ನು ಹೀಗೆ ವಿವರಿಸುತ್ತಾರೆ. 'ಡೊಂಬರು ಯಾವಾಗ ಹಿಂದೂ ಸಮಾಜದ ಮುಖ್ಯವಾಹಿನಿಗೆ ಹತ್ತಿರವಾದರೋ ಸಾಮಾಜಿಕವಾಗಿ ಅತ್ಯಂತ ಹೀನಾಯ ಸ್ಥಿತಿಗೆ ಮತ್ತು ಅಸ್ಪೃಶ್ಯತೆಯ ಕರಾಳ ಜಗತ್ತಿಗೆ ದೂಡಲ್ಪಟ್ಟರು. ಇಂದು ಅವರು ಹಾಗೆಯೇ ಇದ್ದಾರೆ. ಒಬ್ಬ ಜಾಡಮಾಲಿಯು ನಿರ್ವಹಿಸದ ಸಮಾಜದ ಅತ್ಯಂತ ನಿಕೃಷ್ಟ ಕೆಲಸಗಳನ್ನು ಡೊಮರು ಮಾಡಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಯಿತು. ಇವರು ಈ ಹಿಂದೂ ಸಮಾಜದ ಅಂತ್ಯಜರಾಗಿರದಿದ್ದರೂ ಸಹ ಈ ಶ್ರೇಣೀಕರಣವು ಅವರನ್ನು ಅಂತ್ಯಜರ ಸಮೀಪಕ್ಕೆ ತಂದು ನಿಲ್ಲಿಸಿತು. ಇವರು ಸಾಮಾಜಿಕವಾಗಿ ನಿಕೃಷ್ಟರಾಗಲು ಅವರ ಆಹಾರ ಪದ್ಧತಿಯೂ ಒಂದು ಕಾರಣವಾಯಿತು. ಸಾಂಪ್ರದಾಯಿಕ ಹಿಂದೂಗಳು ತಿನ್ನಲು ಅಸಹ್ಯ ಪಟ್ಟುಕೊಳ್ಳುವ ಹಸುವಿನ, ಹಂದಿಯ, ಕುದುರೆಯ, ಇಲಿಯ ಮತ್ತು ಕೊಳೆತ ಮಾಂಸವನ್ನು ಇವರು ತಿನ್ನುತ್ತಾರೆ.'[೫೫]. ಅಲ್ಲದೆ ಇನ್ನೂ ಸಹ ಬೀದಿ ಬದಿಯಲ್ಲಿ ಡೊಂಬರಾಟವಾಡುವ ಹಲವು ಗುಂಪುಗಳನ್ನು ಕರ್ನಾಟಕದಾದ್ಯಂತ ನೋಡಬಹುದು.

ಮೇಲಿನ ಬಹುತೇಕ ಎಲ್ಲ ಉಲ್ಲೇಖಗಳು ಡೊಂಬರ ಸಾಮಾಜಿಕ ಸ್ಥಾನಮಾನಗಳ ಕುರಿತ ಸ್ಥೂಲ ಚಿತ್ರಣವನ್ನು ಕೊಡುತ್ತವೆ. ಡೊಂಬರು, ಡೊಂಬರಾಟ ಮಾಡುವವರು ಮತ್ತು ಡೊಂಬರು ಸಂಗೀತಗಾರರು ಎಂಬ ವಿವರಣೆಗಳು ಅವರ ಕೌಶಲ ಮತ್ತು ಸೇವೆಗಳನ್ನು ವಿವರಿಸುತ್ತವೆ. ಆದರೆ ಅವರು ಈ ಶ್ರೇಣೀಕೃತ ವ್ಯವಸ್ಥೆಯಲ್ಲಿ ಅಸ್ಪೃಶ್ಯರು. ಹಿಂದಿನ ಪುಟಗಳಲ್ಲಿ ಪಂಪ, ಅಲ್ಬರೂನಿ ಮತ್ತು ಹೇಮಚಂದ್ರ ಮುಂತಾದ ಕವಿ, ಬರಹಗಾರರ ಉಲ್ಲೇಖಗಳನ್ನು ಗಮನಿಸಿದ್ದೇವೆ. ಈ ಉಲ್ಲೇಖಗಳು ಕೇವಲ ಗತ ಇತಿಹಾಸವನ್ನು

ಮಾತ್ರ ಪುನರುಚ್ಚರಿಸುವುದಿಲ್ಲ. ಡೊಂಬರು ಈವತ್ತಿಗೂ ಕರ್ನಾಟಕದ ಹಲವು ಕಡೆಯಲ್ಲಿ ಅಸ್ಪೃಶ್ಯರು. ಇಂದಿಗೂ ಹೊಲೆಯ, ಮಾದಿಗ, ದಕ್ಕಲ ಮುಂತಾದ ಜಾತಿಗಳು ಮಾತ್ರ ಅಸ್ಪೃಶ್ಯರು ಎಂದು ಮುಗ್ಧವಾಗಿ ನಂಬಿಕೊಂಡು ಬಂದಿದ್ದೇವೆ. ಆದರೆ ಈ ಅಸ್ಪೃಶ್ಯ ಜಾತಿಗಳನ್ನು ಹೊರತಾಗಿಸಿ ಕರ್ನಾಟಕದಲ್ಲಿ ಹಲವು ಕೆಳಜಾತಿಗಳು ಅಸ್ಪೃಶ್ಯ ಸಮುದಾಯಗಳಾಗಿ ಅಜ್ಞಾತವಾಗಿ ಬದುಕುತ್ತಿವೆ. ಇಂತಹ ಸಮುದಾಯಗಳಲ್ಲಿ ಡೊಂಬರ ಸಮುದಾಯವೂ ಒಂದು. ಭಾರತದ ವಿಷಮ ಆರ್ಥಿಕ ವ್ಯವಸ್ಥೆಯಲ್ಲಿ ತಮ್ಮ ಶ್ರಮವನ್ನು 'ಸೇವೆಯ' ರೂಪದಲ್ಲಿ ಆಳುವ ವರ್ಗಕ್ಕೆ ವ್ಯಯಿಸುವ ಎಲ್ಲ ಸಮುದಾಯಗಳಿಗೆ ಆಸ್ತಿಯ ಹಕ್ಕು ಇಲ್ಲ. ಹೀಗೆ ಶ್ರಮವನ್ನು ಆಳುವ ವರ್ಗದ ಸೇವೆಗಳಿಗೆ ಮೀಸಲಾಗಿಡುವವರೆಲ್ಲ ಒಂದೋ ಕೆಳಜಾತಿಗಳು, ಇಲ್ಲವೆ ಕುಶಲಕರ್ಮಿಗಳು. ಕುಶಲಕರ್ಮಿಗಳು ಅಂದಂದಿನ ಸಮಾಜದ ವ್ಯವಸಾಯಿ ಚಟುವಟಿಕೆಗಳನ್ನು ತಮ್ಮ ಕೌಶಲಗಳಿಂದ ನಿಯಂತ್ರಿಸಿದ ಕಾರಣಕ್ಕೆ ತಮ್ಮ ಸಾಮಾಜಿಕ ಸ್ಥಾನಮಾನಗಳನ್ನು ಉನ್ನತೀಕರಿಸಿಕೊಂಡರು. ಆದರೆ ಕೆಳಜಾತಿಗಳಿಗೆ ಈ ದೇಶದ ಸಾಮಾಜಿಕ ಚರಿತ್ರೆಯಲ್ಲಿ ಅಂತಹ ಅವಕಾಶಗಳು ಒದಗಿ ಬರಲಿಲ್ಲ. ತಮ್ಮ ಶ್ರಮದ ಮೂಲಕ, ತಮ್ಮ ಕೌಶಲಗಳ ಮೂಲಕ ಕೆಳಜಾತಿಗಳು ಆಳುವ ವರ್ಗದ ವಿರುದ್ಧ ಬಂಡೇಳುವ ಪ್ರಸಂಗಗಳು ಈ ದೇಶದ ಚರಿತ್ರೆಯಲ್ಲಿ ನಡೆದಿರುವುದು ತೀರಾ ಅಪರೂಪ. ಕೆಳಜಾತಿಗಳ ಪ್ರತಿರೋಧಗಳು ಭಾರತದ ಆಧುನಿಕ ಪೂರ್ವ ಕಾಲಘಟ್ಟದವರೆಗೂ ನಡೆಯಲೇ ಇಲ್ಲ ಎಂದು ಹೇಳಿದರೂ ತಪ್ಪಾಗಲಾರದು. ಇಂತಹ ಕೆಳಜಾತಿಗಳು ಭಾರತದ ಸಮಾಜದಲ್ಲಿ ಅಸ್ಪೃಶ್ಯ ಸಮುದಾಯಗಳಿಗಾಗಿ ರೂಪುಗೊಂಡವು. ಇಂತಹ 'ಅಸ್ಪೃಶ್ಯರ ಗುಂಪಿಗೆ ಸೇರಿದವನೊಬ್ಬ ಭೂಮಿ, ದನ ಇತ್ಯಾದಿ ರೂಪದ ಸಂಪತ್ತನ್ನು ಪಡೆದುಕೊಳ್ಳುವುದು ಒಂದು ಅಪರಾಧ'[೫೬]. ಅಸ್ಪೃಶ್ಯ ಆಸ್ತಿ ಖರೀದಿಸುವುದಿರಲಿ ಆಳುವ ವರ್ಗಗಳಿಗೆ ಅವನೇ ಒಂದು ಆಸ್ತಿ. ಅಂಬೇಡ್ಕರ್ 'ಅಸ್ಪಶ್ಯರನ್ನು ಹಿಂದೂಗಳು ಆಸ್ತಿಯನ್ನಾಗಿ ಹೊಂದಿದ್ದಾರೆ. ಅವರ ಹಿತವನ್ನು ವೃದ್ಧಿಗೊಳಿಸುವಂತಿರುವಾಗ ಅಸ್ಪೃಶ್ಯರು ಹಿಂದೂಗಳ ಸ್ವತ್ತು. ಆದರೆ ಮಾಲಿಕತ್ವದಿಂದ ಬೇರೇನಾದರೂ ಭಾರವನ್ನು ಹೊರಬೇಕಾಗಿ ಬರುವಂತಿದ್ದಾಗ ಅಸ್ಪಶ್ಯರ ಮೇಲಿನ ಮಾಲೀಕತ್ವವನ್ನು ಅವರು ಕೊಡವಿಕೊಂಡು ಬಿಡುತ್ತಾರೆ. ಅಸ್ವತಂತ್ರವಾದ ಸಾಮಾಜಿಕ ವ್ಯವಸ್ಥೆಯ ಯಾವ ಅನುಕೂಲಗಳನ್ನು ಅಸ್ಪೃಶ್ಯರು ಕೇಳಿ ಪಡೆಯುವಂತಿಲ್ಲ; ಆದರೆ ಒಂದು ಸ್ವತಂತ್ರ ಸಾಮಾಜಿಕ ವ್ಯವಸ್ಥೆಯ ಎಲ್ಲ ಪ್ರತಿಕೂಲಗಳನ್ನೂ ಅವರು ಹೊತ್ತು ಸಹಿಸಬೇಕು'[೫೭] ಎನ್ನುತ್ತಾರೆ. ಅಸ್ಪೃಶ್ಯತೆಯು ಗುಲಾಮಗಿರಿಯಂತಹ ಅಧೀನ ಅವಸ್ಥೆಯ ಕಟ್ಟಕಡೆಯ ಸ್ಥಿತಿ. ಸೇವಕರು, ಗುಲಾಮರು ಒಂದು ಸ್ವಯಂಪೂರ್ಣ ಉತ್ಪಾದನಾ ವ್ಯವಸ್ಥೆಯಲ್ಲಿ ಹೇಗೆ ತಮ್ಮ ಶ್ರಮವನ್ನು ಬಿಟ್ಟಿ ಸೇವೆಗಳಿಗೆ ಮೀಸಲಿಟ್ಟು ಬದುಕುವರೋ, ಅವರಿಗಿಂತ ಹೆಚ್ಚು ಅಮಾನವೀಯ ಸಂದರ್ಭಗಳಲ್ಲಿ ಅಸ್ಪೃಶ್ಯರು ತಮ್ಮ ಶ್ರಮವನ್ನು ಆಳುವ ವರ್ಗಗಳಿಗೆ ವ್ಯಯಿಸುತ್ತಾ ಬಂದಿದ್ದಾರೆ. 'ಈ ದೃಷ್ಟಿಯಿಂದ ಅಸ್ಪೃಶ್ಯತೆಯು ಗುಲಾಮಗಿರಿಗಿಂತಲೂ ಹೀನವಾದದ್ದು ಮಾತ್ರವಲ್ಲ. ಅದರೊಂದಿಗೆ ಹೋಲಿಸಿದರೆ ಇದು ನಿಜಕ್ಕೂ ಕ್ರೂರವಾದದ್ದೂ ಕೂಡ'[೫೮]. ಭಾರತದ ಸಂದರ್ಭದಲ್ಲಿ ಸೇವಕ ಮತ್ತು ಗುಲಾಮ ಆಳುವ ವರ್ಗದ ದೃಷ್ಟಿಯಲ್ಲಿ ಹೇಗೆ 'ಅನುತ್ಪಾದಕನೋ' ಹಾಗೆಯೇ ಅವನು ಅಸ್ಪೃಶ್ಯನೂ ಹೌದು. ಈ ಗುಲಾಮ ಮತ್ತು ಅಸ್ಪೃಶ್ಯನ ನಡುವಿನ ಸಾದೃಶ್ಯ ಮತ್ತು ವೈರುಧ್ಯಗಳನ್ನು ಅಂಬೇಡ್ಕರ್

ರೋಮ್ ಸಾಮ್ರಾಜ್ಯದ ಗುಲಾಮರನ್ನು ವಿಶ್ಲೇಷಿಸುವ ಮೂಲಕ ಕೆಲವು ಅಂಶಗಳನ್ನು ಸ್ಪಷ್ಟ ಪಡಿಸುತ್ತಾರೆ. ರೋಮ್ 'ಸಮಾಜದ ಒಂದು ಭಾಗದ ಅಭಿರುಚಿಗಳ ಪೂರೈಕೆಗಾಗಿ ನೃತ್ಯಗಾರರು, ಗಾಯಕರು, ಸಂಗೀತಗಾರರು, ಜೂಜುಗಾರರು, ವಿವಿಧ ರೀತಿಯ ಕಲಾಕಾರರು, ದೈಹಿಕ ಪಟುಗಳಿಗೆ ತರಬೇತಿ ನೀಡುವವರು ಇತ್ಯಾದಿ ಅನೇಕ ಶ್ರೀಸಾಮಾನ್ಯರ ಅವಶ್ಯಕತೆ ಇತ್ತು. ಗುಲಾಮಗಿರಿಯಲ್ಲಿ ಇವೆಲ್ಲ ಅಡಕವಾಗಿವೆ'[೫೯] ಎನ್ನುತ್ತಾರೆ.

ಆದರೆ ರೋಮ್ ಸಾಮ್ರಾಜ್ಯದ ಮನರಂಜಕರು ಗುಲಾಮರಾಗಿದ್ದರು. ಸೇವಕ ಸಮುದಾಯವಾಗಿ ಬದುಕುತ್ತಿದ್ದರೂ ಅವರಿಗೆ ಆರ್ಥಿಕ ಮೂಲಗಳ ಮೇಲೆ ಅಧಿಕಾರಗಳಿದ್ದವು. ಅಗಸ್ಟಸ್‌ನ ಕಾಲದಲ್ಲಿ ಗುಲಾಮರಿಗೆ ಭೂಮಿಯನ್ನು ಗೇಣಿಗೆ ಕೊಡುತ್ತಿದ್ದರು ಎಂದು ಅಂಬೇಡ್ಕರ್ ವಿವರಿಸುತ್ತಾರೆ. ಆದರೆ ಭಾರತದ ಸಂದರ್ಭದಲ್ಲಿ ಈ ಮನರಂಜಕರು, ಗುಲಾಮರು, ಸೇವಕರೂ ಆಗಿರುವ ಸಮುದಾಯಗಳು, ಇವೆಲ್ಲವುಗಳ ಜೊತೆಗೆ ಅಸ್ಪೃಶ್ಯರೂ ಆಗಿದ್ದಾರೆ. ಕಾರಣ ಈ ಸಮುದಾಯಗಳಿಗೆ ಆರ್ಥಿಕ ಮೂಲಗಳ ಮೇಲೆ ಯಾವ ಅಧಿಕಾರಗಳಿಲ್ಲ. ಆಳುವ ವರ್ಗಗಳಿಗೆ ಮತ್ತು ಉತ್ಪಾದನಾ ಪ್ರಕ್ರಿಯೆಯ ಎಲ್ಲ ಹಂತಗಳಲ್ಲಿ ಯಥೇಚ್ಛವಾಗಿ ಅಸ್ಪೃಶ್ಯರು ತಮ್ಮ ಶ್ರಮವನ್ನು ತೊಡಗಿಸಿದರೂ ಇವರಿಗೆ ಯಾವ ಹಕ್ಕುಗಳಿಲ್ಲ. ತಾವು ಉತ್ಪಾದಿಸುವ ಸಂಪತ್ತಿನ ಮೇಲೆ ಇವರಿಗೆ ಅಧಿಕಾರಗಳಿಲ್ಲ. 'ನನಗೆ ತಿಳಿದ ದೇಶದ ಕೆಲವು ಭಾಗಗಳಲ್ಲಿ ಅಸ್ಪೃಶ್ಯರಿಗೆ ಒಂದೇ ಒಂದು ಸುಭದ್ರವಾದ ಜೀವನೋಪಾಯದ ಹಾದಿ ತೆರಿದಿದೆ. ಅದೇನೆಂದರೆ ಹಳ್ಳಿಯ ಹಿಂದೂ ರೈತರಲ್ಲಿ ಆಹಾರವನ್ನು ಭಿಕ್ಷೆ ಬೇಡುವ ಹಕ್ಕು. ಪ್ರತಿಯೊಂದು ಹಳ್ಳಿಯಲ್ಲೂ ಒಂದು ಆಡಳಿತ ಯಂತ್ರವಿದೆ. ಹಳ್ಳಿಯ ಆಡಳಿತದಲ್ಲಿ ಕೀಳು ಸೇವಕರಾಗಿ ನೇಮಕಗೊಳ್ಳುವುದೇ ಅಸ್ಪೃಶ್ಯರಿಗೆ ಪರಂಪರಾಗತವಾಗಿ ಬಂದಿರುವ ಭಾಗ್ಯ. ಅದಕ್ಕೆ ಭಾಗಶಃ ಸಂಭಾವನೆಯಾಗಿ ಇಡೀ ಅಸ್ಪೃಶ್ಯರ ಗುಂಪಿಗೆಂದು ಪ್ರಾಚೀನ ಕಾಲದಲ್ಲಿ ಒಂದು ಭೂಮಿಯ ತುಂಡನ್ನು ಬಿಟ್ಟುಕೊಡಲಾಗುತ್ತಿತ್ತು. ಆ ತುಂಡು ಭಾಗಶಃ ಸ್ಥಿರವಾದದ್ದು. ಎಂದೂ ಅದು ಹೆಚ್ಚಾಗುವಂತಿಲ್ಲ. ಅಸ್ಪೃಶ್ಯರು ಅದನ್ನು ಕೃಷಿ ಮಾಡದೆ ಪಾಳು ಬಿಡುವುದೇ ಲೇಸೆಂದು ಬಗೆಯುತ್ತಾರೆ. ಏಕೆಂದರೆ ಅದು ಅಷ್ಟೊಂದು ತುಂಡು ತುಂಡಾಗಿ ಒಡೆಯಲ್ಪಟ್ಟಿದೆ. ಇದರ ಜೊತೆಗೆ ಅವರಿಗೆ ನೀಡಲಾಗಿರುವುದೆಂದರೆ ಆಹಾರಕ್ಕಾಗಿ ಭಿಕ್ಷೆ ಬೇಡುವ ಹಕ್ಕು'[೬೦] ಎನ್ನುತ್ತಾರೆ ಅಂಬೇಡ್ಕರ್. ಪ್ರಾಯಶಃ ಭಾರತದ ಹಲವು ಸೇವಕ ಸಮುದಾಯಗಳು ಇಂದಿಗೂ ಇದೇ ಸ್ಥಿತಿಯಲ್ಲಿರುವುದು ಒಂದು ದುರಂತದ ಸಂಗತಿಯೇ ಸರಿ.

ಊಳಿಗಮಾನ್ಯ ಕಾಲಘಟ್ಟದಲ್ಲಿ ಆಳುವ ದಣಿಗಳ ಸುಖಗಳನ್ನು ಹೆಚ್ಚಿಸಲು ಅನೇಕ ಸೇವಕ ಸಮುದಾಯಗಳು ಹಲವು ಕೆಲಸಗಳಲ್ಲಿ ತೊಡಗಿಕೊಳ್ಳುವ ಅನಿವಾರ್ಯತೆ ಒದಗಿ ಬಂದಿತು. ಸಂಗೀತಗಾರರು, ಹಾಡುವವರು, ಮನರಂಜಕರು, ಊಳಿಗದವರು, ನೃತ್ಯ ಮಾಡುವವರು ಇತ್ಯಾದಿ ಜನರು ಕೇವಲ ಸೇವಕರಾಗಿ ಮಾತ್ರ ಉಳಿಯಲಿಲ್ಲ. ಈ ಗುಂಪಿಗೆ ಸೇರಿದವರು ಒಂದೊಂದು ಜಾತಿಯಾಗಿಯೂ ರೂಪುಗೊಂಡರು. ಸೇವೆ ಸಲ್ಲಿಸುವುದನ್ನೇ ತಮ್ಮ ಕರ್ತವ್ಯ ಎಂದು ಭಾವಿಸಿದ ಮತ್ತು ಆಳುವ ವರ್ಗದಿಂದ ಸೇವೆಗಳಿಗೆಂದೇ ನಿಯುಕ್ತವಾದ ಸಮುದಾಯಗಳಿಗೆ ತಮ್ಮ ಸುತ್ತಲಿರುವ ಯಾವ ಲೌಕಿಕದ ಸಂಗತಿಗಳ ಮೇಲೆ ಒಡೆತನವಿರಲಿಲ್ಲ. ಈ ಸೇವಕ ಸಮುದಾಯಗಳೇ ಆಳುವ ವರ್ಗಕ್ಕೆ ಆಸ್ತಿಯಾಗಿ ಪರಿಗಣಿಸಲ್ಪಟ್ಟಿದ್ದವು. ಈ ದೇಶದ

ಸಾಮಾಜಿಕ ಕಾನೂನುಗಳು ಸೇವಕ ಸಮುದಾಯಗಳು ಆಸ್ತಿ ಹೊಂದುವುದನ್ನು ಶತಾಯಗತಾಯ ನಿಷೇಧಿಸಿದ್ದವು., ಸೇವಕರಿಗೆ ತಮ್ಮ ಮೇಲೆ ತಮಗೇ ಸ್ವಾತಂತ್ರ್ಯವಿರಲಿಲ್ಲ. 'ತನ್ನ ದಣಿಗೆ ಮಕ್ಕಳು ಹುಟ್ಟಿದರೆ ತಾನು ತನ್ನನ್ನು ಗ್ರಾಮದೇವತೆಗೆ ಬಲಿಕೊಟ್ಟುಕೊಳ್ಳುತ್ತೇನೆ. ತನ್ನ ದಣಿಗೆ ಬಂದಿರುವ ರೋಗ ವಾಸಿಯಾದರೆ ಸಿಡಿಗಲ್ಲಿಗೆ ತಲೆ ಕೊಡುತ್ತೇನೆ. ತನ್ನ ದಣಿ ಯುದ್ಧದಲ್ಲಿ ಸತ್ತರೆ ತಾನೂ ಕೊರಳು ಕತ್ತರಿಸಿಕೊಂಡು ಸಾಯುತ್ತೇನೆ. ತನ್ನ ಜೀವಕೊಟ್ಟಾದರೂ ತನ್ನ ದಣಿಯನ್ನು ರಕ್ಷಿಸುತ್ತೇನೆ' ಎಂಬ ನಂಬಿಕೆಗಳಲ್ಲಿಯೇ ಸೇವಕ ಸಮುದಾಯಗಳು ರೂಪುಗೊಂಡವು. ವೇಳವಾಳಿ, ಲೆಂಕವಾಳಿ, ಜೋಳದಪಾಳಿ, ಗುರುಡ ಪದ್ಧತಿಗಳು ಸೇವಕ ಸಮುದಾಯಗಳಿಗೆ ಸಹಜವಾಗಿ ತಮ್ಮ ಮೇಲೆ ಇರಬೇಕಿದ್ದ ಜೀವಿಸುವ ಹಕ್ಕನ್ನೂ ಕಸಿದುಕೊಂಡದ್ದವು. 'ಜೋಳದಪಾಳಿ' ಪದ್ಧತಿಯಲ್ಲಿ ಅನ್ನ ಹಾಕಿದ ದಣಿಗೆ ಜೀವವನ್ನು ಕೊಡುವುದು ಸೇವಕರ 'ಕರ್ತವ್ಯ'. ಇಲ್ಲಿ ಸೇವಕರಿಗೆ ತಮ್ಮ ಮೇಲೆಯೇ ತಮಗೆ ಅಧಿಕಾರವಿಲ್ಲ. ಜೊತೆಗೆ ತಮಗೆ ಸಂಬಂಧಿಸಿದ ಯಾವ ಸಂಗತಿಗಳ ಮೇಲೆಯೂ ತಮಗೆ ಅಧಿಕಾರವಿಲ್ಲ. ತಮ್ಮ ಹೆಂಡತಿ, ಮಕ್ಕಳು ಸಮೇತ ಯಾವುದರ ಬಗ್ಗೆಯೂ ಸೇವಕರಿಗೆ ಅಧಿಕಾರವಿರಲಿಲ್ಲ. ಸೇವಕ ಸಮುದಾಯದ ಹೆಣ್ಣುಗಳನ್ನು ದೇವರಿಗೆ ಮೀಸಲಾಗಿಡಬೇಕು. ಹೀಗೆ ಮೀಸಲಾದ ಹೆಣ್ಣನ್ನು ಸಮಾಜದ ಯಾವುದೇ ಪ್ರಬಲ ವ್ಯಕ್ತಿ 'ಇಟ್ಟುಕೊಳ್ಳಬಹುದು'. ಸೇವಕ ವರ್ಗದ ಜನರಿಗೆ ತಮ್ಮ ಮಕ್ಕಳ ಮೇಲೂ ಅಧಿಕಾರವಿಲ್ಲ. ಇವರ ಮಕ್ಕಳನ್ನು ಸುಗ್ಗಿ ಸಂದರ್ಭದ ನರಬಲಿಗಾಗಿ ಸಮಾಜದ ಯಜಮಾನರು ಬಳಸಿಕೊಳ್ಳಬಹುದು. ಮಧ್ಯ ಪ್ರದೇಶದ ಕೊಂಡ್ ಜನ ಅಲ್ಲಿನ ಡೊಂಬರ ಸಮುದಾಯದ ಚಿಕ್ಕಮಕ್ಕಳನ್ನು ಪ್ರತಿವರ್ಷ ನರಬಲಿಗಾಗಿ ಬಳಸುತ್ತಿದ್ದುದನ್ನು ಫೆಲಿಕ್ಸ್ ಪೆಡಲ್ ವಿವರಿಸುತ್ತಾರೆ. 'ಕೊಂಡ್ ಜನರು ಮೆರಯ್ಯಾ ಬಲಿ ಕೊಡಲು ಡೊಮ್ ಜನರ ಮಕ್ಕಳನ್ನು ಕೊಂಡು ತರುತ್ತಿದ್ದರು'[೬೧]. ಅಲ್ಲಿನ ಡೊಂಬರು ತಮ್ಮ ಮಕ್ಕಳನ್ನು ಮಾರಿಕೊಳ್ಳುವಷ್ಟು ಬಡವರು. ಜೊತೆಗೆ ಡೊಂಬರು ಅಲ್ಲಿನ ಸಮಾಜದಲ್ಲಿ ಅಸ್ಪೃಶ್ಯರೂ ಹೌದು. 'ಡೊಮ್, ಪಾನೋ, ಪೈದಿಗಳು ಕೊಂಡ ಜನಕ್ಕೆ ಅಸ್ಪೃಶ್ಯರು'[೬೨]. ಎನ್ನುತ್ತಾರೆ ಫೆಲಿಕ್ಸ್ ಪೆಡಲ್.

ಇನ್ನು ಸೇವಕ ಸಮುದಾಯದ ಹೆಣ್ಣುಗಳೇ ಈವತ್ತಿನ ದೇವದಾಸಿಯರು. ಯಾವ ಯಾವ ಸಮುದಾಯಗಳು ಉಳಿಗಮಾನ್ಯ ಪ್ರಭುಗಳಿಗೆ ಸೇವೆಗಳನ್ನು ಒದಗಿಸುತ್ತಿದ್ದರೋ ಆ ಸಮುದಾಯದ ಹೆಣ್ಣುಗಳು ದೇವರ ಹೆಸರಲ್ಲಿ ಉಳಿಗಮಾನ್ಯ ದಣಿಗಳ ಭೋಗದ ವಸ್ತುಗಳು. ಇಲ್ಲಿ ದೇವರ ಹೆಸರು ನೆಪಮಾತ್ರ. ಅಸ್ಪೃಶ್ಯ ಮತ್ತು ಸೇವಕ ಸಮುದಾಯಗಳಿಗೆ 'ಹಿಂದೂ ಧರ್ಮ' ವಿಧಿಸಿದ ಕರ್ತವ್ಯಗಳನ್ನು ಅಂಬೇಡ್ಕರ್ ಪಟ್ಟಿ ಮಾಡಿದ್ದಾರೆ. ಈ ಪಟ್ಟಿಯಲ್ಲಿ ಸೇವಕ ಸಮುದಾಯಗಳು 'ಕೆಲವು ಉತ್ಸವಗಳ ಸಂದರ್ಭದಲ್ಲಿ ಅಶ್ಲೀಲವಾದ ಮೋಜಿಗೆ ಗುರಿಯಾಗಲು ತಮ್ಮ ಹೆಂಗಸರನ್ನು ಅಸ್ಪೃಶ್ಯರು ಗ್ರಾಮ ಸಮುದಾಯದ ಸದಸ್ಯರಿಗೆ ಒಪ್ಪಿಸಬೇಕು'[೬೩]. ಎಂಬುದು ಸಹ ಅಸ್ಪೃಶ್ಯರ ಕರ್ತವ್ಯಗಳಲ್ಲಿ ಮುಖ್ಯವಾದದ್ದು. ಹೀಗೆ ತಮ್ಮ ಹೆಂಗಸರನ್ನು ಆಳುವ ದಣಿಗಳ ಮನರಂಜನೆಗೆ ಒದಗಿಸುವುದು ಸೇವಕರ ಕರ್ತವ್ಯಗಳಲ್ಲಿ ಒಂದು. ಡೊಂಬರ ಸಮುದಾಯದಲ್ಲಿ ಇಂದಿಗೂ ಈ ಬಗೆಯ ಪದ್ಧತಿಗಳು ಕೆಲವು ಕಡೆ ಜೀವಂತವಾಗಿವೆ.

ಕನ್ನಡ ರಂಗಭೂಮಿಯ ಮೊಟ್ಟಮೊದಲ ರಂಗ ನಟಿ ಕೌಜಲಗಿ ನಿಂಗಮ್ಮ ಡೊಂಬರ ಸಮುದಾಯಕ್ಕೆ

ಸೇರಿದವಳು. ಕೃಷ್ಣಪಾರಿಜಾತ ಸಣ್ಣಾಟವನ್ನು ಒಂದು ಮಹತ್ವದ ರಂಗಪ್ರಕಾರವನ್ನಾಗಿ ಬೆಳಸಿದವಳು ನಿಂಗಮ್ಮ. ನಿಂಗಮ್ಮನ ಜೀವನ ವೃತ್ತಾಂತವನ್ನು ಕುರಿತು ಕೆಲವು ಪುಸ್ತಕಗಳೂ ಪ್ರಕಟವಾಗಿವೆ. ನಿಂಗಮ್ಮ ಒಬ್ಬ ಮಹತ್ವದ ರಂಗ ನಟಿಯಾಗಿ ರೂಪುಗೊಳ್ಳುವ ಹಿಂದೆ ಅವಳ ಬದುಕಿನ ಅನೇಕ ಸಂಗತಿಗಳು ಪ್ರಚೋದಿಸಿವೆ. ಅವುಗಳಲ್ಲಿ ನಿಂಗಮ್ಮನ ಬಡತನ ಮತ್ತು ಅವಳ ತಾಯಿಯ ಅಸಹಾಯಕತೆಗಳೂ ಮುಖ್ಯವಾದವುಗಳು. ನಿಂಗಮ್ಮನ ತಾಯಿ ತನ್ನ ಮಗಳನ್ನು ಓದಿಸಿ ದೊಡ್ಡ ವ್ಯಕ್ತಿಯನ್ನಾಗಿಸಲೆಂದು ಹಂಬಲಿಸುವುದು ತಾನು ಅನುಭವಿಸುತ್ತಿದ್ದ ಸಾಮಾಜಿಕ ಅವಮಾನಗಳ ಕಾರಣದಿಂದ. 'ನಿಂಗಮ್ಮನ ತಾಯಿ ಓಕುಳಿಯಲ್ಲಿ ನೀರು ಉಗ್ಗಿಸಿಕೊಳ್ಳಲು ಹೋಗುತ್ತಿದ್ದಳು. ಕೌಜಲಗಿಯಲ್ಲಷ್ಟೇ ಅಲ್ಲ, ಪ್ರತಿ ವರ್ಷ ಬೆಟಗೇರಿಯ ಹತ್ತಿರ ನಿಂಗಾಪುರಕ್ಕೂ ಇದಕ್ಕಾಗಿ ಬರುತ್ತಿದ್ದಳು'[೬೪]. ಓಕುಳಿ ಸೇವೆಯೆಂದರೆ ಸೇವಕ ವರ್ಗದ ಹೆಣ್ಣುಗಳು ಗ್ರಾಮದ ಒಳಿತಿಗಾಗಿ ಸಲ್ಲಿಸುವ ಒಂದು ಪ್ರಕಾರದ ಸೇವೆ. 'ಇದು ಉತ್ತರ ಕರ್ನಾಟಕದಲ್ಲಿ ರೂಢಿಯಲ್ಲಿರುವ ಒಂದು ಸಂಪ್ರದಾಯ. ಓಕುಳಿಯೆಂಬುದು ಮಾರುತಿ ದೇವರ ಹೆಸರಿನಲ್ಲಿ ನಡೆಯುವ ಉತ್ಸವ. ಗುಡಿಯ ಮುಂದಿರುವ ಹೊಂಡದಲ್ಲಿ ನೀರು ತುಂಬಿ ಆ ನೀರನ್ನು ಊರಿನ ತರುಣರು ನಿಮ್ನ ವರ್ಗದ ಹೆಣ್ಣು ಮಕ್ಕಳಿಗೆ ಗೊಜ್ಜುವುದು ಈ ಓಕುಳಿಯ ಪ್ರಮುಖವಾದ ಒಂದು ಭಾಗ'[೬೫]. ನಿಂಗಮ್ಮನ ತಾಯಿ ತಾನು ಅನುಭವಿಸುವ ಅವಮಾನಗಳಿಂದ ಮಗಳನ್ನು ದೂರ ಇಡುವ ಕಾರಣಕ್ಕಾಗಿ ಬೇರೆ ಊರಲ್ಲಿ ಸಂಗೀತ ಕಲಿಯಲು ಕಳುಹಿಸುತ್ತಾಳೆ. ನಿಂಗಮ್ಮ ದೊಡ್ಡ ನಟಿಯಾಗಲು, ಪಾರಿಜಾತದ ದೊಡ್ಡ ತಂಡ ಕಟ್ಟಿಕೊಂಡು ಹೆಸರು ಮಾಡಲು ತನ್ನ ತಾಯಿ ಮತ್ತು ಸಮುದಾಯ ಅನುಭವಿಸುತ್ತಿದ್ದ ಅವಮಾನಗಳೂ ಪ್ರಚೋದಿಸಿರಬಹುದು. ಇದೇ ಬಗೆಯ ಇನ್ನೊಂದು ಪದ್ಧತಿ ಡೊಳ್ಳು ಪ್ರಸ್ಥ.

ಶಿವಮೊಗ್ಗ ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ನಡೆಯುವ ಡೊಂಬರ ಹಬ್ಬದ ಸಂದರ್ಭದಲ್ಲಿ 'ಡೊಳ್ಳುಪ್ರಸ್ಥ' ಆಚರಣೆ ನೆಡೆಯುತ್ತದೆ. ಇಲ್ಲಿ ಡೊಳ್ಳಿಗೆ ಡೊಂಬರ ಹೆಣ್ಣುಮಕ್ಕಳನ್ನು ಧಾರೆ ಎರೆಯಲಾಗುತ್ತದೆ. ಮುಂದೆ ಹೀಗೆ ಧಾರೆ ಎರೆಯಲ್ಪಟ್ಟವಳು ಊರಿನ ಮುಖಂಡ ಇಲ್ಲವೆ, ಯಾವುದಾದರೊಬ್ಬ ಭೂಮಾಲಿಕನಿಗೆ ಅರೆಕಾಲಿಕವಾಗಿ 'ಮಾರಲ್ಪಡುತ್ತಾಳೆ'. 'ಸುಮಾರು ೩೦೦-೪೦೦ ರೂ ಮತ್ತು ನಿರ್ದಿಷ್ಟ ಅಳತೆ ದವಸವನ್ನು ಅವಳಿಗೆ ಕೊಡುವುದರ ಮೂಲಕ ಅವಳನ್ನು ವರ್ಷಪೂರ್ತಿ ಭೋಗಿಸುವ ಹಕ್ಕನ್ನು ಯಾರಾದರೊಬ್ಬರು ಪಡೆಯಬಹುದು'[೬೬].ಈ ಆಚರಣೆ ಡೊಂಬರಲ್ಲಿ ಬೆಳೆದು ಬರುವುದಕ್ಕೆ ಕುಮಾರರಾಮನ 'ಶಾಪ' ಕಾರಣ ಎನ್ನುತ್ತಾರೆ ಡೊಂಬರು. ಕುಮಾರರಾಮ ಕೊಟ್ಟ 'ಶಾಪದಿಂದ' ಈವತ್ತೂ ಡೊಂಬರ ಹೆಣ್ಣು ಮಕ್ಕಳು ಇಲ್ಲಿ ನಡೆಯುವ ಡೊಂಬರ ಹಬ್ಬದಲ್ಲಿ ಬೀದಿಗಳಲ್ಲಿ ನೃತ್ಯ ಮಾಡಬೇಕು. ಇವರ ನೃತ್ಯವನ್ನು ನೋಡಿ 'ಸ್ವರ್ಗದಲ್ಲೋ ಅಥವಾ ದೇವಲೋಕದಲ್ಲೋ' ಇನ್ನೆಲ್ಲೋ ಇರುವ ಕುಮಾರರಾಮ ಮತ್ತು ಭೂಮಿ ಮೇಲೆ ಆತನ ಪ್ರತಿನಿಧಿಗಳಂತಿರುವ ಭೂಮಾಲಿಕ ಜನ ಸಂತೋಷ ಪಡುತ್ತಾರೆ. ಕುಮಾರರಾಮನ 'ಶಾಪ' ಡೊಂಬರನ್ನು ಬೆನ್ನು ಹತ್ತಿದ್ದರೆ, ಅದೇ 'ಶಾಪವು' ಭೂಮಾಲಿಕರಿಗೆ, ದಣಿಗಳಿಗೆ ವರವಾಗಿ ಪರಿಣಮಿಸಿದೆ. ಕುಮಾರರಾಮನ ಶಾಪವು ಸೇವಕರನ್ನು ಸೇವಕರಾಗಿಯೇ ಇರುವಂತೆ ಇಂದಿಗೂ ಡೊಂಬರನ್ನು ನಿಯಂತ್ರಿಸುತ್ತಿದೆ. ಡೊಂಬರ ಹೆಣ್ಣುಗಳು ಕುಮಾರರಾಮನ ಈವತ್ತಿನ ಸಂತಾನಗಳಿಂದ ಓಕುಳಿಯನ್ನು ಎರಚಿಸಿಕೊಂಡು ಶಾಪ

ವಿಮೋಚನೆಗಾಗಿ ಪ್ರಯತ್ನಿಸುತ್ತಲೇ ಇದ್ದಾರೆ. 'ಪ್ರಾಯಶಃ ಡೊಂಬರು ಈ ಶಾಪದಿಂದ ವಿಮೋಚನೆ ಪಡೆಯಲಾರರು'. ಏಕೆಂದರೆ ಕುಮಾರರಾಮನ ಸಂತತಿ ಹುಟ್ಟುತ್ತಲೇ ಇದೆ. ಬೇರೆ ಬೇರೆ ವೇಷಗಳಲ್ಲಿ, ಭಿನ್ನ ಭಿನ್ನ ವರಸೆಗಳಲ್ಲಿ ಈ ಸಂತತಿಯು ಕುಮಾರರಾಮನ ಶಾಪವನ್ನು ಪುನರ್‌ನವೀಕರಿಸುತ್ತಲೇ ಇದೆ. ಅವಮಾನವನ್ನು, ಅಸ್ಪೃಶ್ಯತೆಯನ್ನು, ಹಸಿವನ್ನು, ಬಡತನವನ್ನು, ಸ್ವಾತಂತ್ರ್ಯರಹಿತ ಬದುಕನ್ನು ಡೊಂಬರಂತಹ ಸಮುದಾಯಗಳು ಬದುಕಲೇಬೇಕು. ಹಾಗೆಂದು ಹಿಂದೂ ಸಮಾಜದ ಕಾಮೂನುಗಳು ಕುಮಾರರಾಮನಂತಹ ಮಹಾನುಭಾವರ ಶಾಪಗಳ ಮೂಲಕ ಒತ್ತಡ ಹೇರುತ್ತಲೇ ಇವೆ. ಹಿಂದೂಧರ್ಮವು ತನ್ನ ಕಾನೂನುಗಳನ್ನು ಕುಮಾರರಾಮನಂತಹ ರೂಪಕಗಳ ಮೂಲಕ ಚಾಲ್ತಿಯಲ್ಲಿಡುತ್ತದೆ. ಈ ರೂಪಕಗಳು ದೇವರ ರೂಪದಲ್ಲಿ ಸೇವಕ ಸಮುದಾಯಗಳನ್ನು ಪರಂಪರಾನುಗತ ಕಾನೂನುಗಳ ಮೂಲಕ ಆಳುತ್ತಲೇ ಇವೆ. ಮಾತೆತ್ತಿದರೆ ಭಾರತದ್ದು ಭವ್ಯ ಸಂಸ್ಕೃತಿ, ಜಗತ್ತಿನ ಎಲ್ಲ ನಾಗರಿಕತೆಗಳ ತೊಟ್ಟಿಲು, ಸುವರ್ಣ ಯುಗಗಳನ್ನು ಕಂಡ ನಾಡು ಎಂದೆಲ್ಲ ಭಾರತವನ್ನು ಹೊಗಳಲಾಗುತ್ತದೆ. ಅದರಲ್ಲಂತೂ ಸಂಘ ಪರಿವಾರ ಐಲು ಹಿಡಿದಂತೆ ಭಾರತದ ಸುಂದರ ಮತ್ತು ಕ್ಷಾತ್ರಾ ತೇಜಸ್ಸಿನ ಚಿತ್ರವನ್ನು ಮೈದುಂಬಿ ವರ್ಣಿಸುತ್ತಾರೆ. ಅವರಿಗೆ ಭಾರತವೆಂದರೆ ಏರುಪೇರುಗಳಿಲ್ಲದ, ಎಲ್ಲೆಲ್ಲೂ ಹೂವುಗಳು ಅರಳಿ ನಿಂತಿರುವ, ಪ್ರವಾಸೋದ್ಯಮ ಇಲಾಖೆಯು ತೋರಿಸುವ ಸುವರ್ಣ ಚೌಕಟ್ಟಿನ ಚಿತ್ರವಿದ್ದಂತೆ. ಈ ಭ್ರಮಾತ್ಮಕ ಚಿತ್ರವನ್ನೇ ನಿಜವೆಂದು, ಹೋಗಿ ಬಂದವರಿಗೆಲ್ಲ ನಂಬಿಸುತ್ತಾರೆ. ಸಂಸ್ಕೃತ ಇಲ್ಲವೆ ಮತ್ತಿನ್ನಾವುದೋ ಚಾಲ್ತಿಯಲ್ಲಿಲ್ಲದ ಭಾಷೆಯಲ್ಲಿನ ಪ್ರಾಚೀನ ಭಾರತದ ಸುಂದರ ಉಲ್ಲೇಖಗಳನ್ನು ಪ್ರಸ್ತಾಪಿಸುತ್ತಾರೆ. ಅಲ್ಲಿಗೆ, ಅಷ್ಟರ ಮಟ್ಟಿಗೆ ಅವರ ಭ್ರಮೆಯಲ್ಲಿ ಭಾರತವು ಸುಂದರ. ಇವರು ಕಟ್ಟಿಕೊಡುವ ಸುಂದರ ಭಾರತದ ಚಿತ್ರದಲ್ಲಿ, ಈ ನಾಡನ್ನು ಕಟ್ಟಿದ ಜನರಿರುವುದಿಲ್ಲ. ಅವರ ಕಷ್ಟ, ಕಣ್ಣೀರು, ಬೆವರು, ಹಿಂಸೆ, ಅವಮಾನ, ಇತ್ಯಾದಿ ಸಂಗತಿಗಳಿರುವುದಿಲ್ಲ. ಈ ಜನ ನಾಡನ್ನು ಕಟ್ಟಲೆಂದೇ ಇರುವವರು. ರಕ್ತವನ್ನು ಬಸಿದು ಮಹಲುಗಳನ್ನು ಕಟ್ಟಲೆಂದೇ ಬದುಕುತ್ತಿರವವರು. ಇವರು ಜಾತಿಯ ಹಿಂಸೆ, ಅವಮಾನ, ಹಸಿವು ಮುಂತಾದ ಸಂಗತಿಗಳನ್ನು ತುಟಿಕಚ್ಚಿ ಸಹಿಸಿಕೊಂಡು ಬದುಕಬೇಕಾದವರು. ಇವರ್‍ಯಾರೂ ಈ ಮದೋನ್ಮತ್ತ ಜನರ ದೇಶಾಭಿವೃದ್ಧಿಯ ಕಾರ್ಯಕ್ರಮ ಪಟ್ಟಿಯಲ್ಲಿರುವುದಿಲ್ಲ. ಪ್ರವಾಸೋದ್ಯಮ ಇಲಾಖೆಯ 'ಯೋಜಿತ' ಡಾಕ್ಯುಮೆಂಟರಿಗಳಲ್ಲಿ ಇವರಿಗೆ ಜಾಗವಿಲ್ಲ. ಆದರೂ ಇವರು ಭಾರತದ ಮತ್ತು ಆ ದೇಶದ ನಾಗರಿಕರು. ಈ ದೇಶ ಸಾಕಿಕೊಂಡು ಬಂದಿರುವ 'ಪರಂಪರೆಯ' ಪಳಿಯುಳಿಕೆಗಳು.

ಭಾರತದಲ್ಲಿ ಅಲೆಮಾರಿಗಳನ್ನು ವಿಶೇಷವಾಗಿ ಅಧ್ಯಯನ ಮಾಡಿರುವ ಪಿ.ಕೆ.ಮಿಶ್ರ ಅಲೆಮಾರಿಗಳನ್ನು ಪಾರಂಪರಿಕ ಭಾರತದ ಪ್ರತಿನಿಧಿಗಳೆಂದು ಕರೆಯುತ್ತಾರೆ[೬]. ಹಿಂದೂ ಸಮಾಜದ ಪಳಿಯುಳಿಕೆಗಳನ್ನು ರಕ್ಷಿಸಿಕೊಂಡು ಬರುತ್ತಿರುವವರು ಎಂದು ಅಲೆಮಾರಿಗಳನ್ನು ಪರಿಗಣಿಸಲಾಗುತ್ತದೆ. ಆದರೆ ಯಾವ ಭಾರತದ, ಯಾವ ಪರಂಪರೆಯ ಪಳಿಯುಳಿಕೆಗಳನ್ನು ಅಲೆಮಾರಿಗಳು ಉಳಿಸಿಕೊಂಡು ಬರುತ್ತಿದ್ದಾರೆ? ಯಾಕಾಗಿ ಇವರೇ ಭಾರತದ ಪರಂಪರೆಯನ್ನು ರಕ್ಷಿಸಬೇಕು? ಎಂಬ ಪ್ರಶ್ನೆಗಳು ಈ ಚರ್ಚೆಗಳಲ್ಲಿ ಗೈರು ಹಾಜರಾಗುತ್ತವೆ.

ವಿಮೋಚನೆಗಾಗಿ ಪ್ರಯತ್ನಿಸುತ್ತಲೇ ಇದ್ದಾರೆ. 'ಪ್ರಾಯಶಃ ಡೊಂಬರು ಈ ಶಾಪದಿಂದ ವಿಮೋಚನೆ ಪಡೆಯಲಾರರು'. ಏಕೆಂದರೆ ಕುಮಾರರಾಮನ ಸಂತತಿ ಹುಟ್ಟುತ್ತಲೇ ಇದೆ. ಬೇರೆ ಬೇರೆ ವೇಷಗಳಲ್ಲಿ, ಭಿನ್ನ ಭಿನ್ನ ವರಸೆಗಳಲ್ಲಿ ಈ ಸಂತತಿಯು ಕುಮಾರರಾಮನ ಶಾಪವನ್ನು ಪುನರ್‌ನವೀಕರಿಸುತ್ತಲೇ ಇದೆ. ಅವಮಾನವನ್ನು, ಅಸ್ಪೃಶ್ಯತೆಯನ್ನು, ಹಸಿವನ್ನು, ಬಡತನವನ್ನು, ಸ್ವಾತಂತ್ರ್ಯರಹಿತ ಬದುಕನ್ನು ಡೊಂಬರಂತಹ ಸಮುದಾಯಗಳು ಬದುಕಲೇಬೇಕು. ಹಾಗೆಂದು ಹಿಂದೂ ಸಮಾಜದ ಕಾಮೂನುಗಳು ಕುಮಾರರಾಮನಂತಹ ಮಹಾನುಭಾವರ ಶಾಪಗಳ ಮೂಲಕ ಒತ್ತಡ ಹೇರುತ್ತಲೇ ಇವೆ. ಹಿಂದೂಧರ್ಮವು ತನ್ನ ಕಾನೂನುಗಳನ್ನು ಕುಮಾರರಾಮನಂತಹ ರೂಪಕಗಳ ಮೂಲಕ ಚಾಲ್ತಿಯಲ್ಲಿಡುತ್ತದೆ. ಈ ರೂಪಕಗಳು ದೇವರ ರೂಪದಲ್ಲಿ ಸೇವಕ ಸಮುದಾಯಗಳನ್ನು ಪರಂಪರಾನುಗತ ಕಾನೂನುಗಳ ಮೂಲಕ ಆಳುತ್ತಲೇ ಇವೆ. ಮಾತೆತ್ತಿದರೆ ಭಾರತದ್ದು ಭವ್ಯ ಸಂಸ್ಕೃತಿ, ಜಗತ್ತಿನ ಎಲ್ಲ ನಾಗರಿಕತೆಗಳ ತೊಟ್ಟಿಲು, ಸುವರ್ಣ ಯುಗಗಳನ್ನು ಕಂಡ ನಾಡು ಎಂದೆಲ್ಲ ಭಾರತವನ್ನು ಹೊಗಳಲಾಗುತ್ತದೆ. ಅದರಲ್ಲಂತೂ ಸಂಘ ಪರಿವಾರ ಐಲು ಹಿಡಿದಂತೆ ಭಾರತದ ಸುಂದರ ಮತ್ತು ಕ್ಷಾತ್ರಾ ತೇಜಸ್ಸಿನ ಚಿತ್ರವನ್ನು ಮೈದುಂಬಿ ವರ್ಣಿಸುತ್ತಾರೆ. ಅವರಿಗೆ ಭಾರತವೆಂದರೆ ಏರುಪೇರುಗಳಿಲ್ಲದ, ಎಲ್ಲೆಲ್ಲೂ ಹೂವುಗಳು ಅರಳಿ ನಿಂತಿರುವ, ಪ್ರವಾಸೋದ್ಯಮ ಇಲಾಖೆಯು ತೋರಿಸುವ ಸುವರ್ಣ ಚೌಕಟ್ಟಿನ ಚಿತ್ರವಿದ್ದಂತೆ. ಈ ಭ್ರಮಾತ್ಮಕ ಚಿತ್ರವನ್ನೇ ನಿಜವೆಂದು, ಹೋಗಿ ಬಂದವರಿಗೆಲ್ಲ ನಂಬಿಸುತ್ತಾರೆ. ಸಂಸ್ಕೃತ ಇಲ್ಲವೆ ಮತ್ತಿನ್ನ್ಯಾವುದೋ ಚಾಲ್ತಿಯಲ್ಲಿಲ್ಲದ ಭಾಷೆಯಲ್ಲಿನ ಪ್ರಾಚೀನ ಭಾರತದ ಸುಂದರ ಉಲ್ಲೇಖಗಳನ್ನು ಪ್ರಸ್ತಾಪಿಸುತ್ತಾರೆ. ಅಲ್ಲಿಗೆ, ಅಷ್ಟರ ಮಟ್ಟಿಗೆ ಅವರ ಭ್ರಮೆಯಲ್ಲಿ ಭಾರತವು ಸುಂದರ. ಇವರು ಕಟ್ಟಿಕೊಡುವ ಸುಂದರ ಭಾರತದ ಚಿತ್ರದಲ್ಲಿ, ಈ ನಾಡನ್ನು ಕಟ್ಟಿದ ಜನರಿರುವುದಿಲ್ಲ. ಅವರ ಕಷ್ಟ, ಕಣ್ಣೀರು, ಬೆವರು, ಹಿಂಸೆ, ಅವಮಾನ, ಇತ್ಯಾದಿ ಸಂಗತಿಗಳಿರುವುದಿಲ್ಲ. ಈ ಜನ ನಾಡನ್ನು ಕಟ್ಟಲೆಂದೇ ಇರುವವರು. ರಕ್ತವನ್ನು ಬಸಿದು ಮಹಲುಗಳನ್ನು ಕಟ್ಟಲೆಂದೇ ಬದುಕುತ್ತಿರವವರು. ಇವರು ಜಾತಿಯ ಹಿಂಸೆ, ಅವಮಾನ, ಹಸಿವು ಮುಂತಾದ ಸಂಗತಿಗಳನ್ನು ತುಟಿಕಚ್ಚಿ ಸಹಿಸಿಕೊಂಡು ಬದುಕಬೇಕಾದವರು. ಇವರ್‍ಯಾರೂ ಈ ಮದೋನ್ಮತ್ತ ಜನರ ದೇಶಾಭಿವೃದ್ಧಿಯ ಕಾರ್ಯಕ್ರಮ ಪಟ್ಟಿಯಲ್ಲಿರುವುದಿಲ್ಲ. ಪ್ರವಾಸೋದ್ಯಮ ಇಲಾಖೆಯ 'ಯೋಜಿತ' ಡಾಕ್ಯುಮೆಂಟರಿಗಳಲ್ಲಿ ಇವರಿಗೆ ಜಾಗವಿಲ್ಲ. ಆದರೂ ಇವರು ಭಾರತದ ಮತ್ತು ಆ ದೇಶದ ನಾಗರಿಕರು. ಈ ದೇಶ ಸಾಕಿಕೊಂಡು ಬಂದಿರುವ 'ಪರಂಪರೆಯ' ಪಳಿಯುಳಿಕೆಗಳು.

ಭಾರತದಲ್ಲಿ ಅಲೆಮಾರಿಗಳನ್ನು ವಿಶೇಷವಾಗಿ ಅಧ್ಯಯನ ಮಾಡಿರುವ ಪಿ.ಕೆ.ಮಿಶ್ರ ಅಲೆಮಾರಿಗಳನ್ನು ಪಾರಂಪರಿಕ ಭಾರತದ ಪ್ರತಿನಿಧಿಗಳೆಂದು ಕರೆಯುತ್ತಾರೆ[೬೨]. ಹಿಂದೂ ಸಮಾಜದ ಪಳಿಯುಳಿಕೆಗಳನ್ನು ರಕ್ಷಿಸಿಕೊಂಡು ಬರುತ್ತಿರುವವರು ಎಂದು ಅಲೆಮಾರಿಗಳನ್ನು ಪರಿಗಣಿಸಲಾಗುತ್ತದೆ. ಆದರೆ ಯಾವ ಭಾರತದ, ಯಾವ ಪರಂಪರೆಯ ಪಳಿಯುಳಿಕೆಗಳನ್ನು ಅಲೆಮಾರಿಗಳು ಉಳಿಸಿಕೊಂಡು ಬರುತ್ತಿದ್ದಾರೆ? ಯಾಕಾಗಿ ಇವರೇ ಭಾರತದ ಪರಂಪರೆಯನ್ನು ರಕ್ಷಿಸಬೇಕು? ಎಂಬ ಪ್ರಶ್ನೆಗಳು ಈ ಚರ್ಚೆಗಳಲ್ಲಿ ಗೈರು ಹಾಜರಾಗುತ್ತವೆ.

ಡೊಂಬರ ಪರಂಪರೆ ಮತ್ತು ಅವರ ಆರ್ಥಿಕತೆ

ಈ ಹಿಂದೆ ನಾವು ಪರಿಶೀಲಿಸಿದ ಸಾಹಿತ್ಯ ಕೃತಿಗಳ ಉಲ್ಲೇಖಗಳಲ್ಲಿ ಅಲೆಮಾರಿ ಡೊಂಬರು ತಮ್ಮ ಪಾರಂಪರಿಕ ಆರ್ಥಿಕ ಮೂಲವಾದ ಡೊಂಬರಾಟವನ್ನೇ ನಂಬಿಕೊಂಡು ಬಂದಿರುವುದು ಕಂಡುಬರುತ್ತದೆ. ಕೆಲವು ರಾಜರು ಇವರ ವೃತ್ತಿಯನ್ನು ಪ್ರೋತ್ಸಾಹಿಸಿರುವುದು, ಕೆಲವು ದಾನಗಳನ್ನು ಇವರಿಗಾಗಿ ಕೊಡಮಾಡಲಾಗಿರುವುದು ಸಹ ಕಂಡುಬರುತ್ತದೆ. ಈ ಮೊದಲೇ ಹೇಳಿದಂತೆ ಡೊಂಬರಂತಹ ಸೇವಕ ವರ್ಗವು ಈ ಸಮಾಜದ ಊಳಿಗಮಾನ್ಯ ವ್ಯವಸ್ಥೆಯನ್ನು ಆರ್ಥಿಕವಾಗಿ ಅವಲಂಬಿಸಿಕೊಂಡೇ ಬಂದಿದೆ. ಸೇವಕ ಸಮುದಾಯಗಳಿಗೆ ಆರ್ಥಿಕ ಸ್ವಾವಲಂಬನೆ ಮತ್ತು ನಿಶ್ಚಿತ ಆದಾಯ ಮೂಲಗಳ ಮೇಲೆ ಇರಬೇಕಿದ್ದ ಅಧಿಕಾರವನ್ನು ನಾಶ ಮಾಡಿದ ಕಾರಣಕ್ಕಾಗಿ ಈ ಅವಲಂಬನೆಯು ಅನಿವಾರ್ಯವಾಗಿತ್ತು. ಜೊತೆಗೆ ಇಂಡಿಯಾದ ಪಾರಂಪರಿಕ ಕಾನೂನುಗಳೂ ಸಹ ಈ ಸೇವಕ ಸಮುದಾಯಗಳ ಅಧಿಕಾರ ರಹಿತ ಬದುಕನ್ನು ಸಮರ್ಥಿಸುತ್ತಲೇ ಬಂದವು. ಆದರೆ ಈ ಸೇವಕ ಸಮುದಾಯಗಳಲ್ಲಿನ ದೇವದಾಸಿಯರಿಗೆ, ಮನರಂಜಕ ಸಮುದಾಯಗಳಿಗೆ ಊಳಿಗಮಾನ್ಯ ವ್ಯವಸ್ಥೆಯು ಕೆಲವು ಆರ್ಥಿಕ ಮೂಲಗಳನ್ನು ದೇಣಿಗೆಯ ಇಲ್ಲವೆ ಇನಾಮುಗಳ ರೂಪದಲ್ಲಿ ನೀಡಿರುವುದು ಕಂಡು ಬರುತ್ತದೆ.

ವಿಜಯನಗರ ಕಾಲದಲ್ಲಿ ಪ್ರಜೆಗಳ ಮೇಲೆ ಮತ್ತು ಕೆಲವು ಸಂಸ್ಥೆಗಳ ಮೇಲೆ ಸೇವಕ ಸಮುದಾಯಗಳಿಗೆ ನೀಡಲೆಂದೇ ಕೆಲವು ತೆರಿಗೆಗಳನ್ನು ಹಾಕುತ್ತಿದ್ದರು. ಈ ತೆರಿಗೆಯನ್ನು ಸರಕಾರ ಮತ್ತು ಸ್ಥಳೀಯ ಆಡಳಿತವು ಒಟ್ಟಾಗಿ ಸಂಗ್ರಹಿಸುತ್ತಿತ್ತು. ಹೀಗೆ ಬಂದ ತೆರಿಗೆ ಹಣವನ್ನು ಕೆಲವು ಸೇವಕ ಸಮುದಾಯಗಳಿಗೆ ಕೊಡಲಾಗುತ್ತಿತ್ತು. 'ಹೀಗೆ ಸಂಗ್ರಹಿಸುತ್ತಿದ್ದ ತೆರಿಗೆಗಳಲ್ಲಿ 'ಡೊಂಬರಿಯ ಪಣ್ಣು' ಸಹ ಒಂದು. ಜನರಿಂದ ಸಂಗ್ರಹಿಸಲ್ಪಡುತ್ತಿದ್ದ ಈ ತೆರಿಗೆಯನ್ನು ಬೀದಿ ಪ್ರದರ್ಶನ ನೀಡುತ್ತಿದ್ದ, ಕಸರತ್ತುಗಳನ್ನು ಮಾಡಿ ಜನರನ್ನು ರಂಜಿಸುತ್ತಿದ್ದ ಡೊಂಬರಿಗೆ ಕೊಡಲಾಗುತ್ತಿತ್ತು. ಈ ಡೊಂಬರು ಊರೂರು ತಿರುಗಿ ತಮ್ಮ ಕಲೆಗಳನ್ನು ಪ್ರದರ್ಶಿಸಿ ಜನರನ್ನು ರಂಜಿಸುತ್ತಿದ್ದರು'[೬೮]. ಜೊತೆಗೆ 'ಆಯಗಾರರು ತಾವು ಸಮಾಜಕ್ಕೆ ಸಲ್ಲಿಸುವ ಸೇವೆಗಾಗಿ ಕಂದಾಯ ರಹಿತ ಭೂಮಿಯನ್ನು ಪಡೆಯುತ್ತಿದ್ದರು'[೬೯]. ವಿಜಯನಗರ ಸಾಮ್ರಾಜ್ಯದ ಕಾಲದ ಆಂಧ್ರ ಪ್ರದೇಶದ ಹಲವು ಭಾಗಗಳಲ್ಲಿ ಈ ಸೇವಕ ಸಮುದಾಯಗಳಿಗೆ ತೆರಿಗೆ ವಿನಾಯ್ತಿಯನ್ನು ಘೋಷಿಸಿದ್ದಲ್ಲದೆ, ಈ ಸಮುದಾಯಗಳಿಗೆ ಜೀವನೋಪಾಯಕ್ಕಾಗಿಯೇ ಜನರಿಂದ ಹಲವು ತೆರಿಗೆಗಳನ್ನು ಸಂಗ್ರಹಿಸಲಾಗುತ್ತಿತ್ತು. ಕೃಷ್ಣಕುಮಾರಿ ಇದನ್ನು ಹೀಗೆ ವಿವರಿಸುತ್ತಾರೆ. 'ಕೆಲವು ಸಮುದಾಯಗಳು ರಾಜ್ಯಕ್ಕೆ ಸಲ್ಲಿಸುವ ಸೇವೆಯನ್ನು ಗಮನದಲ್ಲಿಟ್ಟುಕೊಂಡು ಅವುಗಳನ್ನು ತೆರಿಗೆ ಮುಕ್ತಗೊಳಿಸಲಾಗಿತ್ತು. ಹಲವು ಶಾಸನಗಳ ಆಧಾರದ ಮೇಲೆ ಹೇಳುವುದಾದರೆ, ರಾಜ್ಯದ ಎಲ್ಲಾ ಕ್ಷೌರಿಕ ಸಮುದಾಯವನ್ನು ವಿಜಯನಗರದ ಅರಸರು ತೆರಿಗೆ ಮುಕ್ತಗೊಳಿಸಿದ್ದರು. ಇದರ ಜೊತೆಗೆ ತೆರಿಗೆ ಮುಕ್ತಗೊಂಡ ಕೆಲವು ಸಮುದಾಯಗಳೆಂದರೆ, ಡೊಂಬರು, ಬೆಸ್ತರು, ಅಗಸರು ಮತ್ತು ಗೊಲ್ಲರು. ಕೆಲವು ಹಳ್ಳಿಗಳಲ್ಲಿ 'ಡೊಂಬರಪಣ್ಣು' ಎಂಬ ಸಾರ್ವಮಾನ್ಯ ತೆರಿಗೆಯನ್ನು ಗ್ರಾಮಸ್ಥರು ಕಟ್ಟುತ್ತಿದ್ದರು. ಅಮರಗ್ರಾಮ, ಉಂಬಳಿಕೆ ಗ್ರಾಮ, ಭಂದರವಾಡ ಗ್ರಾಮ, ಅಗ್ರಹಾರ ಮತ್ತು ದೇವಸ್ಥಾನ ಗ್ರಾಮಗಳು ಈ ತೆರಿಗೆ ಮುಕ್ತ ಚೌಕಟ್ಟಿಗೆ ಬರುವಂತೆ ರಾಮರಾಯ

ಆಜ್ಞೆ ಮಾಡಿದ್ದನು'[೨೦].

ಥರ್ಸ್ಟನ್, 'ನೆಲ್ಲೂರು ತಹಶೀಲ್ದಾರರು ಡೊಂಬರಿಗೆ 'ಮಿರಾಸಿ' ಎಂಬ ಕರವನ್ನು ಕಾಣಿಕೆ ರೂಪದಲ್ಲಿ ಪಡೆಯಲು ಅನುವು ಮಾಡಿಕೊಟ್ಟಿದ್ದರು. ಮೈಸೂರು ಜಿಲ್ಲೆಯಲ್ಲೂ ಸಹ 'ಡೊಂಬರ ಲಿಂಗದ ವೀರಕಾಣಿಕೆ' ಎಂಬ ಕರವನ್ನು ಪಡೆದುಕೊಳ್ಳಲು ಅವಕಾಶ ನೀಡಲಾಗಿತ್ತು. ಆದರೆ ಇವರು ಸ್ಥಳೀಯ ಜಮೀನ್ದಾರರ ಮನೆ ಮಕ್ಕಳಂತಿದ್ದು, ಅವರ ನಿಯಮಗಳಿಗೆ ಬದ್ಧವಾಗಿರಬೇಕಿತ್ತು.'[೨೧]. ೧೮೯೧ರವರೆಗೂ ಆಂಧ್ರದ ಗಡಿಭಾಗದುದ್ದಕ್ಕೂ ಡೊಂಬರಾಟಕ್ಕೆ ಪ್ರತಿಯಾಗಿ ಡೊಂಬರು ಹಳ್ಳಿಗಳಿಂದ ಈ ಕರವನ್ನು ಪಡೆದು ಜೀವಿಸುತ್ತಿದ್ದರೆಂದು ಥರ್ಸ್ಟನ್ ಹೇಳುತ್ತಾನೆ. ಅಲ್ಲದೆ ಸೈನ್ಯದಲ್ಲಿ ಸೈನಿಕರಾಗಿಯೂ, ದೇವಾಲಯಗಳನ್ನು ಕಟ್ಟುವಾಗ ಶಿಲ್ಪಿಗಳಾಗಿಯೂ ಡೊಂಬರು ಕೆಲಸ ಮಾಡಿದ್ದಾರೆ. ಅಂದರೆ ಒಟ್ಟಾರೆಯಾಗಿ ಡೊಂಬರಂತಹ ಪ್ರದರ್ಶಕ ಕಲೆಗಳನ್ನು ಅವಲಂಬಿಸಿದ್ದ ಸಮುದಾಯಕ್ಕೆ ರಾಜನ, ಸ್ಥಳೀಯ ಪಾಳೇಗಾರರ ಮತ್ತು ಭೂಮಾಲಿಕರ ಪ್ರೋತ್ಸಾಹ ಮತ್ತು ಮನ್ನಣೆ ಇದ್ದ ಕಾರಣಕ್ಕೆ ಈ ಸಮುದಾಯ ತನ್ನ ವೃತ್ತಿಯನ್ನು ಪೋಷಿಸಿಕೊಂಡು ಬರಲು ಸಾಧ್ಯವಾಯಿತು. ಆದರೆ ಅದು ಸಾಮಾಜಿಕ ಅವಮಾನಗಳಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಅಲ್ಲದೆ ಈ ಸಮುದಾಯಕ್ಕೆ ಚರಿತ್ರೆಯಲ್ಲಿ ನಿಶ್ಚಿತ ಆದಾಯ ಮೂಲಗಳು ಸಿಗಲೇ ಇಲ್ಲ. ಅಂದಿನ ಸಮಾಜದ ಮುಖ್ಯ ಆರ್ಥಿಕ ಮೂಲವಾಗಿದ್ದ ಕೃಷಿ ಜಮೀನನ್ನು ಪಡೆಯಲು ಈ ಸಮುದಾಯ ಸತತವಾಗಿ ಪ್ರಯತ್ನಿಸಿದೆ ಎಂಬುದಕ್ಕೆ ಕರ್ನಾಟಕದದ್ಯಾಂತ ಈಗ ಪ್ರಚಲಿತವಿರುವ ರೆಕ್ಕೆ ಕಟ್ಟಿಕೊಂಡು, ಭೂಮಿ ಪಡೆಯಲೆಂದು ಹಕ್ಕಿಯಂತೆ ಹಾರಲೆತ್ನಿಸಿ ಸತ್ತು ಹೋದ ಡೊಂಬರವನ ಕಥೆ ಎಲ್ಲರಿಗೂ ಚಿರಪರಿಚಿತವಾದದ್ದು. ಈ ಕಥೆ ಅಲೆಮಾರಿಯೊಬ್ಬ ನಿಶ್ಚಿತ ಆದಾಯ ಮೂಲವನ್ನು ಕಂಡುಕೊಳ್ಳಲು ನಡೆಸಿದ ಸಾಹಸವನ್ನು ಚಿತ್ರಿಸುತ್ತದೆ. ಈ ಡೊಂಬರವನು ಬಹುತೇಕ ಎಲ್ಲ ಅಲೆಮಾರಿಗಳ ಪ್ರತಿನಿಧಿಯಂತೆ ಕಂಡುಬರುತ್ತಾನೆ.

ಈವತ್ತೂ ಕರ್ನಾಟಕದ ಅನೇಕ ಕಡೆ 'ಡೊಂಬರಿಗಾಗಿ ದಾನ ಕೊಟ್ಟ ಜಮೀನು ಇದು' ಎಂದು ಹೇಳುವ ಕೃಷಿ ಜಮೀನುಗಳಿವೆ. ಚೆನ್ನಪಟ್ಟಣ ತಾಲೂಕಿನ ಭೈರಾಪಟ್ಟಣ ಎಂಬ ಗ್ರಾಮದಲ್ಲಿ ಹೀಗೆ ರೆಕ್ಕೆ ಕಟ್ಟಿಕೊಂಡು ಆಕಾಶಕ್ಕೆ ಜಿಗಿದ ಡೊಂಬರವನ ಕುರಿತ ಕಥೆ ಮತ್ತು ಸ್ಮಾರಕವೂ ಅಲ್ಲದೆ, ಅವನಿಗಾಗಿ ಬಿಟ್ಟ ಜಮೀನು ಇನ್ನೂ ಇದೆ. ಇಲ್ಲಿನ 'ಗ್ರಾಮಸ್ಥರು ಸುಮಾರು ನೂರಾ ಹತ್ತು ಎಕರೆಯಷ್ಟು ವಿಸ್ತಾರವಾದ 'ದೊಂಬನ ಕೊಡುಗೆ'ಯ ಪ್ರದೇಶವನ್ನು ತಲೆತಲಾಂತರಗಳಿಂದ ಉಳುಮೆ ಮಾಡದೆ ಬಿಟ್ಟು ಬಿಟ್ಟಿದ್ದರು. ೧೯೬೦ನೇ ಇಸ್ವಿಯಲ್ಲಿ ತೋಟಗಾರಿಕೆ ಇಲಾಖೆಯವರು ೪೦ ಎಕರೆ ಭೂಮಿಯನ್ನು ತಮ್ಮ ವಶಕ್ಕೆ ತೆಗೆದುಕೊಂಡರು.'[೨೨]. ಬಹುತೇಕ ಇಂದು ಅಲೆಮಾರಿಗಳಾಗಿರುವ, ರಾಜಶಾಹಿಯ ಕಾಲಘಟ್ಟದಲ್ಲಿ ಪ್ರದರ್ಶಕ ಮತ್ತು ಕರಕುಶಲ ಕಲೆಗಳನ್ನು ನಂಬಿದ್ದ ಸಮುದಾಯಗಳು, ರಾಜನ ದತ್ತಿಗಳನ್ನು ಅವಲಂಬಿಸಿಯೇ ತಮ್ಮ ವೃತ್ತಿಗಳಲ್ಲಿ ಮುಂದುವರಿದುಕೊಂಡು ಬಂದಿರುವುದು ಕಂಡುಬರುತ್ತದೆ. 'ಡೊಂಬರು ಜೈಪುರದ ಮಹಾರಾಜರ ಆಸ್ಥಾನದಲ್ಲಿ ಪಾರಂಪರಿಕವಾಗಿ ಸಂಗೀತಗಾರರಾಗಿ ಸೇವೆ ಸಲ್ಲಿಸುತ್ತಿದ್ದರು. ಕೆಲವರು ಮನೆಯಿಂದ ಮನೆಗೆ ಸುತ್ತಿ, ಕೊಳಲು ನುಡಿಸಿ ಭಿಕ್ಷೆ ಬೇಡುತ್ತಿದ್ದರು'[೨೩] ಎಂದು ಥರ್ಸಟನ್ ಉಲ್ಲೇಖಿಸುತ್ತಾನೆ. ಬಳ್ಳಾರಿ

ಜಿಲ್ಲೆಯಲ್ಲಿನ ಡೊಂಬರೂ ಸಹ ಸಂಡೂರು ಸಮೀಪ ವಿಜಯನಗರದ ಅರಸರು ತಮಗೆ ತೆರಿಗೆ ಸಂಗ್ರಹಿಸಿಕೊಂಡು ಜೀವಿಸಲು ದತ್ತಿ ಕೊಟ್ಟಿದ್ದ ಗ್ರಾಮವೊಂದರ ಕುರಿತು ಹೇಳುತ್ತಾರೆ. ಅಲ್ಲದೆ ಕೃಷ್ಣದೇವರಾಯನಿಗೆ ಪ್ರಿಯವಾಗಿದ್ದ ಈ ಸಮುದಾಯಕ್ಕೆ ಆತ ಸಂಡೂರಿನ ಬಳಿ ದತ್ತಿ ಜಮೀನನ್ನು ಕೊಟ್ಟ ಕುರಿತು ಮತ್ತು ಅದು ಆನಂತರ ಬಂದ ಪಾಳೇಗಾರರ ಮತ್ತು ಭೂಮಾಲಿಕರ ವಶವಾಗಿ ಹೋದದ್ದರ ಕುರಿತು ಹೇಳುತ್ತಾರೆ. 'ವಿಜಯನಗರ ಸಾಮ್ರಾಜ್ಯದ ಆಸ್ಥಾನದಲ್ಲಿ ಡೊಂಬರು ಆಸ್ಥಾನದ ಡೊಂಬರಾಟದವರಾಗಿದ್ದರಲ್ಲದೆ, ರಾಜನಿಂದ ವಿಶೇಷವಾದ ಇನಾಮುಗಳನ್ನು ಪಡೆಯುತ್ತಿದ್ದರಂತೆ. ಈಗಲೂ ಜಮ್ಮಲ ಮಡುಗು, ತಾಡಪತ್ರಿ, ಪದ್ದಟ್ಟೂರು ಮತ್ತು ಗುಡಮಚೇರ್ಲ ಗ್ರಾಮಗಳನ್ನು ಡೊಂಬರು ಇನಾಮಾಗಿಯೇ ಪಡೆದಿದ್ದೇವೆ ಎಂದು ಹೇಳುತ್ತಾರೆ. ವಿಜಯನಗರ ಪತನಾನಂತರ ಡೊಂಬರು ಮೈಸೂರು ಪ್ರಾಂತ್ಯದ ಎಲ್ಲೆಡೆ ಚದುರಿ ಹೋದರು.'[೨೪] ಒಟ್ಟಿನಲ್ಲಿ ಈ ಅಲೆಮಾರಿಗಳು ನಿಶ್ಚಿತ ಆದಾಯ ಮೂಲವಿಲ್ಲದ ತಮ್ಮ ವೃತ್ತಿಯಿಂದಾಗಿ ಸ್ಥಳೀಯ 'ಉತ್ಪಾದಕ' ವರ್ಗಗಳನ್ನು ಆಶ್ರಯಿಸಿಯೇ ಬದುಕಬೇಕಿತ್ತು.

ಅಲೆಮಾರಿ ಸಮುದಾಯಗಳನ್ನು ಮತ್ತು ಅವುಗಳ ಆರ್ಥಿಕ ಮೂಲಗಳನ್ನು ಗಮನಿಸಿ. ಕೆಲವು ಅಲೆಮಾರಿಗಳ ಕಸುಬುಗಳನ್ನು ಕೈಗಾರಿಕೀಕರಣ ತನ್ನೆಲ್ಲ ಚಮತ್ಕಾರಿಕ ತಂತ್ರಜ್ಞಾನದ ಮೂಲಕ ಬಂಡವಾಳಶಾಹಿಗಳ ಕೈಗೆ ಒಪ್ಪಿಸಿಯಾಗಿದೆ. ಏಕೆಂದರೆ ಇಂಡಿಯಾದ ಅಸಮಾನ ಸಮಾಜದಲ್ಲಿ ಯಾವ ಬಗೆಯ ಆರ್ಥಿಕ ಅಧಿಕಾರಗಳನ್ನು ಹೊಂದದ ಇಲ್ಲಿನ ಸೇವಕ ಸಮುದಾಯಗಳಿಗೆ ತಮ್ಮ ಪಾರಂಪರಿಕ ಕೌಶಲಗಳನ್ನು ಉದ್ಯಮವಾಗಿಸುವ ಅವಕಾಶಗಳೇ ಇರಲಿಲ್ಲ. ಆಧುನಿಕ ಉದ್ಯಮಗಳು ಸ್ಥಳೀಯ ಕೌಶಲಗಳನ್ನು ಮಾತ್ರ ಅಳವಡಿಸಿಕೊಂಡು, ಆ ಕೌಶಲಗಳನ್ನು ರೂಪಿಸಿಕೊಂಡು ಬಂದಿದ್ದ ಸಮುದಾಯಗಳನ್ನು ಕೈಬಿಟ್ಟವು. ಇನ್ನು ಪ್ರದರ್ಶಕ ಕಲೆಗಳನ್ನು ನಂಬಿಕೊಂಡು ಬಂದಿದ್ದ ಸಮುದಾಯಗಳ ಕಥೆ ಇನ್ನೂ ಚಿಂತಾಜನಕವಾದದ್ದು. ಆಧುನಿಕ ಮಾಧ್ಯಮಗಳು ತಮ್ಮೆಲ್ಲ ಥಳುಕಗಳಿಂದ ಈ ಪಾರಂಪರಿಕ ಪ್ರದರ್ಶನಕಾರರನ್ನು ಮೂಲೆಗೆ ತಳ್ಳಿದವು. ಪಾರಂಪರಿಕ ಪ್ರದರ್ಶನ ಕಲೆಗಳಿಗೆ, ಆಧುನಿಕ ಮಾಧ್ಯಮಗಳು ಹಂಚುವ ರೋಮಾಂಚನಗಳನ್ನು ನೀಡಲು ಸಾಧ್ಯವಾಗಲೇ ಇಲ್ಲ. ಇನ್ನು ಇಲ್ಲಿನ ಊಳಿಗಮಾನ್ಯ ವ್ಯವಸ್ಥೆಯ ಭಾಗವಾಗಿ ತಮ್ಮ ವೃತ್ತಿಗಳಲ್ಲಿ ತೊಡಗಿದ್ದ ಹೆಳವರನ್ನು, ದಕ್ಕಲರನ್ನು ಸಾಕುವಷ್ಟು ಶಕ್ತಿಯನ್ನು ಊಳಿಗಮಾನ್ಯ ಪ್ರಭುಗಳು ಹಂತಹಂತವಾಗಿ ಕಳೆದುಕೊಳ್ಳುತ್ತಾ ಬಂದರು. ಇನ್ನೂ ಮುಖ್ಯವಾದ ಸಂಗತಿಯೆಂದರೆ, ಉಚಲ್ಯಾದಂತಹ ಸಮುದಾಯಗಳು ತಮಗೆ ಶಾಪದಂತೆ ಅಂಟಿಕೊಂಡು ಬಂದಿದ್ದ ತಮ್ಮ ಕಸಬುಗಳನ್ನು ತಾವೇ ಬಿಟ್ಟುಕೊಡಲು ಸಿದ್ಧವಾದವು. ಮಲ ಹೊರುವ, ಆ ಕಾರಣಕ್ಕಾಗಿಯೇ ಅಸ್ಪೃಶ್ಯರಾಗಿಯೇ ಉಳಿವ ಸಮುದಾಯಗಳು ಹೇಗೆ ತಾನೇ ತಮ್ಮ ಮೂಲವೃತ್ತಿಗಳಲ್ಲಿ ಉಳಿಯಲು ಸಾಧ್ಯ? ಒಟ್ಟಿನಲ್ಲಿ ಇಲ್ಲಿನ ಸಮುದಾಯಗಳು ಬದಲಾದ ಸಂದರ್ಭಗಳಲ್ಲೆಲ್ಲ ತಮ್ಮ ತಮ್ಮ ಪಾರಂಪರಿಕ ಆರ್ಥಿಕ ಮೂಲಗಳನ್ನು ಉಳಿಸಿಕೊಳ್ಳುವ ಇಲ್ಲವೆ ಬಿಟ್ಟು ಕೊಡುವ ಸಂದಿಗ್ಧಗಳಿಗೆ ಮುಖಾಮುಖಿಯಾಗುತ್ತಲೇ ಬಂದಿವೆ. ಹೀಗಾಗಿ ಅಲೆಮಾರಿಗಳು ಚರಿತ್ರೆಯ ಉದ್ದಕ್ಕೂ ಅತ್ಯಂತ ಅನಿಶ್ಚಿತ ಆರ್ಥಿಕ ಮೂಲಗಳನ್ನೇ ನಂಬಿಕೊಂಡು ಬಂದಿರುವುದು ಕಂಡು ಬರುತ್ತದೆ.

ಈವತ್ತು ಅಲೆಮಾರಿಗಳೆಂದು ಕರೆಸಿಕೊಳ್ಳುವ ಬಹುತೇಕ ಎಲ್ಲ ಸಮುದಾಯಗಳಿಗೆ ಅವುಗಳ ಚರಿತ್ರೆಯಲ್ಲಿ ನಿಶ್ಚಿತ ಆದಾಯವನ್ನು ತಂದುಕೊಡುವ ಸ್ಥಿರಾಸ್ತಿಗಳಿರಲಿಲ್ಲ. ಆರ್ಥಿಕವಾಗಿ ಅಲೆಮಾರಿಗಳು 'ಉತ್ಪಾದಕ' ಸಮುದಾಯಗಳನ್ನು ಅವಲಂಬಿಸಲೇಬೇಕಿತ್ತು. ಭಾರತದ ಸಮುದಾಯಗಳ ಮೂಲ ಕಸುಬಾದ ಕೃಷಿಯನ್ನು ಇವರು ಕೈಗೊಳ್ಳುವ ಯಾವ ಪಾರಂಪರಿಕ ಸಿದ್ಧತೆಗಳೂ ಇಲ್ಲದ ಕಾರಣಕ್ಕಾಗಿ ಅವರು ಕೃಷಿಕರಾಗುವ ಸಾಧ್ಯತೆಗಳಿರಲಿಲ್ಲ. ದತ್ತಿಯ ಮೂಲಕ ಬಂದ ಜಮೀನನ್ನು ಅವರು ಉಳುಮೆ ಮಾಡಲಿಲ್ಲ. ಡೊಂಬರ ಸಮುದಾಯದಿಂದ ಪ್ರತ್ಯೇಕಗೊಂಡು, ಇನ್ನೂ ಅಲೆಮಾರಿಗಳಾಗಿರುವ ಮತ್ತು ಬೀದಿ ಬದಿಯ ಕಸರತ್ತುಗಳನ್ನೇ ಅವಲಂಬಿಸಿರುವ ಜಾತಿಗಾರರು ಈವತ್ತು ಇದೇ ಸಮಸ್ಯೆಯಿಂದ ಚಡಪಡಿಸುತ್ತಿದ್ದಾರೆ. ಯಾವುದೋ ಹಂತದಲ್ಲಿ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡ ಡೊಂಬರೇ ಜಾತಿಗಾರರಾಗಿ ರೂಪುಗೊಂಡಿದ್ದಾರೆ. ಅವರು ಸಾಹಸಗಳನ್ನು, ಕಸರತ್ತುಗಳನ್ನು ತಮ್ಮ ವೃತ್ತಿಯನ್ನಾಗಿಸಿಕೊಂಡವರು. ಇವರಿಗೆ ದಾನವಾಗಿ ಕೃಷಿ ಜಮೀನು ಸಿಕ್ಕರೂ ಇವರು ಕೃಷಿಕರಾಗಲಿಲ್ಲ. ಮಧ್ಯಕಾಲದ ಆರ್ಥಿಕ ವ್ಯವಸ್ಥೆಯೇ ಅವರನ್ನು ತಮ್ಮ ಮೂಲ ವೃತ್ತಿಯಲ್ಲೇ ಮುಂದುವರಿಯುವಂತೆ ಪ್ರೇರೇಪಿಸಿದಂತಿದೆ. ಭೂಮಿ ಸಿಕ್ಕರೂ ಅವರು ಕೃಷಿಕರಾಗಿಲ್ಲ. 'ಮುಧೋಳ್ ತಾಲೂಕಿನ ಮಂಟೂರು, ಜಮಖಂಡಿ ತಾಲೂಕಿನ ಸಾವಳಗಿ, ಗೋಠೆ, ಗದ್ಯಾಳ ಮುಂತಾದ ಹಲವು ಕಡೆ ತಮ್ಮ ಜಾತಿಯಲ್ಲಿಯ ಶ್ರೇಷ್ಠರಾದ ಹಿರಿಯರಿಗೆ ಇನಾಮಾಗಿ ದೊರೆತ ಭೂಮಿಗಳಿರುವುದಾಗಿ ಈ ಜಾತಿಗಾರರಲ್ಲಿಯ ವಯೋವೃದ್ಧರು ಅತ್ಯಂತ ಅಭಿಮಾನದಿಂದ ಹೇಳುತ್ತಾರೆ. ಹೀಗೆ ಇನಾಮು ದೊರೆತ ಜಮೀನುಗಳು ಹೆಚ್ಚಾಗಿ ವಿಜಾಪುರ ಜಿಲ್ಲೆಯಲ್ಲಿಯೇ ಇರುವುದು ಗಮನಾರ್ಹ ಸಂಗತಿಯಾಗಿದೆ. ಆದರೆ ಇಂಥ ಬಹುಪಾಲು ಜಮೀನುಗಳು ಇಂದು ಅವರ ಕೈಯಲ್ಲಿ ಉಳಿದಿಲ್ಲ. ಕೆಲವನ್ನು ಇವರು ಎಂದೋ ಮಾರಿಕೊಂಡಿದ್ದಾರೆ. ಇನ್ನು ಕೆಲವು ಜಮೀನುಗಳು ರೈತರಿಗೆ ದಕ್ಕಿಹೋಗಿವೆ. ಏಕೆಂದರೆ ಜಮೀನುಗಳನ್ನು ಇನಾಮಾಗಿ ಪಡೆದ ಮೇಲೆಯೂ ಇವರಾರೂ ಸಾಮಾನ್ಯವಾಗಿ ಒಕ್ಕಲುತನ ವೃತ್ತಿಗಿಳಿದಿಲ್ಲ. ಮತ್ತು ಆ ಊರುಗಳಲ್ಲಿ ಇವರು ಶಾಶ್ವತವಾಗಿ ನೆಲೆಸಿಯೂ ಇಲ್ಲ. ತಮ್ಮ ಕಸರತ್ತು ಮತ್ತು ಸೋಗುಗಳನ್ನು ಪ್ರದರ್ಶಿಸುತ್ತ ಊರಿಂದೂರಿಗೆ ಅಲೆದಾಡುವ ವೃತ್ತಿಯನ್ನೇ ಜಾತಿಗಾರರು ಒಗ್ಗಿಸಿ ಕೊಂಡಿದ್ದಾರೆ.'[೬೮] ಹೀಗಾಗಿ ಇಂತಹ ಅಲೆಮಾರಿಗಳಿಗೆ ಭೂಮಿ ದಕ್ಕಿದರೂ ಅವರಿಗೆ ಅದು ಆರ್ಥಿಕ ಮೂಲವಾಗಲಿಲ್ಲ. ಅಲ್ಲದೆ 'ಕೃಷಿ ಪೂರಕ ಚಟುವಟಿಕೆಗಳನ್ನು ಅವಲಂಬಿಸಿದ್ದ ಕರಕುಶಲಕರ್ಮಿಗಳಿಗೆ ಮತ್ತು ಮನರಂಜಕ ಸಮುದಾಯಗಳಿಗೆ ಕೊಡುತ್ತಿದ್ದ ಕೃಷಿ ಭೂಮಿಯು ಸ್ಥಳೀಯ ಭೂಮಾಲಿಕನ ವಿವೇಚನೆಗೆ ಒಳಪಡುತ್ತಿತ್ತು. ಮತ್ತು ಅದು ಭೂಮಾಲಿಕ ವ್ಯವಸ್ಥೆಯ ಎಲ್ಲ ಕಾನೂನುಗಳಿಗೂ ಬದ್ಧವಾಗಿರುತ್ತಿತ್ತು. ಅಲ್ಲದೆ ನಿಯಮಕ್ಕೊಳಪಟ್ಟ ಗ್ರಾಮದ ಒಟ್ಟು ಉತ್ಪಾದನಾ ಚಟುವಟಿಕೆಗಳ ಭಾಗವಾಗಿ ಈ ದಾನದ ಪ್ರಕ್ರಿಯೆ ಜಾರಿಯಲ್ಲಿರುತ್ತಿತ್ತು. ಭೂಮಾಲಿಕ ಇಚ್ಛೆಪಡದ ಸಂದರ್ಭದಲ್ಲಿ ಈ ದಾನದ ಜಮೀನು ಬೇರೆಯವರಿಗೆ ಸಂದಾಯವಾಗುತ್ತಿತ್ತು, ಇಲ್ಲವೆ ರದ್ದಾಗುತ್ತಿತ್ತು.'[೬೯] ಮಧ್ಯಕಾಲದ ಭೂಮಾಲಿಕ ವ್ಯವಸ್ಥೆಯು, ಭೂಮಿಯನ್ನು ಮತ್ತು ಕೃಷಿಕ ಸಮುದಾಯಗಳ ಒಟ್ಟು ವ್ಯವಸಾಯಿ ಚಟುವಟಿಕೆಗಳನ್ನು, ಅಂದಿನ ಮೊಘಲ್ ಆಡಳಿತ ರೂಪಿಸಿದ್ದ

ಭೂನಿಯಮಗಳನ್ನು ವಿಕೃತಗೊಳಿಸಿಕೊಂಡು ನಿಯಂತ್ರಿಸುತ್ತಿತ್ತು. ಹೀಗೆ ಈ ಬಗೆಯ ಸಮುದಾಯಗಳಿಗೆ ನೀಡುತ್ತಿದ್ದ ದಾನದ ಜಮೀನು ಸಹ ಅನೇಕ ರೀತಿಯ ನಿಯಮಗಳಿಗೆ ಬದ್ಧವಾಗಿರಬೇಕಿತ್ತು.

ಭಾರತದ ಸಂದರ್ಭದಲ್ಲಿ 'ಎರಡು ಬಗೆಯಲ್ಲಿ ಭೂಮಿಯನ್ನು ದಾನ ಮಾಡಲಾಗುತ್ತಿತ್ತು. ಒಂದನೆಯದು ಒಂದು ಗ್ರಾಮದ ಒಟ್ಟು ಕೃಷಿ ಉತ್ಪಾದನೆಯಲ್ಲಿ ಸಹಾಯಕರಾಗಿರುತ್ತಿದ್ದ ಭೂರಹಿತ ಸಮುದಾಯಗಳಿಗೆ ಕೃಷಿ ಭೂಮಿಯನ್ನು ದಾನ ಮಾಡಲಾಗುತ್ತಿತ್ತು. ಎರಡನೆಯದು, ದತ್ತಿದಾನವಾಗಿತ್ತು. ಈ ದತ್ತಿ ಭೂಮಿಯನ್ನು ಪುರೋಹಿತರಿಗೆ, ಮಠಗಳಿಗೆ ಕೊಡಲಾಗುತ್ತಿತ್ತು. ಇಂತಹದನ್ನು ಇನಾಮು ಭೂಮಿ ಎಂದು ಕರೆಯಲಾಗುತ್ತದೆ. ಆದರೆ ಈ ಎರಡು ಭೂದಾನಗಳಲ್ಲಿ ಅನೇಕ ವ್ಯತ್ಯಾಸಗಳಿವೆ. ಮೊದಲನೆಯ ಭೂದಾನದಲ್ಲಿ, ಕೃಷಿಪೂರಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಿದ್ದ ಸಮುದಾಯಗಳಿಗೆ ಮತ್ತು ವೈದ್ಯರಿಗೆ, ಪ್ರದರ್ಶಕ ಕಲೆಗಳನ್ನು ಅವಲಂಬಿಸಿದವರಿಗೆ, ಉದಾ. ಡೊಂಬರಂತಹ ಸಮುದಾಯಗಳಿಗೆ ಕೊಡುವ ದಾನವು ಪಾರಂಪರಿಕವಾಗಿ 'ಶ್ರಮವನ್ನು ತೆಗೆದುಕೊಳ್ಳುವ ಮತ್ತು ಕೊಡುವ' ಪ್ರಕ್ರಿಯೆಯನ್ನು ಅವಲಂಬಿಸಿರುತ್ತದೆ. ಅಂದರೆ ಇಡೀ ಗ್ರಾಮದ ಉತ್ಪಾದನೆಯಲ್ಲಿ ಪೂರಕ ಕೆಲಸಗಳನ್ನು ನಿರ್ವಹಿಸುವ ಸಮುದಾಯಗಳಿಗೆ ಕೊಡಲೇಬೇಕಾದ ದಾನವಾಗಿರುತ್ತದೆ. ಆದರೆ ಹಳ್ಳಿಯ ಮುಖ್ಯಸ್ಥ ಅಥವಾ ಅಧಿಕಾರಿ ವರ್ಗ ಈ ಜಮೀನುಗಳನ್ನು ಕೆಲವು ಶರತ್ತುಗಳ ಮೇಲೇಯೇ ದಾನ ಮಾಡಿರುತ್ತದೆ. ಶರತ್ತುಗಳು ಉಲ್ಲಂಘನೆಯಾದಾಗ ಸಹಜವಾಗಿಯೇ ಅಧಿಕಾರಿ ವರ್ಗ ತನ್ನ ನಿಯಮದ ಪ್ರಕಾರ ದಾನ ಮಾಡಿದ ಜಮೀನನ್ನು ಮರುವಶಪಡಿಸಿ ಕೊಳ್ಳುವ ಅಧಿಕಾರವನ್ನೂ ಪಡೆದುಕೊಂಡಿತ್ತು.'[೭೭] ಹೀಗೆ ದಾನವಾಗಿ ಬಂದ ಕೃಷಿ ಭೂಮಿಯಿಂದ ಸಹ ಈ ಸಮುದಾಯಗಳಿಗೆ ನಿಶ್ಚಿತ ಆದಾಯ ಬರುವ ಭರವಸೆಯೇನೂ ಇರಲಿಲ್ಲ. ಈ ಜಮೀನುಗಳು ಮೇಲು ನೋಟಕ್ಕೆ ತೆರಿಗೆ ಮುಕ್ತ ಅಥವಾ ಕಂದಾಯ ರಹಿತ ಜಮೀನುಗಳಾಗಿದ್ದರೂ, ಅದರ ಎಲ್ಲ ಅನುಕೂಲಗಳನ್ನೂ ಅನುಭವಿಸುತ್ತಿದ್ದವರು ಮಾತ್ರ ಸ್ಥಳೀಯ ಭೂಮಾಲಿಕ ವರ್ಗವೇ ಆಗಿರುತ್ತಿತ್ತು. 'ಹೀಗೆ ತೆರಿಗೆ ಮುಕ್ತವಾಗಿ ಸಿಕ್ಕ ಕೃಷಿ ಭೂಮಿಯನ್ನು ಈ ಕುಶಲಕರ್ಮಿ ಮತ್ತು ಮನರಂಜಕ ವರ್ಗಗಳು ಉಳುಮೆ ಮಾಡುತ್ತಿರಲಿಲ್ಲ. ಬದಲಿಗೆ ಇಡೀ ಹಳ್ಳಿ ಆ ಜಮೀನುಗಳ ಉಸ್ತುವಾರಿ ನೋಡಿಕೊಳ್ಳುತ್ತಿತ್ತು. ಮತ್ತು ಸುಗ್ಗಿಯ ಸಂದರ್ಭದಲ್ಲಿ ಕುಶಲಕರ್ಮಿಗಳಿಗೆ ಇಂತಿಷ್ಟು ಎಂದು ಪಾಲನ್ನು ನೀಡಲಾಗುತ್ತಿತ್ತು. ಆದರೆ ಪಾಲು ಅಥವಾ ಆಯ ಪಡೆಯುತ್ತಿದ್ದ ಈ ಅವಲಂಬಿತ ಸಮುದಾಯಗಳಲ್ಲೂ ಸಮಾನತೆ ಇರಲಿಲ್ಲ. ಇವರು ತಮ್ಮ ಗ್ರಾಮದ ಕೃಷಿಕರ ಕೃಪಾಕಟಾಕ್ಷಕ್ಕೆ ಒಳಗಾಗಿಯೇ ಬದುಕಬೇಕಿತ್ತು. ಅಲ್ಲದೆ ಗ್ರಾಮದ ಮುಖ್ಯಸ್ಥ ಮೇಲ್ಜಾತಿಯವನೇ ಆಗಿದ್ದರಿಂದಾಗಿ ಈ ಕೆಳಜಾತಿಯ ಜನ, ಭೂಮಾಲಿಕನಿಂದ ಸತತ ಶೋಷಣೆಗೆ ಒಳಗಾಗಲೇ ಬೇಕಿತ್ತು.'[೭೮] ಮೇಲಿನ ಉಲ್ಲೇಖಗಳನ್ನು ಗಮನಿಸಿದಾಗ ಈ ಸಮುದಾಯಗಳು ಆರ್ಥಿಕವಾಗಿ ಪರಾವಲಂಬಿಗಳಾಗಿಯೇ ಇರಬೇಕಿತ್ತು. ಭೂಮಿ ಸಿಕ್ಕರೂ ಅವರು ಅದರ ಒಡೆಯರಾಗುವ ಅವಕಾಶವಿರಲಿಲ್ಲ. 'ಕರ್ನಾಟಕದ ಯಾವ ಶಾಸನದಲ್ಲಾಗಲಿ, ಸಾಹಿತ್ಯ ಕೃತಿಯಲ್ಲಾಗಲಿ ಹೊಲೆಯರು ಭೂಮಿಗೆ ಒಡೆಯರಾಗಿದ್ದರೆಂಬುದಕ್ಕೆ ಯಾವುದೇ ಸೂಚನೆ ಇಲ್ಲ. ವೃತ್ತಿಯಾಗಿ ವ್ಯವಸಾಯ ಅವರಿಗೆ ನಿಷಿದ್ಧ.[೭೯] ಈ ಬಗೆಯ ನಿಷೇಧಕ್ಕೂ ಹಿಂದೂ ಧರ್ಮಶಾಸ್ತ್ರಗ್ರಂಥಗಳು ಹೇಳುವ ಇಂಡಿಯಾದ ಸಾಮಾಜಿಕ ಕಾನೂನುಗಳಿಗೆ ನೇರ ಸಂಬಂಧವಿದೆ.

ಕುಶಲಕರ್ಮಿ ಮತ್ತು ಪ್ರದರ್ಶಕ ಕಲೆಗಳನ್ನು ನಂಬಿದ್ದ ಸಮುದಾಯಗಳು ಯಾವತ್ತೂ ಜಾತಿ ಶ್ರೇಣೀಕರಣದ ಅಂಚಿನ ಸಮುದಾಯಗಳಾಗಿಯೇ ಇದ್ದವು. ಹಿಂದಿನ ಪುಟಗಳಲ್ಲಿ ಡೊಂಬರಂತಹ ಮನರಂಜಕ ಸಮುದಾಯವೂ ಸಹ ಸಮಾಜದ ನಿಕೃಷ್ಟ ಕೆಲಸಗಳನ್ನು ನಿರ್ವಹಿಸುವ ಅನಿವಾರ್ಯತೆಯಿಂದ ಅಸ್ಪೃಶ್ಯ ಸಮುದಾಯವಾಗಿಯೂ ಬದುಕಿ ಬಂದಿರುವದನ್ನು ನೋಡಿದ್ದೇವೆ. ಇಂತಹ ಸಮುದಾಯಗಳಿಗೆ ' ಗ್ರಾಮದ ಹೊರಗೆ ಮನೆಗಳನ್ನು ಕಟ್ಟಿಕೊಳ್ಳಲು ಅವಕಾಶ ಮಾಡಿಕೊಡಲಾಗುತ್ತಿತ್ತು. ಮತ್ತು ಇವರಿಗೆ ಕೊಡುವ ದಾನದ ಕೃಷಿ ಜಮೀನು ಸಹ ಉತ್ಕೃಷ್ಟವಾಗೇನು ಇರುತ್ತಿರಲಿಲ್ಲ. ಜೊತೆಗೆ ಈ ಜಮೀನಿನ ಮೇಲೆ ಅವರಿಗೆ ಒಡೆತನವೂ ಇರದ ಕಾರಣ, ಕೃಷಿಕರೇ ಆ ಜಮೀನನ್ನು ಉತ್ತು ಸುಗ್ಗಿಯ ಸಂದರ್ಭದಲ್ಲಿ ಇಂತಿಷ್ಟು ಎಂದು ಪಾಲು ಕೊಡುತ್ತಿದ್ದರು.'[೮೦] ಈ ಕಾರಣದಿಂದಾಗಿ ಕುಶಲಕರ್ಮಿ ಮತ್ತು ಪ್ರದರ್ಶಕ ಕಲೆಗಳನ್ನು ಅವಲಂಬಿಸಿದ್ದ ಸಮುದಾಯಗಳ ಆರ್ಥಿಕ ಸ್ಥಿತಿಗತಿಗಳನ್ನು ಇಂಡಿಯಾದ ಪಾರಂಪರಿಕ ಸಮಾಜದ ನಿಯಮಗಳ ಆಚೆಗಿಟ್ಟು ನೋಡಲಾಗುವುದಿಲ್ಲ. 'ಈ ಸಮುದಾಯಗಳು ಹಳ್ಳಿಗಳಿಗೆ ಸಲ್ಲಿಸುತ್ತಿದ್ದ ಸೇವೆಯನ್ನು ಭೂಮಾಲಿಕ ವರ್ಗವು ಗುತ್ತಿಗೆ ಆಳಿನ ಸೇವೆಯನ್ನು ಪಡೆದಂತೆಯೇ ಪಡೆಯುತ್ತಿತ್ತು.'[೮೧] ಸೇವೆಯನ್ನು ಪಡೆದುಕೊಳ್ಳುವುದಕ್ಕೆ ಪ್ರತಿಯಾಗಿ ನಿಯಮಬದ್ಧ ದಾನಗಳನ್ನು ಮಾತ್ರ ಪಡೆಯಲು ಈ ಸಮುದಾಯಗಳಿಗೆ ಸಾಧ್ಯವಿತ್ತು. ಶ್ರೇಣೀಕರಣದ ಕೊನೆಯಲ್ಲಿರುವ ಜನ ಮೇಲ್ಜಾತಿಗಳ ಸೇವೆಯನ್ನು ಮಾಡಲೆಂದೇ ಹುಟ್ಟಿದ್ದಾರೆ ಎಂದು ಹೇಳುವ ಹಿಂದೂ ಕರ್ಮಸಿದ್ಧಾಂತಕ್ಕೆ ಮೇಲಿನ ನಿಯಮ ಪೂರಕವಾಗಿಯೇ ಇದೆ. ಮಧ್ಯಕಾಲೀನ ಭೂಮಾಲಿಕ ವ್ಯವಸ್ಥೆ ತನ್ನನ್ನು ಸಮರ್ಥಿಸಿಕೊಳ್ಳಲು ಪರಂಪರೆಯಲ್ಲಿನ ಪುರಾವೆಗಳನ್ನೇ ಬಳಸಿಕೊಂಡಿತ್ತು. ಆದ್ದರಿಂದ 'ಜಾತಿ ವ್ಯವಸ್ಥೆಯನ್ನು ಬದಿಗಿಟ್ಟು ಭೂಮಾಲಿಕ ವ್ಯವಸ್ಥೆಯನ್ನು ನೋಡಲು ಸಾಧ್ಯವಿಲ್ಲ. ಭೂಮಾಲಿಕತ್ವವು ಭಾರತದ ಶ್ರೇಣೀಕರಣದ ಅವಿಭಾಜ್ಯ ಅಂಗ.'[೮೨] ಈ ಕಾರಣಕ್ಕಾಗಿ ಸೇವೆಯನ್ನು ಒದಗಿಸುವ ಈ ಸಮುದಾಯಗಳು ಆರ್ಥಿಕವಾಗಿ ಪರಾವಲಂಬಿಗಳಾಗುವ ಅನಿವಾರ್ಯತೆಯನ್ನು ಭೂಮಾಲಿಕ ಪ್ರಧಾನ ಸಮಾಜ ಸೃಷ್ಟಿಸಿಬಿಟ್ಟಿತ್ತು.

ಮಧ್ಯಕಾಲೀನ ಭಕ್ತಿ ಚಳುವಳಿಗಳು ಮತ್ತು ಸಮಾಜ ಸುಧಾರಕ ಪಂಥಗಳು ಈ ಬಗೆಯ ಸಮುದಾಯಗಳ ಸಬಲೀಕರಣಕ್ಕೆ ಯತ್ನಿಸಿದವಾದರೂ, ಅಂತಹ ದೊಡ್ಡ ಯಶಸ್ಸನ್ನು ಅವು ಕಾಣಲಾಗಲಿಲ್ಲ. ಕಾರಣ ಈ ಚಳುವಳಿಗಳಿಗೆ ಸ್ಪಷ್ಟ ರಾಜಕೀಯ ಸಿದ್ಧಾಂತದ ತಳಹದಿಯ ಕೊರತೆ ಇತ್ತು. ಕೆಳಜಾತಿ ಸಮುದಾಯಗಳ ಬಡತನವನ್ನೇ ಅವು ವೈಭವೀಕರಿಸಿ, ಸಾಮಾಜಿಕ ಸಮಾನತೆಯನ್ನು ಪ್ರತಿಪಾದಿಸಿದವು. ಆದರೆ ಸಾಮಾಜಿಕ ಸ್ಥಾನಮಾನಗಳನ್ನು ಉನ್ನತೀಕರಿಸುವ ಆರ್ಥಿಕತೆಯ ಕುರಿತು ಈ ಚಳುವಳಿಗಳು ಅಷ್ಟಾಗಿ ಗಮನಹರಿಸಲಿಲ್ಲ. ಇದ್ದ ವ್ಯವಸ್ಥೆಯಲ್ಲಿಯೇ ಸುಧಾರಣೆ ತರುವುದು ಈ ಚಳುವಳಿಗಳ ಮುಖ್ಯ ಉದ್ದೇಶವಾಗಿತ್ತು. ಈ ಚಳುವಳಿಗಳು 'ಸಾಮಾಜಿಕ ಅಸಮಾನತೆಯನ್ನು ಖಂಡಿಸಿದಂತೆ ಆರ್ಥಿಕ ಅಸಮಾನತೆಯನ್ನು ಖಂಡಿಸಲಿಲ್ಲ. ಟೀಕೆ ಆಕ್ರೋಶ, ಕ್ರೋಧಗಳಿಗೆ ಬ್ರಾಹ್ಮಣ ಗುರಿಯಾದಂತೆ ವೈಶ್ಯನೋ ಬಣಜಿಗನೋ ಅಧಿಕಾರಿಯೋ ರಾಜನೋ ಗುರಿಯಾಗಲಿಲ್ಲ. ಅದಕ್ಕೆ ಅಂದಿನ ಚಳುವಳಿಯ ಚೌಕಟ್ಟಿನ ಮಿತಿ ಕಾರಣ.'[೮೩] ಇದರಿಂದಾಗಿ ಕೆಳಜಾತಿ ಮತ್ತು ಕುಶಲಕರ್ಮಿ ಸಮುದಾಯಗಳಿಗೆ ಒಂದು ಬಗೆಯಲ್ಲಿ ಆತ್ಮಪ್ರತ್ಯಯವನ್ನು ತರುವ ಪ್ರಯತ್ನ

ಈ ಚಳುವಳಿಗಳಿಂದ ನಡೆಯಿತೇ ಹೊರತು, ಆರ್ಥಿಕ ಸಮಾನತೆಯನ್ನು ತರುವುದು ಈ ಚಳುವಳಿಗಳ ಉದ್ದೇಶವಾಗಿರಲಿಲ್ಲ. ಆರ್ಥಿಕ ಸಮಾನತೆಯು ಸಂಘರ್ಷದಿಂದ ಲಭಿಸುತ್ತದೆ. ಆದರೆ ಭಕ್ತಿ ಚಳುವಳಿಗಳು ಅತ್ಯಂತ ಸಾತ್ವಿಕ ನೆಲೆಯಲ್ಲಿ ಸಮಾಜ ಸುಧಾರಣೆಗೆ ಪ್ರಯತ್ನಿಸಿದವು. ಇದರಿಂದಾಗಿ ಮಧ್ಯಕಾಲದಲ್ಲಿ ಕೆಳಜಾತಿಗಳು ಮತ್ತು ಆರ್ಥಿಕವಾಗಿ ಭೂಮಾಲಿಕತ್ವವನ್ನು ಅವಲಂಬಿಸಿದ್ದ ಸಮುದಾಯಗಳು 'ತಮ್ಮ ಪಾರಂಪರಿಕ ಉದ್ಯೋಗಗಳನ್ನು ಕೈಬಿಡಲು ಅವರಿಗೆ ಆ ದಿನಗಳಲ್ಲಿ ಅವಕಾಶವಿರಲಿಲ್ಲ.'[೮೪] ಹೀಗಾಗಿ ಮಧ್ಯಕಾಲೀನ ಭಾರತದಲ್ಲಿ ಇಂತಹ ಸಮುದಾಯಗಳು ಆರ್ಥಿಕವಾಗಿ ಸ್ವಾವಲಂಬಿಗಳಾಗುವ ಸಾಧ್ಯತೆಗಳಿರಲಿಲ್ಲ. ಒಂದೆಡೆ ಹುಟ್ಟಿನ ಕಾರಣಕ್ಕಾಗಿ ಹೇರಲ್ಪಟ್ಟ ಕೆಳಜಾತಿಯ ಸ್ಥಾನಮಾನ ಮತ್ತು ಅದೇ ಕಾರಣಕ್ಕೆ ಅವಲಂಬಿಸಿದ ವೃತ್ತಿಯಿಂದಾಗಿ ಪ್ರಾಪ್ತವಾಗಿದ್ದ ಆರ್ಥಿಕ ಪರಾವಲಂಬಿತನಗಳು ಈ ಸಮುದಾಯಗಳಿಗೆ ಸ್ಥಿರತೆಯನ್ನು ತರುವುದು ಸಾಧ್ಯವಿರಲಿಲ್ಲ.

'ವೃತ್ತಿಗಾಯಕರು ಮತ್ತು ಪ್ರದರ್ಶಕ ಕಲೆಗಳನ್ನು ಅವಲಂಬಿಸಿದ್ದ ಸಮುದಾಯಗಳು ಸಾಮಂತಶಾಹಿ ಮತ್ತು ರಾಜಶಾಹಿಯನ್ನು ಅವಲಂಬಿಸಿಯೇ ಬದುಕಬೇಕಿತ್ತು. ಅವರ ದತ್ತಿ, ದಾನಗಳನ್ನು ಸದಾ ನಿರೀಕ್ಷಿಸುತ್ತಲೇ ಇರಬೇಕಿತ್ತು. ಶ್ರೀಮಂತರು, ಭೂಮಾಲಿಕರು ಕೆಲವು ವಿಶೇಷ ಸಂದರ್ಭಗಳಲ್ಲಿ ಈ ಕಲಾವಿದರನ್ನು ಕರೆಸಿ ಹಾಡಿಸಿ ಕುಣಿಸಿ ಆನಂದಿಸುತ್ತಿದ್ದರು. ಇದಕ್ಕೆ ಪ್ರತಿಯಾಗಿ ಕಾಣಿಕೆಗಳನ್ನು ಕೊಡುತ್ತಿದ್ದರು. ಜೊತೆಗೆ ಹಳ್ಳಿಗರು 'ಆಯ' ಕೊಟ್ಟು ಇವರನ್ನು ಪೋಷಿಸುತ್ತಿದ್ದರು. ಇಂತಹ ಅವಕಾಶಗಳನ್ನು ಈ ಸಮುದಾಯಗಳು ಎದುರು ನೋಡುತ್ತಾ ಬದುಕಬೇಕಿತ್ತು. ವೃತ್ತಿ ಸಂಗೀತಗಾರರು, ವೇಷಗಾರರು, ಕಸರತ್ತುಗಳನ್ನು ಮಾಡುವರು, ಡೊಂಬರಾಟದದವರು ತಮ್ಮ ಸುತ್ತಲ ಜನಸಮುದಾಯಗಳನ್ನು ರಂಜಿಸುತ್ತಲೇ ಬದುಕಿ ಬಂದರು. ಅವರಿಗೆ ರಾಜ ಇಲ್ಲವೆ ಭೂಮಾಲಿಕರಿಂದ ಊಳಿಗ ಮತ್ತು ದತ್ತಿಗಳು ಅಲ್ಪಸ್ವಲ್ಪವಾದರೂ ದಕ್ಕುತ್ತಿದ್ದವು. ಆದರೆ ಯಾವತ್ತೂ ಭೂಮಿ ಮುಖ್ಯ ಆರ್ಥಿಕ ಮೂಲವಾಗಿ ಪರಿಗಣಿತವಾಯಿತೋ ಅಂದಿನಿಂದ ಈ ಅವಲಂಬಿತ 'ಅನುತ್ಪಾದಕ' ಸಮುದಾಯಗಳು ಆರ್ಥಿಕವಾಗಿ ಕುಸಿದು ಹೋದವು. ನಿಶ್ಚಿತ ಆರ್ಥಿಕ ಮೂಲಗಳನ್ನು ಹುಡುಕಿಕೊಂಡು ಹೋಗುವುದು ಈ ಸಮುದಾಯಗಳಿಗೆ ಅನಿವಾರ್ಯವೂ ಆಯಿತು.'[೮೫] ಈ ಕಾರಣದಿಂದಾಗಿ ಇಂಡಿಯಾದ ಮಧ್ಯಕಾಲೀನ ಚರಿತ್ರೆ ಯುದ್ದಕ್ಕೂ ಅಲೆಮಾರಿಗಳು ಆರ್ಥಿಕವಾಗಿ ಪರಾವಲಂಬಿಗಳಾಗಿಯೂ ಮತ್ತು ಸಮಾಜದ ಒಟ್ಟು ಉತ್ಪಾದನಾ ವ್ಯವಸ್ಥೆಯಲ್ಲಿ 'ಅನುತ್ಪಾದಕ' ಗುಂಪುಗಳಾಗಿಯೂ ಬದುಕಿ ಬಂದವು. ಇವರ ಪಾರಂಪರಿಕ ವೃತ್ತಿಗಳು ಆಳುವ ವರ್ಗವನ್ನು ಆರ್ಥಿಕವಾಗಿ ಅವಲಂಬಿಸಲೇಬೇಕಿತ್ತು. ಆಳುವ ವರ್ಗಗಳ ದತ್ತಿ, ದಾನಗಳನ್ನ, ಊಳಿಗವನ್ನು ನಿರೀಕ್ಷಿಸಲೇ ಬೇಕಿತ್ತು. ಈ ಕಾರಣದಿಂದಾಗಿ ಮಧ್ಯಕಾಲೀನ ಭಾರತದ ಕಾಲಘಟ್ಟದಲ್ಲಿ ಕರಕುಶಲ ಕರ್ಮಿಗಳು ಮತ್ತು ಪ್ರದರ್ಶಕ ಕಲೆಗಳನ್ನು ನಂಬಿದ್ದ ಸಮುದಾಯಗಳು ನಿಶ್ಚಿತ ಆರ್ಥಿಕ ಮೂಲಗಳನ್ನು ಹುಡುಕಿಕೊಂಡು ವಲಸೆ ಹೋಗುವುದು ಅನಿವಾರ್ಯವಾಯಿತು. ಏಕೆಂದರೆ ಅಲೆಮಾರಿಗಳೆಂದು ನಾವು ಈಗ ಪಟ್ಟಿ ಮಾಡಿರುವ ಸಮುದಾಯಗಳು ಆಳುವ ವರ್ಗದ ಕೆಲವು ಅನಿಶ್ಚಿತ ಆರ್ಥಿಕ ಕೊಡುಗೆಗಳನ್ನೇ ನಂಬಿಕೊಂಡು ಬಂದಿರುವುದನ್ನು ನಾವೀಗಾಗಲೇ ನೋಡಿದ್ದೇವೆ. ರಾಜರ ದತ್ತಿಗಳನ್ನು, ಇನಾಮು

ಭೂಮಿಗಳನ್ನು ನಂಬಿಕೊಂಡು ಬಂದ ಈ ಸಮುದಾಯಗಳು ಭಾರತದ ಮಧ್ಯಕಾಲೀನ ಆರ್ಥಿಕ ಚಟುವಟಿಕೆಗಳಿಂದ ತಲ್ಲಣಗೊಂಡವು.

ಮೊಘಲ್ ಆಡಳಿತಾವಧಿಯಲ್ಲಿ ರೂಪಗೊಂಡ ಭೂಮಿಗೆ ಸಂಬಂಧಿಸಿದ ಕಾನೂನುಗಳು ಈ ಸಮುದಾಯಗಳ ಪಾರಂಪರಿಕ ಹಕ್ಕುಗಳನ್ನು ಇಲ್ಲವಾಗಿಸಿದವು. ಈ ಕುರಿತು ಖ್ಯಾತ ಇತಿಹಾಸಕಾರರಾದ ಇರ್ಫಾನ್ ಹಬೀಬರ ಮತ್ತು ರಷ್ಯಾದ ಲೇಖಕ ಮಿದವೊಯ್‌ರವರ ಬರಹಗಳನ್ನು ಪರಿಶೀಲಿಸಬಹುದಾಗಿದೆ. 'ಮಧ್ಯಕಾಲೀನ ಮೊಘಲ್ ಆಳ್ವಿಕೆಯ ಸಂದರ್ಭದಲ್ಲಿ ವಿಶೇಷವಾಗಿ ಉತ್ತರ ಭಾರತದಲ್ಲಿ ಕೃಷಿ, ಒಟ್ಟು ರಾಜ್ಯದ ರಾಜ್ಯದಾಯವನ್ನು ನಿರ್ಣಯಿಸುವ ಉದ್ಯಮವಾಗತೊಡಗಿದ ಮೇಲೆ, ಕೃಷಿಗೆ ವಿಶೇಷ ಮಹತ್ವ ಒದಗತೊಡಗಿತು. ಅಲ್ಲದೆ ಹೆಚ್ಚಿನ ಭೂಮಿ ಕೃಷಿಗೆ ಒಳಪಟ್ಟಿತು.'[೮೬] ಅಲ್ಲದೇ ಕೃಷಿ ಭೂಮಿಗೆ ಸಂಬಂಧಿಸಿದ ಮತ್ತು ಭೂಕಂದಾಯಕ್ಕೆ ಸಂಬಂಧಿಸಿದ ಕಾನೂನುಗಳು ರೂಪಗೊಂಡವು. ಮೊಘಲರ ಜಮೀನ್ದಾರಿ ಪದ್ಧತಿ ಮೊದಲ ಬಾರಿಗೆ ಭೂಮಿಯನ್ನು ಖಾಸಗಿ ಆಸ್ತಿಯನ್ನಾಗಿ ಪರಿಗಣಿಸಿತು. ರೈತರು ಕೇವಲ ಗೇಣಿದಾರರಾದರು. ಇನಾಮು ಭೂಮಿಗಳು ಜಮೀನ್ದಾರರ ವಶವಾದವು. ಏಕೆಂದರೆ ಯಾವ ಸಮುದಾಯಗಳು ಕಂದಾಯ ಪಾವತಿಸಲು ವಿಫಲವಾಗುತ್ತಿದ್ದವೋ ಆ ಸಮುದಾಯಗಳ ಜಮೀನುಗಳನ್ನು ಜಮೀನ್ದಾರರು ವಶಪಡಿಸಿಕೊಳ್ಳುತ್ತಿದ್ದರು. ಹೀಗೆ ವಶಪಡಿಸಿಕೊಂಡ ಜಮೀನುಗಳು, ಬಹುತೇಕ ಕುಶಲಕರ್ಮಿಗಳು ಮತ್ತು ಪ್ರದರ್ಶಕ ಕಲೆಗಳನ್ನು ನಂಬಿಕೊಂಡು ಬಂದಿದ್ದ ಸಮುದಾಯಗಳು ವಂಶಪಾರಂಪರ್ಯವಾಗಿ ರಾಜರುಗಳಿಂದ ಪಡೆದ ಇನಾಮು ಜಮೀನುಗಳೇ ಆಗಿದ್ದವು. ಕುಶಲಕರ್ಮಿ ಮುಂತಾದ ಕೃಷಿಯೇತರ ಸಮುದಾಯಗಳಿಗೆ ಭೂಮಿಯನ್ನು ಕೆಲವು ನಿಯಮಗಳ ಮೂಲಕ ಕೊಡಲಾಗುತ್ತಿತ್ತು.

ಮಧ್ಯಕಾಲೀನ ದಕ್ಷಿಣ ಭಾರತದ ವ್ಯವಸಾಯಿ ಸಂರಚನೆಯನ್ನು ವಿಶೇಷವಾಗಿ ಅಧ್ಯಯನ ಮಾಡಿರುವ ಹಿರೋಷಿ ಫಕಜವಾ ಮೂರು ತರಹದ ಭೂಹಿಡುವಳಿಯನ್ನು ಉಲ್ಲೇಖಿಸುತ್ತಾರೆ. 'ಮಿರಾಸಿಗಳು', ಅಂದರೆ ಶಾಶ್ವತವಾಗಿ ಭೂಒಡೆತನವನ್ನು ವಂಶ ಪಾರಂಪರ್ಯವಾಗಿ ಹೊಂದಿದವರು. 'ಉಪೇರರು' ಅಂದರೆ ರೈತರು. ಇವರು ಸರಕಾರದಿಂದ ಭೂಮಿಯನ್ನು ಕೃಷಿಗಾಗಿ ಪಡೆದುಕೊಂಡು ನಿಶ್ಚಿತ ಕಂದಾಯವನ್ನು ಕಟ್ಟುವ ಸಾಮಾನ್ಯ ರೈತರು. ಮೂರನೆಯ ಗುಂಪಿನವರು ಇನಾಮ್‌ದಾರರು. ಇವರು ತೆರಿಗೆ ರಹಿತ ಮತ್ತು ಕೆಲವು ಸಲ ಅಲ್ಪ ತೆರಿಗೆ ಕಟ್ಟುವುದರ ಮೂಲಕ ಕೃಷಿ ಭೂಮಿಯನ್ನು ಸರಕಾರದಿಂದ ಪಡೆದವರು. ಇವರಿಗೂ ಕೃಷಿ ಜಮೀನು ಅನುವಂಶಿಕವಾಗಿಯೇ ಇರುತ್ತದೆ.[೮೭] ಆದರೆ ಈ ಬಗೆಯ ಅನುವಂಶಿಕ ಒಡೆತನಕ್ಕೆ ಅನೇಕ ನಿಯಮಗಳಿರುವುದನ್ನು ಹಿರೋಷಿ ದಾಖಲಿಸುತ್ತಾರೆ. ಈ 'ಇನಾಮು'ದಾರರು ಸಾಮಾನ್ಯವಾಗಿ ಕರಕುಶಲ ಮತ್ತು ಪ್ರದರ್ಶಕ ಕಲೆಗಳನ್ನೇ ಅವಲಂಬಿಸಿದವರು. ಇವರು ಕೆಲವು ಸಲ ವಲಸೆ ಹೋಗುವುದು ಸಾಮಾನ್ಯ. ಇಂತಹ ಸಮುದಾಯಗಳು ದೀರ್ಘಕಾಲದವರೆಗೆ ಕಣ್ಮರೆಯಾಗುವ ಸಂದರ್ಭಗಳು ಒದಗುತ್ತವೆ. ಹಿರೋಷಿ ಇಂತಹ ಸಮುದಾಯಗಳನ್ನ ಕಣ್ಮರೆಯಾದ ಸಮುದಾಯಗಳು (Extinct families) ಎಂದು ಕರೆಯುತ್ತಾರೆ. 'ಹೀಗೆ ವಂಶ ಪಾರಂಪರ್ಯ ಒಡೆತನವಿರುವ ಭೂಮಿಯನ್ನು ಅನುಭವಿಸುವ ಕುಟುಂಬ ಕಣ್ಮರೆಯಾದರೆ, ದೀರ್ಘಕಾಲದವರೆಗೆ ಕಾಣೆಯಾದರೆ ಆ ಕೃಷಿ ಭೂಮಿಯನ್ನು ವಶಪಡಿಸಿಕೊಳ್ಳುವ ಮತ್ತು

ಅದನ್ನು ತನ್ನ ಖಾಸಗಿ ಆಸ್ತಿಯನ್ನಾಗಿಸಿಕೊಳ್ಳುವ ಅಧಿಕಾರವನ್ನು ಊರ ಪಟೇಲನಿಗೆ ಅಥವಾ ಗ್ರಾಮದ ಮುಖ್ಯಸ್ಥನಿಗೆ ಕೊಡ ಮಾಡಲ್ಪಟ್ಟಿರುತ್ತದೆ. ಅಲ್ಲದೆ ಗ್ರಾಮದ ಬಂಜರು, ಇಲ್ಲವೆ ಕೃಷಿಯೇತರ ಭೂಮಿಯನ್ನೂ ಸಹ ಪಟೇಲನ ಗ್ರಾಮಾಧಿಕಾರದ ವ್ಯಾಪ್ತಿಗೆ ಅಂದಿನ ಸರಕಾರ ಒಳಪಡಿಸಿತ್ತು.'[೮೭] ಈ ಎಲ್ಲ ಕಾರಣಗಳಿಂದಾಗಿ ಕೃಷಿಯೇತರ ಸಮುದಾಯಗಳಿಗೆ ಇನಾಮಾಗಿ ಬರುತ್ತಿದ್ದ ಕೃಷಿ ಜಮೀನಿನ ಮೇಲೆ ಯಾವ ನ್ಯಾಯಬದ್ಧ ಅಧಿಕಾರಗಳಿರುತ್ತಿರಲಿಲ್ಲ. ಅದರಲ್ಲೂ ಕಂಪನಿ ಆಡಳಿತದ ಸಂದರ್ಭದಲ್ಲಿ ಕೃಷಿ ಸಂಬಂಧಗಳು ಇನ್ನೂ ನಿಯಮಕ್ಕೊಳಪಟ್ಟ ಮೇಲೆ ಮೊದಲ ಬಾರಿಗೆ ಈ ಸಮುದಾಯಗಳ ನಿಶ್ಚಿತ ಆದಾಯದ ಮೇಲೆ ಹೊಡೆತ ಬಿದ್ದಿತು. ಅವರ ಪಾಲಿಗೆ ತಮ್ಮ ಪಾರಂಪರಿಕ ವೃತ್ತಿ ಮಾತ್ರ ಉಳಿಯಿತು. ಆ ಪಾರಂಪರಿಕ ವೃತ್ತಿಗಳನ್ನು ಸದರಿ ಸಮುದಾಯಗಳು ಅವಲಂಬಿಸಲೇಬೇಕಿತ್ತು. ಆದ್ದರಿಂದ ಕೆಲವು ಕುಶಲಕರ್ಮಿಗಳಿಗೆ ಸೇವಕ ಸಮುದಾಯಗಳಿಗೆ ಸೇರಿದ ಮನರಂಜಕರಿಗೆ ಅಲೆಮಾರಿಗಳಾಗದೆ ಬೇರೆ ಮಾರ್ಗಗಳಿರಲಿಲ್ಲ.

ಇನ್ನು ಮೊಘಲ್ ಆಳ್ವಿಕೆಯ ನಂತರದ ವಸಾಹತುಶಾಹಿ ಕಾಲಘಟ್ಟದಲ್ಲಿ ಭೂಮಿ ಮತ್ತು ಭೂಕಂದಾಯಕ್ಕೆ ಸಂಬಂಧಿಸಿದ ಕಾಯ್ದೆಗಳು ಇನ್ನೂ ಕಠಿಣಗೊಂಡವು. ಏಕೆಂದರೆ ಬ್ರಿಟಿಷರು ಭಾರತದ ನೈಸರ್ಗಿಕ ವೈವಿಧ್ಯತೆಯನ್ನು ಕೊಳ್ಳೆ ಹೊಡೆಯಲೆಂದೇ ಇಲ್ಲಿಗೆ ಬಂದವರಾದ್ದರಿಂದ, ಆದಿವಾಸಿಗಳ ಮತ್ತು ಕೃಷಿಯೇತರ ಸಮುದಾಯಗಳ ಜಮೀನುಗಳನ್ನು ಹಿಂಸಾತ್ಮಕವಾಗಿಯೇ ವಶಪಡಿಸಿಕೊಂಡರು. ಮೊಘಲರ ಭೂಕಾಯ್ದೆಯನ್ನು, ೧೭೯೩ರಲ್ಲಿ ವಾರನ್ ಹೇಸ್ಟಿಂಗ್ಸ್ ಹಲವು ತಿದ್ದುಪಡಿಗಳನ್ನು ಮಾಡಿ ಜಾರಿಗೆ ತಂದನು. ವಸಾಹತುಶಾಹಿ ಕಾಲಘಟ್ಟದ ಭಾರತದ ಆರ್ಥಿಕ ಸ್ಥಿತಿಗತಿಗಳನ್ನು ವಿಶೇಷವಾಗಿ ಅಧ್ಯಯನ ಮಾಡಿರುವ ರಷ್ಯನ್ ಲೇಖಕ ಎ.ಐ. ಮಿದವೋಯ್ ಅವರು ವಾರನ್ ಹೇಸ್ಟಿಂಗ್ಸ್ ಜಾರಿಗೆ ತಂದ ಭೂ ಕಾಯ್ದೆಯನ್ನು ಹೀಗೆ ವಿವರಿಸುತ್ತಾರೆ.

'೧೭೯೩ರಲ್ಲಿ ಜಾರಿಗೆ ಬಂದ 'ಶಾಶ್ವತ ಜಮೀನ್ದಾರಿ' ಶಾಸನವು ಕಟ್ಟುನಿಟ್ಟಾಗಿ ಜಾರಿಗೆ ಬಂದದ್ದು ಮೊದಲಿಗೆ ಉತ್ತರ ಭಾರತದಲ್ಲಿ. ಈ ಶಾಸನದಿಂದಾಗಿ, ಇನಾಮು ಭೂಮಿಗಳನ್ನು ಪಡೆದು, ಅನುವಂಶಿಕವಾಗಿ ಅದರ ಒಡೆತನವನ್ನು ಹೊಂದಿದ್ದ ಪ್ರದರ್ಶಕ ಕಲೆ ಮತ್ತು ಕರಕುಶಲ ಕಲೆಗಳನ್ನು ಅವಲಂಬಿಸಿದ್ದ ಸಮುದಾಯಗಳ ಜಮೀನುಗಳು ಶಾಶ್ವತವಾಗಿ ಜಮೀನ್ದಾರರ ಮತ್ತು ಕಂದಾಯ ವಸೂಲಿದಾರರ ವಶವಾದವು. ಬ್ರಿಟೀಷರು ತಮ್ಮ ಕಂಪನಿಗೆ ಬರಬೇಕಿದ್ದ ಭೂಕಂದಾಯವನ್ನು ನಿರಾಯಾಸವಾಗಿ ಖಜಾನೆಗೆ ತುಂಬಿಕೊಳ್ಳುವ ನಿಟ್ಟಿನಲ್ಲಿ ತಂದ ಅಪ್ಪಟ ಊಳಿಗಮಾನ್ಯ ಗುಣವುಳ್ಳ ಭೂಕಾಯ್ದೆ ಇದು. ಇದರಿಂದಾಗಿ ಗುಜರಾತ್, ರಾಜಸ್ಥಾನ, ಮಹಾರಾಷ್ಟ್ರ, ಓರಿಸ್ಸಾ ಮತ್ತು ಆಂಧ್ರಪ್ರದೇಶದಿಂದ ಅನೇಕ ಸಮುದಾಯಗಳು ದಕ್ಷಿಣಕ್ಕೆ ವಲಸೆ ಬರಬೇಕಾಯ್ತು. ಅಲ್ಲದೆ ಉತ್ತರ ಭಾರತವನ್ನು ದಿಢೀರನೆ ಲಗ್ಗೆ ಹಾಕಿದ ಕೈಗಾರಿಕೆಗಳಿಂದಾಗಿ ಗುಡಿಕೈಗಾರಿಕೆಗಳನ್ನು ನಂಬಿದ್ದ ಸಮುದಾಯಗಳ ವಲಸೆ ಅನಿವಾರ್ಯವೂ ಆಗಿತ್ತು.'[೮೯] ಇದಕ್ಕೆ ಪೂರಕವಾಗಿ ಇರ್ಫಾನ್ ಹಬೀಬ್ ಅವರು '೧೮೨೦ರಿಂದ ೧೮೫೦ರ ನಡುವೆ ಉತ್ತರ ಭಾರತದ ವಾಯುವ್ಯ ಮತ್ತು ಪಶ್ಚಿಮ ರಾಜ್ಯಗಳಲ್ಲಿ ವಿಶೇಷವಾಗಿ ಭೂಕಂದಾಯ ಅತಿ ಹೆಚ್ಚಿನ ಪ್ರಮಾಣದ್ದಾಗಿತ್ತು'[೯೦] ಎನ್ನುತ್ತಾರೆ. ವಾಣಿಜ್ಯ ಬೆಳೆಗಳನ್ನು ಬೆಳೆಯುವ ಬ್ರಿಟಿಷರ ದುರಾಸೆಗೆ ಎಲ್ಲ ದುರ್ಬಲ ವರ್ಗಗಳ ಜಮೀನುಗಳು ವಶವಾಗಿ

ಹೋದವು. ಹೀಗೆ ಮಧ್ಯ ಮತ್ತು ಉತ್ತರ ಭಾರತದ ವ್ಯವಸಾಯಿ ಸಂರಚನೆಯಲ್ಲಾದ ಬದಲಾವಣೆಗಳು ಅವಲಂಬಿತ ಸಮುದಾಯಗಳನ್ನು ತೊಂದರೆಗೀಡು ಮಾಡಿದವು. ದತ್ತಿ, ಇನಾಮು ಮತ್ತು ಊಳಿಗಗಳು ನಿಂತುಹೋದ ಮೇಲೆ, ಮೊಘಲ್ ಆಡಳಿತ ಅಷ್ಟು ಪ್ರಬಲವಾಗಿಲ್ಲದಿದ್ದ ದಕ್ಷಿಣ ಭಾರತಕ್ಕೆ ಈ ಸಮುದಾಯಗಳು ವಲಸೆ ಬರುವುದು ಅನಿವಾರ್ಯವಾಯಿತು. ಈವತ್ತು ಕರ್ನಾಟಕದಲ್ಲಿರುವ ಬಹುತೇಕ ಅಲೆಮಾರಿಗಳು ಮಹಾರಾಷ್ಟ್ರ, ಓರಿಸ್ಸಾ, ಅಸ್ಸಾಂ, ಬಂಗಾಳ, ಗುಜರಾತ್, ರಾಜಸ್ಥಾನ ಮತ್ತು ಆಂದ್ರಪ್ರದೇಶದ ಉತ್ತರಭಾಗದಿಂದ ವಲಸೆ ಬಂದಿರುವುದಾಗಿ ಹೇಳಿಕೊಳ್ಳುತ್ತಾರೆ. ಇದಕ್ಕೆ ಮುಖ್ಯ ಕಾರಣ ಉತ್ತರ ಮತ್ತು ಮಧ್ಯ ಭಾರತದ ವ್ಯವಸಾಯಿ ಸಂಬಂಧಗಳು ಮೊಘಲ್ ಮತ್ತು ಕಂಪನಿ ಆಡಳಿತದ ಸಂದರ್ಭದಲ್ಲಿ ಹೆಚ್ಚು ಸಂಕೀರ್ಣಗೊಂಡದ್ದು. ಉತ್ತರ ಮತ್ತು ಮಧ್ಯ ಭಾರತದಲ್ಲಿ 'ಆಧುನಿಕ ಭೂಮಾಲಿಕತ್ವದಿಂದ ಕೃಷಿಯು ಹೆಚ್ಚು ವಾಣಿಜ್ಯೀಕೃತಗೊಂಡಿತು. ಭೂಮಿಯಿಂದ ಅಧಿಕ ಲಾಭ ಬರಲಾರಂಭಿಸಿದ ಮೇಲೆ, ಭೂಮಿಯ ಮೇಲಿನ ಒಡೆತನದ ಕುರಿತ ನಿಯಮಗಳೂ ನಿಖರವಾದವು. ಕಂಪನಿ ಆಡಳಿತದ ಅವಧಿಯಲ್ಲಿ ಕೃಷಿ ಹೆಚ್ಚು ವಾಣಿಜ್ಯೀಕರಣಗೊಂಡ ಮೇಲೆ ಚಿಕ್ಕ ರೈತರೆಲ್ಲ ಭೂಮಿಯನ್ನು ಕಳೆದುಕೊಂಡು. ೧೯ನೇ ಶತಮಾನದ ಹೊತ್ತಿಗೆ ಭೂಮಾಲಿಕರು ಮತ್ತು ಭೂರಹಿತರು ಎಂಬ ಪ್ರಬಲ ವರ್ಗಗಳು ಬೆಳೆದು ನಿಂತವು'[೯೧] ಈ ಹಂತದಲ್ಲಿಯೇ ಭಾರತದಲ್ಲಿ ಆದಿವಾಸಿಗಳ ಭೂಹೋರಾಟಗಳು ಪ್ರಾರಂಭವಾದವು. ಭೂಮಿಯನ್ನು ಕಳೆದುಕೊಂಡ ಅನೇಕ ಆದಿವಾಸಿಗಳು ಮತ್ತು ಕೆಳಜಾತಿಗಳು ಕಂಪನಿ ಆಡಳಿತದ ವಿರುದ್ಧ ಬಂಡೆದ್ದರು. ಇದೇ ಹೊತ್ತಿಗೆ ಉತ್ತರ ಭಾರತದಲ್ಲಿ ಮೊದಲ ಬಾರಿಗೆ ಒಂದು ಮಾರಾಣಾಂತಿಕ ಕಾಯ್ದೆಯನ್ನು ಜಾರಿಗೆ ತರಲಾಯಿತು. ಅದು ೧೮೭೧ರ Criminal Tribes Act.

ಕ್ರಿಮಿನಲ್ ಟ್ರೈಬ್ಸ್ ಆಕ್ಟ್ ಹಾಗೆಂದರೇನು?

ವಸಾಹತು ಆಡಳಿತದ ಸಂದರ್ಭದಲ್ಲಿ ರೂಪುಗೊಂಡ ಒಂದು ಅಮಾನವೀಯ ಮತ್ತು ಶುದ್ಧ ಸಾಮ್ರಾಜ್ಯಶಾಹಿ ಮನೋಭಾವದ ಕಾಯ್ದೆ ಇದು. ಈ ಕಾಯ್ದೆಯು ಮುಖ್ಯವಾಗಿ ಭಾರತದ ವ್ಯವಸಾಯಿ ಸಂಬಂಧಗಳನ್ನು ಬೆಸೆಯುತ್ತಿದ್ದ, ಕುಶಲಕರ್ಮಿ, ಅಲೆಮಾರಿ ಮತ್ತು ಆದಿವಾಸಿ ಸಮುದಾಯಗಳನ್ನು ನಿಯಂತ್ರಿಸುವ ಸಲುವಾಗಿ ರೂಪುಗೊಂಡಿತು. ಕಂಪನಿ ಆಡಳಿತ ತನ್ನ 'ಕಾನೂನು ಸುವ್ಯವಸ್ಥೆಯ' ಕಾರಣಕ್ಕಾಗಿ ಈ ಕಾಯ್ದೆಯನ್ನು ಜಾರಿಗೆ ತಂದಿತು ಎಂದು ಹೇಳಲಾಗುತ್ತಿದೆಯಾದರೂ ಈ ಕಾಯ್ದೆಯನ್ನು ರೂಪಿಸುವ ಹಿಂದೆ ವಸಾಹತು ಆಡಳಿತಕ್ಕೆ ತನ್ನದೇ ಆದ ರಾಜಕೀಯಾರ್ಥಿಕ ಕಾರಣಗಳೂ ಇದ್ದವು. ಅವುಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

೧. ಕುಶಲಕರ್ಮಿಗಳು ಭಾರತದ ಸ್ವಯಂಪೂರ್ಣ ಗ್ರಾಮ ವ್ಯವಸ್ಥೆಯಲ್ಲಿ ಗುಡಿಕೈಗಾರಿಕೆಗಳನ್ನು ಪೋಷಿಸಿಕೊಂಡು ಬಂದವರು.

೨. ಜೊತೆಗೆ ಗುಡಿಕೈಗಾರಿಕೆಗಳಿಗೆ ಸಂಬಂಧಿಸಿದ ಸ್ಥಳೀಯ ಪಾರಂಪರಿಕ ಜ್ಞಾನವನ್ನು ತಲೆಮಾರುಗಳಿಂದ ಕುಶಲಕರ್ಮಿಗಳು ರಕ್ಷಿಸಿಕೊಂಡು ಬಂದವರು.

೩. ಕುಶಲಕರ್ಮಿಗಳು ತಮ್ಮ ಉತ್ಪಾದನೆಗೆ ಸಂಬಂಧಿಸಿದಂತೆ ಅಲೆಮಾರಿ ವ್ಯಾಪಾರಿ ಸಮುದಾಯಗಳನ್ನು

ಆರ್ಥಿಕವಾಗಿ ಅವಲಂಬಿಸಿದವರು.

೪. ಕುಶಲಕರ್ಮಿಗಳು ಕೃಷಿ ಸಂಬಂಧೀ ಚಟುವಟಿಕೆಗಳಿಗೆ ಪೂರಕ ಸಂಬಂಧಗಳನ್ನಿಟ್ಟುಕೊಂಡು ಬಂದವರು. ಕೃಷಿ ತಂತ್ರಜ್ಞಾನ ಮತ್ತು ಅದಕ್ಕೆ ಸಂಬಂಧಿಸಿದ ಕೌಶಲಗಳನ್ನು ರೂಢಿಸಿಕೊಂಡು ಬಂದವರು. ಗ್ರಾಮೊಟ್ಟಿನ ಉತ್ಪಾದನಾ ಸಂಬಂಧಗಳಲ್ಲಿ ಕುಶಲಕರ್ಮಿಗಳು ಮಹತ್ವದ ಪಾತ್ರ ವಹಿಸುತ್ತಾರೆ.

೫. ಆದಿವಾಸಿಗಳು ಅರಣ್ಯಗಳ ನಿಗೂಢ ಜಗತ್ತಿನಲ್ಲಿ ಬದುಕುತ್ತಿರಕುವ ಅನೂಹ್ಯ ಸಮಾಜಕ್ಕೆ ಸೇರಿದವರು. ಅವರದೇ ಜಗತ್ತಿನ ನಿಯಮಗಳಲ್ಲಿ ಬದುಕುತ್ತಿರುವ ಅವರು ಗಿರಿ ಕಣಿವೆಗಳ ಫಲವತ್ತಾದ ಭೂಮಿಯಲ್ಲಿ ಕೃಷಿಯಲ್ಲಿ ತೊಡಗಿರುವವರು.

೬. ಪರಂಪರೆಯ ಭಾರತವು ಈ ಆದಿವಾಸಿ ಸಮಾಜಗಳಲ್ಲಿ ಜೀವಂತವಾಗಿದೆ. ಭಾರತದ ಜಾತಿ ವ್ಯವಸ್ಥೆಯು ಇವರನ್ನು ದೂರವಿಟ್ಟ ಕಾರಣ 'ಮುಖ್ಯವಾಹಿನಿ'ಯ ಜನರನ್ನು ಇವರು ದ್ವೇಷಿಸುತ್ತಾರೆ ಮತ್ತು ತಮ್ಮದೇ ಆದ ಸಾಮಾಜಿಕ ನಿಯಮಗಳನ್ನು ಇವರು ರೂಪಿಸಿಕೊಂಡಿದ್ದಾರೆ.

೭. ಫಲವತ್ತಾದ ಕಣಿವೆ ಮತ್ತು ನದಿ ಮುಖಜ ಭೂಮಿಗಳು ಆದಿವಾಸಿಗಳ ಕೈಯಲ್ಲಿವೆ. ಆದಿವಾಸಿಗಳನ್ನು ವಶಪಡಿಸಿಕೊಳ್ಳದೆ ಆ ಜಮೀನುಗಳನ್ನು ವಶಪಡಿಸಿಕೊಳ್ಳಲು ಸಾಧ್ಯವಿಲ್ಲ.

೮. ಇನ್ನು ಅಲೆಮಾರಿಗಳು ಇಂಡಿಯಾದ ಸಮಾಜಕ್ಕೆ ತಮ್ಮದೇ ಆದ ಚಟುವಟಿಕೆಗಳ ಮೂಲಕ ಅನಿವಾರ್ಯವೆನ್ನಿಸಿಕೊಂಡವರು. ಅಲೆಮಾರಿ ವ್ಯಾಪಾರೀ ಸಮುದಾಯಗಳು ಗ್ರಾಮ ಮತ್ತು ನಗರಗಳ ನಡುವೆ ಸೇತುವೆಯಂತೆ ಕೆಲಸ ಮಾಡಿ ಉತ್ಪಾದನಾ ಸಂಬಂಧಗಳನ್ನು ಹಳ್ಳಿ ಮತ್ತು ನಗರಗಳ ಮಧ್ಯೆ ಬೆಸೆಯಲು ಕಾರಣರಾಗಿದ್ದಾರೆ.

೯. ಕೆಲವು ಅಲೆಮಾರಿಗಳು ಸ್ಥಳೀಯ ರಾಜರ ಸೈನ್ಯದಲ್ಲಿ ಗೂಢಚಾರರಾಗಿ, ಸೈನಿಕರೂ ಆಗಿ ಸ್ಥಳೀಯ ಆಡಳಿತದ ಭಾಗವಾಗಿದ್ದಾರೆ.

೧೦. ತಮ್ಮ ಪಾರಂಪರಿಕ ವೃತ್ತಿಯನ್ನು ಜೀವಂತವಾಗಿಟ್ಟುಕೊಂಡು ಬಂದ ಅಲೆಮಾರಿಗಳು ತಾವು ಅವಲಂಬಿಸಿರುವ ಊಳಿಗಮಾನ್ಯ ವ್ಯವಸ್ಥೆಗೆ ಯಾವತ್ತೂ ನಿಷ್ಠರಾಗಿರುವವರು. ಈ ಊಳಿಗಮಾನ್ಯ ವ್ಯವಸ್ಥೆಯನ್ನು ಅಲೆಮಾರಿಗಳು ಶತಾಯಗತಾಯ ಅವಲಂಬಿಸಿದ್ದಾರೆ.

೧೧. ಪ್ರದರ್ಶನ ಕಲೆಗಳನ್ನು ನಂಬಿರುವವರು, ಪಾರಂಪರಿಕ ವೃತ್ತಿಯನ್ನು ಅವಲಂಬಿಸರುವ ಸಮುದಾಯಗಳು, ಸೇವಕ ಸಮುದಾಯಗಳು ಮತ್ತು ಜೀತಗಾರ ಸಮುದಾಯಗಳು ಯಾವತ್ತೂ ಊಳಿಗಮಾನ್ಯ ವ್ಯವಸ್ಥೆಯ ಭಾಗವಾಗಿದ್ದುಕೊಂಡು ಅದರ ರಕ್ಷಣೆಗಾಗಿ ಅನಿವಾರ್ಯವಾಗಿ ಹೆಗಲು ಕೊಟ್ಟವರು.

೧೨. ಊಳಿಗಮಾನ್ಯ ವ್ಯವಸ್ಥೆಯು ಆರ್ಥಿಕವಾಗಿ ಇವರನ್ನು ಪೋಷಿಸುವ ಕಾರಣಕ್ಕಾಗಿ ಅಲೆಮಾರಿಗಳು ಸ್ಥಳೀಯ ಭೂಮಾಲಿಕ ವ್ಯವಸ್ಥೆಗೆ ಯಾವತ್ತೂ ನಿಷ್ಠರಾಗಿರುತ್ತಾರೆ. ಇವರು ಯೋಧರೂ ಆಗಿರುವ ಕಾರಣಕ್ಕಾಗಿ, ಭೂಮಾಲಿಕ ವ್ಯವಸ್ಥೆಯ ರಕ್ಷಣೆಗೂ ಇವರು ನಿರತರಾಗುತ್ತಾರೆ.

'ವಸಾಹತುಪೂರ್ವದ ಭಾರತದ ಸಾಮಾಜಿಕ ಸಂದರ್ಭದ ಕೆಲವು ಅಲೆಮಾರಿ ಗುಂಪುಗಳಿಗೆ ದೇಶೀ ಸಂಸ್ಥಾನಗಳ ಆಳ್ವಿಕೆಯಲ್ಲಿ ಸಾಮಾಜಿಕ ಸ್ಥಾನಮಾನಗಳು ಲಭ್ಯವಾಗಿದ್ದವು. ಅಲ್ಲದೆ, ಊಳಿಗಮಾನ್ಯ

ವ್ಯವಸ್ಥೆಯಲ್ಲೂ ಈ ಗುಂಪುಗಳು ಆರ್ಥಿಕವಾಗಿ ಅಷ್ಟಾಗಿ ಸಂಕಷ್ಟದ ಸ್ಥಿತಿಗೆ ತಲುಪಲಿಲ್ಲ. ಕಾರಣ ಸೇವಕ ಸಮುದಾಯಗಳಿಗೆ ಉಳಿಗಮಾನ್ಯ ವ್ಯವಸ್ಥೆಯಲ್ಲಿ ನಿಶ್ಚಿತ ಕೆಲಸಗಳನ್ನು ನಿರ್ವಹಿಸುತ್ತಿದ್ದುದರಿಂದ ಆದಾಯವೂ ನಿರಂತರವಾಗಿತ್ತು. ಬೇಟೆಗಾರರು, ನೃತ್ಯಗಾರರು, ಹಾಡುಗಾರರು, ಮಾವುತರು, ಒಂಟೆ ಸಾಕುವವರು ಮುಂತಾದ ಸಮುದಾಯಗಳು ಎಡಬಿಡದ ಕೆಲಸಗಳಲ್ಲಿ ನಿರತರಾಗಿದ್ದರು. ವಸಾಹತುಪೂರ್ವ ಮೈಸೂರು ಸಂಸ್ಥಾನದಲ್ಲಿ ಪಶುಪಾಲಕ ಗೊಲ್ಲರು ರಾಜ್ಯಾದಾಯದಿಂದ ಮಹತ್ವದ ಕಾಣಿಕೆ ಪಡೆಯುತ್ತಿದ್ದರು. ಅದೇ ರೀತಿ ರಾಜಸ್ಥಾನದ ಪಶುಪಾಲಕ ಅಲೆಮಾರಿಗಳು ಸಹ ಆಳುವ ವರ್ಗಗಳಿಂದ ದೇಣಿಗೆ ರೂಪದಲ್ಲಿ ಕೃಷಿ ಭೂಮಿಯನ್ನು ಪಡೆದಿದ್ದಾರೆ’[೯೨]. ಆದರೆ ಕಂಪನಿ ಆಡಳಿತದ ಕಾಯ್ದೆಗಳು ಈ ಉತ್ಪಾದನಾ ಸಂಬಂಧಗಳನ್ನು ಆಮೂಲಾಗ್ರವಾಗಿ ಬದಲಿಸಿದವು. ಮತ್ತು ಅವುಗಳನ್ನು ಪುನರ್ರೂಪಿಸಲು ಮತ್ತು ನಿಯಂತ್ರಿಸಲು ತೊಡಗಿದವು. ‘೧೮೭೧ರ Criminal Tribes Act ಕಂಪನಿ ಆಡಳಿತದ ಅಧಿಕಾರಿಗಳಿಗೆ ಒಂದು ಅಸ್ತ್ರವಾಗಿ ಪರಿಣಮಿಸಿತು. ಈ ಕಾಯ್ದೆಯು ಅಲೆಮಾರಿ ಸಮುದಾಯಗಳನ್ನು, ಕಾಡಿನ ಅಂಚಿನಲ್ಲಿರುವ ಆದಿವಾಸಿಗಳನ್ನು ನಿಯಂತ್ರಿಸಲು ಮತ್ತು ಈ ಸಮುದಾಯಗಳ ಮೇಲೆ ವಿನಾಕಾರಣ ಕ್ರಮ ತೆಗೆದುಕೊಳ್ಳುವ ಅಧಿಕಾರವನ್ನು ಕಂಪನಿ ಆಡಳಿತದ ಅಧಿಕಾರಿಗಳಿಗೆ ನೀಡಿತು. ಅಲೆಮಾರಿತ್ವ ಎನ್ನುವುದು ಅಪರಾಧವಾಗಿ ಪರಿಗಣಿತವಾಗಿಬಿಟ್ಟಿತು. ಮೂಲತಃ ಅಲೆಮಾರಿಗಳಾಗಿದ್ದ ಸಮುದಾಯಗಳನ್ನು ನೆಲೆ ನಿಲ್ಲಿಸಲು ಒತ್ತಾಯ ಮಾಡಲಾಯಿತು. ಹಳ್ಳಿಗಳಲ್ಲಿ ಗೌರವಾನ್ವಿತವಾಗಿ ಬದುಕಲು ಇಚ್ಛಿಸುವ ಸಮುದಾಯಗಳಿಗೆ ಲೈಸೆನ್ಸ್ ಕೊಡಲು ನಿರ್ಧರಿಸಲಾಯಿತು. ಯಾರಾದರೂ ಲೈಸೆನ್ಸ್ ಇಲ್ಲದೆ ಅಲೆಮಾರಿಗಳಾಗಿ ತಿರುಗಲಾರಂಭಿಸಿದರೆ ಅವರನ್ನು ತಕ್ಷಣವೇ ಬಂಧಿಸಿ ವಿಚಾರಣೆಗೆ ಒಳಪಡಿಸಲಾಗುತ್ತಿತ್ತು’[೯೩]. ತಮ್ಮದೇ ನೆಲದಲ್ಲಿ ಸ್ವಚ್ಛಂದವಾಗಿ ಬದುಕುತ್ತಿದ್ದ ಸಮುದಾಯಗಳು ಈ ಹೊಸ ಕಾಯ್ದೆಯಿಂದ ಅನ್ಯರಾಗಿ, ಅಪರಾಧಿಗಳಾಗಿ ಬದುಕುವಂತಾಯಿತು. ಜೊತೆಗೆ ತಮ್ಮ ಹಕ್ಕುಗಳ ಕುರಿತು ಈ ಸಮುದಾಯಗಳು ಎಚ್ಚೆತ್ತುಕೊಂಡವು. ಕಾಡಿನ ಅಂಚಿನಲ್ಲಿ ಬದುಕುತ್ತ ಅಲೆಮಾರಿ ವ್ಯಾಪಾರಿಗಳಿಂದ ಮುಖ್ಯವಾಹಿನಿಯ ಜೊತೆಗೆ ವಾಣಿಜ್ಯ ಸಂಬಂಧಗಳನ್ನಿಟ್ಟುಕೊಂಡಿದ್ದ ಆದಿವಾಸಿಗಳೂ ಸಹ ಈ ಕಾಯ್ದೆಯ ಕೆಂಗಣ್ಣಿಗೆ ಗುರಿಯಾದರು. ‘ಕಂಪನಿ ಆಡಳಿತಕ್ಕೂ ಮುನ್ನ ಭಾರತದ ಆದಿವಾಸಿಗಳು ತಮ್ಮ ತಮ್ಮ ಪ್ರದೇಶಗಳಲ್ಲಿ ಮುಕ್ತವಾದ ಮತ್ತು ತಮ್ಮದೇ ಆದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಬದುಕನ್ನು ಕಟ್ಟಿಕೊಂಡಿದ್ದರು. ಜೊತೆಗೆ ಆಯಾ ಸಾಮ್ರಾಜ್ಯಗಳ ಗಡಿಗಳನ್ನು ರಕ್ಷಿಸುವ ಹೊಣೆಯನ್ನು ಹೊತ್ತ ಆದಿವಾಸಿಗಳು ಕಾಡಿನಲ್ಲಿದ್ದುಕೊಂಡೇ ತಾವು ವಾಸಿಸುವ ಪ್ರದೇಶದ ರಕ್ಷಣೆ ಮಾಡುತ್ತಿದ್ದರು. ಶಿವಾಜಿಯ ಸೈನ್ಯದಲ್ಲಿ ಈ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಿದವರು ಆದಿವಾಸಿಗಳು. ಆದರೆ ಕಂಪನಿ ಆಡಳಿತದ ಸಂದರ್ಭದಲ್ಲಿ ಯಾವುದೇ ದೇಶಿ ಸಂಸ್ಥಾನವನ್ನು ಬ್ರಿಟೀಷ್ ಸೈನ್ಯ ವಶಪಡಿಸಿಕೊಳ್ಳಲು ಹೊರಟಾಗ ಮೊದಲು ಈ ಸೈನ್ಯಕ್ಕೆ ಮುಖಾಮುಖಿಯಾಗುತ್ತಿದ್ದುದು ಈ ಆದಿವಾಸಿಗಳು’[೯೪]. ಮುಖ್ಯವಾಹಿನಿಯ ಸಮಾಜವು ಅನೇಕ ಅನಿವಾರ್ಯತೆಗಳಿಂದಾಗಿ ಕಂಪನಿ ಆಡಳಿತದ ಜೊತೆಗೆ ರಾಜಿ ಒಪ್ಪಂದಗಳನ್ನು ಮಾಡಿಕೊಂಡರೂ ಈ ಸೇವಕ ವರ್ಗ ಮತ್ತು ಆದಿವಾಸಿಗಳು ಪ್ರತಿ ಹೋರಾಟ ನಡೆಸಲೇಬೇಕಿತ್ತು. ಹೀಗೆ ಕಂಪನಿ ಆಡಳಿತದ ವಿರುದ್ಧ ತಿರುಗಿ ಬಿದ್ದ ಆದಿವಾಸಿಗಳನ್ನು ಮತ್ತು

ಸೇವಕ ವರ್ಗಕ್ಕೆ ಸೇರಿದ ಸಮುದಾಯಗಳನ್ನು ನಿಯಂತ್ರಿಸಲೆಂದೇ ಈ ಕ್ರಿಮಿನಲ್ ಟ್ರೈಬ್ಸ್ ಆಕ್ಟ್‌ನ್ನು ರೂಪಿಸಲಾಯಿತು ಮತ್ತು ಕಂಪನಿ ಸೈನ್ಯವು ಈ ಸಮುದಾಯಗಳನ್ನು ಹಿಂಸಾತ್ಮಕವಾಗಿಯೂ ಹತ್ತಿಕ್ಕಿತು.

ಈ ಅಪರಾಧಿ ಬುಡಕಟ್ಟುಗಳ ಕಾಯ್ದೆಯಡಿ ಬಂದ ಸಮುದಾಯಗಳನ್ನು ಜಿ.ಎನ್. ದೇವಿ ಹೀಗೆ ಪಟ್ಟಿ ಮಾಡಿದ್ದಾರೆ. 'ಅಲೆಮಾರಿ ಗಾಯಕ ಪರಂಪರೆಯ ಸಮುದಾಯಗಳು, ಫಕ್ಕೀರರು, ಚಿಕ್ಕ ವರ್ತಕರು, ಪ್ರದರ್ಶನ ಕಲೆಗಳನ್ನು ಅವಲಂಬಿಸಿದ್ದ ಸಮುದಾಯಗಳು, ಸಾಮಾನು ಸರಂಜಾಮುಗಳನ್ನು ಸಾಗಿಸುತ್ತಿದ್ದವರನ್ನು ಈ ಅಪರಾಧಿ ಬುಡಕಟ್ಟುಗಳ ಕಾಯ್ದೆಯಡಿ ತರಲಾಯಿತು. ಈ ಕಾಯ್ದೆ ಮೊದಲ ಬಾರಿಗೆ ಜಾರಿಗೆ ಬಂದದ್ದು ಉತ್ತರ ಭಾರತ, ಮಧ್ಯಭಾರತ ಮತ್ತು ವಾಯುವ್ಯ ಭಾರತದ ರಾಜ್ಯಗಳಲ್ಲಿ.'[೬೫] ಕಾನೂನುಬದ್ಧ ಜಮೀನ್ದಾರಿ ಪದ್ಧತಿಯಿಂದಾಗಿ ಮತ್ತು ವಾಣಿಜ್ಯೀಕೃತ ಕೃಷಿ ಜಾರಿಗೆ ಬಂದ ಮೇಲೆ ಕರಕುಶಲ ಕರ್ಮಿಗಳು ಮತ್ತು ಪ್ರದರ್ಶಕ ಕಲೆಗಳನ್ನು ಅವಲಂಬಿಸಿದ್ದ ಸಮುದಾಯಗಳ ಆರ್ಥಿಕ ವ್ಯವಸ್ಥೆಯೇ ಕುಸಿದು ಬಿದ್ದಿತು. ಯಾವ ವರ್ಗವನ್ನು ತಾವು ಆರ್ಥಿಕವಾಗಿ ಅವಲಂಬಿಸಿದ್ದರೋ, ಆ ಆಳುವ ವರ್ಗ ಹೆಚ್ಚು ಅಮಾನವೀಯವೂ, ಯಾಂತ್ರಿಕವೂ ಆದ ಸಮಾಜವನ್ನು ರೂಪಿಸಲಾರಂಭಿಸಿದ ಮೇಲೆ ಈ ಸಮುದಾಯಗಳ ಬದುಕುಗಳು ದಿಕ್ಕೆಟ್ಟು ಹೋದವು. ಕೊಡುಕೊಳುವಿಕೆಯ ಮೇಲೆ ನಿಂತಿದ್ದ ಭಾರತದ ಪಾರಂಪರಿಕ ಕೃಷಿಯು ಬಂಡವಾಳಶಾಹಿ ಕೃಷಿಯಾಗಿ ಮಾರ್ಪಟ್ಟ ಮೇಲೆ, ಅದು ತನ್ನ ಪರಂಪರೆಯ ಗುಣಗಳನ್ನು ಕಳಚಿಕೊಂಡಿತು. ಹೆಚ್ಚೂ ಕಡಿಮೆ ಈ ಸೇವಕ ವರ್ಗವನ್ನು ಪೋಷಿಸಿಕೊಂಡು ಬರುತ್ತಿದ್ದ ಊಳಿಗಮಾನ್ಯ ವ್ಯವಸ್ಥೆಯು ಕಂಪನಿ ಆಡಳಿತದ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯಲ್ಲಿ ಕರಗಿ ಹೋಯಿತು. ಬಂಡವಾಳಶಾಹಿ ಕೃಷಿಗೆ ಆಧಿಕ ಉತ್ಪಾದನೆ ಮತ್ತು ಅಧಿಕ ಲಾಭ ಮಾತ್ರ ಗುರಿಯಾಗಿತ್ತೇ ವಿನಹ, ಉಳಿದ ವಿಷಯಗಳು ಗೌಣವಾದವು. ಅಲ್ಲದೆ ಕೃಷಿಯಲ್ಲಿ ಯಂತ್ರಗಳನ್ನು ಬಳಸಲು ಪ್ರಾರಂಭಿಸಿದ ಮೇಲೆ ಕರಕುಶಲಕರ್ಮಿಗಳು, ವ್ಯವಸಾಯಿ ಸಂರಚನೆಯ ಪಾರಂಪರಿಕ ಸಂಬಂಧಗಳಿಂದ ಕಳಚಿಬಿದ್ದರು. ಅಲ್ಲದೆ ಮನರಂಜನೆಯ ಮಾಧ್ಯಮಗಳೂ ಹೆಚ್ಚು ತಾಂತ್ರೀಕೃತವಾದ ಮೇಲೆ ಪಾರಂಪರಿಕ ಮನರಂಜಕರು ಇಡಿಯಾಗಿ ತಮ್ಮ ರೂಢಿಗತ ಅವಲಂಬನೆಯಿಂದ ವಂಚಿತರಾದರು. ಈ ಹಂತದಲ್ಲಿ ಇಂತಹ ಸಮುದಾಯಗಳು ಅನಿವಾರ್ಯವಾಗಿ ಅಲೆಮಾರಿಗಳಾಗಿ ಪರಿವರ್ತನೆಗೊಂಡವು. ಅಲ್ಲದೆ ತಮ್ಮ ಪಾರಂಪರಿಕ ಅವಲಂಬನೆಯನ್ನು ನಾಶ ಮಾಡಿದ ಆಧುನಿಕ ವ್ಯವಸ್ಥೆಯ ಮೇಲೆ ಇವರು ಸಹಜವಾಗಿಯೇ ಕೋಪಗೊಂಡಿದ್ದರು, ಸಮಯ ಸಿಕ್ಕಾಗಲೆಲ್ಲಾ ಈ ದಿಕ್ಕೆಟ್ಟ ಸಮುದಾಯಗಳು ವ್ಯವಸ್ಥೆಯನ್ನು ಉಗ್ರವಾಗಿ ಪ್ರತಿಭಟಿಸಲಾರಂಭಿಸಿದವು. 'ಉತ್ತರಭಾರತದಲ್ಲಿ ರಜಪೂತರ ಅವನತಿಯ ನಂತರ 'ಅಪರಾಧಿ ಗುಂಪುಗಳು' ಎಂದು ಹೆಸರಿಸಲ್ಪಡುವ ಸಮುದಾಯಗಳು ಅಸ್ತಿತ್ವಕ್ಕೆ ಬಂದವು. ಈ ಗುಂಪುಗಳು ತಮ್ಮ ಮೂಲವನ್ನು ರಜಪೂತರೊಂದಿಗೆ ಗುರುತಿಸಿಕೊಳ್ಳುತ್ತವೆ. ರಜಪೂತ ಆಳ್ವಿಕೆ ಕೊನೆಗೊಂಡು, ಮುಸ್ಲಿಂ ಆಳ್ವಿಕೆಯ ಮತ್ತು ಕಂಪನಿ ಆಡಳಿತದ ಸಂದರ್ಭದಲ್ಲಿ ಇಲ್ಲಿನ ಕೃಷಿಕ ಸಮುದಾಯಗಳೂ ಸಹ ತಮ್ಮ ಕೃಷಿ ಜಮೀನುಗಳನ್ನು ಕಳೆದುಕೊಂಡುವು. ರಜಪೂತ ಸೈನ್ಯದಲ್ಲಿ ಸೈನಿಕರಾಗಿದ್ದ ಮತ್ತು ಸೈನಿಕರಿಗೆ ಸಹಾಯಕರಾಗಿದ್ದ ಅನೇಕ ಸಮುದಾಯಗಳು ನೆಲೆಕಳೆದುಕೊಂಡವು. ಈ ನೆಲೆ ಕಳೆದುಕೊಂಡ ಸಮುದಾಯಗಳೇ ನಂತರ ಅಪರಾಧಿ ಚಟುವಟಿಕೆಗಳಲ್ಲಿ ತೊಡಗಿದವು'[೬೬] ಹೀಗೆ ಉತ್ತರ

ಭಾರತದಲ್ಲಿ ತಮ್ಮ ಆರ್ಥಿಕ ನೆಲೆಗಳನ್ನು ಕಳೆದುಕೊಂಡ ಅನೇಕ ಸಮುದಾಯಗಳು ಕಂಪನಿ ಆಡಳಿತದ ವಿರುದ್ಧ ಸಹಜವಾಗಿಯೇ ತಿರುಗಿಬಿದ್ದವು. ಅಲ್ಲದೆ ಸ್ಥಳೀಯ ಪಾಳೇಗಾರರ ಸೈನ್ಯದಲ್ಲಿ ಈ ಪ್ರತಿಭಟನೆಗಳು ಕಂಪನಿ ಆಡಳಿತದ ವಿರುದ್ಧ ಉಗ್ರವಾಗಿಯೇ ವ್ಯಕ್ತವಾಗತೊಡಗಿದವು. ಈ ಹಂತದಲ್ಲಿ ಕಂಪನಿ ಆಡಳಿತವು ದೇಶೀಯ ಸಂಸ್ಥಾನಗಳನ್ನು ವಶಪಡಿಸಿಕೊಳ್ಳಲು ಅನೇಕ ಕಾನೂನುಗಳನ್ನೇ ಜಾರಿಗೆ ತಂದಿತು. ಸಹಾಯಕ ಸೈನ್ಯ ಪದ್ಧತಿ, ರೌಲತ್ ಕಾಯ್ದೆ ಇವೆಲ್ಲ ಸ್ಥಳೀಯ ಸೈನ್ಯವನ್ನು ರದ್ದುಪಡಿಸುವ ಮತ್ತು ಸ್ಥಳೀಯರು ಆಯುಧಗಳನ್ನು ಹೊಂದುವುದನ್ನು ನಿಷೇಧಿಸುವುದಕ್ಕಾಗಿಯೇ ರೂಪಗೊಂಡ ಕಾಯ್ದೆಗಳಾಗಿವೆ.

ಅಲೆಮಾರಿಗಳ ಅಪರಾಧೀ ಪಯಣ !

'೧೭೭೪ ಮತ್ತು ೧೮೭೧ರ ನಡುವಿನ ಭಾರತದ ಇತಿಹಾಸ ಅತ್ಯಂತ ರಕ್ತಪಾತದಿಂದ ಕೂಡಿದ ಇತಿಹಾಸವಾಗಿದೆ. ಭಾರತದ ಸ್ಥಳೀಯ ರಾಜ್ಯಗಳ ವಿರುದ್ಧ ಈ ಅವಧಿಯಲ್ಲಿ ಕಂಪನಿ ಆಡಳಿತವು ಅತ್ಯಂತ ಕ್ರೂರ ಯುದ್ಧಗಳನ್ನು ಮಾಡಿತು. ಆಂಗ್ಲೋ ಮರಾಠ ಯುದ್ಧ, ಮೈಸೂರು ಯುದ್ಧ, ಹೋಳ್ಕರ ಶರಣಾಗತಿ, ಪೇಶ್ವೆಗಳ ಸೋಲು, ವೆಲ್ಲೂರಿನ ಸಿಪಾಯಿದಂಗೆ, ಮೈಸೂರು ಮತ್ತು ಕೂರ್ಗ್‌ಗಳನ್ನು ವಶಪಡಿಸಿಕೊಂಡದ್ದು, ಸಿಂಧ್, ಸಿಖ್, ಔಧ್ ಪ್ರದೇಶಗಳನ್ನು ಯುದ್ಧಗಳ ಮೂಲಕ ವಶಪಡಿಸಿಕೊಂಡದ್ದು ಮತ್ತು ೧೮೫೭ರಲ್ಲಿ ನಡೆದ ಸಿಪಾಯಿ ದಂಗೆಗಳು, ಹಲವು ಸ್ಥಳೀಯ ಸಮುದಾಯಗಳನ್ನು ನೆಲೆ ಇಲ್ಲದಂತೆ ಮಾಡಿದವು. ಈ ಸಮುದಾಯಗಳೇ ಮುಂದೆ ಅಲೆಮಾರಿಗಳಾಗಿ ಪರಿವರ್ತಿತವಾದವು.'[೬೭] ಮುಖ್ಯವಾಗಿ ಆಧುನಿಕಪೂರ್ವ ಭಾರತದ ಅನೇಕ ಪಾಳೆಪಟ್ಟುಗಳು ಮತ್ತು ಸ್ಥಳೀಯ ರಾಜರು ಅನಿವಾರ್ಯವಾಗಿ ಕಂಪನಿ ಆಡಳಿತದ ಜೊತೆ ಕೈಜೋಡಿಸಬೇಕಿತ್ತು. ಇಲ್ಲವೆ ಅವರೊಡನೆ ಕಾದಾಡಬೇಕಿತ್ತು. ಈ ಎರಡೂ ಸಂದರ್ಭದಲ್ಲಿ ದೇಶೀಯ ಶ್ರಮ ಜೀವಿಗಳು ಆರ್ಥಿಕವಾಗಿ ಕುಸಿದು ಹೋಗುವುದು ಅನಿವಾರ್ಯವಾಗಿತ್ತು. ಕಂಪನಿ ಆಡಳಿತವನ್ನು ಒಪ್ಪಿಕೊಂಡರೆ ಅದರ ಸೈನ್ಯವನ್ನು ಸ್ಥಳೀಯ ರಾಜರು ಸಾಕಬೇಕಿತ್ತು. ಅಕಸ್ಮಾತ್ ಕಂಪನಿ ಆಡಳಿತದ ವಿರುದ್ಧ ತಿರುಗಿ ಬಿದ್ದು ಕಾದಾಡಿದರೆ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವ ಅಪಾಯದಲ್ಲಿ ಇಂಡಿಯಾದ ಎಲ್ಲ ಸ್ಥಳೀಯ ಸಂಸ್ಥಾನಗಳು ಸಿಲುಕಿ ಕೊಂಡವು. ಆದರೆ ಬಹುತೇಕ ಎಲ್ಲ ಸಂಸ್ಥಾನಗಳನ್ನು ಬ್ರಿಟೀಷ್ ಆಡಳಿತ ತನ್ನ ತಂತ್ರಗಳ ಮೂಲಕ ವಶಪಡಿಸಿಕೊಳ್ಳುತ್ತಲೇ ಹೋಯಿತು. ತಿರುಗಿಬಿದ್ದ ಸಮುದಾಯಗಳನ್ನು ಕಾನೂನುಗಳ ಮೂಲಕ ಹತ್ತಿಕ್ಕಲು ಕೆಲವು ನಿಯಮಗಳನ್ನು ರೂಪಿಸಿತು. ಈ ಹಂತದಲ್ಲಿಯೇ Criminal Tribes Act ಜಾರಿಗೆ ಬಂದಿತು.

'೧೮೭೧ರಲ್ಲಿ Criminal Tribes Act ಜಾರಿಗೆ ಬಂದರೂ, ಉತ್ತರ ಭಾರತದಲ್ಲಿ ಕಂಪನಿ ಸರಕಾರವು ೧೭೯೩ರಲ್ಲಿಯೇ ಕೆಲವು ಸಮುದಾಯಗಳನ್ನು ಪಟ್ಟಿ ಮಾಡಿ ಇವು ಅಪಾಯಕಾರಿಗಳೆಂದು ಗುರುತಿಸಿತು. ಆ ಪಟ್ಟಿ ನಮಗೆ ಈಗ ಲಭ್ಯವಿಲ್ಲ. ಆದರೆ ಅತ್ಯಂತ ಶಾಂತವಾಗಿದ್ದ, ಶ್ರಮಜೀವಿಗಳೇ ಬದುಕುತ್ತಿದ್ದ ರೋಹಿಲ್‌ಖಂಡ್‌ನ್ನು ವಶಪಡಿಸಿಕೊಳ್ಳಲು ಬ್ರಿಟೀಷ್‌ರು ೧೭೭೦ರಲ್ಲಿ ಒಂದು ಭೀಕರ ಯುದ್ಧವನ್ನೇ ನಡೆಸಿದರು. ಭಯಂಕರ ರಕ್ತಪಾತ ಮತ್ತು ಸಾವುನೋವುಗಳು ಸಂಭವಿಸಿದವು. ರೋಹಿಲ್‌ಖಂಡ್ ಬ್ರಿಟೀಷ್ ವಶವಾಯಿತು. ಆದರೆ ಅಲ್ಲಿ ಮುಗ್ಧವಾಗಿ ಬದುಕಿ ಬಂದಿದ್ದ ದುಡಿಮೆಗಾರರು ದಿಕ್ಕೆಟ್ಟು ಹೋದರು. ಅಲ್ಲದೆ

ಇವರು ಕಂಪನಿ ಆಡಳಿತದ ಮೇಲೆ ಉಗ್ರವಾದ ಸಿಟ್ಟನ್ನು ಬೆಳೆಸಿಕೊಂಡರು. ಬ್ರಿಟೀಷರ ಮೇಲೆ ಸೇಡುತೀರಿಸಿಕೊಳ್ಳಲು ಹವಣಿಸಲಾರಂಭಿಸಿದರು. ಮತ್ತು ಇಲ್ಲಿನ ಬಹುತೇಕ ಶ್ರಮಜೀವಿಗಳು ಮತ್ತು ಆದಿವಾಸಿಗಳು ತಮ್ಮ ನೆಲೆಗಳನ್ನು ಕಳೆದುಕೊಂಡು ಅಲೆಮಾರಿಗಳಾದರು.'[೯೮] ಕಂಪನಿ ಆಡಳಿತ ಪ್ರಬಲವಾಗುತ್ತಿದ್ದಂತೆ ಈ ದೇಶದ ಸ್ಥಳೀಯ ರಾಜರು ನಿವೃತ್ತರಾಗಿ ಪಿಂಚಣಿ ಪಡೆಯಲಾರಂಭಿಸಿದರು. ಭೂಮಾಲಿಕರು ರಾಜಿ ಮಾಡಿಕೊಂಡು ತಮ್ಮ ಆಸ್ತಿಗಳನ್ನು ರಕ್ಷಿಸಿಕೊಂಡರು. ಆದರೆ ಎಲ್ಲವನ್ನೂ ಕಳೆದುಕೊಂಡದ್ದು ಶ್ರಮಜೀವಿ ವರ್ಗ ಮಾತ್ರ. ಕಂಪನಿ ಆಡಳಿತದ ವಿರುದ್ಧ ಇವರು ಹೋರಾಡಲೇಬೇಕಾದ ಚಾರಿತ್ರಿಕ ಅನಿವಾರ್ಯತೆ ಏರ್ಪಟ್ಟಿತು. ಮತ್ತು ಈ ಹೋರಾಟ ಸ್ಪಷ್ಟ ರಾಜಕೀಯ ತಳಹದಿಯ ಮೇಲೆ ರೂಪಗೊಂಡಿತ್ತು. ಮನುಷ್ಯನ ಸಹಜ ಹಕ್ಕುಗಳಾದ, ಮಾತನಾಡುವ, ಪ್ರಶ್ನಿಸುವ, ಸ್ವತಃ ತಮ್ಮನ್ನು ಆಳಿಕೊಳ್ಳುವ, ತಮ್ಮ ಆಸ್ತಿ ರಕ್ಷಣೆ ಮಾಡಿಕೊಳ್ಳುವ ಮತ್ತು ತಮ್ಮ ಅನನ್ಯತೆಗಳನ್ನು ಉಳಿಸಿಕೊಳ್ಳುವ ಜನತಾಂತ್ರಿಕ ಆಶಯಗಳಿಂದಲೇ ಈ ಹೋರಾಟಗಳು ರೂಪಗೊಂಡಿದ್ದವು. ಆದರೆ ಅರಾಜಕಗೊಂಡಿದ್ದ ಭಾರತದ ರಾಜಕೀಯ ಸಂದರ್ಭವು ಶೂನ್ಯಾವಸ್ಥೆಗೆ ತಲುಪಿಬಿಟ್ಟಿತ್ತು. ಆದರೆ ಅಲ್ಲಲ್ಲಿ ಜೀವಂತವಿದ್ದ ಸ್ವಾಭಿಮಾನಿ ಸಂಸ್ಥಾನಗಳು ಮಾತ್ರ ಬ್ರಿಟೀಷ್ ಆಡಳಿತದ ವಿರುದ್ಧ ಉಗ್ರವಾಗಿಯೇ ತಿರುಗಿ ಬೀಳುತ್ತಿದ್ದವು. 'ಯಾವ ಸಮುದಾಯಗಳು ಸ್ಥಳೀಯ ರಾಜರ ಸೈನ್ಯದಲ್ಲಿದ್ದು ಕಂಪನಿ ಆಡಳಿತದ ವಿರುದ್ಧ ಹೋರಾಡುತ್ತಿದ್ದವೋ ಆ ಎಲ್ಲ ಸಮುದಾಯಗಳನ್ನು ಕಂಪನಿ ಸರಕಾರ ಯುದ್ಧಾನಂತರ ಅನೇಕ ಬಗೆಯಲ್ಲಿ ಹಿಂಸಿಸುತ್ತಿತ್ತು. ಉದಾ. ಹೈದರ್ ಆಲಿ ಮತ್ತು ಟಿಪ್ಪುವಿನ ಸೋಲಿನ ನಂತರ ಅವರ ಸೈನ್ಯವನ್ನು ಬ್ರಿಟೀಷರು ಇನ್ನಿಲ್ಲದಂತೆ ನಾಶಮಾಡಿದರು. ಅವರಿಗೆ ಭಾರತದ ಸಮಾಜದ ಕುರಿತು ಸರಿಯಾದ ಕಲ್ಪನೆಯೇ ಇರಲಿಲ್ಲ. ಅಲೆಮಾರಿ ಪಶುಪಾಲಕರು, ವೃತ್ತಿ ಸಂಗೀತಗಾರರು, ಆದಿವಾಸಿಗಳು, ದೊಂಬರಾಟದವರು, ಜಿಪ್ಸಿಗಳು, ಹಾವಾಡಿಸುವವರು, ಅಲೆಮಾರಿ ವೈದ್ಯರು, ಈ ಸಮುದಾಯಗಳನ್ನು ಬ್ರಿಟೀಷ್‌ರು ಅರ್ಥಮಾಡಿಕೊಳ್ಳಲಿಲ್ಲ. ಈ ಸಮುದಾಯಗಳನ್ನು ಅವರು ಸದಾ ಅನುಮಾನಿಸುತ್ತಲೇ ಬಂದರು. ಸಹಜವಾಗಿಯೇ ಈ ಸಮುದಾಯಗಳು ಅಪರಾಧಿ ಸಮುದಾಯಗಳ ಪಟ್ಟಿಗೆ ಸೇರಿಸಲ್ಪಟ್ಟವು.'[೯೯]

೧೮೭೧ರಲ್ಲಿ ಕ್ರಿಮಿನಲ್ ಟ್ರೈಬ್ಸ್ ಕಾಯ್ದೆ ಸಿದ್ಧವಾಗಿ ಜಾರಿಗೆ ಬಂದಿತು. ದುರಂತವೆಂದರೆ ಈ ಪಟ್ಟಿಯಲ್ಲಿದ್ದ ಸಮುದಾಯಗಳನ್ನು ಕಂಪನಿ ಸರಕಾರವು ಜನ್ಮತಃ ಅಪರಾಧಿಗಳು (Born criminals) ಎಂದು ಪರಿಗಣಿಸಿಬಿಟ್ಟಿತು. ಪೋಲೀಸರಿಗೆ ತರಬೇತಿ ಕೊಡುತ್ತಿದ್ದ ಸಂದರ್ಭದಲ್ಲಿ, ಅಲ್ಲಿನ ಪಠ್ಯಕ್ರಮದಲ್ಲಿ, ಅಪರಾಧಿ ಬುಡಕಟ್ಟುಗಳನ್ನು ಗುರುತಿಸುವುದು ಮತ್ತು ಕಾನೂನಿನ ಮೂಲಕ ಅವರನ್ನು ಹೇಗೆ ನಿಯಂತ್ರಿಸುವುದು ಎಂಬ ಕುರಿತು ಪಾಠಗಳನ್ನು ಸೇರಿಸಿತು. ತಮಾಷೆಯೆಂದರೆ, ಭಾರತಕ್ಕೆ ಅಧಿಕಾರ ಹಸ್ತಾಂತರವಾದ ನಂತರ ೧೯೫೨ರಲ್ಲಿ ಈ ಕಾಯ್ದೆ ಭಾರತದಲ್ಲಿ ರದ್ದಾದರೂ ಸಹ ಪೋಲೀಸ್ ತರಬೇತಿಯ ಪಠ್ಯಕ್ರಮದಿಂದ 'ಅಪರಾಧಿ ಬುಡಕಟ್ಟು ಕಾಯ್ದೆ'ಯ ಪಾಠಗಳು ತೊಲಗಲಿಲ್ಲ. ಅವರನ್ನು ಸ್ವತಂತ್ರ ಭಾರತದ ಸರಕಾರವು 'ಪಾರಂಪರಿಕ ಅಪರಾಧಿ ಕಾಯ್ದೆ'ಯ (Habitual offender Act) ಅಡಿಯಲ್ಲಿ ಗುರುತಿಸಬೇಕೆಂದು ತಮ್ಮ ಪೋಲೀಸರಿಗೆ ಬೋಧಿಸಲಾರಂಭಿತು. ಈ ಕಾಯ್ದೆ 'ವ್ಯಕ್ತಿ ಅಥವಾ

ಗವರ್ನರ್ ಜನರಲ್ ಇನ್ ಕೌನ್ಸಿಲ್, ಅಪರಾಧಿ ಸಮುದಾಯ ಎಂದು ಪರಿಗಣಿಸಲ್ಪಟ್ಟ ಸಮುದಾಯದ ವರದಿಯ ಪರಿಶೀಲನೆಯ ನಂತರ ಅಂತಹ ಸಮುದಾಯಗಳ ಅಪರಾಧಿ ಸಮುದಾಯಗಳೆಂದು ಪರಿಗಣಿತವಾಗುತ್ತವೆ. ಮತ್ತು ಘೋಷಣೆಯನ್ನು ಸ್ಥಳೀಯ ಸರಕಾರಗಳು ಗೆಜೆಟ್‌ನಲ್ಲಿ ಪ್ರಕಟಿಸುವುದು ಮತ್ತು ಈ ಕೌನ್ಸಿಲ್‌ನ ಪ್ರಕಟನೆಯ ನಂತರ ಪ್ರಕಟನೆಯಲ್ಲಿ ಉಲ್ಲೇಖಿತವಾದ ಸಮುದಾಯ, ಗುಂಪು ಅಥವಾ ವರ್ಗಗಳು ಅಪರಾಧಿ ಸಮುದಾಯಗಳೆಂದು ಪರಿಗಣಿಸಲ್ಪಡುತ್ತವೆ.

೬. *ಅಲೆಮಾರಿ ಸಮುದಾಯಗಳನ್ನು ಸ್ಥಳೀಯ ಸರಕಾರ ಸೂಚಿತ ಪ್ರದೇಶದಲ್ಲಿ ನೆಲೆ ನಿಲ್ಲಿಸುವುದು.*

ಯಾವುದೇ ಸಮುದಾಯ, ಗುಂಪು ಅಥವಾ ವರ್ಗಗಳು ಅಪರಾಧಿ ಸಮುದಾಯಗಳೆಂದು ಪರಿಗಣಿಸಲ್ಪಟ್ಟರೆ ಅಥವಾ ಪರಿಗಣಿಸಲ್ಪಡುವ ನಿಯಮಗಳ ಪ್ರಕಾರ ಸದರಿ ಸಮುದಾಯಗಳು ವಾಸಿಸುತ್ತಿದ್ದರೆ, ಆ ಸಮುದಾಯಗಳು ಅಲೆಮಾರಿಗಳಾಗಿದ್ದು, ನಿಶ್ಚಿತ ವಾಸಸ್ಥಳವಿಲ್ಲದಿದ್ದರೆ, ಸ್ಥಳೀಯ ಸರಕಾರವು ಸೂಚಿಸಿದ ಪ್ರದೇಶದಲ್ಲಿ ಸದರಿ ಸಮುದಾಯಗಳು ನೆಲೆ ನಿಲ್ಲಬೇಕಾಗುತ್ತದೆ.

೭. *ಬೇರೆ ಪ್ರದೇಶಕ್ಕೆ ಸ್ಥಳಾಂತರಿಸುವುದು.*

ಯಾವುದೇ ಸಮುದಾಯ, ಗುಂಪು ಅಥವಾ ವರ್ಗಗಳು, ಅಪರಾಧಿ ಸಮುದಾಯಗಳೆಂದು ಪರಿಗಣಿಸಲ್ಪಟ್ಟಿದ್ದರೆ, ಅಂತಹ ಸಮುದಾಯಗಳು ಒಂದು ಸ್ಥಳದಲ್ಲಿ ವಾಸಿಸುತ್ತಿದ್ದರೆ, ಆ ಸಮುದಾಯಗಳ ವಾಸಸ್ಥಳವನ್ನು ಸ್ಥಳೀಯ ಸರಕಾರಗಳು ಬದಲಿಸಬಹುದು. ಆ ಸ್ಥಳದಿಂದ ಸದರಿ ಸಮುದಾಯವನ್ನು ಸ್ಥಳಾಂತರಿಸಬಹುದು.

೮. *ಸ್ಥಳಾಂತರಿತ ವ್ಯಕ್ತಿಗಳ ವರ್ಗಾವಣೆಯ ನೋಂದಣಿ.*

ಈ ಕಾಯ್ದೆಯ ಪ್ರಕಾರ ಸ್ಥಳಾಂತರಗೊಂಡ ವ್ಯಕ್ತಿಗಳ ಹೆಸರು ಮತ್ತು ವಿವರಗಳನ್ನು ಜಿಲ್ಲಾ ಪೋಲೀಸ್ ವರಿಷ್ಠನಿಗೆ ನೀಡುವುದು ಮತ್ತು ಸ್ಥಳಾಂತರಗೊಂಡು, ನೆಲೆನಿಲ್ಲುವ ಸ್ಥಳದ ಜಿಲ್ಲೆಯ ವರಿಷ್ಠಾಧಿಕಾರಿಗಳಿಗೂ ಈ ವ್ಯಕ್ತಿಗಳ ವಿವರಗಳನ್ನು ಸೆಕ್ಷನ್ ೧೧ ಮತ್ತು ೧೨ ರ ಪ್ರಕಾರ ನೀಡುವುದು.

೯. *ಗ್ರಾಮದ ಮುಖ್ಯಸ್ಥ ಮತ್ತು ಗ್ರಾಮದ ಕಾವಲುಗಾರನ ಕರ್ತವ್ಯಗಳು.*

ಅಪರಾಧಿ ಸಮುದಾಯವೆಂದು ಪರಿಗಣಿಸಲ್ಪಟ್ಟ ಯಾವುದೇ ಸಮುದಾಯ, ಗುಂಪು ಅಥವಾ ವರ್ಗಗಳು ಅಥವಾ ವ್ಯಕ್ತಿಗಳು ಯಾವುದೇ ಗ್ರಾಮದ ಬಳಿ ಬಂದು ನೆಲೆಸಿದಲ್ಲಿ, ಈ ಸಮುದಾಯಗಳು ನೆಲೆನಿಂತ ಜಾಗದ ಒಡೆಯ, ಗ್ರಾಮದ ಮುಖ್ಯಸ್ಥ ಇಲ್ಲವೇ ಗ್ರಾಮದ ಕಾವಲುಗಾರ ಅಂತಹ ಸಮುದಾಯಗಳ ಕುರಿತ ವಿವರಗಳನ್ನು ತಕ್ಷಣವೇ ಹತ್ತಿರದ ಪೋಲೀಸ್ ಠಾಣೆಗೆ ನೀಡುವುದು.[೧೦೨]

೧೦. *ಅಪರಾಧಿ ಸಮುದಾಯಗಳ ಅಲೆಮಾರಿತ್ವ ಮತ್ತು ನೆಲೆನಿಲ್ಲುವುದನ್ನು ನಿರ್ಬಂಧಿಸುವ ಅಧಿಕಾರ.*

ಸರಕಾರದಿಂದ ಕ್ರಿಮಿನಲ್ ಸಮುದಾಯಗಳೆಂದು ಪರಿಗಣಿಸಲ್ಪಟ್ಟ ಸಮುದಾಯ ಅಥವಾ ಆ ಸಮುದಾಯಗಳ ಭಾಗವಾದ ವ್ಯಕ್ತಿಗಳು.

ಅ. ಸಮುದಾಯದ ಅಥವಾ ವ್ಯಕ್ತಿಗಳ ತಿರುಗಾಟವನ್ನು ನಿಶ್ಚಿತ ಪ್ರದೇಶಕ್ಕೆ ನಿರ್ಬಂಧಿಸುವುದು.

ಆ. ಇಲ್ಲವೆ ಇಂತಹ ನಿಶ್ಚಿತ ಸ್ಥಳದಲ್ಲಿ, ಇಂತಹ ಅಪರಾಧಿ ಸಮುದಾಯವು ನೆಲೆನಿಂತ ಕುರಿತು ಗೆಜೆಟ್ ಇಲಾಖೆಯು ಪ್ರಕಟಣೆ ಹೊರಡಿಸುವುದು. ಇಂತಹ ಸಮುದಾಯವು ಇಂತಿಂತಹ ಪ್ರದೇಶಗಳಲ್ಲಿ ವಾಸಿಸುತ್ತಿದೆ ಎಂಬ ನಿಶ್ಚಿತ ಪ್ರಕಟಣೆಯು ದಾಖಲಾಗಬೇಕು.

೧೧. *ಅಪರಾಧಿ ಸಮುದಾಯಗಳಿಗೆ ಸೇರಿದ ಜನರು ಸೂಚಿಸಲ್ಪಟ್ಟ ವಾಸಸ್ಥಳದಲ್ಲಿ ಇದ್ದಾರೆಯೇ ಎಂದು ಪರೀಕ್ಷಿಸುವುದು.*

ಅಪರಾಧಿ ಸಮುದಾಯಗಳಿಗೆ ಸೇರಿದ ಮತ್ತು ನೋಂದಾಯಿಸಲ್ಪಟ್ಟ ವ್ಯಕ್ತಿಗಳ ಚಲನವಲನವನ್ನು ನಿರ್ಬಂಧಿಸಲಾಗಿದೆ. ಅಥವಾ ಸೆಕ್ಷನ್ ೧೧ ಮತ್ತು ೧೨ರ ಘೋಷಣೆಯಂತೆ ಒಂದು ನಿಶ್ಚಿತ ಸ್ಥಳದಲ್ಲಿ ವಾಸಕ್ಕೆ ನಿರ್ಬಂಧಿಸಲ್ಪಟ್ಟ ವ್ಯಕ್ತಿಗಳು ಇಂತಹ ಸಮಯ, ಸ್ಥಳ ಮತ್ತು ನಿಶ್ಚಿತ ಪ್ರಾಧಿಕಾರದ ಮುಂದೆ ಹಾಜರಾಗುವುದು.

೧೨. *ನಿಗದಿ ಮಾಡಿದ ವಾಸಸ್ಥಳದ ಗಡಿಯಾಚೆಗೆ ಸಂಚರಿಸುವ ಅಪರಾಧಿ ಸಮುದಾಯದ ನೋಂದಾಯಿತ ವ್ಯಕ್ತಿಗಳನ್ನು ಬಂಧಿಸುವುದು.*

೧೩. *ಅಪರಾಧಿ ಸಮುದಾಯದ ಯಾವ ವ್ಯಕ್ತಿಗಳು ನೋಂದಾಯಿಸಲ್ಪಟ್ಟಿರುತ್ತಾರೋ ಅವರು*

ಅ) ಬ್ರಿಟೀಷ್ ಇಂಡಿಯಾದ ಯಾವುದೇ ಭಾಗದಲ್ಲಿ ಕಾಣಿಸಿಕೊಂಡರೆ, ವಾಸಿಸಲು ನಿಗದಿ ಮಾಡಿದ ನಿಶ್ಚಿತ ಸ್ಥಳದ ಗಡಿಯಿಂದ ಹೊರಗೆ ಇದ್ದರೆ, ಯಾವುದೇ ಗುಂಪಿನ ಚಲನ ವಲನಗಳನ್ನು ನಿರ್ಬಂಧಿಸಿದ್ದರೆ, ನಿಗದಿ ಮಾಡದ ಸ್ಥಳದಲ್ಲಿ ಯಾವುದಾದರೂ ಸಮುದಾಯ ನೆಲೆ ನಿಂತಿದ್ದರೆ, ನಿಯಮಗಳು ಅವಕಾಶ ನೀಡದ ಸ್ಥಳ ಮತ್ತು ಸಮಯದಲ್ಲಿ ವಾಸಿಸುತ್ತಿದ್ದರೆ.

ಆ) ಯಾವುದೇ ಕೈಗಾರಿಕೆಯಿಂದ, ಕೃಷಿಯಿಂದ ಅಥವಾ ನಿರಾಶ್ರಿತ ಶಿಬಿರಗಳಿಂದ ತಪ್ಪಿಸಿಕೊಂಡಿದ್ದರೆ, ಇಂತಹ ವ್ಯಕ್ತಿಗಳನ್ನು ಯಾವುದೋ ಪೋಲೀಸ್ ಅಧಿಕಾರಿ ಇಲ್ಲವೆ ಗ್ರಾಮದ ಮುಖ್ಯಸ್ಥ ಅಥವಾ ಗ್ರಾಮದ ಕಾವಲುಗಾರ ವಾರೆಂಟ್ ರಹಿತವಾಗಿ ಬಂಧಿಸಬಹುದು. ಜೊತೆಗೆ ಸ್ಥಳೀಯ ಮ್ಯಾಜಿಸ್ಟ್ರೇಟ್ ಮುಂದೆ ಅಂತಹ ವ್ಯಕ್ತಿಗಳನ್ನು ಸಾಕ್ಷಿ ಸಮೇತ ಹಾಜರ ಪಡಿಸುವುದು ಮತ್ತು ಅಂತಹ ವ್ಯಕ್ತಿಗಳು ವಾಸಿಸಲು ಆಯ್ಕೆ ಮಾಡಿಕೊಂಡಿದ್ದ ಸ್ಥಳವನ್ನು ತೆರವುಗೊಳಿಸುವುದು. ಶಾಲೆಗಳಿಗೆ ಮತ್ತು ನಿರಾಶ್ರಿತ ಶಿಬಿರಗಳಿಗೆ ಅವರನ್ನು ಮರುಸೇರ್ಪಡೆ ಮಾಡುವುದು ಜೊತೆಗೆ ಸದರಿ ಪ್ರಕರಣವನ್ನು ಈ ಕಾಯ್ದೆಯ ಅಡಿಯಲ್ಲಿ ನ್ಯಾಯಾಲಯದಲ್ಲಿ ಮುಂದುವರೆಸುವುದು.[೧೦೩]

ಈ ಕಾಯ್ದೆಯು ಮುಖ್ಯವಾಗಿ ಕಾಡಂಚಿನಲ್ಲಿ ಬದುಕುತ್ತಿದ್ದ ಆದಿವಾಸಿಗಳನ್ನು ಮತ್ತು ಅಲೆಮಾರಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡಿರುವುದು ಮೇಲುನೋಟಕ್ಕೆ ಗೊತ್ತಾಗುತ್ತದೆ. ಜೊತೆಗೆ 'ಆದಿವಾಸಿಗಳಿಗೆ ಮತ್ತು ಅಲೆಮಾರಿಗಳಿಗೆ 'ನಿಷೇಧಿತ ಚಟುವಟಿಕೆಗಳನ್ನು' ಆರೋಪಿಸಿ ಮುಖ್ಯವಾಹಿನಿಯಿಂದ ಬೇರ್ಪಡಿಸುವ ಹುನ್ನಾರಗಳು ಈ ಕಾಯ್ದೆಯಲ್ಲಿ ಹುದುಗಿವೆ'[೧೦೪]. ಮತ್ತು ಈ ಎರಡೂ ಸಮುದಾಯಗಳಿಗೆ ತಮ್ಮ ಪಾರಂಪರಿಕ ಆರ್ಥಿಕ ಅವಲಂಬನೆಯ ಮೇಲಿರುವ ಹಕ್ಕುಗಳನ್ನು ನಾಶ ಮಾಡುವ ಉದ್ದೇಶ ಈ ಕಾಯ್ದೆಗೆ

ಸಹಜವಾಗಿಯೇ ಇದೆ. ನಿಶ್ಚಿತ ವ್ಯಕ್ತಿ ಮತ್ತು ಸಮುದಾಯಗಳನ್ನು ಕ್ರಿಮಿನಲ್‌ಗಳೆಂದು ಘೋಷಿಸುವ ಅಧಿಕಾರವನ್ನು ಹಳ್ಳಿಯ ಭೂಮಾಲಿಕನೊಬ್ಬನಿಗೆ ಈ ಕಾಯ್ದೆ ನೀಡುತ್ತದೆ. ಈತ ತನಗೆ ಇಚ್ಛೆ ಬಂದ ವ್ಯಕ್ತಿ ಮತ್ತು ಸಮುದಾಯಗಳನ್ನು ಸ್ವೇಚ್ಛೆಯಿಂದ ಅಪರಾಧಿ ಸಮುದಾಯಗಳೆಂದು ಘೋಷಿಸಬಹುದು. ಅದಕ್ಕೆ ತಕ್ಕುದಾದ ಸಾಕ್ಷ್ಯಾಧಾರಗಳನ್ನು ಸೃಷ್ಟಿಸಬಹುದು. ತನಗೆ ಇಚ್ಛೆ ಬಂದ ಕಡೆ ವಾಸಿಸುವ ಮತ್ತು ಅಲೆದಾಡುವ ಮೂಲಭೂತ ಹಕ್ಕುಗಳನ್ನೇ ಈ ಕಾಯಿದೆಯು ನಾಶಮಾಡುತ್ತದೆ. ಇದಲ್ಲದೆ ವ್ಯಕ್ತಿ ಅಥವಾ ಸಮುದಾಯವೊಂದಕ್ಕೆ ಸಹಜವಾಗಿ ಇರುವ ಆಸ್ತಿಯ, ಮಾತನಾಡುವ ಮತ್ತು ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕುಗಳನ್ನು ಈ ಕಾಯ್ದೆ ನಿರಾಕರಿಸುತ್ತದೆ. ಅಲೆಮಾರಿತ್ವವನ್ನೇ ಈ ಕಾಯ್ದೆಯು ಅಪರಾಧದ 'ಪ್ರಾಥಮಿಕ ಲಕ್ಷಣವೆಂದು' ಪರಿಗಣಿಸಿಬಿಡುತ್ತದೆ. ಇಂತಹ ಸಂದರ್ಭದಲ್ಲಿ ಅಲೆಮಾರಿಗಳಾಗಿದ್ದ ಎಲ್ಲ ಸಮುದಾಯಗಳು ಈ ಕಾಯ್ದೆಯ ಅಡಿಯಲ್ಲಿ ಅಪರಾಧಿಗಳಾಗಿ ಪರಿಗಣಿತವಾಗುತ್ತವೆ. 'ಈ ಹಂತದಲ್ಲಿ ಹಲವು ಅಲೆಮಾರಿಗಳು ಅನಿವಾರ್ಯವಾಗಿ ಅರಣ್ಯಗಳ ಅಂಚಿನಲ್ಲಿ ಇಲ್ಲವೆ ಹಳ್ಳಿಗಳು ದಟ್ಟವಾಗಿಲ್ಲದ ಪ್ರದೇಶದಲ್ಲಿ ನೆಲೆನಿಲ್ಲಬೇಕಾಯಿತು. ಮತ್ತು ಕೃಷಿ ಮುಂತಾದ ಚಟುವಟಿಕೆಗಳಲ್ಲಿ ನಿರತವಾಗಬೇಕಾಯಿತು. ಅಲೆಮಾರಿಗಳು ಕೃಷಿಕರಾಗಿ ಮಾರ್ಪಟ್ಟಿದ್ದೇ ಹೆಚ್ಚು'[೧೦೯]. ಅಲೆಮಾರಿಗಳಿಗೆ ಹೀಗೆ ತಮ್ಮ ಆರ್ಥಿಕ ಮೂಲಗಳನ್ನು ಬದಲಿಸಿಕೊಳ್ಳುವ ಅನಿವಾರ್ಯತೆ ಸೃಷ್ಟಿಯಾಗಿತ್ತು. ಒಂದೆಡೆ ತಮಗೆ ಪೂರಕವಾಗಿದ್ದ ಸ್ಥಳೀಯ ಆರ್ಥಿಕತೆಯು ವಸಾಹತು ಆಡಳಿತದ ಕಾರಣಗಳಿಂದ ರೂಪಾಂತರಗೊಂಡಿತ್ತು. ಸ್ಥಳೀಯ ರಾಜಕೀಯ ಅಧಿಕಾರದ ಸ್ಥಾನಗಳು ಕಂಪನಿ ಆಡಳಿತದ ಅಧಿಕಾರಿಗಳಿಗೆ ಹಸ್ತಾಂತರವಾಗಿದ್ದವು. ಎಲ್ಲಕ್ಕಿಂತ ಮುಖ್ಯವಾಗಿ ಕ್ರಿಮಿನಲ್ ಟ್ರೈಬ್ಸ್ ಆಕ್ಟ್ ಅಲೆಮಾರಿಗಳನ್ನು ಮತ್ತು ಅವರ ಆರ್ಥಿಕ ಮೂಲಗಳನ್ನು ಹಂತಹಂತವಾಗಿ ಮೂಲೋತ್ಪಾಟನೆ ಮಾಡುವಲ್ಲಿ ಉತ್ಸುಕವಾಗಿತ್ತು. ಅಲೆಮಾರಿಗಳ ಪ್ರತಿಭಟನೆಗಳಿಗೆ ಸ್ಥಳೀಯ ಪಾಳೇಗಾರರ ನಾಯಕತ್ವವೂ ದೊರೆಯದೆ ಅವು ಹಿಂಸಾತ್ಮಕವಾಗಿ ಕೊನೆಗೊಳ್ಳುತ್ತಿದ್ದವು. ಈ ಸಂದರ್ಭದಲ್ಲಿ ಅಲೆಮಾರಿಗಳು ಅಜ್ಞಾತ ಸ್ಥಳಗಳಿಗೆ ವಲಸೆ ಹೋಗುವುದು, ಆ ಸ್ಥಳಗಳಲ್ಲಿ ನೆಲೆನಿಂತು ಕೃಷಿ ಅಥವಾ ಇನ್ನ್ಯಾವುದೋ ಆರ್ಥಿಕ ಮೂಲಗಳನ್ನು ಅವಲಂಬಿಸುವುದು ಅನಿವಾರ್ಯವಾಯಿತು. ಇಂದಿಗೂ ಡೊಂಬರು ನೆಲೆನಿಂತಿರುವ ವಾಸಸ್ಥಳಗಳು ಬೆಟ್ಟಗುಡ್ಡಗಳ ಅಜ್ಞಾತ ಪ್ರದೇಶದಲ್ಲಿವೆ. ಅಷ್ಟಾಗಿ ಸಾರ್ವಜನಿಕರ ಗಮನಕ್ಕೆ ಬಾರದ, ಹೆಚ್ಚು ಫಲವತ್ತಾಗಿಲ್ಲದ ಕೃಷಿ ಭೂಮಿ ಸಿಗುವ ಕಡೆ ಡೊಂಬರು ನೆಲೆನಿಂತಿರುವುದು ಕಂಡು ಬರುತ್ತದೆ. ದಾವಣಗೆರೆ, ಕೊಪ್ಪಳ, ಬಳ್ಳಾರಿ, ರಾಯಚೂರು, ಗುಲ್ಬರ್ಗಾ ಮತ್ತು ಹಾವೇರಿ ಜಿಲ್ಲೆಗಳ ಬಹುಪಾಲು ಡೊಂಬರ ವಾಸಸ್ಥಳಗಳು ಈ ಬಗೆಯ ಅಜ್ಞಾತ ಪ್ರದೇಶಗಳಲ್ಲಿ ಇರುವುದೇ ಹೆಚ್ಚು.

ಡೊಂಬರು ಕ್ರಿಮಿನಲ್ ಟ್ರೈಬ್!

ಡೊಂಬರು ದೇಶದ ಅನೇಕ ರಾಜ್ಯಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುತ್ತಾರೆ. ಜೊತೆಗೆ ಡೊಂಬರು ವಾಸಿಸುವ ಅನೇಕ ರಾಜ್ಯಗಳಲ್ಲಿ ಅವರು ಅಪರಾಧಿ ಸಮುದಾಯ (Criminal Tribe) ಎಂದು ಪರಿಗಣಿಸಲ್ಪಟ್ಟಿದ್ದರು. ೧೯೫೨ ರಲ್ಲಿ Criminal Tribes Act ರದ್ದಾಗುವುದಕ್ಕೂ ಮುನ್ನ ಡೊಂಬರು ಯಾವ ಯಾವ ರಾಜ್ಯಗಳಲ್ಲಿ ಅಪರಾಧಿ ಸಮುದಾಯವೆಂದು ಪರಿಗಣಿಸಲ್ಪಟ್ಟಿದ್ದರು ಎಂದು

ನೋಡುವ.

೧. ಉತ್ತರ ಪ್ರದೇಶ -	ಡೊಮ್ಸ್
೨. ಹೈದರಾಬಾದ್ -	ಡೊಮ್ಮರ
೩. ಮದ್ರಾಸ್ ಪ್ರಾಂತ್ಯ -	ಡೊಮ್ಮರ
೪. ಬಾಂಬೆ ರಾಜ್ಯ -	ಡೊಂಬಾರಿ
೫. ಮೈಸೂರು, ಪಶ್ಚಿಮ ಬಂಗಾಳ, ಒರಿಸ್ಸಾ, ಜಮ್ಮುಕಾಶ್ಮೀರ ಸೌರಾಷ್ಟ್ರ, ಕಚ್ -	ಡೊಂಬರು, ಡೋಮ್ಸ್
೬. ಮೇಘಾಲಯ -	ಡೊಮ್ಸ್
೭. ರಾಜಸ್ಥಾನ, ಮಧ್ಯಪ್ರದೇಶ, ಭೋಪಾಲ್ ರಾಜ್ಯ -	ನಟ್ಸ್, ನಾಟ್ಸ್
೮. ಪಂಜಾಬ್, ಪಟಿಯಾಲ, ಪೂರ್ವ ಪಂಜಾಬ್ -	ನಟ್ಸ್, ನಾಟ್ಸ್ [೧೦೬]

ಕರ್ನಾಟಕದಲ್ಲಿನ ಡೊಂಬರನ್ನು ಭಾರತದ ವಿವಿಧ ರಾಜ್ಯಗಳಲ್ಲಿ ಅನೇಕ ಹೆಸರುಗಳಿಂದ ಕರೆಯಲಾಗುತ್ತದೆ. ಉತ್ತರ ಭಾರತದಲ್ಲಿ ಇವರನ್ನು 'ಡೋಮ್' ಎಂದು, ಮಹಾರಾಷ್ಟ್ರದಲ್ಲಿ ಡೊಂಬಾರಿ (ಬೆಳಗಾಂ ಜಿಲ್ಲೆಯಲ್ಲಿ ಸ್ಥಳೀಯರು ಡೊಂಬರನ್ನು ಡೊಂಬಾರಿಗಳೆಂದೇ ಕರೆಯುತ್ತಾರೆ.) ಗಳೆಂದು, ಗುಜರಾತ್ ಮತ್ತು ಮಧ್ಯಪ್ರದೇಶಗಳಲ್ಲಿ ನಟ್ಸ್ ಅಥವಾ ನಾಟ್ಸ್ ಎಂದು ಕರೆಯಲಾಗುತ್ತದೆ. ಮಧ್ಯಪ್ರದೇಶ ಮತ್ತು ಗುಜರಾತ್‌ನಲ್ಲಿ ವಾಸಿಸುತ್ತಿರುವ ಈ ನಟ್ಸ್ ಅಥವಾ ನಾಟ್ಸ್ ಸಮುದಾಯವು ಇಂದಿಗೂ ಡೊಂಬರಾಟವನ್ನು ಪ್ರದಶಿಸುತ್ತಲೇ ಬದುಕುತ್ತಿದೆ. ಈ ಸಮುದಾಯಕ್ಕೂ ಮಹಾರಾಷ್ಟ್ರ ಮತ್ತು ಕರ್ನಾಟಕದ ಉತ್ತರದ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಡೊಂಬರ ಸಮುದಾಯಕ್ಕೆ ಜನಾಂಗೀಯ ಮತ್ತು ಕುಲಶಾಸ್ತ್ರೀಯ ಹೋಲಿಕೆಗಳಿವೆ. ಕರ್ನಾಟಕದ ಮಧ್ಯ ಭಾಗದ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಡೊಂಬರು ಆಂಧ್ರ ಪ್ರದೇಶ ಮತ್ತು ತಮಿಳ್ನಾಡುಗಳಿಂದ ವಲಸೆ ಬಂದಿರುವ ಸಾಧ್ಯತೆಗಳಿವೆ. ಆದರೆ ಯಾವಾಗ ಈ ವಲಸೆ ಸಂಭವಿಸಿರಬಹುದು ಎಂದು ಊಹಿಸುವುದು ಕಷ್ಟ. ಡೊಂಬರು ಕರ್ನಾಟಕದ ಪ್ರಾಚೀನ ಸಮುದಾಯಗಳಲ್ಲೊಂದು ಎನ್ನುವುದಕ್ಕೆ ಹಲವು ಪುರಾವೆಗಳು ಸಿಕ್ಕುತ್ತವೆ. ಮತ್ತು ಕರ್ನಾಟಕದ ಒಳಗೇ ಈ ಸಮುದಾಯವು ಅಲೆಮಾರಿ ಬದುಕನ್ನು ರೂಪಿಸಿಕೊಡು ಬಂದಿರುವುದನ್ನು ಈಗಾಗಲೇ ಗಮನಿಸಿದ್ದೇವೆ.

ನಿಲ್ಲದ ಯಾತನೆಯ ಪಯಣ

Criminal Tribes Act ಜಾರಿಗೆ ಬಂದ ಸಂದರ್ಭದಲ್ಲಿ ಈ ಸಮುದಾಯಗಳು ಮುಖ್ಯವಾಹಿನಿಯ ಕಣ್ಣುತಪ್ಪಿಸಿ ಊರಿಂದ ಹೊರಗೆ ಕಾಡುಗಳಲ್ಲಿ ಬದುಕಲಾರಂಭಿಸಿದವು. ಅಪರಾಧಿ ಬುಡಕಟ್ಟು ಕಾಯ್ದೆಯು, ಪೊಲೀಸರಿಗೆ ಈ ಸಮುದಾಯಗಳನ್ನು ವಿಶೇಷ ಸಂದರ್ಭದಲ್ಲಿ ಕಂಡಲ್ಲಿ ಕೊಂದು ಹಾಕುವ ಅಧಿಕಾರವನ್ನೂ

ಕೊಟ್ಟುಬಿಟ್ಟಿತ್ತು. ಈ ಕಾಲಘಟ್ಟದಲ್ಲಿ ‘ಅಲೆಮಾರಿತ್ವ’ ಸಹಜವಾಗಿಬಿಟ್ಟಿತು. ಕೇವಲ ಆರ್ಥಿಕ ಮೂಲಗಳನ್ನು ಮಾತ್ರ ಈ ಸಮುದಾಯಗಳು ಕಳೆದುಕೊಳ್ಳಲಿಲ್ಲ, ಬದುಕಲು ನೆಲ ಮತ್ತು ಬದುಕುವ ಅವಕಾಶ ಎರಡನ್ನೂ ಕಳೆದುಕೊಂಡು ಸುರಕ್ಷಿತ ನೆಲೆಗಳನ್ನು ಹುಡುಕಿಕೊಂಡು ಅಲೆಯಲಾರಂಭಿಸಿದವು. ‘ಅಲೆಮಾರಿ ಸಮುದಾಯಗಳನ್ನು ‘ಕ್ರಿಮಿನಲ್ ಜಾತಿಗಳು’ ಎಂದು ಪರಿಗಣಿಸಿ ಅವರ ಮಾನವ ಹಕ್ಕುಗಳನ್ನು ಕಸಿದುಕೊಳ್ಳಲಾಯ್ತು. ಈ ವಿಪರೀತ ಕಾನೂನಿನ ಅಮಾನವೀಯ ನಿಯಮಗಳ ಮೂಲಕ ಸದರಿ ಸಮುದಾಯಗಳನ್ನು ನಡೆಸಿಕೊಳ್ಳಲಾಯ್ತು. ಅವರ ಆರ್ಥಿಕ ಅವಲಂಬನೆಗಳು ನಾಶವಾದ ಮೇಲೆ, ಸಹಜವಾಗಿಯೇ ಅವರು ಅಪರಾಧಿ ಚಟುವಟಿಕೆಗಳಲ್ಲಿ ತೊಡಗಿದರು. ಅಪರಾಧ ಮಾಡಲು ಈ ವ್ಯವಸ್ಥೆಯೇ ಅವರನ್ನು ಪ್ರೇರೇಪಿಸಿತು.’[೧೦೭] ಒಂದು ಕಾಲದಲ್ಲಿ ಇದ್ದುದರಲ್ಲಿಯೇ ಸ್ವಾವಲಂಬಿಗಳಾಗಿ, ಶ್ರಮಜೀವಿಗಳಾಗಿ ಬದುಕುತ್ತಿದ್ದ ಸಮುದಾಯಗಳು ತಾವು ಕಳೆದುಕೊಂಡಿದ್ದ ಆರ್ಥಿಕ ಮೂಲಗಳನ್ನು ಮರಳಿ ಪಡೆಯಲು ಪ್ರತಿಭಟಿಸಿದ್ದಕ್ಕಾಗಿ ಅಪರಾಧಿಗಳಾಗಿ ಬಿಟ್ಟವು. ಜಗತ್ತಿನಲ್ಲಿ, ಮಾನವಹಕ್ಕುಗಳ ಮೇಲಿನ ದಾಳಿ ಇದಕ್ಕಿಂತ ಭೀಕರವಾದದ್ದು ಇನ್ನೊಂದು ನಡೆದಿರಲು ಸಾಧ್ಯವಿಲ್ಲ. ತಮ್ಮ ಹಕ್ಕುಗಳಿಗೆ ಹೋರಾಡಿದವರನ್ನು ಕಾನೂನಿನ ದೃಷ್ಟಿಯಲ್ಲಿ ಅಪರಾಧಿಗಳನ್ನಾಗಿಸಿ ಅವರ ಆತ್ಮಪ್ರತ್ಯಯವನ್ನು ನಾಶಪಡಿಸಲಾಯ್ತು. ಈ ಜನ ಒಂದು ಕಾಲದಲ್ಲಿ, ತನ್ನ ಸುತ್ತಲ ಜಗತ್ತನ್ನು ಕಟ್ಟಿ ಎತ್ತಿ ನಿಲ್ಲಿಸಿದವರು, ಆ ಜಗತ್ತನ್ನು ರಂಜಿಸಿದವರು, ಆ ಜಗತ್ತಿನ ಒಳಿತಿಗಾಗಿ ಬೆವರು ಹರಿಸಿದವರು, ಸೈನ್ಯದಲ್ಲಿದ್ದುಕೊಂಡು ಜೀವಕೊಟ್ಟವರು, ಕೋಟೆಗಳನ್ನು ಕಟ್ಟಿದವರು. ಆದರೆ ಅವರು ಮಾತ್ರ ‘ಕೋಟೆಯ’ ಆಚೆಗೆ ಎಸೆಯಲ್ಪಟ್ಟು ನಿರ್ಗತಿಕರಾಗಿ ಹೋದರು.

ಇದೇ ಕಾಯ್ದೆ ದಕ್ಷಿಣಕ್ಕೆ ಬಂದದ್ದು ೧೯೨೧ರಲ್ಲಿ. ನಾವು ಇಂದು ಯಾರನ್ನು ಅಲೆಮಾರಿಗಳೆಂದು ಪಟ್ಟಿ ಮಾಡುತ್ತೇವೋ ಅವರಲ್ಲಿ ಶೇ ೯೫ ಸಮುದಾಯಗಳು ಈ Criminal Tribes Act ಅಡಿಯಲ್ಲಿ ಬರುವ ಸಮುದಾಯಗಳೇ ಆಗಿವೆ. ಹೀಗಾಗಿ ಕರ್ನಾಟಕದಲ್ಲಿರುವ ಬಹುತೇಕ ಅಲೆಮಾರಿಗಳು, ವಾಯುವ್ಯ ಭಾರತ, ಮಧ್ಯಭಾರತ ಇಲ್ಲವೆ ಓರಿಸ್ಸಾ, ಆಂಧ್ರಪ್ರದೇಶಗಳಿಂದ ಇಲ್ಲಿಗೆ ವಲಸೆ ಬಂದವರೇ ಆಗಿದ್ದಾರೆ. ಇದಕ್ಕೆ ಕಾರಣಗಳೂ ತುಂಬಾ ಸ್ಪಷ್ಟವಾಗಿಯೇ ಇವೆ. ಲಂಬಾಣಿಗರು ವಾಯುವ್ಯ ರಾಜ್ಯಗಳಿಂದ ದಕ್ಷಿಣಕ್ಕೆ ವಲಸೆ ಬಂದ ವಿವರಗಳನ್ನು ಶ್ರೀ ಖಂಡೋಬ ಅವರ ‘ಕರ್ನಾಟಕದ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ’ ಡಿ ಬಿ ನಾಯಕ ಅವರ ಲಂಬಾಣಿಗಳ ಕುರಿತ ಕೃತಿಗಳಲ್ಲಿ ವಿವರವಾಗಿ ಗಮನಿಸಬಹುದಾಗಿದೆ.

ವಿಜಯನಗರ ಸಾಮ್ರಾಜ್ಯದ ಸಂದರ್ಭದಲ್ಲಿ ಅಲ್ಲಿನ ಸೈನ್ಯದಲ್ಲಿ ಮತ್ತು ದೇವಾಲಯಗಳನ್ನು ನಿರ್ಮಿಸುವ ಶಿಲ್ಪಿಗಳ ಜೊತೆಯಲ್ಲಿ ಕಾರ್ಯನಿರತವಾಗಿದ್ದ ಮತ್ತು ತಮ್ಮ ಪಾರಂಪರಿಕ ಡೊಂಬರಾಟದಿಂದ ಜನರನ್ನು ರಂಜಿಸುತ್ತಿದ್ದ ಈ ಸಮುದಾಯ, ವಿಜಯನಗರ ಪತನಾನಂತರ ಕರ್ನಾಟಕದಾದ್ಯಂತ ಚದುರಿ ಬಿದ್ದಿದೆ. ಸರಿಸುಮಾರು ೧೦೦ ರಿಂದ ೧೫೦ ವರ್ಷಗಳ ಹಿಂದೆ ಈ ಸಮುದಾಯ ನೆಲೆ ನಿಂತಿರಬಹುದು. ವಸಾಹತು ಆಡಳಿತದ ಸಂದರ್ಭದಲ್ಲಿ ಭಾರತದ ಸಮುದಾಯಗಳನ್ನು ಅಧ್ಯಯನ ಮಾಡಿದ ಹಲವು ವಿದ್ವಾಂಸರು ಡೊಂಬರ ಆರ್ಥಿಕ ಮೂಲಗಳ ಕುರಿತು ಈ ಕೆಳಗಿನಂತೆ ವಿವರಿಸಿದ್ದಾರೆ. ಇವರ ವಿವರಗಳು ಆಧುನಿಕಪೂರ್ವ ಭಾರತದಲ್ಲಿ ಡೊಂಬರು ಅವಲಂಬಿಸಿದ್ದ ಆರ್ಥಿಕ ಮೂಲಗಳನ್ನು ವಿವರಿಸಿಕೊಳ್ಳಲು

ಸಹಾಯ ಮಾಡುತ್ತವೆ.

೧೯೦೮ರಲ್ಲಿ ಮೈಸೂರು ಸಂಸ್ಥಾನದ ಸಮುದಾಯಗಳನ್ನು ಅಧ್ಯಯನ ಮಾಡಿದ ಎಚ್ ವಿ ನಂಜುಂಡಯ್ಯನರು ಡೊಂಬರ ಕಸುಬುಗಳನ್ನು ಹೀಗೆ ವಿವರಿಸಿದ್ದಾರೆ.

'ಡೊಂಬರ ಜಾತಿಯ ಕುಲಕಸಬು ಡೊಂಬರಾಟ. ಹಗ್ಗದ ಮೇಲೆ ನಡೆಯುವುದು. ಮತ್ತು ಅಪರೂಪದ ಕಸರತ್ತುಗಳನ್ನು ಪ್ರದರ್ಶಿಸುವುದು ಇವರ ಕುಲಕಸಬು. ಇವರು ತಾವು ಪ್ರದರ್ಶಿಸುವ ಕೆಲವು ಕಸರತ್ತುಗಳಲ್ಲಿ ಗಮನಾರ್ಹ ಕೌಶಲ್ಯವನ್ನು ಸಾಧಿಸಿದ್ದಾರೆ. ಇನ್ನು ಕೆಲವರು ತಮ್ಮ ವೈಯಕ್ತಿಕ ಸಾಮರ್ಥ್ಯದಿಂದಲೇ ಪ್ರದರ್ಶನಕ್ಕೆ ಹೆಚ್ಚು ಮಹತ್ವವನ್ನು ತಂದುಕೊಡುತ್ತಾರೆ. ಇವರ ಅಲೆಮಾರಿ ತಂಡಗಳ ಡೊಂಬರಾಟದ ಪ್ರದರ್ಶನವು ಯಾವುದೇ ಸಾಮಾನ್ಯ ಸರ್ಕಸ್ ಕಂಪನಿಯ ಪ್ರದರ್ಶನಕ್ಕಿಂತ ಉತ್ತಮ ಮಟ್ಟದ್ದಾಗಿರುತ್ತದೆ. ತಂತಿಯ ಮೇಲೆ ನಡೆಯುವ ಮತ್ತು ಇತರ ಆಕರ್ಷಕ ಕಸರತ್ತುಗಳಲ್ಲಿ ಹೆಚ್ಚಾಗಿ ಹೆಂಗಸರು ತೊಡಗಿಕೊಳ್ಳುತ್ತಾರೆ. ವಿಶಾಲ ಬಯಲಲ್ಲಿ ಹೆಂಗಸರು ಮುಕ್ತವಾಗಿ ಕಸರತ್ತುಗಳನ್ನು ಮಾಡುತ್ತಾರೆ. ಆನಂತರ ಒಂದು ತಟ್ಟೆಯನ್ನು ಹಿಡಿದುಕೊಂಡು ಪ್ರದರ್ಶನ ನೋಡಲು ಬಂದು ಸುತ್ತ ನೆರೆದ ಜನಗಳ ಬಳಿ ಹೋಗಿ ಭಿಕ್ಷೆ ಬೇಡುತ್ತಾರೆ. ಒಂದು ಪ್ರದರ್ಶನಕ್ಕೆ ೨೦ ರೂಪಾಯಿಗೆ ಹೆಚ್ಚು ಮೀರುವುದಿಲ್ಲ. ಕೆಲವೊಮ್ಮೆ ಜನ ನಿಬಿಡ ಪ್ರದೇಶ ಮತ್ತು ಡೊಂಬರಾಟದ ಕೌಶಲಪೂರ್ಣ ಪ್ರದರ್ಶನದಿಂದಾಗಿ ಈ ಮೊತ್ತ ಜಾಸ್ತಿಯೂ ಆಗಬಹುದು. ಇಂದು ದೇಶದಲ್ಲಿ ಅಂತಹ ಒಳ್ಳೆಯ ಸರ್ಕಸ್ ಕಂಪನಿಗಳಿಲ್ಲದಿದ್ದರೂ, ಡೊಂಬರಾಟವು ಹೆಚ್ಚಾಗಿ ಪ್ರದರ್ಶನಗೊಳ್ಳುತ್ತಿಲ್ಲ. ಡೊಂಬರಾಟದ ಸಂದರ್ಭದಲ್ಲಿ ಡೊಂಬರು ಕೆಲವು ಹಳೆಯ ಕತ್ತಿಗಳನ್ನು, ಕಠಾರಿಗಳನ್ನು ಮತ್ತು ಕೈಗತ್ತಿಗಳನ್ನು ನೆರೆದ ಸಮೂಹಕ್ಕೆ ಮಾರಾಟ ಮಾಡುತ್ತಾರೆ.

ಡೊಂಬರು ಬೇರೆ ಬೇರೆ ಮರದ ಕಟ್ಟಿಗೆಯಿಂದ ಬಾಚಣಿಕೆಗಳನ್ನು ಮಾಡುತ್ತಾರೆ. ಗಂಧದ ಕಟ್ಟಿಗೆಯಿಂದಲೂ ಇವರು ಬಾಚಣಿಕೆ ಮಾಡಿ ಹಳ್ಳಿ, ಪಟ್ಟಣಗಳನ್ನು ಸುತ್ತಾಡಿ ಮಾರಾಟ ಮಾಡುತ್ತಾರೆ. ಇವರು ಬಾಚಣಿಗೆ ಮಾಡುವುದರ ಹಿಂದೆ ಒಂದು ಕಥೆ ಇದೆ. ಅಕ್ಕಸಾಲಿಗನೊಬ್ಬ ಡೊಂಬರ ಹೆಣ್ಣು ಮಗಳನ್ನು ಉಪಪತ್ನಿಯನ್ನಾಗಿ ಸ್ವೀಕರಿಸಿದ್ದನಂತೆ, ಆತ ಬಾಚಣಿಕೆ ತಯಾರಿಸುವ ವಿಧಾನವನ್ನು ಅವಳಿಗೆ ತಿಳಿಸಿಕೊಟ್ಟಿದ್ದಲ್ಲದೆ ತನ್ನ ಬಳಿ ಇದ್ದ ಗರಗಸ, ಉಳಿ ಮುಂತಾದ ಉಪಕರಣಗಳನ್ನು ನೀಡಿದನಂತೆ, ಈ ಕಾರಣಕ್ಕಾಗಿ ಡೊಂಬರು ಅಕ್ಕಸಾಲಿಗರನ್ನು ಬಾಚಣಿಕೆ ಮಾಡುವುದನ್ನು ಕಲಿಸಿದ್ದಕ್ಕಾಗಿ ಕೃತಜ್ಞತೆಯಿಂದ ನೆನೆಯುತ್ತಾರೆ. ಮರದಿಂದ ಮಾಡಿದ ಬೇರೆ ಬೇರೆ ಉಪಕರಣಗಳನ್ನು ಡೊಂಬರ ಹೆಂಗಸರು ಮಾಡಿ ಅವುಗಳನ್ನು ಬೀದಿಯ ಬದಿಯಲ್ಲಿ ಮಾರಾಟಕ್ಕಿಡುತ್ತಾರೆ.

ಡೊಂಬರು ಕ್ರಿಮಿನಲ್ ಟ್ರೈಬ್ಸ್ ಪಟ್ಟಿಯಲ್ಲಿರುವವರು. ಯಾವತ್ತೂ ಇವರು ಪೋಲೀಸರ ಕಣ್ಣಳತೆಯಲ್ಲಿಯೇ ಇರಬೇಕಾಗುತ್ತದೆ. ಕಳ್ಳತನ ಮಾಡಲು ಇವರು ಹೆಚ್ಚಾಗಿ ತಮ್ಮ ಹೆಂಗಸರನ್ನು ಬಳಸುತ್ತಾರೆ. ಈ ಕಳ್ಳತನದ ಸಾಹಸಕ್ಕೆ ಕೈಹಾಕುವ ಮೊದಲು ತಮಗೆ ಸಹಾಯ ಮಾಡಬೇಕು ಎಂದು ತಮ್ಮ ದೇವರನ್ನು ಪ್ರಾರ್ಥಿಸುತ್ತಾರೆ. ಕೆಲವು ಸಲ ತಮ್ಮ ಮಕ್ಕಳಿಗೂ ಈ ವಿದ್ಯೆ ಕಲಿಯಲು ತರಬೇತಿ ನೀಡುತ್ತಾರೆ.

ಡೊಂಬರು ದೊಡ್ಡ ಪ್ರಮಾಣದಲ್ಲಿ ಹಂದಿ ಸಾಕಾಣಿಕೆ ಮಾಡುತ್ತಾರೆ. ಹಂದಿ ಮೇಯಿಸಲು ಹುಡುಗರನ್ನು

ನೇಮಕಮಾಡಿಕೊಳ್ಳುತ್ತಾರೆ. ತಾವು ಎಲ್ಲಿ ನೆಲೆನಿಲ್ಲುತ್ತಾರೋ ಆ ಪ್ರದೇಶದಲ್ಲಿ ಗಂಡಸರು ದಿನಗೂಲಿಗಳಾಗಿ ಕೆಲಸ ಮಾಡಿದರೆ, ಹೆಂಗಸರು ಭಿಕ್ಷೆ ಬೇಡುತ್ತಾರೆ. ಇವರು ಪಕ್ಷಿಗಳನ್ನು ಹಿಡಿಯುವುದರಲ್ಲಿ ನಿಸ್ಸೀಮರು. ಬಲೆ ಬೀಸಿ ಮತ್ತು ಪಕ್ಷಿಗಳ ಗೂಡಿಗೆ ಅಂಟು ಹಾಕಿ ಪಕ್ಷಿಗಳನ್ನು ಹಿಡಿಯುತ್ತಾರೆ. ನೆಲೆನಿಂತ ಡೊಂಬರು ಮಾತ್ರ ಕೃಷಿಯಲ್ಲಿ ನಿರತರಾಗಿದ್ದಾರೆ. ಹಂದಿಸಾಕಾಣಿಕೆ ಮತ್ತು ಬಾಚಣಿಕೆ ಮಾಡುವುದು ಇವರ ಸಣ್ಣಪುಟ್ಟ ಖರ್ಚಿಗೆ ಮಾತ್ರ ಸರಿಹೊಂದುತ್ತದೆ.'[೧೦೮]

ಎಡ್ಗರ್ ಥರ್ಸಟನ್ ದಕ್ಷಿಣ ಭಾರತದ ಸಮುದಾಯಗಳನ್ನು ಅಧ್ಯಯನ ಮಾಡಿದವನು. ಈತ ಡೊಂಬರ ಅವಲಂಬಿಸಿರುವ ಹಲವು ಕಸಬುಗಳನ್ನು ಹೀಗೆ ವಿಶ್ಲೇಷಿಸಿದ್ದಾನೆ.

'ಜೈಪುರ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಇವರು ಕುದುರೆಗಳನ್ನು ಪಾಲನೆ ಮಾಡುವುದಕ್ಕೆ ನೇಮಕಗೊಳ್ಳುತ್ತಾರೆ. ಜೊತೆಗೆ ತಳವಾರರಾಗಿ, ಜಾಡಮಾಲಿಗಳಾಗಿ ಮತ್ತು ಮನೆಗೆಲಸದ ಕೂಲಿಗಳಾಗಿ ಬದುಕುತ್ತಿದ್ದಾರೆ. ಸಮಾಜದಲ್ಲಿ ಇವರ ಸ್ಥಿತಿಗತಿ ಹೇಳಿಕೊಳ್ಳುವಂತಹ ಮಟ್ಟದಲ್ಲಿಲ್ಲ. ಆದರೆ ಒಟ್ಟಾರೆಯಾಗಿ ಇವರು ನಿಧಾನಗತಿಯಲ್ಲಿ ಸುಧಾರಿಸುತ್ತಿದ್ದಾರೆ. ತಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಲು ಇವರು ಪರ್ಯಾಯ ವೃತ್ತಿಗಳನ್ನು ಅವಲಂಬಿಸಲು ಹಾತೊರೆಯುತ್ತಿದ್ದಾರೆ. ಚಿಲ್ಲರೆ ವ್ಯಾಪಾರದಲ್ಲಿ ತೊಡಗಿ ಪ್ರದೇಶದಿಂದ ಪ್ರದೇಶಕ್ಕೆ ಸಂಚರಿಸುತ್ತಾ ದುಡಿಮೆಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಡೊಂಬರು ನೇಕಾರರು, ವ್ಯಾಪಾರಿಗಳು, ಸಂಗೀತಗಾರರು, ಭಿಕ್ಷುಕರು ಮತ್ತು ಬಡ್ಡಿ ವ್ಯಾಪಾರಿಗಳಾಗಿ ವಿಶಾಖ ಪಟ್ಟಣದ ಗುಡ್ಡಗಾಡುಗಳಲ್ಲಿ ಬದುಕುತ್ತಿದ್ದಾರೆ. ಕೆಲವರಿಗೆ ದನಕರುಗಳು ಮತ್ತು ಭೂಮಿ ಇದೆ, ಇವರೆಲ್ಲ ಕೃಷಿಕರಾಗಿದ್ದಾರೆ. ಇಲ್ಲಿಯ ಗಿರಿಜನರಂತೂ ತಾವು ಧರಿಸುವ ಬಟ್ಟೆಗಳಿಗೆ ಡೊಂಬರನ್ನೇ ಅವಲಂಬಿಸಿದ್ದಾರೆ. ಈ ಕಾರಣದಿಂದ ಈ ಬೆಟ್ಟಪ್ರದೇಶದ ಪ್ರತಿ ಹಳ್ಳಿಯಲ್ಲೂ ಡೊಂಬರು ವಾಸಮಾಡುತ್ತಿದ್ದಾರೆ. ಜೊತೆಗೆ ಇವರು ಬಯಲುನಾಡಿನ ಕೋಮಟಿ ವ್ಯಾಪಾರಿಗಳಿಗೂ ಮತ್ತು ಆದಿವಾಸಿಗಳಿಗೂ ನಡುವೆ ನಡೆಯುವ ವ್ಯಾಪಾರ ವಹಿವಾಟುಗಳಿಗೆ ಮಧ್ಯವರ್ತಿಗಳಾಗಿಯೂ ಕೆಲಸ ಮಾಡುತ್ತಾರೆ. ಇವರ ಮಕ್ಕಳು ಅಲ್ಪ ಪ್ರಮಾಣದಲ್ಲಿಯಾದರೂ ಇಲ್ಲಿನ ಶಾಲೆಗಳಲ್ಲಿ ಓದುತ್ತಿದ್ದಾರೆ. ಡೊಂಬರು ಅತ್ಯಂತ ನುರಿತ ಸಂಗೀತಗಾರರೂ ಹೌದು. ಇವರು ಶಹನಾಯಿ ಮತ್ತು ಡ್ರಮ್‌ಗಳನ್ನು ಸೊಗಸಾಗಿ ನುಡಿಸುತ್ತಾರೆ. ಇವರು ಜೈಪುರದ ಅರಸನ ಅಸ್ಥಾನದ ಸಂಗೀತಗಾರರೂ ಆಗಿದ್ದರು. ಈಗಲೂ ಡೊಂಬರ ಭಿಕ್ಷುಕ ಮನೆ ಮನೆಗೆ ಭಿಕ್ಷಕ್ಕೆ ಹೋಗುವಾಗಲೂ ಶಹನಾಯಿ ನುಡಿಸುತ್ತಲೇ ಹೋಗುತ್ತಾನೆ. ಇವರು ದೆವ್ವ ಮತ್ತು ಭೂತಗಳನ್ನು ನಿಯಂತ್ರಿಸುವ ಶಕ್ತಿ ಇದೆ ಎಂದು ನಂಬಲಾಗಿ ಸಮಾಜದಲ್ಲಿ ಇವರನ್ನು ಗುಮಾನಿಯಿಂದ ನೋಡಲಾಗುತ್ತದೆ. ಅಲ್ಲದೆ ಇವರಿಗೆ ಕ್ಷುದ್ರ ಮತ್ತು ಕೆಳಜಾತಿಯಾಗಿಯೇ ಪರಿಗಣಿಸಲ್ಪಟ್ಟಿದ್ದಾರೆ. ಇವರು ಕೋಮಟ್ಟ, ಭಂಡಾರಿ ಮತ್ತು ಘಾಸಿ ಸಮುದಾಯಗಳ ಮನೆಗಳಲ್ಲಿ ಊಟ ಮಾಡುವುದಿಲ್ಲ. ಮತ್ತೆ ಕೆಲವು ಡೊಂಬರು ಮಿಶಿನರಿಗಳ ಪ್ರಭಾವದಿಂದ ಕ್ರಿಶ್ಚಿಯನ್ ಧರ್ಮಕ್ಕೂ ಮತಾಂತರಗೊಂಡಿದ್ದಾರೆ.'[೧೦೯]

ಅನಂತಕೃಷ್ಣ ಅಯ್ಯರ್ ಮೈಸೂರು ಭಾಗದ ಡೊಂಬರ ವೃತ್ತಿಗಳನ್ನು ಈ ಕೆಳಗಿನಂತೆ ಗುರುತಿಸುತ್ತಾರೆ.

'ಡೊಂಬರ ಪಾರಂಪರಿಕ ವೃತ್ತಿ ಡೊಂಬರಾಟವಾಗಿದೆ. ಗಂಡಸರು ವಿವಿಧ ದೈಹಿಕ ಕಸರತ್ತುಗಳನ್ನು

ತೋರಿಸಿದರೆ, ಮಹಿಳೆಯರು ಹಗ್ಗದ ಮೇಲೆ ನರ್ತಿಸಿ ತಮ್ಮ ಕೌಶಲ್ಯಗಳನ್ನು ಪ್ರದರ್ಶಿಸುತ್ತಾರೆ. ಪ್ರದರ್ಶನ ಮುಗಿದ ಮೇಲೆ ಆಕರ್ಷಕ ಮಹಿಳೆಯೊಬ್ಬಳು ತಟ್ಟೆ ಹಿಡಿದುಕೊಂಡು ಸುತ್ತ ನೆರೆದ ಜನರ ಬಳಿ ಭಿಕ್ಷೆ ಬೇಡಲು ಹೋಗುತ್ತಾಳೆ. ಇವರಿಗೆ ಕೆಲವರು ಹಣ ಮತ್ತು ಕೆಲವರು ತೊಡುವ ಬಟ್ಟೆಗಳನ್ನು ನೀಡುವುದುಂಟು. ಇತ್ತೀಚೆಗೆ ಡೊಂಬರಾಟ ಸೊರಗುತ್ತಿದೆ. ಕಾರಣ ಆಧುನಿಕ ಸರ್ಕಸ್ ಕಂಪನಿಗಳ ಅಬ್ಬರದಿಂದ ದೇಶೀ ದೊಂಬರಾಟವು ಕಳಾಹೀನವಾಗುತ್ತಿದೆ.

ಡೊಂಬರು ಪ್ರದರ್ಶನಕ್ಕೆ ಮುನ್ನ ಜೋರಾಗಿ ಡೋಲು ಮತ್ತು ತುತ್ತೂರಿಗಳನ್ನು ಬಾರಿಸಿ ಜನರನ್ನು ಆಕರ್ಷಿಸುತ್ತಾರೆ. ಈ ಬಗೆಯ ಗಲಾಟೆಯನ್ನು ದೊಂಬಿ ಎಂದು ಕರೆಯಲಾಗುತ್ತದೆ. 'ಡೊಂಬರ' ಎಂಬ ಪದವು ಈ 'ದೊಂಬಿ' ಎಂಬ ಪದದಿಂದ ಬಂದಿರಬಹುದೆಂದು ಊಹಿಸಬಹುದಾಗಿದೆ. ಇವರು ಕಟ್ಟಿಗೆಯಿಂದ ಕೆಲವು ಕಡೆ ಗಂಧದ ಕಟ್ಟಿಗೆಯಿಂದ ಬಾಚಣಿಕೆಯನ್ನು ಮಾಡುತ್ತಾರೆ. ಅವನ್ನು ನಗರಗಳಿಗೆ ತೆಗೆದುಕೊಂಡು ಹೋಗಿ ಮಾರಾಟಮಾಡುತ್ತಾರೆ.'[೧೧೦]

ನಿಜಾಮನ ಆಳ್ವಿಕೆಯ ಆಂದ್ರ ಮತ್ತು ಕರ್ನಾಟಕದ ಗಡಿ ಭಾಗಗಳ ಸಮುದಾಯಗಳನ್ನು ಅಧ್ಯಯನ ಮಾಡಿದ ಸಯದ್ ಸಿರಾಜ್ ಉಲ್ ಹಸನ್‌ರವರು ಡೊಂಬರ ಆರ್ಥಿಕ ಮೂಲಗಳನ್ನು ಈ ಕೆಳಗಿನಂತೆ ವಿವರಿಸುತ್ತಾರೆ.

'ಈ ಸಮುದಾಯದವರು ದೇಶ ವ್ಯಾಪಿ ಸಂಚರಿಸುತ್ತಿದ್ದು, ಅಲ್ಲಲ್ಲಿ ತಾಳೇಮರದ ಗರಿಗಳಿಂದ ಗುಡಿಸಲುಗಳನ್ನು ಕಟ್ಟಿಕೊಂಡು ತಾತ್ಕಾಲಿಕವಾಗಿ ನೆಲೆಸುತ್ತಾರೆ. ಡೊಂಬರ ಗಂಡಸರು ಎತ್ತಿನ ಕೊಂಬು ಮತ್ತು ಮರದಿಂದ ಬಾಚಣಿಕೆಗಳನ್ನು ತಯಾರಿಸುತ್ತಾರೆ. ಕೆಲವರು ನೇಕಾರಿಕೆ ಮಾಡಿದರೆ, ಉಳಿದವರು ಹತ್ತಿಯಿಂದ ಗೊಂಬೆಗಳನ್ನು ತಯಾರಿಸುತ್ತಾರೆ. ಇದೆಲ್ಲದರ ಜೊತೆ ಡೊಂಬರಾಟವು ಇವರ ಮುಖ್ಯ ವೃತ್ತಿಯಾಗಿದೆ. ಹಗ್ಗದ ಮೇಲೆ ನಡೆಯುವುದು, ವಿವಿಧ ಕಸರತ್ತುಗಳನ್ನು ಮಾಡುವುದು, ಮೋಡಿ ಮಾಡುವುದು ಇವರ ಡೊಂಬರಾಟದ ಸಂದರ್ಭದಲ್ಲಿ ಜನರ ಮನರಂಜನೆಗಾಗಿ ನಡೆಯುವ ಚಟುವಟಿಕೆಗಳಾಗಿವೆ. ಈ ಸಂದರ್ಭದಲ್ಲಿ ಇವರು ತಮ್ಮ ಸುಂದರ ಮಹಿಳೆಯರಿಗೆ ಎತ್ತರದ ಕಂಬಕ್ಕೆ ಕಟ್ಟಿದ ಹಗ್ಗದ ಮೇಲೆ ನಡೆಯುವ ಕೌಶಲ್ಯವನ್ನು ಚಿಕ್ಕಂದಿನಲ್ಲಿಯೇ ಹೇಳಿ ಕೊಟ್ಟಿರುತ್ತಾರೆ. ಇವರ ಸ್ತ್ರೀಯರು ಅನೈತಿಕ ದಾರಿಗಳಿಂದಲೂ ಹಣ ಸಂಪಾದನೆ ಮಾಡುತ್ತಾರೆ.'[೧೧೧]

ಬಾಂಬೆಯಲ್ಲಿ ಪಾದ್ರಿಯಾಗಿದ್ದುಕೊಂಡು ದಕ್ಷಿಣ ಭಾರತದ ಸಮುದಾಯಗಳನ್ನು ಅಧ್ಯಯನ ಮಾಡಿದ ಸ್ಟೀಫನ್ ಫೋಕ್ಸ್‌ರವರು ಡೊಂಬರ ಕುಲಕಸಬುಗಳನ್ನು ಹೀಗೆ ವಿವರಿಸುತ್ತಾರೆ.

'ಡೊಮರು ಜನಾಂಗಿಕವಾಗಿ ಏಕರೂಪವಾಗಿಲ್ಲ. ಡಿ.ಎನ್.ಮುಜುಂದಾರ್‌ರವರ ಪ್ರಕಾರ ಅವರು ಯಾವತ್ತೂ ಅನ್ಯ ಜನಾಂಗಗಳ ಜೊತೆ ನಡೆದ ಸಂಕರದಿಂದ ಜನಾಂಗಿಕ ಏಕರೂಪತೆಯನ್ನು ಕಳೆದುಕೊಂಡಿದ್ದಾರೆ. ಜನಾಂಗಿಕವಾಗಿ ಇವರು ಕ್ಷತ್ರಿಯ ಮತ್ತು ರಜಪೂತರಿಗೆ ಹತ್ತಿರವಾಗಿದ್ದಾರೆ. ಇನ್ನೊಂದೆಡೆ ಚಮ್ಮಾರರ ಜೊತೆ ಇವರಿಗೆ ಹೋಲಿಕೆಗಳಿವೆ.

ಈ ಜಾತಿ ಸಮುದಾಯವನ್ನು ಆರ್ಥಿಕವಾಗಿ ನಾಲ್ಕು ಭಾಗವಾಗಿ ವಿಂಗಡಿಸಬಹುದಾಗಿದೆ.

೧. ಕೃಷಿ ಕೂಲಿಗಳು, ನೇಕಾರರು ಮತ್ತು ಲೋಹದ ಕೆಲಸಗಾರರು

೨. ಬೆತ್ತದ ಕೆಲಸಗಾರರು ಮತ್ತು ಸಣ್ಣ ಪ್ರಮಾಣದ ಕರಕುಶಲಕರ್ಮಿಗಳು

೩. ಮಾಂತ್ರಿಕರು, ಜೀತಗಾರರು, ಚರ್ಮದ ಕೆಲಸಗಾರರು

೪. ದರ್ಜಿಗಳು, ಸಂಗೀತಗಾರರು ಮತ್ತು ಅಲೆಮಾರಿ ಭಿಕ್ಷುಕರು

ಕುಮ್ಯೂನ್ ಮತ್ತು ಘರ್‌ವಾಲ್ ಪರ್ವತ ಪ್ರದೇಶಗಳಲ್ಲಿ ವಾಸಿಸುವ ಡೊಮರ ಸಮುದಾಯದವರು ಕೃಷಿಕರಾಗಿದ್ದಾರೆ. ಜೊತೆಗೆ ಕರಕುಶಲಕರ್ಮಿಗಳೂ ಆಗಿದ್ದಾರೆ. ಪಶ್ಚಿಮ ಪಂಜಾಬಿನಲ್ಲಿಯ ಡುಮ್ನಾಗಳು ಬೀದಿ ಗುಡಿಸುವ ಪೌರಕಾರ್ಮಿಕರಾಗಿದ್ದಾರೆ. ಆದರೆ ಅವರ ಸರ್ವೇಸಾಮಾನ್ಯ ಕಸುಬು ಬುಟ್ಟಿ ಹೆಣೆಯುವುದು. ಇಡೀ ಸಮುದಾಯವು ಬುಟ್ಟಿ ಹೆಣೆದು ಮಾರಿಯೇ ಬದುಕನ್ನು ಸಾಗಿಸುತ್ತಿದೆ.

ವಾರಣಾಸಿಯಲ್ಲಿ ಬದುಕುತ್ತಿರುವ ಡೊಮ್ ಸಮುದಾಯದವರು ಸ್ಮಶಾನ ಕಾಯುತ್ತಾರೆ. ಈ ಸಮುದಾಯದವರು ಶವದ ಅಂತ್ಯಸಂಸ್ಕಾರಗಳಲ್ಲಿ ವಿಧಿವತ್ತಾಗಿ ಪಾಲ್ಗೊಳ್ಳುತ್ತಾರೆ. ಸ್ಥಳೀಯರ ನಂಬಿಕೆಯ ಪ್ರಕಾರ ಶವದ ಚಿತೆಗೆ ಡೊಮ್ ಸಮುದಾಯದವರು ಬೆಂಕಿ ಕೊಡದಿದ್ದಲ್ಲಿ ಸತ್ತವನಿಗೆ ಮೋಕ್ಷ ಸಿಗುವುದಿಲ್ಲವಂತೆ. ಕಾಶಿಯಲ್ಲಿರುವ ಎರಡು ಸ್ಮಶಾನಗಳಲ್ಲಿ ಬರುವ ಆದಾಯವನ್ನು ಡೊಮ್ ಸಮುದಾಯದವರು ಪಾರಂಪರಿಕವಾಗಿ, ನ್ಯಾಯಬದ್ಧವಾಗಿ ಪಡೆಯುತ್ತಿದ್ದಾರೆ. ಸ್ಮಶಾನದ ನಿರ್ವಹಣೆಯಲ್ಲಿ ಅವರಿಗೆ ಮೂರು ಬಗೆಯಲ್ಲಿ ಕೂಲಿ ಸಿಕ್ಕುತ್ತದೆ. ೧. ಹಣ ರೂಪದ ಭತ್ಯೆ ೨. ಭತ್ಯೆ ಯಾವುದೋ ರೂಪದಲ್ಲಿ ೩. ಶವದ ಮೇಲಿನ ಕೆಲವು ವಸ್ತುಗಳು (ಶವದ ಅರ್ಧ ಬಟ್ಟೆ, ಬಂಬೂ, ಬಿದಿರು ಮತ್ತು ತೆಂಗಿನ ಕಾಯಿ ಇತ್ಯಾದಿ) ಶವದ ಮೇಲಿದ್ದ ಚಿನ್ನದ ಆಭರಣಗಳನ್ನು, ಡೊಮರು ಆ ಚಿತೆ ನಂದಿದ ಮೇಲೆ ಹುಡುಕಿ ತೆಗೆಯುತ್ತಾರೆ. ಆದರೆ ಈ ಎಲ್ಲ ದುಡಿಮೆಯನ್ನು ಡೋಮ್ ಸಮುದಾಯವು ಮಹಾಪಾತ್ರ (ಶವಸಂಸ್ಕಾರ ಪುರೋಹಿತ)ರ ಜೊತೆ, ಕ್ಷೌರಿಕ, ಅಂಬಿಗ ಮತ್ತು ಕುಂಬಾರರ ಜೊತೆ ಹಂಚಿಕೊಳ್ಳಬೇಕು.

ಬಂಗಾಳದಲ್ಲಿ ಡೊಮ್ ಸಮುದಾಯ ಅತ್ಯಂತ ಕೆಳಜಾತಿ ಸಮುದಾಯವಾಗಿ ಪರಿಗಣಿಸಲ್ಪಟ್ಟಿದೆ. ಇಡೀ ಉತ್ತರಭಾರತದಲ್ಲಿ ಡೊಮ್ ಸಮುದಾಯದವರು ಸಮಾಜದ ಯಾವುದೇ ಸಮುದಾಯ ನಿರ್ವಹಿಸಲು ಅಸಹ್ಯಿಸಿಕೊಳ್ಳುವ ನಿಕೃಷ್ಟ ಕೆಲಸಗಳನ್ನೆಲ್ಲ ಮಾಡಲೇಬೇಕಾಗುತ್ತದೆ.

ಬಿಹಾರದಲ್ಲಿ ಮತ್ತು ಅದರ ಪಶ್ಚಿಮ ಭಾಗದಲ್ಲಿ ಡೊಮ್ ಸಮುದಾಯವು ಎರಡು ಭಾಗಗಳಾಗಿ ಗುರುತಿಸಲ್ಪಟ್ಟಿದೆ. ಒಂದು ಗುಂಪು ಕೆಲವು ಹಳ್ಳಿಗಳಲ್ಲಿ ನೆಲೆನಿಂತು ಬುಟ್ಟಿ ಮತ್ತು ಚಾಪೆಗಳನ್ನು ಹೆಣೆಯುವ ಕೆಲಸದಲ್ಲಿ, ಕೆಲವೆಡೆ ಜಾಡಮಾಲಿಗಳಾಗಿ ಕೆಲಸ ನಿರ್ವಹಿಸುತ್ತಾರೆ. ಇನ್ನೊಂದು ಗುಂಪಿನ ಜನ ಹೆಚ್ಚು ಕಡಿಮೆ ಅಲೆಮಾರಿಗಳಾಗಿ, ವ್ಯವಸ್ಥಿತ ಗುಂಪುಗಳಲ್ಲಿ ಕಳ್ಳತನ ಮಾಡುವುದರಲ್ಲಿ ನಿಷ್ಣಾತರಾಗಿದ್ದಾರೆ. ಈ ಸಮುದಾಯದ ಕೆಲವು ಗುಂಪುಗಳು ಅತ್ಯಂತ ವಿರಳವಾಗಿ ಮಧ್ಯಭಾರತ, ಆಂಧ್ರ ಮತ್ತು ಕರ್ನಾಟಕದಲ್ಲಿ ವಾಸಿಸುತ್ತಿವೆ. ದಕ್ಷಿಣದಲ್ಲಿ ಡೊಂಬರಾಟವಾಡುತ್ತ, ನೃತ್ಯಗಾರರಾಗಿ ಮತ್ತು ವೇಶ್ಯವಾಟಿಕೆಗಳಲ್ಲಿ ತೊಡಗಿ ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದಾರೆ. ಆಂಧ್ರದಲ್ಲಿ ಇವರು ಮುಖ್ಯವಾಗಿ ವಿಶಾಖಪಟ್ಟಣದ ಕಡಲತೀರದಿಂದ ೫೦ ರಿಂದ ೧೦೦ ಮೈಲಿ ದೂರದಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಇವರನ್ನು ಇಲ್ಲಿ

'ಡೊಂಬ'(Domba) ಎಂದು ಕರೆಯಲಾಗುತ್ತದೆ. ಎಲ್ಲಾ ಕಡೆ ವಾಸಿಸುವ ಡೊಮರಂತೆ ಇಲ್ಲಿಯ ಡೊಂಬರು ಸ್ಥಳೀಯ ಹಿಂದೂ ಸಮಾಜದಲ್ಲಿ ಅಸ್ಪೃಶ್ಯರಾಗಿಬಿಟ್ಟಿದ್ದಾರೆ. ಕಾರಣ ಅವರು ದನದ, ಹಂದಿಯ, ಕುದುರೆಯ ಮತ್ತು ಕೊಳೆತ ಮಾಂಸವನ್ನು ತಿನ್ನುವುದು. ಬಂಗಾಳಿಗಳು ಮತ್ತು ಉರಿಯರು ಇವರನ್ನು ಅಸ್ಪೃಶ್ಯರೆಂದೇ ಪರಿಗಣಿಸಿದ್ದಾರೆ.

ಡೊಂಬರು ಪರ್ವತವಾಸಿಗಳು ಬಳಸುವ ಚದಾರಗಳನ್ನು ಮತ್ತು ಬಟ್ಟೆಗಳನ್ನು ಸಹ ನೇಯುತ್ತಾರಲ್ಲದೆ, ಸಮಾಜದ ಎಲ್ಲ ಬಗೆಯ ಕೆಲಸಗಳ ಜೊತೆ ಜಾಡಮಾಲಿಗಳೂ ಆಗಿ ಕೆಲಸ ನಿರ್ವಹಿಸುತ್ತಾರೆ. ಕೆಲವರು ಚಿಕ್ಕ ವ್ಯಾಪಾರಿಗಳಾಗಿ, ಕುದುರೆಯ ಪೋಷಕರಾಗಿ, ಮದ್ದಳೆ ಬಾರಿಸುವ ಮತ್ತು ಸಂಗೀತಗಾರರಾಗಿ, ಕೆಲವೆಡೆ ಸಾಲ ಕೊಡುವ ಸಾಹುಕಾರರಾಗಿ, ಮತ್ತೊಂದೆಡೆ ಭಿಕ್ಷುಕರಾಗಿ ಕಾಣಸಿಗುತ್ತಾರೆ.[೨೨]

ಇನ್ನು ವಸಾಹತುಶಾಹಿ ಆಡಳಿತದ ಭಾಗವಾಗಿ ಇಲ್ಲಿ ಸಂಭವಿಸಿದ ಕೈಗಾರಿಕೀರಣದಿಂದಾಗಿ ಭಾರತದ ಗುಡಿಕೈಗಾರಿಕೆಗಳು ನಾಶವಾಗಿ, ಕರಕುಶಲ ಕಲೆಗಳನ್ನು ನಂಬಿದ್ದ ಸಮುದಾಯಗಳು ಆರ್ಥಿಕವಾಗಿ ನೆಲೆ ತಪ್ಪಿಹೋದವು. ಗುಡಿಕೈಗಾರಿಕೆಗಳನ್ನು ಕರಕುಶಲ ಕಲೆಗಳನ್ನು, ಪ್ರದರ್ಶಕ ಕಲೆಗಳನ್ನು ಪಾರಂಪರಿಕವಾಗಿ ಅವಲಂಬಿಸಿಕೊಂಡು ಬಂದ ಸಮುದಾಯಗಳು ಆಧುನಿಕ ತಂತ್ರಜ್ಞಾನದ ಮುಂದೆ ಇನ್ನಿಲ್ಲದಂತೆ ಸೋತುಹೋದವು. ಬುಟ್ಟಿ ಹೆಣೆಯುವ ಮೇದರು, ಕೃಷಿಯ ಉಪಕರಣಗಳನ್ನು ತಯಾರಿಸುವ ಕಮ್ಮಾರ, ಡೊಂಬರಾಟವನ್ನೇ ಅವಲಂಬಿಸಿದ ಡೊಂಬರು, ತೊಗಲು ಬೊಂಬೆ ಕುಣಿಸುವ ಕಿಳ್ಳೆಕ್ಯಾತರು ಆಧುನಿಕ ತಂತ್ರಜ್ಞಾನ ಮತ್ತು ಮನರಂಜಕ ಎಲೆಕ್ಟ್ರಾನಿಕ್ ಮಾಧ್ಯಮಗಳು ಮುಂದೆ ಸಪ್ಪೆಯಾದರು. ವಸಾಹತುಶಾಹಿ ಕಾಲಘಟ್ಟದ ಕೈಗಾರಿಕೀಕರಣದ ಈ ಬಿರುಸಿನ ಕಾರ್ಯಾಚರಣೆಯಿಂದಾಗಿ ಭಾರತದ ಸ್ವಯಂಪೂರ್ಣ ಉತ್ಪಾದನಾ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳಾದವು. ವಸಾಹತುಶಾಹಿಗಳು ಮೂರನೇ ಜಗತ್ತಿನ ಮಾನವ ಸಂಪತ್ತು ಮತ್ತು ನೈಸರ್ಗಿಕ ಸಂಪತ್ತುಗಳನ್ನು ಕೊಳ್ಳೆ ಹೊಡೆಯಲೆಂದೇ ಇಲ್ಲಿ ತಮ್ಮ ಕೈಗಾರಿಕೆಗಳನ್ನು ಪ್ರಾರಂಭಿಸಿದರು.

ಈ ಪ್ರಕ್ರಿಯೆಯಲ್ಲಿ ಭಾರತದ ಪಾರಂಪರಿಕ ಸಾಮಾಜಿಕ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳಾದರೂ, ಈ ಬದಲಾವಣೆಗಳು ಕೇವಲ ಆನುಷಾಂಗಿಕ. ಆಧುನಿಕ ಜಗತ್ತಿನಲ್ಲಿ ತನ್ನ ಪಾರಂಪರಿಕ ಕಸುಬನ್ನು ಎತ್ತಿ ನಿಲ್ಲಿಸಲಾರದ ಜಾತಿ ಸಮುದಾಯಗಳು ನೆಲೆ ತಪ್ಪಿಹೋದವು. ತಮ್ಮ ಪಾರಂಪರಿಕ ಆರ್ಥಿಕ ಮೂಲಗಳನ್ನು ಆಧುನಿಕ ಜಗತ್ತಿನಲ್ಲಿ ಬಂಡವಾಳವನ್ನಾಗಿ ಪರಿವರ್ತಿಸದ ಜಾತಿಗಳು ದಿಕ್ಕೆಟ್ಟು ಹೋದವು. ಅಂತಹ ಸಮುದಾಯಗಳಲ್ಲಿ ಕರಕುಶಲ ಕಲೆಗಳನ್ನು ನಂಬಿದ್ದ ಸಮುದಾಯಗಳು ಮತ್ತು ಪ್ರದರ್ಶಕ ಕಲೆಗಳನ್ನು ರೂಢಿಸಿಕೊಂಡಿದ್ದ ಸಮುದಾಯಗಳು ಪ್ರಮುಖವಾದವು. ಆಧುನೀಕರಣ ಮತ್ತು ಕೈಗಾರಿಕೀಕರಣವು ಭಾರತದಲ್ಲಿ ಕ್ರಾಂತಿಕಾರಿ ಸಾಮಾಜಿಕ ಬದಲಾವಣೆಗಳನ್ನು ತಂದಿತು ಎನ್ನುವ ಎಂ.ಎನ್. ಶ್ರೀನಿವಾಸ್‌ರಂತಹ ಸಮಾಜಶಾಸ್ತ್ರಜ್ಞರು ಗುಡಿಕೈಗಾರಿಕೆಗಳ ನಾಶದಿಂದ, ಅವುಗಳನ್ನು ಅವಲಂಬಿಸಿದ್ದ ಸಮುದಾಯಗಳು ಯಾವ ಬಗೆಯ ತಲ್ಲಣಗಳಿಗೆ ಒಳಗಾದವು ಎಂಬುದನ್ನು ಮರೆತುಬಿಡುತ್ತಾರೆ. ಪಾರಂಪರಿಕ ಊಳಿಗಮಾನ್ಯ ಹಿಡಿತದಿಂದ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯ ಕಡೆಗೆ ಭಾರತದ ಸಮಾಜ ನಡೆದು ಹೋದರೂ

ಸಹ, ಭಾರತದ ಕೆಳಜಾತಿ ಸಮುದಾಯಗಳ ಸಾಮಾಜಿಕಾರ್ಥಿಕ ಸ್ಥಿತಿಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಸಂಭವಿಸಲಿಲ್ಲ. ಕೆಳಜಾತಿಗಳಿಗೆ ಆಧುನಿಕತೆಯು ಕೆಲವು ರಿಯಾಯಿತಿಗಳನ್ನು ತೋರಿದಂತೆ ಕಂಡುಬಂದರೂ ಸಹ ಭಾರತದ ಆರ್ಥಿಕ ಅಸಮಾನತೆಯಲ್ಲಿ ಯಾವ ಮುಖ್ಯ ಬದಲಾವಣೆಗಳು ಸಂಭವಿಸಲಿಲ್ಲ. ಆಧುನಿಕತೆಯ ಕುರಿತು ನಮ್ಮಲ್ಲಿ ಅನೇಕ ಮೂಢನಂಬಿಕೆಗಳು ಬೆಳೆದು ಬಂದಿವೆ. ಆಧುನಿಕತೆ ತನ್ನೆಲ್ಲ ತಂತ್ರಜ್ಞಾನದಿಂದ, ಭಾರತದ ಸಾಂಪ್ರದಾಯಿಕ ಮತ್ತು ಅಸಮಾನ ಆರ್ಥಿಕ ವ್ಯವಸ್ಥೆಯನ್ನು ಸರಿಪಡಿಸುತ್ತದೆ. ಉತ್ಪಾದನಾ ಸಾಧನಗಳ ಕ್ರಾಂತಿಕಾರಿ ಬದಲಾವಣೆಗಳಿಂದ ಭಾರತದಂತಹ ಪಾರಂಪರಿಕ ಉತ್ಪಾದನಾ ವ್ಯವಸ್ಥೆಯಲ್ಲಿ ಅಗಾಧ ರೂಪಾಂತರಗಳು ಸಂಭವಿಸುತ್ತವೆ. ಮತ್ತು ಸಾಮಾಜಿಕ ಸಂಬಂಧಗಳ ಸ್ವರೂಪದಲ್ಲಿ ಸಹ ಅದು ನಿಚ್ಚಳ ಬದಲಾವಣೆಗಳನ್ನು ತರಬಲ್ಲದೆಂದು ನಂಬಲಾಗಿದೆ. ಆದರೆ ಆಧುನಿಕತೆಯು ತಂತ್ರಜ್ಞಾನದ ಜೊತೆಯಲ್ಲಿಯೇ ಬಂಡವಾಳಶಾಹಿ ಉತ್ಪಾದನಾ ವಿಧಾನವನ್ನೂ ಇಂಡಿಯಾಕ್ಕೆ ಹೊತ್ತು ತಂದಿತು. ಈ ಆಧುನಿಕತೆ ಊಳಿಗಮಾನ್ಯಶಾಹಿ ಸಾಮಾಜಿಕ ಸಂಬಂಧಗಳನ್ನು, ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯ ಚೌಕಟ್ಟಿಗೆ ತಂದು ಜೋಡಿಸಿತು. ಹೀಗೆ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಗೆ ಸಮಾಜ ತನ್ನನ್ನು ಹೊಂದಿಸಿಕೊಳ್ಳುವ ಹಂತದಲ್ಲಿ, ಈ ಶ್ರೇಣೀಕೃತ ವಿಷಮ ಸಾಮಾಜಿಕ ಸಂಬಂಧಗಳಲ್ಲಿ ಕೆಲವು ಬದಲಾವಣೆಗಳು ಸಂಭವಿಸಿದವು. ಆದರೆ ಭಾರತದ ಒಟ್ಟು ಆರ್ಥಿಕ ಅಸಮಾನತೆಯಲ್ಲಿ ಯಾವ ದೊಡ್ಡ ಬದಲಾವಣೆಗಳೂ ಸಂಭವಿಸಲಿಲ್ಲ. ಇದಕ್ಕೆ ಡೊಂಬರ ಸಮುದಾಯವನ್ನೇ ಉದಾಹರಿಸಬಹುದು.

ಟಿಪ್ಪಣಿಗಳು

01. P K Mishra, Study Of Nomads,Ed: Surjit Chanrda Sinh, Research Programmes on Cultural Anthropology and Allied Disciplines, p 151-152, 1970

02. Quoted, Ibid, p 152

03. Quoted, Ibid, p 152

04. G E Markov, Problems of Social change Among the Asiatic Nomads-p-305, Ed:Woldaana Weissleder, The Nomadic alternative, 1977

05. O.P. Goyal, Nomads at the Crossroads, p-1-2005

06. ನೋಡಿ: Chamanlal, Gipsies: Forgotten children of India, 1967

07. S.S.Shashi-Roma.p-9-2001

08. Ibid, Bhupendra kumar Modi, Forward

09. ನೋಡಿ: Woldaana Weissleder, Ed: The Nomadic alternative, 1977

10. Aparn Rao, Michael J. Casimir-Movements of peoples, Nomads in India-220-221

11. ಎ ಎಸ್ ಪ್ರಭಾಕರ. ಅಲೆಮಾರಿಗಳ ಶಾಪಗ್ರಸ್ತ ಪಯಣ, ಬುಡಕಟ್ಟು ಅಧ್ಯಯನ ೩. ಪು ೧೦೭,೧೦೮, ೨೦೦೫

12. Ramendranath Nandi, State Formation Agrarian Growth and Social Change in Feudal South India A D 600-1200, p 187, 2000

13. ಈಚೆಗೆ ಕುಶಲಕರ್ಮಿಗಳು ತಮ್ಮನ್ನು ಸಾಮಾಜಿಕವಾಗಿ ಉನ್ನತ ಶ್ರೇಣಿಗೆ ಸೇರಿದವರೆಂದು ಬದುಕುತ್ತಿದ್ದಾರೆ. ಆದರೆ ಭಾರತದ ಸ್ವಯಂಪೂರ್ಣ ಗ್ರಾಮ ವ್ಯವಸ್ಥೆಯಲ್ಲಿ ಕುಶಲಕರ್ಮಿಗಳು ನಿರ್ವಹಿಸುತ್ತಿದ್ದ ಮತ್ತು

ನಿರ್ವಹಿಸುತ್ತಿರುವ ಎಲ್ಲ ಕಸಬುಗಳನ್ನು ಸೇವಕ ವರ್ಗಕ್ಕೆ ಸೇರಿದ,ಕೆಳಜಾತಿ ಸಮುದಾಯಗಳು ಈವತ್ತಿಗೂ ನಿರ್ವಹಿಸುತ್ತಿರುವುದನ್ನು ಕಾಣಬಹುದು.

14. ಬಂಜಗೆರೆ ಜಯಪ್ರಕಾಶ್, ಕನ್ನಡ ರಾಷ್ಟ್ರೀಯತೆ, ಪು, ೧೬೬, ೨೦೦೦
15. ಅದೇ ಪು, ೧೨೦
16. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಡಾ. ಅಂಬೇಡ್ಕರ್, ಸಂ. ೧, ಪು ೬೮
17. H V Nanjundaiah,Ethnographical Survey of Mysore, Dombar Caste XIII, p 1,1908
18. Edgar Thurston, Castes & Tribes of Southern India p 173, 1909
19. Stuart, Quoted, Edgar Thurston, Castes & Tribes of Southern India, p 173-174, 1909
20. Fowcett, Quoted, Edgar Thurston, Castes & Tribes of Southern India, p 174-175, 1909
21. H.V. Nanjundiah, Ananth krishnna Iyer, The Mysore Tribes and Castes, p 139,1922
22. Syed Siraj Ul Hasan, The Castes & Tribes of H.E.H.Nizam's Dominions, p 177-178 1920
23. ದೇವೇಂದ್ರಕುಮಾರ್ ಹಕಾರಿ, ಡೊಂಬರ ಸಂಸ್ಕೃತಿ, ಪು ೨೦, ೨೧,೧೯೯೩
24. ಹರಿಲಾಲ್ ಪವಾರ್, ಡೊಂಬರು ಒಂದು ಐತಿಹಾಸಿಕ ಅಧ್ಯಯನ, ಇತಿಹಾಸ ದರ್ಶನ ಸಂ ೧೨, ಪು ೧೯೮,೧೯೯೭
25. www.wikipedia.org
26. ದೇವಚಂದ್ರ, ರಾಜಾವಳಿ ಕಥೆ, ಪು ೨೯೫, ೨೦೦೦
27. ಅದೇ, ಪು ೨೯೫
28. H V Nanjundaiah,Ethnographical Survey of Mysore, Dombar Caste XIII, p 2,1908
29. Ibid, p 2
30. Ibid, p 3
31. Syed Siraj Ul Hasan, The Castes & Tribes of H.E.H.Nizam's Dominions, p 178, 1920
32. Ibid, p 181-182
33. ದೇವೇಂದ್ರಕುಮಾರ್ ಹಕಾರಿ, ಡೊಂಬರ ಸಂಸ್ಕೃತಿ, ಪು ೧೪, ೨೧,೧೯೯೩
34. ಅದೇ, ಪು ೧೬,೧೭
35. Edgar Thurston, Castes & Tribes of Southern India, Vol I, p 310, 1909
36. ಹರಿಲಾಲ್ ಪವಾರ್, ಹೆಳವರ ಸಂಸ್ಕೃತಿ, ಪು ೧೨,೧೩,೧೯೯೩
37. ರಾಜಪ್ಪ ದಳವಾಯಿ, ಹಕ್ಕಿಪಿಕ್ಕಿಯರ ಸಂಸ್ಕೃತಿ, ಪು ೮,೯,೧೯೯೩
38. ಟಿ. ಗೋವಿಂದರಾಜು. ಗೊಂಬೆರಾಮರ ಸಂಸ್ಕೃತಿ. ಪು.೧೮, ೧೯೯೩
39. ಪಿ.ಕೆ.ಖಂಡೋಬ. ಸುಡುಗಾಡು ಸಿದ್ಧರ ಸಂಸ್ಕೃತಿ. ಪು.೧೨-೧೩, ೧೯೯೩
40. ಹೊಸೂರು ಮುನಿಶಾಮಪ್ಪ. ನಟುವರ ಸಂಸ್ಕೃತಿ. ಪು.೨೬,೧೯೯೩
41. ಮಲ್ಲಿಕಾರ್ಜುನ, ಶಿ.ಲಕ್ಕೆ. ಕವಲೆತ್ತಿನವರು ಪು.೨೬೧-೨೬೨, ೧೯೯೮. ಸುವರ್ಣ ಜಾನಪದ
42. ಎಚ್.ಎಂ.ಮಹೇಶ್ವರಯ್ಯ, ಮುರಿಗೆಪ್ಪ. ಡೊಂಬರು: ಒಂದು ಅಧ್ಯಯನ,ಪು.೧೧,೧೯೯೨

43. ಅದೇ, ಪು ೭

44. Al-Biruni, India, p 46, 1983

45. ಡಾ. ಎಂ. ಚಿದಾನಂದಮೂರ್ತಿ, ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ, ಪು.೪, ೧೯೮೫

46. ಭಗವತ್ ಶರಣ ಉಪಾಧ್ಯಾಯ,ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ, ಪು ೧೫೩,೧೯೫೦

47. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಡಾ. ಅಂಬೇಡ್ಕರ್, ಸಂ. ೧, ಪು,೨೪, ೧೯೯೦

48. Ramendranath Nandi, State Formation Agrarian Growth and Social Change in Feudal South India A D 600-1200, p187, 2000

49. Saki, Making History, Karnataka's people and their past, Vol-1, p175, 1998

50. ದೇವೇಂದ್ರಕುಮಾರ್ ಹಕಾರಿ, ಡೊಂಬರ ಸಂಸ್ಕೃತಿ, ಪು ೨೫, ೧೯೯೩

51. Al-Biruni, India, p 46, 1983

52. ಡಿ.ಡಿ.ಕೋಸಂಬಿ, ಪ್ರಾಚೀನ ಭಾರತದ ಚರಿತ್ರೆ ಪು.೪೧,೧೯೯೮

53. ಡಾ. ಎಂ. ಚಿದಾನಂದಮೂರ್ತಿ, ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ, ಪು.೧೫,೧೬, ೧೯೮೫

54. H V Nanjundaiah,Ethnographical Survey of Mysore, Dombar Caste XIII, p 16,1908

55. Stephen Fuchs, At the Bottom of Indian Society, p 40, 1981

56. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಡಾ. ಅಂಬೇಡ್ಕರ್, ಸಂ. ೫, ಪು.೩೨, ೧೯೯೬

57. ಅದೇ, ಪು ೨೭

58 ಅದೇ, ಪು ೨೬

59 ಅದೇ, ಪು ೧೪

60 ಅದೇ, ಪು ೩೬,೩೭

61 Felix Padel, The Sacrifice Of Human Bieng, p 9, 2000

62 Ibid, p 14

63 ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಡಾ. ಅಂಬೇಡ್ಕರ್, ಸಂ. ೫, ಪು.೩೩, ೧೯೯೬

64 ಶ್ರೀರಾಮ ಇಟ್ಟಣ್ಣವರ್, ಕೌಜಲಗಿ ನಿಂಗವ್ವ, ಪು ೫,೧೯೯೬

65 ಅದೇ, ಪು ೫

66 ಎಚ್.ಎಂ.ಮಹೇಶ್ವರಯ್ಯ, ಮುರಿಗೆಪ್ಪ, ಡೊಂಬರು: ಒಂದು ಅಧ್ಯಯನ,ಪು.೪,೧೯೯೨

67. P K Mishra, Study Of Nomads,Ed: Surjit Chanrda Sinh, Research Programmes on Cultural Anthropology and Allied Disciplines, p 84, 1970

68. EI xxv-331-1920, Quoted. T.V.Mahalingam, Administration and social life under Vijayanagar, p 68, 1969

69. Ibid p 227

70. M.Krishna Kumari, State palicy Towards certain caste groups in Andhra under Vijayanagar, p.330, 2001
71. Edgar Thurston, Castes & Tribes of Southern India, Vol I, p 187, 1909
72. ಸಿ.ಪಿ.ನಾಗರಾಜು, ದೊಂಬನ ಕೊಡುಗೆ, ಜಾನಪದ ಜಗತ್ತು, ಪು.೪೦,೪೧, ೧೯೮೦
73. Edgar Thurston, Castes & Tribes of Southern India, Vol I, p 176, 1909
74. ಜ್ಯೋತಿಹೊಸೂರು, ಜಾತಿಗಾರರ ಜಾತಕ, ಪು.೧೦,೧೧, ೧೯೮೫
75. H V Nanjundaiah,Ethnographical Survey of Mysore, Dombar Caste XIII, p 3,1908
76. Saki, Making History, Karnataka's people and their past, Vol-1, p 173, 1998
77. Andre Wink, Land and Souereignty in India, Agrarian Society and politics under the 18th century Maratha svarajya, p 214-215, 1996
78. Irfan Habib, The Agrarian System of Mughal India 1556-1707, p 157-158, 1999
79. ಚಿದಾನಂದಮೂರ್ತಿ, ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ, ಪು.೫೬ -೫೭. ೧೯೮೫
80. Irfan Habib, The Agrarian System of Mughal India 1556-1707, p 156, 1999
81. Saki, Making History, Karnataka's people and their past, Vol-1, p 175, 1998
82. Ibid, p 175
83. ಚಿದಾನಂದಮೂರ್ತಿ,ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ, ಪು.೧೦೯, ೧೯೮೫
84. ಅದೇ, ಪು.೧೪೩
85. Stephen Fuchs, At the Bottom of Indian Society, p 127, 1981
86. Irfan Habib, Essays on Indian History, p 92, 1995
87. Hiroshi Fukazawa, The Medieval Deccan, Peasants, Social Systems and States, Sixteenth to Eighteenth centuries, p 153, 1998
88. Ibid, p 154,
89. ಎ.ಪಿ. ಮಿದವ್ಪೋಯ್, ಭಾರತದ ಆರ್ಥಿಕ ವ್ಯವಸ್ಥೆ, ಪು.೩೯, ೧೯೮೭
90. Irfan Habib, Essays on Indian History, p 313, 1995
91. Irfan Habib, The Agrarian System of Mughal India 1556-1707, p 143, 1999
92. Aparna Rao Michael. J Casimir, Movements of Peoples, Nomads In India, Socialogy and Social Anthropology, p 232, 2003
93. Neeladri Bhattacharya, pastroralists in a colonial world, p 83, 1995
94. Felix Padel, The Sacrifice Of Human Bieng, p 23, 2000
95. G N Devi, The Branded Tribes Of India, p 1, 1998
96. Stephen Fuchs, At the Bottom of Indian Society, p 54, 1981
97. Mahaswetha Devi, An Act was Born, p 3, 1998
98. Ibid, p 3
99. Ibid, p 3
100. Aparna Rao, Machael Casimir, Movements of Peoples, Nomads In India, p 235
101. G N Devi, The Branded Tribes Of India, p 1, 1998

102. The Criminal Tribes Act, 1871, (Act xxvii of 1871) Quoted. Budhan, No.-4-Aug-Sept-1998. p.3 to 6,1998

103. The Criminal Tribes Act 1924 (Act VI of 1924) Ibid p p-10-26

104. Meena Radhakrishna, Criminal Tribes Act in Madras, Budhan - No. 9-10-Jan 1999-p-1, 1999

105. Neeladri Bhattacharya, pastroralists in a colonial world, p 84,1995

106. G.N.Devy, Ed: Budhan.No-1, March-1998, p-4-10,1998

107. Stephen Fuchs,At the Bottom of Indian Society, p 55, 1981

108. H V Nanjundaiah,Ethnographical Survey of Mysore, Dombar Caste XIII, p 21, 22,1908

109. Edgar Thurston, Castes & Tribes of Southern India, Vol I, p 174, 1909

110. H.V. Nanjundiah, Ananth krishnna Iyer, The Mysore Tribes and Castes, p 164,165,1922

111. Syed Siraj Ul Hasan, The Castes & Tribes of H.E.H.Nizam's Dominions, p 177, 1920

112. Stephen Fuchs, At the Bottom of Indian Society, p 40,41, 1981

ಅಧ್ಯಾಯ ೪

ವರ್ತಮಾನ ಮತ್ತು ಡೊಂಬರು

ಡೊಂಬರ ಸಮುದಾಯದ ಧಾರ್ಮಿಕತೆ

ವರ್ತಮಾನದ ಡೊಂಬರ ಸಾಮಾಜಿಕ ಸಂರಚನೆ

ಡೊಂಬರ ವಿಧಗಳು ಮತ್ತು ಪಂಗಡಗಳು

ನೆಲೆನಿಂತ ಡೊಂಬರ ಸಮುದಾಯದ ಸಾಮಾಜಿಕ ಸ್ಥಿತಿಗತಿಗಳು

ಅಲೆಮಾರಿ ಡೊಂಬರ ಸಾಮಾಜಿಕ ಸ್ಥಿತಿಗತಿಗಳು

ಅಲೆಮಾರಿ ಡೊಂಬರ ಸಾಮಾಜಿಕ ಸಂರಚನೆ

ಸ್ಥಿರ ಮತ್ತು ಅಲೆಮಾರಿ ಸಮುದಾಯಗಳ ನಡುವಿನ ಸಾಮ್ಯ ಮತ್ತು ವೈರುಧ್ಯಗಳು

ಡೊಂಬರ ವರ್ತಮಾನದ ಮುಖಾಮುಖಿ

ಡೊಂಬರ ಡೊಂಬರ ಆರ್ಥಿಕ ಸ್ಥಿತಿಗತಿ

ಡೊಂಬರ ಶೈಕ್ಷಣಿಕ ಸ್ಥಿತಿಗತಿ

ವರ್ತಮಾನ ಮತ್ತು ಡೊಂಬರು

ಪೀಠಿಕೆ

ಈ ಹಿಂದೆ ಚರ್ಚಿಸಿದಂತೆ ಭಾರತದಲ್ಲಿ ಒಂದು ಜಾತಿಯೆಂದರೆ ಅದೊಂದು ಉತ್ಪಾದನಾ ಘಟಕ. ಒಂದೊಂದು ಜಾತಿ ಒಂದು ಸ್ವಯಂಪೂರ್ಣ ಸಾಮಾಜಿಕಾರ್ಥಿಕ ಅವಕಾಶದ (Space) ಒಳಗೆ ಒಂದು ನಿಶ್ಚಿತ ಉತ್ಪಾದನೆಯನ್ನು ಅವಲಂಬಿಸಿಕೊಂಡು ಬಂದಿರುವುದು ಭಾರತದ ಸಮಾಜದ ಒಂದು ವಿಶಿಷ್ಟ ಲಕ್ಷಣ. ಈ ಅವಲಂಬಿತ ಉತ್ಪಾದನೆಯ 'ಶ್ರೇಷ್ಠ ಮತ್ತು ಕನಿಷ್ಟ' ಸ್ವರೂಪಕ್ಕೆ ಅನುಗುಣವಾಗಿ ಜಾತಿಗಳು ಈ ಸಮಾಜದಲ್ಲಿ ರೂಪುಗೊಂಡಿರುವುದನ್ನು ನೋಡಿದ್ದೇವೆ. ಕೆಲವು ಸಲ ಕೆಲ ಜಾತಿಗಳ ಕಸುಬುಗಳು 'ಸರಕನ್ನು' ಉತ್ಪಾದಿಸಿದರೆ, ಕೆಲವು ಜಾತಿಗಳ ಕಸಬುಗಳು ಸರಕನ್ನು ಉತ್ಪಾದಿಸುವುದರ ಜೊತೆಗೆ ಸಮಾಜದ ಒಟ್ಟಾರೆಯ 'ಸೇವೆ'ಗಾಗಿಯೂ ರೂಪುಗೊಂಡಿರುವುದು ಕಂಡುಬರುತ್ತದೆ. ಸಮಾಜದ ಒಟ್ಟಾರೆಯ 'ಸೇವೆ'ಗಾಗಿ ರೂಪುಗೊಂಡ ಕಸಬುಗಳಲ್ಲಿ ಹೇರಳವಾದ ಶ್ರಮ ವ್ಯಯವಾದರೂ ಸಹ ಅಲ್ಲಿ ಉತ್ಪಾದಿಸಲ್ಪಟ್ಟ ಫಲಿತ ಆಳುವ ವರ್ಗಗಳ ರಂಜನೆಗೆ ಮಾತ್ರ ಮೀಸಲಾಗಿರುತ್ತದೆ. ಹೀಗಾಗಿ ಸರಕು ಉತ್ಪಾದನೆಯ ಕಸಬುಗಳನ್ನು ರೂಢಿಸಿಕೊಂಡ ಸಮುದಾಯಗಳಿಗೂ, 'ಸೇವೆಗಳಿಗಾಗಿ' ಮೀಸಲಾದ ಕಸಬುಗಳನ್ನು ರೂಢಿಸಿಕೊಂಡು ಬಂದ ಸಮುದಾಯಗಳಿಗೂ ಭಾರತದ ಸಮಾಜದ ಶ್ರೇಣೀಕರಣದಲ್ಲಿ ಬೇರೆ ಬೇರೆ ಸ್ಥಾನಮಾನಗಳು ಲಭ್ಯವಾಗಿರುವುದನ್ನು ಕಾಣುತ್ತೇವೆ. ಜೊತೆಗೆ ಈ ಎರಡೂ ದುಡಿವ ವರ್ಗಗಳ ಸಾಮಾಜಿಕಾರ್ಥಿಕ ರಂಗಗಳಲ್ಲಿಯ ಆಧಿಕಾರದ ಸ್ಥಾನಮಾನಗಳೂ ಸಹ ಅಸಮಾನವಾಗಿವೆ. ಏಕೆಂದರೆ ಸರಕು ಉತ್ಪಾದನೆಯ ಸಮುದಾಯಗಳು ಭಾರತದ ಸಾಮಾಜಿಕ ಸ್ಥಿತ್ಯಂತರಗಳ ಹಲವು ಕಾಲಘಟ್ಟದಲ್ಲಿ ವಿವಿಧ ಬಗೆಯ ಅಧಿಕಾರ ಸ್ಥಾನಗಳನ್ನು ಪಡೆಯುತ್ತ, ಕಳೆದುಕೊಳ್ಳುತ್ತಾ, ಮತ್ತೆ ಮತ್ತೆ ತಮ್ಮ ಸ್ವರೂಪಗಳನ್ನು ಬದಲಿಸುತ್ತಾ ಬಂದಿವೆ. ಆದರೆ ಸರಕು ಉತ್ಪಾದನೆಯ ಸಮುದಾಯಗಳ ಅಧಿಕಾರದ ಸ್ಥಾನಮಾನಗಳು ಕಾಲದಿಂದ ಕಾಲಕ್ಕೆ ಏಕರೂಪವಾಗಿಲ್ಲದಿದ್ದರೂ, ಈ ಅಧಿಕಾರ ಹೊಂದುವುದು ಮತ್ತು ಕಳೆದುಕೊಳ್ಳುವುದು ಈ ಸಮಾಜದಲ್ಲಿ ಅನೂಚಾನವಾಗಿ ನಡೆದುಕೊಂಡೇ ಬಂದಿದೆ. ಹೀಗೆ ಸಾಮಾಜಿಕಾರ್ಥಿಕ ಕ್ಷೇತ್ರಗಳ ಮೇಲೆ ತಮ್ಮ ಅಧಿಕಾರ ನಿರಂತರವಾಗುವ ಸಂದರ್ಭದಲ್ಲೆಲ್ಲ ಆಳುವ ವರ್ಗಗಳಿಗೆ ಆಯಾ ಕಾಲಘಟ್ಟದಲ್ಲಿ ಹೊಸದಾಗಿ ಹುಟ್ಟಿದ ಮತಗಳು, ವೈಚಾರಿಕ ಧಾರೆಗಳೂ ಸಹ ಸಹಾಯ ಮಾಡಿವೆ. ಯಾವುದೋ ಒಂದು ಕಾಲಘಟ್ಟದಲ್ಲಿ

ಅಧೀನವಾಗಿದ್ದ ಸಮುದಾಯದ ಪರ ದನಿ ಎತ್ತುವ ವೈಚಾರಿಕ ಪಂಥವೊಂದು ಆ ಸಮುದಾಯ ಅಧಿಕಾರ ರೂಢವಾದ ತಕ್ಷಣ ತನ್ನ ಒಟ್ಟಾರೆಯ ಅತ್ಯಂತಿಕ ಗುರಿಗಳನ್ನು ಸಾಧಿಸಿದಂತಾಗಿ ಅದು ತನ್ನ ಮೂಲ ಸ್ವರೂಪವನ್ನೇ ಬದಲಿಸಿಕೊಳ್ಳುವ ಸಂದರ್ಭಗಳೂ ಭಾರತದಲ್ಲಿ ಸಂಭವಿಸಿವೆ. ಒಟ್ಟಿನಲ್ಲಿ ಸರಕು ಉತ್ಪಾದನೆಯ ಸಮುದಾಯಗಳ ಅಧಿಕಾರ ಸಂಬಂಧಿ ಹೋರಾಟಗಳು ನಮ್ಮ ಸಮಾಜದ ಚರಿತ್ರೆಯ ಉದ್ದಕ್ಕೂ ನಡೆದುಕೊಂಡು ಬಂದಿವೆ. ಕೆಲವು ಸಲ ಕೆಲವು ಸಮುದಾಯಗಳು ಅಧೀನಗೊಂಡರೆ ಮತ್ತೆ ಕೆಲವು ಪ್ರಧಾನ ಸ್ಥಿತಿಗೆ ಏರುವ ಮೇಲಾಟಗಳು ಯಾವತ್ತೂ ನಡೆಯುತ್ತಲೇ ಬಂದಿವೆ. ಈ ಬಗೆಯ ಸ್ಥಿತ್ಯಂತರಗಳು ಸೇವಕ ಸಮುದಾಯಗಳ ಸಂದರ್ಭದಲ್ಲಿ ನಡೆದಿರುವುದು ವಿರಳ. ಇಲ್ಲವೇ ಇಲ್ಲ ಎಂದು ಹೇಳಿದರೂ ತಪ್ಪಾಗಲಾರದು. ವಚನ ಚಳುವಳಿಯೊಂದನ್ನು ಬಿಟ್ಟರೆ ಆ ನಂತರ ಬಂದ ಯಾವ ವೈಚಾರಿಕ ಪಂಥಗಳೂ ಒಂದು ಸ್ಪಷ್ಟ ವರ್ಗಕಲ್ಪನೆಯ ಮೂಲಕ ಈ ಸೇವಕ ಸಮುದಾಯಗಳ ಪರ ನಿಂತ ಉದಾಹರಣೆಗಳಿಲ್ಲ. ಈ ಕಾರಣದಿಂದಾಗಿ ಸೇವಕ ಸಮುದಾಯಗಳ ಒಟ್ಟಾರೆಯ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನಗಳಲ್ಲಿ ಅಂತಹ ಗಮನಾರ್ಹ ಬದಲಾವಣೆಗಳು ಸಂಭವಿಸಲಿಲ್ಲ. ಈ ಸಮುದಾಯಗಳು ತಾವು ಆಶ್ರಯಿಸಿ ಬದುಕುತ್ತಿದ್ದ ಸಮಾಜದ ಭಾಗವಾಗಿ, ಅದರ ಪ್ರಭಾವ, ಶೋಷಣೆ ಮತ್ತು ತೀವ್ರತರವಾದ ವೈಪರೀತ್ಯಗಳನ್ನು ಸಹಿಸಿಕೊಂಡು ಬದುಕುವುದು ಅನಿವಾರ್ಯವಾಗಿತ್ತು. ಹೀಗೆ ತಲ್ಲಣಗಳ ಜೊತೆಗೇ ಬದುಕಿ ಬಂದ ಸೇವಕ ಸಮುದಾಯಗಳು ಕಾಲದಿಂದ ಕಾಲಕ್ಕೆ ಸಮಾಜದ ಪ್ರಧಾನ ಧಾರೆಯ ಪ್ರಭಾವಗಳನ್ನು ಜೀರ್ಣಿಸಿಕೊಂಡು, ಇಲ್ಲವೆ ಭಗ್ನಗೊಂಡು, ತಮ್ಮೆದುರಿನ ವರ್ತಮಾನವನ್ನು ಮುಖಾಮುಖಿ ಮಾಡುವ ಅನಿವಾರ್ಯತೆಯನ್ನು ಎದುರಿಸುತ್ತಲೇ ಬಂದಿವೆ. ಅನ್ಯ ಪ್ರಭಾವಗಳನ್ನು ಜೀರ್ಣಿಸಿಕೊಂಡಾಗಲೂ ಈ ಸಮುದಾಯಗಳು ತಮ್ಮನ್ನು ಅನಿವಾರ್ಯದ ಬದಲಾವಣೆಗೆ ಒಗ್ಗಿಸಿಕೊಂಡಿವೆ. ಭಗ್ನಗೊಂಡಾಗಲೂ ತೀವ್ರವಾಗಿ ಘಾಸಿಗೊಂಡು ಖಿಲಗೊಳ್ಳುವ ಭಯದಲ್ಲಿ ತಲ್ಲಣಗಳನ್ನೂ ಅನುಭವಿಸಿವೆ.

ಡೊಂಬರ ಸಮುದಾಯದ ಧಾರ್ಮಿಕತೆ

ಸಮಾಜವೊಂದರಲ್ಲಿನ ಪ್ರಧಾನಧಾರೆ ಮತ್ತು ಅಧೀನ ಧಾರೆಗಳ ಸಂಬಂಧಗಳನ್ನು ಕೆ.ವಿ.ನಾರಾಯಣ ಹೀಗೆ ವಿವರಿಸುತ್ತಾರೆ. '೧. ಶತ್ರುತ್ವದ ಸಂಬಂಧ, ಅಧೀನವಾದದ್ದು, ಪ್ರಧಾನವಾದುದನ್ನ ನಿರಾಕರಿಸಿ ಪ್ರತಿಭಟಿಸಿ ತನ್ನ ಮೇಲುಗೈಯನ್ನು ಸಾಧಿಸಲು ನಡೆಸುವ ಯತ್ನ ಈ ಬಗೆಯಲ್ಲಿ ಮುಖ್ಯವಾಗುತ್ತದೆ. ೨. ಸಹಚರ ಸಂಬಂಧ, ಪ್ರಧಾನ ಮತ್ತು ಅಧೀನಗಳ ನಡುವೆ ವಿರೋಧವಿದ್ದರೂ, ಆ ವಿರೋಧವನ್ನು ಶತ್ರುತ್ವವನ್ನಾಗಿ ಪರಿಗಣಿಸದೇ ಇರುವ ಒಪ್ಪಂದದ ಸ್ಥಿತಿ. ೩. ಅನುವರ್ತಿ ಸಂಬಂಧ, ಪ್ರಧಾನವಾದದ್ದರ ಯಜಮಾನ್ಯವನ್ನು ಒಪ್ಪಿ ಅಧೀನವಾದದ್ದು ತನ್ನ ಅಧೀನತೆಯನ್ನು ಸಮರ್ಥಿಸುವಂತೆ ಸದಾ ಪ್ರಧಾನವನ್ನು ಅನುಕರಿಸುವ, ಅನುಸರಿಸುವ ಮಾರ್ಗವನ್ನು ಹಿಡಿಯುವುದು'[೧]. ಕೆ.ವಿ.ನಾರಾಯಣ ವಿವರಿಸುವ ಪ್ರಧಾನ ಮತ್ತು ಅಧೀನತೆಗಳ ನಡುವಿನ ಅನುಸಂಧಾನದ ಈ ಮೂರು ಮಾದರಿಗಳು ಭಾರತದ ಸಾಮಾಜಿಕ ಸಂದರ್ಭದಲ್ಲಿ ಕಂಡು ಬರುವುದು ಸಹಜ. ಆದರೆ ಮೂರನೇ ಮಾದರಿಯಾದ ಅನುವರ್ತಿ ಸಂಬಂಧವು ಭಾರತೀಯ ಸಮಾಜದ ಸಂದರ್ಭದಲ್ಲಿ ಸ್ವಲ್ಪ ವಿರಳವೆಂದೇ ಕಾಣುತ್ತದೆ. ಈ ಅನುವರ್ತಿ ಸಂಬಂಧವು ಹೆಚ್ಚಾಗಿ ಬಿಳಿಯರು ಆಕ್ರಮಿಸಿದ ಆಸ್ಟ್ರೇಲಿಯ, ಉತ್ತರ

ಅಮೇರಿಕಾ ಖಂಡಗಳಲ್ಲಿ ಏರ್ಪಟ್ಟಿರುವುದು ಕಂಡು ಬರುತ್ತದೆ. ಭಾರತದಲ್ಲಿ ಮಾತ್ರ ಶತ್ರುತ್ವದ ಸಂಬಂಧ ಮತ್ತು ಸಹಚರ ಸಂಬಂಧಗಳು ಏರ್ಪಟ್ಟಿರುವುದು ಇಲ್ಲಿನ ಸಮಾಜದ ಬಹುಮುಖತೆಯನ್ನು ಅವಲಂಬಿಸಿದೆ. ಏಕೆಂದರೆ ಪ್ರಧಾನತೆಯು ಭಾರತದಲ್ಲಿ ಅಧೀನಗೊಂಡ ಸಮುದಾಯಗಳನ್ನು ನಾಶಮಾಡಲಾಗಲಿಲ್ಲ. ಇದನ್ನೇ ಡಿ ಡಿ ಕೊಸಾಂಬಿಯವರು ಹೀಗೆ ವಿವರಿಸುತ್ತಾರೆ. 'ನಾಶಗೊಳಿಸುವ ಪ್ರವೃತ್ತಿಗಿಂತ ವಿಲೀನಗೊಳಿಸಿಕೊಳ್ಳುವ ಪ್ರವೃತ್ತಿಯೇ ನಮ್ಮ ಚರಿತ್ರೆಯಲ್ಲಿ ಕಂಡು ಬರುತ್ತದೆ. ಆದರೆ ಈ ವಿಲೀನಗೊಳಿಸಿಕೊಳ್ಳುವ ಕ್ರಿಯೆಯಲ್ಲಿ ಸಮಾನತೆಯ ಸಮಾವೇಶವಿಲ್ಲ. ಅರಣ್ಯವಾಸಿಗಳು ನಾಗರಿಕರ ಅಧೀನದಲ್ಲಿ ಬಂದು ಸೇರುತ್ತಾರಷ್ಟೆ. ಈ ವಿಲೀನ ಕ್ರಿಯೆಯಲ್ಲಿ ಸಾಂಸ್ಕೃತಿಕ ಸಂಗತಿಗಳು, ಆರಾಧನೆಗಳೂ ಒಳಗೊಳ್ಳುವಾಗ, ಅರಣ್ಯವಾಸಿಗಳ ದೈವಗಳು ನಾಗರಿಕರ ದೇವರುಗಳ ಹೆಂಡತಿಯರಾಗಿ, ವಾಹನಗಳಾಗಿ, ಭಕ್ತರಾಗಿ ಅವತಾರಗೊಂಡು ಅಂಗೀಕಾರಗೊಳ್ಳುತ್ತವೆ. ಈ ವಿಲೀನದ ನಂತರವೂ ನಾಗರಿಕರ ಪೂಜೆಗಳದೇ ಮೇಲುಗೈಯಾಗುತ್ತದೆ.'[೨] ಎನ್ನುತ್ತಾರೆ. ಈ ಪ್ರಧಾನತೆಯು ಅಧೀನತೆಯ ಜೊತೆಗೆ ಸಂಕರಗೊಳ್ಳುವುದು ಅನಿವಾರ್ಯವಾಗಿತ್ತು. ಜೊತೆಗೆ ಅಧೀನಗೊಂಡ ಸಮುದಾಯಗಳೂ ಸಹ ಪ್ರಧಾನತೆಯ ವಿರುದ್ಧ ಯುದ್ಧ ಸಾರಿ ಗೆಲ್ಲುವ ಸ್ಥಿತಿಯಲ್ಲಿರಲಿಲ್ಲ. ಅವು ತಮ್ಮ ಸಮಾಜದ ಚಾರಿತ್ರಿಕ ವಿಕಾಸದ ಜೊತೆಗೇ ಅನ್ಯವನ್ನು ಸ್ವೀಕರಿಸುವ, ಇಲ್ಲವೆ ನಿರಾಕರಿಸುವ ಕೊಡುಕೊಳುವ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವುದು ಅನಿವಾರ್ಯವಾಗಿತ್ತು.

ಸಮುದಾಯವೊಂದರ ಭಾವಕೋಶದ ಒಳಗೇ ಹೀಗೆ ಅನ್ಯವನ್ನು ಸ್ವೀಕರಿಸುವ ಮತ್ತು ನಿರಾಕರಿಸುವ ಗುಣಗಳು ಅಂತರ್ಗತವಾಗಿರುತ್ತವೆ. ಸ್ವೀಕರಣೆ ಮತ್ತು ನಿರಾಕರಣೆಗಳೆರಡೂ ಒಂದು ಸಮುದಾಯದ ಸಂಸ್ಕೃತಿಯೊಂದರ ಸ್ಥಾಯಿ ಭಾವಗಳು. ಯಾವ ಸಮುದಾಯಗಳು ಸಮಾಜದ ಪ್ರಧಾನ ಸ್ಥಿತಿಯಲ್ಲಿರುವವೋ ಅವು ಈ ಸ್ವೀಕರಿಸುವ ಮತ್ತು ನಿರಾಕರಿಸುವ ಸಂದಿಗ್ಧಗಳನ್ನು ವರ್ತಮಾನದ ತಮ್ಮ ಅಧಿಕಾರಗಳ ಚೌಕಟ್ಟಿನಲ್ಲಿಯೇ ಮುಖಾಮುಖಿ ಮಾಡುತ್ತವೆ. ಅನ್ಯ ಪ್ರಭಾವಗಳನ್ನು ಈ ಅಧಿಕಾರಸ್ಥ ಸಮುದಾಯಗಳು ತಮ್ಮ 'ಚಹರೆಗಳ' ಅಸ್ತಿತ್ವದ ಭಾಗವಾಗಿ ಸ್ವೀಕರಿಸದೆ, ತಮ್ಮ ಅಧಿಕಾರಗಳ ಸಾತತ್ಯದ ಕಾರಣಗಳನ್ನು ಮುಖ್ಯವಾಗಿಟ್ಟುಕೊಂಡು ಈ ಪ್ರಭಾವಗಳನ್ನು ಪರಿಭಾವಿಸುತ್ತವೆ. ಯಾವ ಬಾಹ್ಯ ಪ್ರಭಾವಗಳು ತಮ್ಮ ಅಧಿಕಾರಗಳನ್ನು ದ್ವಿಗುಣಗೊಳಿಸುತ್ತವೋ ಅಂತಹುಗಳನ್ನು ತಮ್ಮ 'ಚಹರೆಗಳು' ಖಿಲಗೊಂಡ ಸಂದರ್ಭದಲ್ಲೂ ಈ ಸಮುದಾಯಗಳು ಸ್ವೀಕರಿಸಿಬಿಡುತ್ತವೆ. ಈ ಸಮುದಾಯಗಳು ಪರಂಪರೆಯನ್ನು ಲೌಕಿಕದ ಅತ್ಯಂತ ಪ್ರಭಾವಿ ಕಾರಣಗಳಿಗೆ ಹೇಗಾದರೂ ವಿರೂಪಗೊಳಿಸಲು ಸಿದ್ಧವಾಗಿರುತ್ತವೆ. ಚರಿತ್ರೆ ಮತ್ತು ಪರಂಪರೆಗಳು ಈ ಸಮುದಾಯಗಳಿಗೆ ತಮ್ಮ ಅಧಿಕಾರಗಳನ್ನು ಸ್ಥಿರೀಕರಿಸುವ ಕ್ಷುಲ್ಲಕ ಸಂಗತಿಗಳು ಮಾತ್ರ. ಅದಕ್ಕಾಗಿ ಈ ಸಮುದಾಯಗಳು ಭ್ರಮೆಗಳನ್ನು, ಸುಳ್ಳುಗಳನ್ನು ಚರಿತ್ರೆಯಾಗಿಸಿ ತಮ್ಮ ಅಧಿಕಾರದ ಕೇಂದ್ರಗಳನ್ನು ರಕ್ಷಿಸಿಕೊಳ್ಳುತ್ತವೆ. ಸಂಸ್ಕೃತಿಯ, ಪರಂಪರೆಯ ಅಥವಾ ಚರಿತ್ರೆಯ ಯಾವುದೇ ಚಹರೆಗಳು ಈ ಅಧಿಕಾರಸ್ಥ ಸಮುದಾಯಗಳಿಗೆ ಅಷ್ಟು ಮುಖ್ಯವಾಗುವುದಿಲ್ಲ. ಆದರೆ ತಮ್ಮ ಪರಂಪರೆಯ ಚಹರೆಗಳನ್ನು ರಕ್ಷಿಸುವ ಸಂದರ್ಭದಲ್ಲೆಲ್ಲ ಈ ಸಮುದಾಯಗಳು ತೋರಿಕೆಯ ಆತಂಕಕ್ಕೆ ಒಳಗಾಗುತ್ತವೆ. 'ನಮ್ಮ' ಸಂಸ್ಕೃತಿ ಉಳಿಯಬೇಕು. 'ಭಾಷೆ' ಉಳಿಯಬೇಕು. 'ನಮ್ಮ' ದೇಶದ 'ಭವ್ಯ ಪರಂಪರೆ' ಅನ್ಯರ ಆಕ್ರಮಣದಿಂದ

ವಿಮೋಚನೆಗೊಳ್ಳಬೇಕು ಎಂದೆಲ್ಲ ಮುಲುಕ ತೊಡಗುತ್ತಾರೆ. ಈ ಬಗೆಯ ಹುಸಿ ಆತಂಕವೂ ಸಹ ಅವರ ರಾಜಕೀಯಾರ್ಥಿಕ ಅಧಿಕಾರಗಳ ಅಳಿವು ಉಳಿವಿನ ಭಾಗವಾಗಿಯೇ ವ್ಯಕ್ತವಾಗುತ್ತಿರುತ್ತದೆ. ಸಂಸ್ಕೃತಿ ಮತ್ತು ಪರಂಪರೆಗಳು ಉಳಿಯಬೇಕು. ಭಾಷೆ ಉಳಿಯಬೇಕು ಎಂದೆಲ್ಲ ಇವರು ಮಾತನಾಡುವಾಗ, ಯಾರು ಈ ಸಂಸ್ಕೃತಿ, ಭಾಷೆ, ಪರಂಪರೆಗಳನ್ನು ಉಳಿಸಬೇಕು? ಯಾಕೆ ಉಳಿಸಬೇಕು? ಎಂಬ ಪ್ರಶ್ನೆಗಳನ್ನು ಮುಖಾಮುಖಿ ಮಾಡುವುದಿಲ್ಲ. ಕನ್ನಡ ಭಾಷೆ ಕರ್ನಾಟಕದಲ್ಲಿ ಇಲ್ಲವಾಗುತ್ತಿದೆ. ಅದನ್ನು ದಲಿತರು ಮಾತ್ರ ಉಳಿಸಲು ಸಾಧ್ಯ ಎಂದು ತಮ್ಮ ಅಂತರಂಗದ ಹುನ್ನಾರಗಳನ್ನು ತೆರೆದಿಡುತ್ತಾರೆ. 'ನಮ್ಮ ಸಂಸ್ಕೃತಿ' ಉಳಿಯಬೇಕು ಎಂದಾಗಲೂ ಇವರು ರಕ್ಷಿಸಬೇಕೆನ್ನುವುದು ಮತ್ತು ಶತಾಯಗತಾಯ ಉಳಿಸಲೆಂದು ಹೆಣಗಾಡುವುದು ಈ ದೇಶದಲ್ಲಿ ಶತಮಾನಗಳಿಂದ ಹಿಂಸೆಗಳನ್ನು, ಅವಮಾನಗಳನ್ನು ಅನುಭವಿಸಿಕೊಂಡು, ಹಸಿವಿನಿಂದ ಅರೆಪ್ರಜ್ಞಾವಸ್ಥೆಗೆ ತಲುಪಿರುವ 'ಹತಭಾಗ್ಯ' ಜೀವನ ವಿಧಾನಗಳನ್ನು. ಆದಿವಾಸಿಗಳು ನಮ್ಮ ದೇಶದ ಆದಿಮ ಸಮಾಜದ ಪೊಳಯುಳಿಕೆಗಳು ಅವರನ್ನು 'ರಕ್ಷಿಸಬೇಕು' ಎಂದು ಇವರು ಭಾಷಣ ಮಾಡಿಬಿಡುತ್ತಾರೆ. ಇಲ್ಲವೆ ಆದಿವಾಸಿಗಳನ್ನು 'ನಾವು' ಉದ್ಧಾರ ಮಾಡಿಬಿಡುತ್ತೇವೆ ಎಂದು ಮುಂದಾಗುತ್ತಾರೆ. ಈ ಬಗೆಯ ರಕ್ಷಿಸುವ ಸ್ವಭಾವವು ಅಪ್ಪಟ ಊಳಿಗಮಾನ್ಯತೆಯನ್ನು ಪ್ರತಿನಿಧಿಸುತ್ತದೆ. 'ತಾವು' ಸಂಪೂರ್ಣವಾಗಿ ಬದಲಾಗಿ, 'ಬೇರೆಯವರು' ಈ ಸಂಸ್ಕೃತಿ, ಪರಂಪರೆ ಇತ್ಯಾದಿಗಳನ್ನು ರಕ್ಷಿಸಬೇಕಿದೆ ಎನ್ನುವ ಜನ್ಮಾಳದಲ್ಲಿ ಮೂಲಭೂತವಾದಿಗಳಾಗಿರುತ್ತಾರೆ.

ಭಾರತದ ಸಾಮಾಜಿಕ ಸಂದರ್ಭದಲ್ಲಿ ಅಧಿಕಾರಸ್ಥ ಸಮುದಾಯಗಳು ತಮ್ಮನ್ನು ಆಮೂಲಾಗ್ರವಾಗಿ (ಕೇವಲ ಭೌತಿಕವಾಗಿ) ಬದಲಾಯಿಸಿಕೊಂಡರೂ ಲೌಕಿಕದ ತಮ್ಮ ಅಧಿಕಾರಗಳನ್ನು ರಕ್ಷಿಸಿಕೊಳ್ಳುತ್ತಲೇ ಬಂದಿವೆ. ಬದಲಾವಣೆ ಎನ್ನುವುದು ಈ ಸಮುದಾಯಗಳಿಗೆ ಅಧಿಕಾರದ ಸ್ವರೂಪ ಮತ್ತು ಸ್ವಭಾವಗಳನ್ನು ಕಾಲದಿಂದ ಕಾಲಕ್ಕೆ ಪುನರ್‌ನವೀಕರಿಸುವ ಪ್ರಕ್ರಿಯೆ ಮಾತ್ರ. ಅದಕ್ಕಾಗಿ ಈ ಸಮುದಾಯಗಳು ತಮ್ಮ ವಾತಾಪಿ ಗರ್ಭದಲ್ಲಿ ಈ ದೇಶದ ಅನೇಕ ವೈಚಾರಿಕ ಧಾರೆಗಳನ್ನು ಜೀರ್ಣಿಸಿಕೊಂಡೂ ತಮ್ಮ ಅಧಿಕಾರ ಕೇಂದ್ರಗಳನ್ನು ರಕ್ಷಿಸಿಕೊಂಡು ಬಂದಿವೆ. ಅಧಿಕಾರಸ್ಥರು ರಕ್ಷಿಸುವುದು 'ತಮ್ಮ' ಅಧಿಕಾರ ಕೇಂದ್ರಗಳನ್ನು ಮಾತ್ರ. ಈ ಅಧಿಕಾರ ಕೇಂದ್ರಗಳು ಭಗ್ನಗೊಳ್ಳುವ ಸ್ಥಿತಿ ತಲುಪುತ್ತಿದ್ದಂತೆ ಇವರಿಗೆ ತಟ್ಟನೆ ಪರಂಪರೆ, ಸಂಸ್ಕೃತಿ, ದೇಶ, ಗಡಿಗಳು, ಮಂದಿರಗಳು ನೆನಪಾಗಿ ಬಿಡುತ್ತವೆ. ಪರಂಪರೆ ಮತ್ತು ಚರಿತ್ರೆಗಳು ಆಳುವ ಜನಕ್ಕೆ ಆಯುಧಗಳಾಗಿ ಬಿಡುತ್ತವೆ. ಅಧೀನ ಸಮುದಾಯಗಳಿಗೆ ಈ ಬಗೆಯ ಸವಲತ್ತುಗಳಿಲ್ಲ. ತಮ್ಮ ಮೇಲೆ ಹೇರಲ್ಪಟ್ಟ ಪರಂಪರೆ ಮತ್ತು ಅದಕ್ಕೆ ಸಂಬಂಧಿಸಿದ ಚಹರೆಗಳನ್ನು ಇವು ಧರಿಸಲೇಬೇಕು. ಈ ಸಮುದಾಯಗಳ ಪರಂಪರೆಯು, ವರ್ತಮಾನದಲ್ಲಿ ತನ್ನನ್ನು ಅನುಸಂಧಾನ ಮಾಡಿಕೊಳ್ಳುತ್ತಲೇ ತಿಳುವಳಿಕೆಯ ಪರಿಧಿಯನ್ನು ವಿಸ್ತರಿಸುತ್ತ ತನ್ನನ್ನು ರೂಪಾಂತರಿಸಿಕೊಳ್ಳುತ್ತಿರುತ್ತದೆ. ಈ ಕಾರಣಕ್ಕಾಗಿ ಸೋತ ಸಮುದಾಯಗಳು ಈ ದೇಶದ ವೈಚಾರಿಕ ಧಾರೆಗಳ ವಾರಸುದಾರರಂತೆ ಕಾಣಿಸುತ್ತಾರೆ. ವಚನ ಚಳುವಳಿಯಂತಹ ಚಳುವಳಿಯ ಸೈದ್ಧಾಂತಿಕ ನಿಲುವುಗಳು ಇಂದೂ ಕೆಳಜಾತಿಗಳ ಮೌಖಿಕ ಸಾಹಿತ್ಯದಲ್ಲಿ ವ್ಯಕ್ತವಾಗುತ್ತಿರುವುದು ಮತ್ತು ವಿಮರ್ಶೆಗೊಳಪಡುತ್ತಿರುವುದು ಇದಕ್ಕೆ ಸಾಕ್ಷಿ. ಈ ಬಗೆಯ ಪ್ರವೃತ್ತಿ ಶೋಷಿತ ಸಮುದಾಯಗಳ

ಸೃಜನಶೀಲತೆಯಾಗಿ ಬಂದು ಹೆಚ್ಚುಗಾರಿಕೆ ಎಂದು ಭಾವಿಸುವುದರ ಜೊತೆಗೆ, ಪರಂಪರೆ ಒಂದು ಹಳವಂಡವಾಗಿ ಈ ಸಮುದಾಯಗಳನ್ನು ಕಾಡುತ್ತಿರುವಂತೆ ಭಾಸವಾಗುತ್ತಿದೆ. ಇದು ನೋವಿನ ಹಲ್ಲಿಗೆ, ನಾಲಿಗೆ ಪದೇ ಪದೇ ಹೊರಳುವ ಒಂದು ಬಗೆಯ ಹಿಂಸಾತ್ಮಕ ಸುಖದಂತೆ.

ಭಾರತದ ಶೋಷಿತ ಸಮುದಾಯಗಳು ಅದರಲ್ಲೂ ಸೇವಕ ಸಮುದಾಯಗಳು ಈ ನಾಡಿನ ಚರಿತ್ರೆಯುದ್ದಕ್ಕೂ ನಿತ್ಯದ ಬವಣೆಗಳಿಗೆ ಮುಖಾಮುಖಿ ಮಾಡುತ್ತಲೇ ತಮ್ಮ ಅಸ್ತಿತ್ವವನ್ನು ಪರಂಪರಾನುಗತವಾಗಿ ಉಳಿಸಿಕೊಂಡು ಬಂದಿವೆ. ಹಲವು ಸಂಗತಿಗಳನ್ನು ಸ್ವೀಕರಿಸುತ್ತಾ, ನಿರಾಕರಿಸುತ್ತಾ ಅಧಿಕಾರ ರಹಿತ ಸ್ಥಿತಿಯಲ್ಲಿ ಈ ದೇಶದ 'ಪರಂಪರೆಯ ವಾರಸುದಾರರಂತೆ' ಬದುಕಿ ಬಂದಿವೆ. ಈ ಸಮುದಾಯಗಳು ತಮ್ಮನ್ನು ಆಳಿದ ರಾಜಪ್ರಭುತ್ವ ಮತ್ತು ಧಾರ್ಮಿಕ ಪ್ರಭುತ್ವಗಳ ಪ್ರಭಾವದ ಅಡಿಯಲ್ಲಿ ಅನೇಕ ಪ್ರಭಾವಗಳಿಗೆ ಒಳಗಾಗುತ್ತ ಬಂದಿವೆ. ಈ ದೇಶದ ಚರಿತ್ರೆಯಲ್ಲಿ ಧರ್ಮಗಳು ರಾಜತ್ವವನ್ನು ಪೋಷಿಸುವುದು, ರಾಜ ಧರ್ಮಗಳನ್ನು ಪೋಷಿಸುವುದು ಅನೂಚಾನವಾಗಿ ನಡೆದುಕೊಂಡು ಬಂದಿದೆ. ರಾಜಪ್ರಭುತ್ವವು ಸಮಾಜವನ್ನು ನಿಯಂತ್ರಿಸುವ ಲೌಕಿಕದ ವಿಚಾರಗಳನ್ನು ಧಾರ್ಮಿಕ ಕ್ಷೇತ್ರಕ್ಕೆ ಸಂಬಂಧಿಸಿದ ಹಲವು ಜನ ಪಂಡಿತರು ರೂಪಿಸಿಕೊಟ್ಟ ಉದಾಹರಣೆಗಳು ನಮ್ಮ ದೇಶದ ಚರಿತ್ರೆಯಲ್ಲಿ ಸಾಕಷ್ಟಿವೆ. ಮೌರ್ಯ ಸಾಮ್ರಾಜ್ಯದ ಉದಯಕ್ಕೆ ಕಾರಣನಾದ ಚಾಣಕ್ಯನಿಂದ ಹಿಡಿದು ವಿಜಯನಗರದ ಸಾಮ್ರಾಜ್ಯವನ್ನು ಕಟ್ಟಲು ಮೂಲ ಪ್ರೇರಕರಾದರೆನ್ನಲಾದ ವಿದ್ಯಾರಣ್ಯರವರೆಗೆ ಬಹುತೇಕ ಎಲ್ಲಾ ಪಂಡಿತ ಋಷಿ ಮುನಿಗಳು ಧಾರ್ಮಿಕ ಕ್ಷೇತ್ರಕ್ಕೆ ಸಂಬಂಧಿಸಿದವರು. ಧರ್ಮವು ತೆರೆಮರೆಯಲ್ಲಿ ಮತ್ತು ಪ್ರತ್ಯಕ್ಷವಾಗಿಯೂ ರಾಜಪ್ರಭುತ್ವದ ಎಲ್ಲ ಲೌಕಿಕದ ಚಟುವಟಿಕೆಗಳನ್ನು ನಿರ್ದೇಶಿಸಿದೆ ಮತ್ತು ನಿಯಂತ್ರಿಸುತ್ತಾ ಬಂದಿದೆ. ಧರ್ಮಗಳು ಕೇವಲ ಆಧ್ಯಾತ್ಮ ಮತ್ತು ಅಲೌಕಿಕ ಸಂಗತಿಗಳಿಗೆ ಮಾತ್ರ ತಮ್ಮನ್ನು ಸೀಮಿತಗೊಳಿಸಿಕೊಳ್ಳುವ ಪರಂಪರೆಯು ಜಗತ್ತಿನ ಯಾವ ಸಾಮಾಜಿಕ ಸಂದರ್ಭದಲ್ಲೂ ನಿರ್ಮಾಣವಾಗಿಲ್ಲ. ಇದಕ್ಕೆ ಬಹುದೊಡ್ಡ ಉದಾಹರಣೆ ಎಂದರೆ ರೋಮನ್ ಕ್ಯಾಥೋಲಿಕ್ ಚರ್ಚ್ ಮತ್ತು ಪೋಪ್ ಗುರುಗಳು ತಮ್ಮ ಆಧ್ಯಾತ್ಮಕ ಜಗತ್ತಿನ ಅಲೌಕಿಕ ವಿಚಾರಗಳನ್ನು ಬಿಟ್ಟುಕೊಟ್ಟು ಅಪ್ಪಟ ಊಳಿಗಮಾನ್ಯ ಸಮಾಜದ ಅಧಿಕಾರ ಕೇಂದ್ರದಂತೆ ಮತ್ತು ದೊರೆಗಳಂತೆ ರೂಪಾಂತರಗೊಂಡದ್ದು ಈಗ ಇತಿಹಾಸ. ಭಾರತದಲ್ಲೂ ಇದಕ್ಕೆ ವ್ಯತಿರಿಕ್ತವಾದ ಸಂದರ್ಭಗಳೇನಿರಲಿಲ್ಲ. ಇಲ್ಲಿ ಅನೇಕ ಮತಧರ್ಮಗಳು ನೇರವಾಗಿ ಅಧಿಕಾರ ಕೇಂದ್ರಗಳ ಲೌಕಿಕ ವ್ಯವಹಾರಗಳ ನಿರ್ವಹಣೆಯನ್ನು ನಿಯಂತ್ರಿಸುತ್ತ ಬಂದಿವೆ.

ಆದರೆ ವಚನ ಚಳುವಳಿಯ ನಂತರ ಮತಧರ್ಮಗಳ ಯೋಚನೆಯ ದಿಕ್ಕು ತುಸು ಪಲ್ಲಟಗೊಂಡಂತೆ ಭಾಸವಾಗುತ್ತದೆ. ಜಗತ್ತಿನ ಇತಿಹಾಸದಲ್ಲಿ ಮೊದಲ ಬಾರಿಗೆ ದುಡಿವ ಶೋಷಿತ ಸಮುದಾಯಗಳ ಪರ ದನಿ ಎತ್ತಿದ ವಚನಕಾರರು ಬಹುಸಂಖ್ಯಾತ ಶೋಷಿತರನ್ನು ಒಂದು ಭಿನ್ನ ಸಮಾಜೋಧಾರ್ಮಿಕ ಚೌಕಟ್ಟಿನಲ್ಲಿ ಒಂದಾಗಿಸಲು ಪ್ರಯತ್ನಿಸಿದರು. ಈ ಚಳುವಳಿಯ ಸಫಲತೆ ಮತ್ತು ವಿಫಲತೆಗಳೇನೇ ಇರಲಿ, ಕರ್ನಾಟಕದಲ್ಲಿ ಮೊದಲ ಬಾರಿಗೆ ಶೋಷಿತರ ಅವಮಾನ, ಹಸಿವು ಮತ್ತು ಅಸಮಾನತೆಯ ಕುರಿತು ವಚನಕಾರರು ತಮ್ಮದೇ ಆದ ಆಧ್ಯಾತ್ಮಿಕ ಆವರಣದಲ್ಲಿ ಅನೇಕ ಪ್ರಶ್ನೆಗಳನ್ನು ಎತ್ತಿದರು. ವಚನ ಚಳುವಳಿ ತನ್ನ ಈ ಬಗೆಯ

ಸೈದ್ಧಾಂತಿಕ ನಿಲುವುಗಳಿಂದಲೇ ಬಹುಸಂಖ್ಯಾತ ದುಡಿವ ವರ್ಗಗಳಿಗೆ ಆತ್ಮಪ್ರತ್ಯಯವನ್ನು ತಂದುಕೊಡುವುದರ ಜೊತೆಗೆ ಅತ್ಯಂತ ಜನಪ್ರಿಯವೂ ಆಗಿಬಿಟ್ಟಿತು. ಜೊತೆಗೆ ಧಾರ್ಮಿಕ ಜಗತ್ತಿನ ಜನ ಪ್ರಾಯಶಃ ಮೊದಲ ಬಾರಿಗೆ (ಚಾರ್ವಾಕರು, ಬೌದ್ಧ ಮತ್ತು ಜೈನರನ್ನು ಬಿಟ್ಟರೆ) ಸಾಮಾನ್ಯ ಜನರ ಕುರಿತು ಚಿಂತಿಸಲು ಪ್ರಾರಂಭಿಸಿದ್ದು ವಚನ ಚಳುವಳಿಯು ಜನಸಾಮಾನ್ಯರಲ್ಲಿ ಗಳಿಸಿದ ಜನಪ್ರಿಯತೆಯ ಕಾರಣಗಳಿಂದಾಗಿ. ಅದರಲ್ಲೂ ವೈದಿಕ ಪರಂಪರೆಯ ವಿಭಿನ್ನ ಧಾರೆಗಳ ಮತಧರ್ಮಗಳು 'ಶ್ರೀಸಾಮಾನ್ಯನ' ಕುರಿತು ಚಿಂತಿಸಿದ್ದು ಈ ಬಗೆಯ ತಮ್ಮ ಅಸ್ತಿತ್ವದ ಆತಂಕದಿಂದಾಗಿ, ಅಲ್ಲಿಯವರೆಗೂ ದುಡಿವ ಕೆಳಜಾತಿಗಳಿಗೆ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕ ಸ್ವಾತಂತ್ರ್ಯವನ್ನು ನಿರಾಕರಿಸಿದ್ದ ವೈದಿಕರು ತುಸು ಸಡಿಲಗೊಳ್ಳತೊಡಗಿದರು. ತಮ್ಮ ಒಟ್ಟಾರೆಯ ಧಾರ್ಮಿಕ ಪರಂಪರೆಯನ್ನು ದಂತಗೋಪುರದ ತತ್ವಶಾಸ್ತ್ರದ ಚರ್ಚೆಗಳಿಗೆ ಮತ್ತು ರಾಜಪ್ರಭುತ್ವವನ್ನು ನಿರ್ದೇಶಿಸುವ ಮತ್ತು ನಿಯಂತ್ರಿಸುವ ಕೆಲಸಗಳಿಗೆ ಮಾತ್ರ ವೈದಿಕರು ಸೀಮಿತಗೊಳಿಸಿದ್ದರು. ಆದರೆ ವಚನ ಚಳುವಳಿಯ ನಂತರ ಬದಲಾದ ಕಾಲಘಟ್ಟದ ಸಾಮಾನ್ಯ ಜನರ ಆಲೋಚನೆಗಳಿಗೆ ತಕ್ಕಂತೆ ಈ ಪ್ರಬಲ ಮತಧರ್ಮಗಳು ತಮ್ಮನ್ನು ಬದಲಿಸಿಕೊಳ್ಳುವ ಅನಿವಾರ್ಯತೆಯೂ ಸೃಷ್ಟಿಯಾಗಿತ್ತು. ಈ ಬಗೆಯ ಬದಲಾಗುವಿಕೆ, ಈ ಪ್ರಬಲ ಧರ್ಮಗಳ ಸೈದ್ಧಾಂತಿಕ ಮತ್ತು ವೈಚಾರಿಕ ತಾಕಲಾಟದಿಂದ ಸಂಭವಿಸಲಿಲ್ಲ. ಎಚ್ಚರಗೊಂಡ ಸಮಾಜದ ಬಹುಸಂಖ್ಯಾತ ದುಡಿವ ವರ್ಗಗಳ ತಿಳುವಳಿಕೆಯ ವಿಕಾಸದಿಂದಾಗಿ ಆಳುವ ದಣಿಗಳ ಅಸ್ತಿತ್ವೀಯ ಪ್ರಶ್ನೆಗಳಿಂದಾಗಿ ಈ ಬದಲಾಗುವಿಕೆ ಸಂಭವಿಸಿತು. ವೈದಿಕ ಧರ್ಮದ ದ್ವೈತ ಮತ್ತು ಅದ್ವೈತ ಧಾರಗಳ ನಂತರ ಬಂದ ವಿಶಿಷ್ಟಾದ್ವೈತ ಧಾರೆಯು ವೈದಿಕ ಕರ್ಮಠತೆಯ ಸುಧಾರಿತ ರೂಪವನ್ನು ಧರಿಸಿಕೊಂಡು ಅವತರಿಸಿತು. ಮತ್ತು ತನೆಲ್ಲ ತೋರಿಕೆಯ ಪ್ರಗತಿಪರತೆಯ ಕಾರಣಕ್ಕೆ ಜನಪ್ರಿಯವೂ ಆಗಿಬಿಟ್ಟಿತು. ವಿಶಿಷ್ಟಾದ್ವೈತ ಮತವು ದುಡಿವ ವರ್ಗಗಳಾದ ಶೂದ್ರ ಮತ್ತು ದಲಿತ ಸಮುದಾಯಗಳ ಮಧ್ಯೆ ಜನಪ್ರಿಯಗೊಂಡಿತು. ಆದರೆ ಇದು ವಚನ ಚಳುವಳಿಯಷ್ಟು ಸೈದ್ಧಾಂತಿಕವಾಗಿ ದುಡಿವ ವರ್ಗಗಳ ಪರವಾಗಿರಲಿಲ್ಲ.

ಈ ಅಭಿಜಾತ ಮತಧರ್ಮಗಳಿಗೆ ತಮ್ಮ ಪೌರಾಣಿಕ ಪರಿವೇಷಗಳನ್ನು ಕಳಚಿಕೊಳ್ಳುವ, ಇಲ್ಲವೆ ತಾವು ಬದುಕುತ್ತಿರುವ ಸ್ಥಳೀಯ ಆಧ್ಯಾತ್ಮಿಕ ಜಗತ್ತುಗಳ ಜೊತೆ ತಮ್ಮನ್ನು ಸಂಸರ್ಗಗೊಳಿಸಿಕೊಳ್ಳುವ ಅನಿವಾರ್ಯತೆ ಎದುರಾಗಿತ್ತು. ಕರ್ನಾಟಕದ ಮಧ್ಯಕಾಲೀನ ಸಾಮಾಜಿಕ ಚರಿತ್ರೆಯಲ್ಲಿ ಈ ಬಗೆಯ ಸಂಸರ್ಗದ ಕೋಲಾಹಲವು ತಣ್ಣಗೆ ನಡೆದು ಹೋಗಿದೆ. ಹೀಗೆ ನಡೆದು ಹೋದ ಘಟನೆಯಿಂದಾಗಿ ಸ್ಥಳೀಯ ಸಮುದಾಯಗಳ ಆಧ್ಯಾತ್ಮಿಕ ಜಗತ್ತುಗಳಲ್ಲಿ ವಿಲಕ್ಷಣ ಸಂಕರತೆಯೂ ಸಂಭವಿಸಿದೆ.[೩] ಮಧ್ಯಕಾಲದ ಧಾರ್ಮಿಕ ಕ್ಷೇತ್ರದಲ್ಲಿ ನಡೆದ ಈ ಸಂಕರಗೊಳ್ಳುವ ಪ್ರಕ್ರಿಯೆಗೆ ಕೇವಲ ಧಾರ್ಮಿಕವೆನ್ನುವ ಕಾರಣಗಳು ಮಾತ್ರ ಇರಲಿಲ್ಲ. ಮೊದಲೇ ಹೇಳಿದಂತೆ ಭಾರತದಲ್ಲಿ ಧಾರ್ಮಿಕ ಕ್ಷೇತ್ರದ ಬದಲಾವಣೆಗಳು ಮತ್ತು ವಿಸ್ತರಣೆಗಳು ಅಧಿಕಾರಸ್ಥ ಕೇಂದ್ರಗಳ ಅವಲಂಬನೆ, ನಿಯಂತ್ರಣ ಮತ್ತು ನಿರ್ದೇಶನಗಳನ್ನು ಅವಲಂಬಿಸಿದ್ದವು. ಹೊಯ್ಸಳರ ಕಾಲದಲ್ಲಿ ವೈದಿಕ ಧರ್ಮದ ಸುಧಾರಿತ ಮತ್ತು 'ಪ್ರಗತಿಗಾಮಿ' ಮತವಾಗಿ ಹೊರಹೊಮ್ಮಿದ ಶ್ರೀವೈಷ್ಣವ ಮತಕ್ಕೆ ರಾಮನುಜರು ವ್ಯಾಪಕ ಪ್ರಚಾರ ನೀಡಿದರು. ಜೊತೆಗೆ ಅಂದಿನ ಎರಡು ಪ್ರಬಲ ರಾಜಮನೆತನಗಳಾದ

ಹೊಯ್ಸಳ ಮತ್ತು ವಿಜಯನಗರಗಳ ರಾಜಕೀಯ ಮತ್ತು ಆರ್ಥಿಕ ಪ್ರೋತ್ಸಾಹಗಳೂ ಈ ಮತಕ್ಕೆ ದೊರೆತವು. ಈ ಕಾರಣದಿಂದ ಶ್ರೀವೈಷ್ಣವವು ಕರ್ನಾಟಕದ ಸ್ಥಳೀಯ ಜನಸಮುದಾಯಗಳ ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಬೆರೆತು ಹೋಯಿತು. ಕರ್ನಾಟಕದ ದಕ್ಷಿಣ ಭಾಗದಲ್ಲಿ ಬಿಳಿಗಿರಿ ರಂಗ, ರಂಗನಾಥ, ತಿಮ್ಮಪ್ಪ, ಬೇಟೆರಾಯನಂತಹ ಸ್ಥಳೀಯ ದೇವತೆಗಳ ಜೊತೆ ಮತ್ತು ಉತ್ತರ ಕರ್ನಾಟಕದಲ್ಲಿ ವಿಠಲ ಪರಂಪರೆಯ ಜೊತೆಗೆ ಶ್ರೀವೈಷ್ಣವ ಮತಕ್ಕೆ ಸುಲಭವಾದ ಸಂಸರ್ಗ ಸಾಧ್ಯವಾಯಿತು. ಈ ಸುಲಭ ಸಂಸರ್ಗವು ಸದರಿ ಮತವನ್ನು ಹೆಚ್ಚು ಜನಪ್ರಿಯಗೊಳಿಸಿತು. ಇಲ್ಲಿ ವೈದಿಕವು ತನಗೆ ಪೌರಾಣಿಕ ಕಾಲದಿಂದ ಲಭ್ಯವಾಗಿದ್ದ ಅಭಿಜಾತತೆಯನ್ನು ಬಿಟ್ಟು ಕೊಡಬೇಕಾಯಿತು. ಜೊತೆಗೆ ಸ್ಥಳೀಯ ಆರಾಧನಾ ಪರಂಪರೆಗಳ ಜೊತೆಗೆ ವಾದಿಕವೂ ಅದರಲ್ಲೂ ಶ್ರೀವೈಷ್ಣವವು ಸಂಕರಗೊಳ್ಳುವುದು ಅನಿವಾರ್ಯವಾಗಿತ್ತು.

ಈ ಮೊದಲೇ ಹೇಳಿದಂತೆ ವೈದಿಕ ಧರ್ಮವು ಶ್ರೀವೈಷ್ಣವ ಮತದ ಜೊತೆಗೆ ತನ್ನ ಅಸ್ತಿತ್ವವನ್ನು ಅಧಿಕಾರಸ್ಥ ಕೇಂದ್ರಗಳಿಗೆ ಮನವರಿಕೆ ಮಾಡಿಕೊಡಬೇಕಿತ್ತು. ಜೊತೆಗೆ ಮಧ್ಯಕಾಲದ ಊಳಿಗಮಾನ್ಯ ಶಕ್ತಿಗಳೂ ಸಹ ಈ ಮತಧರ್ಮಗಳ ಮೂಲಕ ಸ್ಥಳೀಯ ಆರ್ಥಿಕತೆಯನ್ನು ನಿಯಂತ್ರಿಸುವ ಅನಿವಾರ್ಯತೆಗೆ ಸಿಲುಕಿದ್ದವು. ಹೀಗಾಗಿ ವೈದಿಕತೆಯು ತನ್ನೆಲ್ಲ ಪೌರಾಣಿಕತೆಯನ್ನು, ಪುರಾತನ ಅಟ್ಟಹಾಸಗಳನ್ನು ಮತ್ತು ತನ್ನ ಪಾರಂಪರಿಕ ಹಿಂಸಾತ್ಮಕ ಮೌಲ್ಯಗಳನ್ನು ಶ್ರೀವೈಷ್ಣವದ ಮೂಲಕ ನೀಗಿಕೊಳ್ಳಲು ಪ್ರಯತ್ನಿಸಿತು.

ಈ ಮೇಲಿನ ವಿವರಣೆಗಳ ಉದ್ದೇಶವಿಷ್ಟೇ, ಮಧ್ಯಕಾಲೀನ ಕರ್ನಾಟಕದಲ್ಲಿ, ಅಧಿಕಾರದ ಕೇಂದ್ರಗಳಲ್ಲಿ ಮತ್ತು ಮತಧರ್ಮಗಳ ಕ್ಷೇತ್ರದಲ್ಲಿ ಆದ ಬದಲಾವಣೆಗಳು ಯಾವ ಬಗೆಯಲ್ಲಿ ದುಡಿವ ಕೆಳಜಾತಿಗಳನ್ನು, ಸೇವಕ ಸಮುದಾಯಗಳನ್ನು ಒಳಗೊಳ್ಳಲು ಪ್ರಯತ್ನಿಸಿದವು. ಮತ್ತು ಆ ಮೂಲಕ ಈ ಸಮುದಾಯಗಳ ಲೌಕಿಕದ ಬದುಕನ್ನು ನಿಯಂತ್ರಿಸಲಾರಂಭಿಸಿದವು ಎಂಬುದನ್ನು ವಿವರಿಸಲು ಮೇಲಿನ ಟಿಪ್ಪಣಿಯನ್ನು ಮಾಡಲಾಗಿದೆ. ವಚನಕಾರರು ಶೋಷಿತರನ್ನು ಸಂಘಟಿಸಿದರು. ಅವರಿಗೆ ಆತ್ಮಪ್ರತ್ಯಯವನ್ನು ತರುವ ನಿಟ್ಟಿನಲ್ಲಿ ಅವರ ಬಡತನವನ್ನೇ ವೈಭವೀಕರಿಸಿದರು. ಬಡತನವು ವಚನಕಾರರಿಗೆ ಒಂದು ಮೌಲ್ಯ. ಗಾಂಧೀಜಿಗೆ ಹಳ್ಳಿಯೊಂದು, ಒಂದು ಸ್ವಯಂಪೂರ್ಣ ಉತ್ಪಾದನಾ ಘಟಕವಾಗಿ ಹೇಗೆ ಒಂದು ಆದರ್ಶ ಮಾದರಿಯೋ ಹಾಗೆಯೇ ಬಡತನವು ಮನುಷ್ಯನ ಒಂದು ಆದರ್ಶ ಸ್ಥಿತಿಯಾಗಿ ವಚನಕಾರರಿಗೆ ಒಪ್ಪಿತ ಮೌಲ್ಯ. ವಚನಕಾರರಿಗೆ ಮತ್ತು ಗಾಂಧೀಜಿಯವರಿಗೆ ಬಡತನಕ್ಕೆ ಕಾರಣವಾಗುವ ಅಸಮಾನತೆ ಮತ್ತು ಶೋಷಕ ಪರಂಪರೆಯು ಶತ್ರುವಾಗಲಿಲ್ಲ. ಹಳ್ಳಿಗಳ ಸ್ವಯಂಪೂರ್ಣ ಉತ್ಪಾದನಾ ಸಂಬಂಧಗಳು ಜಾತಿ ಶ್ರೇಣೀಕರಣವನ್ನು ಸಾಕಿಕೊಂಡು ಬರುತ್ತವೆ ಎಂದು ಗಾಂಧೀಜಿ ಭಾವಿಸಲಿಲ್ಲ. ಶೋಷಣೆಗೆ ಕಾರಣವಾಗುವ ಅಧಿಕಾರಸ್ಥ ಕೇಂದ್ರಗಳು ಗಾಂಧೀಜಿ ಮತ್ತು ವಚನಕಾರರಿಬ್ಬರಿಗೂ ಬಹು ದೊಡ್ಡ ಸಮಸ್ಯೆಯಾಗಿ, ನಾಶ ಮಾಡಲೇಬೇಕಾದ ಶತ್ರು ಪಾಳೆಯಗಳಾಗಿ ಕಾಣಲಿಲ್ಲ. ಆದರೆ ವಚನಕಾರರು ದುಡಿವ ವರ್ಗಗಳಲ್ಲಿ ಪ್ರಶ್ನಿಸುವ, ಮಾತನಾಡುವ ಮತ್ತು ಲೌಕಿಕದ ತಮ್ಮ ವಿಷಮ ಸ್ಥಿತಿಗಳನ್ನು ಸ್ಫೋಟಿಸುವ ಆತ್ಮಪ್ರತ್ಯಯವನ್ನು ತುಂಬಿದರು. ಈ ಕಾರಣದಿಂದ ೧೨ನೇ ಶತಮಾನದ ವಚನಕಾರರು ಒಂದು ಕ್ರಾಂತಿಕಾರಿ ಆಂದೋಲನದ ರೂವಾರಿಗಳು ಎಂದರೆ ತಪ್ಪಾಗಲಿಕ್ಕಿಲ್ಲ.

ಆದರೆ ವೈದಿಕ ಧರ್ಮದ ಸುಧಾರಿತರೂಪವಾಗಿ ಹೊರಹೊಮ್ಮಿದ ಶ್ರೀವೈಷ್ಣವವು ತನ್ನ ಪೂರ್ವಾಶ್ರಮವಾದ ವೈದಿಕದ ಗುಣಧರ್ಮವನ್ನು ಸೈದ್ಧಾಂತಿಕವಾಗಿ ಮೀರಿದೆ ಎಂದು ಹೇಳಲಾಗುವುದಿಲ್ಲ. ಈವತ್ತಿಗೂ ಅದು ಶೂದ್ರ ಮತ್ತು ಕೆಳಜಾತಿಗಳ ಅರಾಧನಾ ಪರಂಪರೆಗಳಲ್ಲಿ ಜೀವಂತವಾಗಿದೆಯಾದರೂ ಅದೊಂದು ಸುಧಾರಣಾವಾದಿ ಮೌಲ್ಯಗಳ ವೈಚಾರಿಕ ಧಾರೆಯಾಗಿ ಮಾತ್ರ ಗೋಚರಿಸುತ್ತದೆ. ಇದಕ್ಕೆ ಕಾರಣಗಳೂ ಇವೆ. ಯಾವ ವಿಚಾರಗಳು ಮನುಷ್ಯನ, ಅದರಲ್ಲೂ ಶೋಷಿತ ಸಮುದಾಯಗಳ ನಿತ್ಯದ ಬವಣೆಗಳಾದ ಸಾಮಾಜಿಕ, ಆರ್ಥಿಕ ಅಸಮಾನತೆ, ಅಧಿಕಾರ ರಹಿತ ಸ್ಥಿತಿ ಮಂತಾದ ಲೌಕಿಕದ ಸಂಗತಿಗಳನ್ನು ಮುಖ್ಯವಾಗಿಟ್ಟುಕೊಳ್ಳುತ್ತವೋ ಆ ವಿಚಾರಗಳು ಮನುಷ್ಯನ ಅಥವಾ ಸಮುದಾಯಗಳು ಬದುಕುವ ನರಕದ ಸ್ಥಿತಿಯನ್ನು ಮೂಲೋತ್ಪಾಟನೆ ಮಾಡಲು ಹೊರಡುತ್ತವೆ. ಮಾರ್ಕ್ಸ್‌ವಾದ ಈ ತರಹದ್ದು. ಅದು ಮನುಷ್ಯ 'ಈಗ ಬದುಕುತ್ತಿರುವ ಸ್ಥಿತಿಗತಿಗಳಿಗೆ ಕೆಲವು ನಿರ್ದಿಷ್ಟ ಸಂಗತಿಗಳು ಕಾರಣ' ಎಂದು ಮೊದಲಿಗೇ ಗುರುತಿಸಿ ಬಿಡುತ್ತದೆ. ಶೋಷಿತರು ಮತ್ತು ಶೋಷಕರು ಎಂಬ ಎರಡು ಜ್ವಲಂತ ಸ್ಥಿತಿಗಳನ್ನು ಪರಿಕಲ್ಪಿಸುವುದು ಮಾರ್ಕ್ಸ್‌ವಾದದ ಬಹುದೊಡ್ಡ ಹಿರಿಮೆ. ವಚನಕಾರರು ಹೀಗೆ ತಾವು ಬದುಕುತ್ತಿದ್ದ ಕಾಲಘಟ್ಟದ ವರ್ಗ ವೈರುಧ್ಯಗಳನ್ನು ಗುರುತಿಸಿದರಾದರೂ, ತಾವು ಪ್ರತಿನಿಧಿಸುತ್ತಿದ್ದ ಶೋಷಿತರ ಸ್ಥಿತಿಗೆ ಶೋಷಕರು ಎಷ್ಟು ಕಾರಣರೋ, ತಮ್ಮ ಸದ್ಯದ ಸ್ಥಿತಿಗೆ ಸ್ವತಃ ಶೋಷಿತರೂ ಕಾರಣ ಎಂದು ಪರಿಭಾವಿಸಿದರು. ಅದಕ್ಕಾಗಿ ಮೊದಲು 'ಶೋಷಿತ ಸಮುದಾಯಗಳು ತಮ್ಮ ನಿತ್ಯದ ಬದುಕನ್ನು ಸರಿಪಡಿಸಿಕೊಳ್ಳಬೇಕು' ಎಂದು ವಚನಕಾರರು ನಂಬಿದ್ದರು. ಅವರಿಗೆ 'ಕೆಳಜಾತಿಗಳು ಪೂಜಿಸುವ ಸ್ಥಳೀಯ ದೇವತೆಗಳು ಸಹ್ಯವಾಗಲಿಲ್ಲ. ಕೆಳಜಾತಿಗಳ ಜೀವನ ವಿಧಾನಗಳನ್ನು ಈ ದೇವತೆಗಳು ನಿರ್ಣಾಯಕವಾಗಿ ನಿಯಂತ್ರಿಸಿಬಿಡುತ್ತವೆ' ಎಂದು ವಚನಕಾರರು ನಂಬಿದ್ದರು. ಹೀಗಾಗಿ ಶೋಷಕರ ಹಿಂಸಾಪ್ರವೃತ್ತಿಯ ವಿರುದ್ಧ ಅವರು ಮಾತನಾಡಿದ್ದು ಕಡಿಮೆ.

ಆದರೆ ಶ್ರೀವೈಷ್ಣವವು ವಚನಕಾರರ ಮಿತಿಗಳನ್ನು ಗುರುತಿಸಿಯೇ ಮುಂದುವರೆಯಿತು. ಕೆಳಜಾತಿಗಳ ನಿತ್ಯ ವರ್ತಮಾನವನ್ನು ಅದು ಎಂದೂ ಪ್ರಶ್ನಿಸಲಿಲ್ಲ. ಹೀಗೆ ಪ್ರಶ್ನಿಸಿಬಿಟ್ಟರೆ ಅದು ಅಧಿಕಾರಸ್ಥ ಕೇಂದ್ರಗಳ ಶತ್ರುತ್ವವನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಇದು ದುಡಿವ ವರ್ಗಗಳ ಆಧ್ಯಾತ್ಮಿಕ ಜಗತ್ತನ್ನು ತನ್ನ ಜೊತೆ ಸಂಸರ್ಗಗೊಳಿಸಿಕೊಂಡಿತು. ಶ್ರೀವೈಷ್ಣವದ ಯಶಸ್ಸು ಅದು ಕೆಳಜಾತಿಗಳೊಂದಿಗೆ ನಡೆಸಿದ ಸಂಸರ್ಗದ ಪ್ರಕ್ರಿಯೆಯಲ್ಲಿ ಅಡಗಿದೆ. ಮಧ್ಯಕಾಲೀನ ಕರ್ನಾಟಕದ ರಾಜಕಾರಣದ ಸಂದರ್ಭದಲ್ಲಿ ಶ್ರೀವೈಷ್ಣವವು ಕೆಳಜಾತಿಗಳ ನಿರ್ದಿಷ್ಟ ಆಧ್ಯಾತ್ಮಿಕ ಸಂಕೇತಗಳನ್ನು ತನ್ನಲ್ಲಿ ಅಂತರ್ಗತ ಮಾಡಿಕೊಂಡಿತು. ಶ್ರೀವೈಷ್ಣವ ಮತದ ಬೆಳವಣಿಗೆಯ ಕಾಲದಲ್ಲಿ ಅದು 'ಬ್ರಾಹ್ಮಣ ಪ್ರಾದೇಶಿಕ ಅಂಶಗಳನ್ನೆಲ್ಲ ಒಳಗೊಳ್ಳುತ್ತಾ ಬ್ರಾಹ್ಮಣೀಕರಣವನ್ನು ನಡೆಸಿತು. ಹಾಗಾಗಿ ಒಂದೆಡೆ ಈ ಮತ ತನ್ನ ಪ್ರಾದೇಶಿಕ ಭಕ್ತಿ ಸಿದ್ಧಾಂತವನ್ನು ವಿಶಿಷ್ಟಾದ್ವೈತದ ಮೂಲಕ, ಅದರ ಸಂಸ್ಕೃತ ಪರಂಪರೆಯ ಮೂಲಕ ಕಟ್ಟುತ್ತಾ, ಶೋಧಿಸಿಕೊಳ್ಳುತ್ತಾ, ಮತ್ತೊಂದೆಡೆ ಪ್ರಾದೇಶಿಕ ಭಾಷೆಯನ್ನು ಹಾಗೂ ಆಚರಣೆಯನ್ನು ಮಾನ್ಯ ಮಾಡುತ್ತಾ ಎರಡಾಗಿ ತೆಂಕಲೈ ವರಗಲೈ'[೪] ಎಂದು ಒಡೆಯಿತು ಈ ಶ್ರೀವೈಷ್ಣವವು ಕೇವಲ ನಾಡಿನ ದೇವತೆಗಳನ್ನಲ್ಲದೆ, ಆದಿವಾಸಿಗಳ

ದೈವಗಳನ್ನು ವೈದಿಕೀಕರಿಸುವ ಮತ್ತು ಈ ದೈವಗಳ ಒಕ್ಕಲುಗಳನ್ನು ವೈಷ್ಣವ ಮತಕ್ಕೆ ಮತಾಂತರಿಸುವ ಕ್ರಿಯೆಯಲ್ಲಿ ತೊಡಗಿತು. ಅಂದು ಕೆಳಜಾತಿಗಳ, ಆದಿವಾಸಿಗಳ ದೈವಗಳಾಗಿದ್ದ ಬೇಟೆರಾಯ, ತಿಮ್ಮಪ್ಪ, ಬಿಳಿಗಿರಿರಂಗ ವೈದಿಕೀಕರಣಗೊಂಡವು. ಇದರಿಂದ ಈ ದೈವಗಳನ್ನು ಆರಾಧಿಸುತ್ತಿದ್ದ ಜನಸಮುದಾಯಗಳೂ ವೈದಿಕದ ಕೆಲವು ಆರಾಧನಾ ಪರಂಪರೆಯ ಲಾಂಛನ ಮತ್ತು ಸಂಕೇತನಗಳನ್ನು ಅನುಕರಿಸತೊಡಗಿದವು. ಗಮನಾರ್ಹ ಸಂಗತಿಯೆಂದರೆ ಶ್ರೀವೈಷ್ಣವಕ್ಕೆ ಮತಾಂತರಗೊಂಡ ಸಮುದಾಯಗಳು ಮುಖ್ಯವಾಗಿ ಶೂದ್ರ ಮತ್ತು ದಲಿತ ವರ್ಗಕ್ಕೆ ಸೇರಿದ ಸಮುದಾಯಗಳು. ಬಲೀಂದ್ರನ ಒಕ್ಕಲಾಗಿ ಅವನನ್ನು ಪೂಜಿಸುತ್ತಿದ್ದ ಹಾಲಕ್ಕಿಗಳು ತಿರುಪತಿ ತಿಮ್ಮಪ್ಪನ ಒಕ್ಕಲಾಗಿ ಮತಾಂತರಗೊಂಡರು. ಮಲೆನಾಡಿನ ಒಕ್ಕಲಿಗರು, ಗೊಂಡರು, ದೀವರು ಮುಂತಾದ ಅನೇಕ ದುಡಿವ ಸಮುದಾಯಗಳು ಹೀಗೆ ಶ್ರೀವೈಷ್ಣವಕ್ಕೆ ಮತಾಂತರಗೊಂಡವು. ಇಲ್ಲಿ ಇನ್ನೊಂದು ಸಂಗತಿಯನ್ನು ಗಮನಿಸುವುದು ಸೂಕ್ತ. ಶ್ರೀವೈಷ್ಣವವು ಕೇವಲ ಕೆಳಜಾತಿಗಳ ದೈವಗಳನ್ನು ಮಾತ್ರ ವೈದಿಕೀಕರಿಸಿ ಅವುಗಳ ಒಕ್ಕಲುಗಳನ್ನು ಮತಾಂತರಗೊಳಿಸಲಿಲ್ಲ. ಬದಲಿಗೆ ಈ ಸಮುದಾಯಗಳ ಹಲವು ಆರಾಧನಾ ಪದ್ಧತಿಗಳನ್ನು ತಾನೂ ಅನುಮೋದಿಸಿ ಅವಕ್ಕೆ ಒಂದು ಪೌರಾಣಿಕ ಸ್ಥಾನಮಾನಗಳನ್ನು ಕೊಡುವ ಪ್ರಯತ್ನ ಮಾಡಿತು. ಮುಖ್ಯವಾಗಿ ಮಲೆನಾಡಿನ ಸಮುದಾಯಗಳ ತುಳಿಸಿ ಪೂಜೆ ಇದಕ್ಕೆ ಉದಾಹರಣೆ. ತುಳಸಿ ಪೂಜೆ ಆದಿಮ ಕೃಷಿಕ ಸಮುದಾಯಗಳ ಸಸ್ಯಾರಾಧನಾ ಪದ್ಧತಿ. ಶ್ರೀವೈಷ್ಣವವು ಈ ಆರಾಧನಾ ಪದ್ಧತಿಯನ್ನು ತಾನು ಒಳಗೊಳ್ಳುವ ಮೂಲಕ ಅದಕ್ಕೆ ಒಂದು 'ಅಭಿಜಾತ ಸ್ಥಾನಮಾನ' ಕೊಡುವ ಪ್ರಯತ್ನ ಮಾಡಿತು. ಹೀಗೆ ಶ್ರೀ ವೈಷ್ಣವವು ಅಂದಿನ ರಾಜಪ್ರಭುತ್ವಗಳ ಜೊತೆ ತನ್ನನ್ನು ಸಮೀಕರಿಸಿಕೊಂಡು ಆಳಿಸಿಕೊಳ್ಳುವ ಜನರ ಅಂತರಂಗದ ಜಗತ್ತುಗಳನ್ನು ರೂಪಾಂತರಿಸುವಲ್ಲಿ ಯಶಸ್ವಿಯಾಯಿತು.

ಹೀಗೆ ಶ್ರೀವೈಷ್ಣವ ಮತವನ್ನು ಅನುಸರಿಸಿದ ಮತ್ತು ಅನುಸರಿಸುವಂತಾದ ಸಮುದಾಯಗಳಲ್ಲಿ ಡೊಂಬರ ಸಮುದಾಯವೂ ಒಂದು. ಮೂಲತಃ ಡೊಂಬರು ಶಕ್ತಿ ಆರಾಧಕರು. ಇವರಲ್ಲಿ ಅನೇಕ ತಾಂತ್ರಿಕ ಪೂಜಾ ವಿಧಾನಗಳಿವೆ. ಹಲವು ಹೆಣ್ಣು ದೇವತೆಗಳನ್ನು ಡೊಂಬರು ಪೂಜಿಸುತ್ತಾರೆ. ಅದರಲ್ಲೂ ಇವರು ಸುಗ್ಗಿಯ ಸಂದರ್ಭದಲ್ಲಿ ಆಚರಿಸುವ 'ಗಾಳೆಮ್ಮನ ಹಬ್ಬ'ವು ಶಾಕ್ತ ಪಂಥದ ಪೂಜಾ ವಿಧಾನಗಳನ್ನು ಅನಾವರಣಗೊಳಿಸುತ್ತದೆ. ಒಂದು ಅಪ್ಪಟ ತಾಂತ್ರಿಕ ಆರಾಧನೆಯ ವಿಧಿಬದ್ಧ ಆಚರಣೆ ಈ ಗಾಳೆಮ್ಮನ ಹಬ್ಬ. ಜೊತೆಗೆ ಇವರು ಶಿವನ ಆರಾಧಕರೂ ಹೌದು. ಇವರ ಆದಿಮ ಆಚರಣೆಗಳಲ್ಲಿ ವೈದಿಕ ಆರಾಧನಾ ಪದ್ಧತಿಗಳು ಕಾಣಿಸುವುದಿಲ್ಲ. ವರ್ಷಕ್ಕೊಂದಾವರ್ತಿ ದಾವಣಗೆರೆ ಜಿಲ್ಲೆಯಲ್ಲಿನ ಡೊಂಬರು ದುರುಗಮ್ಮನ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಜೊತೆಗೆ ಸುಗ್ಗಿಯ ಸಂದರ್ಭದಲ್ಲಿ ಗಾಳೆಮ್ಮನ ಹಬ್ಬ ವಿಶೇಷವಾಗಿ ಆಚರಿಸಲ್ಪಡುತ್ತದೆ. ಈ ಗಾಳೆಮ್ಮನ ಹಬ್ಬವು ನಿರ್ದಿಷ್ಟ ವಿಧಿ ವಿಧಾನಗಳ ಮೂಲಕ ಒಂದು ಕ್ರಮಬದ್ಧ ಅವಕಾಶದೊಳಗೆ (Space) ನಡೆಯುತ್ತದೆ. ಶಿವನ ಆರಾಧನೆ ಈ ಸಮುದಾಯದ ಒಟ್ಟಾರೆಯ ಪರಂಪರೆಯಲ್ಲಿ 'ಮುಖ್ಯವಾಹಿನಿಯ' ಶೈವ ಮತದ ಪ್ರಭಾವದಿಂದ ಇವರಲ್ಲಿ ಪ್ರಚಲಿತದಲ್ಲಿದೆ. ಆದರೆ ಶ್ರೀವೈಷ್ಣವವು ಕಳೆದ ಇನ್ನೂರು ಮುನ್ನೂರು ವರ್ಷಗಳ ಹಿಂದೆ ಈ ಸಮುದಾಯವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿರುವುದಕ್ಕೆ ಸ್ಪಷ್ಟ ಸಾಕ್ಷಿಗಳು ಲಭ್ಯವಾಗುತ್ತವೆ. ಸದರಿ ಸಮುದಾಯವು ತಾನು ಆಚರಿಸುವ

ಕೆಲವು ವಿಧಿಬದ್ಧ ಆಚರಣೆಗಳ ಸಂದರ್ಭದಲ್ಲಿ ಶ್ರೀವೈಷ್ಣವ ಮತವು ತನ್ನ ಕೆಲವು ಲಾಂಛನಗಳನ್ನು ಹೊಂದಲೇಬೇಕೆಂಬ ಒತ್ತಾಯವನ್ನು ಹೇರುತ್ತದೆ. ನಾಮ ಬಳಿದುಕೊಳ್ಳುವುದು, ಭುಜಗಳಿಗೆ ಶಂಖ ಚಕ್ರಗಳ ಮುದ್ರೆ ಹಾಕಿಸಿಕೊಳ್ಳುವುದು ಮತ್ತು ವರ್ಷಕ್ಕೊಮ್ಮೆ ದಾಸಪ್ಪಗಳಾಗಿ ಭಿಕ್ಷೆ ಬೇಡಲು ಹೋಗುವುದನ್ನು ಈ ಸಮುದಾಯ ನಿರ್ದಿಷ್ಟ ಸಂದರ್ಭಗಳಲ್ಲಿ ಆಚರಿಸಲೇಬೇಕಾದ ವಿಧಿಗಳೆಂದು ಸ್ವೀಕರಿಸಿದೆ. ಈ ಸಂದರ್ಭದಲ್ಲಿ ನಾನು (ಅಂದರೆ ಈ ಪ್ರಬಂಧದ ಲೇಖಕ) ಭಾಗವಹಿಸಿದ್ದ ಶ್ರೀವೈಷ್ಣವ ಮತದ ವಿಧಿಬದ್ಧ ಆಚರಣೆಯ ಸಂದರ್ಭವನ್ನು ಉದಾಹರಿಸುವುದು ಉಚಿತವೆಂದು ಕಾಣುತ್ತದೆ.

ಒಬ್ಬ ಬ್ರಾಹ್ಮಣ, ಅಂದರೆ ಶ್ರೀ ವೈಷ್ಣವ ಪಂಥದ ಗುರುವೆನ್ನಿಸಿಕೊಂಡಾತನೊಬ್ಬ ಒಂದು ನಿರ್ದಿಷ್ಟ ಪ್ರದೇಶದಲ್ಲಿ ತನ್ನ ಒಕ್ಕಲುಗಳನ್ನು ಹೊಂದಿರುತ್ತಾನೆ. ಈತ ಶ್ರೀವೈಷ್ಣವ ಮತಕ್ಕೆ ಸೇರಿದ ಮತ್ತು ಈ ಮತವನ್ನು ಒಕ್ಕಲುಗಳಲ್ಲಿ ಕಾಲದಿಂದ ಕಾಲಕ್ಕೆ ಪ್ರಚಾರ ಮಾಡಲೆಂದು ಅಧಿಕೃತವಾಗಿ ನೇಮಕಗೊಂಡಿರುತ್ತಾನೆ. ಈತ ಕಾಲ ಕಾಲಕ್ಕೆ ಭಕ್ತರಿಂದ, ಅಂದರೆ ತನ್ನ ಒಕ್ಕಲುಗಳಿಂದ ಅವರ ಗ್ರಾಮಗಳಿಗೆ ಆಹ್ವಾನಿಸಲ್ಪಡುತ್ತಾನೆ. ಇಲ್ಲವೇ ತಾನೇ ಅವರಲ್ಲಿಗೆ ಹೋಗುತ್ತಾನೆ. ಇಲ್ಲಿನ ಬಹುತೇಕ ಒಕ್ಕಲುಗಳು ಕೆಳಜಾತಿಯವರೇ ಆಗಿರುತ್ತಾರೆ. ಈ ಕೆಳಜಾತಿಯ ಒಕ್ಕಲುಗಳಿಗೆ ಈ ಗುರುವು ಕೆಲವು ನಿರ್ದಿಷ್ಟ ದೀಕ್ಷೆಗಳನ್ನು ಕೊಡುತ್ತಾನೆ. ಈಗ್ಗೆ ಸುಮಾರು ೨೦ ವರ್ಷಗಳ ಹಿಂದಿನ ಒಂದು ಘಟನೆ, ನಾನು ಆ ಘಟನೆಯಲ್ಲಿ ಭಾಗಿಯಾಗಿದ್ದ ಕಾರಣಕ್ಕೆ ಅದನ್ನ ಇಲ್ಲಿ ಉಲ್ಲೇಖಿಸುವೆ.

ಡೊಂಬರ ಸಮುದಾಯಕ್ಕೆ ಕುಲಗುರು ಎನ್ನಿಸಿಕೊಂಡ ಒಬ್ಬರು ಆನೆಗೊಂದಿಯಲ್ಲಿ ನೆಲೆಸಿದ್ದರು. ಈಗ ಅವರು ತೀರಿಕೊಂಡಿರಬಹುದು. ಅವರು ಶ್ರೀವೈಷ್ಣವ ಗುರು ಪರಂಪರೆಗೆ ಸೇರಿದ್ದ ಯತಿಯಾಗಿದ್ದರು. ಅವರು ಕೆಲವು ನಿಶ್ಚಿತ ಒಕ್ಕಲುಗಳಿಗೆ ಶ್ರೀವೈಷ್ಣವ ಮತವನ್ನು ಪ್ರಚಾರ ಮಾಡಲು ಹಳ್ಳಿಗಳಿಗೆ ಹೋಗುತ್ತಿದ್ದರು. ಇವರು ಹಂಪಿಯ ಪಕ್ಕದ ಆನೆಗುಂದಿಯಲ್ಲಿದ್ದು ತಮ್ಮ ಒಕ್ಕಲು ಭಕ್ತ ಸಮೂಹಕ್ಕೆ ಧಾರ್ಮಿಕ ನಿರ್ದೇಶನಗಳನ್ನ ಕೊಡುತ್ತಿದ್ದರು. ಒಮ್ಮೆ ಇವರು ಡೊಂಬರು ಹೆಚ್ಚು ವಾಸಿಸುವ ಅಂದಿನ ಬಳ್ಳಾರಿ ಜಿಲ್ಲೆಯ (ಇಂದು ದಾವಣಗೆರೆ ಜಿಲ್ಲೆಗೆ ಸೇರಿದ) ಯರಬಳ್ಳಿ ಎಂಬ ಗ್ರಾಮಕ್ಕೆ ಆಹ್ವಾನಿಸಲ್ಪಟ್ಟಿದ್ದರು. ಅವರನ್ನು ರಾಜನನ್ನ ಎದುರುಗೊಂಡಂತೆ ಊರಿನ ಸಮುದಾಯ ಎದುರುಗೊಂಡಿತು. ಅವರಿಗೆ ಕಿರೀಟ, ಚಾಮರ, ರಾಜಲಾಂಛನಗಳೆಲ್ಲ ಇದ್ದವು. ಅಲ್ಲದೆ ಒಕ್ಕಲು ಮಕ್ಕಳಾದ ಡೊಂಬರು ಅವರ ಮೆರವಣಿಗೆಯ ಸಂದರ್ಭದಲ್ಲಿ ಬಹುಪರಾಕ್ ಸಹ ಹೇಳುತ್ತಿದ್ದರು. ಮೂರು ದಿನಗಳ ಕಾಲ ಆತ ದಿನದ ವಿವಿಧ ವೇಳೆಗಳಲ್ಲಿ ಶ್ರೀ ವೈಷ್ಣವ ಮತದ ಮಹತ್ವದ ಕುರಿತು ಪ್ರವಚನ ಮಾಡಿದ್ದರು. ಅಲ್ಲದೆ ಈ ಗುರುಗಳು ನಾಮ ಬಳಿದುಕೊಳ್ಳುವ ಬಗ್ಗೆ ಜನಿವಾರ ಹಾಕಿಕೊಳ್ಳುವ ಬಗ್ಗೆ ಸಹ ನಿರ್ದೇಶನ ಕೊಟ್ಟ ನೆನಪು ನನಗಿದೆ. ಅಲ್ಲದೆ ಯುವಕರಿಗೆಲ್ಲಾ ಮುದ್ರೆಗಳನ್ನ ಹಾಕಿ, ಅವರಿಗೆ ದೀಕ್ಷೆಕೊಟ್ಟು ದಾಸಪ್ಪಗಳನ್ನಾಗಿಯೂ ಅವರು ಮಾಡಿದರು. ಇಂದಿಗೂ ಡೊಂಬರ ತರುಣರು ಹರಪನಹಳ್ಳಿಯ ಪಕ್ಕದಲ್ಲಿರುವ ತಿಮ್ಮಾಲಾಪುರದಲ್ಲಿ ಶಂಖ ಚಕ್ರಗಳ ಮುದ್ರೆಗಳನ್ನು ಹಾಕಿಸಿಕೊಂಡ ಮೇಲೆಯೇ ಮದುವೆ ಮುಂತಾದ ಆಚರಣೆಗಳಲ್ಲಿ ಪಾಲ್ಗೊಳ್ಳಲು ಅರ್ಹರು. ಅಲ್ಲದೇ ಪ್ರತಿಯೊಂದು ಸಂಸ್ಕಾರಗಳ ಸಮಯದಲ್ಲೂ ಈ ಗುರುಗಳಿಂದ ಶುದ್ಧಿ ಮಾಡಿಸಿಕೊಳುವ ಪದ್ಧತಿಯೂ ಡೊಂಬರಲ್ಲಿದೆ. ಈ ಶ್ರೀವೈಷ್ಣವ ಯತಿಗಳು ತಮ್ಮ

ಪ್ರವಚನದ ಸಂದರ್ಭದಲ್ಲಿ ತಮ್ಮ ಗುರುಪರಂಪರೆಗೆ ವಿಜಯನಗರದ ಅರಸರು ಕೊಟ್ಟ ಪ್ರೋತ್ಸಾಹವನ್ನು ವಿವರಿಸಿದ್ದರು. ಜೊತೆಗೆ ಡೊಂಬರು ವಿಜಯನಗರ ಸಾಮ್ರಾಜ್ಯದಲ್ಲಿ ಅತ್ಯಂತ ಗೌರವಾನ್ವಿತ ಸ್ಥಾನಮಾನಗಳನ್ನು ಹೊಂದಿದ್ದ ಕುರಿತು ವಿವರಿಸಿದ್ದರು. ಪ್ರಾಯಶಃ ಡೊಂಬರು ವಿಜಯನಗರ ಆಡಳಿತದ ಕಾಲಘಟ್ಟದಲ್ಲಿಯೇ ಈ ಶ್ರೀ ವೈಷ್ಣವ ಮತದ ಗುರು ಪರಂಪರೆಯನ್ನು ಒಪ್ಪಿಕೊಂಡು ಒಕ್ಕಲುಗಳಾಗಿರಬಹುದು. ರಾಜ ಪ್ರಭುತ್ವಗಳು ತನ್ನ ಪ್ರಜೆಗಳಿಗೆ ಸಾಮ್ರಾಜ್ಯದ ಅಧಿಕೃತವೆಂದು ಪರಿಗಣಿಸಿದ ಧರ್ಮವೊಂದನ್ನು ಪ್ರಜೆಗಳೂ ಅನುಸರಿಸಬೇಕೆಂದು ಒತ್ತಾಯಿಸಿರಲೂಬಹುದು. ಶ್ರೀವೈಷ್ಣವವು ಈ ಕಾರಣದಿಂದಾಗಿಯೇ ಬೃಹತ್ ಸಂಖ್ಯೆಯ ಸಮುದಾಯಗಳನ್ನು ಒಕ್ಕಲುಗಳನ್ನಾಗಿ ಪಡೆದುಕೊಂಡಿತು. ಈ ಸಂದರ್ಭದಲ್ಲಿ ವಿಜಯ ನಗರ ಸಾಮ್ರಾಜ್ಯದ ವ್ಯಾಪ್ತಿಯಲ್ಲಿನ ಅನೇಕ ಆದಿವಾಸಿ ಮತ್ತು ಕೆಳಜಾತಿಗಳ ದೈವಗಳು ಸಹ ಬ್ರಾಹ್ಮಣೀಕರಣಗೊಂಡಂತೆ ಕಾಣುತ್ತದೆ. ಜೊತೆಗೆ ಸಮುದಾಯಗಳು ಈ ವೈಷ್ಣವೀಕರಣ ಪ್ರಕ್ರಿಯೆಗೆ ಒಳಗಾಗಿರುವುದು. ಆದರೆ ಎಲ್ಲಾ ಬ್ರಾಹ್ಮಣರಿಗೆ ಸಿಗುವ ಸಾಮಾಜಿಕ ಮತ್ತು ಧಾರ್ಮಿಕ ಸ್ಥಾನಮಾನ ಈ ಸಮುದಾಯಗಳಿಗೆ ಲಭ್ಯವಾಗಲಿಲ್ಲ. ಈ ಸಮುದಾಯಗಳ ಜನ ದಾಸಪ್ಪಗಳಾಗಿ ಬವನಾಸಿ ಮತ್ತು ಜಾಗಟೆಗಳೊಂದಿಗೆ ಹರಿದಾಸ ಕೀರ್ತನೆಗಳನ್ನ ಹಾಡುತ್ತ, ಭಿಕ್ಷೆಬೇಡುತ್ತ, ಶ್ರೀವೈಷ್ಣವ ಮತಪ್ರಚಾರಕರಾಗಿ ಮಾತ್ರ ಉಳಿದು ಕೊಂಡರು. ವೈದಿಕರು ಎಂದೂ ತಮ್ಮ ಸಾಂಸ್ಕೃತಿಕ ಏಕಸ್ವಾಮ್ಯಕ್ಕೆ ಧಕ್ಕೆಯಾಗದಂತೆ, ಈ ಸಮುದಾಯಗಳನ್ನ ಅಸಹಾಯಕಗೊಳಿಸಿದರು. ಆದರೆ ಕೆಳಜಾತಿ ಸಮುದಾಯಗಳು ಶ್ರೀ ವೈಷ್ಣವ ಪಂಥದ ಈ ಧಾರ್ಮಿಕ ಹೇರಿಕೆಯನ್ನು ಮತ್ತು ಈ ಮತವು ಮಾಡಿದ ದೈವ ಸಂಕರವನ್ನು ಯಾವ ಪ್ರತಿರೋಧಗಳಿಲ್ಲದೆ ಒಪ್ಪಿಕೊಂಡಿಲ್ಲ. ಈ ಮೊದಲೇ ಹೇಳಿದಂತೆ ಶ್ರೀವೈಷ್ಣವ ಮತದ ಜೊತೆಗಿನ ಕೆಳಜಾತಿಗಳ ಮತ್ತು ಆದಿವಾಸಿಗಳ ಸಂಬಂಧವು ಸಹಚರ ಸಂಬಂಧವಾಗಿದೆ. ತನ್ನ ಚಹರೆಗಳನ್ನು ಉಳಿಸಿಕೊಂಡು ಅನ್ಯವನ್ನು ಒಳಗೊಳ್ಳುವ ಸಹಚರತೆ ಮತ್ತು ಕೊಡುಕೊಳ್ಳುವಿಕೆಯ ಸಂಬಂಧ ಇಲ್ಲಿ ಏರ್ಪಟ್ಟಿದೆ. ಕೆಳಜಾತಿಗಳು ಮತ್ತು ಆದಿವಾಸಿಗಳು ತಮ್ಮ ಆದಿಮ ದೈವಗಳನ್ನು ಮತ್ತು ಪಾರಂಪರಿಕ ಪೂಜಾ ವಿಧಾನಗಳನ್ನು ಬಿಟ್ಟುಕೊಟ್ಟಿಲ್ಲ. ಇದಕ್ಕೆ ಮ್ಯಾಸಬೇಡರ ದೈವವಾದ ಜಗಳೂರಜ್ಜನ ಬದುಕಿನ ಸುದೀರ್ಘ ಕಥಾನಕವೇ ಉದಾಹರಣೆ. ಜಗಳೂರಜ್ಜ ಒಬ್ಬ ದನಗಾಯಿಯಾಗಿದ್ದುಕೊಂಡು ದೈವತ್ವಕ್ಕೇರಿದ ಅಸಮಾನ್ಯ ವ್ಯಕ್ತಿ. ಮ್ಯಾಸಬೇಡರು ಇಂದಿಗೂ ಜಗಳೂರುಜ್ಜನನ್ನು ಭಕ್ತಿಯಿಂದ ಪೂಜಿಸುತ್ತಾರೆ. ಈತನನ್ನು ಜಗಳೂರಜ್ಜ, ಪಾಪನಾಯಕ, ಜಗಳೂರು ಪಾಪನಾಯಕ ಎಂಬ ಬೇರೆ ಬೇರೆ ಹೆಸರುಗಳಿಂದ ಮ್ಯಾಸಬೇಡರು ಕರೆಯುತ್ತಾರೆ. ಮ್ಯಾಸಬೇಡರು ಕರ್ನಾಟಕದ ಹಲವು ಕಡೆಗಳಲ್ಲಿ ತಿಮ್ಮಪ್ಪನ ಒಕ್ಕುಲುಗಳಾಗಿದ್ದಾರೆ. ಮ್ಯಾಸಬೇಡರು ಮತ್ತು ಕಾಡುಗೊಲ್ಲರಿಗೆ ಆರ್ಥಿಕ ಒಡೆತನದ ಕಾರಣಗಳಿಗಾಗಿ ಏರ್ಪಟ್ಟಿರುವ ಹಲವು ಸಂಘರ್ಷಗಳು ಈ ಎರಡು ಸಮುದಾಯಗಳ ಮೌಖಿಕ ಕಾವ್ಯಗಳಲ್ಲಿ ದಾಖಲಾಗಿವೆ. ತಮಾಷೆಯೆಂದರೆ ಈ ಎರಡೂ ಸಮುದಾಯಗಳು ತಿಮ್ಮಪ್ಪನ ಒಕ್ಕುಲುಗಳೇ ಆಗಿವೆ. ಇವು ಕರ್ನಾಟಕದ ಆದಿಮ ಮತ್ತು ಬಹುಸಂಖ್ಯಾತ ಸಮುದಾಗಳು. ಮ್ಯಾಸಬೇಡರ ಅನುಭಾವಿ ಜಗಳೂರಜ್ಜ (ಮೂಲದಲ್ಲಿ ಈತ ಅನಾಥ ಮತ್ತು ಸಾಮಾನ್ಯ ದನಗಾಹಿ) ತನ್ನ ಸಮುದಾಯದ ಸಾಕ್ಷಿಪ್ರಜ್ಞೆಯಂತೆ ತಿಮ್ಮಪ್ಪನನ್ನು ಮುಖಾಮುಖಿ ಮಾಡುತ್ತಾನೆ."

ಮ್ಯಾಸಬೇಡರ ಸಾಂಸ್ಕೃತಿಕ ನಾಯಕ ಜಗಳೂರಜ್ಜನಿಗೂ ಮತ್ತು ತಿರುಪತಿಯ ವೆಂಕಟೇಶ್ವರನಿಗೂ ನಡೆ

ದಿರುವ ವಾಗ್ವಾದ, ಮ್ಯಾಸಬೇಡರ ಜನಪದ ಸಾಹಿತ್ಯದಲ್ಲಿ ಪ್ರಖ್ಯಾತವಾದದ್ದು. ಮಂಟೇಸ್ವಾಮಿ ಕಲ್ಯಾಣದಲ್ಲಿ ಬಸವಣ್ಣನನ್ನ ಮುಖಾಮುಖಿಯಾಗುವ ರೀತಿಯಲ್ಲೇ, ಜಗಳೂರಜ್ಜ, ವೆಂಕಟೇಶ್ವರನನ್ನ ಮುಖಾಮುಖಿ ಯಾಗುತ್ತಾನೆ. ಜಗಳೂರಜ್ಜ ದನಕಾಯುವ ಹುಡುಗನಾಗಿದ್ದಾಗಲೇ ತಿರುಪತಿಗೆ ಹೋಗಿ ವೆಂಕಟೇಶ್ವರನನ್ನ ಬೇಟಿಯಾಗಬೇಕೆಂಬ ಆಸೆಯನ್ನ ವ್ಯಕ್ತಪಡಿಸಿದಾಗ ಜನರಿಂದ ಗೇಲಿಗೊಳಗಾಗುತ್ತಾನೆ. ಆದರೂ ಹಠಕ್ಕೆ ಬಿದ್ದು ತಿರುಪತಿಗೆ ಹೊರಡುತ್ತಾನೆ. ದಾರಿಯಲ್ಲಿ ಅವನಿಗೂ ವೆಂಕಟೇಶ್ವರನ ಭಕ್ತರಾದ ಗೊಲ್ಲರಿಗೂ ಜಗಳವಾಗುತ್ತದೆ. ಗೊಲ್ಲರ ಡಾಂಭಿಕ ಭಕ್ತಿಯನ್ನ ಅವರಿಗೆ ಮನವರಿಕೆ ಮಾಡಿಕೊಡುವುದರಲ್ಲಿ ಜಗಳೂರಜ್ಜ ಯಶಸ್ವಿಯಾಗುತ್ತಾನೆ. ಕೊನೆಗೆ ತಿರುಪತಿಯನ್ನ ತಲುಪಿದರೂ ಅವನು ವೆಂಕಟೇಶ್ವರನನ್ನ ಬೇಟಿಯಾಗುವುದಿಲ್ಲ. ವೆಂಕಟೇಶ್ವರನೇ ಜಗಳೂರಜ್ಜನಿದ್ದಲ್ಲಿಗೆ ಬಂದು ದರ್ಶನ ಕೊಡುತ್ತಾನೆ. ಜಗಳೂರಜ್ಜ ತಿರುಪತಿಯಿಂದ ಹಿಂದಿರುಗಿದ ಮೇಲೆ ತನ್ನ ಪವಾಡಗಳಿಂದ ಒಕ್ಕಲುಗಳನ್ನ ನಿರ್ಮಿಸಿಕೊಳ್ಳುತ್ತ ಒಂದು ವೈಚಾರಿಕ ಪರಿಸರವನ್ನ ನಿರ್ಮಾಣ ಮಾಡಿಕೊಳ್ಳುತ್ತಿರುವಾಗಲೇ ಜಗಳೂರಿನ ರಾಜನ ಜೊತೆ ಈತನಿಗೆ ಭಿನ್ನಾಭಿಪ್ರಾಯಗಳು ಪ್ರಾರಂಭವಾಗುತ್ತವೆ. ಜಗಳೂರಿನ ರಾಜ ತನ್ನ ರಾಜ್ಯದ ಜನರಿಗೆ ವಿಪರೀತವೆನ್ನಿಸುವ ತೆರಿಗೆಗಳನ್ನು ವಿಧಿಸಿರುತ್ತಾನೆ. ಇದು ತಪ್ಪು ಎಂದು ಜಗಳೂರಜ್ಜ ವಾದಿಸುತ್ತಾನೆ. ರಾಜನಿಗೂ ಮತ್ತು ಜಗಳೂರಜ್ಜನಿಗೂ ಯುದ್ಧವೇ ನಡೆದು ಹೋಗುತ್ತದೆ. ಆ ಹೋರಾಟದಲ್ಲಿ ಜಗಳೂರಜ್ಜ ಸಾಯುವುದೇ ಇಲ್ಲ. ಕೊನೆಗೆ ತಿರುಪತಿಯ ವೆಂಕಟೇಶ್ವರನೇ ಸ್ತ್ರೀವೇಷದಲ್ಲಿ ಬಂದು ಹಿಂದಿನಿಂದ ಜಗಳೂರಜ್ಜನನ್ನ ಕೊಂದು ಹಾಕುತ್ತಾನೆ. ೧೬ ಮತ್ತು ೧೭ನೇ ಶತಮಾನದಲ್ಲಿ ನಡೆದಿದೆ ಎಂದು ನಂಬಬಹುದಾದ ಈ ಘಟನೆಯಲ್ಲಿ ವೈಷ್ಣವೇತರ ಸಾಂಸ್ಕೃತಿಕ ನಾಯಕನೊಬ್ಬ ಹೀಗೆ, ಸ್ಥಳೀಯ ಪಾಳೇಗಾರ ಮತ್ತು ವೈಷ್ಣವ ಪಂಥದ ದೇವತೆ ವೆಂಕಟೇಶ್ವರನಿಂದ ಹತನಾಗುವ ಸಂದರ್ಭ, ಎರಡು ಧಾರ್ಮಿಕ ಪಂಥಗಳ ಮುಖಾಮುಖಿಯೇ ಆಗಿದೆ. ಇಲ್ಲಿ ಬೇಡರು ಮತ್ತು ಗೊಲ್ಲರ ನಡುವೆ ಕಸುಬುಗಳ ಕಾರಣಗಳಿಗಾಗಿ ಮತ್ತು ಭಿನ್ನ ಸಂಸ್ಕೃತಿಯ, ಎರಡು ಪ್ರಬಲ ಆದಿವಾಸಿ ನಿಲುವುಗಳ ಕಾರಣಗಳಿಗಾಗಿ ಪದೇ ಪದೇ ಸಂಘರ್ಷಗಳೇರ್ಪಟ್ಟಿವೆ. ಆದರೆ ಇಲ್ಲಿ ಒಬ್ಬ ರಾಜ ಮತ್ತು ವೆಂಕಟೇಶ್ವರನೆಂಬ ದೈವದ ಜೊತೆ ಜಗಳೂರಜ್ಜನಿಗೆ ತಾತ್ವಿಕವಾಗಿ ಅನೇಕ ಭಿನ್ನಾಭಿಪ್ರಾಯಗಳಿವೆ. ಈ ಕಾರಣಕ್ಕಾಗಿ ಜಗಳೂರಜ್ಜ ತನ್ನನ್ನು ಸಂಘರ್ಷಕ್ಕೆ ಒಡ್ಡಿಕೊಳ್ಳುತ್ತಾನೆ. ಕ್ಷತ್ರಿಯ ರಾಜ ಮತ್ತು ವೈಷ್ಣವ ದೇವತೆಯಾದ ತಿಮ್ಮಪ್ಪ (ವೆಂಕಟೇಶ್ವರ) ಒಟ್ಟಾಗಿ ಇಲ್ಲಿ ಜಗಳೂರಜ್ಜನನ್ನು ಕೊಲ್ಲುವುದು ಮಧ್ಯಕಾಲೀನ ಕರ್ನಾಟಕದಲ್ಲಿದ್ದ ಎರಡು ಭಿನ್ನ ವೈಚಾರಿಕ ಧಾರೆಗಳ ನಿರ್ಣಾಯಕ ಮುಖಾಮುಖಿಯಂತೆ ಭಾಸವಾಗುತ್ತದೆ. ಅದರಲ್ಲೂ ವೆಂಕಟೇಶ್ವರ ಸ್ತ್ರೀ ವೇಷದಿಂದ ಬಂದು ಹಿಂದಿನಿಂದ ಜಗಳೂರಜ್ಜನನ್ನು ಕೊಲ್ಲುವುದು ಶ್ರೀವೈಷ್ಣವ ಮತದ ಧಾರ್ಮಿಕ ಕಾರ್ಯಾಚರಣೆಯ ರೂಪಕದಂತಿದೆ.

ಅಲ್ಲದೇ ಈ ತಿರುಪತಿ ತಿಮ್ಮಪ್ಪ ಆದಿವಾಸಿ ಮತ್ತು ಕೆಳಜಾತಿ ಸಮುದಾಯಗಳಲ್ಲಿ ಬೇರೆ ಬೇರೆ ಹೆಸರುಗಳಲ್ಲಿ ಪೂಜಿಸಲ್ಪಡುತ್ತಿದ್ದಾನೆ. ಹಾಲಕ್ಕಿ ಒಕ್ಕಲಿಗರಲ್ಲಿ ಬ್ಯಾಟೆರಾಯ ಎಂದು, ಸೋಲಿಗರು ಮತ್ತು ಮೈಸೂರು ಕಡೆಯ ಮಾದಿಗರು ಬಿಳಿಗಿರಿರಂಗನೆಂದು, ಡೊಂಬರು, ಲಂಬಾಣಿಗರು, ಕೆಲವು ಕಡೆ ಬೇಡರು ರಂಗಪ್ಪನೆಂದು ಪೂಜಿಸಲ್ಪಡುತ್ತಿದ್ದಾನೆ. ಲಂಬಾಣಿಗರು ಮತ್ತು ಡೊಂಬರು ತಿಮ್ಮಪ್ಪನ ಹೆಂಡತಿಯರಾದ ಲಕ್ಕಮ್ಮ ತುಳಚಮ್ಮರ ಹೆಸರುಗಳನ್ನ, ತಮ್ಮ ಹೆಂಗಸರಿಗೆ ಇಡುವ ವಾಡಿಕೆ ಇದೆ. ಜೊತೆಗೆ ರಂಗಪ್ಪ, ತಿಮ್ಮಪ್ಪ ಎಂಬ ಹೆಸರುಗಳು

ವ್ಯಾಪಕವಾಗಿ ಈ ಸಮುದಾಯಗಳಲ್ಲಿವೆ. ಅಲ್ಲದೆ ಈ ಕೆಳಜಾತಿಗಳು ಈಗ ಒಕ್ಕಲುಗಳಾಗಿರುವ ತಿಮ್ಮಪ್ಪನ ದೇವಾಲಯಗಳೂ ಸಹ ಈಚಿನವು. ಹರಪನಹಳ್ಳಿಯ ಬಳಿ ಇರುವ ತಿಮ್ಮಲಾಪುರದ ತಿಮ್ಮಪ್ಪನ ದೇವಾಲಯ ೧೭, ೧೮ನೇ ಶತಮಾನದ ರಚನೆಯೇ ಆಗಿದೆ.

ಶ್ರೀವೈಷ್ಣವ ಮತವು ಮಧ್ಯಕಾಲೀನ ಅಧಿಕಾರಸ್ಥ ಕೇಂದ್ರಗಳ ಪ್ರೋತ್ಸಹವಿಲ್ಲದೆ ಇಷ್ಟು ಜನಪ್ರಿಯವಾಗಲು ಸಾಧ್ಯವಿರಲಿಲ್ಲ. ಶ್ರೀವೈಷ್ಣವ ಮತಕ್ಕೆ ರಾಜಪ್ರಭುತ್ವದ ಆಶ್ರಯ ಅನಿವಾರ್ಯವಾಗಿತ್ತು. ವಿಜಯನಗರ ಪತನಾನಂತರ ದಕ್ಷಿಣದಲ್ಲಿ ಪಾಳೇಗಾರರನ್ನ, ಮತ್ತು ಮೈಸೂರು ಅರಸರನ್ನ ಈ ದಾಸರು ಆಶ್ರಯಿಸುತ್ತಾರೆ. ಇದಕ್ಕೆ ಕಾರಣಗಳು ಸಹ ಸ್ಪಷ್ಟವಾಗಿದೆ. 'ವೀರಶೈವ ಮತ್ತು ಜೈನಧರ್ಮಗಳಿಂದ ಜರ್ಝರಿತವಾಗಿದ್ದ ವೈದಿಕ ಧರ್ಮಕ್ಕೆ ಜೀವ ತುಂಬುವುದು ದಾಸ ಪಂಥದ ನಿಜವಾದ ಒಳಗುರಿಯಾಗಿತ್ತು. ಏಕೆಂದರೆ ತಮ್ಮ ವೈದಿಕ ವಿರೋಧಿ ನಿಲುವುಗಳಿಂದ ಅಪಾರ ಜನ ಬೆಂಬಲದೊಂದಿಗೆ, ಮಹಾಶಕ್ತಿಯಾಗಿದ್ದ ವೀರಶೈವರಿಂದಲೂ ಕೆಲಮಟ್ಟಿಗೆ ಜೈನರಿಂದಲೂ (ಬ್ರಹ್ಮಶಿವ, ನಯಸೇನರು ಕೊಟ್ಟ ಹೊಡೆತಗಳನ್ನ ನೆನೆಯಬೇಕು.) ಮೂಲೆ ಹಿಡಿದಿದ್ದ ಅದು ಸ್ವರಕ್ಷಣೆಗೆ ಇಳಿಯಲೇಬೇಕಾಯಿತು. ಆಕಸ್ಮಿಕವಾಗಿ ಬಂದ ಕನಕನನ್ನ ಬಿಟ್ಟರೆ ಉಳಿದೆಲ್ಲ ಉಚ್ಚಜಾತಿಯವರಾಗಿದ್ದ ಈ ದಾಸರು ಕುಮತಗಳ ಜಯಿಸಿದ ಮಾಧ್ವನನ್ನ ಕೊಂಡಾಡುತ್ತ ಶೈವವನ್ನ, ಜೈನವನ್ನ ಉಳಿದ ಜನಪದ ಧರ್ಮಗಳನ್ನ ಜರೆಯುತ್ತಾರೆ.'[೬] ಹೀಗೆ ಸಾಮ್ರಾಜ್ಯಗಳ ಬೆಂಬಲದೊಡನೆ, ಸೋತ ಸಮುದಾಯಗಳ ಮಧ್ಯೆ ಈ ವೈದಿಕ ಭಕ್ತಿ ಪಂಥ ತನ್ನ ವಿಜಯ ಪತಾಕೆಯನ್ನ ನೆಟ್ಟಿತ್ತು. ಅಸಹಾಯಕ ಕೆಳಜಾತಿಗಳು ಮತ್ತು ಮುಖ್ಯವಾಗಿ ಆದಿವಾಸಿ ಸಮುದಾಯಗಳು ರಾಜಪ್ರಭುತ್ವ ಮತ್ತು ಧಾರ್ಮಿಕ ಪ್ರಭುತ್ವಗಳೆಂಬ ಎರಡಂಚಿನ ಖಡ್ಗಕ್ಕೆ, ಬೇರೆ ದಾರಿಯಿಲ್ಲವೆಂಬಂತೆ ಶರಣಾದವು. ಈ ಎರಡೂ ಪ್ರಭುತ್ವಗಳನ್ನ ಭೌತಿಕವಾಗಿ ಎದುರಿಸಲಾರದ ಈ ಸಮುದಾಯಗಳು, ತಮ್ಮ ಪ್ರತಿತಾತ್ವಿಕ ದರ್ಶನಗಳಲ್ಲಿ ತಮ್ಮ ಪ್ರತಿರೋಧಗಳನ್ನ ಅಭಿವ್ಯಕ್ತಿಗೊಳಿಸಿವೆ. ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳ ಮೇಲೆ ಹಿಡಿತ ಸಾಧಿಸಿದ ರಾಜ ಮತ್ತು ಧಾರ್ಮಿಕ ಪ್ರಭುತ್ವಗಳು ಏಕಸ್ವಾಮ್ಯವನ್ನ ಸ್ಫೋಟಿಸಬಲ್ಲ ದಾರ್ಶನಿಕನೊಬ್ಬ ಈ ಸಮುದಾಯಗಳಲ್ಲಿ ಸಾಂಕೇತಿಕವಾಗಿ ರೂಪುಗೊಳ್ಳುತ್ತಾನೆ. ಹಾಲಕ್ಕಿ ಒಕ್ಕಲಿಗರ ಬಲಿ, ನೀಲಗಾರರ ಮಂಟೇಸ್ವಾಮಿ, ಮಾದೇಶ್ವರ, ಜುಂಜಪ್ಪ, ಗೊಂಡರ ಜಟ್ಟಿಗ, ಮ್ಯಾಸಬೇಡರ ಜಗಳೂರಜ್ಜ, ಕುರುಬರ ಮಾಳಿಂಗರಾಯ, ಇವರೆಲ್ಲ ಆಯಾ ಸಮುದಾಯಗಳಲ್ಲಿ ಮೇಲಿನ ಪ್ರಭುತ್ವಗಳ ಏಕಸ್ವಾಮ್ಯವನ್ನ ಪ್ರತಿರೋಧಿಸುವ ವ್ಯಕ್ತಿತ್ವಗಳಾಗಿ ರೂಪಗೊಳ್ಳುತ್ತಾರೆ. ಇಂದೂ ಈ ಅನುಭಾವಿಗಳು ಆಯಾ ಸಮುದಾಯಗಳ ದೈವಗಳಾಗಿಯೂ ಪೂಜಿಸಲ್ಪಡುತ್ತಿದ್ದಾರೆ. ಈ ಅನುಭಾವಿಗಳು ಭಯಂಕರ ಯುದ್ಧಗಳನ್ನ ಮಾಡಿದವರಲ್ಲ. ಇವರದು ತಾತ್ವಿಕ ಹೋರಾಟ. ಸೋತ ಸಮುದಾಯಗಳಿಗೆ ವೈಚಾರಿಕ ದೃಢತೆಯನ್ನ ಈ ಅನುಭಾವಿಗಳು ತಂದು ಕೊಟ್ಟರು. ಅದೇ ಕಾರಣಕ್ಕಾಗಿ ಆದ ಇವರು ಆಯಾ ಸಮುದಾಯಗಳು ವೈಚಾರಿಕ ಆಕೃತಿಗಳೂ ಹೌದು. ಮಧ್ಯಕಾಲೀನ ಕರ್ನಾಟಕದಲ್ಲಿ ನಡೆದಿರುವ ದೈವಸಂಕರದ ಕುರಿತು ಇನ್ನೂ ಹೆಚ್ಚಿನ ಸಂಶೋಧನೆಯಾಗಬೇಕಿದೆ. ಏಕೆಂದರೆ ಮಧ್ಯಕಾಲೀನ ಕರ್ನಾಟಕದ ಶ್ರೀ ವೈಷ್ಣವ ಮತ ಪ್ರಚಾರದ ದಾಳಿ, ಈ ಬಗೆಯ ದೈವಗಳನ್ನು ಅನಾಮತ್ತಾಗಿ ವೈಷ್ಣವೀಕರಣಕ್ಕೆ ರೂಪಾಂತರಿಸಿದೆ. ಏಕೆಂದರೆ ಬ್ರಾಹ್ಮಣರ ವೆಂಕಟೇಶ್ವರನ ಮೂಲರೂಪಗಳಂತಿರುವ ಈ

ಆದಿವಾಸಿ ಮತ್ತು ಕೆಳಜಾತಿಗಳ ವಿವಿಧ ದೇವತೆಗಳ ಮೂಲಕ ಈ ವೆಂಕಟೇಶ್ವರನ ಕಲ್ಪನೆಯನ್ನ ಗುರುತಿಸ ಬಹುದಾಗಿದೆ. ಇದಕ್ಕೆ ಕೇವಲ ಮೂರ್ತಿಶಾಸ್ತ್ರ ಮುಂತಾದ ರೂಢಿಗತ ಶಾಸ್ತ್ರಗಳು ಮಾತ್ರ ಪ್ರಮಾಣಗಳನ್ನ ಒದಗಿಸಲಾರವು. ಆದಿವಾಸಿ ಮತ್ತು ಕೆಳಜಾತಿಗಳ ಮೌಖಿಕ ಸಾಹಿತ್ಯ ಮತ್ತು ಆಚರಣೆಯ ವಿಧಿವಿಧಾನಗಳ ಮೂಲಕ ಶ್ರೀವೈಷ್ಣವ ಪಂಥದ ಕುರಿತು ಕೆಲವು ಸ್ಪಷ್ಟ ನಿಲುವುಗಳಿಗೆ ಬರಬಹುದೆಂದು ಕಾಣುತ್ತದೆ.

ಆದರೆ ಶ್ರೀವೈಷ್ಣವ ಪಂಥವು ಡೊಂಬರಂತಹ ಸಮುದಾಯಗಳನ್ನು ತನ್ನದೇ ಆದ ಧಾರ್ಮಿಕ ಆವರಣದೊಳಕ್ಕೆ ಎಳೆತಂದು ನಿಲ್ಲಿಸಿದೆ. ಜೊತೆಗೆ ಕೆಳಜಾತಿಗಳ ದೇವತೆಗಳನ್ನು ವೈದಿಕ ಧಾರೆಯೊಳಕ್ಕೆ ಸಂಕರಗೊಳಿಸಿಕೊಂಡಿದೆ. ಶ್ರೀವೈಷ್ಣವ ಪಂಥದ ಧಾರ್ಮಿಕ ರಾಜಕಾರಣವು ಈ ಸಂಕರತೆಯ ಹಿಂದಿನ ಮಹತ್ವದ ಪ್ರೇರಕ ಶಕ್ತಿಯಾಗಿ ಕೆಲಸ ಮಾಡಿದೆ. ಇಲ್ಲದಿದ್ದಲ್ಲಿ ವೀರಶೈವ, ಜೈನ ಮತ್ತು ಆಗತಾನೇ ಕುಡಿಯೊಡೆಯುತ್ತಿದ್ದ ಕ್ರೈಸ್ತ ಧರ್ಮಗಳ ಪ್ರಭಾವದಲ್ಲಿ ವೈದಿಕವು ಕೊಚ್ಚಿಹೋಗುವ ಸಂಭವಗಳೇ ಹೆಚ್ಚಿದ್ದವು. ಶೀವೈಷ್ಣವವು ಈ ಕಾಲಘಟ್ಟದಲ್ಲಿ 'ತಾತ್ವಿಕವಾಗಿ' ತನ್ನನ್ನು ಬದಲಿಸಿಕೊಳ್ಳುವ ಮತ್ತು ಈ ನಾಡಿನ ಬಹುಸಂಖ್ಯಾತ ದುಡಿವ ವರ್ಗಗಳ ವೈಚಾರಿಕ ಧಾರೆಗಳ ಜೊತೆ ಕೊಡುಕೊಳುವಿಕೆಯನ್ನು ಸಾಧ್ಯವಾಗಿಸುವ ಪ್ರಯತ್ನಗಳಿಗೆ ಕೈಹಾಕಿತು. ಜೊತೆಗೆ ಕರ್ನಾಟಕದ ಅನೇಕ ಜಾತಿಗಳು ಈ ಪಂಥದ ಅನುಯಾಯಿಗಳಾದವು. ಶ್ರೀವೈಷ್ಣವವು ತನ್ನ ಒಕ್ಕಲುಗಳಿಗೆ ಕೆಲವು ಧಾರ್ಮಿಕ ಚಹರೆಗಳನ್ನು ನೀಡಿ 'ಒಕ್ಕಲುತನದ' ಅಧಿಕೃತತೆಯನ್ನು ಸ್ಥಾಪಿಸಿದ್ದಲ್ಲದೆ, ಕಾಲದಿಂದ ಕಾಲಕ್ಕೆ ಈ ಅಧಿಕೃತತೆಯನ್ನು ನಿರಂತರಗೊಳಿಸಲು ತನ್ನ ಒಕ್ಕಲುಗಳ ಜೊತೆ ಒಡನಾಡುವುದು ಅನಿವಾರ್ಯವೂ ಆಗಿತ್ತು. ಆದರೆ ಯಾವುದೇ ಸಮಾಜದ ರಕ್ತ ಮತ್ತು ಬೆವರುಗಳಿಂದ ರೂಪುಗೊಳ್ಳದ ವೈಚಾರಿಕತೆಯಾಗಲಿ, ಧಾರ್ಮಿಕತೆಯಾಗಲಿ ಆ ಸಮಾಜದ ಅಂತಸ್ಥ ಜಗತ್ತಿನಲ್ಲಿ ಶಾಶ್ವತವಾಗಿ ನಿಲ್ಲಲಾರದು ಎಂಬುದಕ್ಕೆ ಶ್ರೀ ವೈಷ್ಣವವೇ ಸಾಕ್ಷಿ. ಶ್ರೀವೈಷ್ಣವ ಮತವನ್ನು ಅನುಸರಿಸಿದ ಯಾವ ಸಮುದಾಯಗಳು ತಮ್ಮ ಆದಿಮ ಆಧ್ಯಾತ್ಮಿಕ ಸ್ಮೃತಿಗಳನ್ನು ಕಳೆದುಕೊಳ್ಳಲಿಲ್ಲ. ಈ ಸಮುದಾಯಗಳು ತಮ್ಮ ಪಾರಂಪರಿಕ ಜೀವನ ವಿಧಾನಗಳ ಜೊತೆಯೇ ರೂಪುಗೊಂಡ ತಮ್ಮ ದೇವತೆಗಳನ್ನು ಮತ್ತು ಆಧ್ಯಾತ್ಮಿಕ ಜಗತ್ತನ್ನು ಯಾವತ್ತೂ ಜೀವಂತವಾಗಿಟ್ಟುಕೊಂಡು ಬಂದವು. ಇದಕ್ಕೆ ಡೊಂಬರ ಸಮುದಾಯದ ಆದಿಮ ಆರಾಧನಾ ಪದ್ಧತಿಗಳನ್ನೇ ಉದಾಹರಿಸಬಹುದು. ಶ್ರೀವೈಷ್ಣವ ಮತದ ಅನುಯಾಯಿಗಳಾಗಿ ಜೊತೆಗೆ ಶ್ರೀವೈಷ್ಣವ ಮತದ ಗುರುಪರಂಪರೆಗೆ ಒಕ್ಕಲುಗಳಾಗಿದ್ದರೂ ಡೊಂಬರು ತಮ್ಮ ಆದಿಮ ದೇವ ದೇವಿಯರನ್ನು ಮತ್ತು ಆರಾಧನಾ ಪದ್ಧತಿಗಳನ್ನು ಬಿಟ್ಟು ಕೊಡದೆ ಅನೂಚಾನವಾಗಿ ನಡೆಸಿಕೊಡು ಬಂದಿದ್ದಾರೆ.

ಮುಂದಿನ ಪುಟಗಳಲ್ಲಿ ಡೊಂಬರ ದೇವತೆಗಳನ್ನು ಮತ್ತು ಡೊಂಬರ ಆರಾಧನಾ ಪದ್ಧತಿಗಳನ್ನು ವಿವರಿಸಲು ಪ್ರಯತ್ನಿಸಲಾಗಿದೆ. ಮೊದಲಿಗೆ ಕರ್ನಾಟಕದಲ್ಲಿ ಡೊಂಬರನ್ನು ಅಧ್ಯಯನ ಮಾಡಿದ ನಂಜುಂಡಯ್ಯನವರು ಹಳೆಮೈಸೂರು ಭಾಗದ ಡೊಂಬರ ದೈವಗಳನ್ನು ಮತ್ತು ಆಚರಣೆಗಳನ್ನು ಹೀಗೆ ವಿವರಿಸುತ್ತಾರೆ.

ನೆಲೆನಿಂತ ಮತ್ತು ಅಲೆಮಾರಿ ಡೊಂಬರಿಬ್ಬರೂ ಮಾಟ, ಮಂತ್ರ, ಯಕ್ಷಿಣಿ ಮುಂತಾದ ತಾಂತ್ರಿಕ ವಿದ್ಯೆಗಳಲ್ಲಿ ತುಂಬಾ ನಂಬಿಕೆ. ಇವರು ಯಾವುದೇ ಶುಭಕಾರ್ಯವನ್ನು ಹಮ್ಮಿಕೊಂಡರೂ ಮೊದಲು ಭವಿಷ್ಯ ಹೇಳುವವನನ್ನು ಸಂಪರ್ಕಿಸುತ್ತಾರೆ. ಇಲ್ಲವೆ ತಮ್ಮ ಕುಲದೇವತೆಯ ಬಳಿ ಹೋಗಿ ಹೂವನ್ನು ಕೇಳುತ್ತಾರೆ.

ಇವರ ಕುಲದೇವತೆ ಗುರುಮೂರ್ತಿ ಮತ್ತು ಕುಲದೇವತೆ ಯಲ್ಲಮ್ಮ. ಎಲ್ಲಾ ಅಲೆಮಾರಿ ಸಮುದಾಯಗಳಂತೆ ಡೊಂಬರೂ ಸಹ ಮಾರಮ್ಮ, ಸುಂಕಲಮ್ಮ ಮುಂತಾದ ಕ್ಷುದ್ರ ದೇವತೆಗಳನ್ನು ಪೂಜಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಡೊಂಬರು ಶ್ರೀವೈಷ್ಣವ ಮತದಿಂದ ತುಂಬಾ ಪ್ರಭಾವಕ್ಕೊಳಗಾಗಿದ್ದಾರೆ. ಇದರ ಕುರುಹಾಗಿ ತಮ್ಮ ತೋಳಿನ ಮೇಲೆ ಶಂಖ ಚಕ್ರಗಳ ಮುದ್ರೆ ಹಾಕಿಸಿಕೊಳ್ಳುತ್ತಾರೆ. ಈ ಮುದ್ರೆ ಹಾಕಿಸುವ ಆಚರಣೆಯು ಉತ್ತರ ಆರ್ಕಾಟ ಜಿಲ್ಲೆಯ ತಿರುಪತಿಯಲ್ಲಿನ ವೆಂಕಟರಮಣ ದೇವಲಯದಲ್ಲಿ ನಡೆಯುತ್ತದೆ. ಡೊಂಬರು ಹೆಚ್ಚಿನ ಸಂಖ್ಯೆಯಲ್ಲಿ ಒಂದೇ ಕಡೆ ನೆಲೆನಿಂತಲ್ಲಿ ಅವರು ಯಲ್ಲಮ್ಮನ ಗುಡಿಯನ್ನು ಕಟ್ಟುತ್ತಾರೆ ಮತ್ತು ಯಲ್ಲಮ್ಮನನ್ನು ಆದಿಶಕ್ತಿಯ ಹೆಸರಲ್ಲಿ ಪೂಜಿಸುತ್ತಾರೆ. ಪೂಜೆಯಲ್ಲಿ ಏನಾದರೂ ತಪ್ಪುಗಳು ಸಂಭವಿಸಿದಲ್ಲಿ ದೇವತೆ ತಮಗೆ ಕೆಟ್ಟದ್ದನ್ನು ಮಾಡಿಬಿಡಬಹುದೆಂದು ಭಯಗೊಳ್ಳುತ್ತಾರೆ. ಈ ಸಮುದಾಯದ ಯಜಮಾನನೇ ದೇವರ ಪೂಜಾರಿಯಾಗಿರುತ್ತಾನೆ. ಈತ ಪ್ರತಿ ಮಂಗಳವಾರ ತೆಂಗಿನಕಾಯಿ, ಬಾಳೇ ಹಣ್ಣು ಮತ್ತು ಅನ್ನವನ್ನು ಸಂತರ್ಪಣೆ ಮಾಡುವುದರ ಮೂಲಕ ದೇವರನ್ನು ಪೂಜಿಸುತ್ತಾನೆ. ಪ್ರತಿ ವರ್ಷದ ಮೊದಲ ಹುಣ್ಣಿಮೆಯ ದಿನ ಯಲ್ಲಮ್ಮ ದೇವತೆಯ ಗುಡಿಯ ಮುಂದೆ ಪ್ರಾಣಿ ಬಲಿಯನ್ನು ಕೊಡಲಾಗುತ್ತದೆ.

ನೆಲೆನಿಂತ ಡೊಂಬರು ಕಾಲಬದ್ಧವಾಗಿ ಯಲ್ಲಮ್ಮನ ಹೆಸರಲ್ಲಿ ಸಾಮೂಹಿಕ ಭೋಜನ ಏರ್ಪಡಿಸುವುದುಂಟು. ಆಗ ಎಲ್ಲರೂ ಒಂದು ನಿಶ್ಚಿತ ಸ್ಥಳದಲ್ಲಿ ಸೇರುತ್ತಾರೆ. ಇದು ಹೆಚ್ಚಾಗಿ ತುಮಕೂರಿನಲ್ಲಿ ನಡೆಯುತ್ತದೆ. ಆದರೆ ಅಲೆಮಾರಿಗಳು ಹೀಗೆ ಕಾಲಬದ್ಧವಾಗಿ ಸೇರಲಾಗುವುದಿಲ್ಲ. ಆದರೆ ಯಾವುದಾದರು ಒಂದು ಸ್ಥಳದಲ್ಲಿ ಅಕಸ್ಮಾತ್ ಮೂರ್ನಾಲ್ಕು ಅಲೆಮಾರಿ ಕುಟುಂಬಗಳು ಸೇರಿದರೆ, ಒಂದು ಮಂಗಳವಾರ ಯಲ್ಲಮ್ಮನ ಪೂಜೆಯನ್ನು ಮಾಡಲಾಗುತ್ತದೆ. ಒಂದೆಡೆ ನೆಲವನ್ನು ಸ್ವಚ್ಛ ಮಾಡಿ, ದನದ ಸೆಗಣಿಯಿಂದ ನೆಲವನ್ನು ಸಾರಿಸಿ ಏಳು ಮಡಿಕೆಯಲ್ಲಿ ಭತ್ತವನ್ನು ತುಂಬಿ ಸಾರಿಸಿದ ನೆಲದ ಮೇಲೆ ಇಡಲಾಗುತ್ತದೆ. ಮಧ್ಯೆ ಇರುವ ಮಡಿಕೆಯನ್ನು ದೇವತೆ ಬಂದು ಭಾವಿಸಲಾಗುತ್ತದೆ. ಈ ಮಡಿಕೆಯಲ್ಲಿ ಬೇವಿನ ಸೊಪ್ಪನ್ನು ಸಿಕ್ಕಿಸಿರುತ್ತಾರೆ. ಅರಿಷಿಣ ಮತ್ತು ಕುಂಕುಮದಿಂದ ತೊಯಿಸಿದ ದಾರವನ್ನು ಮಡಿಕೆಗಳಿಗೆ ಸುತ್ತಲಾಗುತ್ತದೆ. ಜೊತೆಗೆ ಅರಿಷಿಣ-ಕುಂಕುಮವನ್ನು ಧಾಳಾಗಿ ಬಳಿಯಲಾಗಿರುತ್ತದೆ. ಪೂಜೆಯ ದಿನ ಎಲ್ಲರೂ ಸ್ನಾನ ಮಾಡಿ ಸ್ವಚ್ಛ ಬಟ್ಟೆಯನ್ನು ಧರಿಸಿರುತ್ತಾರೆ. ಯಜಮಾನ ಪೂಜೆಯ ಹಿಂದಿನ ದಿನದ ಸಂಜೆಯಿಂದಲೇ ಉಪವಾಸ ಆರಂಭಿಸುತ್ತಾನೆ. ಆತನೂ ಪೂಜೆಯ ದಿನ ಸ್ನಾನ ಮಾಡಿ ತೊಳೆದ ಬಟ್ಟೆಯನ್ನು ಧರಿಸಿರುತ್ತಾನೆ. ಈತ ಶ್ರದ್ಧಾಭಕ್ತಿಯಿಂದ ಮಡಿಕೆಗಳನ್ನು ಪೂಜಿಸುವಾಗ ಸಮುದಾಯದ ಎಲ್ಲ ಜನ ಸುತ್ತಲೂ ಕೈಮುಗಿದುಕೊಂಡು ಕುಳಿತಿರುತ್ತಾರೆ. ತೆಂಗಿನಕಾಯಿ ಮತ್ತು ಹೂವುಗಳಿಂದ ಪೂಜೆ ನಡೆಯುತ್ತದೆ. ಸಾಂಬ್ರಾಣಿಯನ್ನು ಹೆಚ್ಚಾಗಿ ಉರಿಸಲಾಗುತ್ತದೆ. ನಂತರ ಪೂಜಾರಿಯು ದೇವಿಯ ತೀರ್ಥ ಚಿಮುಕಿಸುತ್ತ ಅನೇಕ ಕುರಿ ಮತ್ತು ಮೇಕೆಗಳನ್ನು ದೇವತೆಗೆ ಬಲಿ ಕೊಡುತ್ತಾನೆ. ಮಾದಿಗರ ಅಸಾದಿಯೊಬ್ಬನನ್ನು ಈ ಉತ್ಸವಕ್ಕೆ ಆಹ್ವಾನಿಸಲಾಗುತ್ತದೆ. ಆತ ಯಲ್ಲಮ್ಮನನ್ನು ಗುಣಗಾನ ಮಾಡುವ ಹಾಡುಗಳನ್ನು ಹಾಡುತ್ತಾನೆ. ಏಳು ಮಡಿಕೆಗಳಲ್ಲಿ ಮಧ್ಯದ ಮಡಿಕೆಯೊಂದನ್ನು ಬಿಟ್ಟು ಉಳಿದ ಮಡಿಕೆಗಳಲ್ಲಿಯ ಭತ್ತವನ್ನು

ಸಮುದಾಯದ ಎಲ್ಲರಿಗೂ ಹಂಚಲಾಗುತ್ತದೆ. ಅಷ್ಟು ಹೊತ್ತಿಗೆ ನೆರೆದ ಭಕ್ತರೆಲ್ಲ ಭರ್ತಿಯಾಗಿ ಕುಡಿದಿರುತ್ತಾರೆ. ಇಡೀ ರಾತ್ರಿ ಕುಡಿತ ಅವ್ಯಾಹತವಾಗಿ ನಡೆಯುತ್ತದೆ. ಮರುದಿನ ಬೆಳಿಗ್ಗೆ ಎಲ್ಲ ಮಡಿಕೆಗಳಿಗೆ ಮಂಗಳಾರತಿ ಮಾಡಲಾಗುತ್ತದೆ. ಸಾರಾಯಿಯನ್ನು ತೀರ್ಥವಾಗಿ ಎಲ್ಲರಿಗೂ ಹಂಚಲಾಗುತ್ತದೆ. ಇದರ ಜೊತೆಗೆ ಸಾಮೂಹಿಕ ಭೋಜನವೂ ನಡೆಯುತ್ತದೆ.

ಸುಂಕಲಮ್ಮನನ್ನು ಪೂಜಿಸುವಾಗ, ಮಂಗಳವಾರದಂದು ಒಂದು ಮಣ್ಣಿನ ಕುಡಿಕೆಯಲ್ಲಿ ನೀರು ಹಾಕಿ ಒಂದು ಗಿಡದ ಕೆಳಗೆ ಬಾಳೆ ಎಲೆಯ ಮೇಲೆ ಕುಡಿಕೆಯನ್ನು ಇಡಲಾಗುತ್ತದೆ. ದೇವರಿಗೆ ಅನ್ನ, ಮೊಸರು ಮತ್ತು ಈರುಳ್ಳಿಯನ್ನು ಅರ್ಪಿಸಲಾಗುತ್ತದೆ. ಅರಿಷಿಣ ಮತ್ತು ಕುಂಕುಮವನ್ನು ಕುಡಿಕೆಗೆ ಹಚ್ಚಲಾಗುತ್ತದೆ. ಈ ಸಂದರ್ಭದಲ್ಲಿ ಯಾವುದೋ ಪ್ರಾಣಿಯನ್ನು ಬಲಿಕೊಡುವುದಿಲ್ಲ.

ಡೊಂಬರು, ಮುನೀಶ್ವರ, ಗುರುಮೂರ್ತಿ, ಮಾರೆಮ್ಮ, ಕೊರಟಿಗೆ ದೇವಮ್ಮ ಮುಂತಾದ ಹಲವು ದೇವರುಗಳನ್ನು ಪೂಜಿಸುತ್ತಾರೆ. ಇವರ ಇನ್ನೊಂದು ವಿಶೇಷ ದೇವತೆಯೆಂದರೆ 'ಕಾಲುವಳಿಯಮ್ಮ'. ಇವಳು ರೋಗವನ್ನು ತಡೆಯುವ ದೇವತೆಯೆಂದು ಭಾವಿಸಲಾಗಿದೆ. ಈ ದೇವತೆ ಅಲೆಮಾರಿಗಳ ಜೊತೆ ಸದಾ ಇದ್ದು, ಮರಳಿ ಮನೆಗೆ ಬರುವವರೆಗೂ ಅವರನ್ನು ಕಾಪಾಡುತ್ತಾಳೆ ಎಂದು ಭಾವಿಸಲಾಗುತ್ತದೆ. ಅಲೆಮಾರಿಗಳು ತಮ್ಮ ನೆಲೆಗಳಿಗೆ ಹಿಂದಿರುಗಿದಾಗ, ಈ ದೇವತೆಯನ್ನು ಒಲಿಸಿಕೊಳ್ಳಲು ಪೂಜೆ ಮಾಡುತ್ತಾರೆ. ಒಂದು ಗಿಡದ ಕೆಳಗೆ ಮೂರು ಕಲ್ಲುಗಳನ್ನು ಇಟ್ಟು ಆ ಕಲ್ಲು ದೇವರುಗಳಿಗೆ ಹುಂಜ ಅಥವಾ ಕುರಿಗಳನ್ನು ಬಲಿಕೊಡುತ್ತಾರೆ. ಬಲಿಕೊಡಲಾದ ಪ್ರಾಣಿಗಳನ್ನು ಬೇಯಿಸಿ, ಆ ಅಡುಗೆಯನ್ನು ಪೂಜೆಗೆ ಬಂದ ಎಲ್ಲರಿಗೂ ಬಡಿಸಲಾಗುತ್ತದೆ.'[೭]

ಹೈದರಾಬಾದ್ ಕರ್ನಾಟಕ ಭಾಗದ ಡೊಂಬರ ದೈವಗಳನ್ನು ಸಿರಾಜ್ ಉಲ್ ಹಸನ್ ಹೀಗೆ ವಿವರಿಸುತ್ತಾರೆ. 'ಗುಡಮ್ಮೆಸಮ್ಮ' ಇವರ ಆರಾಧ್ಯ ದೈವ. ಶ್ರಾವಣದ (ಆಗಸ್ಟ್-ಸೆಪ್ಟೆಂಬರ್) ಒಂದು ಮಂಗಳವಾರ ರಾತ್ರಿ ಈ ದೇವತೆಯನ್ನು ಆರಾಧಿಸುವ ಆಚರಣೆ ನಡೆಯುತ್ತದೆ. ದೊಡ್ಡ ಸಂಖ್ಯೆಯಲ್ಲಿ ನೆರೆದ ಡೊಂಬರು ಅಂದು ದೇವತೆಗೆ ಹಂದಿ, ಕುರಿ, ಕೋಳಿಗಳನ್ನು ಬಲಿ ಕೊಡುತ್ತಾರೆ. ದೊಡ್ಡದಾಗಿ ನಡೆಯುವ ಪೂಜಾ ಸಮಾರಂಭಕ್ಕೆ ಕಮ್ಮಾರ ಜಾತಿಯ ವ್ಯಕ್ತಿಯನ್ನು ಪೂಜಾರಿಯನ್ನಾಗಿ ನೇಮಿಸಲಾಗುತ್ತದೆ. ಹಲಗೆ ಬಾರಿಸುತ್ತಾ, ಹಾಡುತ್ತಾ ಕುಣಿಯುತ್ತಾ ಹಬ್ಬವನ್ನು ಆಚರಿಸಲಾಗುತ್ತದೆ. ಹಬ್ಬದಂದು ಬಲಿಕೊಟ್ಟ ಪ್ರಾಣಿಗಳ ತಲೆಗಳನ್ನು ಪೂಜಾರಿಯು ತೆಗೆದುಕೊಂಡು ಹೋಗುತ್ತಾನೆ. ಅಂದು ಬಲಿಕೊಟ್ಟ ಪ್ರಾಣಿಗಳ ಮಾಂಸವನ್ನು ಬೇಯಿಸಿ ಅಡುಗೆ ಮಾಡಿ ಸಾಮೂಹಿಕವಾಗಿ ಊಟ ಮಾಡಲಾಗುತ್ತದೆ. ಎಲ್ಲಮ್ಮ ಮತ್ತು ಪೊಚಮ್ಮ ಎಂಬ ದೇವತೆಗಳನ್ನು ಸಹ ಡೊಂಬರು ಇದೇ ಶ್ರಾವಣ ಮಾಸದಲ್ಲಿ ಪೂಜಿಸುತ್ತಾರೆ. ಇವರು ಪೂಜಿಸುವ ಇತರ ದೇವರುಗಳೆಂದರೆ, ಕಾಟಯ್ಯ, ಮಹೇಶ್ವರ, ಮುತ್ಯಾಲಮ್ಮ ಮತ್ತು ಕನಕಮ್ಮ. ಇವರಿಗೆ ಭೂತ, ಮಾಟ, ಮಂತ್ರ ಮುಂತಾದವುಗಳ ಕುರಿತು ನಂಬಿಕೆಗಳಿವೆ. ಇತ್ತೀಚಿಗೆ ಡೊಂಬರು ಮುಖ್ಯವಾಹಿನಿಯ ಮತಧರ್ಮಗಳಿಂದ ಪ್ರಭಾವಿತರಾಗಿದ್ದಾರೆ. ಇವರು ಇತ್ತೀಚೆಗೆ ತಮ್ಮನ್ನು ವಿಭೂತಿಧಾರಿಗಳು ಅಥವಾ ಶೈವರು ಎಂದು ಹೇಳಿಕೊಳ್ಳುತ್ತಾರೆ.'[೮]

ಭಾರತದ ವಿವಿಧ ರಾಜ್ಯಗಳಲ್ಲಿನ ಡೊಂಬರನ್ನು ತೌಲನಿಕವಾಗಿ ಅಧ್ಯಯನ ಮಾಡಿರುವ ಸ್ಟೀಫನ್

ಫೋಕ್ಸ್ ಅವರು ಡೊಂಬರ ವಿವಿಧ ಪ್ರದೇಶಗಳಲ್ಲಿ ವೈವಿಧ್ಯತೆಗಳನ್ನು ಈ ಕೆಳಗಿನಂತೆ ವಿವರಿಸುತ್ತಾರೆ.

'ಇವರು ಯಾವಾಗ ಹಿಂದೂ ಸಮಾಜದ ಮುಖ್ಯವಾಹಿನಿಗೆ ಹತ್ತಿರವಾದರೋ ಆಗ ಸಾಮಾಜಿಕವಾಗಿ ಅತ್ಯಂತ ಹೀನಾಯ ಸ್ಥಿತಿಗೆ ಮತ್ತು ಅಸ್ಪೃಶ್ಯತೆಯ ಕರಾಳ ಜಗತ್ತಿಗೆ ದೂಡಲ್ಪಟ್ಟರು. ಇಂದು ಅವರು ಹಾಗೆಯೇ ಇದ್ದಾರೆ. ಒಬ್ಬ ಜಾಡಮಾಲಿಯು ನಿರ್ವಹಿಸದ ಸಮಾಜದ ಅತ್ಯಂತ ನಿಕೃಷ್ಟ ಕೆಲಸಗಳನ್ನು ಡೊಮರು ಮಾಡಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಯಿತು. ಇವರು ಈ ಹಿಂದೂ ಸಮಾಜದ ಅಂತ್ಯಜರಾಗಿರದಿದ್ದರೂ ಸಹ ಈ ಶ್ರೇಣೀಕರಣವು ಅವರನ್ನು ಅಂತ್ಯಜರ ಸಮೀಪಕ್ಕೆ ತಂದು ನಿಲ್ಲಿಸಿತು.

ಇವರು ತಮ್ಮದೇ ಸ್ಥಳೀಯ ದೈವಗಳನ್ನು ಪೂಜಿಸುತ್ತಾರೆ. ಇವರ ಮುಖ್ಯ ದೇವತೆ ಕಲುಗ. ಈ ದೇವರನ್ನು ತಾಮ್ರದ ನಾಣ್ಯದ ರೂಪದಲ್ಲಿಟ್ಟು ಇವರು ಪೂಜಿಸುತ್ತಾರೆ. ಈ ತಾಮ್ರದ ನಾಣ್ಯವನ್ನು ಆಯಾ ಗ್ರಾಮದಲ್ಲಿನ ಸಮುದಾಯದ ಮುಖಂಡನ ಮನೆಯಲ್ಲಿ ಒಂದು ಮಣ್ಣಿನ ಮಡಿಕೆಯಲ್ಲಿ ಅಕ್ಕಿ ಮತ್ತು ಕುಂಕುಮಗಳಿಂದ ಅಲಂಕರಿಸಿಡಲಾಗಿರುತ್ತದೆ. ಇವರು ಕೆಲವು ಶಕ್ತಿಗಳನ್ನು ಪೂಜಿಸುತ್ತಾರೆ. ಇವು ಭೂತಗಳು. ಈ ಭೂತಗಳನ್ನು ಒಲಿಸಿಕೊಂಡರೆ ಅವು ಇವರನ್ನು ಕಾಪಾಡುತ್ತವೆ ಎಂದು ನಂಬಲಾಗಿದೆ.

ಆಂಧ್ರಪ್ರದೇಶದಲ್ಲಿ ಡೊಂಬರಿಗೆ ಯೋಗ್ಯ ಸಾಮಾಜಿಕ ಸ್ಥಾನಮಾನಗಳೇನಿಲ್ಲ. ಇವರನ್ನು ಕಳ್ಳರು ಮತ್ತು ಕುಡಕರೆಂದೇ ಭಾವಿಸಲಾಗಿದೆ. ಇವರು ದನಗಳನ್ನು ಕದಿಯುವಲ್ಲಿ ನಿಸ್ಸೀಮರೆಂದು ಪರಿಗಣಿಸಲ್ಪಟ್ಟಿದ್ದಾರೆ. ಲೈಂಗಿಕ ವಿಷಯದಲ್ಲೂ ಸಹ ಡೊಂಬರು ಮುಕ್ತ ಮನಃಸ್ಥಿತಿಯವರಾಗಿದ್ದಾರೆ.

ಉತ್ತರ ಭಾರತದ ಡೊಮರಿಗೆ ಹೋಲಿಸಿದರೆ, ದಕ್ಷಿಣದಲ್ಲಿರುವ ಡೊಂಬರು ಕಪ್ಪನೆಯ ಮತ್ತು ಒರಟು ಮುಖ ಚಹರೆಯವರಾಗಿದ್ದಾರೆ. ಕಾರಣ ಸ್ಥಳೀಯ ಜನಾಂಗಿಕ ಸಂಕರದಿಂದ ಅವರಿಗೆ ಈ ಚಹರೆ ಪ್ರಾಪ್ತವಾಗಿದೆ. ಇದೇ ರೀತಿ ಢಾಕಾದಲ್ಲಿನ ಡೊಮರು ಗಂಗಾ ಬಯಲಿನಿಂದ ತುಂಬಾ ಹಿಂದೆಯೇ ವಲಸೆ ಹೋಗಿದ್ದರೂ ಸಹ ಬಿಹಾರದ ಡೊಮರಿಗಿಂತ ಭಿನ್ನವಾದ ಚಹರೆಗಳನ್ನು ಹೊಂದಿದ್ದಾರೆ. ಆದರೆ ಪೂರ್ವ ಬಂಗಾಳದ ಜನರ ಸಾಮಾನ್ಯ ಲಕ್ಷಣಗಳನ್ನು ಇವರು ಪಡೆದುಕೊಂಡಿದ್ದಾರೆ.

ಡೊಮರು ಅತ್ಯಂತ ಜಟಿಲ ಸಾಮಾಜಿಕ ಸಂರಚನೆಯನ್ನು ಹೊಂದಿದ್ದಾರೆ. ಅಲ್ಲದೆ ಇವರು ಒಳ ರಕ್ತಸಂಬಂಧಗಳಿಂದ ಹಲವು ಉಪಪಂಗಡಗಳಾಗಿ ಮತ್ತು ಹೊರ ರಕ್ತಸಂಬಂಧಗಳಿಂದ ಹಲವು ಕುಲಗಳಾಗಿ ಒಡೆದು ಹೋಗಿದ್ದಾರೆ. ಈ ದೇಶದಲ್ಲಿ ಇವರು ದೂರ ದೂರ ಪ್ರದೇಶದಲ್ಲಿ ಚದುರಿ ಹೋಗಿರುವ ಕಾರಣಕ್ಕಾಗಿ ಇವರ ಸಾಮಾಜಿಕ ಸಂರಚನೆಯೂ ಸಹ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿಯೇ ರೂಪುಗೊಂಡಿದೆ. ಬಿಹಾರದಲ್ಲಿ ಇವರು ಗಡಿಭಾಗದಲ್ಲಿ ಹೆಸರಿಗೆ ಮಾತ್ರ ಹೊರ ರಕ್ತ ಸಂಬಂಧವಿರುವ ಗುಂಪಾದರೆ, ಬಂಕುರದಲ್ಲಿ ಬುಡಕಟ್ಟು ಸಮುದಾಯವಾಗಿದೆ. ಮಧ್ಯ ಬಂಗಾಳದಲ್ಲಿ ಇವರು ಬ್ರಾಹ್ಮಣ ಗೋತ್ರಗಳನ್ನು ಅಳವಡಿಸಿಕೊಂಡರೆ, ಪೂರ್ವ ಪ್ರಾಂತ್ಯದಲ್ಲಿ ಸ್ಥಳೀಯ ವಂಶಪಾರಂಪರ್ಯ ಪದ್ಧತಿಯನ್ನು ಈ ಸಮುದಾಯ ಅಳವಡಿಸಿಕೊಂಡಿದೆ. ಮದುವೆಗಳು ಕೆಲವು ವಿಧಿ ನಿಷೇಧಗಳೊಂದಿಗೆ ಒಂದೇ ವಂಶದ ಐದನೇ ತಲೆಮಾರಿನವರೆಗೂ ಜಾರಿಯಲ್ಲಿರುತ್ತವೆ. ಇವರ ಧರ್ಮವು, ಹಿಂದೂ ಧರ್ಮದ ಬೇರೆ ಬೇರೆ ಪಂಥಗಳಿಂದ ಮತ್ತು ಸ್ಥಳೀಯ ಪ್ರಬಲ ಆಧ್ಯಾತ್ಮಿಕ ಧಾರೆಗಳಿಂದ ಮತ್ತು ಸರ್ವಚೇತನವಾದಿ ಮತಗಳಿಂದ 'ಅಸಂಗತವಾಗಿ

'ಸಂಕರಗೊಂಡುಬಿಟ್ಟಿದೆ'" ಎನ್ನುತ್ತಾರೆ.

ಆಧುನಿಕ ಪೂರ್ವ ಕಾಲಘಟ್ಟದ ಡೊಂಬರ ಸಮುದಾಯವನ್ನು ಅಧ್ಯಯನ ಮಾಡಿದ ಈ ಮೂರು ಜನ ವಿದ್ವಾಂಸರ ಉಲ್ಲೇಖಗಳನ್ನು ಈಗ ಗಮನಿಸಿದ್ದೇವೆ. ನೆಲೆನಿಂತ ಮತ್ತು ಅಲೆಮಾರಿ ಡೊಂಬರಿಬ್ಬರೂ ಸ್ತ್ರೀ ದೇವತೆಗಳನ್ನು ಆರಾಧಿಸುತ್ತಿರುವುದು ಸ್ಪಷ್ಟವಾಗುತ್ತದೆ. ಜೊತೆಗೆ ಇವರ ಆರಾಧನಾ ಪದ್ಧತಿಯಲ್ಲಿ ಮಡಿಕೆಗಳು ವಿಶೇಷ ಪಾತ್ರ ವಹಿಸುತ್ತವೆ. ಮಡಿಕೆಗಳನ್ನು ಪೂಜೆಯಲ್ಲಿ ಪ್ರಧಾನವಾಗಿ ಬಳಸುವ ಪದ್ಧತಿಯು ಅತ್ಯಂತ ಪ್ರಾಚೀನ ಆರಾಧನಾ ಕ್ರಮವನ್ನು ಪ್ರತಿನಿಧಿಸುತ್ತದೆ. ಜೊತೆಗೆ ಇವರು ಶಕ್ತಿ ಆರಾಧಕರು. ಇವರು ಪೂಜಾ ವಿಧಾನಗಳು ತಾಂತ್ರಿಕ ಪೂಜಾ ವಿಧಾನಗಳನ್ನು ಪ್ರತಿನಿಧಿಸುತ್ತವೆ. ಜೊತೆಗೆ ಹಂತಹಂತವಾಗಿ ಡೊಂಬರು ಶೈವರಾಗಿ, ಶ್ರೀವೈಷ್ಣವರಾಗಿ ಮತಾಂತರಗೊಂಡಿರುವುದನ್ನು ಮೇಲಿನ ಉಲ್ಲೇಖಗಳು ಸಮರ್ಥಿಸುತ್ತವೆ.

ನನ್ನ ಈ ಅಧ್ಯಯನದ ಸಂದರ್ಭದಲ್ಲಿ ನಾನು ಭೇಟಿ ಮಾಡಿದ ರಾಜ್ಯದ ವಿವಿಧ ಕಡೆಗಳಲ್ಲಿನ ಡೊಂಬರಿಗೆ ದೇವಾಲಯಗಳಿಲ್ಲ. ಆದರೆ ಇವರು ವಾಸಿಸುವ ಊರುಗಳಲ್ಲಿ 'ದೇವರ ಮನೆ' ಇರುತ್ತವೆ. ಈ 'ದೇವರ ಮನೆ'ಯು ಸಮುದಾಯದ ಮುಖಂಡನ ಮನೆಯೇ ಆಗಿರುತ್ತದೆ. ಸಮುದಾಯದ ಈ ಮುಖಂಡನ ಮನೆಯಲ್ಲಿ ಡೊಂಬರ ದೇವತೆಗಳಿರುತ್ತವೆ. ಅಲ್ಲಿ ಒಂದು ಪೆಟ್ಟಿಗೆಯಲ್ಲಿ ಈ ದೇವತೆಗಳನ್ನು ಇರಿಸಿರುತ್ತಾರೆ. ಈ ದೇವತೆಗಳು ಪದಕಗಳಲ್ಲಿರುತ್ತವೆ. ಬೆಳ್ಳಿಯ ತಗಡುಗಳಲ್ಲಿ ಉಬ್ಬು ಶಿಲ್ಪಗಳನ್ನು ರೂಪಿಸಿ ಚೌಕಾಕಾರದ ನಾಣ್ಯಗಳ ಆಕಾರದಲ್ಲಿ ಈ ಉಬ್ಬು ಶಿಲ್ಪಗಳನ್ನು ಮಡಿಸಿರುತ್ತಾರೆ. ಜೊತೆಗೆ ಕುದುರೆಯ ಶಿಲ್ಪವೂ ಈ ಪೆಟ್ಟಿಗೆಯಲ್ಲಿರುತ್ತದೆ. ಮುಖ್ಯವಾಗಿ ಬೆಳ್ಳಿ ನಾಣ್ಯದ ಉಬ್ಬುಶಿಲ್ಪಗಳಲ್ಲಿ ಕುದುರೆಯ ಮೇಲೆ ಒಬ್ಬ ವ್ಯಕ್ತಿ ಕುಳಿತಂತೆ ಚಿತ್ರಿಸಲಾಗಿರುತ್ತದೆ. ನಾನು ಸುತ್ತಾಡಿದ ಬಹುತೇಕ ಡೊಂಬರ ಗ್ರಾಮಗಳ ಮುಖ್ಯಸ್ಥನ ಮನೆಯಲ್ಲಿ ಈ ಪೆಟ್ಟಿಗೆ ದೇವರು ಇರುವುದನ್ನು ಗಮನಿಸಿದ್ದೇನೆ. ಇದೇ ರೀತಿ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಇಲಾಳ ಗ್ರಾಮದ ಅಲೆಮಾರಿ ಡೊಂಬರ ಮುಖಂಡನ ಮನೆಯಲ್ಲೂ ಈ ಬಗೆಯ ಪೆಟ್ಟಿಗೆಯ ದೇವರಿರುವುದು ಕಂಡು ಬಂತು. ಈ ಅಲೆಮಾರಿ ಡೊಂಬರ ಆಚರಣೆಯೊಂದರಲ್ಲಿ ಪಾಲ್ಗೊಂಡಿದ್ದ ನಾನು, ನೆಲೆನಿಂತ ಡೊಂಬರ ದೈವಗಳನ್ನೇ ಅಕ್ಷರಶಃ ಹೋಲುವ ಉಬ್ಬುಶಿಲ್ಪದ ಬೆಳ್ಳಿ ಕುದುರೆಗಳು ಆ ಪೆಟ್ಟಿಗೆಯಲ್ಲಿರುವುದನ್ನು ನೋಡಿದೆ. ನೆಲೆನಿಂತ ಡೊಂಬರು ದಾವಣಗೆರೆ ಜಿಲ್ಲೆಯಲ್ಲಿ ಆಚರಿಸುವ ಗಾಳೆಮ್ಮನ ಹಬ್ಬದ ಸಂದರ್ಭದ ಆರಾಧನಾ ವಿಧಾನಗಳು, ಇಲಾಳ ಗ್ರಾಮದಲ್ಲಿನ ಅಲೆಮಾರಿ ಡೊಂಬರ ಸ್ತ್ರೀ ದೇವತೆಯ ಹಬ್ಬದಂದು ಪುನರಾವರ್ತನೆಯಾದವು. ಅಲೆಮಾರಿ ಮತ್ತು ನೆಲೆನಿಂತ ಡೊಂಬರ ನಡುವಿನ ಅಂತಃಸ್ಸಂಬಂಧಗಳು ಈ ಎರಡು ಪಂಗಡಗಳ ಆರಾಧನಾ ಪದ್ಧತಿಯಲ್ಲಿ ಇನ್ನೂ ಉಳಿದುಕೊಂಡಿರುವುದು ಕಂಡುಬರುತ್ತದೆ.

ಹಿಂದಿನ ಪುಟಗಳ ಬರವಣಿಗೆಯ ಉದ್ದೇಶವನ್ನು ಇನ್ನೂ ಸ್ಪಷ್ಟಗೊಳಿಸಲು ಯತ್ನಿಸುತ್ತೇನೆ. ಭಾರತದ ಸಾಮಾಜಿಕ ಸಂದರ್ಭದಲ್ಲಿ ಕೆಳಜಾತಿಗಳಿಗೆ ಮೊದಲಿನಿಂದಲೂ ಸಮಾಜದ ಆರ್ಥಿಕ ಮತ್ತು ರಾಜಕೀಯ ಅಧಿಕಾರಗಳಿಲ್ಲದೇ ಇರುವುದನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಅದರಲ್ಲೂ ಡೊಂಬರಂತಹ ಸೇವಕ ಸಮುದಾಯಗಳು ಭಾರತದಾದ್ಯಂತ ನೆಲೆಸಿದ್ದರೂ ಈ ಸಮುದಾಯಗಳಿಗೆ ಒಂದು ಸಾಮಾಜಿಕ ಮತ್ತು ಸಾಂಸ್ಕೃತಿಕ ಸಾತತ್ಯವು ಲಭ್ಯವಾಗಿಲ್ಲದಿರುವುದು ಕಂಡು ಬರುತ್ತದೆ. ಆರ್ಥಿಕವಾಗಿ ಯಾವತ್ತೂ ಸ್ವಾತಂತ್ರ್ಯಹೀನ

ಬದುಕನ್ನು ಬದುಕಿದ ಅಧೀನ, ಸೇವಕ ಸಮುದಾಯಗಳ ಸಮಾಜ ಮತ್ತು ಸಂಸ್ಕೃತಿಗಳಿಗೆ ಏಕರೂಪತೆ ಲಭ್ಯವಾಗಲಿಲ್ಲ. ಹಿಂದಿನ ಪುಟಗಳಲ್ಲಿ ಡೊಂಬರು ದೇಶಾದ್ಯಂತ ರೂಢಿಸಿಕೊಂಡು ಬಂದಿರುವ ಕಸಬುಗಳನ್ನು ನಾವು ಗಮನಿಸಿದ್ದೇವೆ. ಲಾಭದಾಯಕವಲ್ಲದ ಮತ್ತು ಸಮಾಜದಲ್ಲಿ ಅತ್ಯಂತ ನಿಕೃಷ್ಟವೆನ್ನಿಸುವ ವೃತ್ತಿಗಳನ್ನು ಡೊಂಬರು ಅವಲಂಬಿಸಿರುವುದು ಕಂಡು ಬರುತ್ತದೆ. ಜೊತೆಗೆ ಡೊಂಬರ ಆರಾಧಿಸುವ ದೈವಗಳು, ಆಚರಣಾ ವಿಧಾನಗಳು, ಜೀವನ ವಿಧಾನ, ವಿವಿಧ ವೃತ್ತಿಗಳು ಮತ್ತು ಸಾಮಾಜಿಕ ಸ್ಥಾನಮಾನಗಳು ದೇಶ್ಯಾದ್ಯಂತ ಭಿನ್ನವಾಗಿವೆ. ಎಷ್ಟೋ ಸಲ ಒಂದೇ ರಾಜ್ಯದಲ್ಲಿ ವಾಸಿಸುತ್ತಿರುವ ಡೊಂಬರ ಸಮುದಾಯಕ್ಕೂ ಒಂದು ಏಕರೂಪತೆ ಲಭ್ಯವಾಗಿಲ್ಲದಿರುವುದು ಕಂಡು ಬರುತ್ತದೆ.

ಅಧಿಕಾರಸ್ಥ ಮೇಲ್ಜಾತಿಯ ಸಮುದಾಯಗಳಲ್ಲಿಯೇ ಹತ್ತು ಹಲವು ಪಂಗಡಗಳಿವೆ, ವಿವಿಧ ಮತಕ್ಕೆ, ತಾತ್ವಿಕ ಧಾರೆಗಳಿಗೆ ಸೇರಿದ ಅನೇಕ ಪಂಗಡಗಳು ರೂಪುಗೊಂಡಿರುವುದುಂಟು. ಆದರೆ ಈ ಮೇಲ್ಜಾತಿಗಳು ಒಂದು ಅಭಿಜಾತ ಪೌರಾಣಿಕ ಅವಕಾಶದಲ್ಲಿ (Space) ತಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಾತತ್ಯವನ್ನು ಕಾಪಾಡಿಕೊಂಡು ಬಂದಂತೆ ಭಾಸವಾಗುತ್ತದೆ. ಬ್ರಾಹ್ಮಣರಲ್ಲಿ ಅನೇಕ ಪಂಗಡ ಮತ್ತು ಉಪಪಂಗಡಗಳಿದ್ದರೂ ಈ ಸಮುದಾಯಕ್ಕೆ ವೈದಿಕ ಅಥವಾ ಶೈವದ ವಿರಾಟ್ ಪೌರಾಣಿಕತೆಯ ಸಾತತ್ಯವಿರುವುದು ಕಂಡು ಬರುತ್ತದೆ. ಕಾರಣ ಈ ಅಧಿಕಾರಸ್ಥ ಸಮುದಾಯಗಳಿಗೆ ಪ್ರಾಪ್ತವಾಗಿರುವ ನಿಶ್ಚಿತ ಆರ್ಥಿಕ ಅವಲಂಬನೆ ಮತ್ತು ಆ ಕಾರಣಕ್ಕಾಗಿ ಲಭ್ಯವಾಗಿರುವ ಆತ್ಮಪ್ರತ್ಯಯಗಳು ಈ ಬಗೆಯ ಸಾತತ್ಯವನ್ನು ಕಾಯ್ದುಕೊಂಡು ಬಂದಿವೆ. ತೀರಾ ಈಚೆಗೆ ಕೆಳಜಾತಿಗಳೂ ಸಹ ತಮ್ಮ ಸಮಾಜಗಳ ಸಾಂಸ್ಕೃತಿಕ ಏಕತೆ ಮತ್ತು ಸಾತತ್ಯವನ್ನು ಕಂಡುಕೊಳ್ಳಲು ತಮ್ಮ ಜಾತಿಯ ಇತಿಹಾಸವನ್ನು ಪುರಾಣೀಕರಿಸಲು ಯತ್ನಿಸುತ್ತಿವೆ. ಬೇಡರು ವಾಲ್ಮೀಕಿಯನ್ನು, ಗಂಗಾ ಮತಸ್ಥರು ಭಾಗೀರಥನನ್ನು, ಗೊಲ್ಲರು ಕೃಷ್ಣನನ್ನು ತಮ್ಮ ಮೂಲ ಪುರುಷನನ್ನಾಗಿಸಿಕೊಂಡು, ತಮ್ಮ ಚರಿತ್ರೆಯನ್ನು ಪುರಾಣೀಕರಿಸಲು ಯತ್ನಿಸುತ್ತಿದ್ದಾರೆ. ಹೀಗೆ ಚರಿತ್ರೆಯನ್ನು ಪುರಾಣೀಕರಿಸುವ ಹಿಂದೆ ಆಯಾ ಸಮುದಾಯಗಳ ವರ್ತಮಾನದ ರಾಜಕೀಯ ಆಶಯಗಳು ಪ್ರಬಲವಾಗಿ ಕೆಲಸ ಮಾಡುತ್ತಿವೆ. ಆದರೆ ಎಲ್ಲಾ ಸಮುದಾಯಗಳಿಗೆ ಈ ರೀತಿಯ ಸೌಲಭ್ಯಗಳನ್ನು ಇಂಡಿಯಾದ ಪರಂಪರೆ ಒದಗಿಸಲಾರದು. ಇಂಡಿಯಾದ ಚರಿತ್ರೆಯಲ್ಲಿ ಕೆಳಜಾತಿಗಳು ಅಧಿಕಾರರಹಿತ ಸ್ಥಿತಿಯಲ್ಲಿಯೇ ಬದುಕಿಬಂದಿರುವುದರಿಂದ, ಕೆಳಜಾತಿಗಳ ಸ್ಮೃತಿ ಜಗತ್ತಿನಲ್ಲಿ ಈ ಸಮುದಾಯಗಳನ್ನು ಸಬಲೀಕರಿಸುವ ಅಂಶಗಳು ಕಡಿಮೆ. ಇದನ್ನು ಅಂಬೇಡ್ಕರ್ ಹೀಗೆ ವಿವರಿಸುತ್ತಾರೆ. ‘ಯಾವುದೇ ಶಕ್ತಿಯ ಸಂಪನ್ಮೂಲಗಳಿರದ ಒಂದು ಸಮುದಾಯದ ಸ್ಮೃತಿ ಅಥವ ಸಮುದಾಯಪ್ರಜ್ಞೆ ಸಬಲಗೊಳಿಸುವುದಕ್ಕಿಂತ ದುರ್ಬಲಗೊಳಿಸುವಂತಹುದೇ ಆಗಿರುತ್ತದೆ. ಇಂದಿಗೂ ದಲಿತರಿಗೆ ಒಂದು ಸಮುದಾಯದ ಅಸ್ತಿಭಾರವಾದ ಸ್ವತ್ತುಗಳಿಲ್ಲ.’[೧೦] ಡೊಂಬರ ಸ್ಮೃತಿ ಜಗತ್ತಿನಲ್ಲಿ ತಮ್ಮನ್ನು ಸಬಲೀಕರಿಸುವ ನೆನಪುಗಳಿಲ್ಲ. ಜೊತೆಗೆ ಈ ಸಮುದಾಯಕ್ಕೆ ಆತ್ಮಪ್ರತ್ಯಯ ತಂದುಕೊಡುವ ‘ಮಹಾನ್ ಪುರುಷ’ ಈ ದೇಶದ ಪರಂಪರೆಯಲ್ಲಿ ಡೊಂಬರಿಗೆ ಲಭ್ಯವಾಗುವ ಸಾಧ್ಯತೆಗಳೂ ಇಲ್ಲ. ಈ ಕ್ಷಣಕ್ಕೆ ಡೊಂಬರ ಸಮುದಾಯಕ್ಕೆ ರತ್ನಾಜಿಯೊಬ್ಬಳು ಅತ್ಯಂತ ಪ್ರಾಚೀನ ವ್ಯಕ್ತಿತ್ವವಾಗಿ ಲಭ್ಯವಾಗಬಲ್ಲಳು. ಆದರೆ ಆಕೆ ಪುರಾಣದಲ್ಲಿಯೇ ‘ಶಾಪಗ್ರಸ್ತೆ’. ಹಿಂದೂ ಸಮಾಜದ ಪರಂಪರೆಯಲ್ಲಿ ಆಕೆ ‘ಅನೈತಿಕವಾಗಿ’

ಬದುಕಲೆತ್ನಿಸಿದವಳು. ಡೊಂಬರು ವರ್ತಮಾನದಲ್ಲಿ ಆತ್ಮಪ್ರತ್ಯಯವನ್ನು ಸಂಚಯಿಸುವ ಸಂಕೇತವಾಗಿ ರತ್ನಾಜಿಯನ್ನು ಬಳಸಲು ಸಾಧ್ಯವಾಗದೇ ಹೋಗಬಹುದು. ಡೊಂಬರ ಪೌರಾಣಿಕ ಹಿನ್ನೆಲೆಯೇ 'ಶಾಪಗ್ರಸ್ತ'ವಾಗಿದೆ. ಜೊತೆಗೆ ಎಂದಿಗೂ ಸರಿಪಡಿಸದ 'ವೈಕಲ್ಯವೂ' ಪೌರಾಣಿಕವಾಗಿ ಈ ಸಮುದಾಯಕ್ಕೆ ಪ್ರಾಪ್ತವಾಗಿದೆ. ಈ ಕಾರಣದಿಂದ ಡೊಂಬರ ಸಮುದಾಯವು 'ಭಗ್ನಗೊಂಡ' ಸಮುದಾಯದಂತೆ ಗೋಚರಿಸುತ್ತದೆ. ಬಹುತೇಕ ಸೇವಕ ಸಮುದಾಯಗಳ ವರ್ತಮಾನದ ಸ್ಥಿತಿಯು ಹೀಗೆ 'ಭಗ್ನಗೊಂಡಿರುವುದು' ಕಂಡು ಬರುತ್ತದೆ.

ಈ 'ಭಗ್ನತೆಗೆ' ಮುಖ್ಯ ಕಾರಣ, ಸೇವಕ ಸಮುದಾಯಗಳ ಪಾರಂಪರಿಕ ಆರ್ಥಿಕತೆ. ಯಾವ ಸಮುದಾಯಗಳು ಸಮಕಾಲೀನ ಬದುಕನ್ನು ಪೊರೆಯಲು ಬೇಕಾದ ನಿಶ್ಚಿತ ಆದಾಯದ ಮೂಲಗಳನ್ನು ಹೊಂದಿರುವುದಿಲ್ಲವೋ ಆ ಸಮುದಾಯಗಳಿಗೆ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಾತತ್ಯವು ಪ್ರಾಪ್ತವಾಗಲಾರದು. ಹಿಂದಿನ ಅಧ್ಯಾಯಗಳಲ್ಲಿ ನಾವು ಡೊಂಬರ ಸಮುದಾಯದ ಪಾರಂಪರಿಕ ಆರ್ಥಿಕ ಅವಲಂಬನೆ ಮತ್ತು ಪೌರಾಣಿಕ ಹಿನ್ನೆಲೆಗಳನ್ನು ಗಮನಿಸಿದ್ದೇವೆ. ಯಾವ ರಾಜ್ಯಗಳಲ್ಲೂ ಡೊಂಬರು ತಮ್ಮ ಸಾಮಾಜಿಕ ಬದುಕಿಗೆ ಆತ್ಮಪ್ರತ್ಯಯವನ್ನು ಸಂಚಯಿಸುವ ಕಸಬುಗಳನ್ನು ಅವಲಂಬಿಸಿರುವುದು ವಿರಳ. ಡೊಂಬರಾಟಕ್ಕೆ ಯಾವುದೋ ಒಂದು ಕಾಲಘಟ್ಟದಲ್ಲಿ ರಾಜರ ಮತ್ತು ಊಳಿಗಮಾನ್ಯ ಯಜಮಾನರ ಪ್ರೋತ್ಸಾಹದಿಂದ ಕೆಲವು ಮಾನ್ಯತೆಗಳು ಲಭ್ಯವಾಗಿರಬಹುದು. ಆದರೆ ಸ್ಮಶಾನದಲ್ಲಿ ಹೆಣಗಳನ್ನು ಸುಡುವ, ಪೌರಕಾರ್ಮಿಕರಾಗಿ, ಯಾರೂ ಮಾಡಲು ಅಸಹ್ಯಿಸಿಕೊಳ್ಳುವ ವೃತ್ತಿಗಳನ್ನು ನಿರ್ವಹಿಸುವ ಡೊಂಬರಿಗೆ ಅವರ ವೃತ್ತಿಗಳು ವರ್ತಮಾನದಲ್ಲಿ ಆತ್ಮಪ್ರತ್ಯಯವನ್ನು ತಂದು ಕೊಡಲಾರವು. ಜೊತೆಗೆ ಈ ಬಗೆಯ ಕಸಬುಗಳು ಯಾವ ಸಮುದಾಯದ ಪರಂಪರೆಗೆ ಒಂದು ತರ್ಕಬದ್ಧ ಸಾತತ್ಯವನ್ನು ಕಲ್ಪಿಸಲಾರವು. ಆರ್ಥಿಕತೆಯು ಒಂದು ಸಮಾಜದ ಆತ್ಮಪ್ರತ್ಯಯವನ್ನು ಮತ್ತು ಸಂಸ್ಕೃತಿಯ ಆವರಣವನ್ನು ರೂಪಿಸುವಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ವೇದಗಳನ್ನು ಓದುವ, ಪುರಾಣಗಳನ್ನು ಬರೆಯುವ, ದೇವರನ್ನು ಪೂಜಿಸುವ ಸಮುದಾಯಗಳ ಆರ್ಥಿಕತೆಯು ರೂಪಿಸುವ ಸಾಂಸ್ಕೃತಿಕ ಪರಂಪರೆಗೆ, ಒಂದು ವಿರಾಟ್ ಪೌರಾಣಿಕ ಆವರಣ ಸದಾ ಜೀವಂತವಾಗಿದ್ದುಕೊಂಡು ಆ ಸಮುದಾಯಗಳ ಸಮಾಜ ಮತ್ತು ಸಂಸ್ಕೃತಿಯ ಒಟ್ಟಂದವನ್ನು ಪೋಷಿಸುತ್ತಿರುತ್ತದೆ. ಆದರೆ ಬೀದಿಗಳಲ್ಲಿ ಬೆವರಾಗುವ, ದೇಹದ ಕಸುವನ್ನು ಬಂಡವಾಳವಾಗಿಸಿ ಜನರನ್ನು ರಂಜಿಸುವ, 'ಅಸಹ್ಯಕರ' ವೃತ್ತಿಗಳನ್ನು ಕೈಗೊಳ್ಳುವ ಸಮುದಾಯಗಳ ಆರ್ಥಿಕತೆಯು ಸ್ವಯಂ ಪೂರ್ಣವಾಗಿರುವುದಿಲ್ಲ. ಮತ್ತು ತನ್ನ ಸುತ್ತ ರೂಪುಗೊಂಡ ಸಂಸ್ಕೃತಿಯನ್ನು ಪೋಷಿಸಲಾಗದ. ಆತ್ಮದ್ವೇಷ ಈ ಸಮುದಾಯಗಳಿಗೆ ಮೈಗೂಡಿರುತ್ತದೆ. ಈ ಕಾರಣದಿಂದ ಸೇವಕ ಸಮುದಾಯಗಳ ಸಮಾಜ ಮತ್ತು ಸಂಸ್ಕೃತಿಗಳು 'ಭಗ್ನಗೊಂಡಿರುವಂತೆ' ಗೋಚರಿಸುತ್ತವೆ.

ವರ್ತಮಾನದ ಡೊಂಬರ ಸಾಮಾಜಿಕ ಸಂರಚನೆ

ಒಂದು ನಿರ್ದಿಷ್ಟ ಅಲೆಮಾರಿ ಸಮಾಜದ ಲಕ್ಷಣಗಳೆಲ್ಲವೂ ಡೊಂಬರ ಸಮಾಜದಲ್ಲಿ ಅಂತರ್ಗತವಾಗಿವೆ. ಇಂದು ಡೊಂಬರು ಶುದ್ಧಾಂಗವಾಗಿ ಅಲೆಮಾರಿಗಳಾಗಿ ಉಳಿದುಕೊಂಡಿಲ್ಲ. ಈ ದೇಶವು ಹಾದು ಬಂದ

ಅನೇಕ ರಾಜಕೀಯಾರ್ಥಿಕ ಮತ್ತು ಧಾರ್ಮಿಕ ಪ್ರಭಾವಗಳನ್ನು ಎಲ್ಲ ಸಮುದಾಯಗಳಂತೆ ಈ ಸಮುದಾಯವೂ ಹಾದು ಬಂದು ತನ್ನಲ್ಲಿ ಅನೇಕ ಬದಲಾವಣೆಗಳನ್ನು ತಂದುಕೊಂಡಿದೆ. ನಿಶ್ಚಿತ ಆರ್ಥಿಕ ಮೂಲಗಳಿಲ್ಲದಿದ್ದರೂ ಚಾರಿತ್ರಿಕವಾಗಿ ಊಳಿಗಮಾನ್ಯ ವ್ಯವಸ್ಥೆಯನ್ನೇ ಅವಲಂಬಿಸಿ ಬದುಕಿದ ಕಾರಣಕ್ಕಾಗಿ ಈ ಸಮಾಜದಲ್ಲೂ ಊಳಿಗಮಾನ್ಯ ಮೌಲ್ಯಗಳು ಸಹಜವಾಗಿಯೇ ಮೇಳೈಸಿವೆ. ಕಾರಣ ಇದು ಪುರುಷ ಪ್ರಧಾನ ಸಮಾಜ. ಪುರುಷ ಕುಟುಂಬದ ಒಟ್ಟಾರೆ ನಿರ್ಣಯಗಳ ಕೇಂದ್ರಬಿಂದು. ಜಾತಿಯ ನಿಯಮಗಳೂ ಕಟ್ಟುನಿಟ್ಟಾಗಿವೆ. ಇಂದಿಗೂ ಕುಲಪಂಚಾಯ್ತಿಯು ನ್ಯಾಯ ನಿರ್ಣಯಗಳ ಸಂದರ್ಭದಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಸ್ವಗೋತ್ರ ವಿವಾಹ ಮತ್ತು ವಿಧಿನಿಷೇಧಗಳು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರುತ್ತಿರುವುದರಿಂದಾಗಿ ಡೊಂಬರ ಸಮಾಜವು ತನ್ನ ಕೆಲವು ಚಹರೆಗಳನ್ನು ಇನ್ನೂ ಉಳಿಸಿಕೊಂಡಿದೆ ಎಂಬುದು ಸ್ಪಷ್ಟವಾಗುತ್ತದೆ.

ಭಾರತದ ಎಲ್ಲ ಅಲೆಮಾರಿ ಸಮುದಾಯಗಳ ಸಾಮಾಜಿಕ ವ್ಯವಸ್ಥೆಯಂತೆಯೇ ಡೊಂಬರದೂ ಸಹ ಒಂದು ವಿಘಟಿತ ಸಮಾಜವಾಗಿದೆ. ಈ ಬಗೆಯ ವಿಘಟನೆಗೆ ಸಮುದಾಯಗಳ ಅಲೆಮಾರಿತನ ಮತ್ತು ಅಧಿಕಾರ ರಹಿತ ಸ್ಥಿತಿಗಳು ಕಾರಣವಾಗುತ್ತವೆ. ಯಾವ ಸಮುದಾಯಗಳಿಗೆ ಆರ್ಥಿಕ ರಂಗದಲ್ಲಿ ಪಾರಂಪರಿಕವಾಗಿ ಹಕ್ಕುಗಳು ಪ್ರಾಪ್ತವಾಗಿರುವುದಿಲ್ಲವೋ, ಯಾವ ಸಮುದಾಯಗಳು ಈ ದೇಶದ ಹೀನಾಯ ಶೋಷಣೆಗೆ ಒಳಗಾಗಿ ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಪರಾವಲಂಬಿಗಳಾಗಿ ಬದುಕಿ ಬಂದಿರುವವೋ ಆ ಎಲ್ಲ ಸಮಾಜಗಳು ಒಂದು ಅರ್ಥದಲ್ಲಿ ವಿಘಟಿತಗೊಂಡಿವೆ. ಒಂದು ರೀತಿಯಲ್ಲಿ ಭಗ್ನಗೊಂಡಿವೆ. ಈ ಭಗ್ನತೆಯು ಸಮುದಾಯದ ಚಹರೆಗಳನ್ನು ನಾಶ ಮಾಡುವಂತಹುದ್ದಲ್ಲ. ಈ ವಿಘಟನೆಯಲ್ಲಿಯೂ ಒಂದು ಬಗೆಯ ಸಾತತ್ಯವಿದೆ. ಆದರೆ ಸಾಮಾಜಿಕ ಅಧಿಕಾರಗಳಿಲ್ಲದ ಸಮುದಾಯಗಳು ಸಹಜವಾಗಿಯೇ ಭಗ್ನಗೊಂಡು ವಿಘಟಿತವಾಗುತ್ತವೆ. ಇದಕ್ಕೆ ಡೊಂಬರಲ್ಲಿಯ ಅನೇಕ ಭಿನ್ನ ವೃತ್ತಿಗಳನ್ನು ಅವಲಂಬಿಸಿರುವ ಗುಂಪುಗಳೇ ಸಾಕ್ಷಿ. ಜೊತೆಗೆ ಈವತ್ತಿನ ವಿವಿಧ ಗುಂಪುಗಳಲ್ಲಿ ಬದುಕುತ್ತಿರುವ ಸಮುದಾಯದ ಜನ ವರ್ತಮಾನದ ಕುರಿತು ಚಿಂತಿಸುತ್ತಿರುವುದನ್ನು ಗಮನಿಸಿದರೆ, ಒಂದೇ ಸಮುದಾಯದ ಒಳಗಿರುವ ಅನೇಕ ಅಭಿಪ್ರಾಯ ಬೇಧಗಳು ಮತ್ತು ಸಮಾಜದ ಚಹರೆಗಳ ಕುರಿತು ಅವರಿಗಿರುವ ಗ್ರಹಿಕೆಗಳು ಸ್ಪಷ್ಟವಾಗುತ್ತವೆ.

ಮೊದಲೇ ಹೇಳಿದಂತೆ ಅಲೆಮಾರಿಗಳದು ಒಂದು ಬಗೆಯ ವಿಘಟಿತ ಸಮಾಜ. ಒಂದು ಕಾಲಘಟ್ಟದಲ್ಲಿ ಡೊಂಬರ ಸಮುದಾಯವು ಏಕಸ್ವರೂಪಿಯಾಗಿದ್ದಿರಬಹುದು. ಆದರೆ ಕಾಲಾನಂತರದಲ್ಲಿ ತಮ್ಮ ಅಲೆಮಾರಿತನದಿಂದ, ಭಿನ್ನ ಸಾಮಾಜಿಕಾರ್ಥಿಕ ಪ್ರಭಾವಗಳಿಂದ ಮತ್ತು ಹಲವು ಸಂದರ್ಭಗಳ ಅನಿವಾರ್ಯತೆಯ ಕಾರಣಗಳಿಗಾಗಿ ಡೊಂಬರಲ್ಲಿ ಅನೇಕ ಭಿನ್ನ ವೃತ್ತಿಯ ಗುಂಪುಗಳು ಮತ್ತು ಪಂಗಡಗಳು ರೂಪುಗೊಂಡಿರುವುದನ್ನು ಕಾಣಬಹುದಾಗಿದೆ. ಈ ಬಗೆಯ ಪಂಗಡಗಳು ಬಹುತೇಕ ಎಲ್ಲ ಅಲೆಮಾರಿಗಳಲ್ಲಿ ಇದೇ ಕಾರಣಕ್ಕಾಗಿ ರೂಪುಗೊಂಡಿವೆ.

ಡೊಂಬರ ವಿಧಗಳು ಮತ್ತು ಪಂಗಡಗಳು

ಡೊಂಬರಲ್ಲಿ ಪ್ರಧಾನವಾಗಿ ಎರಡು ಪಂಗಡಗಳಿವೆ. ಅನೇಕರು ವಿವರಿಸುವಂತೆ ಡೊಂಬರಲ್ಲಿ ಅನೇಕ

ವಿಧಗಳಿಲ್ಲ. ಡೊಂಬರ ಎರಡು ಪಂಗಡಗಳನ್ನು ಹೀಗೆ ವಿಂಗಡಿಸಲಾಗಿದೆ.

೧. ನೆಲೆನಿಂತ ಡೊಂಬರು, ಅಂದರೆ 'ಸ್ಥಿರ' ಸಮಾಜ.

೨. ಅಲೆಮಾರಿ ಡೊಂಬರು, ಅಂದರೆ ಜಂಗಮ ಸಮಾಜ.

ಆದರೆ ಈ ಸಮುದಾಯದ ಭಾಷೆ, ಪ್ರಾದೇಶಿಕತೆ ಮತ್ತು ಅವಲಂಬಿಸಿರುವ ಕಸಬುಗಳನ್ನು ಆಧರಿಸಿ ಕೆಲವು ವಿದ್ವಾಂಸರು ಡೊಂಬರಲ್ಲಿ ಅನೇಕ ಪಂಗಡ ಮತ್ತು ಉಪಪಂಗಡಗಳನ್ನು ಗುರುತಿಸುತ್ತಾರೆ. ಸೈಯದ್ ಸಿರಾಜ್ ಉಲ್ ಹಸನ್‌ರವರು ಹೈದರಾಬಾದ್ ಕರ್ನಾಟಕದ ಡೊಂಬರನ್ನು ಹೀಗೆ ವಿಂಗಡಿಸುತ್ತಾರೆ.

'ಡೊಂಬರನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ತೆಲುಗು ಡೊಂಬರು ಮತ್ತು ಅರೆ ಡೊಂಬರು. ತೆಲುಗು ಡೊಂಬರು ತೆಲುಗು ಮಾತಾಡುತ್ತಾರೆ. ಇದರ ಜೊತೆ ಅವರದೇ ಆದ ಉಪಭಾಷೆಯನ್ನು ಅವರು ಉಳಿಸಿಕೊಂಡಿದ್ದಾರೆ. ಆದರೆ ಅರೆಡೊಂಬರು ಮರಾಠಿ ಮಾತಾಡುತ್ತಾರೆ. ಇವರನ್ನು ಮರಾಠಿ ಡೊಂಬರು ಎಂದು ಕರೆಯುವುದುಂಟು. ಇವರು ಮಹಾರಾಷ್ಟ್ರದಿಂದ ತೆಲಂಗಾಣ ಪ್ರದೇಶಕ್ಕೆ ಬಂದು ನೆಲೆಸಿರುವ ಕೊಲ್ಹಾಟಗಳೇ ಆಗಿದ್ದಾರೆ. ಇವರ ಮಾತೃಭಾಷೆ ಮರಾಠಿ.'[೧೧]

ಎಚ್.ವಿ. ನಂಜುಂಡಯ್ಯನವರು ತುಸು ಭಿನ್ನವಾದ ವಿಂಗಡನೆಯನ್ನು ಮಾಡುತ್ತಾರೆ. ಇವರು ಮುಖ್ಯವಾಗಿ ಹಳೆ ಮೈಸೂರು ಭಾಗದ ಡೊಂಬರನ್ನು ಅಧ್ಯಯನ ಮಾಡಿದ್ದಾರೆ.

'ತೆಲುಗು ಡೊಂಬರಲ್ಲಿ ಎರಡು ಭಾಗಗಳಿವೆ. ನೆಲೆನಿಂತವರು 'ಊರ ಡೊಂಬರು' ಅಲೆಮಾರಿಗಳಾಗಿಯೇ ಉಳಿದವರು 'ಕಾಡು ಡೊಂಬರು' ಎಂದು ಪರಿಗಣಿಸಲ್ಪಟ್ಟರು. ಅಲೆಮಾರಿ ಕಾಡು ಡೊಂಬರು, ಊರ ಡೊಂಬರ ಮನೆಯಲ್ಲಿ ಊಟ ಮಾಡಬಹುದು ಆದರೆ ಊರ ಡೊಂಬರು ಕಾಡುಡೊಂಬರ ಮನೆಯಲ್ಲಿ ಊಟ ಮಾಡುವುದಿಲ್ಲ. ಇವರಲ್ಲಿ ಹೊರ ಬಾಂಧವ್ಯದ, ಇಲ್ಲವೆ ಉನ್ನತ ಜಾತಿಯ ಜೊತೆಗೆ ರಕ್ತಸಂಬಂಧ ಬೆಳೆಸುವುದು ನಿಷಿದ್ಧ.'[೧೨]

ಅನಂತಕೃಷ್ಣ ಅಯ್ಯರ್ ಅವರ ವಿಂಗಡನೆ ಪ್ರಕಾರ.

'ತೆಲುಗು ಡೊಂಬರನ್ನು ರೆಡ್ಡಿ ಡೊಂಬರು ಎಂದು ಸಹ ಕರೆಯಲಾಗುತ್ತದೆ. ಈ ಡೊಂಬರಲ್ಲಿ ಎರಡು ವಿಧಗಳಿವೆ. ನೆಲೆನಿಂತವರು (ಊರು ಡೊಂಬರು) ಅಲೆಮಾರಿಗಳು (ಕಾಡು ಡೊಂಬರು) ಎಂದು ಎರಡು ಪಂಗಡಗಳನ್ನು ಹೆಸರಿಸಲಾಗುತ್ತಿದೆ. ಕಾಡು ಡೊಂಬರು ಊರ ಡೊಂಬರ ಮನೆಯಲ್ಲಿ ಊಟ ಮಾಡಬಹುದು. ಆದರೆ ಊರ ಡೊಂಬರು ಕಾಡು ಡೊಂಬರ ಮನೆಯಲ್ಲಿ ಊಟ ಮಾಡುವುದಿಲ್ಲ.'[೧೩]

ಡೊಂಬರು: ಒಂದು ಅಧ್ಯಯನ ಎಂಬ ಪುಸ್ತಕ ಪ್ರಕಟಿಸಿರುವ ಎಚ್.ಎಂ. ಮಹೇಶ್ವರಯ್ಯ ಮತ್ತು ಎ.ಮುರಿಗೆಪ್ಪನವರು ಡೊಂಬರನ್ನು ಹೀಗೆ ವಿಶ್ಲೇಷಿಸುತ್ತಾರೆ.

'ಡೊಂಬರಲ್ಲಿ ಕೆಲವರು ರಾಜಾಶ್ರಯ ಪಡೆದು ಜೀವನ ಸಾಗಿಸಿದರೆ, ಕೆಲವರು ತಮ್ಮ ಮೂಲ ಕಸುಬಾದ ಡೊಂಬರಾಟವನ್ನು (ಅಂಗಸಾಧನೆ) ಮುಂದುವರೆಸಿರಬೇಕು. ಮುಂದಿನ ಪೀಳಿಗೆಯಲ್ಲಿ ಇವೆರಡೂ ಭಿನ್ನ ಗುಂಪುಗಳೇ ಆಗಿರಬೇಕು. ಇವರೀರ್ವರ ನಡುವಿನ ಅಂತರ ಅವರು ಬೇರೆ ಬೇರೆ ಎನ್ನುವಷ್ಟರ ಮಟ್ಟಿಗೆ ಬೆಳೆದು ಬಂದಿತು'[೧೪] ಎನ್ನುತ್ತಾರೆ. ಎಚ್.ಎಂ.ಮಹೇಶ್ವರಯ್ಯ ಮತ್ತು ಎ.ಮುರಿಗೆಪ್ಪನವರು ಮುಖ್ಯವಾಗಿ

ಶಿವಮೊಗ್ಗ ಜಿಲ್ಲೆಯ ಡೊಂಬರನ್ನು ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಮಲೆನಾಡಿನಲ್ಲಿಯ ಕೆಲವು ಪ್ರದೇಶಗಳಲ್ಲಿ ವಾಸಿಸುತ್ತಿರುವ ಡೊಂಬರು ಸರಿಸುಮಾರು ೧೫೦-೨೦೦ ವರ್ಷಗಳ ಹಿಂದೆಯೇ ನೆಲೆನಿಂತಿರುವ ಸಾಧ್ಯತೆಗಳಿವೆ. ಈ ಕಾರಣದಿಂದಾಗಿ ಈ ಜಿಲ್ಲೆಯ ಡೊಂಬರು, ಅಲೆಮಾರಿ ಡೊಂಬರಿಗಿಂತ ಭಿನ್ನವಾದ ಜೀವನ ವಿಧಾನವನ್ನು ಅನುಸರಿಸಿಕೊಂಡು ಬಂದಿರುವುದು ಕಂಡು ಬರುತ್ತದೆ. ಇದರಿಂದ ಅಲೆಮಾರಿ ಡೊಂಬರಿಗೆ ಹೋಲಿಸಿದರೆ ಈ ಭಾಗದ ಡೊಂಬರು ಭಿನ್ನವಾಗಿ ಕಂಡು ಬರುತ್ತಾರೆ. ದೇವೆಂದ್ರಕುಮಾರ್ ಹಕಾರಿಯವರೂ ಸಹ ಇದೇ ಬಗೆಯ ವಿಂಗಡನೆಯನ್ನು ಮಾಡುತ್ತಾರೆ. ಇವರು 'ನಾಡಡೊಂಬರು' ಮತ್ತು 'ಕಾಡು ಡೊಂಬರು' ಎಂಬ ಎರಡು ಗುಂಪುಗಳ್ನು ಗುರುತಿಸುತ್ತಾರೆ.[೧೫] ಆದರೆ ಈವತ್ತು ಈ ಬಗೆಯ ವಿಂಗಡಣೆಗಳು ಇಲ್ಲ. ಡೊಂಬರು ಮುಖ್ಯವಾಗಿ ಎರಡು ಪಂಗಡಗಳಲ್ಲಿ ಹಂಚಿಹೋಗಿದ್ದಾರೆ. ಆದರೆ ಈಗ್ಗೆ ೨೦-೨೫ ವರ್ಷಗಳ ಹಿಂದೆ ಡೊಂಬರು ತಮ್ಮನ್ನು ಬೇರೆ ಬೇರೆ ಚಹರೆಗಳ ಮೂಲಕ ಗುರುತಿಸಿಕೊಳ್ಳಲು ಯತ್ನಿಸುತ್ತಿದ್ದರು. ಒಂದು ಜಿಲ್ಲೆಯ ಒಳಗೆ ಬದುಕುತ್ತಿದ್ದ ಡೊಂಬರಲ್ಲಿ ಮಾತ್ರ, ಅದರಲ್ಲೂ ಕೆಲವು ಸಾಂಸ್ಕೃತಿಕ ಸಾಮ್ಯತೆಗಳನ್ನು ನಿರಂತರವಾಗಿ ರೂಢಿಸಿಕೊಂಡು ಬಂದಿದ್ದ ಡೊಂಬರ ವಿವಿಧ ಗುಂಪುಗಳ ನಡುವೆ ಮದುವೆ ಮುಂತಾದ ಸಂಬಂಧಗಳು ಏರ್ಪಡುತ್ತಿದ್ದವು. ಬೇರೆ ಜಿಲ್ಲೆಯಲ್ಲಿನ ಡೊಂಬರನ್ನು ಇನ್ನೊಂದು ಜಿಲ್ಲೆಯಲ್ಲಿನ ಡೊಂಬರು ಒಪ್ಪಿಕೊಳ್ಳುತ್ತಿರಲಿಲ್ಲ. ಇದಕ್ಕೆ ಕಾರಣ ಈ ಸಮುದಾಯ ಚದುರಿ ಹೋಗಿರುವುದು ಮತ್ತು ಸಂಪರ್ಕ ಸಾಧನಗಳ ಕೊರತೆ, ಮತ್ತು ಬಡತನ. ಇದರಿಂದಾಗಿ ಬೇರೆ ಜಿಲ್ಲೆಯಲ್ಲಿನ ಡೊಂಬರು ಇನ್ನೊಂದು ಜಿಲ್ಲೆಗೆ ಅಪರಿಚಿತರು. ಅಂದಿನ ಬಳ್ಳಾರಿ ಜಿಲ್ಲೆಯಲ್ಲಿನ ಡೊಂಬರು ಪಕ್ಕದ ಧಾರವಾಡ, ಶಿವಮೊಗ್ಗ ಜಿಲ್ಲೆಯಲ್ಲಿನ ಡೊಂಬರಿಗೆ ಅಪರಿಚಿತರಾಗಿದ್ದರು. ಈಗಲೂ ಈ ಜಿಲ್ಲೆಗಳ ಡೊಂಬರಿಗೆ ಅಂತಹ ಗಾಢ ಸಂಪರ್ಕಗಳೆನಿಲ್ಲ. ಇಪ್ಪತ್ತು. ವರ್ಷಗಳ ಹಿಂದಿನವರೆಗೂ ರಕ್ತ ಸಂಬಧಗಳು ಕೇವಲ ಒಂದೇ ಜಿಲ್ಲೆಯ ಅದರಲ್ಲೂ ಪರಿಚಿತ ಸಂಬಂಧಗಳಲ್ಲಿ ಮಾತ್ರ ಏರ್ಪಡುತ್ತಿದ್ದವು. ತೀರಾ ಈಚೆಗೆ ಅಂದರೆ ಕಳೆದ ಹತ್ತು ವರ್ಷಗಳಲ್ಲಿ ಕರ್ನಾಟಕದದ್ಯಾಂತ ಬೇರೆ ಬೇರೆ ಜಿಲ್ಲೆಗಳ ಡೊಂಬರ ನಡುವೆ ರಕ್ತ ಸಂಬಂಧಗಳ ಏರ್ಪಟ್ಟಿವೆ. ಅದರಲ್ಲೂ ಎಂಬತ್ತರ ದಶಕದಲ್ಲಿ ಹುಟ್ಟಿದ ಡೊಂಬರ ಸಮುದಾಯದ ಜಾತಿ ಸಂಘಟನೆಯು ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿನ ಡೊಂಬರ ನಡುವೆ ಸೇತುವೆಯಂತೆ ಕೆಲಸ ಮಾಡಿತು. ಇದರಿಂದಾಗಿ ಬೇರೆ ಬೇರೆ ಜಿಲ್ಲೆಗಳ ಡೊಂಬರಿಗೆ 'ನಾವೆಲ್ಲ ಒಂದೇ' ಎಂಬ ಭಾವನೆ ಮೂಡುವಂತಾಯಿತು. ನಂತರ ರಕ್ತ ಸಂಬಂಧಗಳು ಬೇರೆ ಬೇರೆ ಜಿಲ್ಲೆಗಳ ಡೊಂಬರ ನಡುವೆ ಏರ್ಪಟ್ಟವು. ಕರ್ನಾಟಕದ ಡೊಂಬರನ್ನು ತೆಲುಗು ಡೊಂಬರು, ಅರೆಡೊಂಬರು, ಮರಾಠಿ ಡೊಂಬರು, ಕಲ್ಲಾಟಿಗಳು, ಊರ ಡೊಂಬರು, ಕಾಡು ಡೊಂಬರು ಎಂಬ ಗುಂಪುಗಳಲ್ಲಿ ವಿಂಗಡಿಸಿರುವುದನ್ನು ನೋಡಿದ್ದೇವೆ. ಕರ್ನಾಟಕದಲ್ಲಿನ ಡೊಂಬರಿಗೆ ಈ ಬಗೆಯ ವೈವಿಧ್ಯತೆಗಳಿರುವುದು ಸತ್ಯವಾದರೂ, ಇವೆಲ್ಲ ಬೇರೆ ಬೇರೆ ಗುಂಪುಗಳಲ್ಲ. ಅಥವಾ ಬೇರೆ ಬೇರೆ ಜನಾಂಗಿಕ ಲಕ್ಷಣಗಳುಳ್ಳ ಗುಂಪುಗಳಲ್ಲ. ಕರ್ನಾಟಕದ ಸರಿಸುಮಾರು ಎಲ್ಲಾ ಜಿಲ್ಲೆಗಳಲ್ಲಿ (ಬೀದರ್ ಜಿಲ್ಲೆಯನ್ನು ಹೊರತು ಪಡಿಸಿ) ವಾಸಿಸುತ್ತಿರುವ ಡೊಂಬರು ಬೇರೆ ಬೇರೆ ಭಾಷಿಕ ಪ್ರಭಾವವಿರುವ ಪ್ರದೇಶಗಳ ಗಡಿಗಳಲ್ಲಿ ವಾಸಿಸುತ್ತಿದ್ದಾರೆ. ಬೆಳಗಾವಿಯಲ್ಲಿನ

ಡೊಂಬರಿಗೆ ಮರಾಠಿ ಭಾಷೆಯ ಪ್ರಭಾವವಿದೆ. ಬಳ್ಳಾರಿ, ರಾಯಚೂರು, ಗುಲ್ಬರ್ಗಾ, ಚಿತ್ರದುರ್ಗ, ತುಮಕೂರು, ಕೋಲಾರ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಡೊಂಬರು ತೆಲುಗು ಮಾತನಾಡುತ್ತಾರೆ. ಹೀಗೆ ಬಹುಭಾಷಿಕ ಪ್ರದೇಶದಲ್ಲಿ ವಾಸಿಸುತ್ತಿರುವ ಡೊಂಬರಿಗೆ ಆಯಾ ಭಾಷೆಗಳ ಮೂಲಕ ತೆಲುಗು, ಮರಾಠಿ ಡೊಂಬರೆಂದು ಹೆಸರಿಸಿರುವ ಸಾಧ್ಯತೆಗಳಿವೆ. ನನ್ನ ಅಧ್ಯಯನದ ಸುತ್ತಾಟದ ಸಂದರ್ಭದಲ್ಲಿ ತೆಲುಗು, ಮರಾಠಿ, ಕನ್ನಡ, ತಮಿಳು ಮಾತನಾಡುವ ಡೊಂಬರ ನಡುವೆ ಅವರಾಡುವ ಭಾಷೆಯನ್ನು ಬಿಟ್ಟರೆ ಅಂತಹ ವ್ಯತ್ಯಾಸಗಳಿಲ್ಲದಿರುವುದು ಕಂಡು ಬಂದಿತು. ಡೊಂಬರು ಆಧುನಿಕಪೂರ್ವ ಕಾಲಘಟ್ಟದಲ್ಲಿ ಊಹಿಸಲಾಗದ ರೀತಿಯಲ್ಲಿ ಚೆದುರಿ ಹೋಗಿರುವ ಸಾಧ್ಯತೆಗಳಿವೆ. ಈ ಕಾರಣದಿಂದಾಗಿ ಚದುರಿ ಬಿದ್ದ ಗುಂಪುಗಳ ನಡುವೆ ಸಂಪರ್ಕ ಸಾಧನಗಳ ಕೊರತೆಯೂ ಉಂಟಾಗಿದೆ. ಇದರಿಂದಾಗಿ ಈ ಗುಂಪುಗಳು ಪರಸ್ಪರ ಸಂಪರ್ಕ ಕಳೆದುಕೊಂಡು, ತಾವು ವಾಸಿಸುತ್ತಿರುವ ಪ್ರದೇಶಗಳ 'ಮುಖ್ಯವಾಹಿನಿ'ಯ ಜೊತೆ ಸೇರಿ ಹೋಗಿದ್ದಾರೆ. ಇದರಿಂದ ತಮ್ಮ ಕೆಲವು ಚಹರೆಗಳನ್ನೂ ಡೊಂಬರು ಕಳೆದುಕೊಂಡಿದ್ದಾರೆ. ಕಾರಣ ತಾವು ವಾಸಿಸುವ ಪ್ರದೇಶದಲ್ಲಿ ಡೊಂಬರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅತ್ಯಂತ ದುರ್ಬಲರು. ಆಗ ಸಹಜವಾಗಿಯೇ ಅವರು ಪ್ರದೇಶಿಕವಾಗಿ ಪ್ರಬಲವಾಗಿರುವ ಸಮುದಾಯಗಳಿಂದ ಪ್ರಭಾವಿತವಾಗಿರುವ ಸಾಧ್ಯತೆಗಳಿವೆ.

ಇನ್ನು ಕಾಡು ಡೊಂಬರು, ಅರೆಡೊಂಬರು, ಊರು ಡೊಂಬರು ಎಂಬ ವಿಂಗಡಣೆಗಳೂ ಸಹ ಕೃತಕವಾದವುಗಳು. ಪರಸ್ಪರ ಸಂಪರ್ಕವಿಲ್ಲದ ದೂರದ ಜಿಲ್ಲೆಗಳಲ್ಲಿ ವಾಸಿಸುತ್ತಿದ್ದ ಡೊಂಬರು ಹೀಗೆ ತಮ್ಮನ್ನು ತಾವು ವಿಂಗಡಿಸಿಕೊಳ್ಳುತ್ತಿದ್ದ ಸಂದರ್ಭಗಳನ್ನು ನಾನು ಹಲವು ಸಲ ಗಮನಿಸಿದ್ದೇನೆ. ಕೆಲವು ಜಿಲ್ಲೆಗಳಲ್ಲಿ ಬಾಚಣಿಕೆ, ಚಾಪೆ ಮತ್ತು ಬಟ್ಟೆಗಳನ್ನು ಹೆಣೆಯುವ ಡೊಂಬರನ್ನು, ವ್ಯವಸಾಯವನ್ನು ರೂಢಿಸಿಕೊಂಡಿದ್ದ ಡೊಂಬರು ಕಾಡು ಡೊಂಬರೆಂದು ಕರೆಯುತ್ತಿದ್ದರು. ಕಾರಣ ಚಾಪೆ ಹೆಣೆಯುವವರು, ಬುಟ್ಟಿ ತಯಾರಿಸುವವರು ಕಾಡಿನ ಉತ್ಪನ್ನಗಳನ್ನು ಅವಲಂಬಿಸಿದ್ದರಿಂದ, ಕೃಷಿಕ ಗುಂಪುಗಳು ಅವರನ್ನು ಕಾಡು ಡೊಂಬರೆಂದು ಪರಿಗಣಿಸಿದ್ದರು. ಇನ್ನು ಊರು ಡೊಂಬರೆಂದರೆ, ಶಾಶ್ವತವಾಗಿ ನೆಲೆಸಿ ಕೃಷಿಯನ್ನು ರೂಢಿಸಿಕೊಂಡವರು ತಮ್ಮನ್ನು ತಾವೇ 'ಊರಡೊಂಬರೆಂದು' ಪರಿಗಣಿಸಿದ್ದರು. ಜೊತೆಗೆ ಇವರು ಡೊಂಬರಾಟದವರನ್ನು 'ಅರೆಡೊಂಬರೆಂದು' ಕರೆಯುತ್ತಿದ್ದರು. ಅಲೆಮಾರಿಗಳಾಗಿಯೇ ಇದ್ದವರನ್ನು, ಪ್ರದರ್ಶನ ಕಲೆಯಾದ ಡೊಂಬರಾಟವನ್ನು ಅವಲಂಬಿಸಿದ್ದವರನ್ನು 'ಅರೆ ಡೊಂಬರೆಂದು' ನೆಲೆನಿಂತವರು ಪರಿಗಣಿಸಿದ್ದರು. ಅರೆಡೊಂಬರು ನೆಲೆನಿಂತವರಿಗೆ ಒಂದು ರೀತಿಯಲ್ಲಿ ಹೊರಗಿನವರೇ ಆಗಿಬಿಟ್ಟಿದ್ದರು. ಕೆಲವು ಕಡೆ ಅಲೆಮಾರಿಗಳಾಗಿರುವ ಡೊಂಬರಾಟದವರು, ನೆಲೆನಿಂತ ಡೊಂಬರ ಜೊತೆ ರಕ್ತ ಸಂಬಂಧಗಳನ್ನು ಬೆಳೆಸಲಾಗಿಲ್ಲ. ಇತ್ತೀಚೆಗೆ ಹಾವೇರಿ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ನೆಲೆನಿಂತಿರುವ ಕಡುಬಡವ ಡೊಂಬರು ಅಲೆಮಾರಿ ಡೊಂಬರ ಜೊತೆ ರಕ್ತ ಸಂಬಂಧಗಳನ್ನು ಏರ್ಪಡಿಸಿಕೊಂಡಿದ್ದಾರೆ. ಇದರಿಂದಾಗಿ ಡೊಂಬರಲ್ಲಿ ಎರಡು ಗುಂಪುಗಳನ್ನು ಮಾತ್ರ ಗುರುತಿಸಬಹುದು. ಒಂದು ನೆಲೆ ನಿಂದ ಡೊಂಬರು, ಎರಡು ಅಲೆಮಾರಿ ಡೊಂಬರು.

ನೆಲೆನಿಂತ ಡೊಂಬರ ಸಮುದಾಯದ ಸಾಮಾಜಿಕ ಸ್ಥಿತಿಗತಿಗಳು

ಕರ್ನಾಟಕದ ಮಧ್ಯ ಮತ್ತು ದಕ್ಷಿಣದ ಜಿಲ್ಲೆಗಳಲ್ಲಿನ ಡೊಂಬರು ವಿಜಯನಗರ ಪತನಾನಂತರದ ಆಧುನಿಕಪೂರ್ವ ಕಾಲಘಟ್ಟದಲ್ಲಿ ನೆಲೆ ನಿಂತಿರಬಹುದೆಂದು ಊಹಿಸಬಹುದಾಗಿದೆ. ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಯಲ್ಲಿನ ಡೊಂಬರು ಮುಖ್ಯವಾಗಿ ವಿಜಯನಗರ ಸಾಮ್ರಾಜ್ಯದ ಜೊತೆ ತಮ್ಮ ಸಂಬಂಧವನ್ನು ಏರ್ಪಡಿಸಿಕೊಳ್ಳುತ್ತಾರೆ. ಈ ಎರಡೂ ಜಿಲ್ಲೆಗಳಲ್ಲಿನ ಡೊಂಬರು ವಿಜಯನಗರ ಸಾಮ್ರಾಜ್ಯದಲ್ಲಿ ಹಲವು ವೃತ್ತಿಗಳನ್ನು ನಿರ್ವಹಿಸಿದ್ದಾರೆ. ಇವರು ಸೈನಿಕರಾಗಿ, ಶಿಲ್ಪಿಗಳಾಗಿ, ಡೊಂಬರಾಟದ ಪ್ರದರ್ಶಕರಾಗಿ ವಿಜಯನಗರ ಕಾಲದ ಸಮಾಜಕ್ಕೆ ವಿಶಿಷ್ಟ ಸೇವೆ ಮಾಡಿರುವುದನ್ನು ಈ ಸಮಾಜದ ಹಿರಿಯರು ಹೇಳಿಕೊಳ್ಳುತ್ತಾರೆ. ಜೊತೆಗೆ ವಿಜಯನಗರ ಕಾಲದ ಶ್ರೀವೈಷ್ಣವ ಪಂಥದ ಅನುಯಾಯಿಗಳಾಗಿ ಮತ್ತು ಆನೆಗುಂದಿಯಲ್ಲಿನ ಶ್ರೀವೈಷ್ಣವ ಗುರು ಪರಂಪರೆಗೆ ಇವರು ಒಕ್ಕಲುಗಳಾಗಿರುವುದು ಇವರು ವಿಜಯನಗರ ಸಾಮ್ರಾಜ್ಯದ ಜೊತೆ ಹೊಂದಿದ್ದ ಸಂಬಂಧಕ್ಕೆ ಉದಾಹರಣೆಗಳಾಗಿವೆ. ಈ ಎರಡೂ ಜಿಲ್ಲೆಗಳಲ್ಲಿನ ಡೊಂಬರ ಮನೆಗಳಲ್ಲಿ ಸೈನಿಕರು ಬಳಸುತ್ತಿದ್ದ ಖಡ್ಗ, ಗುರಾಣಿಗಳು ಲಭ್ಯವಾಗಿವೆ. ಇನ್ನೊಂದು ಮುಖ್ಯವಾದ ಸಂಗತಿಯೆಂದರೆ ಅಂದಿನ ಬಳ್ಳಾರಿ ಜಿಲ್ಲೆಯಲ್ಲಿದ್ದ ಯರಬಳ್ಳಿ ಗ್ರಾಮದ ಡೊಂಬರು ಶಿಲ್ಪಿಗಳು. ಬಳಪದ ಕಲ್ಲಿನಿಂದ ಸುಂದರ ಮೂರ್ತಿಗಳನ್ನು ಕೆತ್ತುತ್ತಾರೆ. ಇವರು 'ತಾವು ವಿಜಯನಗರ ಕಾಲದಲ್ಲಿ ಶಿಲ್ಪಿಗಳಾಗಿದ್ದೆವು, ತಲೆಮಾರುಗಳಿಂದ ಈ ಶಿಲ್ಪಕಲೆಯು ತಮ್ಮ ಮುಖ್ಯ ಆರ್ಥಿಕ ಮೂಲವೂ ಆಗಿತ್ತು' ಎಂದು ಹೇಳಿಕೊಳ್ಳುತ್ತಾರೆ. ಇದರಿಂದಾಗಿ, ಡೊಂಬರಂತಹ ಸೇವಕ ಸಮುದಾಯವು ಆರ್ಥಿಕವಾಗಿ ಹಲವು ವೃತ್ತಿಗಳನ್ನು ರೂಢಿಸಿಕೊಂಡಿರುವ ಸಾಧ್ಯತೆಗಳಿವೆ. ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ಡೊಂಬರು ಇದೇ ಬಗೆಯ ಕುಶಲಕರ್ಮಿಗಳಾಗಿರುವುದನ್ನು ನಾವು ಈಗಾಗಲೇ ನೋಡಿದ್ದೇವೆ. ಕರ್ನಾಟಕದಲ್ಲಿ ಅದರಲ್ಲೂ ಮಧ್ಯ ಕರ್ನಾಟಕದ ಜಿಲ್ಲೆಗಳಾದ ಬಳ್ಳಾರಿ, ದಾವಣಗೆರೆ, ಶಿವಮೊಗ್ಗ, ಧಾರವಾಡ ಜಿಲ್ಲೆಗಳಲ್ಲಿನ ಡೊಂಬರು ವಿಜಯನಗರ ಕಾಲಘಟ್ಟದ ನಂತರ ಈಗ ತಾವು ವಾಸಿಸುತ್ತಿರುವ ಜಿಲ್ಲೆಗಳಿಗೆ ವಲಸೆ ಹೋಗಿದ್ದಾರೆ. ಮತ್ತು ಈ ಜಿಲ್ಲೆಗಳ ಗುಡ್ಡಗಾಡು ಪ್ರದೇಶಗಳಲ್ಲಿ ನೆಲೆನಿಂತು ಕೃಷಿಯಲ್ಲಿ ತೊಡಗಿದ್ದಾರೆ. ಈ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಡೊಂಬರು ಯಾರೂ ಬಳಸದ ಮತ್ತು ಅಷ್ಟಾಗಿ ಫಲವತ್ತಾಗಿಲ್ಲದ ಬಯಲುಸೀಮೆಯ ಗುಡ್ಡಗಾಡು ಪ್ರದೇಶಗಳಲ್ಲಿ ಕೃಷಿಯನ್ನು ರೂಢಿಸಿಕೊಂಡು ಬದುಕುತ್ತಿದ್ದಾರೆ. ಪ್ರಾಯಶಃ ಇವರು ೧೦೦-೧೫೦ ವರ್ಷಗಳ ಹಿಂದೆ ನೆಲೆನಿಂತಿರುವುದಕ್ಕೆ ಅವರೇ ಹೇಳುವ ಐತಿಹ್ಯಗಳಲ್ಲಿ ಸಾಕ್ಷ್ಯಗಳು ಸಿಗುತ್ತವೆ.

ವಸಾಹತು ಆಡಳಿತದ ಸಂದರ್ಭದಲ್ಲಿ ನೆಲೆನಿಂತಿರುವ ಇವರು ಕೃಷಿಯಲ್ಲಿ ತೊಡಗುವುದು ಅನಿವಾರ್ಯವಾಗಿತ್ತು. ಏಕೆಂದರೆ ಕಂಪನಿ ಆಡಳಿತವು ಅಲೆಮಾರಿತ್ವವನ್ನೇ ನಿಷೇಧಿಸಿತ್ತು. ಕ್ರಿಮಿನಲ್ ಟ್ರೈಬ್ಸ್ ಎಂದು ಪರಿಗಣಿಸಲ್ಪಟ್ಟ ಅಲೆಮಾರಿಗಳನ್ನು ಕಂಪನಿ ಆಡಳಿತವು ನೆಲೆನಿಲ್ಲಿಸಲು ಮತ್ತು ತನ್ನ ಆಡಳಿತದ ಕಾನೂನು ಚೌಕಟ್ಟಿನೊಳಗೆ ಈ ಅಲೆಮಾರಿಗಳು ಬದುಕುವಂತೆ ಮಾಡಲು ಯತ್ನಿಸಿತು. ಇದಕ್ಕಾಗಿ ಅಲೆಮಾರಿತ್ವವನ್ನೇ ಅಪರಾಧ ಎಂದು ಕಂಪನಿ ಆಡಳಿತ ಪರಿಗಣಿಸಿಬಿಟ್ಟಿತು. ಇಂತಹ ಅಲೆಮಾರಿಗಳನ್ನು

ಕಂಪನಿ ಆಡಳಿತದ ಸೈನ್ಯ ಮತ್ತು ಪೋಲಿಸರು ಇನ್ನಿಲ್ಲದಂತೆ ಹಿಂಸಿಸಿದರು. ಇಂತಹ ಸಂದರ್ಭದಲ್ಲಿ ಹಲವು ಅಲೆಮಾರಿಗಳು ಮುಖ್ಯವಾಹಿನಿಗೆ ದೂರವಿರುವ ಅಜ್ಞಾತ ಗುಡ್ಡಗಾಡು ಪ್ರದೇಶಗಳಲ್ಲಿ ನೆಲೆನಿಲ್ಲುವಂತಾಯಿತು. ಜೊತೆಗೆ ಇವರು ಕೃಷಿಕರಾಗಿ ಬದಲಾಗುವ ಅನಿವಾರ್ಯತೆಯೂ ಬಂದೊದಗಿತ್ತು. ಡೊಂಬರು ಕರ್ನಾಟಕದಲ್ಲಿ 'ಕ್ರಿಮಿನಲ್ ಟ್ರೈಬ್' ಎಂದು ಪರಿಗಣಿಸಲ್ಪಟ್ಟಿದ್ದರು. ಇವರೂ ಸಹ ಕರ್ನಾಟಕದ ವಿವಿಧ ಜಿಲ್ಲೆಗಳ ಅಜ್ಞಾತ ಗುಡ್ಡಗಾಡು ಪ್ರದೇಶಗಳಲ್ಲಿ ನೆಲೆನಿಂತರು. ಆದರೆ ನೆಲೆನಿಂತ ಇವರಿಗೆ ಸಿಕ್ಕ ಭೂಮಿಯು ಫಲವತ್ತಾಗಿರಲಿಲ್ಲ. ಮತ್ತು ವೃತ್ತಿಪರ ಕೃಷಿಕರಾಗುವುದಕ್ಕೆ ಇವರು ಅನೇಕ ವರ್ಷಗಳನ್ನೇ ಕಳೆದಿದ್ದಾರೆ. ಆದರೆ ಇವರಿಗೆ ಸಿಕ್ಕ ಭೂಮಿಯ ಪ್ರಮಾಣ ಚಿಕ್ಕದು ಮತ್ತು ಫಲವತ್ತತೆ ಇಲ್ಲದ ಕುರುಚಲು ಕಾಡಿದ್ದ ಬಂಜರು ಭೂಮಿ. ಜೊತೆಗೆ ಸ್ಥಳೀಯ ಭೂಮಾಲಿಕರ ಕಿರುಕುಳದಿಂದ ಅನೇಕರು ತಾವು ಸಾಗು ಮಾಡಿದ್ದ ಕೃಷಿಭೂಮಿಯನ್ನು ಕಳೆದುಕೊಂಡಿದ್ದಾರೆ. ಬಡತನ ಮಿತಿಮೀರಿದಾಗ ತಾವು ಸಾಗು ಮಾಡಿದ್ದ ಬಂಜರು ಭೂಮಿಯನ್ನೇ ಮಾರಿಕೊಂಡಿದ್ದಾರೆ. ಇಲ್ಲವೆ ವಿಪರೀತ ಬಡ್ಡಿಯ ಸಾಲಗಳಿಗೆ ತಮ್ಮ ಕೃಷಿ ಭೂಮಿಯನ್ನು ಬಿಟ್ಟುಕೊಟ್ಟಿದ್ದಾರೆ. ನಾನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಜಿಲ್ಲೆಗಳಲ್ಲಿ ಡೊಂಬರು ಅತ್ಯಂತ ಚಿಕ್ಕ ಹಿಡುವಳಿದಾರರಾಗಿದ್ದಾರೆ.

ನೆಲೆನಿಂತ ಡೊಂಬರು ಸ್ಥಳೀಯ ಪ್ರಬಲ ಸಮುದಾಯಗಳ ಜೊತೆ ಬದುಕುವುದು ಅನಿವಾರ್ಯವಾಗಿತ್ತು. ಮತ್ತು ಈ 'ಮುಖ್ಯವಾಹಿನಿಯ' ಸಂಸ್ಕೃತಿಯ ಕೆಲವು ಅಂಶಗಳ್ನು ಒಳಗೊಳ್ಳುವುದೂ ಅನಿವಾರ್ಯವಾಗಿತ್ತು. ಏಕೆಂದರೆ ಅಲೆಮಾರಿ ಪರಂಪರೆಯಿಂದ ತಮಗೆ ಆರೋಪಿಸಲ್ಪಟ್ಟಿದ್ದ ಹೀನ ಸಾಮಾಜಿಕ ಸ್ಥಾನಮಾನಗಳನ್ನು ಇವರು ಉತ್ತಮ ಪಡಿಸಿಕೊಳ್ಳಬೇಕಿತ್ತು. ಸ್ಥಳೀಯ ಪ್ರಬಲ ಸಮುದಾಯಗಳ ನಡುವೆ ತಲೆ ಎತ್ತಿ ಬದುಕುವ ಆತ್ಮ ಪ್ರತ್ಯಯದ ಅಗತ್ಯ ಈ ನೆಲೆನಿಂತ ಡೊಂಬರಿಗೆ ಅಗತ್ಯವಾಗಿತ್ತು. ಇದರಿಂದಾಗಿ ತಮ್ಮ ಅನೇಕ ಪಾರಂಪರಿಕ ಚಹರೆಗಳನ್ನು ಡೊಂಬರು ಇಲ್ಲವಾಗಿಸಿಕೊಂಡಿರುವ ಸಾಧ್ಯತೆಗಳಿವೆ. ವರ್ತಮಾನದಲ್ಲಿ ತಮ್ಮ ಆತ್ಮಪ್ರತ್ಯಯವನ್ನು ಉದ್ದೀಪಿಸಿಕೊಳ್ಳಲು, ನೆಲೆನಿಂತ ಡೊಂಬರು ತಮ್ಮ ಪರಂಪರೆಯನ್ನು 'ದ್ವೇಷಿಸುವ' ಅನಿವಾರ್ಯತೆ ಏರ್ಪಟ್ಟಿತ್ತು. ಇವರು 'ಆತ್ಮದ್ವೇಷದ ಮೂಲಕ ಆತ್ಮಪ್ರತ್ಯಯವನ್ನು' ಪಡೆಯಲೆತ್ನಿಸಿದವರು. ಇಲ್ಲಿ ಡೊಂಬರ ಸಮುದಾಯ ವಾಸಿಸುತ್ತಿರುವ ಗ್ರಾಮವೊಂದರ ಆಧುನಿಕ ಕಾಲಘಟ್ಟದ ಸ್ಥಿತ್ಯಂತರಗಳನ್ನು ವಿವರಿಸುವುದರ ಮೂಲಕ ಡೊಂಬರ ವರ್ತಮಾನದ ಸ್ಥಿತಿಗಳನ್ನು ಅರ್ಥಮಾಡಿಕೊಳ್ಳಬಹುದೆಂದು ಕಾಣುತ್ತದೆ.

ಅಂದಿನ ಬಳ್ಳಾರಿ ಜಿಲ್ಲೆಯಲ್ಲಿದ್ದ ಮತ್ತು ಈಗ ದಾವಣಗೆರೆ ಜಿಲ್ಲೆಯಲ್ಲಿನ ಹರಪನಹಳ್ಳಿ ತಾಲೂಕಿನ ಯರಬಳ್ಳಿ ಗ್ರಾಮದಲ್ಲಿ ಡೊಂಬರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದಾರೆ. (ಇದು ಈ ಪ್ರಬಂಧದ ಲೇಖಕನ ಹುಟ್ಟೂರು ಸಹ ಹೌದು, ಇಲ್ಲಿ ನಾನು ಬಾಲ್ಯದಿಂದ ಕಂಡ ಹಲವು ಸಂಗತಿಗಳನ್ನು ಸ್ಥೂಲವಾಗಿ ವಿವರಿಸಲು ಯತ್ನಿಸಿದ್ದೇನೆ.) ಯರಬಳ್ಳಿ ಗ್ರಾಮದಲ್ಲಿ ಶೇ. ೮೫ ಭಾಗ ಡೊಂಬರು ವಾಸವಾಗಿದ್ದರೂ ಸಹ, ಅಲ್ಲಿ ಬದುಕುತ್ತಿರುವ ಶೇ ೧೫ ಭಾಗದ ಲಿಂಗಾಯ್ತ, ಕುರುಬ ಮತ್ತು ಬೇಡರ ಸಮುದಾಯಗಳಿಗೆ ಡೊಂಬರು ಅಸ್ಪೃಶ್ಯರೇ ಆಗಿದ್ದರು. ದೇವಾಲಯದ ಹೊರ ಆವರಣಕ್ಕೆ ಮಾತ್ರ ಡೊಂಬರಿಗೆ ಪ್ರವೇಶವಿತ್ತು. ಯರಬಳ್ಳಿ

ಎಂಬ ಈ ಗ್ರಾಮದಲ್ಲಿ ಸಿದ್ದೇಶ್ವರ, ಆಂಜನೇಯ ಮತ್ತು ದುಗ್ಗಮ್ಮನ ದೇವಾಲಯಗಳಿವೆ. ಸಿದ್ದೇಶ್ವರನ ಪೂಜಾರಿಗಳು ಲಿಂಗಾಯ್ತರು. ಆಂಜನೇಯನ ಪೂಜಾರಿಗಳು ಬೇಡರು. ಇನ್ನು ಡೊಂಬರ ದೇವತೆ ದುರುಗಮ್ಮನಿಗೆ ದೇವಾಲಯವಿಲ್ಲ. ಊರಿನ ಮುಖ್ಯ ರಸ್ತೆಯ ಬದಿಯಲ್ಲಿರುವ ದೊಡ್ಡ ಬೇವಿನ ಮರದ ಬುಡದಲ್ಲಿ ನಾಲ್ಕಾರು ಕಲ್ಲುಗಳಿಗೆ ಸುಣ್ಣ ಬಳಿದು ಅವನ್ನೇ ದುರುಗಮ್ಮ ಎಂದು ಡೊಂಬರು ಪೂಜಿಸುತ್ತಾರೆ. ಈ ದೇವತೆಗೆ ದೇವಸ್ಥಾನವಿಲ್ಲ. ಜೊತೆಗೆ ಪೂಜಾರಿಯೂ ಇಲ್ಲ. ಇನ್ನು ಗಾಳೆಮ್ಮ ಎಂಬ ದೇವತೆಯನ್ನು ಸುಗ್ಗಿಯ ಸಂದರ್ಭದಲ್ಲಿ ಮಾತ್ರ ಡೊಂಬರು ಪೂಜಿಸುತ್ತಾರೆ. ಆಗ ಹೊಂಗೆ ಸೊಪ್ಪಿನಿಂದ ತಾತ್ಕಾಲಿಕವಾಗಿ ಹೊಲವೊಂದರಲ್ಲಿ ಗಾಳೆಮ್ಮನಿಗೆ ಚಿಕ್ಕ ಗುಡಿಸಲು ಹಾಕಲಾಗುತ್ತದೆ. ಮತ್ತು ಆಕಾರವೇ ಇಲ್ಲದ, ಆ ತಕ್ಷಣಕ್ಕೆ ಮಾಡಿದ ಮಣ್ಣಿನ ಮೂರ್ತಿಯನ್ನು ಈ ಗುಡಿಸಲಲ್ಲಿ ಇಡಲಾಗುತ್ತದೆ. ಅದೇ ದಿನ ಸಂಜೆ ಗಾಳೆಮ್ಮನಿಗೆ ಪ್ರಾಣಿ ಬಲಿ ಕೊಟ್ಟು, ಡೊಂಬರೆಲ್ಲ ಆ ಗುಡಿಸಲು ಮುಂದೆ ಸೇರಿ ಸಾಮೂಹಿಕ ಭೋಜನ ಮಾಡುತ್ತಾರೆ. ಆ ನಂತರ ಆ ಗುಡಿಸಲು ಹಾಗೆಯೇ ದಿನಕಳೆದಂತೆ ಇಲ್ಲವಾಗಿ ಬಿಡುತ್ತದೆ. ಇದರ ಜೊತೆಗೆ ಡೊಂಬರು ಇದೇ ಊರಿನಲ್ಲಿ ಹುಲಿಗೆಮ್ಮನನ್ನು ಪೂಜಿಸುತ್ತಾರೆ. ಈ ದೇವತೆಗೆ 'ಹಸಿರು ಮರಿ' ಎಂದು ಕುರಿಯನ್ನು ಬಲಿಕೊಡಲಾಗುತ್ತದೆ. ಇದು ಬಿತ್ತನೆ ಮುಗಿದು ಹೊಲಗಳಲ್ಲಿ ಹಸಿರು ಮೂಡುವ ಸಂದರ್ಭ. ಈ ಹೊತ್ತಿನಲ್ಲಿ ಡೊಂಬರು ಹಾದಿ ಬದಿಯಲ್ಲಿ ಅಲ್ಲಿಯೇ ಇರುವ ಕೆಲವು ಕಲ್ಲುಗಳನ್ನು ಆಯ್ದು ಸುಣ್ಣ ಬಳಿದು ಅದನ್ನೇ ಹುಲಿಗೆಮ್ಮನೆಂದುಕೊಂಡು ಆ ದೇವತೆಗೆ 'ಹಸಿರು ಮರಿ'ಯನ್ನು ಬಲಿಕೊಡುತ್ತಾರೆ. ಇದು ಬೆಳೆಗಳು ಸಮೃದ್ಧವಾಗಿ ಬರಲೆಂಬ ಆಶಯವಿರುವ ಆಚರಣೆ. ಗಾಳೆಮ್ಮನ ಹಬ್ಬ ಮಾತ್ರ ವಿಧಿವತ್ತಾದ ಆಚರಣೆ. ಇಡೀ ಊರಿನ ಡೊಂಬರು ಈ ಹಬ್ಬದಲ್ಲಿ ಪಾಲ್ಗೊಳ್ಳಲೇಬೇಕು. ಊರಿನ ಎಲ್ಲಾ ಡೊಂಬರ ಮನೆಗಳ ಸದಸ್ಯರಿಗೆ ಸಮಪಾಲಿನಂತೆ ಕಡಿದ ಕುರಿಗಳ ಮಾಂಸವನ್ನು ಹಂಚಲಾಗುತ್ತದೆ. ಎಲ್ಲರೂ ತಮ್ಮ ಪಾಲಿನ ಮಾಂಸವನ್ನು ಕೊಂಡುಕೊಳ್ಳಲೇಬೇಕು. ಜೊತೆಗೆ ಈ ಆಚರಣೆಯಲ್ಲಿ ಪಾಲ್ಗೊಳ್ಳಬೇಕು. ಇದು ಡೊಂಬರ ಸಮುದಾಯದ ಗಣ ವ್ಯವಸ್ಥೆಯನ್ನು ಪ್ರತಿನಿಧಿಸುವ ಹಬ್ಬ.

ಸದರಿ ಊರಿನಲ್ಲಿ ಡೊಂಬರು ೨೦-೨೫ ವರ್ಷಗಳ ಹಿಂದೆ ಸಾರ್ವಜನಿಕವಾಗಿ ಅಸ್ಪೃಶ್ಯತೆಯನ್ನು ಅನುಭವಿಸುತ್ತಿದ್ದರು. ಲಿಂಗಾಯತರೇ ನಡೆಸುವ ಚಹ ಅಂಗಡಿಗಳಲ್ಲಿ ಡೊಂಬರಿಗೆ ಪ್ರತ್ಯೇಕ ಲೋಟಗಳಿರುತ್ತಿದ್ದವು. ಅಕಸ್ಮಾತ್ ಇವರು ಲಿಂಗಾಯಿತರ ಮನೆಗಳ ಮದುವೆ ಇತ್ಯಾದಿ ಆಚರಣೆಗಳ ಸಂದರ್ಭದಲ್ಲಿ ಊಟಕ್ಕೆ ಹೋದರೆ, ತಮ್ಮದೇ ಮನೆಯ ತಟ್ಟೆಯನ್ನು ಊಟ ಮಾಡಲು ತೆಗೆದುಕೊಂಡು ಹೋಗಬೇಕಿತ್ತು. ಮನೆ ಮುಂದಿನ ಕಟ್ಟೆಯ ಕೆಳಗೆ ಡೊಂಬರು ಊಟ ಮಾಡಬೇಕಿತ್ತು. ಈ ಊರಿನ ಎಲ್ಲ ಸಮುದಾಯದವರಿಗೆ ನೀರು ಸೇದಲು ಇದ್ದುದು ಒಂದೇ ಬಾವಿ. ಊರಲ್ಲಿದ್ದ ಈ ಸೇದುವ ಬಾವಿಯ ಎರಡು ಕಡೆಗಳಿಂದ ನೀರನ್ನು ಸೇದುವ ವ್ಯವಸ್ಥೆ ಇತ್ತು. ಒಂದು ಕಡೆಯಲ್ಲಿ ಲಿಂಗಾಯಿತರು ಮತ್ತು ಇತರರು ನೀರನ್ನು ಸೇದಿದರೆ, ಡೊಂಬರು ಇನ್ನೊಂದು ಕಡೆ ನೀರು ಸೇದಬೇಕಿತ್ತು. ಅಪ್ಪಿತಪ್ಪಿಯೂ ಡೊಂಬರು ಲಿಂಗಾಯ್ತರ ಕೊಡಗಳನ್ನು ಮುಟ್ಟುವಂತಿರಲಿಲ್ಲ. ಅಕಸ್ಮಾತ್ ಯಾರಾದರೂ ಹೀಗೆ ಮುಟ್ಟಿಬಿಟ್ಟರೆ ಲಿಂಗಾಯಿತರು ತಮ್ಮ ಕೊಡದ ನೀರನ್ನೆಲ್ಲ ಚೆಲ್ಲಿ ಮತ್ತೆ ಬಾವಿಯಿಂದ ನೀರು ಸೇದಿಕೊಳ್ಳುತ್ತಿದ್ದರು. ನಂತರ ಊರಿನಲ್ಲಿ ನೀರು

ಸೇದುವ ಜನ ಜಾಸ್ತಿಯಾದ ಮೇಲೆ ಒಂದೇ ಗಡಣಕ್ಕೆ ಲಿಂಗಾಯಿತರು ಮತ್ತು ಡೊಂಬರು ಬೇರೆ ಬೇರೆ ಹಗ್ಗಗಳನ್ನು ಹಾಕಿ ನೀರು ಸೇದುವ ವ್ಯವಸ್ಥೆ ಜಾರಿಗೆ ಬಂದಿತು. ಲಿಂಗಾಯ್ತರ ಹಗ್ಗದಲ್ಲಿ ಲಿಂಗಾಯಿತರು, ಡೊಂಬರ ಹಗ್ಗದಲ್ಲಿ ಡೊಂಬರು ನೀರು ಸೇದುವ ಕ್ರಮ ರೂಢಿಯಾಯಿತು. ಊರಿನ ಮತ್ತು ಪಕ್ಕದ ಊರಿನ ಲಿಂಗಾಯಿತರು ಡೊಂಬರನ್ನು 'ಕಪ್ಪುಜನ' ಎಂದೇ ಕರೆಯುತ್ತಿದ್ದರು. ಈಗಲೂ ಈ ಪದ ಬಳಕೆ ಅಲ್ಲಲ್ಲಿ ಇರುವುದುಂಟು. ತಮಾಷೆಯೆಂದರೆ ಈ ಊರಿನಲ್ಲಿ ಡೊಂಬರು, ಕುರುಬ ಮತ್ತು ಬೇಡ ಸಮುದಾಯಕ್ಕೂ ಅಸ್ಪೃಶ್ಯರಾಗಿದ್ದರು. ಡೊಂಬರ ಅಂದಿನ ಮುಖಂಡರು ತಮ್ಮ ಅಸ್ಪೃಶ್ಯತೆಯನ್ನು ಒಪ್ಪಿಕೊಳ್ಳುತ್ತಿದ್ದರು. ಲಿಂಗಾಯಿತರ ಸಾಮಾಜಿಕ ಯಜಮಾನ್ಯವನ್ನು ಡೊಂಬರು ಪ್ರಶ್ನಿಸದೆ ಒಪ್ಪಿಕೊಂಡು ಬಿಟ್ಟಿದ್ದರು. 'ದೇವಾಲಯದ ಒಳಕ್ಕೆ ಪ್ರವೇಶಿಸಿಬಿಟ್ಟರೆ ದೇವರಿಂದ ಕೇಡಾಗುತ್ತದೆ' ಎಂದು ಭಾವಿಸಿದ್ದರು. 'ತಮ್ಮಂತಹ ಕಪ್ಪು ಜನರ ಮನೆಯಲ್ಲಿ ಲಿಂಗಾಯಿತರು ನೀರು, ಊಟ ಇತ್ಯಾದಿಗಳನ್ನು ಸ್ವೀಕರಿಸಬಾರದು' ಎಂಬ ನಿಯಮಗಳನ್ನು ಹಾಕಿಕೊಂಡು ಬಿಟ್ಟಿದ್ದರು. ಡೊಂಬರ ಶವಸಂಸ್ಕಾರಗಳಲ್ಲಿ ಲಿಂಗಾಯಿತರು ಭಾಗವಹಿಸುತ್ತಿರಲಿಲ್ಲ. ಜೊತೆಗೆ ಇವರ ಮದುವೆಗಳಲ್ಲಿ ಲಿಂಗಾಯಿತರು ಭಾಗವಹಿಸಿದರೂ ಊಟ ಮಾಡುತ್ತಿರಲಿಲ್ಲ. ಡೊಂಬರ ಮದುವೆಗಳೂ ಸಹ ಆಗ ಆರಂಭವಾಗುತ್ತಿದ್ದುದೇ ಕುರಿ ಬಲಿಕೊಡುವುದರ ಮೂಲಕ. (ಈಚೆಗೆ ಈ ಪದ್ಧತಿ ನಿಂತಿದೆ) ಈ ಊರಲ್ಲಿನ ಡೊಂಬರು ಇನ್ನೊಂದು ಪದ್ಧತಿಯನ್ನು ಆಚರಿಸುತ್ತಿದ್ದರು. ಡೊಂಬರು ಲಿಂಗಾಯಿತರಿಗೆ ಅಸ್ಪೃಶ್ಯರಾದರೆ, ಅಕ್ಕಪಕ್ಕದ ಊರಿನ ಮಾದಿಗರು ಡೊಂಬರಿಗೆ ಅಸ್ಪೃಶ್ಯರು. ಡೊಂಬರು ಪಕ್ಕದ ಊರಿನ ಮಾದಿಗರನ್ನು 'ಮನೆಮಕ್ಕಳನ್ನಾಗಿ' ಗುರುತಿಸಿಕೊಂಡಿದ್ದೂ ಉಂಟು. ಆದರೆ ಡೊಂಬರು ಮಾದಿಗರನ್ನು ಬೇರೆ ಮೇಲ್ಜಾತಿಯವರು ಪರಿಗಣಿಸಿದಂತೆ ತೀವ್ರವಾದ ಅಸಮಾನತೆಯಿಂದ ಪರಿಗಣಿಸುತ್ತಿರಲಿಲ್ಲ. ಕೆಲವು ಆಚರಣೆಗಳಲ್ಲಿ ಅದರಲ್ಲೂ ಮದುವೆ, ಮರಣದ ಸಂದರ್ಭಗಳಲ್ಲಿ ಮಾದಿಗರು ಡೊಂಬರ ಮನೆಗಳಲ್ಲಿ ಕೆಲವು ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದರು. ಈ ಕರ್ತವ್ಯಗಳಿಗೆ ಪ್ರತಿಯಾಗಿ ಮಾದಿಗರಿಗೆ ಡೊಂಬರು ಗೌರವಾನ್ವಿತವಾಗಿಯೇ ಉಡುಗೊರೆಗಳನ್ನು ನೀಡುತ್ತಿದ್ದರು. ಆದರೆ ಡೊಂಬರು ಹಲವು ಸಂದರ್ಭಗಳಲ್ಲಿ ತಾವು ಮಾದಿಗರಿಗಿಂತ ಮೇಲಿನವರೆಂದೇ ಭಾವಿದ್ದರು. ಆದರೆ ಮೇಲೆ ನಾನು ವಿವರಿಸಿದ ಹಲವು ಸಾಮಾಜಿಕ ಸನ್ನಿವೇಶಗಳು ಕಾಲ ಕ್ರಮೇಣ ಬದಲಾದವು.

೧೯೫೨ರಲ್ಲಿ ಯರಬಳ್ಳಿ ಗ್ರಾಮದಲ್ಲಿ ಸರಕಾರಿ ಶಾಲೆ ಪ್ರಾರಂಭವಾಯಿತು. ಅಲ್ಲಿ ಶ್ರೀ ತಿಮ್ಮಪ್ಪ ಎನ್ನುವ ಡೊಂಬರ ಸಮುದಾಯದ ವ್ಯಕ್ತಿ ಮೊದಲು ಶಿಕ್ಷಕರಾಗಿ ಬಂದರು. ಆನಂತರ ಶ್ರೀ ನಂಜಪ್ಪ ಎಂಬ ಲಿಂಗಾಯಿತ ಜಾತಿಯವರು ಮತ್ತು ಡೊಂಬರ ಸಮುದಾಯದವರೇ ಆದ ಶ್ರೀ ಸಿದ್ದಪ್ಪನವರೂ ಇಲ್ಲಿ ಶಿಕ್ಷಕರಾಗಿ ನೇಮಕವಾದರು. ಈ ಮೂರೂ ಜನ ಯರಬಳ್ಳಿ ಎಂಬ ಕುಗ್ರಾಮದ ಶಾಲೆಯನ್ನು ಮಾದರಿಯಾಗಿ ರೂಪಿಸಿದರು. ಪ್ರಾಯಶಃ ಈ ಮೂರೂ ಜನ ಶಿಕ್ಷಕರು ನಿಸ್ವಾರ್ಥದಿಂದ ಸೇವೆ ಸಲ್ಲಿಸದೇ ಹೋಗಿದ್ದರೆ, ಯರಬಳ್ಳಿ ಗ್ರಾಮದ ಡೊಂಬರ ಸಾಮಾಜಿಕಾರ್ಥಿಕ ಸ್ಥಿತಿಗತಿಗಳು ಈವತ್ತು ಇರುವಂತೆ ಉತ್ತಮವಾಗಿರುತ್ತಿರಲಿಲ್ಲ. ಮೇಲೆ ಉಲ್ಲೇಖಿಸಲ್ಪಟ್ಟ ಮೂರು ಜನ ಶಿಕ್ಷಕರು ಕೇವಲ ಉಪಾಧ್ಯಾಯರಾಗಿ ಮಾತ್ರ ಸೇವೆ ಸಲ್ಲಿಸದೆ, ಸಮಾಜ ಸುಧಾರಕರಂತೆ ಇಡೀ ಗ್ರಾಮದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿದರು. ನನ್ನ ಪ್ರಕಾರ ಈ

ಊರಿನಲ್ಲಿ ಪ್ರಾರಂಭವಾದ ಶಾಲೆ ಗ್ರಾಮದ ಒಟ್ಟಾರೆಯ ಚಿತ್ರಣವನ್ನು ಬದಲಿಸಿತು. ಆ ಕಾಲಘಟ್ಟದಲ್ಲಿ ಡೊಂಬರ ಸಮುದಾಯದ ಜನರಿಗೆ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದು ಸಾಧ್ಯವಾಗುವ ಸಂಗತಿಯಾಗಿರಲಿಲ್ಲ. ತಾವು ತಮ್ಮ ಮಕ್ಕಳನ್ನು ಕರೆದುಕೊಂಡು ಊರಿನ ಭೂಮಾಲಿಕರ ಹೊಲಗಳಲ್ಲಿ ಕೂಲಿಗೆ ಹೋಗುತ್ತಿದ್ದರು. ಇಲ್ಲವೆ, ಯಾವಾಗಲೂ ಕೂಲಿ ಲಭ್ಯವಾಗುತ್ತಿದ್ದ ಮಲೆನಾಡಿನ ಕಾಫಿ ತೋಟಗಳಿಗೆ ವಲಸೆ ಹೋಗಿಬಿಡುತ್ತಿದ್ದರು. ಭೂರಹಿತ ಡೊಂಬರು ಕೂಲಿಯನ್ನೇ ತಮ್ಮ ಜೀವನಾಧರವಾಗಿ ಅವಲಂಬಿಸಿದ್ದರು. ಆದರೆ ಮೇಲೆ ಉಲ್ಲೇಖಿಸಲ್ಪಟ್ಟ ಮೂರು ಜನ ಶಿಕ್ಷಕರು, ಈ ಜನರಿಗೆ ಮಕ್ಕಳಿಗೆ ಕೊಡಿಸಬೇಕಾದ ಶಿಕ್ಷಣದ ಮಹತ್ವವನ್ನು ಮನವರಿಕೆ ಮಾಡಿಕೊಟ್ಟರು. ಶಾಲೆಗೆ ಸೇರಿದ್ದ ಹುಡುಗನೊಬ್ಬ ಕೂಲಿಗೆ ಹೋದನೆಂದರೆ ಅವನನ್ನು ಅಕ್ಷರಶಃ ಹೊತ್ತು ತರಲು ಬೇರೆ ಹುಡುಗರನ್ನು ಕಳುಹಿಸಲಾಗುತ್ತಿತ್ತು. ಹೀಗೆ ಕೂಲಿ ಹೋಗುತ್ತಿದ್ದ ಹುಡುಗನ ತಂದೆ ತಾಯಿಗಳ ಆರ್ಥಿಕ ಸ್ಥಿತಿಗಳನ್ನು ಉತ್ತಮ ಪಡಿಸಲು ಪ್ರತ್ನಿಸಲಾಗುತ್ತಿತ್ತು. ಈ ಮೂರು ಜನ ಶಿಕ್ಷಕರು ಪಕ್ಕದ ಹಳ್ಳಿಯ ಲಿಂಗಾಯ್ತ ಭೂಮಾಲಿಕರೊಬ್ಬರಿಂದ ಕಡಿಮೆ ಬಡ್ಡಿಗೆ ಸಾಲ ಕೊಡಿಸಿ ಶಾಲೆಗೆ ಬರುವ ಹುಡುಗನ ತಂದೆ ತಾಯಿಗಳ ಕಷ್ಟಗಳಲ್ಲಿ ನೆರವಾಗುತ್ತಿದ್ದರು. ಜೊತೆಗೆ ವಯಸ್ಕರಿಗೆ ರಾತ್ರಿ ಶಾಲೆಯನ್ನು ನಡೆಸಿ ಅವರನ್ನು ಸಾಕ್ಷರರನ್ನಾಗಿ ಮಾಡಲು ಯತ್ನಿಸಿದರು. ಊರಿಗೆ ಸರಿಯಾಗಿ ರಸ್ತೆ ಇಲ್ಲದ ಸಂದರ್ಭದಲ್ಲಿ ಶಿಕ್ಷಕರು, ವಿದ್ಯಾರ್ಥಿಗಳು ಗ್ರಾಮಸ್ಥರೆಲ್ಲ ಸೇರಿ ಊರಿಗೆ ರಸ್ತೆ ಮಾಡಿದ್ದಿದೆ. ಆರೋಗ್ಯದ ಕುರಿತ ಅರಿವು, ಕುಡಿತದ ಚಟದಿಂದ ದೂರ ಇರುವುದು, ಸಾಕ್ಷರತೆಯನ್ನು ಹೆಚ್ಚಿಸುವ ಕುರಿತು ಈ ಮೂರೂ ಜನ ವಿದ್ಯಾವಂತರು ಊರಲ್ಲಿ ನಿರಂತರವಾಗಿ ಶ್ರಮಿಸಿದರು. ಜೊತೆಗೆ ಬ್ಯಾಂಕ್ ವ್ಯವಹಾರಗಳನ್ನು ನಿಭಾಯಿಸುವಲ್ಲಿ ಮತ್ತು ಸರಕಾರದ ಯೋಜನೆಗಳನ್ನು ಗ್ರಾಮಕ್ಕೆ ತರುವಲ್ಲಿಯೂ ಇವರು ಪ್ರಮುಖ ಪಾತ್ರ ವಹಿಸಿದರು. ಇದರಿಂದ ಊರಿನ ಡೊಂಬರ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳೂ ಸುಧಾರಿಸಿದವು. ನಾನೇ ಒಮ್ಮೆ ಊರಿನ ಸಾಕ್ಷರತೆಯ ಪ್ರಮಾಣವನ್ನು ಸರ್ವೆ ಮಾಡಿದ್ದೆ. ೯೦ರ ದಶಕದಲ್ಲಿ ನಾನೇ ಆಸಕ್ತಿಯಿಂದ ಮಾಡಿದ ಈ ಸರ್ವೆ ಪ್ರಕಾರ ಊರಿನ ಸಾಕ್ಷರತೆಯು ಶೇ. ೯೫ ರಷ್ಟಿತ್ತು. ಪ್ರಾಯಶಃ ಆ ಕಾಲಘಟ್ಟದಲ್ಲಿ ಅಲೆಮಾರಿ ಸಮುದಾಯವೊಂದು ವಾಸಿಸುವ ಹಳ್ಳಿಯೊಂದರಲ್ಲಿ ಈ ಪ್ರಮಾಣದ ಸಾಕ್ಷರತೆ ಇದ್ದ ಉದಾಹರಣೆಗಳಿರಲಿಲ್ಲವೆಂದು ಕಾಣುತ್ತದೆ. ೯೦ರ ದಶಕದ ನಂತರ ಈ ಊರಿನ ಚಿತ್ರಣವೇ ಬೇರೆಯಾಯಿತು. ವಿದ್ಯಾವಂತ ಯುವಕರು ಸರಕಾರಿ ನೌಕರಿಗೆ ತೆರಳಿದರು. ಅವರ ಮನೆಗಳ ಆರ್ಥಿಕ ಸ್ಥಿತಿಗತಿಗಳು ಉತ್ತಮಗೊಂಡವು. ಕೇವಲ ಹುಲ್ಲುಗುಡಿಸಲುಗಳೇ ಇದ್ದ ಊರಿನಲ್ಲಿ ಹೆಂಚಿನ ಮನೆಗಳು ಕಟ್ಟಲ್ಪಟ್ಟವು. ಈ ದಶಕದಲ್ಲಿ ಊರಿಗೆ ವಿದ್ಯುತ್ ಬಂದಿತು. ಗ್ರಾಮ ಪಂಚಾಯ್ತಿ ಚುನಾವಣೆ ನಡೆದು ಮೀಸಲಾತಿಯ ಕಾರಣಕ್ಕಾಗಿ ಡೊಂಬರ ಸಮುದಾಯದ ವ್ಯಕ್ತಿಯೊಬ್ಬರು ಮಂಡಲ ಪಂಚಾಯ್ತಿಯ ಉಪಾಧ್ಯಕ್ಷರೂ ಆಗಿ ಆಯ್ಕೆಯಾದರು. ೧೯೫೨ರಲ್ಲಿ ಪ್ರಾರಂಭವಾದ ಶಾಲೆಯು ಮೂವತ್ತು ವರ್ಷಗಳ ನಂತರ ಫಲ ಕೊಡಲಾರಂಭಿಸಿತ್ತು. ಇದರ ಜೊತೆಗೆ ಡೊಂಬರು ಈ ಹಳ್ಳಿಯಲ್ಲಿ ರೂಢಿಸಿಕೊಂಡಿದ್ದ ಕರಕುಶಲ ಕಲೆ (ಮೂರ್ತಿ ಕೆತ್ತನೆ)ಯೂ ಆರ್ಥಿಕವಾಗಿ ಇವರು ಚೇತರಿಸಿಕೊಳ್ಳಲು ಸಹಾಯ ಮಾಡಿತು.

೯೦ ದಶಕದ ನಂತರ ಈ ಊರಿನ ಡೊಂಬರ ಸಾಮಾಜಿಕಾರ್ಥಿಕ ಸ್ಥಾನಮಾನಗಳು ಸ್ವಲ್ಪ ಉತ್ತಮಗೊಂಡವು. ಹೊರಗಿನ ಸಂಪರ್ಕಗಳು ಸಾಧ್ಯವಾದವು. ತಮ್ಮ ಊರಿನಲ್ಲೇ ತಾವು ಅಸ್ಪೃಶ್ಯರಾಗಿದ್ದ ಡೊಂಬರು ಸ್ವಾವಲಂಬಿಗಳಾದರು. ಆರ್ಥಿಕವಾಗಿ ಉತ್ತಮಗೊಂಡರು. ಆಗ ಲಿಂಗಾಯಿತರಾದಿಯಾಗಿ ಬೇರೆ ಸಮಾಜದವರು ಸಾರ್ವಜನಿಕವಾಗಿ ಡೊಂಬರನ್ನು ಅಸ್ಪೃಶ್ಯರಂತೆ ನಡೆಸಿಕೊಳ್ಳುತ್ತಿದ್ದ ಸಂದರ್ಭಗಳು ನಿಧಾನವಾಗಿ ಮರೆಯಾದವು. ಆದರೆ ಅಸ್ಪೃಶ್ಯತೆ ತೊಲಗಿ ಹೋಗಲಿಲ್ಲ. ಅಸ್ಪೃಶ್ಯತೆಯು ಸದರಿ ಊರಿನಲ್ಲಿ ಅತ್ಯಂತ ಸೂಕ್ಷ್ಮ ನೆಲೆಯಲ್ಲಿ ಆಚರಿಸಲ್ಪಡುತ್ತಿದೆ. ಆದರೆ ಸಾರ್ವಜನಿಕ ಸ್ಥಳಗಳಲ್ಲಿ ಆಚರಿಸಲ್ಪಡುತ್ತಿದ್ದ ಅಸ್ಪೃಶ್ಯತೆಯು ಇಂದು ಇಲ್ಲವಾಗಿದೆ. ಲಿಂಗಾಯಿತರು ಈಗ ಡೊಂಬರಂತೆ ಮಾಂಸ ತಿನ್ನುವುದನ್ನು ಮತ್ತು ಕುಡಿತವನ್ನು ರೂಢಿಸಿಕೊಂಡಿದ್ದಾರೆ. ಡೊಂಬರ ಮನೆಗಳಲ್ಲಿ ಕದ್ದು ಮುಚ್ಚಿ ಕೆಲವು ಸಲ ಮುಕ್ತವಾಗಿ ಊಟ ಮಾಡುವುದು ಮತ್ತು ಟೀ ಸೇವಿಸುವುದು ನಡೆದಿದೆ. ಡೊಂಬರ ಶವಸಂಸ್ಕಾರಗಳಲ್ಲಿ ಲಿಂಗಾಯಿತರು ಭಾಗವಹಿಸುತ್ತಾರೆ. ಮದುವೆ ಸಂದರ್ಭಗಳಲ್ಲಿ ಡೊಂಬರ ಜೊತೆ ಸಾಮೂಹಿಕ ಊಟದಲ್ಲಿ ಲಿಂಗಾಯಿತರು ಪಾಲ್ಗೊಳ್ಳುತ್ತಿದ್ದಾರೆ. ಆದರೆ ದೇವಾಲಯ ಪ್ರವೇಶ ಡೊಂಬರಿಗೆ ಇನ್ನೂ ನಿಷಿದ್ಧ. ಇಂದು ಈ ಊರಿನಲ್ಲಿ ಡೊಂಬರ ಕುಲವು ವ್ಯಕ್ತಿಗಳು ಆರ್ಥಿಕವಾಗಿ ಲಿಂಗಾಯಿತರನ್ನು ಮೀರಿ ಬೆಳೆದಿದ್ದಾರೆ. ಈ ಕಾರಣದಿಂದ ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಾನಮಾನಗಳೂ ಉತ್ತಮಗೊಂಡಿವೆ.

೯೦ರ ದಶಕದಲ್ಲಿ ವಿದ್ಯಾವಂತರಾಗಿ ನೌಕರಿ ಪಡೆದವರು ನಿಧಾನವಾಗಿ ತಾವು ಹುಟ್ಟಿ ಬೆಳೆದ ಊರನ್ನು ತ್ಯಜಿಸತೊಡಗಿದರು. ನೌಕರಿ ಪಡೆದು ಆರ್ಥಿಕವಾಗಿ ಉತ್ತಮ ಸ್ಥಿತಿಯನ್ನು ತಲುಪಿದ್ದ ಈ ಯುವಕರು ಒಂದು ಅರ್ಥದಲ್ಲಿ ದ್ವೀಪಗಳಂತೆ ಬೆಳೆದರು. ೬೦-೭೦ರ ದಶಕದಲ್ಲಿ ಮೇಲೆ ಉಲ್ಲೇಖಿಸಲ್ಪಟ್ಟ ಈ ಗ್ರಾಮದ ಮೂರು ಜನ ವಿದ್ಯಾವಂತರು ಹೇಗೆ ತಮ್ಮ ಹಳ್ಳಿಯ ಅಭಿವೃದ್ಧಿಗೆ ಕಾರಣರಾಗಿದ್ದರೋ, ಆ ಮಾರ್ಗವನ್ನು ಈ ವಿದ್ಯಾವಂತ ತರುಣರು ಅನುಸರಿಸಲಿಲ್ಲ. ಹೆಚ್ಚು ಸ್ವಾರ್ಥಿಗಳಾದರು. ಜೊತೆಗೆ ತಮ್ಮದೇ ಸಮುದಾಯದ ಬಡವರಿಗೆ ವಿಪರೀತ ಬಡ್ಡಿಯ ಸಾಲ ನೀಡಿ ಅವರ ಹೊಲ ಮನೆಗಳನ್ನು ವಶಪಡಿಸಿಕೊಳ್ಳುವ ಧಣಿಗಳಾಗಿ ರೂಪುಗೊಂಡರು. ಸ್ವಂತ ಅಣ್ಣ ತಮ್ಮಂದಿರಿಗೇ ಈ ನೌಕರಿ ಪಡೆದ ಯುವಕರು ಯಾವ ಸಹಾಯ ಮಾಡದೆ ಪಟ್ಟಣಗಳನ್ನು ಸೇರಿದರು. ಕೇವಲ ಒಂದೇ ತಲೆಮಾರಿನ ಅಂತರದಲ್ಲಿ ಈ ಗ್ರಾಮದ ಡೊಂಬರ ಸಮುದಾಯದ ಯೋಚನಾ ಕ್ರಮವೇ ಬದಲಾಗಿ ಹೋಯಿತು. ಆರ್ಥಿಕವಾಗಿ ಹೀನಾಯ ಸ್ಥಿತಿಯಲ್ಲಿದ್ದವರು ಸರಕಾರಿ ಸಂಬಳ ಸವಲತ್ತು ಪಡೆಯುತ್ತಿದ್ದಂತೆ ಪ್ರಬಲರಾಗಿ ಬಿಡುವುದು ಇಂಡಿಯಾವನ್ನು ಪ್ರಭಾವಿಸಿರುವ ಬಂಡವಾಳಶಾಹಿ ಆಧುನಿಕತೆಯ ಲಕ್ಷಣಗಳಲ್ಲೊಂದು. ಈ ದೇಶದ ಸಾಮಾಜಿಕ ಶೋಷಣೆಗಳು ಜಾತಿ ಜಾತಿಗಳ ನಡುವೆ ನಡೆದು ಬಂದಿವೆ. ಈವತ್ತೂ ಈ ದೌರ್ಜನ್ಯ ಮತ್ತು ಶೋಷಣೆಗಳು ಜೀವಂತವಾಗಿವೆ. ಆದರೆ ಆರ್ಥಿಕ ಶೋಷಣೆ ಈ ದೇಶದಲ್ಲಿ ವರ್ಗಾಧಾರಿತವಾದದ್ದು. ಸಾಮಾಜಿಕವಾಗಿ, ಶೋಷಣೆಯು ಮೇಲ್ಜಾತಿಗಳಿಂದ ಕೆಳಜಾತಿಗಳ ಮೇಲೆ ನಡೆಯುತ್ತದೆ. ಆದರೆ ಆರ್ಥಿಕ ಶೋಷಣೆಯು ಅತ್ಯಂತ ಸಂಕೀರ್ಣವಾದದ್ದು. ಜಾತಿಯೊಂದರಲ್ಲಿಯೇ ಬಡವ ಶ್ರೀಮಂತ ಎಂಬ ಕೆಟಗರಿಗಳು ರೂಪುಗೊಂಡಿವೆ. ಕೆಳಜಾತಿಗೆ ಸೇರಿದ ಶ್ರೀಮಂತನೊಬ್ಬ ಮೇಲ್ಜಾತಿಯ ಬಡವರನ್ನು ಶೋಷಣೆ ಮಾಡುವ ಸಂದರ್ಭಗಳು ಇಲ್ಲಿ

ನಡೆಯುತ್ತವೆ. ಹೀಗಾಗಿ ಶೋಷಕ ಮತ್ತು ಶೋಷಿತ ಎಂಬ ವರ್ಗಗಳು ಕಾಲದಿಂದ ಕಾಲಕ್ಕೆ ಏಕರೂಪವಾಗಿಲ್ಲ. ಅವು ಕಾಲದಿಂದ ಕಾಲಕ್ಕೆ ಬದಲಾಗುತ್ತ ಬಂದಿವೆ. ಕೆ.ವಿ.ನಾರಾಯಣ ಇದನ್ನು ಹೀಗೆ ವಿವರಿಸುತ್ತಾರೆ. 'ಸಂಸ್ಕೃತಿಯ ಪ್ರಧಾನತೆ ಹಾಗೂ ಇನ್ನೊಂದರ ಅಧೀನತೆ ಸಾಪೇಕ್ಷ ವಿವರಣೆಗಳು, ಹಾಗೂ ಕಾಲ ದೇಶಬದ್ಧ ಸಂಗತಿಗಳು. ಏಕೆಂದರೆ ಪ್ರಧಾನತೆಯಾಗಲೀ ಅಧೀನತೆಯಾಗಲೀ ನಿಯತ ಹಾಗೂ ನಿರಂತರವಾದುದಲ್ಲ'.[೨] ಎನ್ನುತ್ತಾರೆ. ಜಾತಿ ಜಾತಿಗಳ ನಡುವಿನ ಮತ್ತು ಜಾತಿಯೊಂದರ ಆಂತರ್ಯದಲ್ಲಿ ಸಂಭವಿಸುವ ಈ ಅಧೀನತೆ ಮತ್ತು ಪ್ರಧಾನತೆಗಳು ಚಾರಿತ್ರಿಕ ಒತ್ತಡಗಳ ಕಾರಣಕ್ಕಾಗಿ, ಬದಲಾದ ಉತ್ಪಾದನಾ ಸಂಬಂಧಗಳ ಕಾರಣಕ್ಕಾಗಿ ಬದಲಾಗುತ್ತಿರುತ್ತವೆ ಎಂಬುದು ಈ ಉಲ್ಲೇಖದ ತಾತ್ಪರ್ಯ.

ಒಂದು ಗ್ರಾಮದ ಸಾಮಾಜಿಕ ರಾಜಕೀಯ ಮತ್ತು ಆರ್ಥಿಕ ಸ್ಥಿತಿಗತಿಗಳಲ್ಲಾದ ಬದಲಾವಣೆಗಳನ್ನು ಇಲ್ಲಿ ವಿವರಿಸಲೆತ್ನಿಸಿದ್ದೇನೆ. ಡೊಂಬರು ಹೆಚ್ಚಾಗಿ ವಾಸಿಸುವ ಈ ಗ್ರಾಮವು ಇಂಡಿಯಾದ ಗ್ರಾಮ ಸಮಾಜಗಳ ಪ್ರತಿನಿಧಿ. ವಸಾಹತೋತ್ತರ ಕಾಲಘಟ್ಟದ ನಂತರ ಭಾರತಕ್ಕೆ ಅಧಿಕಾರ ಹಸ್ತಾಂತರಗೊಂಡ ಮೇಲೆ ಅಧಿಕಾರ ಕೇಂದ್ರಗಳು ರೂಪಿಸಿದ ಕಲ್ಯಾಣ ಕಾರ್ಯಕ್ರಮಗಳು ಈ ಬಗೆಯ ಸಮುದಾಯಗಳನ್ನು ಅಭಿವೃದ್ಧಿ ಪಡಿಸುತ್ತವೆ ಎಂದು ನಂಬಲಾಗಿತ್ತು. ಮೀಸಲಾತಿ ಮತ್ತು ಆಧುನಿಕ ಸೌಲಭ್ಯಗಳು ಶೋಷಿತ ಸಮುದಾಯಗಳನ್ನು ಸಬಲೀಕರಿಸುತ್ತವೆ ಎಂದು ಭಾವಿಸಲಾಗಿತ್ತು. ಆಧುನಿಕತೆಯು ತನ್ನೆಲ್ಲ ವಿಜ್ಞಾನ ಮತ್ತು ತಂತ್ರಜ್ಞಾನಗಳ ಮೂಲಕ ಭಾರತದಂತಹ ದೇಶದ ಕೆಳಜಾತಿಗಳಿಗೆ ಅವಕಾಶಗಳ ಅನೇಕ ಆಯಾಮಗಳನ್ನು ಒದಗಿಸುತ್ತದೆ. ಈ ಆಧುನಿಕತೆ ದಲಿತರಿಗೆ ಜಾಗತಿಕ ಮಟ್ಟದ ಆರ್ಥಿಕತೆಯ ಜೊತೆಗೆ ಸಂಯೋಗವನ್ನು ಒದಗಿಸುತ್ತದೆ. ಮತ್ತು ಆಧುನಿಕತೆ ಎಂಬುದು ಮಾನವ ಕಲ್ಯಾಣದ ಕಾರ್ಯಕ್ರಮಗಳನ್ನು ಗರ್ಭೀಕರಿಸಿಕೊಂಡ ಒಂದು ವಿಶಿಷ್ಟ ಪ್ಯಾಕೇಜ್. ಈ ಪ್ಯಾಕೇಜಿನಲ್ಲಿ ಶೋಷಿತ ಸಮುದಾಯಗಳು ತಮ್ಮ ಸಬಲೀಕರಣಕ್ಕೆ ಬೇಕಾದ ಅವಕಾಶಗಳನ್ನು ಪಡೆದುಕೊಳ್ಳಬಹುದು. ಆಧುನಿಕತೆ ಹಲವು ಅವಕಾಶಗಳನ್ನು ಶೋಷಿತರ ಎದುರು ತೆರೆದಿಟ್ಟಿದೆ ಎಂದು ನಂಬಲಾಗಿತ್ತು. ಆದರೆ ಆಧುನಿಕತೆಗೆ ಈ ಬಗೆಯ ಜನಪರ ರಾಜಕೀಯ ಸಿದ್ಧಾಂತದ ಆತ್ಮವಿರಲಿಲ್ಲ. ಭಾರತದಲ್ಲಿ ವಸಾಹತೋತ್ತರ ಕಾಲಘಟ್ಟದ ನಂತರದ ಆಧುನಿಕತೆಯಿಂದಾಗಿ ಹತ್ತು ಹಲವು ಅವಕಾಶಗಳು ಇಲ್ಲಿನ ಸಮುದಾಯಗಳಿಗೆ ಲಭ್ಯವಾಗಿರಬಹುದು. ಹೀಗೆ ಲಭ್ಯವಾದ ಅವಕಾಶಗಳು ಶೋಷಿತರಿಗಾಗಿ ಆಧುನಿಕತೆ ಉದ್ದೇಶಪೂರ್ವಕವಾಗಿ ರೂಪಿಸಲ್ಪಟ್ಟವುಗಳಾಗಿರಲಿಲ್ಲ. ಆಧುನಿಕ ಕೈಗಾರಿಕೆಗಳಿಂದ ಭಾರತದ ಉತ್ಪಾದನಾ ವ್ಯವಸ್ಥೆಯಲ್ಲಾದ ಬದಲಾವಣೆಗಳಿಂದ ಶೋಷಿತ ಸಮುದಾಯಗಳು ತಮ್ಮ ಹೀನವೃತ್ತಿಯಿಂದ ವಿಮೋಚನೆ ಪಡೆಯಲು ಸಾಧ್ಯವಾಯಿತು. ಊಳಿಗಮಾನ್ಯ ವ್ಯವಸ್ಥೆಯು ನಿರಸನಗೊಂಡು, ಮುಕ್ತಗೊಂಡ ಭಾರತದ ಆರ್ಥಿಕ ಕ್ಷೇತ್ರದಲ್ಲಿ ದಲಿತರಿಗೆ ಆರ್ಥಿಕ ಸ್ವಾತಂತ್ರ್ಯಗಳು ಲಭ್ಯವಾದವು ಎಂಬ ಸಂಗತಿಗಳು ಪಾರ್ಶ್ವಿಕವಾಗಿ ಸತ್ಯವಾದವುಗಳು. ಆದರೆ ಭಾರತದ ಸಮಾಜವು ಊಳಿಗಮಾನ್ಯ ವ್ಯವಸ್ಥೆಯಿಂದ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯ ಕಡೆಗೆ ಚಲಿಸಿತು. ಇದರಿಂದಾಗಿ ಭಾರತದ ಪಾರಂಪರಿಕ ಊಳಿಗಮಾನ್ಯ ವ್ಯವಸ್ಥೆ ನಾಶಗೊಂಡಂತೆ ಭಾಸವಾದರೂ, ಈ ಊಳಿಗಮಾನ್ಯ ಪ್ರಭುಗಳೇ ಮುಂದೆ ಆಧುನಿಕ ಬಂಡವಾಳಶಾಹಿ ಆರ್ಥಿಕತೆಯಲ್ಲಿ ಪ್ರಧಾನ ಪಾತ್ರ ವಹಿಸಿದರು. ಇಲ್ಲಿ ಆಳುವ ಪ್ರಭುಗಳು ರೂಪಾಂತರಗೊಂಡರೇ

ವಿನಹ, ಸಮಾಜವು ಇದರಿಂದಾಗಿ ಶೋಷಣೆಗಳಿಂದ ಮುಕ್ತವಾಗಲಿಲ್ಲ. ಸಂಕೀರ್ಣಗೊಂಡ ಉತ್ಪಾದನಾ ವ್ಯವಸ್ಥೆಯಲ್ಲಿ ಆಳುವ ಮತ್ತು ದುಡಿವ ಸಮುದಾಯಗಳ ವರ್ಗ ಬೇಧಗಳು ಇನ್ನೂ ಪ್ರಬಲಗೊಳ್ಳುತ್ತಾ ಹೋದವು. ಮುಕ್ತ ಅವಕಾಶಗಳನ್ನು ತೆರೆದಿಟ್ಟ ಆಧುನಿಕತೆಯ ಒಳಗೆ ಬಂಡವಾಳಶಾಹಿ ಆತ್ಮವೂ ಇಂಡಿಯಾದ ಅಸಮಾನತೆಗಳನ್ನು ಮುಂದುವರೆಸುವ ಹೊಸ ಲೆಕ್ಕಾಚಾರಗಳನ್ನು ಹಾಕತೊಡಗಿತ್ತು. ಆಧುನಿಕತೆಯಿಂದ ಹೊಸ ಅವಕಾಶಗಳು ಲಭ್ಯವಾದರೂ, ಭಾರತದ ಅಸಮಾನತೆಯನ್ನು ಜೀವಂತವಾಗಿ ಉಳಿಸುವ ವ್ಯಕ್ತಿನಿಷ್ಠತೆಯನ್ನು ಬಂಡವಾಳಶಾಹಿ ಆಧುನಿಕತೆ ಹುಟ್ಟುಹಾಕಿತು. ಆಧುನಿಕತೆಯ ಸೈದ್ಧಾಂತಿಕ ಫಲಗಳಾದ ಜನತಂತ್ರ, ಸಮಾನತೆ, ಭಾತೃತ್ವ ಮುಂತಾದವು ಭಾರತದೊಳಗೆ ಪ್ರವೇಶಿಸಿದವು. ಇವು ಆಧುನಿಕ ನಾಗರಿಕ ಸಮಾಜವನ್ನು ಕಟ್ಟುವಿಕೆಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ಇವುಗಳ ಆದರ್ಶಮಯ ಮುಖವನ್ನು ನೋಡಿ ನಂಬಲಾಗಿತ್ತು. ಆದರೆ ಕಂಪನಿ ಆಡಳಿತದ ನಂತರ ಭಾರತದಲ್ಲಿ ನಡೆದದ್ದು ಅಧಿಕಾರ ಹಸ್ತಾಂತರವೇ ಹೊರತು, ಇಲ್ಲಿನ ಸಮಾಜಗಳಿಗೆ 'ಆಧುನಿಕತೆಯ' ಅರ್ಥದಲ್ಲಿ ಸ್ವಾತಂತ್ರ್ಯ ಲಭ್ಯವಾಗಲಿಲ್ಲ. ಜೊತೆಗೆ ಜನತಂತ್ರ, ಸಮಾನತೆಗಳೂ ಸಹ ಆದರ್ಶದ ಚೌಕಟ್ಟಿನಲ್ಲಿ ಮಾತ್ರ ವಿಜೃಂಭಿಸಿದವು. ಮತ್ತು ಆಧುನಿಕತೆಯ ಹೊಸ ಅವಕಾಶಗಳನ್ನು ಪಡೆದ ಜನರೂ ಸಹ ಈ ಸಮಾಜದ ಪ್ರತಿಷ್ಠಿತರೇ ಆಗಿದ್ದರು. ದಲಿತರಲ್ಲೂ ಸಹ ಆಧುನಿಕತೆಯಿಂದ ಲಾಭ ಪಡೆದವರು ದಲಿತರಲ್ಲಿಯೇ ಪ್ರತಿಷ್ಠಿತರಾದ ಜನ. ಅಂದರೆ ವಿದ್ಯಾಭ್ಯಾಸ ಪಡೆದ ಮೊದಲ ಅಥವಾ ಎರಡನೇ ತಲೆಮಾರಿನವರು. ಇವರು ಆಧುನಿಕತೆಯ ಫಲಗಳನ್ನು ಮೀಸಲಾತಿ, ಇಲ್ಲವೆ ಸರಕಾರದ ಕಲ್ಯಾಣ ಕಾರ್ಯಕ್ರಮಗಳಿಂದ ಪಡೆದರು. ಹೀಗೆ ಆಧುನಿಕತೆಯಿಂದ ಭೌತಿಕ ಸೌಲಭ್ಯಗಳನ್ನು ಮಾತ್ರ ಈ ಜನ ಪಡೆದುಕೊಳ್ಳಲಿಲ್ಲ. ಆಧುನಿಕತೆಯ ಅದರಲ್ಲೂ ಬಂಡವಾಳಶಾಹಿ ಆಧುನಿಕತೆಯ ಘೋಷಿತ ಮೌಲ್ಯವಾದ ವ್ಯಕ್ತಿನಿಷ್ಠತೆಯನ್ನೂ ತಮ್ಮಲ್ಲಿ ಅಂತರ್ಗತಗೊಳಿಸಿಕೊಂಡಿದ್ದರು. ಈ ದಲಿತರು ತಮ್ಮ ಕುಟುಂಬ ಮತ್ತು ಸಮುದಾಯಗಳೊಂದಿಗೆ ಭಾವನಾತ್ಮಕ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನೇ ಕಡಿದುಕೊಳ್ಳುವಂತಹ ತ್ಯಾಗಕ್ಕೆ ಸಿದ್ಧವಾಗುತ್ತಾರೆ. ಆಧುನಿಕತೆಯ ಹುಚ್ಚು ಅರಸುವಿಕೆಯಿಂದಾಗಿ ತಮ್ಮ ಕುಟುಂಬ ಹಾಗೂ ಸಮುದಾಯದ ಬಗೆಗೆ ಪ್ರೀತಿಯ ಬದಲು ತಿರಸ್ಕಾರ ತುಚ್ಛೀಕಾರ ಹಾಗೂ ದ್ವೇಷ ಭಾವನೆಗಳು ಉಳಿಯುತ್ತವೆ. ಹೀಗೆ ಆಧುನಿಕತೆಯ ನಿರರ್ಥಕ ಹುಡುಕಾಟ ದಲಿತರನ್ನು ಒಂದು ರೀತಿಯ ಅನೀತಿಯುತ ವ್ಯಕ್ತಿವಾದಕ್ಕೆ ಎಳೆಯುತ್ತದೆ. ಎನ್ನುತ್ತಾರೆ ಗೋಪಾಲಗುರು (ಗೋಪಾಲಗುರು ಪು.೯೯) ಮೇಲೆ ವಿವರಿದಂತೆ ಡೊಂಬರ ಗ್ರಾಮದ ವಿದ್ಯಾವಂತ ತರುಣರು ಈ ಬಗೆಯ 'ಅನೀತಿಯುತ' ವ್ಯಕ್ತಿ ವಾದಕ್ಕೆ ಶರಣಾದವರು. ತಮ್ಮನ್ನು 'ಸಮುದಾಯದ ಸೃಷ್ಟಿಗಳೆಂದು' ಪರಿಗಣಿಸದೆ ಸ್ವಯಂಭುಗಳಂತೆ ತಮ್ಮನ್ನು ತಾವು ಪರಿಗಣಿಸಿದವರು. ಇದರಿಂದ ಆಧುನಿಕತೆಯು ದಲಿತರಿಗೆ ತನ್ನ ಕಪ್ಪು ಬಿಳುಪು ಸ್ವಭಾವಗಳಿಂದ ತಲುಪಿದೆ ಮತ್ತು ಹೆಚ್ಚಾಗಿ ದಲಿತರ ವರ್ತಮಾನದಲ್ಲಿ ಆಧುನಿಕತೆಯು ವೈರುಧ್ಯಮಯ ಫಲಿತಗಳು ಸೃಷ್ಟಿಯಾಗಲು ಕಾರಣವಾಗಿದೆ.

ಪ್ರಾಯಶಃ ಬಹುತೇಕ ದಲಿತ ಸಮುದಾಯದ ಈ 'ಕ್ರೀಮ್ ಲೇಯರ್'ನ ಜನ ತಮ್ಮನ್ನು ರೂಪಿಸಿದ ಸಮುದಾಯಗಳಿಂದ ದೂರವಾದದ್ದು ಅವರ ಪ್ರಧಾನ ಸ್ಥಿತಿಯ ಕಾರಣಕ್ಕಾಗಿ ಎಂದೇ ಭಾವಿಸಬೇಕಾಗುತ್ತದೆ.

ಆರ್ಥಿಕವಾಗಿ ಸಬಲಗೊಂಡ ಇವರು ಬಂಡವಾಳಶಾಹಿ ಆಧುನಿಕತೆಯ ಮೋಹದಿಂದಾಗಿ ಮಧ್ಯಮ ವರ್ಗವಾಗಿ ರೂಪುಗೊಂಡರು. ಡೊಂಬರಲ್ಲಿ ಈ ಮಧ್ಯಮ ವರ್ಗ ರೂಪುಗೊಂಡದ್ದು ಪ್ರಾಯಶಃ ೯೦ರ ದಶಕದಲ್ಲಿ ಎಂದೇ ಕಾಣುತ್ತವೆ. ಏಕೆಂದರೆ ನೆಲೆನಿಂತ ಡೊಂಬರ ಮೊದಲ ತಲೆಮಾರಿನ ಹಲವು ಜನ ವಿದ್ಯಾವಂತರು ಸರಕಾರಿ ನೌಕರಿ ಪಡೆದು ಆರ್ಥಿಕವಾಗಿ ಸಬಲಗೊಂಡ ನಂತರವೂ ತಮ್ಮ ಸಮುದಾಯದ ನಡುವೆಯೇ ಬದುಕಿದರು. ಜೊತೆಗೆ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಸಮುದಾಯದ ಅಭಿವೃದ್ಧಿಯಲ್ಲಿ ಪಾಲ್ಗೊಂಡರು. ಆದರೆ ೯೦ ದಶಕದಲ್ಲಿ ಡೊಂಬರ ಸಮುದಾಯದ ವಿದ್ಯಾವಂತರು ಮತ್ತು ಸರಕಾರಿ ನೌಕರಿ ಪಡೆದವರು ಹೀಗೆ ತಮ್ಮನ್ನು ಸಮುದಾಯದ ಜೊತೆ ಗುರುತಿಸಿಕೊಳ್ಳುವ ಪ್ರಯತ್ನವನ್ನೇ ಮಾಡಲಿಲ್ಲ. ಕರ್ನಾಟಕದ ಬಹುತೇಕ ಎಲ್ಲ ಜಿಲ್ಲೆಗಳಲ್ಲಿನ ನೆಲೆನಿಂತ ಮತ್ತು ಅಲೆಮಾರಿಗಳ ಜೊತೆ ಒಡನಾಡಿದ್ದೇನೆ. ಕಳೆದ ಎಂಟು ವರ್ಷಗಳ ನನ್ನ ತಿರುಗಾಟದಲ್ಲಿ ಡೊಂಬರ ಸಮುದಾಯದಲ್ಲಿ ರೂಪುಗೊಂಡ ಮಧ್ಯಮ ವರ್ಗವು ತನ್ನ ಸಮುದಾಯದ ಜೊತೆ ಸಂಬಂಧಗಳನ್ನು ಕಡಿದುಕೊಂಡಿರುವುದನ್ನು ನೋಡಿದ್ದೇನೆ. (ಅಲೆಮಾರಿಗಳಿಗೆ ಈ ಮಾತು ಅನ್ವಯಿಸುವುದಿಲ್ಲ. ಏಕೆಂದರೆ ಇವರಲ್ಲಿ ಓದಿದವರು, ನೌಕರಿ ಪಡೆದವರು ಇಲ್ಲವೇ ಇಲ್ಲ) ಒಟ್ಟಿನಲ್ಲಿ ಡೊಂಬರ ಸಮುದಾಯದ ಒಳಗೆ ರೂಪುಗೊಂಡ ಈ ಮಧ್ಯಮವರ್ಗವು ತನ್ನನ್ನು ಸಾಮಾಜಿಕವಾಗಿ 'ಭಿನ್ನವೆಂದು' ಗುರುತಿಸಿಕೊಳ್ಳಲು ಹಾತೊರಿಯುತ್ತಿದೆ.

ಕರ್ನಾಟಕದ ಶಿವಮೊಗ್ಗ, ದಾವಣಗೆರೆ, ಬಳ್ಳಾರಿ, ಮೈಸೂರು, ಚಿಕ್ಕಮಗಳೂರು, ಚಾಮರಾಜನಗರ, ಮಂಡ್ಯ ಜಿಲ್ಲೆಗಳಲ್ಲಿನ ಡೊಂಬರು ಒಂದೇ ಗುಂಪಿನಿಂದ ಚದುರಿ ಹೋಗಿರುವ ಸಾಧ್ಯತೆಗಳಿವೆ. ಈ ಜಿಲ್ಲೆಗಳಲ್ಲಿನ ಡೊಂಬರ ಆಚರಣೆಗಳು, ವೃತ್ತಿ ಮತ್ತು ದೈಹಿಕ ಚಹರೆಗಳೂ ಸಹ ಹಲವು ಸಾಮ್ಯಗಳನ್ನು ಪ್ರಕಟಿಸುತ್ತವೆ. ಮತ್ತು ಈ ಜಿಲ್ಲೆಗಳಲ್ಲಿನ ಡೊಂಬರು ಕರ್ನಾಟಕದ ಆದಿಮ ಕಾಲದಿಂದಲೂ ಇದ್ದಿರಬಹುದೆಂದು ಭಾಸವಾಗುತ್ತದೆ. ಆದರೆ ಚಿತ್ರದುರ್ಗ, ಕೋಲಾರ, ತುಮಕೂರು, ಬೆಂಗಳೂರು ರಾಯಚೂರು, ಗುಲ್ಬರ್ಗಾ ಜಿಲ್ಲೆಯಲ್ಲಿನ ನೆಲೆನಿಂತ ಡೊಂಬರಿಗೆ ಹಲವು ಸಾಮ್ಯಗಳಿವೆ. ಈ ಜಿಲ್ಲೆಯಲ್ಲಿನ ಡೊಂಬರು ತೆಲುಗು ಮತ್ತು ತಮಿಳು ಭಾಷಿಕ ಪ್ರದೇಶದ ಹಲವು ಸಮುದಾಯಗಳ ಜೊತೆ ಸಂಕರಗೊಂಡಂತೆ ಕಂಡು ಬರುತ್ತಾರೆ. ಜೊತೆಗೆ ಈ ಜಿಲ್ಲೆಗಳಲ್ಲಿನ ಡೊಂಬರು ಅಲೆಮಾರಿತನವನ್ನು ತೀರ ಇತ್ತೀಚೆಗೆ ಅಂದರೆ ೫೦-೬೦ ವರ್ಷಗಳ ಹಿಂದೆ ಬಿಟ್ಟು ನೆಲೆಸಿರುವಂತೆ ಕಾಣುತ್ತದೆ. ಜೊತೆಗೆ ಈ ಜಿಲ್ಲೆಗಳಲ್ಲಿನ ಡೊಂಬರು ಕೆಲವು ವ್ಯತ್ಯಾಸಗಳನ್ನು ಹೊರತುಪಡಿಸಿ ಒಂದೇ ಬಗೆಯ ಜೀವನ ವಿಧಾನವನ್ನು ಅನುಸರಿಸುತ್ತಿರುವುದು ಕಂಡು ಬರುತ್ತದೆ. ಪ್ರಾಯಶಃ ಈ ಗಡಿಭಾಗದ ಜಿಲ್ಲೆಗಳಲ್ಲಿ ನೆಲೆನಿಂತಿರುವವರು ಒಂದು ಗುಂಪಿಗೆ ಸೇರಿರುವ ಸಾಧ್ಯತೆಗಳಿವೆ. ಮತ್ತು ಅಲೆಮಾರಿತನವನ್ನು ತೀರ ಇತ್ತೀಚೆಗೆ ಬಿಟ್ಟುಕೊಟ್ಟು ನೆಲೆನಿಂತಂತೆ ಕಾಣುತ್ತದೆ. ಹಾವೇರಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಗದಗ, ಧಾರವಾಡ, ಬಾಗಲಕೋಟೆ, ಕೊಪ್ಪಳ, ಬಿಜಾಪುರ, ಬೆಳಗಾವಿ ಜಿಲ್ಲೆಯಲ್ಲಿನ ನೆಲೆನಿಂತ ಡೊಂಬರಲ್ಲಿ ಹಲವು ಏಕರೂಪತೆಗಳಿರುವುದು ಕಂಡು ಬರುತ್ತವೆ. ಜೊತೆಗೆ ಇವರು ಮರಾಠಿ ಭಾಷಿಕ ಪ್ರದೇಶದ ಪ್ರಭಾವದಿಂದ ಬಂದವರು. ಇವರೂ ಸಹ ಕರ್ನಾಟಕದಲ್ಲಿ ನೆಲೆಸಿ ಹಲವು ಶತಮಾನಗಳು ಗತಿಸಿರುವಂತೆ ಕಾಣುತ್ತದೆ.

ಕರ್ನಾಟಕವನ್ನು ಉದ್ದಕ್ಕೆ ಮೂರು ಭಾಗಗಳಾಗಿ ಕತ್ತರಿಸಿದರೆ ಈ ಪೂರ್ವ, ಮಧ್ಯ ಮತ್ತು ಪಶ್ಚಿಮದ ಭಾಗಗಳಲ್ಲಿಯ ನೆಲೆನಿಂತ ಡೊಂಬರು ಕೆಲವು ಸಾಮ್ಯತೆ ಮತ್ತು ಹಲವು ಭಿನ್ನತೆಗಳಿರುವ ಜೀವನ ವಿಧಾನಗಳನ್ನು ರೂಢಿಸಿಕೊಂಡಿರುವುದು ಕಂಡು ಬರುತ್ತದೆ. ಆದರೂ ರಾಜ್ಯದ ಮೂರು ಭಾಗದ ಡೊಂಬರಲ್ಲಿರುವ ಏಕರೂಪತೆಯೆಂದರೆ ಬಡತನ. ಈ ಹಲವು ಜಿಲ್ಲೆಗಳಲ್ಲಿನ ಡೊಂಬರು ಬಹುತೇಕ ಕಡೆ ಭೂರಹಿತರು, ಇಲ್ಲವೆ ಅತಿ ಚಿಕ್ಕ ಹಿಡುವಳಿದಾರರು. ಆರ್ಥಿಕವಾಗಿ ಈ ಸಮುದಾಯದ ಶೇ. ೮೦ ರಷ್ಟು ಜನ ಅತ್ಯಂತ ಹೀನಾಯ ಸ್ಥಿತಿಯಲ್ಲಿರುವುದು ಕಂಡು ಬರುತ್ತದೆ. ಸಾಮಾಜಿಕವಾಗಿ ಡೊಂಬರು ಹಲವು ಜಿಲ್ಲೆಗಳಲ್ಲಿ ಅಸ್ಪೃಶ್ಯರು. ಆದರೆ ಮಾದಿಗ, ದಕ್ಕಲ ಸಮುದಾಯಗಳಿಗೆ ಲಭ್ಯವಾಗುವ ಸ್ಥಾನಮಾನಗಳಿಗಿಂತ ಸ್ವಲ್ಪ ಉತ್ತಮ ಸ್ಥಾನಮಾನಗಳು ಈ ಸಮುದಾಯಕ್ಕೆ ಲಭ್ಯವಾಗಿವೆ.

ಅಲೆಮಾರಿ ಡೊಂಬರ ಸಾಮಾಜಿಕ ಸ್ಥಿತಿಗತಿಗಳು

ಕಳೆದ ನಾಲ್ಕೈದು ತಿಂಗಳ ಹಿಂದೆ ರಾಜ್ಯ ಸರ್ಕಾರದ ಹಿಂದುಳಿದ ವರ್ಗಗಳ ಇಲಾಖೆಗೆ ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಕುರಿತು ವರದಿಯೊಂದನ್ನು ಸಿದ್ಧಪಡಿಸಲು ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ನಾನು ಸುತ್ತಾಡಬೇಕಾಯಿತು. ಕರ್ನಾಟಕದ ಅತ್ಯಂತ ಆದಿಮ ಅಲೆಮಾರಿಗಳಲ್ಲಿ ಪ್ರಮುಖ ಸಮುದಾಯವಾದ 'ಹೆಳವರ' ಕುರಿತು ನಾನು ಸದರಿ ಇಲಾಖೆಗೆ ವರದಿ ಸಿದ್ಧಪಡಿಸಿಬೇಕಿತ್ತು. ಹೆಳವರು ಕರ್ನಾಟಕದ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ವಾಸಿಸುತ್ತಿದ್ದಾರೆ. ಹೆಳವರು ಡೊಂಬರಿಗಿಂತ ಉತ್ತಮ ಸ್ಥಾನಮಾನಗಳನ್ನು ಪಡೆದುಕೊಂಡಿದ್ದಾರೆ. ಹೆಳವರು ಪ್ರತಿಷ್ಠಿತ ಸಮುದಾಯಗಳಿಗೆ ಸೇರಿದ ಮನೆತನಗಳ ವಂಶಾವಳಿಗಳನ್ನು ದಾಖಲಿಸುವವರು. ಮತ್ತು ಕಾಲಕಾಲಕ್ಕೆ ತಮ್ಮ ಒಕ್ಕಲು ಮನೆಗಳಿಗೆ ಹೋಗಿ ಅವರ ವಂಶಾವಳಿಯನ್ನು ಹೇಳಿ ಅವರು ಕೊಡುವ ಧಾನ್ಯ, ಸಾಕುಪ್ರಾಣಿ, ಹಣ ಇತ್ಯಾದಿಗಳಿಂದಲೇ ಜೀವನ ನಡೆಸುತ್ತಾರೆ. ಹೆಳವರು ಅಲೆಮಾರಿಗಳೂ ಹೌದು, ನೆಲೆನಿಂತ ಸಮುದಾಯವೂ ಹೌದು. ಒಂದು ಅರ್ಥದಲ್ಲಿ ಹೆಳವರು ಅರೆಅಲೆಮಾರಿಗಳು. ಇವರಿಗೆ ನಿಶ್ಚಿತ ಗ್ರಾಮಗಳಲ್ಲಿ ಮನೆ ಮತ್ತು ಹೊಲಗದ್ದೆಗಳಿವೆ. ತಮಾಷೆಯ ಸಂಗತಿ ಎಂದರೆ, ಒಂದು ಗ್ರಾಮದ ಒಂದೇ ಮನೆಯಲ್ಲಿ ನೆಲೆನಿಂತವರು ಮತ್ತು ಅಲೆಮಾರಿಗಳು ಒಟ್ಟಾಗಿಯೇ ಬದುಕುತ್ತಿದ್ದಾರೆ. ಒಂದೇ ಕುಟುಂಬದ ಅಣ್ಣತಮ್ಮಂದಿರಲ್ಲಿ, ಅಣ್ಣ ಸರಕಾರಿ ನೌಕರಿ, ವ್ಯಾಪಾರ ಅಥವಾ ಇನ್ನ್ಯಾವುದೋ ದುಡಿಮೆಯಲ್ಲಿ ತೊಡಗಿದ್ದರೆ ತಮ್ಮನು ಅಲೆಮಾರಿ. ವರ್ಷದಲ್ಲಿ ನಿಗದಿಯಾದ ಹಲವು ತಿಂಗಳ ಕಾಲ ಇವರು ಮನೆಯನ್ನು ತೊರೆಯುತ್ತಾರೆ. ಎತ್ತು ಬಂಡಿಯ ಸಮೇತ ತಮ್ಮ ಕೆಲವು ಸಾಕುಪ್ರಾಣಿಗಳ ಜೊತೆ ಮತ್ತು ಮಕ್ಕಳ ಜೊತೆ ಇವರು ತಮ್ಮ ಒಕ್ಕಲು ಮನೆಗಳನ್ನು ಅರಸುತ್ತಾ ಹೊರಡುತ್ತಾರೆ. ವರ್ಷದ ಬಹುತೇಕ ಎಂಟು ತಿಂಗಳು ಇವರು ತಮ್ಮ ನೆಲೆಯನ್ನು ತೊರೆದು ಅಲೆಮಾರಿಗಳಾಗಿಯೇ ಬದುಕುತ್ತಾರೆ. ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಈ ಅಲೆಮಾರಿಗಳು ವಾಸಿಸುತ್ತಿದ್ದಾರೆ.

ಈ ಸಮಾಜದ ಪರಿಚಯವಿರುವ ಎಲ್ಲರಿಗೂ ಹೆಳವರೆಂದಾಕ್ಷಣ ಕೆಲವು ಸ್ಪಷ್ಟ ಚಿತ್ರಗಳು ಕಣ್ಮುಂದೆ ಬರುತ್ತವೆ. ಎತ್ತಿನ ಮೇಲೆ ಚಿಪ್ಪೋಡುಗಳನ್ನು ಹಿಡಿದುಕೊಂಡು ತಮ್ಮ ಒಕ್ಕಲು ಮನೆಗಳಿಗೆ ಅಲೆದು ಅವರ

ವಂಶಾವಳಿ ಹೇಳಿ ತಮ್ಮ ವರ್ಷದ ಪಾಲನ್ನು ಅವರಿಂದ ಪಡೆಯುವ ಒಂದು ವಿಶಿಷ್ಟ ಸಮುದಾಯವಿದು. ಆಧುನಿಕ ಪೂರ್ವ ಕರ್ನಾಟಕದ ಸಮಾಜದಲ್ಲಿ ಹೆಳವರಿಗೆ ತಮ್ಮ ಒಕ್ಕಲು ಮನೆಗಳ ಉತ್ಪಾದನೆಯಲ್ಲಿ ಒಂದು ನಿಶ್ಚಿತ ಪಾರಂಪರಿಕ ವಾರ್ಷಿಕ ಪಾಲು ಇರುತ್ತಿತ್ತು. ಜೊತೆಗೆ ಸಾಮಾಜಿಕ ಗೌರವವೂ ಲಭ್ಯವಾಗುತ್ತಿತ್ತು. ಆದರೆ ಇಂದು ಹೆಳವರಿಗೆ ಅಂತಹ ಅವಕಾಶಗಳಿಲ್ಲ. ಅವರೇ ಹೇಳುವಂತೆ ಇಂದು ಹೆಳವರಿಗೆ ಒಕ್ಕಲು ಮನೆಗಳಲ್ಲಿ ಸಿಕ್ಕುತ್ತಿದ್ದ ಪಾಲು ಸಿಗುತ್ತಿಲ್ಲ. ಸಾಮಾಜಿಕ ಗೌರವವೂ ಇಲ್ಲದಂತಾಗಿದೆ. ವರ್ತಮಾನದಲ್ಲಿ ಹೆಳವರೆಲ್ಲರೂ ಪಾರಂಪರಿಕ ವೃತ್ತಿಯನ್ನು ಅವಲಂಬಿಸಿಲ್ಲ. ಹಲವರಿಗೆ ತಮ್ಮ ಪಾರಂಪರಿಕ ವೃತ್ತಿಯಲ್ಲಿ ಮುಂದುವರೆಯುವ ಮನಸ್ಸಿಲ್ಲ. ಈಗಾಗಲೇ ಕೆಲವರು ಆಧುನಿಕ ಶಿಕ್ಷಣದಿಂದಾಗಿ ನೌಕರಿ ಪಡೆದು ತಮ್ಮ ಸಮುದಾಯದ ಪರಂಪರೆಯಿಂದ 'ಹೊರಗಿನವರಾಗಿ' ಬದುಕುತ್ತಿದ್ದಾರೆ. ಪರಂಪರೆಯ ವೃತ್ತಿಯಲ್ಲಿಯೇ ಬದುಕುತ್ತಿರುವ ಗುಂಪು ಮಾತ್ರ ಅಲೆಮಾರಿಯಾಗಿಯೇ ಬದುಕುತ್ತಿದೆ. ಈ ಅಲೆಮಾರಿ ಗುಂಪಿಗೆ, ಆಧುನಿಕ ವೃತ್ತಿಗಳಲ್ಲಿ ಬದುಕುತ್ತಿರುವ ತಮ್ಮವರೇ 'ಹೊರಗಿನವರಾಗಿ' ಕಾಣುತ್ತಾರೆ. ಇವರು ತಮ್ಮ ವೃತ್ತಿಗೆ ಸಂಬಂಧಿಸಿದಂತೆ ತಮ್ಮ ಬಂಧುಗಳನ್ನೇ ಅನುಮಾನಿಸುತ್ತಾರೆ. ಇನ್ನು 'ಹೊರಗಿನವರಿಗೆ' ಈ ಅಲೆಮಾರಿಗಳ ಬದುಕಲ್ಲಿ ಪ್ರವೇಶವಿಲ್ಲ. ಹಾಗೊಂದು ವೇಳೆ ಪ್ರವೇಶ ಸಿಕ್ಕರೂ ಅವರ ಪಾರಂಪರಿಕ ವೃತ್ತಿಗೆ ಸಂಬಂಧಿಸಿದ ಯಾವ ವಿಷಯವನ್ನು ಪಡೆಯಲು ಸಾಧ್ಯವಿಲ್ಲ. ಇಲ್ಲಿ ಸ್ಪಷ್ಟವಾಗಿ ಹೆಳವರಲ್ಲಿಯೇ ಆಧುನಿಕವಾಗಿ ಮೂರು ಗುಂಪುಗಳಿವೆ. ಆ ಗುಂಪುಗಳು ಈ ಕೆಳಗಿನಂತಿವೆ.

೧. ಪಾರಂಪರಿಕ ವೃತ್ತಿಯಲ್ಲಿಯೇ ಮುಂದುವರೆದು ಅಲೆಮಾರಿಗಳಾಗಿ ಬದುಕುತ್ತಿರುವವರು

೨. ಪಾರಂಪರಿಕ ವೃತ್ತಿಯಲ್ಲಿ ಗೌರವವಿಟ್ಟುಕೊಂಡೂ ಸಾಮಾಜಿಕ ಸ್ಥಾನಮಾನಗಳನ್ನು ಉನ್ನತೀಕರಿಸಿಕೊಳ್ಳಲು ಭಿನ್ನ ವೃತ್ತಿಗಳನ್ನು ಅವಲಂಬಿಸಿರುವವರು.

೩. ಪಾರಂಪರಿಕ ವೃತ್ತಿಯಲ್ಲಿ ಯಾವ ಗೌರವವೂ ಇಲ್ಲದೆ ಆಧುನಿಕ ಶಿಕ್ಷಣ ಪಡೆದು ಸರಕಾರಿ ಉದ್ಯೋಗದಲ್ಲಿರುವವರು.

ಹೆಳವರ ಕುರಿತ ಅಧ್ಯಯನದ ನನ್ನ ತಿರುಗಾಟದ ಸಂದರ್ಭದಲ್ಲಿ ಕಂಡು ಕೊಂಡ ಈ ಮೂರು ಗುಂಪುಗಳಲ್ಲಿ ಎರಡು ಮತ್ತು ಮೂರನೇ ಗುಂಪಿನ ಜನ ಬದಲಾವಣೆಗೆ ತೀವ್ರವಾಗಿ ಹಂಬಲಿಸುವವರು. ಆದರೆ ಅಲೆಮಾರಿಗಳು ಪಾರಂಪರಿಕ ವೃತ್ತಿಯಲ್ಲಿಯೇ ಇರುವುದರಿಂದ, ಸಾಮಾಜಿಕ ಬದುಕನ್ನು ತೀವ್ರವಾಗಿ ಬದಲಿಸುವ ಆಧುನಿಕ ಆರ್ಥಿಕ ಚಟುವಟಿಕೆಗಳು ಅವರಿಗೆ ಸಾಧ್ಯವಾಗಿಲ್ಲ, ಈ ಕಾರಣದಿಂದ ಅವರ ಸಾಮಾಜಿಕಾರ್ಥಿಕ ಬದುಕಲ್ಲಿ ಅಂತಹ ವ್ಯತ್ಯಾಸಗಳು ಸಂಭವಿಸಿಲ್ಲ. ದುರಂತವೆಂದರೆ ನಾನು ಮೇಲೆ ಉಲ್ಲೇಖಿಸಿದ ಮೂರು ಗುಂಪಿನ ಜನ ಒಂದೇ ಮನೆಯಲ್ಲಿ ವಾಸಿಸುವ ಉದಾಹರಣೆಗಳನ್ನು ನಾನು ಬೆಳಗಾಂ ಜಿಲ್ಲೆಯಲ್ಲಿ ನೋಡಿದೆ. ಒಂದೇ ಮನೆಯಲ್ಲಿ ಅಣ್ಣತಮ್ಮಂದಿರು ಈ ಬಗೆಯ ಅಗಾಧ ಭಿನ್ನಾಭಿಪ್ರಾಯಗಳನ್ನಿಟ್ಟುಕೊಂಡು ಒಂದೇ ಸೂರಿನಡಿ ಬದುಕುತ್ತಿರುವುದು ನಿಜಕ್ಕೂ ಆಶ್ಚರ್ಯದ ಸಂಗತಿ. ಬೆಳಗಾಂ ಜಿಲ್ಲೆಯ ಗೋಕಾಕ್‌ನಲ್ಲಿನ ಅಮೃತ್ ಹೆಳವಿ ಎನ್ನುವವರು ಎಲ್ ಐ ಸಿ ಯ ಏಜೆಂಟ್ ಆಗಿ ಆರ್ಥಿಕವಾಗಿ ತಕ್ಕಮಟ್ಟಿಗೆ ಸುಸ್ಥಿತಿಯಲ್ಲಿದ್ದರೂ ಅವರ ಸ್ವಂತ ಸಹೋದರ ಊರೂರು ಸುತ್ತುತ್ತಾ ಹೆಳವ ವೃತ್ತಿಯನ್ನು ಅನುಸರಿಸುತ್ತಿದ್ದಾನೆ. ಅಮೃತ್ ಹೆಳವಿಗೆ ತಮ್ಮ

ಕುಲಕಸಬಿನ ಬಗ್ಗೆ ಗೌರವವಿದೆ. ಅವರು ತಮ್ಮ, ಅಣ್ಣನ ನಿಲುವನ್ನು ಗೌರವಿಸುತ್ತಾರೆ. ಆದರೆ ಅವ್ವತ್ ಹೆಳವಿಯ ಮಾವ ತಮ್ಮ ಕುಲಕಸುಬನ್ನ ಅಪಾರವಾಗಿ ತಿರಸ್ಕರಿಸುತ್ತಾರೆ. ಕೆಲವು ಒರಟು ಮಾತುಗಳನ್ನು ಬಳಸಿಯೇ ಅವರು ತಮ್ಮ ಕುಲಕಸುಬನ್ನು ಜರಿಯತೊಡಗಿದರು. ಸರಿ ಸುಮಾರು ಒಂದು ಗಂಟೆಯ ಕಾಲ ಅವರು ತಮ್ಮ ಪಾರಂಪರಿಕ ಕುಲಕಸುಬಿನ ಬಗ್ಗೆ ನಕಾರಾತ್ಮಕವಾಗಿ, ಸಿಟ್ಟಿನಿಂದ ಮಾತನಾಡಿದರು. ಏಕೆಂದರೆ ಅವರ ಅಣ್ಣ ತಮ್ಮಂದಿರು ಸಹ ಅಲೆಮಾರಿಗಳೇ ಆಗಿದ್ದಾರೆ. ಅವರು ಕೊನೆಯಲ್ಲಿ 'ಎಲ್ಲಿಯವರೆಗೆ ನಾವು ಕುಲಕಸುಬನ್ನು ಬಿಡಲಾರವೋ ಅಲ್ಲಿಯವರೆಗೆ ನಾವು ಉದ್ಧಾರವಾಗಲಾರೆವು' ಎಂದು ಅವರು ಮಾತು ಮುಗಿಸಿದರು.

ಈವತ್ತಿಗೂ ಅಲೆಮಾರಿಗಳಾಗಿ ಬದುಕುತ್ತಿರುವ ಗುಂಪಿನ ಸದಸ್ಯರಿಗೆ ತಮ್ಮ ಪಾರಂಪರಿಕ ಕುಲಕಸುಬಿನ ಮೇಲೆ ಇನ್ನಿಲ್ಲದ ಗೌರವವಿರುವುದು ಮೇಲುನೋಟಕ್ಕೇ ಕಂಡು ಬರುತ್ತದೆ. ಆದರೆ ಈ ಅಲೆಮಾರಿತನವನ್ನು ಈವತ್ತಿಗೂ ರೂಢಿಸಿಕೊಡಿರುವ ಗುಂಪುಗಳಿಂದ ನೆಲೆನಿಂತ ಅವರ ಬಂಧುಗಳೇ ಮಾನಸಿಕವಾಗಿ ದೂರವಾಗತೊಡಗಿದ್ದಾರೆ. ಇಲ್ಲಿ ಅಲೆಮಾರಿಗಳು ತಮ್ಮದೇ ರಕ್ತ ಸಂಬಂಧಿಗಳಾಗಿದ್ದರೂ ಭಿನ್ನ ವೃತ್ತಿ ಹಿಡಿದ 'ಮುಖ್ಯವಾಹಿನಿಯ' ಜೊತೆ ಬೆರೆತು ಹೋಗಿರುವವರು ಅಲೆಮಾರಿಗಳಿಂದ ದೂರ ಸರಿಯ ತೊಡಗಿದ್ದಾರೆ. ಇದರಿಂದಾಗಿ ಈ ಸಮುದಾಯದಲ್ಲಿ ಈಗಾಗಲೇ ಭಿನ್ನ ವೃತ್ತಿಗಳಲ್ಲಿದ್ದು, ನೆಲೆನಿಂತಿರುವ ಸಮುದಾಯದ ಜನ, ಅಲೆಮಾರಿಗಳ ಜೊತೆ ರಕ್ತ ಸಂಬಂಧ ಬೆಳೆಸಲು ಹಿಂಜರಿಯುತ್ತಿದ್ದಾರೆ. ಆ ಗುಂಪಿನ ಜನ ಊರೂರು ತಿರುಗುತ್ತಿರುವ ಕಾರಣಕ್ಕಾಗಿ ಹೆಣ್ಣು ಕೊಡುವುದಾಗಲಿ, ಅಲ್ಲಿಂದ ಹೆಣ್ಣನ್ನು ತರುವುದಾಗಲೀ ಉಚಿತವಲ್ಲ ಎಂಬ ತೀರ್ಮಾನಕ್ಕೆ ನೆಲೆನಿಂತ ಜನ ಬಂದಿದ್ದಾರೆ. ಈ ಕಾರಣಕ್ಕಾಗಿ ಅಲೆಮಾರಿಗಳ ಸಾಮಾಜಿಕ ವ್ಯಾಪ್ತಿ ಒಂದು ಅರ್ಥದಲ್ಲಿ ಕುಗ್ಗುತ್ತಿರುವ ಸೂಚನೆಗಳಿವೆ. ಏಕೆಂದರೆ ಒಂದು ಸರಕಾರಿ ಕೆಲಸದಲ್ಲಿರುವ ವ್ಯಕ್ತಿಯೊಬ್ಬ ಅಲೆಮಾರಿ ಗುಂಪಿನ ಹುಡುಗಿಯೊಬ್ಬಳನ್ನು ಮದುವೆಯಾಗಲು ಸಹಜವಾಗಿಯೇ ತಿರಸ್ಕರಿಸುತ್ತಾನೆ. ಆಗ ಅಲೆಮಾರಿಗಳು ತಮ್ಮ ತಮ್ಮಲ್ಲಿಯೇ ರಕ್ತ ಸಂಬಂಧ ಏರ್ಪಡಿಸಿಕೊಳ್ಳಲು ತೊಡಗುತ್ತಾರೆ. ಅಷ್ಟರ ಮಟ್ಟಿಗೆ ಅಲೆಮಾರಿಗಳ ಸಾಮಾಜಿಕ ವ್ಯಾಪ್ತಿ ಕಿರಿದಾಗುತ್ತಾ ಹೋಗುತ್ತದೆ. ಜೊತೆಗೆ ನೆಲೆಲಿಂತವರ ಜೊತೆ ಅಲೆಮಾರಿಗಳು ನಿಧಾನವಾಗಿ ಸಂಬಂಧಗಳನ್ನು ಕಡಿಮೆ ಮಾಡಿಕೊಳ್ಳುತ್ತಿದ್ದಂತೆ, ಅಲೆಮಾರಿಗಳು ಮತ್ತು ನೆಲೆನಿಂತವರು ಎಂಬ ಎರಡು ಪ್ರಬೇಧಗಳು ಅನಾವರಣಗೊಳ್ಳುತ್ತವೆ. ಈ ಸ್ಥಿತಿ ಹೀಗೆಯೇ ಮುಂದುವರಿದರೆ ನೆಲೆನಿಂತ ಹೆಳವರು ತಮ್ಮನ್ನು ಒಂದು ಪ್ರತ್ಯೇಕ ಸಾಮಾಜಿಕ ಗುಂಪು ಎಂದು ಗುರುತಿಸಿಕೊಳ್ಳಬಹುದು. ಶಾಶ್ವತವಾಗಿ ರಕ್ತ ಸಂಬಂಧಗಳು ಏರ್ಪಡುವುದು ನಿಂತೂ ಬಿಡಬಹುದು. ಹೆಳವರಲ್ಲಿ ಪಾರಂಪರಿಕ ವೃತ್ತಿಯನ್ನು ಬಿಟ್ಟುಕೊಟ್ಟು ಸರಕಾರ ನೌಕರಿ ಹಿಡಿದವರು. ವ್ಯಾಪಾರ ಮತ್ತಿತರ ಲಾಭದಾಯಕ ಕಸಬುಗಳಲ್ಲಿ ತೊಡಗಿಕೊಂಡವರು, ಅಲೆಮಾರಿಗಳ ಜೊತೆ ರಕ್ತಸಂಬಂಧಗಳನ್ನು ಏರ್ಪಡಿಸಿಕೊಳ್ಳಲು ಹಿಂಜರಿಯುತ್ತಿದ್ದಾರೆ. ಧಾರವಾಡ, ಹುಬ್ಬಳ್ಳಿ ಕಡೆಯಲ್ಲಿ ಹೀಗೆ ಬದುಕುತ್ತಿರುವ ಹೆಳವ ಸಮುದಾಯದ ಹಲವರು, ಅಲೆಮಾರಿತನವನ್ನು ಈವತ್ತಿಗೂ ರೂಢಿಸಿಕೊಂಡಿರುವ ಗುಂಪುಗಳನ್ನು ಅಪರಿಚಿತ ಮತ್ತು 'ಪ್ರತ್ಯೇಕಗೊಂಡ' ಗುಂಪುಗಳೇಂದೇ ಪರಿಗಣಿಸುತ್ತಿದ್ದಾರೆ. ಹೆಳವರಲ್ಲಿ ಈಗಾಗಲೇ ನೆಲೆನಿಂತವರು ಮತ್ತು ಅಲೆಮಾರಿಗಳು ಎಂಬ ಕೆಟಗರಿಗಳು ಸ್ಪಷ್ಟರೂಪು

ಪಡೆದುಕೊಳ್ಳುತ್ತಿವೆ. ಕೆಲವು ವರ್ಷಗಳ ನಂತರ ನೆಲೆನಿಂತ ಮತ್ತು ಪಾರಂಪರಿಕ ವೃತ್ತಿಯನ್ನು ತೊರೆದು 'ಮುಖ್ಯವಾಹಿನಿಯ' ಆರ್ಥಿಕತೆಯಲ್ಲಿ ಬೆರೆತು ಹೋಗಿರುವ ಹೆಳವರಿಗೂ ಮತ್ತು ಪಾರಂಪರಿಕ ವೃತ್ತಿಯನ್ನು ಅವಲಂಬಿಸಿ ಅಲೆಮಾರಿಗಳಾಗಿಯೇ ಬದುಕುತ್ತಿವವರಿಗೂ ಶಾಶ್ವತವಾಗಿ ಸಂಬಂಧಗಳು ಕಡಿದು ಹೋಗುವ ಸಾಧ್ಯತೆಗಳಿವೆ.

ಹೆಳವರ ಸಮಾಜದಲ್ಲಿನ ಈ ಬಗೆಯ ಸ್ಥಿತ್ಯಂತರವು ಬಹುತೇಕ ಎಲ್ಲ ಅಲೆಮಾರಿ ಸಮುದಾಯಗಳಲ್ಲಿ ಯಾವುದೋ ಕಾಲಘಟ್ಟದಲ್ಲಿ ಸಂಭವಿಸಿರುವ ಸಾಧ್ಯತೆಗಳಿವೆ. ಏಕೆಂದರೆ ಅಲೆಮಾರಿಗಳು ಸೇವಕ ವರ್ಗಗಳಾಗಿದ್ದುಕೊಂಡು, ಸಾಮಾಜಿಕ ಅವಮಾನಕ್ಕೆ ಕಾರಣವಾಗುವ ವೃತ್ತಿಗಳನ್ನು ಅವಲಂಬಿಸಿದ್ದರು. ಸೇವಕ ಸಮುದಾಯಗಳು ನಿಶ್ಚಿತ ಆರ್ಥಿಕ ಮೂಲಗಳಿಲ್ಲದೇ ಅಧಿಕಾರಸ್ಥ ಕೇಂದ್ರಗಳನ್ನು ನಿತ್ಯದ ಜೀವನ ನಿರ್ವಹಣೆಗೆ ಅವಲಂಬಿಸಲೇಬೇಕಿತ್ತು. ಆಧುನಿಕ ಪೂರ್ವ ಕಾಲಘಟ್ಟದಲ್ಲಿ ಸೇವಕ ಸಮುದಾಯಗಳಿಗೂ ಮತ್ತು ಊಳಿಗಮಾನ್ಯ ವ್ಯವಸ್ಥೆಗಾಗಿ ಇದ್ದ ಸಂಬಂಧಗಳು ಮುರಿದು ಬಿದ್ದವು. ಈ ಮುರಿದ ಬಿದ್ದ ಸಂಬಂಧಗಳಿಂದಾಗಿ ಸೇವಕ ಸಮುದಾಯಗಳು ಅಲೆಮಾರಿಗಳಾಗುವ ಅನಿವಾರ್ಯತೆ ಏರ್ಪಟ್ಟಿತು. ಕಂಪನಿ ಆಡಳಿತದ ಸಂದರ್ಭದಲ್ಲಿ ಅಲೆಮಾರಿಗಳನ್ನು ಅಂದಿನ ಆಡಳಿತ ಯಂತ್ರ ನಡೆಸಿಕೊಂಡು ರೀತಿಯನ್ನು ಈಗಾಗಲೇ ವಿವರಿಸಿದ್ದೇನೆ. ಈ ಸಂದರ್ಭದಲ್ಲಿ ಅಲೆಮಾರಿಗಳು ಅಜ್ಞಾತ ಸ್ಥಳಗಳಲ್ಲಿ ನೆಲೆನಿಂತು ಕೃಷಿಕರಾಗುವ, ಇಲ್ಲವೆ ಭಿನ್ನ ಆರ್ಥಿಕ ಚಟುವಟಿಕೆಗಳನ್ನು ರೂಢಿಸಿಕೊಂಡವು. ಏಕೆಂದರೆ ಆಧುನಿಕ ಜಗತ್ತಿನಲ್ಲಿ ತಮ್ಮ ಪಾರಂಪರಿಕ ವೃತ್ತಿಯು ಲಾಭದಾಯಕವಲ್ಲ ಮತ್ತು ಸಾಮಾಜಿಕ ಅವಮಾನಕ್ಕೆ ಕಾರಣವಾಗುವುದರಿಂದ ಪಾರಂಪರಿಕ ವೃತ್ತಿಯನ್ನು ಬಿಟ್ಟು ಕೊಡಲು ಅಲೆಮಾರಿ ಸಮುದಾಯಗಳು ನಿರ್ಧರಿಸಿದವು. ಅಂಬೇಡ್ಕರ್ ಇದನ್ನು ಹೀಗೆ ವಿವರಿಸುತ್ತಾರೆ. 'ಭಾರತದಲ್ಲಿ ಹಿಂದುಗಳು ಹೀನವೆಂದು ಪರಿಗಣಿಸುವ ಅನೇಕ ವೃತ್ತಿಗಳಿವೆ. ಅವು ಹೀನವೆಂಬ ಭಾವನೆಯಿರುವುದರಿಂದ, ಅವುಗಳಲ್ಲಿ ತೊಡಗಿರುವ ಕೆಲಸಗಾರರು ಕೂಡ ತಮ್ಮ ಕೆಲಸವನ್ನು ಹೀನವೆಂದು ಕಾಣುತ್ತಾರೆ. ಈ ವೃತ್ತಿಗಳಿಂದ ತಪ್ಪಿಸಿಕೊಳ್ಳುವ ಬಯಕೆ ಅವರಿಗೆ ಸತತವಾಗಿರುತ್ತದೆ. ಅವುಗಳಲ್ಲಿ ತೊಡಗಿರುವ ಇತರರಲ್ಲಿಯೂ ಅದನ್ನು ಅವರು ಪ್ರೇರೇಪಿಸುತ್ತಾರೆ. ಹಿಂದೂಧರ್ಮ ಈ ವೃತ್ತಿಗಳಿಗೆ ಆರೋಪಿಸಿದ ತಿರಸ್ಕಾರ ಹಾಗೂ ಕಳಂಕ ಇದಕ್ಕೆ ಕಾರಣವಾಗಿದೆ'[೧೮] ಎನ್ನುತ್ತಾರೆ. ಭಾರತದಲ್ಲಿ ಜಾತಿಯೊಂದರಲ್ಲಿ ಹುಟ್ಟಿದ ಕಾರಣಕ್ಕಾಗಿಯೇ ಹೀನಾಯ ವೃತ್ತಿಗಳನ್ನು ಅವಲಂಬಿಸಿ, ಜಾತಿಯ ಅವಮಾನಗಳನ್ನು ತುಟಿಕಚ್ಚಿ ಅನುಭವಿಸುವ ಪ್ರತಿಯೊಂದು ಜಾತಿಗಳೂ ತಮ್ಮ ವೃತ್ತಿಗಳನ್ನು ನಿರಾಕರಿಸಲಾರಂಭಿಸಿದವು. ತಮ್ಮ ವೃತ್ತಿಗಳನ್ನು ಪ್ರಜ್ಞಾಪೂರ್ವಕವಾಗಿ ನಿರಾಕರಿಸುವುದು ಅಲೆಮಾರಿಗಳಿಗೆ ಮತ್ತು ಕೆಳಜಾತಿಗಳಿಗೆ ತಮ್ಮ ಅಸ್ತಿತ್ವದ ಪ್ರಶ್ನೆಗಿಂತ ಮಹತ್ವದ್ದಾಗಿತ್ತು. ಭಾರತದ ಚರಿತ್ರೆಯಲ್ಲಿ ಈ ಬಗೆಯ ನಿರಾಕರಣೆ ಆಧುನಿಕ ಪೂರ್ವ ಕಾಲಘಟ್ಟದಲ್ಲಿ ಹೆಚ್ಚಿನ ತೀವ್ರತೆಯನ್ನು ಪಡೆದುಕೊಂಡಿತು. ಅಲೆಮಾರಿಗಳು ತಮ್ಮ ವೃತ್ತಿಗಳನ್ನು ಬಿಡುವುದು ಮತ್ತು ಆತ್ಮಗೌರವ ತಂದುಕೊಡುವ ವೃತ್ತಿಗಳನ್ನು ಅವಲಂಬಿಸುವುದು ಈ ಕಾಲಘಟ್ಟದಲ್ಲಿ ನಡೆದು ಹೋಯಿತು.

ಆದರೆ ಹೀಗೆ ತಮ್ಮ ಪಾರಂಪರಿಕ ವೃತ್ತಿಗಳನ್ನು ಬಿಡುವುದು ಎಲ್ಲರಿಗೂ ಸಾಧ್ಯವಾಗಲಿಲ್ಲ. ಹೀಗೆ ಸಾಧ್ಯವಾಗುವುದಕ್ಕೆ ಅನೇಕ ಕಾರಣಗಳೂ ಇರಬಹುದು. ಜಾತಿ ಅವಮಾನಕ್ಕೆ ಕಾರಣವಾಗುವ ವೃತ್ತಿಗಳನ್ನು

ಬಿಟ್ಟುಕೊಟ್ಟವರು ತಮ್ಮ ಪಾರಂಪರಿಕ ಸಮಾಜದಿಂದ ಭಿನ್ನವಾಗಿ ಬದುಕಲಾರಂಭಿಸಿದರು. ಪಾರಂಪರಿಕ ವೃತ್ತಿಯನ್ನು ಅವಲಂಬಿಸಿದವರು ರೂಢಿಗತ ಸಾಮಾಜಿಕ ಸ್ತರದಲ್ಲಿಯೇ ಉಳಿದುಕೊಂಡರು. ಹೀಗೆ ಒಂದೇ ಸಮುದಾಯದ ಎರಡು ಗುಂಪುಗಳ ನಡುವೆ ಅನೇಕ ಸಾಮಾಜಿಕ ಮತ್ತು ಆರ್ಥಿಕ ಭಿನ್ನತೆಗಳು ರೂಪುಗೊಳ್ಳತೊಡಗಿದವು. ಅಲೆಮಾರಿಗಳಲ್ಲಿ ಈ ಬಗೆಯ ಭಿನ್ನ ಗುಂಪುಗಳು ಹುಟ್ಟಿಕೊಂಡದ್ದು ಹೆಚ್ಚು. ಮೇಲೆ ಉಲ್ಲೇಖಿಸಿದ ಹೆಳವರ ಸಾಮಾಜಿಕ ಸಂದರ್ಭವು ಇದಕ್ಕೊಂದು ಜ್ವಲಂತ ಉದಾಹರಣೆಯಾಗಿದೆ. ಡೊಂಬರ ಸಮುದಾಯವೂ ಸಹ ಈ ಬಗೆಯ ಅನಿವಾರ್ಯತೆಯನ್ನು ಮುಖಾಮುಖಿ ಮಾಡಿರುವುದು ಸಹಜವೇ ಆಗಿದೆ. ಡೊಂಬರು ತಮ್ಮ ಪಾರಂಪರಿಕ ವೃತ್ತಿಯಲ್ಲಿ ಅನಿವಾರ್ಯ ಕಾರಣಗಳಿಂದ ಮುಂದುವರಿಯಬೇಕಿತ್ತು. ಊಳಿಗಮಾನ್ಯ ಸಮಾಜದಲ್ಲಿ ಇವರು ತಮ್ಮ ಪಾರಂಪರಿಕ ಕಸುಬನ್ನು ಬಿಟ್ಟುಕೊಡಲು ಸಾಧ್ಯವಿರಲಿಲ್ಲ. ಏಕೆಂದರೆ ಭಿನ್ನ ಆರ್ಥಿಕ ಚಟುವಟಿಕೆಗಳನ್ನು ರೂಢಿಸಿಕೊಳ್ಳಲು ಹಿಂದೂ ಸಮಾಜದ ಒಳಗೆ ಅವಕಾಶಗಳೂ ಇರಲಿಲ್ಲ. ಆದರೆ ಭಾರತದ ಆಧುನಿಕಪೂರ್ವ ಕಾಲಘಟ್ಟದಲ್ಲಿ ಈ ಸಮಾಜದ ಊಳಿಗಮಾನ್ಯ ವ್ಯವಸ್ಥೆ ನಿರಸನಗೊಂಡ ಮೇಲೆ ಸೇವಕ ಸಮುದಾಯಗಳು ತಮ್ಮ ಅವಲಂಬನೆಗಳನ್ನು ಕಳೆದುಕೊಂಡವು. ಡೊಂಬರು ಸಹ ಆಧುನಿಕ ಪೂರ್ವ ಕಾಲಘಟ್ಟದಲ್ಲಿ ಹೀಗೆ ಅತಂತ್ರಗೊಂಡು ಅಲೆಮಾರಿತನವನ್ನು ರೂಢಿಸಿಕೊಂಡರು. ಜೊತೆಗೆ ಇದೇ ಸಮುದಾಯದ ಒಂದು ಗುಂಪು ಪಾರಂಪರಿಕ ವೃತ್ತಿಯನ್ನು ಬಿಟ್ಟುಕೊಡುವುದರ ಮೂಲಕ ಅಲೆಮಾರಿಯಾಗದೆ ನೆಲೆನಿಂತಿತು. ಹೀಗೆ ನೆಲೆನಿಂತ ಮತ್ತು ಅಲೆಮಾರಿ ಗುಂಪುಗಳ ನಡುವೆ ಸೂಕ್ಷ್ಮ ವ್ಯತ್ಯಾಸಗಳೂ ಕಾಣಿಸಿಕೊಳ್ಳತೊಡಗಿದವು. ಜೊತೆಗೆ ಇವೆರಡು ಪ್ರತ್ಯೇಕ ಸಮುದಾಯಗಳಂತೆ ಪರಿಭಾವಿಸಲ್ಪಟ್ಟವು.

ಅಲೆಮಾರಿ ಡೊಂಬರಿಗೂ ಈಗ ತಾವಿರುವ ಸ್ಥಿತಿಯ ಕುರಿತು ಮತ್ತು ತಮ್ಮ ಪಾರಂಪರಿಕ ವೃತ್ತಿಯಾದ ಡೊಂಬರಾಟದ ಕುರಿತು ನಕಾರಾತ್ಮಕ ಭಾವನೆಗಳು ಬೆಳೆದು ನಿಂತಿವೆ. ಪ್ರಾಯಶಃ ಆಧುನಿಕಪೂರ್ವ ಕಾಲಘಟ್ಟದಲ್ಲೂ ಈ ಅಲೆಮಾರಿಗಳು ಡೊಂಬರಾಟವನ್ನು ಪಾರಂಪರಿಕ ವೃತ್ತಿ ಎಂಬ ಅಭಿಮಾನದಿಂದ ಅವಲಂಬಿಸಿದಂತೆ ಕಾಣುವುದಿಲ್ಲ. ಡೊಂಬರಾಟ ಅಂದಿನ ಕಾಲಘಟ್ಟದ ಅಲೆಮಾರಿಗಳಿಗೆ ಅನಿವಾರ್ಯದ ಆರ್ಥಿಕ ಮೂಲವಾಗಿತ್ತು. ಆದರೆ ಇಂದು ಅಲೆಮಾರಿಗಳು ತಮ್ಮ ಪಾರಂಪರಿಕ ವೃತ್ತಿಯನ್ನು ಬಿಟ್ಟು ಶಾಶ್ವತವಾಗಿ ನೆಲೆನಿಲ್ಲುವ ಕುರಿತು ಯೋಚಿಸುತ್ತಿದ್ದಾರೆ. ಆದರೆ ಹೀಗೆ ನೆಲೆ ನಿಲ್ಲುವುದು ಅಷ್ಟು ಸುಲಭವಾಗಿ ನೆರವೇರುವ ಸಂಗತಿಯಲ್ಲ. ತಾಯ್ ಮನಸ್ಸಿನ ಆಡಳಿತ ವ್ಯವಸ್ಥೆಯ ಪ್ರಾಂಜಲ ಕಾರ್ಯಕ್ರಮಗಳಿಂದ ಮಾತ್ರ ಇವರನ್ನು ನೆಲೆನಿಲ್ಲಿಸಲು ಸಾಧ್ಯ.

ಅಲೆಮಾರಿ ಡೊಂಬರ ಸಾಮಾಜಿಕ ಸಂರಚನೆ

ಅಲೆಮಾರಿ ಡೊಂಬರ ಸಾಮಾಜಿಕ ಸಂರಚನೆಯು ತೀರ ಭಿನ್ನ ಸ್ವರೂಪದ್ದಲ್ಲ. ಕರ್ನಾಟಕದಲ್ಲಿ ಈ ಅಲೆಮಾರಿ ಡೊಂಬರು ಹೆಚ್ಚಾಗಿ ಕಾಣಿಸಿಕೊಳ್ಳುವುದು. ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ. ಬೆಳಗಾವಿ, ಹಾವೇರಿ, ಧಾರವಾಡ, ಗದಗ, ಬಾಗಲಕೋಟೆ, ಗುಲ್ಬರ್ಗಾ, ಕೊಪ್ಪಳ, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಈ ಅಲೆಮಾರಿಗಳು ಕಾಣಿಸಿಕೊಳ್ಳುತ್ತಾರೆ. ಈ ಅಲೆಮಾರಿ ಡೊಂಬರು ಒಂದೇ ಸಾಮಾಜಿಕ ಮತ್ತು ಜನಾಂಗಿಕ ಹಿನ್ನೆಲೆಯಿಂದ ಬಂದವರಲ್ಲ. ಮೈಸೂರು, ಬೆಳಗಾವಿ, ಧಾರವಾಡ ಮತ್ತು ಮಧ್ಯಕರ್ನಾಟಕದ ಹಲವು ಜಿಲ್ಲೆಗಳಲ್ಲಿ

ಡೊಂಬರಾಟದ ಪ್ರದರ್ಶನ ನೀಡುವ ಅಲೆಮಾರಿ ಡೊಂಬರು ತಮ್ಮನ್ನು ಮರಾಠಿಗಳೆಂದು ಕರೆದುಕೊಳ್ಳುತ್ತಾರೆ. ತಮ್ಮ ಜಾತಿ ಯಾವುದೆಂದು ಕೇಳಿದರೆ 'ತಾವು ಮರಾಠರು' ಎನ್ನುತ್ತಾರೆ. ಇನ್ನು ರಾಯಚೂರು, ಗುಲ್ಬರ್ಗಾ, ಕೊಪ್ಪಳ, ಬಾಗಲಕೋಟೆ, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿರುವ ಅಲೆಮಾರಿ ಡೊಂಬರು ತಮ್ಮನ್ನು 'ರಜಪೂತರು' ಎಂದು ಕರೆದುಕೊಳ್ಳುತ್ತಾರೆ. ಆದರೆ ಮರಾಠ ಮತ್ತು ರಜಪೂತ ಎನ್ನುವುದು ಅವರ ಸಮುದಾಯದ ಹೆಸರಲ್ಲ ಎಂಬುದು ಅವರ ಜೊತೆ ನಡೆದ ಸುದೀರ್ಘ ಮಾತುಕತೆ ಮತ್ತು ಒಡನಾಟಗಳಿಂದ ಕಂಡು ಬಂದಿತು. ತಮ್ಮನ್ನು 'ರಜಪೂತರು' ಎಂದು ಇವರು ಕರೆದುಕೊಳ್ಳುವುದು ಸಾಮಾಜಿಕ ಅವಮಾನಕ್ಕೆ ಹೆದರಿ. ಮರಾಠರೂ ಎಂದು ಕರೆದುಕೊಳ್ಳುವ ಡೊಂಬರು ಸಹ ಇದೇ ಕಾರಣಕ್ಕೆ ತಮ್ಮನ್ನು ಹೀಗೆ ಸಂಬೋಧಿಸಿಕೊಳ್ಳುತ್ತಾರೆ. ಆದರೆ ಈ ಎರಡೂ ಗುಂಪುಗಳು ಬೇರೆ ಬೇರೆ ರಾಜ್ಯಗಳಿಂದ ಕರ್ನಾಟಕಕ್ಕೆ ವಲಸೆ ಬಂದಿವೆ. ಮರಾಠಿಗರು ಎಂದು ಕರೆದುಕೊಳ್ಳುವ ಡೊಂಬರಾಟದವರು ಮಹಾರಾಷ್ಟ್ರದ 'ಡೊಂಬಾರಿಗಳೇ' ಆಗಿದ್ದಾರೆ. ಇನ್ನು ರಜಪೂತರೆಂದು ಕರೆದುಕೊಳ್ಳುವ ಡೊಂಬರಾಟದವರು ಗುಜರಾತ್ ಮತ್ತು ಮಧ್ಯ ಪ್ರದೇಶಗಳಿಂದ ವಲಸೆ ಬಂದಿರುವುದು ಕಂಡು ಬರುತ್ತದೆ. ಗುಜರಾತ್ ಮತ್ತು ಮಧ್ಯಪ್ರದೇಶಗಳಲ್ಲಿ ಡೊಂಬರಿಗೆ 'ನಾಟ್ಸ್' (Nats) ಎಂದು ಕರೆಯಲಾಗುತ್ತದೆ. ಆದರೆ ಈ ಎರಡೂ ಗುಂಪುಗಳು ಕರ್ನಾಟಕದಲ್ಲಿ ತಾವು ನೀಡುವ ಬೀದಿ ಬದಿಯ ಪ್ರದರ್ಶನವನ್ನು 'ಡೊಂಬರಾಟ' ವೆಂದೇ ಕರೆದುಕೊಳ್ಳುತ್ತವೆ. ನಾನು ನನ್ನ ಅಧ್ಯಯನಕ್ಕಾಗಿ ಸುತ್ತಾಡಿದ ಸಂದರ್ಭದಲ್ಲಿ ಈ 'ಮರಾಠ' ಮತ್ತು 'ರಜಪೂತ' ಎಂದು ಕರೆದುಕೊಳ್ಳುವ ಡೊಂಬರ ಅನೇಕ ಗುಂಪುಗಳ ಜೊತೆ ವರ್ಷಗಳ ಕಾಲ ಒಡನಾಡಿದ್ದೇನೆ. ಈ ಎರಡೂ ಗುಂಪುಗಳು ತಾವು ತೊರೆದು ಬಂದ ತಮ್ಮ ರಾಜ್ಯಗಳಲ್ಲಿ ಅಲೆಮಾರಿ ಡೊಂಬರೇ ಆಗಿದ್ದಾರೆ ಎಂಬುದು ತಿಳಿದು ಬರುತ್ತದೆ.

ಅಲೆಮಾರಿ ಡೊಂಬರಲ್ಲಿ 'ಮರಾಠರು' ಎಂದು ಕರೆದುಕೊಳ್ಳುವ ಡೊಂಬರ ಗುಂಪಿಗೆ ನಿಶ್ಚಿತ ವಾಸಸ್ಥಳಗಳಿವೆ. ಇವರು ಆಯಾ ಜಿಲ್ಲೆಯ ಅಜ್ಞಾತ ಹಳ್ಳಿಗಳಲ್ಲಿ ತಮಗೆ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಆದರೆ 'ರಜಪೂತ'ರೆಂದು ಕರೆದುಕೊಳ್ಳುವ ಡೊಂಬರು ಮಾತ್ರ ಇಂದಿಗೂ ವರ್ಷಕ್ಕೊಮ್ಮೆ ತಮ್ಮ ಮೂಲ ರಾಜ್ಯಗಳಾದ ಗುಜರಾತ್ ಮತ್ತು ಮಧ್ಯಪ್ರದೇಶಗಳಿಗೆ ಹಿದಿರುಗುತ್ತಾರೆ. ಇವರಲ್ಲಿ ಹಲವು ಗುಂಪುಗಳು ವರ್ಷಕ್ಕೊಮ್ಮೆ ಕಡ್ಡಾಯವಾಗಿ ತಮ್ಮ ಮೂಲ ರಾಜ್ಯಗಳಿಗೆ ವಾಪಸಾಗಿ ಪುನಃ ಕರ್ನಾಟಕಕ್ಕೆ ಡೊಂಬರಾಟ ಪ್ರದರ್ಶಿಸಲು ಬರುತ್ತಾರೆ. ಇವರಲ್ಲಿ ಕೆಲವರಿಗೆ ಮಾತ್ರ ಉತ್ತರ ಕರ್ನಾಟಕದ ಕೆಲವು ಹಳ್ಳಿಗಳಲ್ಲಿ ಮನೆಗಳಿದ್ದು ಇವರು ಕರ್ನಾಟಕದವರೇ ಆಗಿಬಿಟ್ಟಿದ್ದಾರೆ. ತಮ್ಮನ್ನು ಮರಾಠರೆಂದು ಕರೆದುಕೊಳ್ಳುವ ಡೊಂಬರಿಗೆ ಮಾತ್ರ ಗುಲ್ಬರ್ಗಾ, ರಾಯಚೂರು, ಬಾಗಲಕೋಟೆ, ಕೊಪ್ಪಳ ಮತ್ತು ಹಾವೇರಿ ಜಿಲ್ಲೆಗಳಲ್ಲಿ ವಾಸದ ನೆಲೆಗಳಿವೆ. ಇವರು ಮೇಲ್ಕಾಣಿಸಿದ ಜಿಲ್ಲೆಗಳ ಕೆಲವು ಗ್ರಾಮಗಳಲ್ಲಿ ನೆಲೆನಿಂತಿದ್ದಾರೆ. ಆದರೆ ಇವರು ವರ್ಷಪೂರ್ತಿ ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳಲ್ಲಿ ತಿರುಗಾಡುತ್ತ ಡೊಂಬರಾಟದ ಪ್ರದರ್ಶನ ನೀಡುತ್ತಲೇ ಬದುಕುತ್ತಾರೆ. ತಮ್ಮ ವಾಸದ ನೆಲೆಗಳಲ್ಲಿ ವಯಸ್ಸಾದ ತಂದೆ ತಾಯಿಗಳನ್ನು ಬಿಟ್ಟು ಬರುತ್ತಾರೆ. ಈ ತಂದೆ ತಾಯಿಗಳಿಗೆ ಹಣಕಾಸು ಮುಂತಾದ ನೆರವು ನೀಡಲು ತಮ್ಮ ಸ್ವಗ್ರಾಮಕ್ಕೆ ಇವರು ಹೋಗಿಬರುವುದುಂಟು. ಈ ಅಲೆಮಾರಿ ಡೊಂಬರ ನಾಲ್ಕೈದು ಕುಟುಂಬಗಳು ಕೆಲವು ಹಳ್ಳಿಗಳಲ್ಲಿ ನೆಲೆನಿಂತಿವೆ. ಇವರು ನಾಲ್ಕೈದು ಕುಟುಂಬಗಳ ಹೊರತಾಗಿ ಹೆಚ್ಚು ಗುಂಪು

ಮಾಡಿಕೊಳ್ಳುವುದಿಲ್ಲ. ಹೀಗೆ ನೆಲೆನಿಂತ ಊರಿನ ತಮ್ಮ ವಾಸದ ಮನೆಯ ಸಮೀಪವೇ ತಮ್ಮ ದೇವತೆಯ ಪುಟ್ಟ ಗುಡಿಯನ್ನು ಕಟ್ಟಿಕೊಂಡಿದ್ದಾರೆ. ಗುಡಿ ಎಂದರೆ ನಾಲ್ಕು ಹಾಸುಗಲ್ಲುಗಳನ್ನು ಚೌಕಾಕಾರದಲ್ಲಿ ಜೋಡಿಸಿದ ಒಂದು ಪುಟ್ಟ ಗೂಡೇ ಇವರ ದೇವತೆಯ ಗುಡಿ. ತಾವು ಮರಾಠರೆಂದು ಹೇಳಿಕೊಳ್ಳುವ ಡೊಂಬರು ಹುಲಿಗೆಮ್ಮನನ್ನು ಪೂಜಿಸುತ್ತಾರೆ. ವರ್ಷಕ್ಕೊಮ್ಮೆ ದೀಪಾವಳಿಯಂದು ಈ ಹುಲಿಗೆಮ್ಮನ ಹಬ್ಬವನ್ನು ಸಾಮೂಹಿಕವಾಗಿ ಆಚರಿಸುತ್ತಾರೆ. ಹೀಗೆ ಹಬ್ಬದಂದು ಹುಲಿಗೆಮ್ಮನ ಪೂಜೆಯು ಒಂದು ಹಂತಕ್ಕೆ ಬಂದಾಗ ಆ ಗುಂಪಿನ ಹಿರಿಯನೊಬ್ಬನ ಮೇಲೆ ದೇವಿ ಆವಹನೆಯಾಗುತ್ತಾಳೆ. ದೇವಿ ಮೈದುಂಬಿದ ಹಿರಿಯನು ತನ್ನ ಗುಂಪಿನ ಸದಸ್ಯರಿಗೆ ಈ ವರ್ಷ ಯಾವ ಯಾವ ಕಡೆ ಪ್ರದರ್ಶನ ನೀಡಲು ಹೋಗಬೇಕು. ಹೇಗೆ ವರ್ಷವಿಡೀ ಸಮುದಾಯದ ಐಕ್ಯತೆಯನ್ನು ಕಾಪಾಡಬೇಕು ಎಂಬ ಕುರಿತು ನಿರ್ದೇಶನ ನೀಡುತ್ತಾನೆ. ಹುಲಿಗೆಮ್ಮನ ಪೂಜೆಯು ತಾಂತ್ರಿಕ ಆಚರಣೆಯಂತೆಯೇ ನಡೆಯುತ್ತದೆ. ನಂತರ ಡೊಂಬರೆಲ್ಲ ಸಾಮೂಹಿಕ ಭೋಜನದಲ್ಲಿ ಪಾಲ್ಗೊಳ್ಳುತ್ತಾರೆ. ಈ ಅಲೆಮಾರಿ ಡೊಂಬರ ಹಿರಿಯನ ಮನೆಯಲ್ಲೂ ಪೆಟ್ಟಿಗೆ ದೇವರು ಇರುವುದನ್ನು ನಾನು ಗಮನಿಸಿದೆ. ನೆಲೆನಿಂತ ಡೊಂಬರ ಮನೆಯಲ್ಲಿನ ಪೆಟ್ಟಿಗೆಯಲ್ಲಿನ ಪದಕಗಳು, ಉಬ್ಬುಶಿಲ್ಪಗಳು, ಕುದುರೆ ಸವಾರನ ಮೂರ್ತಿಗಳೇ ಅಲೆಮಾರಿ ಡೊಂಬರ ಮುಖಂಡನ ಮನೆಯಲ್ಲೂ ಇದ್ದವು. ಆದರೆ ಅಲೆಮಾರಿ ಡೊಂಬರು ಶ್ರೀವೈಷ್ಣವ ಮತಕ್ಕೆ ಮತಾಂತರಗೊಂಡಿಲ್ಲ. ಇವರು ಅಪ್ಪಟ ಶಕ್ತಿ ಆರಾಧಕರು. ಇವರ ಮೇಲೆ ಶೈವ ಧರ್ಮದ ಪ್ರಭಾವವೂ ಕಡಿಮೆ.

ಈ ಅಲೆಮಾರಿ ಡೊಂಬರು ಕರ್ನಾಟಕದಲ್ಲಿ ನೆಲೆನಿಂತ ಡೊಂಬರ ಜೊತೆ ರಕ್ತ ಸಂಬಂಧ ಬೆಳೆಸಿರುವ ಉದಾಹರಣೆಗಳು ತೀರ ಇತ್ತೀಚೆಗೆ ಸಿಗುತ್ತವೆ. ಇವರು ಹೆಚ್ಚಾಗಿ ಆಂಧ್ರ ಪ್ರದೇಶ, ಮಹಾರಾಷ್ಟ್ರದಲ್ಲಿರುವ ತಮ್ಮ ಗುಂಪಿನಿಂದಲೇ ಚದುರಿ ಹೋಗಿರುವವರ ಜೊತೆ (ಅವರೂ ಅಲೆಮಾರಿಗಳು) ರಕ್ತ ಸಂಬಂಧಗಳನ್ನು ಬೆಳೆಸಿರುವುದುಂಟು. ಆದರೆ ತೀರ ಇತ್ತೀಚೆಗೆ ಗುಲ್ಬರ್ಗಾ, ಬಿಜಾಪುರ ಮತ್ತು ಹಾವೇರಿ ಜಿಲ್ಲೆಗಳಲ್ಲಿಯ ನೆಲೆನಿಂತ ಡೊಂಬರ ಸಮುದಾಯದ ಜೊತೆ ವೈವಾಹಿಕ ಸಂಬಂಧಗಳನ್ನು ಈ ಡೊಂಬರು ಏರ್ಪಡಿಸಿಕೊಂಡಿದ್ದಾರೆ. ಈ ಅಲೆಮಾರಿಗಳಿಗೆ ಗುಲ್ಬರ್ಗದಲ್ಲಿನ ದರ್ಗಾಶಿರೂರಲ್ಲಿ ಕಟ್ಟೆ ಮನೆ ಇದೆ. ಆದರೆ ಸಣ್ಣ ಪುಟ್ಟ ವ್ಯಾಜ್ಯಗಳನ್ನು ಆಯಾ ಗುಂಪಿನ ಯಜಮಾನನೇ ಬಗೆ ಹರಿಸುತ್ತಾನೆ. ಮದುವೆ ಮುಂತಾದ ಸಮಾರಂಭಗಳನ್ನು ತಾವು ನೆಲೆನಿಂತ ಹಳ್ಳಿಗಳಲ್ಲಿಯೇ ಇವರು ನೆರವೇರಿಸುತ್ತಾರೆ. ಬಾಲ್ಯವಿವಾಹವು ಇವರಲ್ಲಿ ಹೆಚ್ಚು. ಇದು ಅವರಿಗೆ ಅನಿವಾರ್ಯವೂ ಹೌದು. ಬೇರೆ ಬೇರೆ ಗುಂಪುಗಳಲ್ಲಿ ಹರಿದು ಹಂಚಿಹೋಗುವ ಇವರು ತಮ್ಮ ಹೆಣ್ಣು ಮಕ್ಕಳನ್ನು ಪ್ರದರ್ಶನ ನೀಡುವ ಸಲುವಾಗಿ ಬೇಗ ಮದುವೆ ಮಾಡಿಕೊಡುತ್ತಾರೆ. ಡೊಂಬರಾಟದ ಸಂದರ್ಭದಲ್ಲಿ ವಿವಿಧ ಕಸರತ್ತುಗಳನ್ನು ಮಾಡುವವಳು ಮಹಿಳೆ. ದೈಹಿಕ ಶಕ್ತಿಯನ್ನು ಪ್ರದರ್ಶಿಸುವ ಕೆಲವೇ ಕೆಲವು ಕಸರತ್ತುಗಳನ್ನು ಹೊರತು ಪಡಿಸಿದರೆ ಗಂಡಸರು ಡೊಂಬರಾಟದಲ್ಲಿ ಪ್ರಧಾನ ಪಾತ್ರ ವಹಿಸುವುದಿಲ್ಲ. ಆದರೆ ಮಹಿಳೆಯರು ಡೊಂಬರಾಟದಲ್ಲಿ ಅನೇಕ ಕೌಶಲ್ಯಪೂರ್ಣ ಕಸರತ್ತುಗಳನ್ನು ನಿರ್ವಹಿಸುತ್ತಾರೆ. ಪ್ರದರ್ಶನ ಮುಗಿದು ಸಂಜೆಯ ಹೊತ್ತಿಗೆ ಅಂದಿನ ಒಟ್ಟು ಸಂಪಾದನೆಯನ್ನು ಗುಂಪಿನ ಕುಟುಂಬಗಳಿಗೆ ಸಮನಾಗಿ ಹಂಚಲಾಗುತ್ತದೆ.

ಅಲೆಮಾರಿಗಳಿಗೆ ಕರ್ನಾಟಕದಲ್ಲಿ ತಾವು ನೆಲೆನಿಂತ ಯಾವ ಗ್ರಾಮದಲ್ಲೂ ಒಂದಿಂಚು ಕೃಷಿಭೂಮಿ ಇಲ್ಲ. ಅಷ್ಟೇ ಏಕೆ ಹಲವರಿಗೆ ಮನೆಗಳಿಲ್ಲ. ತಮ್ಮ 'ಖಾಯಂ ವಾಸಸ್ಥಳ' ಎಂದು 'ಭಾವಿಸುವ' ಹಳ್ಳಿಗಳಲ್ಲಿ ಹಲವರು ಗುಡಾರದಲ್ಲಿಯೇ ವಾಸಿಸುತ್ತಾರೆ. ಕೆಲವರು ಹುಲ್ಲುಗುಡಿಸಲುಗಳನ್ನು ಹಾಕಿಕೊಂಡಿದ್ದಾರಾದರೂ, ತಾವು ತಿರುಗಾಡುವ ಸಂದರ್ಭದಲ್ಲಿ ಅದು ಗಾಳಿ ಮಳೆಗಳಿಗೆ ಶಿಥಿಲಗೊಂಡಿರುತ್ತದೆ. ವರ್ಷಕ್ಕೊಮ್ಮೆ ಆ ಗುಡಿಸಲುಗಳನ್ನು ನವೀಕರಿಸಬೇಕು. ಓಟಿನ ಕಾರ್ಡು, ಪಡಿತರ ಚೀಟಿಯಂತಹ ಪ್ರಾಥಮಿಕ ನಾಗರಿಕ ದಾಖಲೆಗಳಲ್ಲಿಯೇ ಈ ಡೊಂಬರು ನಮೂದಾಗಿಲ್ಲ. ಹಲವು ಕಡೆ ಇವರು ಓಟಿನ ಪಟ್ಟಿಯಲ್ಲಿಯೇ (Voters List) ದಾಖಲಾಗಿಲ್ಲ. ಅಕಸ್ಮಾತ್ ಜಾತಿ ಪ್ರಮಾಣಪತ್ರ ಕೇಳಲು ತಾಲೂಕು ಕಛೇರಿಗೆ ಹೋದರೆ, ಅಲ್ಲಿನ ತಹಶೀಲ್ದಾರನು 'ನೀವು ಡೊಂಬರೆನ್ನುವುದಕ್ಕೆ ಏನು ಸಾಕ್ಷಿ ಇದೆ' ಎಂದು ಕೇಳಿದ ಉದಾಹರಣೆಗಳು ಸಾಕಷ್ಟಿವೆ. ಈ ತಹಶೀಲ್ದಾರ್ ಎಂಬಾತ ಡೊಂಬರಿಗೆ ತಮ್ಮ ಜಾತಿ ಯಾವುದೆಂಬುದನ್ನೇ ಗುರುತಿಸಿಕೊಳ್ಳಲಾಗದ ಸಂದಿಗ್ಧತೆಯನ್ನು ಸೃಷ್ಟಿ ಮಾಡಿಬಿಟ್ಟಿದ್ದಾನೆ. ಈ ಸಮಸ್ಯೆಯು ಕೇವಲ ಅಲೆಮಾರಿಗಳಿಗೆ ಮಾತ್ರ ಇಲ್ಲ. ಹೊಸಪೇಟೆ ತಾಲೂಕಿನಲ್ಲಿ ತಲೆತಲಾಂತರಗಳಿಂದ ವಾಸಿಸುತ್ತಿರುವ ನೆಲೆನಿಂತ ಡೊಂಬರಿಗೂ ಒಬ್ಬ ತಹಶೀಲ್ದಾರ ಈ ಬಗೆಯ ಸಂದಿಗ್ಧತೆಯನ್ನು ಸೃಷ್ಟಿಸಿಬಿಟ್ಟಿದ್ದ. ನಾನು ಅನೇಕ ಪುಸ್ತಕ ಮತ್ತು ದಾಖಲೆಗಳನ್ನು ತೆಗೆದುಕೊಂಡು ಹೋಗಿ ಆತನಿಗೆ ಡೊಂಬರ ಸಮುದಾಯದ ಕುರಿತು ಮನವರಿಕೆ ಮಾಡಿದರೂ, ಆತ ಗೊಣಗಾಡುತ್ತಲೇ ಜಾತಿ ಪ್ರಮಾಣ ಪತ್ರ ಕೊಡಲು ಒಪ್ಪಿದ. ಅಂದರೆ ಭಾರತವೆಂಬ ದೇಶವು ಈ ಅಲೆಮಾರಿಗಳ ಜಾತಿಯನ್ನೂ ಕಿತ್ತುಕೊಳ್ಳುತ್ತಿರುವುದು ಯಾವ ದುರಂತವೋ ಗೊತ್ತಾಗುತ್ತಿಲ್ಲ. ಭಾರತದಲ್ಲಿ ಅಲೆಮಾರಿಗಳ ಸಂಖ್ಯೆ ೬ ಕೋಟಿ ಎಂದು ಅಂದಾಜಿಸಲಾಗುತ್ತದೆ. ಆದರೆ ಇದನ್ನು ನಂಬುವುದು ಕಷ್ಟ. ಏಕೆಂದರೆ ಅಲೆಮಾರಿಗಳು ಸರಕಾರದ ಯಾವ ಲೆಕ್ಕಾಚಾರದಲ್ಲೂ ಇನ್ನು ದಾಖಲಾಗದೇ ಉಳಿದಿದ್ದಾರೆ. ಇನ್ನು ಸರಕಾರಿ ಸೌಲಭ್ಯ ಇತ್ಯಾದಿ ಸಂಗತಿಗಳು ಅವರನ್ನು ತಲುಪಲು ಸಾಧ್ಯವಾಗುವುದಾದರೂ ಹೇಗೆ ? ಈ ಕುರಿತು ಡೊಂಬರಿಗೆ ಅಂತಹ ಬೇಸರವೇನೂ ಇಲ್ಲ. ಏಕೆಂದರೆ ಅವರು ನಾವು ಊಹಿಸಲೂ ಸಾಧ್ಯವಾಗದ ಒಂದು ಅನೂಹ್ಯ ಸಾಮಾಜಿಕ ಮತ್ತು ರಾಜಕೀಯ ಸಂದರ್ಭದಲ್ಲಿ ಬದುಕುತ್ತಿದ್ದಾರೆ. ಒಂದು ರಾಜ್ಯ, ದೇಶ, ಸರಕಾರ ಆಡಳಿತ ಯಂತ್ರ ಎಂಬ ಯಾವ ಕಲ್ಪನೆಗಳೂ ಅವರನ್ನು ಕಾಡುತ್ತಿಲ್ಲ. ನಾನು ಈ ಕುರಿತು ಪ್ರಶ್ನಿಸಲು ಹೋದಾಗಲೆಲ್ಲ, ಅವರಿಂದ ಬರುತ್ತಿದ್ದ ಪ್ರತಿಕ್ರಿಯೆಯೆಂದರೆ ವಿಷಾದಪೂರ್ಣ ಪೆಚ್ಚು ನಗೆ ಮಾತ್ರ. ಈ ಅಲೆಮಾರಿಗಳು ನಮ್ಮ ನಡುವೆ ಬದುಕಿಯೂ ನಮ್ಮಂತಾಗದ ಜನ. ಅಥವಾ ನಮ್ಮಂತಾಗದೆ ಅವರನ್ನು ತಡೆದುಬಿಟ್ಟಿರುವ ರಾಜಕೀಯಾರ್ಥಿಕ ಸಂದರ್ಭದಲ್ಲಿ ಬದುಕುತ್ತಿರುವ ಜನ. ಅಥವಾ ಈ ದೇಶದ ಪರಂಪರೆಯ ಕಾರಣಕ್ಕಾಗಿ ಯಾವುದೋ ಕಾಲಘಟ್ಟದ ಪಳಿಯುಳಿಕೆಯಂತೆ ಬದುಕುತ್ತಿರುವ 'ಹತಭಾಗ್ಯ' ಜನ.

ಸ್ಥಿರ ಮತ್ತು ಅಲೆಮಾರಿ ಸಮುದಾಯಗಳ ನಡುವಿನ ಸಾಮ್ಯ ಮತ್ತು ವೈರುಧ್ಯಗಳು

ಸ್ಥಿರ ಮತ್ತು ಅಲೆಮಾರಿ ಸಮುದಾಯಗಳ ನಡುವೆ ಹಲವು ಸಾಮ್ಯ ಮತ್ತು ವೈರುಧ್ಯಗಳಿರುವುದು ಸಹಜ. ಈ ಹಿಂದೆ ಹೇಳಿದಂತೆ ಈ ದೇಶದ ಸಮಾಜದ ಚಾರಿತ್ರಿಕ ಬೆಳವಣಿಗೆಯಲ್ಲಿ ಸೇವಕ ವರ್ಗಕ್ಕೆ ಸೇರಿದ ಡೊಂಬರಂತಹ ಸಮುದಾಯಗಳು ಆರ್ಥಿಕವಾಗಿ ಊಳಿಗಮಾನ್ಯ ವ್ಯವಸ್ಥೆಯನ್ನೇ ಅವಲಂಬಿಸಿಕೊಂಡು ಬಂದವು.

ಈ ಬಗೆಯ ಆರ್ಥಿಕ ಅವಲಂಬನೆಯು ಸಮುದಾಯವೊಂದರ ಸಮಾಜವನ್ನು ಹಲವು ವೈರುಧ್ಯಗಳ ಜೊತೆ ರೂಪಿಸುತ್ತಾ ಬರುತ್ತದೆ. ನಿರ್ದಿಷ್ಟ ವಾಸದ ನೆಲೆ ಮತ್ತು ನಿಶ್ಚಿತ ಆರ್ಥಿಕ ಮೂಲಗಳು ಸಮುದಾಯವೊಂದರ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಹರೆಗಳನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರವಹಿಸುತ್ತವೆ. ಆರ್ಥಿಕತೆಯು ಸಮುದಾಯವೊಂದರ ಬದುಕಿನ ಸಮಗ್ರತೆಯನ್ನು ಒಂದು ನಿಶ್ಚಿತ ವಿನ್ಯಾಸದಲ್ಲಿ ಆಕಾರಗೊಳಿಸುತ್ತದೆ. ಸಂಸ್ಕೃತಿಗೆ ಲಭ್ಯವಾಗುವ ಈ ವಿನ್ಯಾಸ ಕಾಲದಿಂದ ಕಾಲಕ್ಕೆ ಬದಲಾದರೂ ಸಹ ಅದಕ್ಕೆ ಒಂದು ಪಾರಂಪರಿಕ ಸಾತತ್ಯವಿರುತ್ತದೆ. ಇಡಿಯಾದ ಸ್ಥಿರ ಸಮುದಾಯಗಳ ಸಂದರ್ಭದಲ್ಲಿ ಇದು ಹೆಚ್ಚು ಪ್ರಸ್ತುತ ಸಂಗತಿಯಾಗಿದೆ. ಆದರೆ ಅಲೆಮಾರಿಗಳ ಜೀವನ ವಿಧಾನವು ಇದಕ್ಕೆ ವ್ಯತಿರಿಕ್ತವಾದದ್ದು. ಹಾಗೆ ನೋಡಿದರೆ ಯಾವ ಸಮುದಾಯವೂ ಸಾಂಸ್ಕೃತಿಕವಾಗಿ ಒಂದು ಸಮಗ್ರತೆಯನ್ನು ಮತ್ತು ಏಕಾಕಾರವನ್ನು ಪಡೆದಿರಲು ಸಾಧ್ಯವಿಲ್ಲ. ಆದರೆ ಸ್ಥಿರ ಸಮುದಾಯಗಳಿಗೆ ಅದರಲ್ಲೂ ಅಧಿಕಾರಸ್ಥ ಸಮುದಾಯಗಳಿಗೆ ಈ ಬಗೆಯ ಸಮಗ್ರತೆಯು ಕಾಲದಿದ ಕಾಲಕ್ಕೆ ಬದಲಾದರೂ ಸಹ ಒಂದು ತರ್ಕಬದ್ಧ ಸಾತತ್ಯತೆಯನ್ನು ಸಾಧಿಸಿಕೊಂಡು ಬಂದಿರುತ್ತವೆ. ಇದಕ್ಕೆ ಈ ಸಮುದಾಯಗಳ ಆರ್ಥಿಕ ಸ್ವಾವಲಂಬನೆ ಮತ್ತು ಸಾಮಾಜಿಕ ಆತ್ಮಪ್ರತ್ಯಗಳು ಪೂರಕವಾಗಿರುತ್ತವೆ. ಆದರೆ ಅಲೆಮಾರಿಗಳಿಗೆಆರ್ಥಿಕ ಸ್ವಾವಲಂಬನೆಯಾಗಲಿ ಮತ್ತು ಆತ್ಮಪ್ರತ್ಯಯಗಳಾಗಲಿ ಶತಮಾನಗಳ ಕಾಲ ಲಭ್ಯವಾಗದೇ ಹೋಗಿವೆ. ಜೊತೆಗೆ ಅಲೆಮಾರಿ ಎನ್ನಿಸಿಕೊಡ ಸಮುದಾಯವೊಂದು ನೆಲೆನಿಂತ ತನ್ನದೇ ಗುಂಪಿಗೆ ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಅಪರಿಚಿತವಾಗಿ ಬಿಡುವುದು ಇಂಡಿಯಾದ ಸಮಾಜದಲ್ಲಿ ಅನೂಚಾನವಾಗಿ ನಡೆದುಕೊಂಡು ಬಂದಿದೆ. ಆಧುನಿಕ ಪೂರ್ವ ಕಾಲಘಟ್ಟದಲ್ಲಿ ಡೊಂಬರಂತಹ ಸಮುದಾಯಗಳು ಈ ಬಗೆಯ ಸಂದಿಗ್ಧಗಳಿಗೆ ಈಡಾದವು. ತಾವು ಬದುಕುತ್ತಿದ್ದ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯಲ್ಲಿ ನಿಶ್ಚಿತ ಆರ್ಥಿಕ ನೆಲೆಗಳಿಲ್ಲದೆ, ವಸಾಹತು ಆಡಳಿತದ ಅನೇಕ ಅಮಾನವೀಯ ಕಾನೂನುಗಳಿಂದ ತಪ್ಪಿಸಿಕೊಳ್ಳಲಾರದೆ ಅಲೆಮಾರಿಗಳು ತಮ್ಮ ಅಸ್ತಿತ್ವದ ಕುರಿತು ಹೆಚ್ಚು ತಳಮಳಗೊಂಡವು. ಈ ಅಸ್ತಿತ್ವದ ತಳಮಳಗಳೇ ಡೊಂಬರಂತಹ ಸಮುದಾಯದ ಸಾಮಾಜಿಕ ವ್ಯವಸ್ಥೆಯಲ್ಲಿ ಹಲವು ವೈರುಧ್ಯಗಳನ್ನು ಹುಟ್ಟು ಹಾಕಿದವು. ಸಮುದಾಯವೊಂದು ತನ್ನಷ್ಟಕ್ಕೇ ತಾನೇ ಈ ಬಗೆಯ ವಿಘಟನೆಗೆ ಒಡ್ಡಿಕೊಂಡಿದ್ದರೆ ಪ್ರಾಯಶಃ ಈ ಚರ್ಚೆಯ ಸ್ವರೂಪ ಹೀಗಿರಲು ಸಾಧ್ಯವಿರುತ್ತಿರಲಿಲ್ಲ. ಆದರೆ ಭಾರತದಂತಹ ಸ್ವಯಂಪೂರ್ಣ ಸಮಾಜದಲ್ಲಿ ಯಾವ ಸಮುದಾಯವೂ ತನ್ನಷ್ಟಕ್ಕೆ ತಾನು ಸ್ವತಂತ್ರವಲ್ಲ. ಸಮುದಾಯವೊಂದು ಈ ಹಿಂದೂ ಸಮಾಜದ ವಿರಾಟ್ ಚಟುವಟಿಕೆಗಳ ಭಾಗವಾಗಿ ತನ್ನನ್ನು ರೂಪಿಸಿಕೊಳ್ಳುತ್ತಾ ಬಂದಿದೆ. ಜೊತೆಗೆ ಈ ದೇಶದಲ್ಲಿ ಬದಲಾದ ಧಾರ್ಮಿಕ ಸನ್ನಿವೇಶಗಳು, ವೈಚಾರಿಕ ಧಾರೆಗಳು ಮತ್ತು ಕಾಲದಿಂದ ಕಾಲಕ್ಕೆ ಬದಲಾದ ಭಾರತದ ರಾಜಕೀಯಾರ್ಥಿಕ ವ್ಯವಸ್ಥೆಗಳೂ ಸಹ ಸಮುದಾಯಗಳನ್ನು ಮರುರೂಪಿಸುತ್ತಾ ಬಂದಿವೆ. ಇದರಿಂದಾಗಿ ಭಾರತದಲ್ಲಿ ವಾಸಿಸುವ ಪ್ರತಿಯೊಂದು ಸಮುದಾಯವು ಕಾಲಬದ್ಧ ಬದಲಾವಣೆಗಳಿಗೆ ಪಕ್ಕಾಗುತ್ತಲೇ ಬಂದಿವೆ. ಹೀಗೆ ಬದಲಾವಣೆಗೆ ಒಪ್ಪಿಸಿಕೊಳ್ಳುವಾಗ ಸಮುದಾಯಗಳ ಸಾಮಾಜಿಕ ಆರ್ಥಿಕ ಸ್ಥಾನಮಾನಗಳೂ ಹೆಚ್ಚು ಪರಿಗಣನೆಗೆ ಒಳಗಾಗುತ್ತವೆ. ಅಧಿಕಾರಸ್ಥರು ಮತ್ತು ಅಧಿಕಾರ ರಹಿತರ ನಡುವೆ ಸಂಭವಿಸುವ ಒಂದೇ ಕಾಲಘಟ್ಟದ ವಿವಿಧ ಬಗೆಯ ಪ್ರಭಾವಗಳು ಭಿನ್ನ ಪರಿಣಾಮಗಳನ್ನು ಬೀರಿರುವುದು ನಮಗೆ ಕಂಡು ಬರುತ್ತದೆ.

ಭಾರತದಂತಹ ಶ್ರೇಣೀಕೃತ ಸಮಾಜದಲ್ಲಿ ಸಾಮಾಜಿಕ ಬದಲಾವಣೆಗಳು ಅಧಿಕಾರಸ್ಥ ಮತ್ತು ಅಧಿಕಾರರಹಿತ ಸಮುದಾಯಗಳ ಮೇಲೆ ನಿಶ್ಚಿತ ಪರಿಣಾಮಗಳನ್ನು ಬೀರಿಲ್ಲ. ಬದಲಾವಣೆಗಳು ಅಧಿಕಾರಸ್ಥ ಸಮುದಾಯಗಳಿಗೆ ಆಯ್ಕೆಗಳನ್ನು ಪರಿಕಲ್ಪಿಸುವ ಅವಕಾಶಗಳನ್ನು ನೀಡಿದರೆ, ಅಧೀನ ಸಮುದಾಯಗಳಿಗೆ ಆಯ್ಕೆಗಳ ಅವಕಾಶಗಳಿಲ್ಲ. ಬದಲಾವಣೆಗಳನ್ನು ಪ್ರಧಾನ ಸಮುದಾಯಗಳು ತಮ್ಮ ಅಧಿಕಾರಸ್ಥ ಸ್ಥಿತಿಗತಿಗಳಿಗೆ ಒಗ್ಗಿಸಿಕೊಳ್ಳುವ ಅವಕಾಶಗಳಿರುತ್ತವೆ. ಆದರೆ ಅಧೀನ ಸಮುದಾಯಗಳಿಗೆ ಬದಲಾವಣೆಗಳೆಂದರೆ ಪ್ರಹಾರ. ಈ ಕಾರಣದಿಂದಾಗಿ ಅಧೀನ ಸಮುದಾಯಗಳಿಗೆ ಬದಲಾವಣೆಗಳಿಂದ ವಿಘಟಿತಗೊಂಡಿವೆ, ಜೊತೆಗೆ ಭಗ್ನಗೊಂಡ ಸ್ಥಿತಿಯಲ್ಲೇ ಹಲವು ವೈರುಧ್ಯಗಳೊಂದಿಗೆ ಬದುಕಿ ಬಂದಿವೆ.

ಡೊಂಬರು ಪ್ರಾಯಶಃ ಆಧುನಿಕಪೂರ್ವ ಕಾಲಘಟ್ಟದವರೆಗೆ ಒಂದು ನಿಶ್ಚಿತ ಸಾಮಾಜಿಕ ವೃತ್ತದೊಳಗೆ ಅಲೆಮಾರಿಗಳಾಗಿದ್ದುಕೊಂಡು ಊಳಿಗಮಾನ್ಯ ವ್ಯವಸ್ಥೆಯನ್ನು ಆರ್ಥಿಕವಾಗಿ ಅವಲಂಬಿಸಿಕೊಂಡೇ ಬಂದಿದ್ದಾರೆ. ಆದರೆ ವಸಾಹತು ಆಡಳಿತದಲ್ಲಿ ಉತ್ಪಾದನಾ ವಿಧಾನದಲ್ಲಾದ ಬದಲಾವಣೆಗಳು ಇಲ್ಲಿನ ಉತ್ಪಾದನಾ ಸಂಬಂಧಗಳನ್ನು ನಿರ್ಣಾಯಕವಾಗಿ ರೂಪಾಂತರಿಸಿದವು. ಜೊತೆಗೆ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಂದಾಗಿ ಯಾವ ಸಮುದಾಯಗಳು ಅಧೀನ ಮತ್ತು ಪ್ರಧಾನ ಸಮುದಾಯಗಳೆಂದು ಪರಿಗಣಿಸಲ್ಪಟ್ಟಿದ್ದವೋ ಆ ಸಮುದಾಯಗಳ ಪಾರಂಪರಿಕ ಸ್ಥಾನಮಾನಗಳೂ ಸಹ ಏರುಪೇರಾದವು. ಜೊತೆಗೆ ಬಿಡುಗಡೆಯೇ ಸಾಧ್ಯವಾಗದೆ ತಲ್ಲಣಗಳಲ್ಲಿಯೇ ಬದುಕಿ ಬಂದಿದ್ದ ಅಧೀನ ಸಮುದಾಯಗಳು ಈ ಬದಲಾದ ಉತ್ಪಾದನಾ ವ್ಯವಸ್ಥೆಯಲ್ಲಿ ತಮ್ಮ ಪರಂಪರೆಯ ಕಾರಣಗಳಿಂದ ಪ್ರಾಪ್ತವಾಗಿದ್ದ ಅಧೀನತೆಯಿಂದ ವಿಮೋಚನೆಗೊಳ್ಳುವ ಅವಕಾಶಗಳನ್ನ ಪಡೆದವು. ಬಂಡವಾಳಶಾಹಿ ಉತ್ಪಾದನಾ ವಿಧಾನದಿಂದ ಸಂಭವಿಸಿದ ಈ ಬಗೆಯ ಮುಕ್ತತೆಯು ಸ್ವಾತಂತ್ರರಹಿತ ಸಮುದಾಯಗಳ ವಿಮೋಚನೆಗಾಗಿಯೇ ಮೈದಾಳಿದ ವಿರಾಟ್ ರಾಜಕೀಯ ಚಲನೆಯೇನಾಗಿರಲಿಲ್ಲ. ಯುರೋಪಿನ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯು ತಾನು ನೆಲೆಗೊಳ್ಳಲು ಸ್ಥಳೀಯ ಊಳಿಗಮಾನ್ಯತೆಯನ್ನು ಪಲ್ಲಟಗೊಳಿಸಬೇಕಿತ್ತು. ಹೀಗೆ ಭಾರತದ ಊಳಿಗಮಾನ್ಯ ಉತ್ಪಾದನಾ ವ್ಯವಸ್ಥೆಯ ಪಲ್ಲಟದ ಸಂದರ್ಭದಲ್ಲಿ ಅಧೀನ ಮತ್ತು ಶೋಷಿತ ಸಮುದಾಯಗಳಿಗೆ ಸಿಕ್ಕ ಸ್ವಾತಂತ್ರ್ಯವು ಕೆಲವು ಅವಕಾಶಗಳನ್ನು ಕಲ್ಪಿಸಿತು. ಶತಮಾನಗಳ ಕಾಲ ಅವಕಾಶಗಳಿಂದ ವಂಚಿತವಾಗಿದ್ದ ಶೋಷಿತರಿಗೆ ವಸಾಹತು ಆಡಳಿತವು 'ವರವಾಗಿ' ಗೋಚರಿಸಿಬಿಟ್ಟಿತು. ಭಾರತದ ಸಾಮಾಜಿಕ ಸಂದರ್ಭದಲ್ಲಿ 'ಆಧುನಿಕತೆ' ತನ್ನೆಲ್ಲಾ ಬೃಹತ್ ಉತ್ಪಾದನಾ ಸಾಮರ್ಥ್ಯದಿಂದ ಶೋಷಿತರಿಗೆ ಅವಕಾಶದ ಬಾಗಿಲುಗಳನ್ನು ತೆರೆಯಿತು ಎಂದು ಭಾವಿಸಲಾಯಿತು. ಆಂಶಿಕವಾಗಿ ಇದು ಸತ್ಯವೂ ಹೌದು. ಆದರೆ ವಸಾಹತುಶಾಹಿ ಆಡಳಿತದ ಸಂದರ್ಭದ ಈ ಆಧುನಿಕತೆಗೆ ತನ್ನದೇ ಆದ ಸ್ವತಂತ್ರ ಅಸ್ತಿತ್ವವಿರಲಿಲ್ಲ. ಅದು ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯ ಭಾಗವಾಗಿ ಅವಿರ್ಭವಿಸಿದ ವಸಾಹತುಶಾಹಿಯ ಉಪಉತ್ಪನ್ನ ಮಾತ್ರ. ಅದಕ್ಕಾಗಿಯೇ ಈ ಆಧುನಿಕತೆಗೆ ಭಾರತದ ಪಾರಂಪರಿಕ ಮತ್ತು ಜಿಡ್ಡುಗಟ್ಟಿದ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಿಸಿಬಿಡುವ ಸಾಮರ್ಥ್ಯವಿರಲಿಲ್ಲ. ಅದು ತನ್ನೆಲ್ಲ ಕಾರ್ಯಾಚರಣೆಗಳಿಗೆ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯಿಂದ ನಿರ್ದೇಶನಗಳನ್ನು ಪಡೆಯುತ್ತಿತ್ತು. ಇಲ್ಲವೆ ಬಂಡವಾಳಶಾಹಿ ಆರ್ಥಿಕತೆಯ ಸೂತ್ರಗಳಿಗೆ

ಅನುಗುಣವಾಗಿ ಕ್ರಿಯಾಶೀಲವಾಗುತ್ತಿತ್ತು.

ಈ ಕಾರಣದಿಂದ ವಸಾಹತು ಕಾಲಘಟ್ಟದ ಆಧುನಿಕತೆ ಎಂದರೆ, ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯ ಉಪ ಉತ್ಪನ್ನ ಮಾತ್ರ. ಏಕೆಂದರೆ ಬಂಡವಾಳಶಾಹಿಗೆ ಭಾರತದ ಸಾಮಾಜದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತರುವ ಯಾವ ಉದ್ದೇಶವೂ ಇರಲಿಲ್ಲ. ಶತಮಾನಗಳಿಂದ ಪೋಷಿಸಿಕೊಂಡು ಬಂದ ಭಾರತದ ಅಸಮಾನ ಸಾಮಾಜಿಕಾರ್ಥಿಕ ವ್ಯವಸ್ಥೆಯು ವಸಾಹತು ಬಂಡವಾಳಿಗರಿಗೆ ಅನಾಯಾಸವಾಗಿ ಸಿಕ್ಕಿತ್ತು. ಜೊತೆಗೆ ಈ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಗೆ ಭಾರತದ ವರ್ಗ ವೈರುಧ್ಯಗಳನ್ನು ಬದಲಿಸುವ ಉದ್ದೇಶಗಳಿರಲಿಲ್ಲ. ಇದರಿಂದಾಗಿ ಭಾರತದಲ್ಲಿ ಆಧುನಿಕತೆಯು ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯ ಭಾಗವಾಗಿದ್ದುಕೊಂಡೇ ಈ ದೇಶದ ವರ್ಗ ವೈರುಧ್ಯಗಳನ್ನು ಸಾಕಿಕೊಂಡು ಬಂದಿತು. ಯುರೋಪಿನ ಅರ್ಥದಲ್ಲಿ ಅಥವಾ ಆಧುನಿಕತೆಯು ತನ್ನ ಆದರ್ಶದ ಅರ್ಥದಲ್ಲಿ ಸಮಾನತೆ, ಭ್ರಾತೃತ್ವ ಮತ್ತು ಸ್ವಾತಂತ್ರ್ಯಗಳನ್ನು ಇಲ್ಲಿ ಸಂಚಯಿಸಲಿಲ್ಲ. ಬದಲಿಗೆ ಭಾರತದ ವಿಷಮ ಸಾಮಾಜಿಕ ವ್ಯವಸ್ಥೆಯ ಮುಂದುವರಿಕೆಗೆ ಬೇಕಾದ ರಾಜಕೀಯ ಹುನ್ನಾರಗಳನ್ನು ಕಾಲದಿಂದ ಕಾಲಕ್ಕೆ ರೂಪಿಸುತ್ತಾ ಬಂದಿತು. ಈ ಹುನ್ನಾರಗಳಿಗೆ ಮತ್ತು ಬಂಡವಾಳಶಾಹಿ ಆರ್ಥಿಕ ಚಲನೆಗಳಿಗೆ ಬಲಿಯಾದದ್ದು ಭಾರತದ ದುಡಿವ ವರ್ಗ. ಭಾರತದಲ್ಲಿನ ಆಧುನಿಕತೆಯು ಶೋಷಿತ ಸಮುದಾಯಗಳಿಗೆ ಹೊಸ ಅವಕಾಶಗಳನ್ನು ಮುಕ್ತವಾಗಿಸಿತು ಎಂದು ನಂಬುವ ಪಂಡಿತರು, ಒಂದು ಸಲ ವಸಾಹತು ಆಡಳಿತವು ಅಲೆಮಾರಿಗಳನ್ನು ನಿಯಂತ್ರಿಸಲು ಮತ್ತು ಅವುಗಳನ್ನು ಆರ್ಥಿಕವಾಗಿ ನಾಶ ಮಾಡಿಬಿಡಲು ರೂಪಿಸಿದ Criminal Tribes Act ನ ಪೂರ್ಣ ಪಾಠವನ್ನೋಮ್ಮೆ ಓದಬೇಕು. ಬಂಡವಾಳಶಾಹಿ ಪ್ರಣೀತ ವಸಾಹತು ಆಡಳಿತ ರೂಪಿಸಿದ ಅಪ್ಪಟ ಅಮಾನವೀಯ ಕಾನೂನಿದು. ಈ ಕಾಯ್ದೆಯು ಆದಿವಾಸಿ ಮತ್ತು ಅಲೆಮಾರಿಗಳ ಬದುಕಿನ ಅನೇಕ ವಿಘಟನೆಗಳಿಗೆ ಕಾರಣವಾಯಿತು. ಒಂದೆಡೆ ಭಾರತದ ಪಾರಂಪರಿಕ ಸಮಾಜವು ಕಾಲದಿಂದ ಕಾಲಕ್ಕೆ ರೂಪಿಸಿದ ನಿಯಮಗಳು, ಇನ್ನೊಂದೆಡೆ ವಸಾಹತು ಆಡಳಿತ ಜಾರಿಗೆ ತಂದ ಈ ಅಪರಾಧಿ ಸಮುದಾಯಗಳ ಕಾಯ್ದೆಗಳೆರಡೂ ಸೇವಕ ಸಮುದಾಯಗಳನ್ನು ಭಗ್ನಗೊಳಿಸಿದವು.

ಆಧುನಿಕಪೂರ್ವ ಕಾಲಘಟ್ಟದಲ್ಲಿ ಡೊಂಬರ ಸಮುದಾಯವೂ ಸಹ ಈ ವಿಘಟನೆಯನ್ನು ಅನುಭವಿಸಿತು. ಒಂದೇ ಸಾಮಾಜಿಕಾರ್ಥಿಕ ಸಂದರ್ಭದಲ್ಲಿ ವಾಸಿಸುವ ಡೊಂಬರು ಹೇಗೆ, ನೆಲೆನಿಂತವರು ಮತ್ತು ಅಲೆಮಾರಿಗಳು ಎಂದು ಎರಡು ಗುಂಪುಗಳಾಗಿರುವ ಕುರಿತು ಹಿಂದಿನ ಪುಟಗಳಲ್ಲಿ ವಿವರಿಸಿದ್ದೇನೆ. ಹೀಗೆ ಭಿನ್ನಗೊಂಡ ಡೊಂಬರ ಎರಡು ಗುಂಪುಗಳಿಗೆ ಪಾರಂಪರಿಕ ಚಹರೆಗಳ ದೃಷ್ಟಿಯಿಂದ ಹಲವು ಸಾಮ್ಯಗಳಿವೆ. ಜೊತೆಗೆ ವರ್ತಮಾನದಲ್ಲಿ ಈ ಎರಡೂ ಗುಂಪುಗಳ ನಡುವೆ ಹಲವು ವೈರುಧ್ಯಗಳೂ ಮೈದಾಳಿವೆ.

ಸಾಮಾಜಿಕವಾಗಿ ನೆಲೆನಿಂತ ಮತ್ತು ಅಲೆಮಾರಿ ಗುಂಪುಗಳ ನಡುವೆ ಅಂತಹ ವ್ಯತ್ಯಾಸಗಳೇನಿಲ್ಲ. ನೆಲೆನಿಂತವರು ಅಲೆಮಾರಿಗಳಂತೆಯೇ ಈ ದೇಶದ ಶ್ರೇಣೀಕರಣದ ಅಂಚಿನಲ್ಲಿ ಬದುಕುತ್ತಿದ್ದಾರೆ. ಜೊತೆಗೆ ಎರಡೂ ಗುಂಪುಗಳು ಮುಖ್ಯವಾಹಿನಿಯಿಂದ ಅಸ್ಪೃಶ್ಯತೆ ಮತ್ತು ತಿರಸ್ಕಾರಗಳೆರಡನ್ನೂ ಅನುಭವಿಸಿವೆ. ಆದರೆ ನೆಲೆನಿಂತವರು ಕಳೆದ ೨೦-೨೫ ವರ್ಷಗಳ ಸತತ ಪರಿಶ್ರಮದಿಂದ ಅಸ್ಪೃಶ್ಯತೆಯನ್ನು ಮತ್ತು ಅವಮಾನಗಳನ್ನು ನೀಗಿಕೊಳ್ಳಲು ಯತ್ನಿಸಿದ್ದಾರೆ. ಆಧುನಿಕ ಸಮಾಜದ ಜೊತೆ ಸ್ಪರ್ಧಿಸುವ ಮನೋಭಾವವನ್ನು

ರೂಢಿಸಿಕೊಂಡಿದ್ದಾರೆ. ಜೊತೆಗೆ ಅಸ್ಪೃಶ್ಯತೆ ಮತ್ತು ಸಾಮಾಜಿಕ ಅವಮಾನಗಳು ನೆಲೆನಿಂತವರನ್ನು ವಾಚ್ಯದ ಮಟ್ಟದಲ್ಲಿ ಈಗ ಹಿಂಸಿಸುತ್ತಿಲ್ಲ. ಆದರೆ ರಾಜ್ಯದ ಹಲವು ಕಡೆ ನೆಲೆನಿಂತವರೆಲ್ಲರಿಗೂ ಈ ಬಗೆಯ ಅವಕಾಶಗಳಿಲ್ಲ. ದಕ್ಷಿಣ ಕನ್ನಡ, ಚಿಕ್ಕಮಗಳೂರು, ತುಮಕೂರು, ಶಿವಮೊಗ್ಗ, ಮೈಸೂರು, ಮಂಡ್ಯ ಜಿಲ್ಲೆಗಳಲ್ಲಿನ ನೆಲೆನಿಂತ ಸಮುದಾಯಕ್ಕೆ ಇನ್ನೂ ಸಾಮಾಜಿಕ ಅವಮಾನಗಳನ್ನು ಮೀರುವುದು ಸಾಧ್ಯವಾಗಿಲ್ಲ. ನನ್ನ ತಿರುಗಾಟದ ಸಂದರ್ಭದಲ್ಲಿ ಮೇಲೆ ಉಲ್ಲೇಖಿಸಿದ ಜಿಲ್ಲೆಗಳಲ್ಲಿ ನೆಲೆನಿಂತ ಡೊಂಬರು ಸಾಮಾಜಿಕ ಸ್ಥಾನಮಾನಗಳನ್ನು ಪಡೆಯಲು ಇನ್ನಿಲ್ಲದಂತೆ ಯತ್ನಿಸುತ್ತಿದ್ದಾರೆ. ಆದರೆ ಈ ಜಿಲ್ಲೆಗಳ ಒಟ್ಟಾರೆಯ ಆರ್ಥಿಕತೆಯಲ್ಲಿ ನೆಲೆನಿಂತವರಿಗೆ ಅಂತಹ ಅವಕಾಶಗಳು ಲಭ್ಯವಾಗಿಲ್ಲದ ಕಾರಣ, ಇಲ್ಲಿನ ಡೊಂಬರ ಸಾಮಾಜಿಕ ಸ್ಥಾನಮಾನಗಳೂ ಸಹ, ಬೇರೆ ಜಿಲ್ಲೆಗಳ ನೆಲೆನಿಂತವರಿಗೆ ಹೋಲಿಸಿದಲ್ಲಿ ಉತ್ತಮಗೊಂಡಿಲ್ಲದಿರುವುದು ಕಂಡುಬರುತ್ತದೆ. ಒಟ್ಟಿನಲ್ಲಿ ನೆಲೆನಿಂತವರು ತಮ್ಮ ಸಾಮಾಜಿಕ ಸ್ಥಾನಮಾನಗಳನ್ನು ಉತ್ತಮಗೊಳಿಸಿಕೊಳ್ಳಲು ಆಧುನಿಕ ಜಗತ್ತಿನ ಜೊತೆಗೆ ಸ್ಪರ್ಧೆಗೆ ಇಳಿದಿದ್ದಾರೆ.

ಆದರೆ ಅಲೆಮಾರಿ ಡೊಂಬರಿಗೆ ಈ ಬಗೆಯ ಸ್ಪರ್ಧೆ ಇನ್ನೂ ಸಾಧ್ಯವಾಗಿಲ್ಲ. ತಮ್ಮ ಅಧೀನತೆಯನ್ನು ಈ ಅಲೆಮಾರಿಗಳು 'ಶಾಪದಂತೆ' ಪರಿಗಣಿಸಿದ್ದಾರೆ. 'ಈ ಶಾಪ ವಿಮೋಚನೆಗೊಳ್ಳುವವರೆಗೂ ನಾವು ಹೀಗೆಯೇ ಬದುಕಬೇಕಾಗುತ್ತದೆ' ಎಂಬ ಅಸಹಾಯಕತೆಯಲ್ಲಿ ಬದುಕುತ್ತಿದ್ದಾರೆ. ಆಧುನಿಕ ಅವಕಾಶಗಳಾವವೂ ಈ ಸಮುದಾಯಗಳಿಗೆ ಲಭ್ಯವಾಗುತ್ತಿಲ್ಲ. ಈ ಅವಕಾಶಗಳನ್ನು ದಕ್ಕಿಸಿಕೊಳ್ಳುವ ಪ್ರಾಥಮಿಕ ತಯಾರಿಯೂ ಈ ಸಮುದಾಯಕ್ಕೆ ಸಾಧ್ಯವಾಗಿಲ್ಲ. ಈ ಅಲೆಮಾರಿಗಳಿಗೆ ತಮ್ಮ ಸಾಮಾಜಿಕ ಸ್ಥಾನಮಾನಗಳನ್ನು ಉತ್ತಮಗೊಳಿಸಲು ಬೇಕಾದ ಅವಕಾಶಗಳು ಲಭ್ಯವಾಗಿಲ್ಲ. ಏಕೆಂದರೆ ಸಾಮಾಜಿಕ ಅವಮಾನಗಳನ್ನು ಮೀರಿ, ಸಮುದಾಯವೊಂದು ತನ್ನ ಸ್ಥಾನಮಾನಗಳನ್ನು ಉತ್ತಮಗೊಳಿಸಿಕೊಳ್ಳುವುದು ಅದು 'ಮುಖ್ಯವಾಹಿನಿಯ' ಜೊತೆ ಸ್ಪರ್ಧೆಗೆ ಇಳಿದಾಗ. ಆದರೆ ಅಲೆಮಾರಿಗಳಿಗೆ ಇಂತಹ ಸ್ಪರ್ಧೆಗೆ ನಿಲ್ಲುವ ಬಲವಿಲ್ಲ. ಸ್ಪರ್ಧೆ ಈ ಕ್ಷಣಕ್ಕೆ ಅವರಿಗೆ ಸಾಧ್ಯವೂ ಆಗಲಾರದ ಸ್ಥಿತಿಯಲ್ಲಿ ಅವರು ಬದುಕುತ್ತಿದ್ದಾರೆ. ನೆಲೆನಿಂತ ಮತ್ತು ಅಲೆಮಾರಿಗಳಿಗೆ ಈ ಕಾರಣದಿಂದ ಕೆಲವು ವೈರುಧ್ಯಗಳು ಮೇಲುನೋಟಕ್ಕೇನೇ ಕಾಣಿಸಿಗುತ್ತವೆ. ಆದರೆ ಸಾಮಾಜಿಕ ಸ್ಥಾನಮಾನಗಳ ವಿಷಯದಲ್ಲಿ ಈ ಎರಡೂ ಗುಂಪುಗಳು ಪಾರಂಪರಿಕ ಹಿಂದು ಸಮಾಜದಿಂದ ಒಂದೇ ರೀತಿಯಲ್ಲಿ ಪರಿಗಣಿಸಲ್ಪಡುತ್ತಿವೆ.

ನೆಲೆನಿಂತವರು ಮತ್ತು ಅಲೆಮಾರಿಗಳಿಗೆ ಹಲವು ವೈರುಧ್ಯಗಳು ಕಣ್ಣಿಗೆ ಕಾಣುವುದು ಆರ್ಥಿಕ ಕ್ಷೇತ್ರದಲ್ಲಿ. ಈ ಎರಡೂ ಗುಂಪುಗಳ ನಡುವೆ ಅಗಾಧ ಪ್ರಮಾಣದ ಬಿರುಕುಗಳು ಮತ್ತು ಭಗ್ನತೆಯು ಸಂಭವಿಸಿದ್ದು ಈ ಗುಂಪುಗಳು ಅವಲಂಬಿಸಿದ ಆರ್ಥಿಕ ಚಟುವಟಿಕೆಗಳಿಂದ. ಆಧುನಿಕಪೂರ್ವ ಕಾಲಘಟ್ಟದಲ್ಲಿ ನೆಲೆನಿಲ್ಲಲು ಯತ್ನಿಸಿದ ಇಂದಿನ ಅಲೆಮಾರಿಗಳು ಪಾರಂಪರಿಕ ವೃತ್ತಿಯಾದ ಡೊಂಬರಾಟವನ್ನೇ ನಂಬಿ ಬದುಕಲಾರಂಭಿಸಿದರು. ಆದರೆ ನೆಲೆ ನಿಂತವರು ಕೃಷಿ, ವ್ಯಾಪಾರ ಮುಂತಾದ 'ಮುಖ್ಯವಾಹಿನಿಯ' ಆರ್ಥಿಕ ಚಟುವಟಿಕೆಗಳನ್ನು ರೂಢಿಸಿಕೊಂಡರು. ಹೀಗೆ ಆರ್ಥಿಕ ಕಾರಣಗಳಿಗಾಗಿ ಕವಲಾದ ಡೊಂಬರ ದಾರಿಗಳು ನೆಲೆನಿಂತ ಮತ್ತು ಅಲೆಮಾರಿ ಸಮುದಾಯಗಳ ನಡುವೆ ಹಲವು ವೈರುಧ್ಯಗಳನ್ನು ಮಾತ್ರ ಸೃಷ್ಟಿಸಲಿಲ್ಲ. ಡೊಂಬರ ಸಮುದಾಯವು

ನೆಲೆನಿಂತವರು ಮತ್ತು ಅಲೆಮಾರಿಗಳೆಂಬ ಗುಂಪುಗಳಲ್ಲಿ ವಿಘಟನೆಗೊಳ್ಳಲು ಕಾರಣವಾಯಿತು. ಪ್ರಾಯಶಃ ನಾವು ಆರ್ಥಿಕ ನೆಲೆಯಿಂದ ಈ ನೆಲೆ ನಿಂತ ಮತ್ತು ಅಲೆಮಾರಿ ಗುಂಪುಗಳನ್ನು ನೋಡಿದಾಗ ಇವೆರಡೂ ಭಿನ್ನ ಸಮುದಾಯಗಳೆಂದು ಭಾವಿಸುವಷ್ಟು ಅಂತರ ರೂಪುಗೊಂಡಿರುವುದು ಕಂಡು ಬರುತ್ತದೆ. ಹಿಂದಿನ ಪುಟಗಳಲ್ಲಿ ತೀರಾ ಈಚೆಗೆ ಹೆಳವ ಸಮುದಾಯದಲ್ಲಿ ರೂಪುಗೊಳ್ಳುತ್ತಿರುವ ಸಾಮಾಜಿಕ ವಿಘಟನೆ ಅಥವ ಭಗ್ನತೆಯ ಕುರಿತು ಪ್ರಸ್ತಾಪಿಸಿದ್ದೇನೆ. ಭಗ್ನತೆ ರೂಪುಗೊಳ್ಳುತ್ತಿರುವುದು, ಅಲೆಮಾರಿ ಮತ್ತು ನೆಲೆನಿಂತ ಸಮುದಾಯಗಳ ನಡುವಿನ ಆರ್ಥಿಕ ಚಟುವಟಿಕೆಗಳಿಗೆ ಶತಮಾನಗಳ ಅಂತರವಿರುವುದೇ ಕಾರಣವಾಗಿದೆ. ಸಮುದಾಯವೊಂದು ಆತ್ಮಪ್ರತ್ಯಯ ಮತ್ತು ಸಾಮಾಜಿಕ ಸ್ಥಾನಮಾನಗಳನ್ನು ಪಡೆಯುವುದು ಅದು ಯಾವ ಬಗೆಯ ಆರ್ಥಿಕ ಚಟುವಟಿಕೆಗಳನ್ನು ರೂಢಿಸಿಕೊಂಡಿದೆ ಎಂಬುದನ್ನು ಅವಲಂಬಿಸಿರುತ್ತದೆ. ನೆಲೆನಿಂತ ಡೊಂಬರು ಆರ್ಥಿಕವಾಗಿ ಆಧುನಿಕ ಜಗತ್ತಿನ ಜೊತೆ ಸಂಕರಗೊಂಡಿದ್ದಾರೆ. 'ನಾಗರಿಕ' ಜಗತ್ತಿನ ಓಟದ ಜೊತೆಗೆ ತಾವು ಹೆಜ್ಜೆ ಇಡುತ್ತಿದ್ದಾರೆ. ಮುಖ್ಯವಾಹಿನಿಯ ಜೊತೆಗೆ ಹಠಕ್ಕೆ ಬಿದ್ದವರಂತೆ ಸ್ಪರ್ಧಿಸುತ್ತಿದ್ದಾರೆ. ಈ ಸ್ಪರ್ಧೆಯಲ್ಲಿ ಅವರಿಗೆ ಅನೇಕ ಅವಕಾಶಗಳೂ ಲಭ್ಯವಾಗುತ್ತಿವೆ. ಆದರೆ ಅಲೆಮಾರಿಗಳು ಶತಮಾನಗಳ ಹಿಂದೆ ಬದುಕುತ್ತಿರುವಂತೆ ಭಾಸವಾಗುತ್ತಿದೆ. ಅವರು ಪಾರಂಪರಿಕ ಆರ್ಥಿಕ ಮೂಲವಾದ ಡೊಂಬರಾಟವನ್ನೇ ಅವಲಂಬಿಸಿದ್ದಾರೆ. ಆಧುನಿಕ ಸರ್ಕಸ್ ಕಂಪನಿಗಳ ಮುಂದೆ ಈ ಬೀದಿ ಬದಿಯ ಡೊಂಬರಾಟವು ಯಕಶ್ಚಿತವಾಗಿ ಕಾಣುತ್ತದೆ. ಡೊಂಬರಾಟವು ಈ ಕಾರಣದಿಂದ ಅಲೆಮಾರಿಗಳನ್ನು ಆರ್ಥಿಕವಾಗಿ ಸಬಲೀಕರಿಸುವುದು ಸಾಧ್ಯವಿಲ್ಲ. ಇದರಿಂದಾಗಿ ಅಲೆಮಾರಿಗಳಿಗೆ ಆರ್ಥಿಕ ಸ್ವಾವಲಂಬನೆಯು ಸಾಧ್ಯವಾಗಿಲ್ಲ. ಜೊತೆಗೆ ಸಾಮಾಜಿಕ ಸ್ಥಾನಮಾನಗಳೂ ಲಭ್ಯವಾಗಿಲ್ಲ. ಆರ್ಥಿಕತೆಯ ದೃಷ್ಟಿಯಿಂದ ಈ ಎಲ್ಲಾ ಕಾರಣಗಳಿಗಾಗಿ ಅಲೆಮಾರಿ ಮತ್ತು ನೆಲೆನಿಂತವರಿಗೆ ಅನೇಕ ವೈರುಧ್ಯಗಳಿವೆ. ಆದರೆ ನೆಲೆನಿಂತ ಡೊಂಬರು ಆರ್ಥಿಕವಾಗಿ ಅಂತಹ ಉತ್ತಮ ಸ್ಥಿತಿಯಲ್ಲೇನೂ ಇಲ್ಲ. ಅಲೆಮಾರಿಗಳಿಗೆ ಹೋಲಿಸಿದರೆ ನಿಟ್ಟುಸಿರು ಬಿಡುವಷ್ಟು ಮಾತ್ರ ಅಲ್ಪ ಪ್ರಗತಿಯನ್ನು ನೆಲೆನಿಂತವರು ಸಾಧಿಸಿದ್ದಾರೆ.

ಸಾಂಸ್ಕೃತಿಕವಾಗಿ ಅಲೆಮಾರಿ ಮತ್ತು ಸ್ಥಿರ ಗುಂಪುಗಳ ನಡುವೆ ಅನೇಕ ಸಾಮ್ಯಗಳಿವೆ. ಪ್ರಾಯಶಃ ಈ ವಿಷಯದಲ್ಲಿ ಎರಡೂ ಗುಂಪುಗಳು ತಮ್ಮ ಪಾರಂಪರಿಕ ಚಹರೆಗಳನ್ನು ಕಾಪಾಡಿಕೊಂಡು ಬಂದಿವೆ. ಆದರೆ ಗುಜರಾತ್ ಮತ್ತು ಮಧ್ಯ ಪ್ರದೇಶ ರಾಜ್ಯಗಳಿಂದ ಕರ್ನಾಟಕಕ್ಕೆ ಬರುವ ನಾಟ್ (ಡೊಂಬರ) ಸಮುದಾಯದವರು ಮಾತ್ರ ಕರ್ನಾಟಕದಲ್ಲಿನ ಈ ಗುಂಪುಗಳಿಗಿಂತ ಭಿನ್ನ ಸಾಂಸ್ಕೃತಿಕ ಚಹರೆಗಳ್ನು ಹೊಂದಿದ್ದರೂ ಜನಾಂಗಿಕವಾಗಿ ಇವರು ಕರ್ನಾಟಕದ ಡೊಂಬರ ಜೊತೆ ಅನೇಕ ಸಾಮ್ಯತೆಗಳನ್ನು ಹೊಂದಿದ್ದಾರೆ. ಈ ನಾಟ್ ಸಮುದಾಯವೂ ಸಹ ಶಕ್ತಿ ಆರಾಧಕ ಸಮುದಾಯವೇ ಆಗಿದೆ. ಆದರೆ ಈ ಹೊರರಾಜ್ಯದ ಸಮುದಾಯಕ್ಕೆ ಕರ್ನಾಟಕದ ಸ್ಥಳೀಯ ಸಾಂಸ್ಕೃತಿಕ ಮತ್ತು ಧಾರ್ಮಿಕ ಪರಂಪರೆಗಳ ಜೊತೆಗೆ ಸಂಬಂಧಗಳಿಲ್ಲ. ಆದರೆ ದೈಹಿಕ ಚಹರೆಗಳು, ಆರಾಧನಾ ವಿಧಾನಗಳಲ್ಲಿ ಇವರು ಕರ್ನಾಟಕದ ಡೊಂಬರ ಗುಂಪುಗಳ ಜೊತೆಗೆ ಹೋಲಿಸಬಹುದಾಗಿದೆ. ಕರ್ನಾಟಕದ ಸ್ಥಿರ ಮತ್ತು ಅಲೆಮಾರಿ ಸಮುದಾಯಗಳೆರಡೂ ಶಕ್ತಿ ಆರಾಧಕರು. ಮತ್ತು ಶಾಕ್ತ ಪಂಥದ ಪೂಜಾ ವಿಧಾನಗಳನ್ನು ಈ ಎರಡೂ ಗುಂಪುಗಳು ರೂಢಿಸಿಕೊಂಡಿವೆ. ಜೊತೆಗೆ ತಾಂತ್ರಿಕ ಆಚರಣೆಗಳು ಈ ಎರಡೂ ಗುಂಪುಗಳಲ್ಲಿ

ಚಾಲ್ತಿಯಲ್ಲಿವೆ. ಆದರೆ ಈ ತಾಂತ್ರಿಕ ಆಚರಣೆಗಳು ಈ ಎರಡೂ ಗುಂಪುಗಳಲ್ಲಿ ವರ್ಷಕ್ಕೊಮ್ಮೆ ಕಾಲಬದ್ಧವಾಗಿ ಪುನರಾವರ್ತನೆಗೊಳ್ಳುತ್ತವೆ. ಇಲ್ಲಿ ಒಂದು ವೈರುಧ್ಯವನ್ನು ಕಾಣಬಹುದಾಗಿದೆ. ಸ್ಥಿರ ಸಮುದಾಯವು ಮಧ್ಯಕಾಲದಲ್ಲಿ ಶ್ರೀವೈಷ್ಣವ ಮತವನ್ನು ಅನುಸರಿಸುತ್ತಾ ಬಂದಿದ್ದರೆ, ಅಲೆಮಾರಿ ಸಮುದಾಯವು ಈ ಮತಕ್ಕೆ ಮತಾಂತರಗೊಂಡಿಲ್ಲ. ಆದರೆ ಶೈವಧರ್ಮದ ಪ್ರಭಾವ ಇವರ ಮೇಲಾಗಿದೆ. ದೇವದಾಸಿ ಪದ್ಧತಿ ಸ್ಥಿರ ಸಮುದಾಯದಲ್ಲಿ ಕಂಡು ಬಂದರೆ, ಅಲೆಮಾರಿ ಸಮುದಾಯದಲ್ಲಿ ಈ ಪದ್ಧತಿ ಕಂಡು ಬರುವುದಿಲ್ಲ. ಆದರೆ ಸ್ತ್ರೀ ದೇವತೆಯ ಆರಾಧನೆಯ ಸಂದರ್ಭದಲ್ಲಿನ ಪೂಜಾವಿಧಾನಗಳು ಮಾತ್ರ ಸ್ಥಿರ ಮತ್ತು ಅಲೆಮಾರಿ ಸಮುದಾಯಗಳಲ್ಲಿ ಒಂದೇ ತೆರನಾಗಿವೆ. ಅವು ಇಂದಿಗೂ ತಾಂತ್ರಿಕ ಆಚರಣೆಗಳ ಮಾದರಿಯಲ್ಲಿಯೇ ನಡೆಯುತ್ತವೆ. ಜೊತೆಗೆ ನಾನು ಕರ್ನಾಟಕದ ವಿವಿಧ ಕಡೆಯಲ್ಲಿ ಸಂಪರ್ಕಿಸಿದ ಅಲೆಮಾರಿಗಳ ದೈವಗಳು ಮತ್ತು ಸ್ಥಿರ ಸಮುದಾಯದ ದೈವಗಳೂ ಒಂದೇ ತೆರನಾಗಿವೆ. ಮತ್ತು ಸ್ಥಿರ ಮತ್ತು ಅಲೆಮಾರಿ ಸಮುದಾಯಗಳ ಬಳಿಗಳು ಪ್ರಾದೇಶಿಕವಾಗಿ ಭಿನ್ನವಾಗಿವೆ. ಅದರಲ್ಲೂ, ಸ್ಥಿರ ಸಮುದಾಯದಲ್ಲಿಯೇ ಜಿಲ್ಲೆಯಿಂದ ಜಿಲ್ಲೆಗೆ ಈ ಬಳಿಗಳು ಭಿನ್ನವಾಗುತ್ತವೆ. ಇದರಿಂದಾಗಿ ಅಲೆಮಾರಿ ಮತ್ತು ಸ್ಥಿರ ಸಮುದಾಯಗಳ ಬಳಿಗಳು ಹಲವು ಭಾಷಿಕ ಪ್ರದೇಶದಲ್ಲಿ ರೂಪುಗೊಂಡಂತೆ ಕಾಣುತ್ತವೆ. (ಅನುಬಂಧದಲ್ಲಿ ಬಳಿಗಳನ್ನು ನೀಡಲಾಗಿದೆ) ಸ್ಥಿರ ಸಮುದಾಯವು ಕೆಲವು ಹೇರಿಕೆಯ ಆಚರಣೆಗಳನ್ನು ಆಚರಿಸುತ್ತದೆ. ಉದಾಹರಣೆಗೆ ಶಿವಮೊಗ್ಗ ಜಿಲ್ಲೆಯಲ್ಲಿನ 'ಡೊಳ್ಳುಪ್ರಸ್ಥ' ಅಥವಾ 'ಡೊಂಬರ ಹಬ್ಬ'ಗಳು ಡೊಂಬರ ಸ್ಥಿರ ಸಮುದಾಯವು ಈ ಹಬ್ಬದಲ್ಲಿ ಪಾಲ್ಗೊಳ್ಳುತ್ತದೆ. ಊಳಿಗಮಾನ್ಯತೆಯು ಈ ಆಚರಣೆಯಲ್ಲಿ ವ್ಯಕ್ತವಾಗುವ ಮತ್ತು ಅದು ರೂಪಕಗಳಲ್ಲಿ ಪುನರಾವರ್ತನೆಗೊಳ್ಳುವ ಹಬ್ಬವಾಗಿದೆ. ಆದರೆ ಅಲೆಮಾರಿಗಳಲ್ಲಿ ಈ ತರಹದ ಹಬ್ಬಗಳಿಲ್ಲ. ಒಟ್ಟಿನಲ್ಲಿ ಸಾಂಸ್ಕೃತಿಕವಾಗಿ ಸ್ಥಿರ ಮತ್ತು ಅಲೆಮಾರಿ ಗುಂಪುಗಳು ಹಲವು ಸಾಮ್ಯತೆಗಳನ್ನು ಪ್ರಕಟಿಸುವುದನ್ನು ಕಾಣಬಹುದಾಗಿದೆ.

ಆದರೆ ಸ್ಥಿರ ಮತ್ತು ಅಲೆಮಾರಿ ಗುಂಪುಗಳ ವರ್ತಮಾನದ ಅಸ್ತಿತ್ವವೇ ಈ ಎರಡೂ ಗುಂಪುಗಳನ್ನು ಪ್ರತ್ಯೇಕವಾಗಿ ನಿಲ್ಲಿಸುತ್ತದೆ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಈ ಎರಡೂ ಗುಂಪುಗಳು ನಡುವೆ ಭಿನ್ನತೆಗಳಿವೆ. ಆದರೆ ಈ ಭಿನ್ನತೆಗಳು ಸೂಕ್ಷ್ಮ ನೆಲೆಯಲ್ಲಿವೆಯೇ ಹೊರತು, ಅಗಾಧ ವ್ಯತ್ಯಾಸಗಳು ಇಲ್ಲಿ ಕಂಡು ಬರುವುದಿಲ್ಲ. ಸ್ಥಿರ ಸಮುದಾಯ ಸಾಮಾಜಿಕವಾಗಿ, ಆರ್ಥಿಕವಾಗಿ, 'ಮುಖ್ಯವಾಹಿನಿಯ' ಜೊತೆ ಸ್ಪರ್ಧೆಗಳಿದ್ದಿದ್ದರೂ ಸಹ ಅದರ ಒಟ್ಟಾರೆಯ ಸ್ಥಿತಿಗತಿಗಳಲ್ಲಿ ಅಗಾಧ ಬದಲಾವಣೆಗಳು ಸಂಭವಿಸಿಲ್ಲ. ಅಲೆಮಾರಿ ಗುಂಪುಗಳು ಈ ಬಗೆಯ ಸ್ಪರ್ಧೆಗೆ ಹೋಗಿಲ್ಲದಿರುವುದರಿಂದ, ಈ ಗುಂಪುಗಳ ಸಾಮಾಜಿಕಾರ್ಥಿಕ ಸ್ಥಿತಿಗತಿಗಳಲ್ಲಿ ಅಂತಹ ಬದಲಾವಣೆಗಳಾಗಿಲ್ಲ. ಇದರಿಂದಾಗಿ ಈ ಎರಡೂ ಗುಂಪುಗಳ ನಡುವಿನ ಸಾಮ್ಯ ಮತ್ತು ವೈರುಧ್ಯಗಳು ಅತ್ಯಂತ ಸೂಕ್ಷ್ಮವಾಗಿ ಗೋಚರಿಸುತ್ತವೆ.

ಡೊಂಬರ ವರ್ತಮಾನದ ಮುಖಾಮುಖಿ

ಪ್ರಸ್ತುತ ಅಧ್ಯಯನದ ಸಲುವಾಗಿ ಕರ್ನಾಟಕದ ಬಹುತೇಕ ಎಲ್ಲ ಜಿಲ್ಲೆಗಳನ್ನು ಸುತ್ತಾಡಲಾಗಿದೆ. ಅಲೆಮಾರಿ ಮತ್ತು ಸ್ಥಿರ ಸಮುದಾಯಗಳೆರಡನ್ನೂ ತೌಲನಿಕವಾಗಿ ಅಧ್ಯಯನ ಮಾಡುವ ಸಲುವಾಗಿ ಮತ್ತು ಪ್ರಾದೇಶಿಕ

ಭಿನ್ನತೆಗಳನ್ನು ದಾಖಲಿಸುವ ಕಾರಣಕ್ಕಾಗಿ ಕರ್ನಾಟಕದ ಬೀದರ್ ಜಿಲ್ಲೆಯನ್ನು ಹೊರತುಪಡಿಸಿ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ತಿರುಗಾಡಿದ್ದೇನೆ. ಜೊತೆಗೆ ಸುಮಾರು ೨೦-೨೫ ಅಲೆಮಾರಿ ಗುಂಪಿನ ಜೊತೆಯಲ್ಲಿ ನಿರಂತರ ಒಡನಾಟವಿಟ್ಟುಕೊಂಡು, ಅವರ ಜೊತೆಯಲ್ಲಿ ಹಲವು ಊರುಗಳಲ್ಲಿ ತಂಗಿದ್ದೇನೆ. ಇದರಿಂದಾಗಿ ಅಲೆಮಾರಿಗಳನ್ನು ಸೂಕ್ಷ್ಮವಾಗಿ ನೋಡಲು ಸಾಧ್ಯವಾಯಿತು. ಅಲೆಮಾರಿ ಸಮುದಾಯಗಳ ಹಲವು ವ್ಯಕ್ತಿಗಳ ಜೊತೆ ಮಾತುಕತೆ ಮಾಡಿದ್ದೇನೆ. ಅವರು ಧಾರಾಳವಾಗಿ ತಮ್ಮ ಅನುಭವಗಳನ್ನು ಹೇಳಿ ನನ್ನ ತಿಳುವಳಿಕೆಯನ್ನು ಹೆಚ್ಚಿಸಿದ್ದಾರೆ. ಅಲೆಮಾರಿಗಳ ಜೊತೆ ನಾನು ಕೇವಲ ಅವರ ಅನುಭವಗಳನ್ನು ಮಾತ್ರ ದಾಖಲಿಸಲು ಸಾಧ್ಯವಾಯಿತು. ಅವರ ಆರ್ಥಿಕ ಸ್ಥಿತಿಗತಿಗಳನ್ನು ಬಿಂಬಿಸುವ ಅಂಕಿಸಂಖ್ಯೆಗಳನ್ನು ದಾಖಲಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಈ ಕಾರಣದಿಂದ ನೆಲೆನಿಂತ ಡೊಂಬರ ಸಮುದಾಯದ ಜನರ ಸಾಮಾಜಿಕಾರ್ಥಿಕ ಸ್ಥಿತಿಗತಿಗಳನ್ನು ಅಂಕಿ ಅಂಶಗಳ ಮೂಲಕ ವಿವರಿಸಲು ಯತ್ನಿಸಲಾಗಿದೆ.

ಈ ಕಾರಣಕ್ಕಾಗಿ ಮೂರು ಜಿಲ್ಲೆಗಳನ್ನು ಈ ಅಂಕಿ ಅಂಶಗಳನ್ನು ಕ್ರೋಢೀಕರಿಸಲು ಆಯ್ಕೆ ಮಾಡಿಕೊಳ್ಳಲಾಗಿದೆ. ಶಿವಮೊಗ್ಗ, ದಾವಣಗೆರೆ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿಯ ಡೊಂಬರ ಸಾಮಾಜಿಕಾರ್ಥಿಕ ಸ್ಥಿತಿಗತಿಗಳನ್ನು ವಿವರಿಸಲು ಅಂಕಿಅಂಶಗಳನ್ನು ಸಂಗ್ರಹಿಸಲಾಗಿದೆ. (ಅಂದರೆ House hold survey ಮಾಡಲಾಗಿದೆ) ಈ ಜಿಲ್ಲೆಗಳ ಡೊಂಬರು ಸಾಂಸ್ಕೃತಿಕವಾಗಿ ಮತ್ತು ಸಾಮಾಜಿಕವಾಗಿ ಹಲವು ವೈವಿಧ್ಯತೆಗಳನ್ನು ಹೊಂದಿರುವ ಕಾರಣಕ್ಕಾಗಿ ಅಧ್ಯಯನಕ್ಕೆ ಅಥವಾ ಅಂಕಿಅಂಶಗಳ ಕ್ರೋಢೀಕರಣಕ್ಕೆ (House hold survey) ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಕೆಳಗೆ ಉಲ್ಲೇಖಿಸಲಾಗಿರುವ ಜಿಲ್ಲೆಯಲ್ಲಿನ ಗ್ರಾಮಗಳಲ್ಲಿ ಅಂಕಿ ಅಂಶಗಳನ್ನು ಸಂಗ್ರಹಿಸಲಾಗಿದೆ.

೧. ಬಳ್ಳಾರಿ ಜಿಲ್ಲೆ

೨. ದಾವಣಗೆರೆ ಜಿಲ್ಲೆ

೩. ಶಿವಮೊಗ್ಗ ಜಿಲ್ಲೆ

ಬಳ್ಳಾರಿ ಜಿಲ್ಲೆಯಲ್ಲಿನ ಡೊಂಬರು ವಾಸಿಸುವ ತಾಲ್ಲೂಕು ಮತ್ತು ಗ್ರಾಮಗಳು

೧.ಬಳ್ಳಾರಿ	ಬಳ್ಳಾರಿ
ಹೊಸಪೇಟೆ	೧. ಹೊಸಪೇಟೆ
	೨. ಕಮಲಾಪುರ
ಕೂಡ್ಲಿಗಿ	೧. ಕೂಡ್ಲಿಗಿ
	೨. ನಾಗರಹುಣಸೆ
	೩. ಎ. ದಿಬ್ಬದಹಳ್ಳಿ
	೪. ಸೋವೇನಹಳ್ಳಿ
	೫. ಮರಬನಹಳ್ಳಿ
	೬. ಕರ್ನಾರಹಟ್ಟಿ
ಸಂಡೂರು	೧. ಸಂಡೂರು

ಶಿರುಗುಪ್ಪ ೧. ಬೂದಗುಪ್ಪ

೨. ದಾವಣಗೆರೆ ಜಿಲ್ಲೆ

ಹರಪನಹಳ್ಳಿ ತಾಲ್ಲೂಕು	೧. ಅನಂತನ ಹಳ್ಳಿ
	೨. ಕೆಂಚಾಪುರ
	೩. ಯರಬಳ್ಳಿ
ಚನ್ನಗಿರಿ ತಾಲ್ಲೂಕು	೧. ಚನ್ನಗಿರಿ

೩. ಶಿವಮೊಗ್ಗ ಜಿಲ್ಲೆ

ಶಿವಮೊಗ್ಗತಾಲ್ಲೂಕು	೧.ಶಿವಮೊಗ್ಗ
	೨. ಕುಂಸಿ
ಭದ್ರಾವತಿ ತಾಲ್ಲೂಕು	೧. ದೇವರ ನರಸೀಪುರ
ಹೊಸನಗರ ತಾಲ್ಲೂಕು	೧. ಆನೆಗದ್ದೆ
	೨. ಹೊನ್ನೆಬೈಲು
	೩. ಮಲೆಮನೆ
	೪. ಸುತ್ತಿ
	೫. ಸೊನಲೆ
	೬. ಯಲ್ಲದಕೋಣೆ
ಸೊರಬ ತಾಲ್ಲೂಕು	೧. ಅವಲಗೋಡು
	೨. ಹೊಳಕಟ್ಟೆ ಎನ್
	೩. ಪುರ
	೪. ಸಂಗದ್ದೆ
ಶಿಕಾರಿಪುರ ತಾಲ್ಲೂಕು	೧.ಮಂಚಿಕೊಪ್ಪ
ತೀರ್ಥಹಳ್ಳಿ ತಾಲ್ಲೂಕು	೧. ಕಣಬೂರು
	೨. ಕನ್ನಲಗಿ
	೩. ಕಳ್ಳಿಗದ್ದೆ
	೪. ಮುನಿಯೂರು
	೫. ಹೊಸಕರೆ ಮಳಲಿಮಠ

ಒಟ್ಟು ಮೂರು ಜಿಲ್ಲೆಗಳ ೧೩ ತಾಲ್ಲೂಕುಗಳ ೩೪ ಗ್ರಾಮಗಳಲ್ಲಿ ಮನೆ ಮನೆಯ (House hold) ಅಂಕಿ ಅಂಶಗಳನ್ನು ದಾಖಲಿಸಲಾಗಿದೆ. ನಾನು ಅಂಕಿ ಅಂಶಗಳನ್ನು ದಾಖಲಿಸಿದ ಮೂರು ಜಿಲ್ಲೆಗಳ

ತಾಲ್ಲೂಕುವಾರ ಜನಸಂಖ್ಯೆಯ ಪಟ್ಟಿ ಈ ಕೆಳಗಿನಂತಿದೆ.

ಡೊಂಬರ ಜಿಲ್ಲಾ ಮತ್ತು ತಾಲ್ಲೂಕುವಾರ ಜನಸಂಖ್ಯೆ

ಕ್ರ.ಸಂ.	ಜಿಲ್ಲೆ	ತಾಲ್ಲೂಕು	ಕುಟುಂಬಗಳು	ಗಂಡು	ಹೆಣ್ಣು	ಒಟ್ಟು ಜನಸಂಖ್ಯೆ
೧	ಬಳ್ಳಾರಿ	ಬಳ್ಳಾರಿ	೧	೨	೨	೪
		ಹೊಸಪೇಟೆ	೧೦	೨೬	೨೫	೫೧
		ಕೂಡ್ಲಿಗಿ	೭೭	೨೨೨	೨೨೨	೪೪೪
		ಸಂಡೂರು	೧೨	೫೮	೫೦	೧೦೮
		ಸಿರುಗುಪ್ಪ	೪	೩೦	೨೬	೫೬
೨	ದಾವಣಗೆರೆ	ಹರಪನಹಳ್ಳಿ	೧೫೪	೪೯೯	೪೮೨	೯೮೧
೩	ಶಿವಮೊಗ್ಗ	ಶಿವಮೊಗ್ಗ	೧೮	೪೯	೪೩	೯೨
		ಭದ್ರಾವತಿ	೧೩	೪೦	೨೮	೬೮
		ಹೊಸನಗರ	೩೬	೧೦೬	೧೦೪	೨೧೦
		ಸೊರಬ	೩೬	೯೧	೮೩	೧೭೪
		ಶಿಕಾರಿಪುರ	೮	೨೪	೧೯	೪೩
		ತೀರ್ಥಹಳ್ಳಿ	೨೬	೬೬	೭೦	೧೩೬
		ಒಟ್ಟು	೩೯೫	೧೨೧೩	೧೧೫೪	೨೩೬೭

ಈ ಮೇಲೆ ಉಲ್ಲೇಖಿಸಲ್ಪಟ್ಟಿರುವ ಜಿಲ್ಲೆಗಳಲ್ಲಿ ೩೯೫ ಕುಟುಂಬಗಳ ಅಂಕಿಅಂಶಗಳನ್ನು ಒಟ್ಟು ಮಾಡಲಾಗಿದೆ. ಈ ೩೯೫ ಕುಟುಂಬಗಳು ಒಟ್ಟು ೨೩೬೭ ಜನಸಂಖ್ಯೆಯನ್ನು ಹೊಂದಿವೆ. ಬಳ್ಳಾರಿ ಜಿಲ್ಲೆಯಲ್ಲಿ ೧೦೪ ಕುಟುಂಬಗಳು ೬೬೩ ಜನಸಂಖ್ಯೆಯನ್ನು ಹೊಂದಿವೆ. ಅದರಲ್ಲಿ ೩೩೮ ಜನ ಪುರುಷರು ಮತ್ತು ೩೨೫ ಜನ ಹೆಣ್ಣು ಮಕ್ಕಳಿದ್ದಾರೆ. ದಾವಣಗೆರೆ ಜಿಲ್ಲೆಯ ಎರಡು ತಾಲ್ಲೂಕುಗಳಲ್ಲಿನ ೧೫೪ ಕುಟುಂಬಗಳಲ್ಲಿ ೯೮೧ ಜನ ದಾಖಲಾಗಿದ್ದಾರೆ. ಅದರಲ್ಲಿ ೪೯೯ ಜನ ಪುರುಷರು ಮತ್ತು ೪೮೨ ಜನ ಮಹಿಳೆಯರಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ೧೩೭ ಕುಟುಂಬಗಳು ೭೨೩ ಜನಸಂಖ್ಯೆ ಹೊಂದಿವೆ. ಅದರಲ್ಲಿ ೩೭೬ ಜನ ಪುರುಷರು ೩೪೭ ಜನ ಮಹಿಳೆಯರು ದಾಖಲಾಗಿದ್ದಾರೆ.

ಡೊಂಬರು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಬರುವ ಕಾರಣಕ್ಕಾಗಿ ಸದರಿ ಜಿಲ್ಲೆಗಳಲ್ಲಿನ ಇತರೆ ಪರಿಶಿಷ್ಟಜಾತಿಗಳ ಜನಸಂಖ್ಯೆಯ ಜೊತೆ ತೌಲನಿಕವಾಗಿ ನೋಡಬಹುದಾಗಿದೆ.

ಪರಿಶಿಷ್ಟ ಜಾತಿಗಳ ಜಿಲ್ಲಾವಾರು ಜನಸಂಖ್ಯೆ ಮತ್ತು ಡೊಂಬರು

ಕ್ರ ಸಂ	ಜಿಲ್ಲೆ	ಒಟ್ಟು ಜನಸಂಖ್ಯೆ	ಗಂಡು	ಹೆಣ್ಣು	ಪ, ಜಾತಿ	ಡೊಂಬರ ಜನಸಂಖ್ಯೆ
೧.	ಬಳ್ಳಾರಿ	೨೦,೦೨೫,೨೪೨	೧೦,೨೮,೪೮೧	೯,೯೬,೭೬೧	೩,೧೧,೨೫೨	೬೬೩
೨.	ದಾವಣಗೆರೆ	೧೭,೮೯,೬೯೩	೯,೧೭,೩೨೦	೮,೭೨,೩೭೩	೩,೦೨,೩೪೪	೯೮೧
೩.	ಶಿವಮೊಗ್ಗ	೧೬,೩೯,೫೯೫	೮,೨೯,೩೬೫	೮,೧೦,೨೩೦	೨,೩೬,೫೨೬	೭೨೩

ಡೊಂಬರ ಆರ್ಥಿಕ ಸ್ಥಿತಿಗತಿ

ಕರ್ನಾಟಕದಲ್ಲಿ ನಾನು ಅಂಕಿ ಅಂಶಗಳನ್ನು ದಾಖಲಿಸಲು ಆಯ್ದುಕೊಂಡ ಜಿಲ್ಲೆಗಳು ಪ್ರಾದೇಶಿಕವಾಗಿ ಭಿನ್ನವಾದವುಗಳೇ ಆಗಿವೆ. ಶಿವಮೊಗ್ಗ ಮಲೆನಾಡಿನ ಪ್ರದೇಶ, ದಾವಣಗೆರೆ ಅರೆಮಲೆನಾಡಿನ ಪ್ರದೇಶವಾದರೆ, ಬಳ್ಳಾರಿಯು ಬಯಲು ಸೀಮೆಯ ಜಿಲ್ಲೆಯಾಗಿದೆ. ಈ ಮೂರು ಜಿಲ್ಲೆಗಳಲ್ಲಿ ಡೊಂಬರು ಆರ್ಥಿಕವಾಗಿ ಭಿನ್ನ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದು ಕಂಡು ಬರುತ್ತದೆ. ಗಣತಿಗೆ ಒಳಪಟ್ಟ ೩೯೫ ಕುಟುಂಬಗಳ ೨೩೬೭ ಜನರಲ್ಲಿ ಕೃಷಿಯಲ್ಲಿ ತೊಡಗಿರುವವರು ೨೪೪ ಜನ. ೭೩೪ ಜನ ಕೃಷಿಕೂಲಿಗಳಾಗಿದ್ದರೆ, ೯೬ ಜನ ವಿವಿಧ ಬಗೆಯ ಕೂಲಿಗಳಲ್ಲಿ ತೊಡಗಿದ್ದಾರೆ. ೨೨೮ ಜನ ಗೃಹಕೈಗಾರಿಕೆಯಲ್ಲಿ ತೊಡಗಿದ್ದಾರೆ, ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಯರಬಳ್ಳಿ ಗ್ರಾಮದಲ್ಲಿ ಈ ಗುಡಿಕೈಗಾರಿಕೆಯನ್ನು ಅವಲಂಬಿಸಿರುವವರು ಹೆಚ್ಚು. ಅಲ್ಲಿ ಬಳಪದ ಕಲ್ಲಿನಿಂದ ಮೂರ್ತಿ ಕೆತ್ತನೆ ಮಾಡುವುದು ಮತ್ತು ಇದೇ ಕಲ್ಲಿನಿಂದ ಗೃಹೋಪಯೋಗಿ ಪರಿಕರಗಳನ್ನು ಡೊಂಬರು ತಯಾರಿಸುತ್ತಾರೆ. ಗಣತಿಗೆ ಒಳಪಟ್ಟ ೨೩೬೭ ಜನರಲ್ಲಿ ೪೬ ಜನ ಮಾತ್ರ ಚಿಕ್ಕ ಚಿಕ್ಕ ವ್ಯಾಪಾರಗಳಲ್ಲಿ ತೊಡಗಿದ್ದರೆ, ಕೇವಲ ೫೩ ಜನ ಮಾತ್ರ ಸರಕಾರಿ ನೌಕರಿಯಲ್ಲಿದ್ದಾರೆ. ೨೩ ಜನ ಖಾಸಗಿ ವಲಯದಲ್ಲಿ ನೌಕರಿ ಮಾಡುತ್ತಿದ್ದಾರೆ. (ಕೋಷ್ಟಕ ಮುಂದಿನ ಪುಟದಲ್ಲಿದೆ)

ಭೂ ಹಿಡುವಳಿ

ಕರ್ನಾಟಕದಲ್ಲಿ ಡೊಬರು ಆರ್ಥಿಕವಾಗಿ ಅವಲಂಬಿಸಿರುವುದು ಕೃಷಿಯನ್ನು. ಇವರು ಕೃಷಿಕರಾಗಿ ಮತ್ತು ಕೃಷಿ ಕೂಲಿಗಳಾಗಿ ದುಡಿಯುತ್ತಿರುವುದು ಹೆಚ್ಚು. ಗಣತಿಗೆ ಒಳಪಟ್ಟ ೩೯೫ ಕುಟುಂಬಗಳು ಈ ಮೂರೂ ಜಿಲ್ಲೆಗಳಲ್ಲಿ ೯೦೨ ಎಕರೆ ಕೃಷಿ ಜಮೀನನ್ನು ಹೊಂದಿವೆ. ಈ ಕೃಷಿ ಭೂಮಿಯಲ್ಲಿ ೭೦೭ ಎಕರೆ ಒಣ ಕೃಷಿ ಭೂಮಿ, ೧೯೫ ಎಕರೆ ಮಾತ್ರ ನೀರಾವರಿ ಭೂಮಿಯಾಗಿದೆ. ಈ ೯೦೨ ಎಕರೆ ಕೃಷಿಭೂಮಿಯು ಈ ಮೂರು ಜಿಲ್ಲೆಯ ೧೭೨ ಕುಟುಂಬಗಳಲ್ಲಿ ಹಂಚಿಹೋಗಿದೆ. ಅಂದರೆ ಪ್ರತಿ ಕುಟುಂಬವು ಸರಾಸರಿ ೫.೨೫ ಎಕರೆ ಕೃಷಿ ಜಮೀನನ್ನು ಹೊಂದಿದಂತಾಗುತ್ತದೆ. ಈ ೩೯೫ ಕುಟುಂಬಗಳಲ್ಲಿ ೨೨೩ ಕುಟುಂಬಗಳು ಭೂರಹಿತ ಕುಟುಂಬಗಳಾಗಿವೆ. ಬಳ್ಳಾರಿ ಜಿಲ್ಲೆಯ ೧೦೪ ಕುಟುಂಬಗಳಲ್ಲಿ ೭೧ ಕುಟುಂಬಗಳು ಭೂರಹಿತವಾಗಿವೆ, ಉಳಿದ ೩೩ ಕುಟುಂಬಗಳಿಗೆ ೨೯೦ ಎಕರೆ ಜಮೀನು ಹಂಚಿಕೆಯಾಗಿದೆ. ದಾವಣಗೆರೆ ಜಿಲ್ಲೆಯ ೧೫೪ ಕುಟುಂಬಗಳಲ್ಲಿ ೬೪ ಕುಟುಂಬಗಳು ಭೂ ರಹಿತವಾಗಿವೆ. ಉಳಿದ ೯೦ ಕುಟುಬಗಳು ೪೭೬ ಎಕರೆ ಜಮೀನನ್ನು ಹಂಚಿಕೊಂಡಿವೆ. ಶಿವಮೊಗ್ಗ ಜಿಲ್ಲೆಯ ೧೩೭ ಕುಟುಂಬಗಳ ಪೈಕಿ ೮೮ ಕುಟುಂಬಗಳು ಭೂರಹಿತ ಕುಟುಂಬಗಳಾಗಿವೆ. ಉಳಿದ ೪೯ ಕುಟುಂಬಗಳಲ್ಲಿ ೧೩೬ ಎಕರೆ ಕೃಷಿ ಭೂಮಿಯು ಹಂಚಿಕೆಯಾಗಿದೆ. ಈ ಕುಟುಂಬಗಳು ಆಯಾ ಜಿಲ್ಲೆಗಳಲ್ಲಿ ಬೇರೆ ಬೇರೆ ಉದ್ಯೋಗಳಲ್ಲಿ ತೊಡಗಿಕೊಡಿರುವುದು ಕಂಡು ಬರುತ್ತವೆ. ಬಳ್ಳಾರಿ ಜಿಲ್ಲೆಯಲ್ಲಿನ ಕುಟುಂಬಗಳ ಪೈಕಿ ಶೇ. ೭೦ ಕುಟುಂಬಗಳು ಭೂರಹಿತವಾಗಿವೆ. ದಾವಣಗೆರೆ ಜಿಲ್ಲೆಯ ಶೇ ೪೦ ಕುಟುಂಬಗಳು ಭೂರಹಿತವಾಗಿವೆ. ಶಿವಮೊಗ್ಗ ಜಿಲ್ಲೆಯಲ್ಲಿ ಶೇ ೬೨ ಕುಟುಂಬಗಳಿಗೆ ಕೃಷಿ ಭೂಮಿ ದೊರೆತಿಲ್ಲ. ಅಂದರೆ ಗಣತಿಗೆ ಒಳಪಟ್ಟ ೩೯೫ ಕುಟುಂಬಗಳಲ್ಲಿ ಸರಾಸರಿ ೬೪.೬೬ ಕುಟುಂಬಗಳು ಭೂರಹಿತವಾಗಿರುವುದು ಕಂಡು ಬರುತ್ತದೆ. ಅಂದರೆ ಒಟ್ಟಾರೆ ಶೇ. ೬೪.೬೬ ಕುಟುಂಬಗಳು ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಕೊಡಿರುವುದು ಕಂಡು ಬರುತ್ತದೆ.

ಜಿಲ್ಲಾ ಮತ್ತು ತಾಲ್ಲೂಕುವಾರು ಡೊಂಬರ ಭೂ ಹಿಡುವಳಿ

ಕ್ರ.ಸಂ.	ಜಿಲ್ಲಾ	ತಾಲ್ಲೂಕು	ಕುಟುಂಬಗಳು	ಒಣಭೂಮಿ	ನೀರಾವರಿ	ಒಟ್ಟು	ಭೂರಹಿತರು
೧	ಬಳ್ಳಾರಿ	ಬಳ್ಳಾರಿ	೧	-	-	-	೧
		ಹೊಸಪೇಟೆ	೧೦	೫	-	೫	೯
		ಕೂಡ್ಲಿಗಿ	೭೭	೧೯೯	೨೧	೨೨೦	೪೯
		ಸಂಡೂರು	೧೨	೩೫	-	೩೫	೯
		ಸಿರುಗುಪ್ಪ	೦೪	೨೪	೬	೩೦	೩
	ದಾವಣಗೆರೆ	ಹರಪನಹಳ್ಳಿ	೧೫೪	೪೧೩	೬೩	೪೭೬	೬೪
	ಶಿವಮೊಗ್ಗ	ಶಿವಮೊಗ್ಗ	೧೮	೮	೨	೧೦	೧೦
		ಭದ್ರಾವತಿ	೧೩	-	೪	೪	೧೧
		ಹೊಸನಗರ	೩೬	-	೧೦	೧೦	೩೦
		ಸೊರಬ	೩೬	೨೩	೪೨	೬೫	೨೦
		ಶಿಕಾರಿಪುರ	೮	-	೨೫	೨೫	೨
		ತೀರ್ಥಹಳ್ಳಿ	೨೬	-	೨೨	೨೨	೧೫
		ಒಟ್ಟು	**೩೯೫**	**೭೦೭**	**೧೯೫**	**೯೦೨**	**೨೨೩**

ಮೇಲಿನ ಕೋಷ್ಟಕದ ಆಧಾರದ ಮೇಲೆ ಕೆಲವು ಮುಖ್ಯ ಅಂಶಗಳ ಕುರಿತು ಚರ್ಚೆಯನ್ನು ಬೆಳೆಸಬಹುದಾಗಿದೆ. ಸಮುದಾಯಗಳ ಆರ್ಥಿಕ ಅವಲಂಬನೆ ಮತ್ತು ಉತ್ಪಾದನೆಯ ವಿಧಗಳನ್ನು ಆಧರಿಸಿ ದುಡಿಮೆಯ ಸ್ವರೂಪವನ್ನು ಪ್ರಾಥಮಿಕ ವಲಯ, ದ್ವಿತೀಯ ವಲಯ ಮತ್ತು ತೃತೀಯ ವಲಯ ಎಂದು ವಿಭಾಗಿಸಲಾಗಿದೆ.[೧೯] ಪ್ರಾಥಮಿಕ ವಲಯದಲ್ಲಿ ದುಡಿಮೆಗೆ ತೊಡಗಿಕೊಂಡಿರುವ ಸಮುದಾಯಗಳ ಜನ ಹೆಚ್ಚಾಗಿ ಕೃಷಿ, ಗಣಿಗಾರಿಕೆ, ಮೀನುಗಾರಿಕೆ, ಕಲ್ಲು ಹೊಡೆಯುವುದು[೨೦] ಮುಂತಾದ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ. ಈ ಪ್ರಾಥಮಿಕ ವಲಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನ ಹೆಚ್ಚಾಗಿ ತೊಡಗಿಕೊಂಡಿರುತ್ತಾರೆ. ದ್ವಿತೀಯ ವಲಯವೆಂದರೆ ಸೇವಾ ವಲಯ ಮತ್ತು ತೃತೀಯ ವಲಯವೆಂದರೆ ಬಂಡವಾಳಶಾಹಿ ಉತ್ಪಾದನಾ ವಲಯ. ಈ ಸೇವಾ ವಲಯ ಮತ್ತು ಬಂಡವಾಳಶಾಹಿ ಉತ್ಪಾದನಾ ವಲಯದಲ್ಲಿ ಮೇಲ್ವರ್ಗ/ಮೇಲ್ಜಾತಿಗಳು ಹೆಚ್ಚಾಗಿ ತೊಡಗಿಕೊಂಡಿರುವುದು ಕಂಡು ಬರುತ್ತದೆ. ಕೊನೆಯ ಈ ಎರಡು ವಲಯಗಳಲ್ಲಿ ಸರಕಾರದ ಮತ್ತು ಖಾಸಗಿ ಬಂಡವಾಳವು ಹೆಚ್ಚು ಸಂಚಯಗೊಂಡಿರುತ್ತದೆ. ಮತ್ತು ಈ ವಲಯದಲ್ಲಿ ಹೆಚ್ಚು ಮೇಲ್ವರ್ಗ/ಮೇಲ್ಜಾತಿಯ ಅಕ್ಷರಸ್ಥ ಜನ ಪ್ರಭಾವಶಾಲಿಗಳಾಗಿರುತ್ತಾರೆ. ಆದರೆ ಡೊಂಬರಂತಹ ಸಮುದಾಯವು ಮೇಲೆ ಕಾಣಿಸಿದ ಯಾವ ವಲಯಗಳಲ್ಲೂ ಪ್ರಭಾವಶಾಲಿ ಸ್ಥಾನಮಾನಗಳನ್ನು ಪಡೆದಿಲ್ಲ. ಶೇ. ೪೭ ಕ್ಕೂ ಹೆಚ್ಚು ಜನ ಇನ್ನೂ ಪ್ರಾಥಮಿಕ ವಲಯವನ್ನೂ ಪ್ರವೇಶಿಸದೆ 'ಆದಿಮ' ಹಂತದಲ್ಲಿಯೇ ಇದ್ದಾರೆ. ಅಂದರೆ ಇಂತಹ ಜನ ಸಮುದಾಯಗಳು ನಾಡಿನ 'ಮುಖ್ಯವಾಹಿನಿಯ' ಉತ್ಪಾದನಾ ವ್ಯವಸ್ಥೆಯ ಒಳಗೆ ಪ್ರವೇಶವನ್ನೇ ಪಡೆದಿಲ್ಲ.

ಡೊಂಬರು ಅವಲಂಬಿಸಿದ ಕಸುಬುಗಳು

ಕ್ರಸ	ಜಿಲ್ಲೆ	ತಾಲೂಕು	ಕುಟುಂಬಗಳು	ಕೃಷಿ		ಕೃಷಿಕೂಲಿ		ಗೃಹಕೈಗಾರಿಕೆ		ಸಣ್ಣವ್ಯಾಪಾರಿ		ಸರ್ಕಾರಿ ನೌಕರಿ		ಖಾಸಗಿ		ಇತರೆ	
				ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ
೧	ಬಳ್ಳಾರಿ	ಬಳ್ಳಾರಿ	೧	-	-	-	-	-	-	-	-	೧	-	-	-	-	-
		ಹೊಸಪೇಟೆ	೧೦	-	೪	೪	೧೨	-	-	೧	೧	-	೬	೧	೧	೮	೧
		ಕೂಡ್ಲಿಗಿ	೭೭	೧೦	೧೦೭	೧೦೭	೧೧೪	-	-	೮	೭	೧೧	೪	೧೨	-	೧೩	೨೨
		ಸಂಡೂರು	೧೨	-	೧೧	೧೧	೧೪	-	-	೨	೧	-	-	-	-	೧೪	-
		ಸಿರುಗುಪ್ಪ	೦೪	೩	೧೪	೧೪	೧೪	-	-	-	-	-	೫	೩	-	೨	-
೨	ದಾವಣಗೆರೆ	ಹರಪನಹಳ್ಳಿ	೧೫೪	೩೬	೮	೯೭	೮೧	೧೧೭	೧೦೨	೧೦	-	೧೫	೫	೩	-	೭	೧
೩	ಶಿವಮೊಗ್ಗ	ಶಿವಮೊಗ್ಗ	೧೮	-	-	೭	೫	೪	೪	೪	೫	೧	೩	೨	೧	೮	೪
		ಭದ್ರಾವತಿ	೧೩	೪	೩	೨೩	೧೭	-	-	-	-	-	-	-	-	-	-
		ಹೊಸನಗರ	೩೬	೫	-	೪೪	೩೨	-	-	೬	೧	೧	-	-	-	೨	೩
		ಸೊರಬ	೩೬	೧೧	೨	೩೭	೪೦	೧	-	-	-	-	-	-	-	೫	೩
		ಶಿಕಾರಿಪುರ	೮	೧೨	೧	೭	೫	-	-	-	-	೧	೧	-	-	-	-
		ತೀರ್ಥಹಳ್ಳಿ	೨೬	೧೫	೨	೨೬	೨೩	-	-	-	-	-	-	-	-	೧	೨
		ಒಟ್ಟು	೩೯೫	೯೬	೧೫೨	೩೭೭	೩೫೭	೧೨೨	೧೦೬	೩೧	೧೫	೩೦	೨೪	೨೧	೨	೬೦	೩೬

ಇವರು 'ಆದಿಮ ವಲಯ'ದ ಜನರೇ ಆಗಿದ್ದಾರೆ. ಈ ವಲಯದ ಜನ ಹೆಚ್ಚಾಗಿ ಆರ್ಥಿಕವಾಗಿ ಅವಲಂಬಿತರು. ನೆಲೆ ಇಲ್ಲದವರು ಮತ್ತು ಯಾವುದನ್ನು ನಾವು ರಾಷ್ಟ್ರೀಯ ತಲೆ ಆದಾಯ ಎಂದು ಗುರುತಿಸುತ್ತೇವೋ ಆ ಲೆಕ್ಕಾಚಾರದಿಂದ ದೂರ ಉಳಿಯುವ ಅನಾಮಿಕ ಗುಂಪಿಗೆ ಸೇರಿದವರು.

ಅಂದರೆ ಉತ್ಪಾದನೆಯ ವಿಷಯದಲ್ಲಿಡೊಂಬರ ಅದರಲ್ಲೂ ನೆಲೆನಿಂತ ಸಮುದಾಯದ ಶೇ ೪೭ ಜನ ಇನ್ನೂ 'ಆದಿಮ' ಹಂತದ ಬುಡಕಟ್ಟು ಸ್ಥಿತಿಯಲ್ಲಿಯೇ ಇದ್ದಾರೆ ಎಂಬುದು ಈ ಚರ್ಚೆಯಿಂದ ಗೊತ್ತಾಗುತ್ತದೆ. ಅರ್ಥಶಾಸ್ತ್ರ ಮತ್ತು ಅಭಿವೃದ್ಧಿ ಸಿದ್ಧಾಂತಗಳಲ್ಲಿ ಪ್ರತಿಪಾದಿತವಾಗುತ್ತಿರುವ ಪ್ರಮೇಯವೆಂದರೆ ಯಾವ ಆರ್ಥಿಕತೆಯಲ್ಲಿ ದುಡಿಮೆಗಾರ ವರ್ಗ ಅಧಿಕವಾಗಿ ಪ್ರಾಥಮಿಕ ವಲಯವನ್ನು ಅವಲಂಬಿಸಿಕೊಂಡಿರುವುದೋ ಅಲ್ಲಿ ಆರ್ಥಿಕ ದುಸ್ಥಿತಿ ತೀವ್ರವಾಗಿರುತ್ತದೆ. ಆದರೆ ಪ್ರಾಥಮಿಕ ವಲಯಕ್ಕೇ ಸೇರದ ಡೊಂಬರಂತಹ ಸಮುದಾಯದ ಆರ್ಥಿಕತೆಯನ್ನು ಯಾವ ಅಭಿವೃದ್ಧಿ ಅರ್ಥಶಾಸ್ತ್ರದ ಮೂಲಕ ಅಳತೆ ಮಾಡಲು ಸಾಧ್ಯ? ಈ ಕಾರಣದಿಂದಾಗಿ ಭಾರತದ ಉತ್ಪಾದನಾ ವಲಯದ ಹಂತಗಳ ಲೆಕ್ಕಾಚಾರದಲ್ಲಿ ಈ ಬಗೆಯ ಸಮುದಾಯಗಳಿಗೆ ಇನ್ನೂ ಪ್ರವೇಶವೇ ಸಿಕ್ಕಿಲ್ಲ. ಹೀಗೆ ಪ್ರವೇಶ ಪಡೆಯದವರೆಂದರೆ ಅಲೆಮಾರಿಗಳು ಮತ್ತು 'ಮುಖ್ಯವಾಹಿನಿ'ಯಿಂದ ದೂರ ಇರುವ ಕಾಡೊಳಗಿನ ಆದಿವಾಸಿ ಸಮುದಾಯಗಳು. ಈ ಸಮುದಾಯಗಳು ದೇಶದ ತಲೆ ಆದಾಯದ ಲೆಕ್ಕಾಚಾರದಲ್ಲಿ ಮಾತ್ರವಲ್ಲ ಜನಗಣತಿಯ ಸಾಮಾನ್ಯ ವರದಿಯಲ್ಲೂ ಇವರು ದಾಖಲಾಗುವುದಿಲ್ಲ.

ನಮ್ಮ ಉತ್ಪಾದನಾ ವ್ಯವಸ್ಥೆಯ ಪ್ರಾಥಮಿಕ ವಲಯವನ್ನೂ ಡೊಂಬರ ಸಮುದಾಯದ ಶೇ ೪೫ ರಷ್ಟು ಜನ ಇನ್ನೂ ಪ್ರವೇಶಿಸಿಯೇ ಇಲ್ಲ. ಈ ಸಮುದಾಯದ ಶೇ ೪೭ರಷ್ಟು ಜನ ಕೃಷಿಕೂಲಿ ಮತ್ತು ಇತರೆ ಕೂಲಿಗಳನ್ನು ಆರ್ಥಿಕವಾಗಿ ಅವಲಂಬಾಸಾದ್ದಾರೆ. ಅಂದರೆ ಶೇ ೪೭ ರಷ್ಟು ಜನರು ದುಡಿಮೆಯ ವಿವಿಧ ವಲಯಗಳ ಚೌಕಟ್ಟಿಗೆ ಪ್ರವೇಶವನ್ನೇ ಪಡೆದಿಲ್ಲ. ಇದನ್ನು ಒಂದು ಕೋಷ್ಟಕದ ಮೂಲಕ ಸ್ಪಷ್ಟಗೊಳಿಸಿಕೊಳ್ಳಬಹುದಾಗಿದೆ. ಕರ್ನಾಟಕದ ಉತ್ಪಾದನೆಯ ವಿವಿಧ ವಲಯಗಳನ್ನು ೧೯೯೧ ರ ಜನಗಣತಿ ಆಧರಿಸಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮುಂದುವರಿದ (ಶಿಷ್ಟ) ವರ್ಗ ಸಮುದಾಯಗಳನ್ನು ವಿಂಗಡಿಸಿ ಆಯಾ ವಲಯಗಳಲ್ಲಿ ದುಡಿಯುತ್ತಿರುವ ಜನರ ತೊಡಗಿಸಿಕೊಳ್ಳುವಿಕೆಯನ್ನು ಈ ಕೋಷ್ಟಕ ವಿವರಿಸುತ್ತದೆ.

ಕರ್ನಾಟಕ : ದುಡಿಮೆಯ ರಾಚನಿಕ ಸ್ವರೂಪ : ಶಿಷ್ಟ-ಪರಿಶಿಷ್ಟ ನೆಲೆಗಳು ೧೯೯೧

(ಸಂಖ್ಯೆ : ಲಕ್ಷಗಳಲ್ಲಿ)

ವಿವರಗಳು	ಪ್ರಾಥಮಿಕ ವಲಯ		ದ್ವಿತೀಯವಲಯ		ತೃತೀಯ ವಲಯ		ಒಟ್ಟು	
	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
ಪರಿಶಿಷ್ಟರು/ ದಲಿತರು	೩೧.೧೫	೮೦.೨೨	೩.೭೨	೯.೫೮	೩.೯೬	೧೦.೨೦	೩೮.೮೩	೧೦೦.೦೦
ಶಿಷ್ಟರು	೮೫.೩೪	೬೩.೬೪	೧೯.೦೭	೧೪.೨೨	೨೯.೬೮	೨೨.೧೪	೧೩೪.೯	೧೦೦.೦೦
ಒಟ್ಟು	೧೧೬.೪೯	೬೭.೩೭	೨೨.೭೯	೧೩.೧೮	೩೩.೬೪	೧೯.೪೫	೧೭೨.೯೨	೧೦೦.೦೦

ಟಿಪ್ಪಣಿ : ಈ ವಿವರಗಳನ್ನು ೧೯೯೧ಕ್ಕೆ ಸೀಮಿತಗೊಳಿಸಿಕೊಳ್ಳಲಾಗಿದೆ. ದುಡಿಮೆಗಾರರ ವಲಯವಾರು ಹಂಚಿಕೆಯ ೨೦೦೧ರ ಜನಗಣತಿ ವಿವರಗಳು ಇನ್ನೂ ಲಭ್ಯವಾಗಿಲ್ಲ.

ಮೇಲಿನ ಕೋಷ್ಟಕದ ಪ್ರಕಾರ ಪ್ರಾಥಮಿಕ ವಲಯ ಅಂದರೆ ಕೃಷಿ, ಗಣಿಗಾರಿಕೆ, ಇತರೆ ನಿತ್ಯದ ಉತ್ಪಾದನೆಯಲ್ಲಿ ತೊಡಗಿಕೊಂಡಿರುವವರು ಹೆಚ್ಚಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು. ಅಂದರೆ ಈ ಎರಡೂ ಪಂಗಡಕ್ಕೆ ಸೇರಿದ ಶೇ ೮೦.೨೨% ರಷ್ಟು ಜನ ಹೆಚ್ಚು ಲಾಭ ತರದ ಪ್ರಾಥಮಿಕ ವಲಯದ ದುಡಿಮೆಯಲ್ಲಿ ನಿರತರಾಗಿದ್ದಾರೆ. ದ್ವಿತೀಯ ಮತ್ತು ತೃತೀಯ ವಲಯದಲ್ಲಿ ಈ ಸಮುದಾಯಗಳ ತೊಡಗಿಸಿಕೊಳ್ಳುವಿಕೆ ಬೆರಳೆಣಿಕೆ ಮಾತ್ರ. ಆದರೆ ಡೊಂಬರಲ್ಲಿ ಕೃಷಿಕೂಲಿಯನ್ನೂ ಸೇರಿ ಇತರೆ ಕೂಲಿ ಕೆಲಸದಲ್ಲಿ ನಿರತರಾಗಿದವರು ಶೇ ೪೫% ರಷ್ಟು ಜನ ಇನ್ನೂ ನಿಶ್ಚಿತ ಆರ್ಥಿಕ ಮೂಲಗಳೂ ಇಲ್ಲದ ಆದಿಮ ವಲಯಕ್ಕೆ ಸೇರಿದವರು. ಅದರೆ ನಿತ್ಯದ ದುಡಿಮೆ ಮತ್ತು ಆದಾಯಗಳೆರಡೂ ಅನಿಶ್ಚಿತ ಸ್ಥಿತಿಯಲ್ಲಿಯೇ ಇರುವಂತಹ ಸಂದರ್ಭದಲ್ಲಿ ಶೇ. ೬೫% ರಷ್ಟು ಜನ ಬದುಕುತ್ತಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿವಿಧ ಜಾತಿಗಳಿಗೆ ಹೋಲಿಸಿದರೆ ಡೊಂಬರ ಸಮುದಾಯದ ಆರ್ಥಿಕ ಸ್ಥಿತಿಗತಿ ಉತ್ತಮವಾಗೇನೂ ಇಲ್ಲ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ.

ಡೊಂಬರ ಶೈಕ್ಷಣಿಕ ಸ್ಥಿತಿಗತಿ

ಶಿಕ್ಷಣ ಭಾರತದಂತಹ ದೇಶದಲ್ಲಿ ಮೇಲ್ವರ್ಗಗಳ ಅಥವಾ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವವರ ಸ್ವತ್ತಾಗಿಯೇ ಉಳಿದುಬಿಟ್ಟಿದೆ. ಈವತ್ತು ಉನ್ನತ ಶಿಕ್ಷಣ ಕೇವಲ ಶ್ರೀಮಂತ ವರ್ಗಗಳಿಗೆ ಮೀಸಲು ಎಂಬ ಸ್ಥಿತಿ ನಿರ್ಮಾಣವಾಗಿದೆ. ಆದರೆ ಒಂದು ದೇಶದ ಶಿಕ್ಷಣ ವ್ಯವಸ್ಥೆಯ ಸ್ಥಿತಿಗತಿಯನ್ನು ಆ ದೇಶದಲ್ಲಿ ಬದುಕುತ್ತಿರುವ ಜನರ ಸಾಕ್ಷರತೆಯ ಮೂಲಕ, ಅಂದರೆ ಅಕ್ಷರ ಬರೆಯಲು ಮತ್ತು ಓದಲು ಬರುವ 'ಪ್ರಾಥಮಿಕ ಹಂತವನ್ನು' ಮಾನದಂಡವನ್ನಾಗಿಸಿಕೊಂಡು ಈ ಲೆಕ್ಕಾಚಾರ ಮಾಡಲಾಗುತ್ತದೆ. ಆದರೆ ಭಾರತದಂತಹ ಅಸಮಾನ ನೆಲೆಯ ಸಮಾಜದಲ್ಲಿ ಅಸಾಧಾರಣ ಏರು ಪೇರುಗಳಿವೆ. ಶಿಕ್ಷಣ 'ಇಂತವರಿಗೆ' ಮಾತ್ರ 'ಮೀಸಲು' ಎನ್ನುವ ಸಾಮಾಜಿಕ ಕಾನೂನುಗಳನ್ನು ಸಾವಿರಾರು ವರ್ಷಗಳಿಂದ ಪೋಷಿಸಿಕೊಂಡು ಬಂದ ದೇಶ ಇದು. ಇಂತಹ ದೇಶದಲ್ಲಿ ಈ ಸಮಾಜದ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗ ಮತ್ತು ಅಂಚಿನ ಸಮುದಾಯಗಳಿಗೆ ಶಿಕ್ಷಣವೆಂಬುದು ಗಗನ ಕುಸುಮ. ಈ ಕಾರಣದಿಂದಾಗಿ ಈ ಸಮುದಾಗಳು ಕೇವಲ ಶ್ರಮದಾಯಕ ದುಡಿಮೆಗಳಲ್ಲಿ ಮಾತ್ರ ಶತಮಾನಗಳಿಂದ ತೊಡಗಿಕೊಂಡೇ ಬಂದರು. ಆದರೆ ಕಳೆದ ನೂರು ವರ್ಷಗಳಲ್ಲಿ ಈ ಸಮುದಾಯಗಳ ಶೈಕ್ಷಣಿಕ ಸ್ಥಿತಿಗತಿ ಹಂತಹಂತವಾಗಿ ಸುಧಾರಿಸುತ್ತಾ ಬಂದಿದೆ. ಆದರೆ ಒಟ್ಟಾರೆ ಭಾರತದ ಮತ್ತು ಕರ್ನಾಟಕದ ಸಾಕ್ಷರತೆಯ ಪ್ರಮಾಣದಲ್ಲಿ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗ ಮತ್ತು ಅಂಚಿನ ಸಮುದಾಯಗಳ ಸಾಕ್ಷರತೆಯ ಪ್ರಮಾಣವು ನಿರೀಕ್ಷಿತ ಮಟ್ಟವನ್ನು ತಲುಪಿಲ್ಲದಿರುವುದ ಅಂಕಿಅಂಶಗಳಿಂದ ಗೊತ್ತಾಗುತ್ತದೆ. ಕರ್ನಾಟಕದ ಒಟ್ಟಾರೆಯ ಸಾಕ್ಷರತೆ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಾಕ್ಷರತೆಯ ಪ್ರಮಾಣವನ್ನು ಈ ಕೆಳಗಿನ ಕೋಷ್ಟಕದ ಮೂಲಕ ಕಂಡುಕೊಳ್ಳಬಹುದಾಗಿದೆ. ಈ ಕೆಳಗಿನ ಅಂಕಿ ಅಂಶಗಳನ್ನು ೨೦೦೧ ರ

ಜನಗಣತಿಯಿಂದ ಪಡೆದುಕೊಳ್ಳಲಾಗಿದೆ.

ಕರ್ನಾಟಕದ ಸಾಕ್ಷರತೆ : ಜನಗಣತಿ ಮಾಹಿತಿ : ೨೦೦೧

ಕ್ರ.ಸಂ.	ವಿವರಗಳು	ಒಟ್ಟು	ಮಹಿಳೆಯರು	ಪುರುಷರು
೧.	ರಾಜ್ಯದ ಒಟ್ಟು ಜನಸಂಖ್ಯೆ	ಶೇ. ೬೭.೦೪	೫೭.೪೫	೭೬.೨೯
೨.	ಪರಿಶಿಷ್ಟ ಜಾತಿ	ಶೇ. ೫೨.೯೦	೪೧.೭೦	೬೩.೮೦
೩.	ಪರಿಶಿಷ್ಟ ವರ್ಗ	ಶೇ. ೪೮.೩೦	೩೬.೬೦	೫೯.೭೦
೪.	ಅಂತರ : ಪ.ಜಾ. (೧-೨)	-೧೪.೧೪	-೧೫.೭೫	-೧೨.೪೯
೫.	ಅಂತರ : ಪ.ಪಂ. (೧-೩)	-೧೮.೭೪	-೨೦.೮೫	-೧೬.೫೯

ಈ ಕೋಷ್ಟಕದ ಪ್ರಕಾರ ಪರಿಶಿಷ್ಟೇತರ ಶಿಷ್ಟ ವರ್ಗಗಳ ಸಾಕ್ಷರತೆಯ ಪ್ರಮಾಣ ಶೇ ೬೭.೦೪ ರಷ್ಟಿದೆ. ಮಹಿಳೆಯರು ಶೇ. ೫೭.೪೫% ಮತ್ತು ಪುರುಷರು ೭೬.೨೯% ರಷ್ಟು ಸಾಕ್ಷರರಾಗಿದ್ದಾರೆ. ಆದರೆ ಪರಿಶಿಷ್ಟ ಜಾತಿಯ ಒಟ್ಟಾರೆಯ ಸಾಕ್ಷರತೆ ಶೇ. ೫೨.೯೦ ರಷ್ಟಿದ್ದರೆ, ಪುರುಷರು ಶೇ ೬೩.೮೦ ಮತ್ತು ಸ್ತ್ರೀಯರು ಶೇ. ೪೧.೭೦ ರಷ್ಟಿದೆ. ಪರಿಶಿಷ್ಟ ಪಂಗಡದ ಒಟ್ಟಾರೆ ಸಾಕ್ಷರತೆ ೪೮.೩೦. ಇವರಲ್ಲಿ ಶೇ ೫೯.೭೦ ರಷ್ಟು ಪುರುಷರು ಮತ್ತು ಶೇ. ೩೬.೬೦ ರಷ್ಟು ಸ್ತ್ರೀಯರು ಸಾಕ್ಷರತೆಯನ್ನು ಹೊಂದಿದ್ದಾರೆ. ಈ ಅಂಕೆಸಂಖ್ಯೆಗಳನ್ನು ಇಟ್ಟುಕೊಂಡು ಡೊಂಬರ ಸಮುದಾಯದ ಸಾಕ್ಷರತೆಯು ಸ್ಥಿತಿಗತಿಯನ್ನು ವಿವರಿಸಿಕೊಳ್ಳಬಹುದಾಗಿದೆ.

ಡೊಂಬರ ಸಾಕ್ಷರತೆಯ ತೌಲನಿಕ ಪ್ರಮಾಣ

ಸಾಕ್ಷರತೆ : ಜನಗಣತಿ ಮಾಹಿತಿ : ೨೦೦೧

ಕ್ರ.ಸಂ.	ವಿವರಗಳು	ಒಟ್ಟು	ಮಹಿಳೆಯರು	ಪುರುಷರು
೧.	ರಾಜ್ಯದ ಒಟ್ಟು ಜನಸಂಖ್ಯೆ	ಶೇ. ೬೭.೦೪	೫೭.೪೫	೭೬.೨೯
೨.	ಪರಿಶಿಷ್ಟ ಜಾತಿ	ಶೇ. ೫೨.೯೦	೪೧.೭೦	೬೩.೮೦
೩.	ಪರಿಶಿಷ್ಟ ವರ್ಗ	ಶೇ. ೪೮.೩೦	೩೬.೬೦	೫೯.೭೦
೪.	ಅಂತರ : ಪ.ಜಾ. (೧-೨)	-೧೪.೧೪	-೧೫.೭೫	-೧೨.೪೯
೫.	ಅಂತರ : ಪ.ಪಂ. (೧-೩)	-೧೮.೭೪	-೨೦.೮೫	-೧೬.೫೯
೬.	ಡೊಂಬರ ಸಾಕ್ಷರತೆ	ಶೇ.೫೧.೦೦	೨೫.೦೦	೩೩.೦೦
೭.	ಅಂತರ : (ಡೊಂಬರು)	-೧೬.೦೪	-೩೨.೪೫	-೪೫.೨೯

೨೦೦೧ ರ ಜನಗಣತಿಯ ಪ್ರಕಾರ ರಾಜ್ಯದ ಒಟ್ಟಾರೆಯ ಸಾಕ್ಷರತೆಯ ಪ್ರಮಾಣಕ್ಕಿಂತ ಡೊಂಬರ ಸಾಕ್ಷರರ ಪ್ರಮಾಣ ಗಣನೀಯವಾಗಿ ಇಳಿಮುಖವಾಗಿರುವುದು ಈ ಕೋಷ್ಟಕದಿಂದ ಕಂಡು ಬರುತ್ತದೆ. ಅದರಲ್ಲೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಾಕ್ಷರತೆಗಿಂತಲೂ ಡೊಂಬರ ಸಾಕ್ಷರತೆಯ ಪ್ರಮಾಣವು ಅತ್ಯಂತ ಕಡಿಮೆ ಇರುವುದು ಕಂಡು ಬರುತ್ತದೆ. ಅದರಲ್ಲೂ ಮಹಿಳೆಯರು ಡೊಂಬರ ಸಮುದಾಯದಲ್ಲಿ ಗಣನೀಯ ಪ್ರಮಾಣದಲ್ಲಿ ಅನಕ್ಷರಸ್ಥರಿರುವುದು ಕಂಡು ಬರುತ್ತದೆ. ಇದಕ್ಕೆ ಕಾರಣ ಈ ಸಮುದಾಯದ ಆರ್ಥಿಕ ಸ್ಥಿತಿ ಎಂಬುದು ಸ್ಪಷ್ಟವಾಗುತ್ತದೆ. ಸದರಿ ಸಮುದಾಯದ ಶೇ ೪೫ ರಷ್ಟು ಜನ ನಿತ್ಯದ ಬದುಕನ್ನು ನಿರ್ವಹಿಸುವಲ್ಲಿ ಮತ್ತು ಎರಡು ಹೊತ್ತಿನ ಊಟದ ಪ್ರಶ್ನೆಯೇ ಮುಖ್ಯವಾಗಿರುವಲ್ಲಿ ಇವರು ಹೇಗೆ ಅಕ್ಷರ ಲೋಕಕ್ಕೆ ಪ್ರವೇಶ

ಪಡೆಯಲು ಸಾಧ್ಯ? ಸಮುದಾಯಗಳು ಆರ್ಥಿಕವಾಗಿ ಸಬಲಗೊಳ್ಳದೆ ವಿಪರೀತ ಸ್ಪರ್ಧೆಯ ವರ್ತಮಾನವನ್ನು ಹೇಗೆ ತಾನೇ ಎದುರಿಸಲು ಸಾಧ್ಯ ? ಡೊಂಬರ ವಾಸಿಸುತ್ತಿರುವ ಯಾವ ಯಾವ ಜಿಲ್ಲೆಗಳಲ್ಲಿ ಸಮುದಾಯವು ಆರ್ಥಿಕವಾಗಿ ದುಸ್ಥಿತಿಯಲ್ಲಿದೆಯೋ ಆ ಎಲ್ಲ ಜಿಲ್ಲೆಗಳಲ್ಲಿ ಸದರಿ ಸಮುದಾಯದ ಸಾಕ್ಷರತೆಯ ಪ್ರಮಾಣವು ಅತ್ಯಂತ ಹೀನಾಯ ಸ್ಥಿತಿಯಲ್ಲಿರುವುದು ಕಂಡು ಬರುತ್ತದೆ. ಅದರಲ್ಲೂ ಈ ಸಮುದಾಯದ ಮಹಿಳೆಯ ಸಾಕ್ಷರತೆಯ ಪ್ರಮಾಣವು ಕಳವಳಕಾರಿ ಸ್ಥಿತಿಯಲ್ಲಿರುವುದನ್ನು ಗಮನಿಸಬಹುದಾಗಿದೆ.

ಜಿಲ್ಲೆ ಮತ್ತು ತಾಲ್ಲೂಕುವಾರು ಡೊಂಬರ ಸಾಕ್ಷರತೆಯ ಪ್ರಮಾಣ

ಕ್ರ.ಸಂ.	ಜಿಲ್ಲೆ	ತಾಲ್ಲೂಕು	ಒಟ್ಟು ಜನಸಂಖ್ಯೆ	ಅಕ್ಷರಸ್ಥರು		ಅನಕ್ಷರಸ್ಥರು	
				ಗಂ.	ಹೆ	ಗಂ.	ಹೆ
೧	ಬಳ್ಳಾರಿ	ಬಳ್ಳಾರಿ	೪	೨	೨	-	-
		ಹೊಸಪೇಟೆ	೫೧	೧೮	೧೧	೭	೧೨
		ಕೂಡ್ಲಿಗಿ	೪೪೪	೧೨೮	೧೧೮	೯೪	೧೦೪
		ಸಂಡೂರು	೧೦೮	೩೦	೧೮	೨೮	೩೨
		ಸಿರುಗುಪ್ಪ	೫೬	೨೧	೫	೯	೨೧
	ದಾವಣಗೆರೆ	ಹರಪನಹಳ್ಳಿ	೯೮೧	೩೧೧	೨೧೬	೧೮೮	೨೬೬
	ಶಿವಮೊಗ್ಗ	ಶಿವಮೊಗ್ಗ	೯೨	೩೨	೨೨	೧೭	೨೧
		ಭದ್ರಾವತಿ	೬೮	೨೫	೧೯	೧೫	೯
		ಹೊಸನಗರ	೨೩೮	೭೮	೬೯	೩೪	೪೩
		ಸೊರಬ	೧೭೪	೫೯	೪೩	೩೨	೪೦
		ಶಿಕಾರಿಪುರ	೪೩	೧೫	೧೧	೯	೮
		ತೀರ್ಥಹಳ್ಳಿ	೧೩೬	೩೭	೪೪	೩೧	೩೧
		ಒಟ್ಟು	೨೩೯೫	೭೫೬	೫೭೮	೪೬೪	೫೮೭

ಡೊಂಬರ ಸಾಕ್ಷರತೆಯ ಪ್ರಮಾಣವು ಶಿಷ್ಟರಿಗೂ ಮತ್ತು ಪರಿಶಿಷ್ಟರಿಗೆ ಹೋಲಿಸಿದಲ್ಲಿ ಅಗಾಧ ಪ್ರಮಾಣದಲ್ಲಿ ಕಡಿಮೆ ಇರುವುದು ಕಂಡುಬರುತ್ತದೆ. ಇದಕ್ಕೆ ಕಾರಣ ಡೊಂಬರಿಗೆ ನಿಶ್ಚಿತ ಆರ್ಥಿಕ ಮೂಲಗಳಿಲ್ಲದೇ ಇರುವುದು. ಯಾವ ಸಮುದಾಯವು ಕೇವಲ ಅನಿಶ್ಚಿತ ಮತ್ತು ಅವಲಂಬಿತ ಆರ್ಥಿಕ ಮೂಲಗಳನ್ನು ನೆಚ್ಚಿಕೊಂಡಿರುತ್ತದೋ, ಆ ಸಮುದಾಯವು ಸಾಮಾಜಿಕವಾಗಿ, ಮತ್ತು ಶೈಕ್ಷಣಿಕವಾಗಿ ಯಾವತ್ತೂ ಹಿನ್ನಡೆಯನ್ನು ಅನುಭವಿಸುತ್ತಲೇ ಇರುತ್ತದೆ. ವರ್ತಮಾನವನ್ನು ಚರಿತ್ರೆಯ ನೆನಪುಗಳಿಂದ ಎದುರಿಸುವುದು ಸಾಧ್ಯವಿಲ್ಲ. ಹೀಗಾಗಿ ಸಮುದಾಯವೊಂದಕ್ಕೆ ಸಾಂಸ್ಕೃತಿಕವಾಗಿ ಶತಮಾನಗಳ ಇತಿಹಾಸವಿದ್ದರೂ, ವರ್ತಮಾನವನ್ನು ಎದುರಿಸುವ ಆಧುನಿಕ ಕೌಶಲಗಳಿಲ್ಲದೇ ಹೋದರೆ ಅಂತಹ ಸಮುದಾಯಗಳು ಭವಿಷತ್ತಿನಲ್ಲಿ ಮೂಲೆಗುಂಪಾಗುತ್ತವೆ. ಡೊಂಬರ ಸಮುದಾಯವನ್ನು ವ್ಯವಸ್ಥಿತವಾಗಿ

ಆರ್ಥಿಕವಾಗಿ ಮುನ್ನೆಡೆಸದಿದ್ದಲ್ಲಿ, ಇವರನ್ನು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಸಬಲೀಕರಿಸಲು ಸಾಧ್ಯವಿಲ್ಲ. ಅದರಲ್ಲೂ ಶೈಕ್ಷಣಿಕವಾಗಿ ಸಬಲಗೊಳ್ಳದ ಯಾವ ಸಮುದಾಯವು ವರ್ತಮಾನವನ್ನು ಎದುರಿಸಿ ನಿಲ್ಲಲು ಸಾಧ್ಯವೂ ಇಲ್ಲ. ಈ ಕಾರಣದಿಂದ ಡೊಂಬರ ಸಮುದಾಯವನ್ನು ಆರ್ಥಿಕವಾಗಿ ಸಬಲಗೊಳಿಸಿದರೆ ಅದು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಸಬಲಗೊಳ್ಳಲು ಸಾಧ್ಯವಾಗುತ್ತದೆ.

ಅಡಿಟಿಪ್ಪಣಿಗಳು

01. ಕೆ.ವಿ.ನಾರಾಯಣ, ಕನ್ನಡ ಸಾಹಿತ್ಯದಲ್ಲಿ ಪ್ರಧಾನ ಮತ್ತು ಅಧೀನ ಸಂಸ್ಕೃತಿ, ಪು ೨೦, ೧೯೯೭
02. ಡಿ ಡಿ ಕೋಸಾಂಬಿ,ಪ್ರಾಚೀನ ಭಾರತದ ಚರಿತ್ರೆ, ಪು ೨೬, ೧೯೯೮
03. ಹಿ.ಚಿ.ಬೋರಲಿಂಗಯ್ಯನವರ 'ದಾಸಪ್ಪ, ಜೋಗಪ್ಪ' ಕೃತಿಯೂ ಪ್ರಸ್ತುತ ವಿಷಯದ ಮೇಲೆ ಬೆಳಕು ಚೆಲ್ಲುತ್ತದೆ. ರಾಜಾರಾಮ್ ಹೆಗಡೆ ಕೆಲವು ಲೇಖನಗಳನ್ನು ಪ್ರಕಟಿಸಿದ್ದಾರೆ. ಅದರಲ್ಲೂ ಅವರ 'ರಂಗನಾಥ ತಿಮ್ಮಪ್ಪ' ಲೇಖನ ಗಮನಾರ್ಹವಾದದ್ದು. ನನ್ನ 'ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು' ಪುಸ್ತಕದ ದೈವಾರಾಧನೆ ಎಂಬ ಅಧ್ಯಾಯದಲ್ಲಿ ಕೆಲವು ವಿವರಗಳನ್ನು ನೀಡಿದ್ದೇನೆ.
04. ರಾಜಾರಾಮ ಹೆಗಡೆ, ರಂಗನಾಥ ತಿಮ್ಮಪ್ಪ, ಲೌಕಿಕ ಅಲೌಕಿಕ, ಪು ೧೮೧, ೨೦೦೧
05. ನೋಡಿ: ಎ.ಎಸ್.ಪ್ರಭಾಕರ ಸಂ.ಮ್ಯಾಸಬೇಡರ ಕಥನಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿ. ೧೯೯೯
06. ರಹಮತ್ ತರೀಕೆರೆ. ಪ್ರತಿ ಸಂಸ್ಕೃತಿ. ಪು.೨೨, ೧೯೯೩
07. H V Nanjundaiah,Ethnographical Survey of Mysore, Dombar Caste XIII, p 19,20,1908
08. Syed Siraj Ul Hasan, The Castes & Tribes of H.E.H.Nizam's Dominions, p 180,181, 1920
09. Stephen Fuchs, At the Bottom of Indian Society, p 40,41, 1981
10. ಡಾ. ಅಂಬೇಡ್ಕರ್, ಉಲ್ಲೇಖ: ಗೋಪಾಲಗುರು, ಆಧುನಿಕತೆಯ ಬೆನ್ನು ಹತಿ ದಲಿತರು, ಪು,೧೯೫, ೨೦೦೪
11. Syed Siraj Ul Hasan, The Castes & Tribes of H.E.H.Nizam's Dominions, p 178, 1920
12. H V Nanjundaiah,Ethnographical Survey of Mysore, Dombar Caste XIII, p 4, 1908
13. H.V. Nanjundiah, Ananth krishnna Iyer, The Mysore Tribes and Castes, p 142,1922
14 ಎಚ್.ಎಂ.ಮಹೇಶ್ವರಯ್ಯ, ಮುರಿಗೆಪ್ಪ. ಡೊಂಬರು: ಒಂದು ಅಧ್ಯಯನ,ಪು.೨,೧೯೯೨
15. ದೇವೇಂದ್ರಕುಮಾರ್ ಹಕಾರಿ, ಡೊಂಬರ ಸಂಸ್ಕೃತಿ, ಪು ೩೩, ೨೧,೧೯೯೩
16. ಕೆ.ವಿ.ನಾರಾಯಣ, ಕನ್ನಡ ಸಾಹಿತ್ಯದಲ್ಲಿ ಪ್ರಧಾನ ಮತ್ತು ಅಧೀನ ಸಂಸ್ಕೃತಿ, ಪು ೧೯, ೧೯೯೭
17. ಗೋಪಾಲಗುರು, ಆಧುನಿಕತೆಯ ಬೆನ್ನು ಹತಿ ದಲಿತರು, ಪು,೧೯೧, ೨೦೦೪
18. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಡಾ. ಅಂಬೇಡ್ಕರ್, ಸಂ. ೧, ಪು,೬೮,೬೯, ೧೯೯೦
19. ನೋಡಿ. ಅಸ್ಪೃಸ್ಯತೆ, ಆರ್ಥಿಕತೆ ಮತ್ತು ಅಭಿವೃದ್ಧಿ, ಟಿ ಆರ್ ಚಂದ್ರಶೇಖರ, ಅಭಿವೃದ್ಧಿ ಅಧ್ಯಯನ, ೨೦೦೬
20. ನೋಡಿ. ಅದೇ

ಸಮಾರೋಪ

ಅಧ್ಯಯನದ ಫಲಿತಗಳು

ಕೆಲವು ಸಲಹೆಗಳು

ಸಮಾರೋಪ

ಇಂಡಿಯಾದಲ್ಲಿ ಜಾತಿಯೊಂದು ಒಂದು ಸ್ವಯಂಪೂರ್ಣ ಉತ್ಪಾದನಾ ಘಟಕ. ಈವತ್ತು ಒಂದು ಜಾತಿ ಎಂದು ಗುರುತಿಸುವ ಪ್ರತಿ ಸಮುದಾಯವೂ ಈ ದೇಶದ ಪರಂಪರೆಯಲ್ಲಿ ಒಂದು ನಿಶ್ಚಿತ ಆರ್ಥಿಕ ಚಟುವಟಿಕೆಯನ್ನು ನಿರ್ವಹಿಸುತ್ತಲೇ ಬಂದಿದೆ. ಶ್ರಮ ವಿಭಜನೆಯ ಕಾರಣಕ್ಕೆ ಪ್ರತ್ಯೇಕಗೊಂಡ ಸಾಮಾಜಿಕ ಗುಂಪುಗಳು ಜಾತಿಗಳಾಗಿ ರೂಪಾಂತರಗೊಂಡವು. ಈ ಪ್ರತ್ಯೇಕತೆಯು ಮುಂದೊಂದು ದಿನ ಸಾಮಾಜಿಕ ನಿಯಮಗಳ ಮೂಲಕ ನಿಯಂತ್ರಣಕ್ಕೊಳಪಟ್ಟಿತು. ಶ್ರಮ ವಿಭಜನೆಯಲ್ಲಿನ ಭಿನ್ನ ವೃತ್ತಿಗಳ, ಶ್ರೇಷ್ಠ, ಮಧ್ಯಮ ಮತ್ತು ಕನಿಷ್ಟಗಳ ಆಧಾರದ ಮೇಲೆ ಆಯಾ ವೃತ್ತಿಗಳನ್ನು ನಿರ್ವಹಿಸುವ ಉತ್ಪಾದಕ ಗುಂಪುಗಳ ಸಾಮಾಜಿಕ ಸ್ಥಾನಮಾನಗಳು ನಿರ್ಧರಿತವಾದವು. ಈ ಸ್ಥಾನಮಾನಗಳನ್ನು ಜೀವಂತವಾಗಿರಿಸಲು ಇಂಡಿಯಾದಲ್ಲಿ ಸಾಮಾಜಿಕ ಕಾನೂನುಗಳು ಬಿಗಿಯಾಗುತ್ತಲೇ ಹೋದವು. ಈ ಕಾನೂನುಗಳನ್ನು ರೂಪಿಸುತ್ತಿದ್ದವರು ಆಳುವ ವರ್ಗದ ಜನ. ಈ ಅಲ್ಪಸಂಖ್ಯಾತ ಆಳುವ ವರ್ಗದ ಜನ ದುಡಿವ ವರ್ಗಗಳ ಉತ್ಪಾದನೆಯ ಮೇಲೆ ನಿರಂತರ ಒಡೆತನ ಸಾಧಿಸುವ ಕಾರಣಕ್ಕಾಗಿಯೇ ಸಾಮಾಜಿಕ ನಿಯಮಗಳನ್ನು ಉಗ್ರವಾಗಿ ರೂಪಿಸಿದರು. ಜೊತೆಗೆ ದುಡಿವ ವರ್ಗದ ಸಾಮಾಜಿಕ ಗುಂಪುಗಳಿಗೆ ಆರ್ಥಿಕ ಒಡೆತನವನ್ನು ನಿರಾಕರಿಸಿದರು. ಈ ಕಾರಣದಿಂದ ಇಂಡಿಯಾದ ದುಡಿವ ವರ್ಗವೆಂದರೆ ಇಲ್ಲಿನ ಕೆಳಜಾತಿಗಳು. ಈ ಕೆಳಜಾತಿಗಳಲ್ಲಿ ಬಹುತೇಕ ಸಮುದಾಯಗಳು ಉತ್ಪಾದನೆಯಲ್ಲಿ ತೊಡಗಿದ್ದರೆ, ಕೆಲವು ಸಮುದಾಯಗಳು 'ಸೇವಕ ವರ್ಗವಾಗಿ' ರೂಪುಗೊಂಡವು. ಈ ಸೇವಕ ವರ್ಗದಲ್ಲಿ ಮನರಂಜಕರು, ಊಳಿಗದವರು, ಕುಶಲಕರ್ಮಿಗಳು ಮತ್ತು 'ಅನುತ್ಪಾದಕ ಸೇವೆಗಳ' ಮೂಲಕ ಆಳುವ ವರ್ಗವನ್ನು ಆಶ್ರಯಿಸಿದ್ದ ಸಮುದಾಯಗಳು ಪ್ರಮುಖವಾದವು.

ಈ ಸೇವಕ ವರ್ಗ ಯಾವತ್ತೂ ಆರ್ಥಿಕವಾಗಿ ಆಳುವ ವರ್ಗವನ್ನು ಆಶ್ರಯಿಸಿಯೇ ಬದುಕಬೇಕಿತ್ತು. ಈ ಕಾರಣದಿಂದ ಆಳುವ ವರ್ಗದ ಸ್ವರೂಪ ಬದಲಾದಂತೆ 'ಸೇವಕ ವರ್ಗದ' ಸಾಮಾಜಿಕಾರ್ಥಿಕ ಸ್ಥಿತಿಗತಿಗಳೂ ಬದಲಾಗುತ್ತಿದ್ದವು. ಈ ಸೇವಕ ವರ್ಗದಲ್ಲಿ, ಗೊಂಬೆಕುಣಿಸುವ ಕಿಳ್ಳೆಕ್ಯಾತರು, ಕಸರತ್ತುಗಳನ್ನು ಮಾಡುವ ಡೊಂಬರು ಮತ್ತು ಜಾತಿಗಾರರು, ಹಗಲು ವೇಷದವರು, ಕವಲೆತ್ತಿನವರು, ದೊಂಬಿದಾಸರು, ಕಿನ್ನರಿ ಜೋಗಿಗಳು, ಗೊಂದಲಿಗರು, ಮೋಡಿಕಾರರು, ಬುಡಬುಡಿಕೆಯವರು, ಮುಖ್ಯವಾಗಿ ಮನರಂಜಕ ಸಮುದಾಯಗಳು ಸೇರುತ್ತವೆ. ಇನ್ನು ಕುಶಲಕರ್ಮಿಗಳಲ್ಲಿ ಬಯಲು ಪತ್ತಾರ, ಬಯಲು ಕಮ್ಮಾರ, ಮೇದರು,

ಪಿಂಜಾರರು, ಮುದ್ದೆಕಮ್ಮಾರರು, ಹಂಡಿ ಜೋಗಿಗಳು ಪ್ರಮುಖ ಸಮುದಾಯಗಳು. ಇನ್ನು ಊಳಿಗದವರಾಗಿ ಮತ್ತು 'ಅನುತ್ಪಾದಕ' ಚಟುವಟಿಕೆಗಳ ಮೂಲಕ ಆಳುವ ವರ್ಗವನ್ನು ಆಶ್ರಯಿಸಿದ್ದವರು, ಹೆಳವರು, ದಕ್ಕಲರು ಮತ್ತು ಮೊಂಡರು. ಇವರು 'ಮನೆ ಮಕ್ಕಳಂತೆ' ಆಳುವ ವರ್ಗದ ಸೇವೆ ಮಾಡುತ್ತಾ ಬದುಕಿ ಬಂದವರು. ಈ ಎಲ್ಲಾ ಸಮುದಾಯಗಳಿಗೆ ಪಾರಂಪರಿಕವಾಗಿ ನಿಶ್ಚಿತ ಆದಾಯದ ಮೂಲಗಳಿಲ್ಲ. ಇವರು ಅನಿವಾರ್ಯವಾಗಿ ಆಳುವ ವರ್ಗಗಳನ್ನು ಅವಲಂಬಿಸಲೇಬೇಕಿತ್ತು. ಜೊತೆಗೆ ಆಳುವ ವರ್ಗವೂ ಈ ಸಮುದಾಯಗಳನ್ನು ಪೋಷಿಸುತ್ತಲೂ ಬಂದಿತು. ಆದರೆ ಈ ಆಳುವ ವರ್ಗದ ಬದಲಾದ ಸ್ವರೂಪಕ್ಕೆ ತಕ್ಕಂತೆ ಅವಲಂಬಿತ ಸಮುದಾಯಗಳ ಬದುಕುಗಳೂ ರೂಪಾಂತರಗೊಳ್ಳುತ್ತಿದ್ದವು.

ಇಂಡಿಯಾದ ಮಧ್ಯಕಾಲೀನ ರಾಜಕೀಯ ಕ್ಷೇತ್ರದಲ್ಲಿ ಸಂಭವಿಸಿದ ವಿಪ್ಲವಗಳ ಕಾರಣಕ್ಕಾಗಿ ಇಲ್ಲಿನ ಪಾರಂಪರಿಕ ಉತ್ಪಾದನಾ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ನಡೆದು ಹೋದವು. ಅದರಲ್ಲೂ ವಸಾಹತುಶಾಹಿ ಆಡಳಿತದ ಸಂದರ್ಭದಲ್ಲಿ ಭಾರತದ ಆರ್ಥಿಕ ಕ್ಷೇತ್ರವನ್ನು ಬ್ರಿಟಿಷರು ನಿರ್ಣಾಯಕವಾಗಿ ನಿಯಂತ್ರಣಕ್ಕೆ ತೆಗೆದುಕೊಂಡರು. ಆಗ ಭಾರತದ ಪಾರಂಪರಿಕ ಉತ್ಪಾದನಾ ಸಂದರ್ಭಗಳಲ್ಲಿ ಭಾರೀ ಬದಲಾವಣೆಗಳು ಸಂಭವಿಸಿದವು. ಜೊತೆಗೆ ಸಂಕೀರ್ಣಗೊಂಡ ಆರ್ಥಿಕ ಚಟುವಟಿಕೆಗಳ ಕಾರಣಕ್ಕಾಗಿ 'ಸೇವಕ ವರ್ಗವು' ನೆಲೆತಪ್ಪಿ ಹೋಯಿತು. ತಮ್ಮನ್ನು ಪೋಷಿಸುತ್ತಿದ್ದ ಆಳುವ ವರ್ಗವೇ ಕಂಪನಿ ಆಡಳಿತದಿಂದಾಗಿ ತನ್ನ ಸ್ವಭಾವವನ್ನು ಬದಲಿಸಿಕೊಂಡ ಕಾರಣಕ್ಕೆ ಈ ಸೇವಕ ವರ್ಗವು ದಿಕ್ಕೆಟ್ಟು ಹೋಯಿತು. ಆರ್ಥಿಕ ಮೂಲಗಳನ್ನು ಕಂಡುಕೊಳ್ಳಲು ಸೇವಕ ವರ್ಗವು ಅಲೆಮಾರಿ ಬದುಕನ್ನು ರೂಪಿಸಿಕೊಳ್ಳಲೇ ಬೇಕಿತ್ತು. ಇಂತಹ ಅಲೆಮಾರಿ ಸಮುದಾಯಗಳಲ್ಲಿ ಡೊಂಬರ ಸಮುದಾಯವೂ ಒಂದು.

ಡೊಂಬರು ಪಾರಂಪರಿಕವಾಗಿ ಊಳಿಗಮಾನ್ಯ ವರ್ಗವನ್ನು ಅವಲಂಬಿಸಿದ ಸಮುದಾಯ. ಅದು ನಮ್ಮ ಸಾಮಾಜಿಕ ಚರಿತ್ರೆಯುದ್ದಕ್ಕೆ ಆಳುವ ವರ್ಗವನ್ನು ಆರ್ಥಿಕವಾಗಿ ಅವಲಂಬಿಸಿಕೊಡೇ ಬಂದಿತು. ಯಾವತ್ತೂ ಭಾರತದ ಸಾಂಪ್ರದಾಯಿಕ ಉತ್ಪಾದನಾ ಸಂಬಂಧಗಳು ಬದಲಾದವೋ ಆಗ ಈ ಅವಲಂಬಿತ ಸಮುದಾಯಗಳ ಬದುಕುಗಳೂ ರೂಪಾಂತರಗೊಡವು. ಡೊಂಬರು ಆಧುನಿಕಪೂರ್ವ ಕಾಲಘಟ್ಟದಲ್ಲಿ ಊಳಿಗಮಾನ್ಯ ಉತ್ಪಾದನಾ ವ್ಯವಸ್ಥೆ ನಿರಸನಗೊಂಡ ನಂತರ ಅಲೆಮಾರಿಗಳಾಗಿ ರೂಪಾಂತರಗೊಂಡಂತೆ ಕಾಣುತ್ತದೆ. ಸಹಜವಾಗಿಯೇ ಡೊಂಬರಾಟವನ್ನು ತಮ್ಮ ಆರ್ಥಿಕ ಚಟುವಟಿಕೆಯಾಗಿ ಮುಂದುವರೆಸಿದರು. ಈ ಚಟುವಟಿಕೆಯೇ ಅವರನ್ನು ಅಲೆಮಾರಿಗಳನ್ನಾಗಿಸಿತು. ಜೊತೆಗೆ ಡೊಂಬರು ತಮ್ಮ ಪಾರಂಪರಿಕ ವೃತ್ತಿಯನ್ನು ಬಿಟ್ಟು ಬೇರೆ ಬೇರೆ ವೃತ್ತಿಗಳನ್ನು ಅವಲಂಬಿಸಬೇಕಾಯ್ತು. ಅದೇ ಕಾರಣಕ್ಕಾಗಿ ಡೊಂಬರಲ್ಲಿ ಕೆಲವು ಪಂಗಡಗಳು ಮತ್ತು ಉಪಪಂಗಡಗಳು ರೂಪುಗೊಂಡವು. ಈವತ್ತು ಡೊಂಬರಲ್ಲಿ ಕೆಲವು ಉಪಪಂಗಡಗಳು ಅಸ್ತಿತ್ವದಲ್ಲಿವೆ. ಆದರೆ ಇವರು ಮೂಲತಃ ಒಂದೇ ಗುಂಪಿಗೆ ಸೇರಿದವರು ಎಂಬುದಕ್ಕೆ ಅವರಲ್ಲಿ ಅನೇಕ ಎತ್ನೋಗ್ರಫಿಕಲ್ ಸಾಮ್ಯತೆಗಳು ಇಂದಿಗೂ ಉಳಿದುಕೊಂಡು ಬಂದಿವೆ.

ಭಾರತದಲ್ಲಿ ಬದಲಾದ ರಾಜಕೀಯಾರ್ಥಿಕ ಸನ್ನಿವೇಶಗಳಿಗೆ ತಕ್ಕಂತೆ ಡೊಂಬರೂ ತಮ್ಮ ಸಾಮಾಜಿಕಾರ್ಥಿಕ ಸ್ಥಿತಿಗತಿಗಳನ್ನು ಬದಲಿಸಿಕೊಳ್ಳುತ್ತಲೇ ಬಂದಿದ್ದಾರೆ. ಈವತ್ತು ಡೊಂಬರ 'ಕ್ರೀಮ್ ಲೇಯರ್' ನ ಬೆರಳೆಣಿಕೆಯ

ಜನ ಆಧುನಿಕ ಶಿಕ್ಷಣ ಪಡೆದು ಸರಕಾರಿ ಉದ್ಯೋಗದಲ್ಲಿದ್ದಾರೆ. ಕೃಷಿಕರಾಗಲು ಕೆಲವರು ಯತ್ನಿಸುತ್ತಿದ್ದಾರೆ. ಆದರೆ ಪಾರಂಪರಿಕ ವೃತ್ತಿಯಲ್ಲಿಯೇ ಮುಂದುವರೆದಿರುವವರು ಅಲೆಮಾರಿಗಳಾಗಿಯೇ ಬದುಕುತ್ತಿದ್ದಾರೆ. ಜೊತೆಗೆ ನಿಶ್ಚಿತ ಆದಾಯ ಮೂಲಗಳಿಲ್ಲದ ಈ ಸಮುದಾಯದ ಜನ ಕೃಷಿಕೂಲಿಗಳಾಗಿ, ಕಾರ್ಮಿಕರಾಗಿ ಆರ್ಥಿಕವಾಗಿ ಅತ್ಯಂತ ಹೀನಾಯ ಸ್ಥಿತಿಯಲ್ಲಿದ್ದಾರೆ. ಈ ಸಮುದಾಯದಲ್ಲಿ ಆರ್ಥಿಕವಾಗಿ ಹೀನಾಯ ಸ್ಥಿತಿಯಲ್ಲಿರುವ ಜನರೇ ಬಹುಸಂಖ್ಯಾತರು.

ಅಧ್ಯಯನದ ಫಲಿತಗಳು

೧. ಭಾರತದ ಸಮಾಜದ ಶ್ರೇಣೀಕೃತ ವ್ಯವಸ್ಥೆಯು ಶ್ರಮ ವಿಭಜನೆಯ ನೆಪದಲ್ಲಿ ಸಮಾಜವನ್ನು ವಿಷಮಗೊಳಿಸಿತು.

೨. ಈ ವಿಷಮ ಸಮಾಜವನ್ನು ಪೋಷಿಸಲೆಂದೇ ಆರ್ಥಿಕ ಅಧಿಕಾರಗಳನ್ನು ದುಡಿವ ವರ್ಗಗಳಿಗೆ ನಿರಾಕರಿಸಲಾಯಿತು.

೩. ಉತ್ಪಾದಿತ ಮಿಗುತಾಯದ ಮೇಲೆ ಒಡೆತನ ಸಾಧಿಸಿದ ಆಳುವ ವರ್ಗವು, ಉತ್ಪಾದನಾ ಶಕ್ತಿಗಳನ್ನು ಜಾತಿಯ ಹೆಸರಲ್ಲಿ ಸ್ವಯಂಪೂರ್ಣಗೊಳಿಸಿ ಸಾಮಾಜಿಕ ಅಸಮಾನತೆಗೆ ಧಾರ್ಮಿಕ ನ್ಯಾಯಬದ್ಧತೆಯನ್ನು ಒದಗಿಸಿತು.

೪. ಭಾರತದ ಕೆಳಜಾತಿಗಳೆಂದರೆ ಆರ್ಥಿಕತೆಯ ಮೇಲೆ ಯಾವ ಒಡೆತನವನ್ನು ಹೊಂದಲಾರದ ಅಸಹಾಯಕ ದುಡಿವ ಸಮುದಾಯಗಳು.

೫. ಈ ಸಮುದಾಯಗಳಲ್ಲಿ ಸೇವಕ ವರ್ಗವಾಗಿ ಅನೇಕ ಸಮುದಾಯಗಳು ರೂಪಗೊಂಡವು. ಇವು ಆಳುವ ವರ್ಗಕ್ಕೆ ಮತ್ತು ಉತ್ಪಾದಕ ವರ್ಗಕ್ಕೆ ಸೇತುವೆಯಂತೆ ಬದುಕಿ ಬಂದ ಸಮುದಾಯಗಳು

೬. ಈ ಸೇವಕ ಸಮುದಾಯಗಳು ಆರ್ಥಿಕವಾಗಿ ಆಳುವ ವರ್ಗವನ್ನು ಅವಲಂಬಿಸಿಕೊಂಡೇ ಬಂದವು. ಈ ಸಮುದಾಯಗಳ ಆರ್ಥಿಕ ಮೂಲವೆಂದರೆ ಆಳುವ ವರ್ಗದ ಅವಲಂಬನೆ.

೭. ಈ ಕಾರಣದಿಂದ ಆಳುವ ವರ್ಗದ ಸಾಮಾಜಿಕಾರ್ಥಿಕ ಚಟುವಟಿಕೆಗಳಲ್ಲಿ ಬದಲಾವಣೆಗಳಾದಾಗೆಲ್ಲ ಸೇವಕ ಸಮುದಾಯಗಳ ಬದುಕಿನ ಸ್ವರೂಪಗಳು ಬದಲಾಗುತ್ತಾ ಬಂದವು.

೮. ಮಧ್ಯಕಾಲೀನ ಕಾಲಘಟ್ಟದ ನಂತರ ಈ ದೇಶವು ವಸಾಹತವಾಗಿ ರೂಪಾಂತರಗೊಂಡ ನಂತರ ಸೇವಕ ಸಮುದಾಯಗಳ ಪೋಷಿಸುತ್ತಿದ್ದ ಆಳುವ ವರ್ಗಗಳಲ್ಲಿ ಅನೇಕ ಬದಲಾವಣೆಗಳು ಸಂಭವಿಸಿದವು.

೯. ಭಾರತದ ಸಾಂಪ್ರದಾಯಿಕ ಆಳುವ ವರ್ಗವು ವಸಾಹತು ಆಡಳಿತದ ಸಂದರ್ಭದಲ್ಲಿ ಅನಿವಾರ್ಯವಾಗಿ ತನ್ನ ಆರ್ಥಿಕ ಚಟುವಟಿಕೆಗಳನ್ನು ಬದಲಾದ ನಿಯಮಗಳಿಗೆ ತಕ್ಕಂತೆ ರೂಪಾಂತರಿಸಿಕೊಳ್ಳಬೇಕಿತ್ತು. ಆಗ ಅದು ತನ್ನ ಸೇವಕ ವರ್ಗವನ್ನು ಬಿಟ್ಟುಕೊಡುವುದೂ ಅನಿವಾರ್ಯವಾಗಿತ್ತು.

೧೦. ಈ ಸೇವಕ ಸಮುದಾಯಗಳೇ ಮುಂದೆ ಆರ್ಥಿಕವಾಗಿ ನೆಲೆ ಇಲ್ಲದಂತಾಗಿ ಆದಾಯದ ಮೂಲಗಳನ್ನು ಹುಡುಕಿಕೊಂಡು ಅಲೆಯ ತೊಡಗಿದವು. ಈ ಕಾರಣಕ್ಕಾಗಿ ಈ ಸಮುದಾಯಗಳು ಅಲೆಮಾರಿಗಳಾಗಿ ರೂಪಾಂತರಗೊಂಡವು.

೧೧. ಸೇವಕ ಸಮುದಾಯಗಳು ಅಲೆಮಾರಿಗಳಾಗಿ ರೂಪಾಂತರಗೊಂಡಿದ್ದಕ್ಕೆ ಅವುಗಳಿಗೆ ಯಾವ ಪಾರಂಪರಿಕ ನಿಶ್ಚಿತ ಆದಾಯದ ಮೂಲಗಳಿಲ್ಲದೇ ಇರುವುದು ಮುಖ್ಯ ಕಾರಣ.

೧೨. ಈ ಕಾರಣದಿಂದಾಗಿ ಅಲೆಮಾರಿಗಳು ಭಾರತದ ಸಾಮಾಜಿಕಾರ್ಥಿಕ ವ್ಯವಸ್ಥೆಯಲ್ಲಿ ಚಾರಿತ್ರಿಕವಾಗಿ ರೂಪುಗೊಂಡಿದ್ದಾರೆ.

೧೩. ಇಂತಹ ಅಲೆಮಾರಿಗಳಲ್ಲಿ ಡೊಂಬರೂ ಸೇರಿದ್ದಾರೆ, ಮೂಲತಃ ಇವರು ಊಳಿಗಮಾನ್ಯ ವ್ಯವಸ್ಥೆಯ ಸೃಷ್ಟಿಗಳು.

೧೪. ಇವರು ತಮ್ಮನ್ನು ಪೋಷಿಸುವ ಸಮುದಾಯಗಳ ಮತ್ತು ಸಮಾಜದ ಎಲ್ಲ ಸಮುದಾಯಗಳ ಮನರಂಜಿಸುವ ವೃತ್ತಿಯನ್ನು ಪಾರಂಪರಿಕವಾಗಿ ಅವಲಂಬಿಸಿಕೊಂಡು ಬಂದವರು.

೧೫. ಯಾವತ್ತೂ ಊಳಿಗಮಾನ್ಯ ವ್ಯವಸ್ಥೆಯು ವಸಾಹತು ಕಾಲಘಟ್ಟದಲ್ಲಿ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯಲ್ಲಿ ಸಮ್ಮಿಳನಗೊಂಡಿತೋ ಆಗ ಈ ದೇಶದ ಪಾರಂಪರಿಕ ಉತ್ಪಾದನಾ ವ್ಯವಸ್ಥೆಯಲ್ಲಿ ವಿಚ್ಛಿದ್ರಕಾರಿ ಬದಲಾವಣೆಗಳಾದವು.

೧೬. ಈ ಬದಲಾವಣೆಯಿಂದ ಅವಲಂಬಿತ ಸೇವಕ ಸಮುದಾಯಗಳು ನೆಲೆ ಕಳೆದುಕೊಂಡು ಅಲೆಮಾರಿಗಳಾದವು. ಊಳಿಗಮಾನ್ಯ ವ್ಯವಸ್ಥೆಯು ಬಂಡವಾಳಶಾಹಿ ವ್ಯವಸ್ಥೆಯಾಗಿ ತನ್ನ ರೂಪವನ್ನು ಬದಲಿಸಿದ್ದು ಇದಕ್ಕೆ ಕಾರಣ.

೧೭. ಡೊಂಬರು ತಮ್ಮ ಪಾರಂಪರಿಕ ಪೋಷಕರನ್ನು ಕಳೆದುಕೊಂಡ ಮೇಲೆ ಅಲೆಮಾರಿಗಳಾದರು. ಭಿನ್ನ ವೃತ್ತಿಗಳನ್ನೂ ಅವಲಂಬಿಸಿದರು. ಇದರಿಂದಾಗಿ ಡೊಂಬರಲ್ಲಿ ಕೆಲವು ಉಪಪಂಗಡಗಳು ರೂಪುಗೊಂಡವು.

೧೮. ಈವತ್ತು ಅಲೆಮಾರಿಗಳಾಗಿರುವವರು ವಸಾಹತು ಆಡಳಿತದ ಅವಧಿಯಲ್ಲಿ ಕ್ರಿಮಿನಲ್ ಸಮುದಾಯಗಳ ಪಟ್ಟಿಯಲ್ಲಿ ನಮೂದಾಗಿರುವ ಸಮುದಾಯಗಳು. ಆಗಿನ ಕಂಪನಿ ಆಡಳಿತ ಈ ಅಲೆಮಾರಿಗಳನ್ನು ಅತ್ಯಂತ ಕ್ರೂರವಾಗಿ ನಡೆಸಿಕೊಂಡಿದೆ.

೧೯. ಕ್ರಿಮಿನಲ್ ಟ್ರೈಬ್ಸ್ ಆಕ್ಟ್ ೧೮೭೧ ರಲ್ಲಿ ಉತ್ತರ ಭಾರತದಲ್ಲಿ ಜಾರಿಯಾದರೆ, ೧೯೧೧ ರಲ್ಲಿ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಜಾರಿಯಾಯಿತು. ಅಂದರೆ ದಕ್ಷಿಣ ಭಾರತದಲ್ಲಿ ೧೯೧೧ ರಿಂದ ಕಂಪನಿ ಆಡಳಿತವು ಈ ಅಲೆಮಾರಿ ಸಮುದಾಯಗಳನ್ನು ಎಲ್ಲಾ ವಿಧದಲ್ಲೂ ಶೋಷಣೆ ಮಾಡಿದೆ.

೨೦. ಇವರನ್ನು ಜನ್ಮತಃ ಅಪರಾಧಿ ಸಮುದಾಯಗಳು (Habitual oftenders) ಎಂದು ಪರಿಗಣಿಸಿದ್ದರಿಂದ ಕಂಪನಿ ಆಡಳಿತವು ಈ ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಇನ್ನಿಲ್ಲದಂತೆ ನಾಶ ಮಾಡಿದೆ.

೨೧. ಸ್ವಾತಂತ್ರ್ಯ ಬಂದ ಮೇಲೆ ಸಂವಿಧಾನಾತ್ಮಕವಾಗಿ ಈ ದೇಶದ ಶೋಷಿತ ಜನರಿಗೆ ಲಭ್ಯವಾಗುವ ಸವಲತ್ತುಗಳನ್ನು, ಆಯಾ ಶೋಷಿತ ಸಮುದಾಯಗಳ ಕ್ರಿಮ್ ಲೇಯರ್‌ನ ಜನ ಬಳಸಿಕೊಂಡರು. ಇಲ್ಲವೆ ಶೋಷಿತ ಸಮುದಾಯಗಳ ಪ್ರಬಲ ಜಾತಿಗಳು ಬಳಸಿಕೊಂಡವು. ಇಲ್ಲವೆ ಮೇಲ್ಜಾತಿಯ

ಜನರು ಶೋಷಿತ ಸಮುದಾಯಗಳಿಗೆ ಇದ್ದ ಮೀಸಲಾತಿ ಮತ್ತು ಉಳಿದ ಸಾಂವಿಧಾನಿಕ ಸೌಲಭ್ಯಗಳು ಕ್ರಮವಾಗಿ ಜಾರಿಯಾಗದಂತೆ ನೋಡಿಕೊಂಡರು.

೨೨. ಕ್ರಿಮಿನಲ್ ಟ್ರೈಬ್ಸ್ ಪಟ್ಟಿಯಲ್ಲಿದ್ದ ಹಲವು ಸಮುದಾಯಗಳನ್ನು ಅವುಗಳ ಸಾಮಾಜಿಕಾರ್ಥಿಕ ಸ್ಥಿತಿಗತಿಗಳ ಆಧಾರದ ಮೇಲೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿಸಲಾಯಿತು. ಆದರೆ ಈ ಪಟ್ಟಿಯಲ್ಲಿನ ಕೆಲವು ಸಮುದಾಯಗಳನ್ನು ಮೇಲಿನ ಎರಡೂ ಪಟ್ಟಿಗೂ ಸೇರಿಸಲಿಲ್ಲ. ಕ್ರಿಮಿನಲ್ ಟ್ರೈಬ್ ಪಟ್ಟಿಯಲ್ಲಿದ್ದು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳ ಪಟ್ಟಿಗೆ ಸೇರಲೇ ಬೇಕಿದ್ದ ಈ ಸಮುದಾಯಗಳು ಅಂತಿಮವಾಗಿ ಆ ಪಟ್ಟಿಯಲ್ಲಿ ಜಾಗ ದೊರಕಿಸಿಕೊಳ್ಳಲಾಗಲಿಲ್ಲ.

೨೩. ಹೀಗೆ ಸಂವಿಧಾನಾತ್ಮಕ ಸೌಲಭ್ಯಗಳನ್ನು ಪಡೆಯಲು ಅರ್ಹವಾಗಿದ್ದ ಸಮುದಾಯಗಳು ಅನುಸೂಚಿತ ಪಟ್ಟಿಯಲ್ಲಿ ಜಾಗ ಪಡೆಯಲಾಗದಿದ್ದಕ್ಕೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸಬಲಗೊಳ್ಳಲಿಲ್ಲ. ಇಂತಹ ಸಮುದಾಯಗಳು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳ ಸಮುದಾಯಗಳಿಗಿಂತ ಹೀನಾಯ ಸ್ಥಿತಿಯಲ್ಲಿವೆ.

೨೪. ಡೊಂಬರು ಇಂದು ಶುದ್ಧಾಂಗವಾಗಿ ಅಲೆಮಾರಿಗಳಾಗಿಲ್ಲ. ಇವರು ಅರೆಅಲೆಮಾರಿಗಳು, ಮತ್ತು ಈ ಸಮುದಾಯದ ಕ್ರೀಮ್ ಲೇಯರ್‌ನ ಜನ ಕೃಷಿಕರಾಗಿ, ವ್ಯಾಪಾರಿಗಳಾಗಿ ಮತ್ತು ಆಧುನಿಕ ಶಿಕ್ಷಣ ಪಡೆದು ಕೆಲವರು ಮಾತ್ರ ಸರಕಾರಿ ನೌಕರಿ ಪಡೆದಿದ್ದಾರೆ.

೨೫. ಆದರೆ ಅಲೆಮಾರಿಗಳು ಈ ಸಮುದಾಯದಲ್ಲಿ ಅಸ್ತಿತ್ವದಲ್ಲಿರುವುದು ಮತ್ತು ಅವರು ತಮ್ಮ ಪಾರಂಪರಿಕ ವೃತ್ತಿಯನ್ನು ಸಮರ್ಥಿಸಿಕೊಂಡು ಅದನ್ನು ಮುಂದುವರೆಸುತ್ತಿರುವುದು ಮಾತ್ರ ದುರಂತದ ಸಂಗತಿ

೨೬. ಡೊಂಬರರಲ್ಲಿ ಮುಖ್ಯವಾಗಿ ಮೂರು ಭಿನ್ನ ಮನಸ್ಥಿತಿಯ ಗುಂಪುಗಳನ್ನು ಕಂಡುಕೊಳ್ಳಲಾಗಿದೆ. ಪ್ರಾಯಶಃ ಎಲ್ಲ ಅಲೆಮಾರಿಗಳಲ್ಲಿ ಈ ಬಗೆಯ ಗುಂಪುಗಳು ಇರಬಹುದು.

ಅ. ಪಾರಂಪರಿಕ ವೃತ್ತಿಯಲ್ಲಿಯೇ ಮುಂದುವರೆದು ಅಲೆಮಾರಿಗಳಾಗಿ ಬದುಕುತ್ತಿರುವವರು.

ಆ. ಪಾರಂಪರಿಕ ವೃತ್ತಿಯಲ್ಲಿ ಗೌರವವನ್ನಿಟ್ಟುಕೊಂಡೂ ಸಾಮಾಜಿಕ ಸ್ಥಾನಮಾನಗಳನ್ನು ಉನ್ನತೀ ಕರಿಸಿಕೊಳ್ಳಲು ಭಿನ್ನ ವೃತ್ತಿಗಳನ್ನು ಅವಲಂಬಿಸಿರುವವರು.

ಇ. ಪಾರಂಪರಿಕ ವೃತ್ತಿಯಲ್ಲಿ ಯಾವ ಗೌರವವೂ ಇಲ್ಲದೆ ಆಧುನಿಕ ಶಿಕ್ಷಣ ಪಡೆದು ಸರಕಾರಿ ಉದ್ಯೋಗದಲ್ಲಿರುವವರು, ಕೃಷಿಕರಾಗಿ, ವ್ಯಾಪಾರಿಗಳಾಗಿ ಬದುಕುತ್ತಿರುವವರು.

೨೭. ಡೊಂಬರು ಸಾಮಾನ್ಯವಾಗಿ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಅದು ಬೆಳಗಾಂ, ಗುಲ್ಬರ್ಗಾ, ಬಳ್ಳಾರಿ, ರಾಯಚೂರು, ಹಾವೇರಿ, ಬಾಗಲಕೋಟೆ, ಬಿಜಾಪುರ, ಗದಗ ಮತ್ತು ದಕ್ಷಿಣ ಕರ್ನಾಟಕದ ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಪಾರಂಪರಿಕ ವೃತ್ತಿಯಾದ ಡೊಂಬರಾಟವನ್ನು ಅನುಸರಿಸುತ್ತಿರುವುದು ಕಂಡು ಬರುತ್ತದೆ.

೨೮. ಡೊಂಬರ ಸಮುದಾಯದಲ್ಲಿ ಪ್ರಮುಖವಾಗಿ ನೆಲೆ ನಿಂತು ನಿಶ್ಚಿತ ಆರ್ಥಿಕ ಮೂಲಗಳನ್ನು ಕಂಡುಕೊಳ್ಳಲು ಯತ್ನಿಸುತ್ತಿರವವರು ಮತ್ತು ಅಲೆಮಾರಿಗಳಾಗಿದ್ದುಕೊಂಡು ಡೊಂಬರಾಟವನ್ನೇ ಅವಲಂಬಿಸಿರವವರು

ಎಂಬ ಎರಡು ಗುಂಪುಗಳಿವೆ. ಆರ್ಥಿಕವಾಗಿ ಈ ಎರಡೂ ಗುಂಪುಗಳಿಗೆ ಅಂತಹ ವ್ಯತ್ಯಾಸಗಳೇನಿಲ್ಲ.

೨೯. ಚಾರಿತ್ರಿಕವಾಗಿ ಡೊಂಬರು ಸೇವಕ ಸಮುದಾಯವಾಗಿದ್ದುಕೊಂಡು, ಊಳಿಗಮಾನ್ಯ ಕೃಷಿ ವ್ಯವಸ್ಥೆಯನ್ನು ಆರ್ಥಿಕವಾಗಿ ಅವಲಂಬಿಸಿಕೊಂಡು ಬಂದವರಾಗಿದ್ದಾರೆ.

೩೦. ರಾಜ್ಯದ ಯಾವ ಯಾವ ತಾಲೂಕುಗಳಲ್ಲಿ ಡೊಂಬರು ಪಾರಂಪರಿಕ ವೃತ್ತಿಯಾದ ಡೊಂಬರಾಟವನ್ನು ಅನುಸರಿಸುತ್ತಿದ್ದಾರೋ ಆ ತಾಲೂಕುಗಳಲ್ಲಿ ಬಹುತೇಕ ಕುಟುಂಬಗಳು ಭೂ ರಹಿತವಾಗಿವೆ. ಉದಾಹರಣೆಗೆ ಬೆಳಗಾಂ, ಗುಲ್ಬರ್ಗಾ, ಬಳ್ಳಾರಿ, ರಾಯಚೂರು, ಹಾವೇರಿ, ಬಾಗಲಕೋಟೆ, ಬಿಜಾಪುರ, ಗದಗ ಮತ್ತು ದಕ್ಷಿಣ ಕರ್ನಾಟಕದ ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ.

೩೧. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಾಕ್ಷರತೆಗಿಂತಲೂ ಡೊಂಬರ ಸಾಕ್ಷರತೆಯ ಪ್ರಮಾಣವು ಅತ್ಯಂತ ಕಡಿಮೆ ಇರುವುದು ಕಂಡು ಬರುತ್ತದೆ. ಅದರಲ್ಲೂ ಮಹಿಳೆಯರು ಡೊಂಬರ ಸಮುದಾಯದಲ್ಲಿ ಗಣನೀಯ ಪ್ರಮಾಣದಲ್ಲಿ ಅನಕ್ಷರಸ್ಥರಿರುವುದು ಕಂಡು ಬರುತ್ತದೆ. ಇದಕ್ಕೆ ಕಾರಣ ಈ ಸಮುದಾಯದ ಆರ್ಥಿಕ ಸ್ಥಿತಿ ಎಂಬುದು ಸ್ಪಷ್ಟವಾಗುತ್ತದೆ.

೩೨. ಡೊಂಬರ ಸಮುದಾಯದ ಕ್ರೀಮ್ ಲೇಯರ್‌ನ ಜನ ಮಾತ್ರ ಇಂದು ತಾವು ಅನುಸರಿಸುತ್ತಿರುವ ಭಿನ್ನ ಆರ್ಥಿಕ ಚಟುವಟಿಕೆಗಳ ಕಾರಣಕ್ಕಾಗಿ ಉನ್ನತ ಸ್ಥಿತಿಯನ್ನು ತಲುಪಿದ್ದಾರೆ.

ಕೆಲವು ಸಲಹೆಗಳು

೧. ಅಲೆಮಾರಿತನವು ಡೊಂಬರ ಸಮುದಾಯದ ಬಹುಸಂಖ್ಯಾತರನ್ನು ಆರ್ಥಿಕವಾಗಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿಯಲು ಕಾರಣವಾಗಿದೆ. ಅಲೆಮಾರಿಗಳನ್ನು ನೆಲೆಗೊಳಿಸುವ ಪ್ರಯತ್ನ ಆಗಬೇಕಿದೆ.

೨. ಅಲೆಮಾರಿಗಳನ್ನು ಅಷ್ಟು ಸುಲಭವಾಗಿ ನೆಲೆನಿಲ್ಲಿಸಲು ಸಾಧ್ಯವಿಲ್ಲ. ಏಕೆಂದರೆ ತಮ್ಮ ಪಾರಂಪರಿಕ ವೃತ್ತಿಯ ಮೇಲೆ ಅವರಿಗೆ ವಿಶೇಷವಾದ 'ಮೋಹವಿದೆ '. ಈ ಡೊಂಬರಾಟದ ಪ್ರದರ್ಶನವು ಯಾವ ಕಾರಣಕ್ಕೂ ಸದರಿ ಸಮುದಾಯವನ್ನು ಸಬಲೀಕರಿಸಲು ಸಾಧ್ಯವಿಲ್ಲ. ಸರಕಾರ ಈ ಅಲೆಮಾರಿಗಳನ್ನು ನೆಲೆನಿಲ್ಲಿಸಲು ವಿಶೇಷ ಪ್ರಯತ್ನಗಳನ್ನು ಕೈಗೊಳ್ಳಬೇಕಿದೆ.

೩. ಈಗಾಗಲೇ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸಬಲೀಕರಣಗೊಂಡ ಡೊಂಬರ ಸಮುದಾಯದ ಜನರನ್ನು ಮತ್ತು ಆಸಕ್ತ ಆಕ್ಟಿವಿಷ್ಟುಗಳನ್ನು ಬಳಸಿಕೊಂಡು ಅಲೆಮಾರಿ ಡೊಂಬರನ್ನು ನೆಲೆನಿಲ್ಲಿಸಲು ಮನವೊಲಿಸುವ ತರಬೇತಿ ಶಿಬಿರಗಳನ್ನು ಏರ್ಪಡಿಸುವುದು ಒಳ್ಳೆಯದು.

೪. ಈ ಶಿಬಿರಗಳನ್ನು ಒಂದು ಮುಕ್ತ ವಾತಾವರಣದಲ್ಲಿ ನಡೆಸುವುದರ ಜೊತೆಗೆ, ಪಾರಂಪರಿಕ ವೃತ್ತಿಯನ್ನು ಅನುಸರಿಸುತ್ತಿರುವ ಗುಂಪುಗಳ ಮನಃಪರಿವರ್ತನೆಗೆ ಬೇಕಾದ ಎಲ್ಲ ಬಗೆಯ ಅಭ್ಯಾಸ ಸಾಮಾಗ್ರಿಗಳನ್ನು ಬಳಸಿಕೊಂಡು, ಜನಪ್ರಿಯ ಮಾಧ್ಯಮಗಳ ಮೂಲಕ ಅವರಲ್ಲಿ ಅರಿವು ಮೂಡಿಸುವ ನಿರಂತರ ಶಿಬಿರಗಳು ನಡೆಯುವಂತಾಗಬೇಕು.

೫. ಅಲೆಮಾರಿಗಳಿಗಾಗಿ ಸರಕಾರದ ಯಾವ ಇಲಾಖೆಯಲ್ಲೂ ಅಭಿವೃದ್ಧಿಯ ಪ್ಯಾಕೇಜ್‌ಗಳಿರುವುದು ಕಂಡು

ಬರುವುದಿಲ್ಲ. ಸರಕಾರವು ಅಲೆಮಾರಿಗಳಿಗಾಗಿಯೇ ಅಭಿವೃದ್ಧಿ ಪ್ಯಾಕೇಜ್‌ನ್ನು ರೂಪಿಸಬೇಕು.

೬. ಅಲೆಮಾರಿಗಳನ್ನು ವಸ್ತುನಿಷ್ಠವಾಗಿ ಗುರುತಿಸಿ ಅವರಿಗೆ ಸಂವಿಧಾನ ಬದ್ಧ ಪ್ರತ್ಯೇಕ ಮೀಸಲಾತಿ ವ್ಯವಸ್ಥೆ ಮಾಡುವುದು.

೭. ಅಲೆಮಾರಿಗಳು ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದಿರುವುದು ಅವರಿಗೆ ನಿಶ್ಚಿತ ಆದಾಯದ ಮೂಲಗಳಿಲ್ಲದೇ ಇರುವುದರಿಂದ. ಸರಕಾರ ಡೊಂಬರ ಸಮುದಾಯದ ಜನರ ಆಸಕ್ತಿಗಳಿಗೆ ಅನುಗುಣವಾಗಿ, ಕೃಷಿಭೂಮಿ, ವ್ಯಾಪಾರಕ್ಕಾಗಿ ಅಗತ್ಯ ಸಾಲ ಸೌಲಭ್ಯಗಳಂತಹ ವಿಶೇಷ ಯೋಜನೆಗಳನ್ನು ಹಮ್ಮಿಕೊಳ್ಳದಿದ್ದರೆ ಇವರು ಸಬಲೀಕರಣಗೊಳ್ಳಲು ಸಾಧ್ಯವಿಲ್ಲ. ಈ ಹೊತ್ತಿಗೆ ಅಲೆಮಾರಿಗಳಿಗೆ ನಿಶ್ಚಿತ ಆದಾಯ ತರುವ ಆರ್ಥಿಕ ಮೂಲಗಳ ಅಗತ್ಯವಿದೆ. ಸರಕಾರವು ಈ ಕುರಿತು ಗಂಭೀರವಾಗಿ ಯೋಚಿಸಬೇಕಿದೆ.

೮. ಅಲೆಮಾರಿ ಡೊಂಬರ ಸಮುದಾಯದ ಮಕ್ಕಳ ಶಿಕ್ಷಣಕ್ಕಾಗಿ ವಸತಿ ಶಾಲೆ ಅಥವಾ ಆಶ್ರಮಶಾಲೆಗಳ ಮಾದರಿಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಬೇಕು. ಈ ಶಾಲೆಗಳು, ಅಲೆಮಾರಿಗಳು ಈವತ್ತೂ ಸಂಚಾರ ಮಾಡುವ ಪ್ರದೇಶಗಳಲ್ಲಿ ಪ್ರಾರಂಭವಾಗಬೇಕು. ಮತ್ತು ಅಲ್ಲಿ ಸಂಪೂರ್ಣ ಉಚಿತ ಶಿಕ್ಷಣ ಸಿಗುವಂತಾಗಬೇಕು.

೯. ಡೊಂಬರ ಸಮುದಾಯ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿದ್ದರೂ ಸಹ, ಈ ಪಟ್ಟಿಯಲ್ಲಿರುವ ಬಲಾಢ್ಯ ಸಮುದಾಯಗಳು ಈ ಸಂವಿಧಾನಾತ್ಮಕ ಸೌಲಭ್ಯಗಳನ್ನು ಅನಾಯಾಸವಾಗಿ ದಕ್ಕಿಸಿಕೊಳ್ಳುತ್ತವೆ. ಇಂತಹ ಸಂದರ್ಭದಲ್ಲಿ ಯಾವ ದನಿಯೂ ಇಲ್ಲದ ಅಲೆಮಾರಿಗಳು ಸಂವಿಧಾನಾತ್ಮಕ ಸೌಲಭ್ಯಗಳನ್ನು ಬಳಸಿಕೊಳ್ಳಲು ಸಾಧ್ಯವಾಗುವುದಿಲ್ಲ.

೧೦. 'ಪರಿಶಿಷ್ಟ ಜಾತಿ' ಎಂಬ ಶೀರ್ಷಿಕೆಯಡಿ ಯಾವ ಯಾವ ಸಮುದಾಯಗಳನ್ನು ಪಟ್ಟಿ ಮಾಡಬೇಕು ಎಂಬ ಬಗ್ಗೆ ಇರುವ ಗೊಂದಲಗಳು ಇಂದಿಗೂ ಮುದುವರೆದಿವೆ. ಆದರೆ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಸೇರಿ ಹೋಗಿರುವ ಅಲೆಮಾರಿ ಸಮುದಾಯಗಳನ್ನು ಅವುಗಳ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ಅಭ್ಯಸಿಸಿ ಬೇರ್ಪಡಿಸುವುದು ಸುಲಭದ ಕೆಲಸವಾಗಿದೆ. ಏಕೆಂದರೆ ಇಂದಿಗೂ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಸೇರಿ ಹೋಗಿರುವ ಅನೇಕ ಸಮುದಾಯಗಳು ಒಂದೋ ಅಲೆಮಾರಿಗಳಾಗಿ ಬದುಕುತ್ತಿದ್ದಾರೆ. ಇಲ್ಲವೆ ಹಾಲಕ್ಕಿ ಒಕ್ಕಲಿಗ ಮತ್ತು ಕುಣುಬಿಯರಂತಹ ಅಪ್ಪಟ ಬುಡಕಟ್ಟು ಸಮಾಜಗಳು ಆರ್ಥಿಕವಾಗಿ ಹೀನಾಯವಾಗಿ ಬದುಕುತ್ತಿವೆ. ಸಿಕ್ಕಲಗಾರರಂತಹ ಸಮುದಾಯವು ಅಸ್ಪೃಶ್ಯತೆಯನ್ನು ಅನುಭವಿಸುತ್ತಿದೆ. ಇಂತಹ ಸಮುದಾಯಗಳನ್ನು ಗುರುತಿಸುವುದು ಮತ್ತು ಇವುಗಳನ್ನು ಸಂವಿಧಾನಾತ್ಮಕವಾಗಿ ವಿಶೇಷ ಕೆಟಗರಿಯ ಅಡಿಯಲ್ಲಿ ಪಟ್ಟಿ ಮಾಡುವುದು ಅಂತಹ ಕಷ್ಟದ ಕೆಲಸವೇನಲ್ಲ. ಈ ಸಮುದಾಯಗಳು ಸಹಜವಾಗಿಯೇ ಈವತ್ತಿಗೂ ಸರಕಾರದ ಮತ್ತು ಸಂವಿಧಾನಾತ್ಮಕ ಸೌಲಭ್ಯಗಳನ್ನು ಪಡೆಯುವ ಎಲ್ಲ ಅರ್ಹತೆಗಳನ್ನು ಹೊಂದಿವೆ.

೧೧. ಈ ಕಾರಣದಿಂದಾಗಿ ಅಲೆಮಾರಿಗಳನ್ನು ಒಂದು ವಿಶಿಷ್ಟ ಕೆಟಗರಿ ಎಂದು ಪರಿಗಣಿಸಿ ಅವರಿಗೆ

ಸಂವಿಧಾನಾತ್ಮಕ ಸೌಲಭ್ಯಗಳು ಲಭ್ಯವಾಗುವಂತೆ ಮಾಡಬೇಕು.

೧೩. ಡೊಂಬರ ಸಮುದಾಯದಲ್ಲಿ ಮಹಿಳೆಯರ ಸಾಕ್ಷರತೆಯ ಪ್ರಮಾಣವು ಅತ್ಯಂತ ಕಳವಳಕಾರಿಯಾಗಿದೆ. ಯಾವುದೇ ಆರೋಗ್ಯಕರ ಸಮಾಜವು ತಿಳುವಳಿಕೆಯುಳ್ಳ ಮಹಿಳೆಯರಿಂದ ರೂಪುಗೊಳ್ಳುತ್ತದೆ. ಅಕ್ಷರಸ್ಥ ಮಹಿಳೆಯು ಕೇವಲ ಕುಟುಂಬಕ್ಕೆ ಮಾತ್ರ ಉಪಯುಕ್ತಳಲ್ಲ. ಸಮಾಜದ ಆರೋಗ್ಯಕರ ಬೆಳವಣಿಗೆಯಲ್ಲಿ ಆಕೆಯ ಪಾತ್ರ ಹಿರಿದು. ಈ ಕಾರಣದಿಂದ ಡೊಂಬರ ಸಮುದಾಯದ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸದ ಕಡೆ ಗಮನ ಹರಿಸುವ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಿದೆ.

೧೪. ಅಲೆಮಾರಿ ಗುಂಪುಗಳನ್ನು ನೆಲೆನಿಲ್ಲಿಸಲು ಇನ್ನೂ ಒಂದು ವಿಶಿಷ್ಟ ಕಾರ್ಯಕ್ರಮವನ್ನು ಸರಕಾರ ಮಾಡಬಹುದಾಗಿದೆ. ಅಲೆಮಾರಿ ಕುಟುಂಬಗಳ ಸ್ತ್ರೀಯರಿಗೆ ಸ್ತ್ರೀಶಕ್ತಿ ಯೋಜನೆಗಳಂತಹ ವಿಶಿಷ್ಟ ಆದಾಯದ ಮೂಲಗಳನ್ನು ಕಲ್ಪಿಸುವ ಮೂಲಕ, ಇಲ್ಲವೆ ಸ್ತ್ರೀಯರು ನಿರ್ವಹಿಸುವ ಯಾವುದೇ ಆರ್ಥಿಕ ಚಟುವಟಿಕೆಗಳನ್ನು ಕಲ್ಪಿಸುವುದರ ಮೂಲಕ ಅಲೆಮಾರಿಗಳನ್ನು ನೆಲೆ ನಿಲ್ಲಿಸಬಹುದಾಗಿದೆ. ಇದರಿಂದಾಗಿ ಸ್ತ್ರೀಯರನ್ನು ಆರ್ಥಿಕವಾಗಿ ಸಬಲೀಕರಿಸುವುದರ ಜೊತೆಗೆ ಅವಳಿಗೆ ಮುಖ್ಯವಾಹಿನಿಯ ಆರ್ಥಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಅವಕಾಶ ಸಿಕ್ಕಂತಾಗುತ್ತದೆ. ಮತ್ತು ನೆಲೆನಿಂತ ಕಡೆ ಮಕ್ಕಳನ್ನು ಶಾಲೆಗೆ ಕಳುಹಿಸುವ ಅವಕಾಶವೂ ಸಿಕ್ಕುತ್ತದೆ.

೧೫. ಡೊಂಬರು ಊಳಿಗಮಾನ್ಯ ವ್ಯವಸ್ಥೆಯನ್ನು ಆರ್ಥಿಕವಾಗಿ ನಂಬಿಕೊಂಡು ಬಂದ ಕಾರಣಕ್ಕಾಗಿ ಇವರು ಭೂ ಹೀನರು. ಈ ಕಾರಣದಿಂದಾಗಿ ಸರಕಾರವು ಅವಕಾಶ ಇದ್ದ ಕಡೆಯಲ್ಲೆಲ್ಲ ಡೊಂಬರಿಗೆ ಕೃಷಿ ಜಮೀನು ನೀಡುವುದಲ್ಲದೆ, ಕೃಷಿಗೆ ಬೇಕಾಗುವ ಅಗತ್ಯ ಸಾಲಸೌಲಭ್ಯ ಮತ್ತು ಸಾಧ್ಯವಾದಲ್ಲಿ ಬಡ್ಡಿರಹಿತ ಸಾಲ ಕೊಡುವ ವ್ಯವಸ್ಥೆಯಾಗಬೇಕಿದೆ.

೧೬. ಒಟ್ಟಿನಲ್ಲಿ ಅಲೆಮಾರಿ ಸಮುದಾಯಗಳನ್ನು ಸರಕಾರವು ತಾಯ್ ಮನಸ್ಸಿನಿಂದ ನೋಡುವ ಅಗತ್ಯವಿದೆ. ಸಾಂಪ್ರದಾಯಿಕ ಅಭಿವೃದ್ಧಿ ಯೋಜನೆಗಳಿಂದ ಇವರು ಸಬಲೀಕರಣಗೊಳ್ಳಲು ಸಾಧ್ಯವಿಲ್ಲ. ಸರಕಾರದ ವಿಶೇಷ ಕಾಳಜಿ ಮತ್ತು ಒಳನೋಟಗಳಿಂದ ಕೂಡಿದ ಅಭಿವೃದ್ಧಿ ಯೋಜನೆಗಳಿಂದ ಮಾತ್ರ ಅಲೆಮಾರಿಗಳನ್ನು ಸಬಲೀಕರಿಸಲು ಸಾಧ್ಯ. ಅಲೆಮಾರಿಗಳ ಮನಪರಿವರ್ತನೆ ಮಾಡುವುದರ ಜೊತೆಗೆ ಅವರ ಅಗತ್ಯಗಳನ್ನು ಸರಕಾರ ಗುರುತಿಸಿ ಸೂಕ್ತ ಯೋಜನೆಗಳನ್ನು ರೂಪಿಸುವಂತಾಗಬೇಕು.

ಪರಾಮರ್ಶನ ಗ್ರಂಥಗಳು

ಪರಾಮರ್ಶನ ಗ್ರಂಥಗಳು

೦೧. ಡಾ. ಅಂಬೇಡ್ಕರ್, *ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಸಂ.೧,* ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೦

೦೨. ಡಾ. ಅಂಬೇಡ್ಕರ್, *ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಸಂ.೫,* ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೦

೦೩. ಎ.ಐ. ಮಿದವ್ಹೊಯ್, ಅನು: ಕೆ.ಎಲ್. ಗೋಪಾಲಕೃಷ್ಣರಾವ್, *ಭಾರತದ ಆರ್ಥಿಕ ವ್ಯವಸ್ಥೆ,* ಪ್ರಗತಿ ಪ್ರಕಾಶನ, ೧೯೮೭

೦೪. ಡಾ. ಎಂ. ಚಿದಾನಂದಮೂರ್ತಿ, *ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ,* ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೫

೦೫. ಭಗವತ್ ಶರಣ ಉಪಾಧ್ಯಾಯ, *ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ,* ನವಕರ್ನಾಟಕ ಪ್ರಕಾಶನ, ೧೯೫೦

೦೬. ಡಿ ಆರ್ ನಾಗರಾಜ್, *ಸಾಹಿತ್ಯ ಕಥನ,* ಅಕ್ಷರ ಪ್ರಕಾಶನ ಹೆಗ್ಗೋಡು, ೧೯೯೬

೦೭. ರಾಮಚಂದ್ರನ್ ಸಿ ಎನ್, *ವಸಾಹತೋತ್ತರ ಚಿಂತನೆ,* ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೨೦೦೦

೦೮. ಬಂಜಗೆರೆ ಜಯಪ್ರಕಾಶ್, *ಕನ್ನಡ ರಾಷ್ಟ್ರೀಯತೆ,* ಕ್ರಾಂತಿಸಿರಿ ಪ್ರಕಾಶನ, ಬೆಂಗಳೂರು, ೨೦೦೦

೦೯. ಚಂದ್ರಪೂಜಾರಿ, *ಸಮಾಜ ಸಂಶೋಧನೆ,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೫

೧೦. ತೀ ನಂ ಶಂಕರನಾರಾಯಣ, *ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು,* ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ೧೯೮೨

೧೧. ವೆಂಕಟರಂಗೋ ಕಟ್ಟಿ, *ಗ್ಯಾಝೆಟೀಯರು. ಮಂಬಯೀ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು,*ಗವರ್ನಮೆಂಟ ಸೆಂಟ್ರಲ್ ಬುಕ್ ಡಿಪೋ. ಮುಂಬಯಿ,೧೮೯೩

೧೨. ರಾಜಾರಾಮ್ ಹೆಗಡೆ, *ಭಾರತೀಯ ಇತಿಹಾಸ, ಸಮಾಜ ಮತ್ತು ಸಂಸ್ಕೃತಿ,* ಕರ್ನಾಟಕ ಸಾಹಿತ್ಯ ಅಕಾಡೆಮಿ,೨೦೦೪

೧೩. ರಾಜಾರಾಮ ಹೆಗಡೆ, *ಲೌಕಿಕ ಅಲೌಕಿಕ,* ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ, ೨೦೦೧

೧೪. ವೆರಿಯರ್ ಎಲ್ವಿನ್, ಅನು: ಎಚ್ ಎಲ್ ನಾಗೇಗೌಡ, *ವೆರಿಯರ್ ಎಲ್ವಿನ್ನರ ಗಿರಿಜನ ಪ್ರಪಂಚ,*ಸಾಹಿತ್ಯ ಸದನ ಪ್ರಕಾಶನ, ಬೆಂಗಳೂರು, ೨೦೦೪

೧೫. ಹಿ ಚಿ ಬೋರಲಿಂಗಯ್ಯ, ಎ ಎಸ್ ಪ್ರಭಾಕರ, ಸಂ, *ಬುಡಕಟ್ಟು ಅಧ್ಯಯನ ೧,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,೨೦೦೩

೧೬. ಟಿ ಆರ್ ಚಂದ್ರಶೇಖರ, ಎಂ ಚಂದ್ರಪೂಜಾರಿ, *ಅಭಿವೃದ್ಧಿ ಅಧ್ಯಯನ, ಸಂ ೧,ಸಂ ೧,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,೨೦೦೧

೧೭. ರಹಮತ್ ತರೀಕೆರೆ, *ಕನ್ನಡ ಅಧ್ಯಯನ, ಗಾಳಿ ಸಂಚಿಕೆ, ಸಂ ೫, ಸಂ ೨,*ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೧೮. ರಹಮತ್ ತರೀಕೆರೆ, *ಪ್ರತಿ ಸಂಸ್ಕೃತಿ,* ಕನ್ನಡ ಸಂಘ ಕ್ರೈಸ್ಟ್ ಕಾಲೇಜ್, ಬೆಂಗಳೂರು, ೧೯೯೩

೧೯. ಮೊಗಳ್ಳಿ ಗಣೇಶ್, *ದೇಶಿ,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೨೦. ಕೆ ವಿ ನಾರಾಯಣ, *ಬೇರು ಕಾಂಡ ಚಿಗುರು,* ವಿವೇಕ ಪ್ರಕಾಶನ, ಬೆಂಗಳೂರು, ೧೯೯೭

೨೧. ಎ ಎಸ್ ಪ್ರಭಾಕರ, *ಮ್ಯಾಸಬೇಡರ ಕಥನಗಳು,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೧೯೯೯

೨೨. ಹಿ ಚಿ ಬೋರಲಿಂಗಯ್ಯ, *ವಿಸ್ಮೃತಿ ಸಂಸ್ಕೃತಿ,* ಸಿ ವಿ ಜಿ, ಪಬ್ಲಿಕೇಷನ್ಸ್, ಬೆಂಗಳೂರು, ೨೦೦೨

೨೩. ಎ ವಿ ನಾವಡ, *ಒಂದು ಸೊಲ್ಲು ನೂರು ಸ್ವರ,* ಕರ್ನಾಟಕ ಸಂಘ ಪುತ್ತೂರು, ೧೯೯೯

೨೪. ಆಶೀಶ್ ನಂದಿ, *ಆಶೀಶ್ ನಂದಿ ವಿಚಾರ,* ಅನು: ಕು ಶಿ ಹರಿದಾಸ್‌ಭಟ್, ಅಕ್ಷರ ಪ್ರಕಾಶನ ಹೆಗ್ಗೋಡು, ೧೯೯೫

೨೫. ದೇವಚಂದ್ರ, ಅನು: ಬಿ ಎಸ್ ಸಣ್ಣಯ್ಯ, *ರಾಜಾವಳಿ ಕಥಾಸಾರ,* ಶ್ರೀ ಕನಕಗಿರಿ ಪ್ರಕಾಶನ, ಮಲೆಯೂರು, ೨೦೦೦

೨೬. ಎಚ್ ಎಂ ಮಹೇಶ್ವರಯ್ಯ, ಎಂ ಮುರಿಗೆಪ್ಪ, *ಡೊಂಬರು : ಒಂದು ಅಧ್ಯಯನ,* ಸಹಿತ ಪ್ರಕಾಶನ ಧಾರವಾಡ, ೧೯೯೨

೨೭. ಶ್ರೀರಾಮ ಇಟ್ಟಣ್ಣವರ, *ಕೌಜಲಗಿ ನಿಂಗವ್ವ,* ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೧೯೯೬

೨೮. ಇತಿಹಾಸ ದರ್ಶನ ಸಂ ೧೨, ಸಂ : ಎಂ ಜಿ ನಾಗರಾಜ್, ಪಿ ವಿ ಕೃಷ್ಣಮೂರ್ತಿ, ಕರ್ನಾಟಕ ಇತಿಹಾಸ ಅಕಾಡೆಮಿ, ೧೯೯೭

೨೯. ಡಿ ಡಿ ಕೋಸಾಂಬಿ, ಅನು ಎಚ್ ಎಸ್ ಶ್ರೀಮತಿ, *ಪ್ರಾಚೀನ ಭಾರತದ ಚರಿತ್ರೆ,* ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್ ೧೯೯೮

೩೦. ಡಾ. ವೀರಣ್ಣ ದಂಡೆ, ಸಂ: *ಜಾನಪದ ೧೯೯೨,* ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿ, ೧೯೯೫

೩೧. ಸೋಮಶೇಖರ ಇಮ್ರಾಪುರ, ಸಂ: *ಜಾನಪದ ಸಾಹಿತ್ಯ ದರ್ಶನ ೧೭,* ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೩೨. ಡಾ. ಹರಿಲಾಲ್ ಪವಾರ್, *ಹೆಳವರ ಸಂಸ್ಕೃತಿ,* ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩

೩೩. ಡಾ. ರಾಜಪ್ಪ ದಳವಾಯಿ, *ಹಕ್ಕಿಪಿಕ್ಕಿಯರ ಸಂಸ್ಕೃತಿ,* ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩

೩೪. ಗೊಂಬೆರಾಮರ ಸಂಸ್ಕೃತಿ, ಟಿ. ಗೋವಿಂದರಾಜು, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩

೩೫. ದುರುಗಮುರುಗಿಯರ ಸಂಸ್ಕೃತಿ, ಗೀತಾ ನಾಗಭೂಷಣ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩

೩೬. ಸುಡುಗಾಡು ಸಿದ್ಧರ ಸಂಸ್ಕೃತಿ, ಡಾ. ಪಿ.ಕೆ. ಖಂಡೋಬ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩

೩೭. ಗೊರವರ ಸಂಸ್ಕೃತಿ, ಡಾ. ಚಕ್ಕೆರೆ ಶಿವಶಂಕರ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩

೩೮. ಯಾನಾದಿಗರ ಸಂಸ್ಕೃತಿ, ಡಾ. ಟಿ. ನಾರಾಯಣ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩

೩೯. ಹಗಲುವೇಷಗಾರರ ಸಂಸ್ಕೃತಿ, ಯಳನಾಡು ಅಂಜಿನಪ್ಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩

೪೦. ಡೊಂಬರ ಸಂಸ್ಕೃತಿ, ದೇವೇಂದ್ರ ಕುಮಾರ ಹಕಾರಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩

೪೧. ಅಡವಿ ಚೆಂಚರ ಸಂಸ್ಕೃತಿ, ಪ್ರಹ್ಲಾದ್ ಬೆಟಗೇರಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩

೪೨. ಮೊಂಡರ ಸಂಸ್ಕೃತಿ, ಎನ್. ಚಂದ್ರಪ್ಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩

೪೩. ದಕ್ಕಲರ ಸಂಸ್ಕೃತಿ, ಚಲುವರಾಜು, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩

೪೪. ಗೊಂದಲಿಗರ ಸಂಸ್ಕೃತಿ, ಡಾ. ನಿಂಗಣ್ಣ ಸಣ್ಣಕ್ಕಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩

೪೫. ದಲಿತರ ಬದುಕು ಮತ್ತು ಸಂಸ್ಕೃತಿ, ಡಾ. ಅರ್ಜುನ ಗೊಳಸಂಗಿ, ವಿಮೋಚನಾ ಪ್ರಕಾಶನ, ಅಥಣಿ, ೨೦೦೦

೪೬. ಸುವರ್ಣ ಜಾನಪದ ಸಂ. ೧, ಸಂ. ಡಾ.ಹಿ.ಶಿ. ರಾಮಚಂದ್ರೇಗೌಡ, ಕೃಷ್ಣಮೂರ್ತಿ ಹನೂರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೧೯೯೮

೪೭. ಕರ್ನಾಟಕದ ಲಂಬಾಣಿಗರು ಒಂದು ಸಾಂಸ್ಕೃತಿಕ ಅಧ್ಯಯನ, ಡಾ.ಪಿ.ಕೆ. ಖಂಡೋಬಾ, ದಿ. ತೇಜಸಿಂಗ್ ರಾಠೋಡ್, ಮೆಮೋರಿಯಲ್ ಟ್ರಸ್ಟ್, ಗುಲ್ಬರ್ಗಾ, ೧೯೯೧

೪೮. ಜಾತಿಗಾರರ ಜಾತಕ, ಜ್ಯೋತಿ ಹೊಸೂರು, ಜಾನಪದ ಮಂಟಪ, ಕಾಲಗತಿ ಪ್ರಕಾಶನ ರಾಯಬಾಗ, ೧೯೮೫

೪೯. ಜಾನಪದ ಜಗತ್ತು, ಸಂ ಎಚ್ ಜೆ ಲಕ್ಕಪ್ಪಗೌಡ, ಗೊ ರು ಚನ್ನಬಸಪ್ಪ ಜಾನಪದ ಪರಿಷತ್ತು, ೧೯೮೦

೫೦. ಅಲೆಮಾರಿಗಳ ಶಾಪಗ್ರಸ್ತ ಪಯಣ, ಎ ಎಸ್ ಪ್ರಭಾಕರ, ಬುಡಕಟ್ಟು ಅಧ್ಯಯನ ೩, ಸಂ, ಡಾ. ಹಿ ಚಿ ಬೋರಲಿಂಗಯ್ಯ, ಎ ಎಸ್ ಪ್ರಭಾಕರ, ಪ್ರಸಾರಾಂಗ ಕನ್ನಡ ವಿಶ್ವಿದ್ಯಾಲಯ, ಹಂಪಿ ೨೦೦೫

51. M.N. Srinivas, *Caste in Modern India*, Media promoters & Publishers PVT LTD, Bombay 1992
52. M.N. Srinivas, *Collected Essays*, Oxord University Press, New Delhi, 2002
53. Woldaana Weissleder, Ed: *The Nomadic alternative*, Moutan Publisher, Chicago - 1977
54. G.N. Devy, Ed : *Budhan*, No. 3, June, 1998, The DNT Rights Action Groop News letter,
55. G.N. Devy, Ed : *Budhan*, No.4, Aug-Sept, 1998, The DNT Rights Action Groop News letter,
56. G.N. Devy, Ed : *Budhan*, No.9-10, Jan, 1999, The DNT Rights Action Groop News letter,
57. G.N. Devy, *Nomad Called Thief, Reflection On Adivasi Silence*,Orient Longman, 2006
58. Stephen Fuchs, *At the Bottom of Indian Society*, Munshiram Manoharlal publishers pvt Ltd, 1981
59. Irfan Habib, *Essays on Indian History*, Tulika, 1995
60. Irfan Habib, *The Agrarian System of Mughal India 1556-1707*, Oxford University Press, 1999
61. Saki, *Making History, Karnataka's people and their past*, Vol-1, Vimukthi prakashana, Bangalore, 1998
62. Ramendranath Nandi, *State Formation Agrarian Growth and Social Change in Feudal South India A D 600-1200*, Manohar, 2000
63. Matthew Arnold, *Culture and Anarchy*, Lakshmi Narain Agrwal, Agra
64. Felix Padel, *The Sacrifice Of Human Bieng*, Oxford University Press, 2000
65. James Clifford, Gerge E, Marcus, Ed: *Writing Culture, The Poetics And Politics Of Ethnography*, Oxford University Press, 1990
66. Ashis Nandi, *The Intimate Enemy, Loss And Recovery Of Self Under Colonialism*, Oxford University Press, 1983
67. Aime Cesare, *Discourse On Colonialism*, Trons, Joan Pinkham Newyork and London Monthly Review Press, 1972
68. Veena Dass, *Critical Events*, Oxford University Press, 1995
69. Veena Dass, *Socialogy And Social Anthropologgy, Vol 1*, Oxford University Press, 2003
70. Karl Marx, Engeles, *The First Indian War Of Independence1857-1859*, Progress Publishers Moscow, 1959
71. Edward W Said, *Orientaism*, Vintage Books, Newyork,1979
72. Edmand Leach, *Social Anthropology*, Oxford University Press, Oxford,1982
73. Sumit Sarkar, *Writing Social History*, Oxford University Press New Delhi,1997
74. Frantz Fanon. *The wreteched of the earth*, penguin, 1967
75. Antoni Grammci, *Selection From the Prison Note Books*, Orient Longman, 1996
76. Rabert morton. *Insider and out sider- A chapter in the socialogy of knowledge*,

77. Peter B. Hammond, Ed: *Cultural And Social Anthropology, Selected Readings*, The Macmilan Company, 1970
78. I S Kon, Ed: *A History Of Classical Socialogy,* Progress Publisher Moscow, 1979
79. Levi Struss, *Anthropology:Its Achievement And Future*, Current Anthopology Vol 7,1966
80. Albert Memmi, *The Coloniser and the Colonised*, Beacon Press, Boston, 1967
81. Satish Saberwal, *Inetrnational Social science: Some Political Aspects,* Economic and Political Weekly July 4, 1970
82. Jaganath Pathy, *Anthropology Of Development, Demystification and Relevance,* Gian Publishing House, New Delhi, 1987
83. Ranajit Guha, Ed: *Subaltern studies VI*, Oxford University Press, 1989
84. David Arnold, Ramachandra Guha, Ed: *Nature Culture Imperialism, Essays On the Environmental History Of South India*, Oxford University Press,1995
85. E E Evans Pritchard, *Social Anthropology,* Universal Book Stal, New Delhi, 2000
86. M V Nadakarni, Ed: *Land Marks In Development Of Social Science,* Allied Publisher PVT Limited, New Delhi, 2002
87. Milton Siger and Bernard S. Cohn , Ed: *Structure And Change In Indian Society*, Rawat Publications Jaipur and New Delhi, 1994
88. Surjit Chanrda Sinh, Ed: *Research Programmes on Cultural Anthropology and Allied Disciplines,* Anthropological Survey of India, 1970
89. Max Mullar F, *India What can It Teach Us*, Munshiram Manoharlal Publisher PVT, New Delhi 1882
90. Hiroshi Fukazawa, *The Medieval Deccan, Peasants, Social Systems and States, Sixteenth to Eighteenth centuries,* Oxford university press, 1998.
91. P K Mishra, *The Study Of Nomads*, Research Programes On Cultural Anthropology and Allied Disciplines. Ed: Surjit Chandra Sinha, Anthropological Survey Of India,1970
92. P K Mishra, *The Nomadic Gadulia Lohar Of Eastern Rajasthan,* Anthropological Survey Of India, Government Of India,1974
93. P K Mishra, C. R. Rajalakshmi, I Verghese, *Nomads In The Mysore city,* Anthropological Survey Of India, Government Of India,1971
94. O P Goyal, *Nomads at the Crossroads,* Isha Books Delhi 2005
95. Al-Biruni, Ed: Qwyamuddin Ahmad, *India,* National Book TRust, 1983
96. Andre Wink, *Land and Souereignty in India, Agrarian Society and politics under the 18th century Maratha svarajya*, Cambridge Univrsity Press, 1996
97. S Gururajachar, *Some Aspects Of Economic and Social Life In Karnataka (A D 1000-1300),* Prasaranga, University Of Mysore 1974
98. Abbe Dubois, *Hindu Manners, Customs and Ceremonies*, Oxford Univrsity Press, New Delhi, 1990
99. Behura N K, *Anthropological Thought and Theories*, Institute of Social Research and Applied Anthropology,1988
100. Vidyarthi, *Anthropological Research In India, Vol 1 and Vol 2*, Concept Publishing Company, New Delhi, 1978
101. A A D Luiz, *Tribes Of Mysore*, G S Viswa & Co, Bangalore, 1963

102. Edgar Thurston, K Rangachari, *Castes & Tribes of Southern India*, Asian Educational services, New Delhi, 1909

103. Alok parasher Sen, Ed: *Social and Economic History of Early Deccan*, Manohar, 1993

104. H.V. Nanjundiah, Ananth krishnna Iyer, *The Mysore Tribes and Castes,* Mittal Publications, New Delhi, 1922

105. H.V. Nanjundiah, *Ethnographial Survey Of Mysore,XIII, Dombar Caste,* Printed At The Government Press, Bangalore, 1908

106. K S Singh, *Indias Communities*, Oxord University Press, 1998

107. K S Singh, General Ed: *People Of India, Karnataka,* Antropological Survey Of India, 2003

108. W W Hunter, *A Brief History Of The Indian People*, Asian Educational Services, 1893

109. Fawcett. F, *Nayars Of Malabar*, Madras Government Museum Bulletin, Vol III, No 3,1901

110. Jyotsna, K. Kamat, *Social life in Medival Karnatka,* Abhinav Publications, New Delhi, 1980

111. M. Krishnamurthy, *Crimes and customs among the Lambanis in Chitradurga District*, Smt. Laxmi Krishnamurthy Sanketa Bulding, Shivagir, Dharawada, 2000

112. Narasimha murthy, K M Suresh, K P Poonacha, K R Basavaraj, *Hemakuta*,M.Krishna Kumari, *State palicy Towards certain caste groups in Andhra under Vijayanagar,* Bharatiya Kala Bhavana, New Delhi, 2001

113. S S Shasi, *Roma, Culture and Heritage*, Hindu Heritage Pratishtan, 2001

ಅನುಬಂಧಗಳು

ಡೊಂಬರ ಸಮುದಾಯದ ಬಳಿಗಳು

ತಿಳುವಳಿಕೆ ನೀಡಿದವರು

ಡೊಂಬರ ಸಮುದಾಯದ ಬಳಿಗಳು

ಎಡ್ಗರ್ ಥರ್ಸ್‌ಟನ್

೧೮೯೧ರ ಮದ್ರಾಸ್ ಜನಗಣತಿ ವರದಿ ಪ್ರಕಾರ ಡೊಂಬರ ಬೆಡಗುಗಳು ಈ ರೀತಿಯಲ್ಲಿ ಉಲ್ಲೇಖಿಗೊಂಡಿವೆ. ಓಸೋಮಿಯ, ಓಡಿಯಾ, ಮಾಂದಿರಿ, ಮೀಗಾಗಮ್ ಮತ್ತು ಕೊಹರ. ಈ ಬೆಡಗುಗಳಲ್ಲಿ ಕೆಲವು ಉಪಬೆಡಗುಗಳು ಕಂಡುಬರುತ್ತವೆ. ಮಿರಿಗಾನಿ, ಕೊಬ್ಬಿರಿಯಾ, ಓಡಿಯಾ, ಸೋದಬಿಸಿಯಾ ಮತ್ತು ಅಂದಿನಿಯಾ. ಓಡಿಯಾ ಎಂಬ ಬೆಡಗಿನಲ್ಲಿಯೇ ಅನೇಕ ಉಪಪಂಗಡಗಳೂ ಇವೆ. ಅವು ಭಾಗ್ (ಹುಲಿ), ಬಾಲು(ಕರಡಿ), ನಾಗ್ (ನಾಗರಹಾವು), ಹನುಮಾನ್ (ಆಂಜನೇಯ), ಕೊಚ್ಚಿಪ್ಪು(ಆಮೆ), ಬೆಂಗ್ರಿ(ಕಪ್ಪೆ), ಕುರ್ರ(ನಾಯಿ), ಸೂರ್ಯ(ಸೂರ್ಯ ದೇವರು), ಮತ್ಸ್ಯ(ಮೀನು) ಮತ್ತು ಜೈಕೊಂಡಾ(ಹಲ್ಲಿ). ಫಾಸೆಟ್ 'ಕೋತಿ, ಕಪ್ಪೆ ಮತ್ತು ನಾಗರಹಾವು ಮತ್ತು ಸುನಾರಿ ಗಿಡ ಡೊಂಬರ ಸಮುದಾಯದ ಕುಲಲಾಂಛನಗಳಾಗಿವೆ ಎನ್ನುತ್ತಾರೆ. ದೊಡ್ಡಹಲ್ಲಿ, ನಾಗರಹಾವು, ಮತ್ತು ಏಡಿಗಳು ಸಹಜವಾಗಿ ಭತ್ತದ ಗದ್ದೆಯಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಇವನ್ನ ಕಾಡು ಜನ ಆಹಾರಕ್ಕಾಗಿ ಬಳಸಿದರೆ, ಡೊಂಬರು ಇವನ್ನು ತಿನ್ನುವುದಿಲ್ಲ.

ಎಚ್ ವಿ ನಂಡುಂಡಯ್ಯ, ಅನಂತಕೃಷ್ಣ ಅಯ್ಯರ್

೧. ಐಸಾರಪೊಳ್ಳು
೨. ಭೂಪತಿವಾಳ್ಳು
೩. ಗಂಧಪೂರಜವಾಳ್ಳು
೪. ಗೋಪುದಸುವಾಳ್ಳು
೫. ಜಟ್ಟಿವಾಳ್ಳು
೬. ಕಗ್ಗಡಿವಾಳ್ಳು
೭. ಕಲಬಂಡಿವಾಳ್ಳು
೮. ಕನಕರೆಡ್ಡಿವಾಳ್ಳು
೯. ಕಸೆರುಪುವಾಳ್ಳು
೧೦. ಕಸ್ತೂರಿವಾಳ್ಳು
೧೧. ಕೂತರವಾಳ್ಳು
೧೨. ಮಲ್ಲೆಪುವ್ವಾಳ್ಳುವಾಳ್ಳು
೧೩. ಮನ್ನೆಪುಲವಾಳ್ಳು
೧೪. ಮಟ್ಲಿವಾಳ್ಳು
೧೫. ಮರಾಠಿವಾಳ್ಳು
೧೬. ನಡುಮುಲೇನಿವಾಳ್ಳು
೧೭. ನಾಟಕರಾಯನಿವಾಳ್ಳು
೧೮. ಪಲ್ಲೆಕೊಂಡಲವಾಳ್ಳು
೧೯. ಸೋಮಲರಾಜುವಾಳ್ಳು
೨೦. ಸೊಂಡೂರುವಾಳ್ಳು
೨೧. ತೊಲಂಗಿವಾಳ್ಳು
೨೨. ಉಪ್ಪುವಾಳ್ಳು

ಸೈಯದ್ ಸಿರಾಜ್ ಉಲ್ ಹಸನ್

೧. ಕರ್ಮಚವಾರು
೨. ರಾಮಸಾನಿವಾರು
೩. ರಜಾಕವಾರು
೪. ಪದೇಕವಾರು
೫. ಜೊಪ್ಪಲಿವಾರು
೬. ಗುಜೋಕುವಾರು

೦೧. ಐಸರ ಪೋಳ್ಳು : ಐಸರದವರು

೦೨. ಭೂಪತಿವಾಳ್ಳು : ಭೂಪತಿಯ (ಕಡೆಯ) ವರು

೦೩. ಗಂಧ ಪುರುಜುವಾಳ್ಳು : ಗಂದ ಜವಾಜಿ (?)ಯವರು ಗಂಧ ಪುನುಗಿನವರು

೦೪. ಗೋಪುಡಸುವಾಳ್ಳು : 'ಗೋಪುಡ' ಎನ್ನುವವರು ಗೋಪುಡದವರು

೦೫. ಜಟ್ಟಿವಾಳ್ಳು : ಜಟ್ಟಿಯವರು

೦೬. ಕಗ್ಗಡಿವಾಳ್ಳು : (ಕತ್ತಿ) ಖಡ್ಗದವರು

೦೭. ಕಲಬಂಡವಾಳ್ಳು : ಕಲಬಂಡಿಯವರು

೦೮. ಕನಕರಡ್ಡಿವಾಳ್ಳು : ಕನಕರಡ್ಡಿಯವರು

೦೯. ಕಸೇರೂಪುವಾಳ್ಳು : ಕಸೇ ರೂಪಿನವರು (ಚೆಂದೆಚೆಂದದ ಕುಸುರಿ ಗೆಲಸದವರು?)

೧೦. ಕೊಟರವಾಳ್ಳು : ಕೂಡರದವರು

೧೧. ಕಸ್ತೂರಿವಾಳ್ಳು : ಕಸ್ತೂರಿಯವರು (ಕಾಡು ಅಲೆದು ಕಸ್ತೂರಿ ಸಂಗ್ರಹಕ್ಕೆ ಖ್ಯಾತರಾದವರು)

೧೨. ಮಲ್ಲೇ ಪಾವಾಳುವಾಳ್ಳು : ಮಲ್ಲಿಗೆ ಹೂವಿನವರು

೧೩. ಮಣ್ಣೇಪುಲವಾಳ್ಳು : ಮಣ್ಣೇ ಪುಲದವರು (?)

೧೪. ಮತ್ತಿವಾಳ್ಳು : 'ಮುತ್ತಿಗುರು' ಗುಂಪಿನವರು

೧೫. ಮುರಾರಿವಾಳ್ಳು : ಮುರಾರಿಯವರು

೧೬. ನಾಡ (ದ?) ಮೂಲೇನಿವಾಳ್ಳು : ನಾದ (ಡ?) ಮೂಲದವರು (ಸಮಾದಿ ನಾಗಸ್ವರ ಇತ್ಯಾದಿಗಳ ಆವಿಷ್ಕಾರಕ್ಕೆ ಮೊದಲು ಇದ್ದಿರಬಹುದಾದ ನಾಡವಾದ್ಯದ ಗುಂಪಿರಬಹುದು)

೧೭. ನಾಟಕರಾಯನಿವಾಳ್ಳು : ನಾಟಕರಾಯ ಗುಂಪಿನವರು

೧೮. ಪಲ್ಲೆಕೊಂಡಾಲವಾಳ್ಳು : ಪಲ್ಲೆಕೊಂಡಾಲದವರು

೧೯. ಸೋಮಲರಾಜವಾಳ್ಳು : ಸೋಮಲ ರಾಜನವರು

೨೦. ಸೊಂಡೂರುವಾಳ್ಳು : ಸೊಂಡೂರಿನವರು

೨೧. ತೋಲಂಗಿವಾಳ್ಳು : ಚಿರತೆ (ಹುಲಿ) ತೊಗಲಿನ ಅಂಗಿ ಧರಿಸುವ ಗುಂಪಿನವರು

೨೨. ಉಪ್ಪುವಾಳ್ಳು : ಉಪ್ಪಿನವರು

ಅಲೆಮಾರಿ ಡೊಂಬರ ಬಳಿಗಳು

೦೧. ಹೌದೇಪೀರ್ : ಆಲಾವಿ ಹಬ್ಬ

೦೨. ಅಮರ್‌ನ ಆದಿ: ಹುಲಿಗೆಮ್ಮ

೦೩. ಜಾಡವಾಲೆ: ಗಿಡಗಳು

೧೪. ತೊಡರ್ನ ಹಾಥಿ

೧೫. ಧನಕ್‌ನ ಹಾಥಿ

ವಿವಿಧ ಜಿಲ್ಲೆಗಳಲ್ಲಿನ ಡೊಂಬರ ಸಮುದಾಯದ ಬೆಡಗುಗಳು

ಕೊಪ್ಪಳ ಜಿಲ್ಲೆ

ಜಲಿಕೇರ್

ಅಕ್ಕಲರ್

ವನಸೆಟ್ಟರು

ಎಕ್ಕಟ್ಟಿರು

ಬಳ್ಳಾರಿ ಜಿಲ್ಲೆ

ಯನುಮುಲರು

ಕಟ್ಟಿಮನೆ

ಮಲ್ಲಿಗೆ (ಮಲ್ಲಿಪೂ)

ಮಳತೀರು

ಪೂಲ್ಲಿರು

ನೂಸುಜದರು

ಗುಜ್ಜಲರು

ಕಗ್ಗಡಿರು/ಕಟ್ಟಿಮನೆ

ಮೊಂಪ್ಲರು

ದಾವಣಗೆರೆ ಜಿಲ್ಲೆ

ಕಟ್ಟಿಮನೆ /ಕಗ್ಗೇರು

ಕಾಗೆಸರದವರು

ಐಸರದಾರು

ಬಂಡೇರು

ಮಾನಪಿಲ್ಲಿಯವರು

ಹಬ್ಬೇರು

ಹೂವಿನರು

ತಿಳುವಳಿಕೆ ನೀಡಿದವರು

೦೧. ಸಣ್ಣಕಾಳಯ್ಯ, ಬೀರನಹಳ್ಳಿ, ಹುಣಸೂರು ತಾ, ಮೈಸೂರು ಜಿಲ್ಲೆ.

೦೨. ರಾಮಯ್ಯ, ಬೀರನಹಳ್ಳಿ, ಹುಣಸೂರು ತಾ, ಮೈಸೂರು ಜಿಲ್ಲೆ.

೦೩. ಕೃಷ್ಣಮೂರ್ತಿ, ತಿಮ್ಮನಹಳ್ಳಿ, ಚಿಕ್ಕಮಗಳೂರು ಜಿಲ್ಲೆ

೦೪. ಶ್ರೀನಿವಾಸ್, ದೇವರ ನರಸೀಪುರ, ಭದ್ರಾವತಿ ತಾ. ಶಿವಮೊಗ್ಗ ಜಿಲ್ಲೆ

೦೫. ಶಂಕರಪ್ಪ, ಇಲಾಳ, ಹುನಗುಂದ ತಾ, ಬಾಗಲಕೋಟೆ ಜಿಲ್ಲೆ

೦೬. ಮಾನಪ್ಪ, ಇಲಾಳ, ಹುನಗುಂದ ತಾ, ಬಾಗಲಕೋಟೆ ಜಿಲ್ಲೆ

೦೭. ತುಳುಸಮ್ಮ, ಇಲಾಳ, ಹುನಗುಂದ ತಾ, ಬಾಗಲಕೋಟೆ ಜಿಲ್ಲೆ

೦೮. ಯಮುನೂರಪ್ಪ, ಇಲಾಳ, ಹುನಗುಂದ ತಾ, ಬಾಗಲಕೋಟೆ ಜಿಲ್ಲೆ

೦೯. ಕಾಳಪ್ಪ, ದೇವಲಾಪುರ, ಸುರಪುರ ತಾ, ಗುಲ್ಬರ್ಗಾ ಜಿಲ್ಲೆ

೧೦. ಪಂಪಾಪತಿ, ಮರ್‍ರಾನಹಳ್ಳಿ, ಗಂಗಾವತಿ ತಾ, ಕೊಪ್ಪಳ ಜಿಲ್ಲೆ

೧೧. ಡಿ.ಭರಮಪ್ಪ, ಕೂಡ್ಲಿಗಿ, ಬಳ್ಳಾರಿ ಜಿಲ್ಲೆ

೧೨. ಡಿ.ನಿಂಗಪ್ಪ, ಕಮಲಾಪುರ, ಹೊಸಪೇಟೆ ತಾ, ಬಳ್ಳಾರಿ ಜಿಲ್ಲೆ

೧೩. ಶ್ರೀಮತಿ ಹಾಲಮ್ಮ, ಯರಬಳ್ಳಿ, ತವಡೂರು ಅಂಚೆ, ಹರಪನಹಳ್ಳಿ ತಾ, ದಾವಣಗೆರೆ ಜಿಲ್ಲೆ

೧೪. ಶ್ರೀ. ಎ.ಸಿದ್ದಪ್ಪ ನಿ.ಶಿ, ಯರಬಳ್ಳಿ, ತವಡೂರು ಅಂಚೆ, ಹರಪನಹಳ್ಳಿ ತಾ, ದಾವಣಗೆರೆ ಜಿಲ್ಲೆ

೧೫. ಶ್ರೀ. ಎಚ್.ತಿಮ್ಮಪ್ಪ ನಿ.ಶಿ, ಯರಬಳ್ಳಿ, ತವಡೂರು ಅಂಚೆ, ಹರಪನಹಳ್ಳಿ ತಾ, ದಾವಣಗೆರೆ ಜಿಲ್ಲೆ

೧೬. ಡಿ.ಸಿ.ಪಾಣಿ, ಹಿರಿಯೂರು, ಚಿತ್ರದುರ್ಗ ಜಿಲ್ಲೆ

೧೭. ಎಂ.ರಾಜಣ್ಣ, ತುರುವೇಕೆರೆ, ತುಮಕೂರು ಜಿಲ್ಲೆ

೧೮. ಡಾ.ಟಿ.ಎನ್.ಚಂದ್ರಕಾಂತ್, ಬೆಂಗಳೂರು

೧೯. ಬಿ.ಎಂ.ಕೌಜಲಗಿ, ಕೌಜಲಗಿ, ಬೆಳಗಾಂ ಜಿಲ್ಲೆ

೨೦. ದಾನಪ್ಪ ಕಬ್ಬೇರ, ಹುಬ್ಬಳ್ಳಿ

೨೧. ಎಂ.ಎಸ್.ಸಂಗಮ್. ಅರಳೀಕಟ್ಟಿ, ಧಾರವಾಡ ಜಿಲ್ಲೆ

೨೨. ಲಿಂಗರಾಜ್ ರಾಣೇಬೆನ್ನೂರು, ಹಾವೇರಿ ಜಿಲ್ಲೆ

೨೩. ಶ್ರೀ ಮಲ್ಲಿನಾಥ ಕೌಜಲಗಿ,ದಾಂಡೇಲಿ,ಹಳಿಯಾಳ, ತಾ, ಕಾರವಾರ, ಜಿಲ್ಲಾ

೨೪. ಶ್ರೀ ನರಸಪ್ಪ ಡೊಂಬರ, ಮುತ್ತಗಿ,ಕೊರಟಗೇರಿ, ತಾ,ಶಿವಮೊಗ್ಗ, ಜಿಲ್ಲಾ

೨೫. ಶ್ರೀ ಅಡಿವೆಪ್ಪ ಕಾಡರಕೊಪ್ಪ, ಮಡಕೇಸೂರ, ಮುದ್ದೇಬ್ಬಿಹಾಳ, ತಾ,ಬಿಜಾಪುರ, ಜಿಲ್ಲಾ

೨೬. ಶ್ರೀ ರಂಗಪ್ಪ ಡೊಂಬರ, ನೀಲಗುಂದ, ಬದಾಮಿ, ತಾ, ಬಿಜಾಪುರ,ಜಿಲ್ಲಾ

೨೭. ಶ್ರೀ ನರಸಪ್ಪ ಎನ್. ಡೊಂಬರ್,ಸಿದ್ಧರಾಮ ನಗರ,ಗೋಪನಕೊಪ್ಪ,ಹುಬ್ಬಳ್ಳಿ.

೨೮. ಶ್ರೀ ವಿಠ್ಠಲ ಭೀ ಡೊಂಬರ, ಹಿರೇಮಣ್ಣೂರ,ಅಫಜಲಪುರ, ತಾ,ಗುಲ್ಬರ್ಗಾ,ಜಿಲ್ಲಾ

೨೯. ಶ್ರೀ ವಿ ರಾ ಡೊಂಬರ್, ಅಮ್ಮನಬಾವಿ, ಧಾರವಾಡ ಜಿಲ್ಲಾ



